1914

Year

[illegible]

ವಿದ್ಯೆಯು ದೊರೆಯುವ ಪದ್ಧತಿಯನ್ನು ಬೆಳೆಸುವ ಮೊದಲು ಮಾಡತಕ್ಕ ವಿಚಾರವು

[illegible]

[illegible] ಈ ವಿಚಾರವು ತಿಳಿಯದೆ ಹೀಗೆ ಹೇಳುತ್ತಿದ್ದಾರೆ ! ಅಥವಾ ತಿಳಿದುಕೊಂಡರೂ ಈ ವಿಷಯ [illegible] ಬರಬಹುದೇನೋ ?"

ಅರ್ವಾಚೀನ ಸ್ತ್ರೀ ಶಿಕ್ಷಣದ ಪರಿಣಾಮವು

" [illegible] ಶಿಕ್ಷಣಕೊಡುವ [illegible]

[illegible]

[illegible] ಅಭಿಮಾನದಿಂದ ಹೇಳಬಹುದು "

ಚಿಕಾಗೋ ಶಹರ ಭಾರತೀಯರ ವಿಷಯವಾಗಿ ಮಾಡಲ್ಪಟ್ಟ ಬಿಷಪರವರ ಭಾಷಣ

[illegible]

[illegible]

ನವತಂ... ಅದರಿಂದ ಸಕಲ ಹಿಂಸೆಗಳನ್ನೂ ಕೊಟ್ಟು ಸದ್ವಿವಿಧವಾದ ಅಕ್ರಮಗಳನ್ನೂ ನಡೆಯಿಸಿ ಈಗ ಶಾಸನತಿರಸ್ಕಾರವನ್ನು ಮಾಡಿಕೊಂಡರೆಂದು ಹೇಳುವುದರಲ್ಲಿ ಅರ್ಥವೇನೂ ಇಲ್ಲ. ನೀವು ಈ ದೌರ್ಜನ್ಯವನ್ನು ಎತ್ತುವವರೆಗೂ ನಿಮ್ಮ ಕಷ್ಟಗಳು ವಿಚಾರಿಸಲ್ಪಡುವುದಿಲ್ಲವೆಂದು ದಕ್ಷಿಣಾಫ್ರಿಕಾ ಪ್ರಭುತ್ವದವರು ಹೇಳಬಹುದು. ಇದೇ ವಿಧವಾಗಿ ಭಾರತೀಯರು, ನೀವು ಪ್ರಜಾಹಿಂಸೆಯನ್ನು ನಿಲ್ಲಿಸುವವರೆಗೂ ಈ ನಿರೋಧೋಪಾಯವನ್ನು ನಾವು ಬಿಡುವುದಿಲ್ಲವೆಂದು ಹೇಳಬಹುದು. ಆದರೆ ಪ್ರಭುತ್ವದವರು ಹೇಳುವುದಕ್ಕಿಂತಲೂ ಇವರ ಮಾತು ಸಮಂಜಸವಾಗಿದೆ. ಹೇಗೆಂದರೆ— ಭಾರತೀಯರು ಒಂದು ವೇಳೆ ಅಕ್ರಮವಾದ ಪದ್ಧತಿಗಳನ್ನವಲಂಬಿಸಿದರೂ ಇಂತಹ ಪದ್ಧತಿಗಳು ಮೊಳೆಯುವಂತೆ ಮಾಡುವುದಕ್ಕೆ ಅಲ್ಲಿನ ಪ್ರಭುತ್ವದವರ ಅನ್ಯಾಯಕರವಾದ ಪದ್ಧತಿಗಳೂ ಕ್ರೂರಕಾರ್ಯಗಳೂ ಸಹ ಕಾರಣಭೂತಗಳಾಗಿರುತ್ತವೆ. ಪ್ರಜಾಹಿಂಸೆಯನ್ನು ದ್ವೇಷಿಸುವುದಕ್ಕಾಗಿ ಟಿರ್ಕೆಂಡಿನಿ ... ಬೋಧಿಸಲ್ಪಟ್ಟ ಆಂಗ್ಲಮನುಷ್ಯನಾಗಿ ಇದುವರೆಗೂ ನಾನು ಮಾತನಾಡಿದೆನು. ಇನ್ನು ಕ್ರೈಸ್ತನಾಗಿ ಕೆಲವು ಮಾತುಗಳನ್ನಾಡುತ್ತೇನೆ. ನಿಜಕ್ರೈಸ್ತ ಮತದವರೆಂದು ಹೇಳಿಕೊಳ್ಳುವವರಿಂದಲೇ ಇಂತಹ ಕ್ರೂರಕಾರ್ಯಗಳು ಮಾಡಲ್ಪಡುತ್ತಿರುವುದಕ್ಕಾಗಿ ನನ್ನ ಶೋಕವು ಸಾಮಾನ್ಯವಲ್ಲ. ಪ್ರಜಾಹಿಂಸೆಯ ಕೆಲಸವನ್ನು ಮಾಡುವುದಕ್ಕೆ ಯಾರಾದರೂ ಹೊರಟರೂ ಅವರನ್ನು ದ್ವೇಷಿಸಿರೆಂದು ತಿಳಿಯಬೇಕು. ತನ್ನ ಸ್ವಾಮಿಯನ್ನಾಗಿಯೂ ದೈವವನ್ನಾಗಿಯೂ ಅಂಗೀಕರಿಸುವ ಕ್ರಿಸ್ತನ ಬೋಧೆಗಳಿಗೆ ವ್ಯತಿರೇಕವಾಗಿ ಆತನ ... ಗಳನ್ನವಲಂಬಿಸುವುದು ... ದ್ವೇಷಿಸಲ್ಪಡತಕ್ಕ ಸಂಗತಿಯಾಗಿದೆ. ಎಂ॥ ಗಂಧಿಯವರನ್ನು ಸೆರೆಮನೆಗೆ ಸೇರಿಸಿಯೂ ತಾವು ಕ್ರೈಸ್ತರೆಂದು ಹೇಳಿಕೊಳ್ಳುವವರಿಂದಲೇ ಧರ್ಮಕ್ಕಾಗಿಯೂ ... ಅನುಸರಿಸುತ್ತಿರುವ ಆ ಗಂಧಿಯವರೇ ಮಹಾನುಭಾವನಾದ ಕ್ರಿಸ್ತನ ಒಬ್ಬ ಭಕ್ತರಾಗಿರುವರೆಂದು ಹೇಳಲ್ಪಡತಕ್ಕವರಾಗಿರುತ್ತಾರೆ ಇತ್ಯಾದಿಯಾಗಿ ನುಡಿದರು.

ಗುರುಪ್ರಭುಭಕ್ತಿಯು ಶ್ರೇಯೋಮೂಲವಾಗಿರುವುದು. ವೇಲೆಕಂಡ ಬಿಷಪ್ಪರು ಕ್ರೈಸ್ತಜನವರ್ಗದ ಗುರುಗಳಾಗಿರುತ್ತಾರೆ. ಅವರು ಕ್ರೈಸ್ತನ ಉಪದೇಶವನ್ನು ನಿರ್ದೇಶಿಸಿ ಮಾಡಿರುವ ಹಿತಬೋಧವನ್ನು ತಮ್ಮ ಶ್ರೇಯಸ್ಸಿಗೆ ಮೂಲವಾದುದೆಂದು ತಿಳಿದು ನಡೆಯುವ ಬುದ್ಧಿಯಾದರೂ ದಕ್ಷಿಣಾಫ್ರಿಕಾದ ಕ್ರೈಸ್ತ ಪ್ರಭುತ್ವದವರಿಗೆ ಉಂಟಾದರೆ ಸಾಕು.

ಚಂದಾದಾರರಿಗೆ ವಿಜ್ಞಾಪನೆ

ಮೈಸೂರ್ ಸ್ಟಾರ್ ಪತ್ರಿಕೆಯು ಚಂದಾದಾರರಿಗೆ ... ಪ್ರಕಟಿಸುವವರೆಗಲ್ಲ ಮುಂದಾಗಿ ಹಣವನ್ನು ಒದಗಿಸದ್ದ ಗ್ರಾಹಕರನ್ನು ಕಳುಹಬೇಕೆಂದಿರುವವರಿಗೆಲ್ಲಾ ಪತ್ರಿಕೆಗಳು ವಿ ಪಿ ದ್ವಾರಾ ಕಳುಹಲ್ಪಡುತ್ತಿರುವುದರಿಂದ, ಚಂದಾದಾರರೆಲ್ಲರೂ ಈ ಪತ್ರಿಕೆಯು ಪುನಃಪ್ರತಿಯ ಮೇಲೆ ... ಹಣವನ್ನು ಪ್ರೋತ್ಸಾಹಿಸುವವರಿಗೆ ಸಲ್ಲಿಸಿ, ವಿ ಪಿ ಯನ್ನು ತೆಗೆದುಕೊಂಡು ಮುಂದೆ ... ಹಿಂದಿರುಗಿಸಲಾಗುವರೆಂದು ನಂಬಿರುತ್ತೇವೆ. ಇಷ್ಟರಮೇಲೂ ವಿ ಪಿ ಯನ್ನು ಹಿಂದಿರುಗಿಸುವಂತಹ ಮಹನೀಯರುಗಳ ಹೆಸರು ಇತರರ ತಿಳಿವಿಕೆಗಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು.

ಮೈಸೂರ್ ಸ್ಟಾರ್

ಬೆಂಗಳೂರು ... ತಾ|| ... ನೆಯ ಸೋಮವಾರ.

ಮಹಾಸಭೆಗಳು

ಹಿಂದೂಸ್ಥಾನದಲ್ಲಿ ನಡೆಯುವ ಸಭೆಗಳ ಸಂಖ್ಯೆಯು ... ಮಹಾಸಭೆ ... ತಾ|| ... ಈ ಮೂರು ದಿನಗಳಲ್ಲಿ ನಡೆಯಿತು. ... ರವರು ಅಧ್ಯಕ್ಷರಾಗಿದ್ದರು. ... ಸಭಾಧ್ಯಕ್ಷರು ... ಉದ್ಘಾಟನೆ ... ನಿರ್ಧರಿಸಲ್ಪಟ್ಟಿತು. ... ನೆರವೇರಿದುವು.

ತಾರವನ್ನಾರಿಸುವಾಗ್ಗೆ ಅನೇಕ ಚರ್ಚೆಗಳು ಹುಟ್ಟಿ ಸರ್ವಸಮ್ಮತಿಯಿಂದ ಅಧ್ಯಕ್ಷರನ್ನಾರಿಸುವುದೇ ಇಲ್ಲ. ಈ ಸಲ ಹಾಗಾಗದೆ ಎಲ್ಲ ಪ್ರಾಂತಿಕ ಸಂಘದವರೂ ಡಾ॥ ಸಯ್ಯದ್ ಮಹಮ್ಮದ್‌ರವರ ಅಧ್ಯಕ್ಷತೆಗೆ ಬಿನ್ನಾಭಿಪ್ರಾಯವಿಲ್ಲದೆ ಅನುಮೋದಿಸಿದುದನ್ನು ನೋಡಿದರೆ ಸಾರ್ವಜನಿಕ ರಾಜಕೀಯ ಕಾರ್ಯದಲ್ಲಿ ಹೇಗೆ ಸಮವರ್ತನವುಳ್ಳವರೇ ಬರುವುದು ಗೊತ್ತಾಗುವುದು. ಇಂಥ ಸರ್ವಸಮ್ಮತನಾದ ಅರಿಸುವಿಕೆಯು ... ವಿಷಯದಲ್ಲೂ ಉಂಟಾಗಿರಲಿಲ್ಲ.

ಸಭಾಧ್ಯಕ್ಷರು ಮಾಡಿದ ಭಾಷಣವು ವಿಶೇಷಾಡಂಬರವೂ ಉಗ್ರತ್ವವೂ ಇಲ್ಲದೆ ಯುಕ್ತಾಯುಕ್ತವಾಗಿಯೂ, ಗಮನೀಯವಾಗಿಯೂ ಇದ್ದಿತು. ರಾಜಕೀಯವಾದ ಧ್ಯೇಯವು ಫಲಿಸುವುದಕ್ಕೆ ಹಿಂದೂ ಮಹಮ್ಮದೀಯ ಕ್ರೈಸ್ತ ಮೊದಲಾದವರೆಲ್ಲಾ ಏಕಮತ್ಯದಿಂದಿರುವುದು ಅತ್ಯವಶ್ಯಕವೆಂದೂ, ದಕ್ಷಿಣಾಫ್ರಿಕಾ ಭಾರತೀಯರ ವಿಷಯದಲ್ಲಿ ಅಲ್ಲಿನ ಬಿಳಿಯರು ತೋರುತ್ತಿರುವ ಹಿಂಸೆಯು ಅನೀತಿಕರವಾಗಿರುವುದರಿಂದ ಭರತಖಂಡದ ಪ್ರಭುತ್ವದವರು ಅದಕ್ಕೆ ನಿರೋಧೋಪಾಯವನ್ನು ಕಲ್ಪಿಸುವುದು ಆವಶ್ಯಕವೆಂದೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚನ ಸಭಿಕರಲ್ಲಿ ... ಭಾಗದವರು ಭಾರತೀಯರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಾಗಿರುವುದು ಆವಶ್ಯಕವೆಂದೂ, ಭರತಖಂಡದ ಶಾಸನನಿರ್ಮಾಣ ಸಭೆಯ ಯೋಗ್ಯತೆಯ ವಿಷಯದಲ್ಲಿ ಮಾಡಿರುವ ನಿರ್ಬಂಧನವನ್ನು ಸ್ವಲ್ಪ ಸಡಿಲಮಾಡಬೇಕೆಂದೂ, ಪ್ರಜೆಗಳನ್ನು ವಿವೇಕಸಂಪನ್ನರನ್ನು ಮಾಡುವುದಕ್ಕಾಗಿ ಬರೋಡಾ ಮೈಸೂರು ಮೊದಲಾದ ಸಂಸ್ಥಾನಗಳಂತೆ ವಿದ್ಯಾಭ್ಯಾಸವನ್ನು ನಿರ್ಬಂಧವಾಗಿಯೂ ಉಚಿತವಾಗಿಯೂ ಮಾಡಿರುವುದು ಅವಶ್ಯಕವೆಂದೂ, ತಮ್ಮ ಭಾಷಣದಲ್ಲಿ ಅಧ್ಯಕ್ಷರು ಪ್ರತಿಪಾದಿಸಿರುವುದಲ್ಲದೆ ಈ ವರ್ಷ ಕೊಂಡುರಲು ಭಾಗಗಂಡವನ್ನು ಮಾರ್ಪಡಿಸುವುದನ್ನು ತಪ್ಪಿಸಬೇಕೆಂಬುದು, ಸ್ವಯಂ ಆಡಳಿತದಲ್ಲಿ ಭಾರತೀಯರಿಗೆ ಉನ್ನತಾಧಿಕಾರವನ್ನು ಕೊಡಬೇಕೆಂಬುದು ಮೊದಲಾದ ವರ್ಷಂಪ್ರತಿಯೂ ಚರ್ಚಾರ್ಹವಾದ ವಿಷಯಗಳನ್ನೆಲ್ಲಾ ಪ್ರತಿಪಾದಿಸಿದರು. ... ನೆಯ ದಿನ ನಡೆದ ಸಭೆಗಳಲ್ಲಿ ಸಭಾನಿರ್ಧಾರಗಳಾದುವು. ಅವುಗಳಲ್ಲಿ ದಕ್ಷಿಣಾಫ್ರಿಕಾ ಪ್ರಭುತ್ವದ ಕ್ರೂರಶಾಸನಗಳ ತಿರಸ್ಕಾರವೂ, ಅಲ್ಲಿನ ಈಗಿನ ವಿಚಾರಕಸಂಘದಲ್ಲಿ ಭಾರತೀಯರನಂಬುಗೆಗೆ ಅರ್ಹರಾದವರನ್ನು ಸಭಿಕರನ್ನಾಗಿ ಸೇರಿಸಬೇಕೆಂದೂ, ಅಲ್ಲಿನ ಅನ್ಯಾಯವಿಧಿಗಳನ್ನು ತೊಲಗಿಸುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ಸಾಮರ್ಥ್ಯಾನುಸಾರ ಪ್ರಯತ್ನಿಸಬೇಕೆಂದೂ, ಈ ವಿಷಯವಾಗಿ ವೈಸ್‌ರಾಯರು ಮದರಾಸಿನಲ್ಲಿ ಆಡಿದ ಸಹಾನುಭೂತಿಯ ಮಾತುಗಳಿಗಾಗಿ ಸಭೆಯು ವಂದನೆಯನ್ನು ತಿಳಿಸಬೇಕೆಂದೂ, ಈ ಕಷ್ಟಗಳನ್ನೆಲ್ಲಾ ಎದೆಗೊಟ್ಟು ಸಾತ್ವಿಕ ನಿರೋಧಪದ್ಧತಿಯನ್ನು ನಡೆಯಿಸುತ್ತಿರುವ ಗಂಧಿ ಮೊದಲಾದವರಿಗೆ ಅಭಿನಂದನವನ್ನರ್ಪಿಸಬೇಕೆಂದೂ, ಕಡೆಯವರೆಗೂ ಅವರಿಗೆ ಬೇಕಾದ ಧನಸಹಾಯವನ್ನು ಭರತಖಂಡದಿಂದ ಮಾಡಬೇಕೆಂದೂ ಮೊದಲಾಗಿ ನಿರ್ಧಾರಗಳಾದುವು.

ಈಗಿರುವ ಸ್ಟೇಟ್ ಸೆಕ್ರೆಟರಿಯವರ ಸಭೆಯ ರೀತಿಯನ್ನು ತಪ್ಪಿಸಿ, ಸಭೆಯಲ್ಲಿ ... ಸಭಿಕರಿರುವಂತೆಯೂ ಅವರಲ್ಲಿ ಮೂರನೆಯ ಒಂದುಭಾಗದವರು ಭಾರತೀಯರಿಂದ ಆರಿಸಲ್ಪಟ್ಟವರಾಗಿರಬೇಕು, ಸ್ಟೇಟ್ ಸೆಕ್ರೆಟರಿಯವರ ಸಂಬಳವನ್ನು ಇಂಗ್ಲೆಂಡ್ ಬೊಕ್ಕಸದಿಂದ ಕೊಡುವಂತಾಗಬೇಕೆಂಬ ವಿಷಯದ ಜತೆಗೆ ಚರ್ಚೆಯಲ್ಲಿರುವ ಅನೇಕ ವಿಷಯಗಳ ಸಂಬಂಧವಾಗಿ ಪದ್ಧತಿಯಂತೆ ನಿರ್ಧಾರಗಳು ಮಾಡಲ್ಪಟ್ಟವು. ದಕ್ಷಿಣಾಫ್ರಿಕಾ ವಿಷಯದಲ್ಲೂ ಪ್ರೆಸ್ ಆಕ್ಟ್ ಮೊದಲಾದ ಕೆಲ ವಿಷಯಗಳಲ್ಲೂ ಭಾರತೀಯರ ಅಭಿಪ್ರಾಯವನ್ನು ಬೆನ್ನಟ್ಟಿಸುವುದಕ್ಕಾಗಿ ಇಂಗ್ಲೆಂಡಿಗೆ ಒಂದು ನಿಯೋಗದ ಸಂಘವನ್ನು ಕಳುಹಿಸಿಕೊಡಬೇಕೆಂದೂ ಆ ವಿಷಯದಲ್ಲಿ ತಕ್ಕ ವ್ಯವಸ್ಥೆಯನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ನೆರವೇರಿಸಬೇಕೆಂದೂ ಒಂದು ನಿರ್ಧಾರವನ್ನು ಮಾಡಿದರು. ಇದುವರೆಗೆ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾಗಿದ್ದ ಮಿ॥ ವಾಚಾ ಮತ್ತು ಮಿ॥ ವಿಜಯರಾಘವಾಚಾರ್ಯರು ರಾಜೀನಾಮೆಯನ್ನು ಕೊಟ್ಟುದನ್ನು ಅಂಗೀಕರಿಸಿ, ಅವರ ಸ್ಥಳಕ್ಕೆ ಆನರಬಲ್ ಸಯ್ಯದ್ ಮಹಮ್ಮದ್‌ರವರೂ, ... ರವರೂ ನಿಯಮಿಸಲ್ಪಟ್ಟರು. ಮುಂದಿನ ವರ್ಷದ ಸಭೆಯನ್ನು ಮದ್ರಾಸಿನಲ್ಲಿ ಕೂಡಿಸಬೇಕೆಂದು ನಿರ್ಧರಿಸಲ್ಪಟ್ಟಿತು. ಈಗಿನ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಮಹಮ್ಮದೀಯರೊಬ್ಬರಿಗೆ ಸಭಾಧ್ಯಕ್ಷತೆಯನ್ನು ವಹಿಸುವುದೂ, ಸಭೆಗೆ ಬಂದಿದ್ದ ಪ್ರತಿನಿಧಿಗಳಲ್ಲಿ ಸ್ವಲ್ಪ ಸಂಖ್ಯೆಯವರು ಮಹಮ್ಮದೀಯರಾಗಿದ್ದುದೂ, ಸಭೆಯ ಜನರಲ್ ಸೆಕ್ರೆಟರಿ ಕೆಲಸಕ್ಕೆ ಆ॥ ನವಾಬ್ ಸಯ್ಯದ್ ಮಹಮ್ಮದ್‌ರವರು ನಿಯಮಿತರಾದುದೂ ಸಹ ಹಿಂದೂ ಮಹಮ್ಮದೀಯರಲ್ಲಿ ... ಇದರಿಂದ ... ರಾಷ್ಟ್ರ ... ಬಹುದಾಗಿ ...

ಮಹಾಸಭೆಯು ಬಹುರ್ಮಾನವನ್ನು ಸರ್ಕಾರದ ಕಿವಿಗೆ ಬೀಳಿಸಿದ್ದು, ಅವರು ಗಮನಿಸಲೇಬೇಕಾಗುವುದಕ್ಕೆ ಅವಕಾಶವಾದೀತೆಂದು ಹೇಳಬಹುದು.

ಪರಿಶ್ರಾಮಿಕ ಮಹಾಸಭೆ

ಅದೇ ತಾ|| ... ನೆಯ ಮಧ್ಯಾಹ್ನ ಪರಿಶ್ರಾಮಿಕ ಸಭೆಯು ಡಾ|| ಲಲ್ಲೂಭಾಯಿ ಶ್ಯಾಮಲದಾಸ್‌ರವರ ಅಧ್ಯಕ್ಷತೆಯಿಂದ ನೆರವೇರಿತು. ರಾ|| ಬ|| ಹೀರಾಲಾಲ್ ... ರವರು ಸತ್ಕಾರಕ ಸಂಘಾಧ್ಯಕ್ಷರಾಗಿದ್ದರು. ಅಧ್ಯಕ್ಷರ ಭಾಷಣದಲ್ಲಿ ಈಗ ಭರತಖಂಡದಲ್ಲಿ ದಿವಾಳಿಯಾಗಿಯೂ ... ಇರುವ ಬ್ಯಾಂಕುಗಳ ವಿಷಯವನ್ನೂ ಭರತಖಂಡದ ಸಂಪದಭಿವೃದ್ಧಿಗೆ ಅವಶ್ಯಕವಾದ ವ್ಯಾಪಾರ ವ್ಯವಸಾಯ ಕೈಗಾರಿಕೆಗಳ ಸಂಘಾರಣೆಯ ವಿಷಯವನ್ನೂ ... ತು ವಿಸ್ತಾರವಾಗಿ ಪ್ರತಿಪಾದಿಸಿದರು.

ಆಸ್ತಿಕ ಮಹಾಜನಸಭೆ

ಅದೇ ತಾ|| ... ರ ಸಾಯಂಕಾಲ ಕರಾಚಿ ಪಟ್ಟಣದಲ್ಲೀ ಈ ಸಭೆಯು ಆರಂಭಿಸಲ್ಪಟ್ಟಿತು. ಮರುದಿನ ಬಹುಜನಾದರ ಉದ್ದೇಶವನ್ನು ಕುರಿತು ಪ್ರಿನ್ಸಿಪಾಲ್ ... ರವರು ಉಪನ್ಯಾಸ ಮಾಡಿದರು. ಅನಂತರ ಮೀರತ್ತಿನಿಂದ ಬಂದಿದ್ದ ರೆವರೆಂಡ್ ... ಸಭಾಧ್ಯಕ್ಷರಾಗಿ ಆರಿಸಲ್ಪಟ್ಟು ... ಉತ್ತಮವಾದ ಭಾಷಣವನ್ನು ಮಾಡಿದರು. ತರುವಾಯ ... ಉದ್ದೇಶಕವಾದ ಕೆಲ ನಿರ್ಧಾರಗಳನ್ನು ಮಾಡಿದರು.

ಇದೇ ಪಟ್ಟಣದಲ್ಲಿ ತಾ|| ೨೭ ರ ದಿವಸ ಮದ್ಯಪಾನ ನಿರೋಧಕ ಸಭೆಯು ಜರುಗಿ ಪ್ರಜೆಗಳೂ ಸರ್ಕಾರದವರೂ ಮದ್ಯಪಾನ ನಿಷೇಧಕ್ಕಾಗಿ ಮಾಡಬೇಕಾದ ಕರ್ತವ್ಯಗಳನ್ನು ಕುರಿತು ಭಾಷಣಗಳೂ ನಿರ್ಧಾರಗಳೂ ಆದುವು.

ತಾ|| ೨೮ ರಲ್ಲಿ ಅಂತ್ಯಜನೋದ್ಧಾರಕ ಸಭೆಯು ಲಾಲಾ ಲಜಪತಿರಾಯರವರ ಅಧ್ಯಕ್ಷತೆಯಿಂದ ನೆರವೇರಿತು. ಈ ಅಂತ್ಯಜರ ಉದ್ಧಾರವಾಗುವುದು ಪರೋಪಕಾರ ಪುಣ್ಯ ದೃಷ್ಟಿಯಿಂದಲೇ ಅಲ್ಲವೆಂದೂ ಹಿಂದೂ ಜನಾಂಗೋದ್ಧಾರಕ್ಕಾಗಿ ಮಾಡಲ್ಪಡಬೇಕೆಂದೂ, ಉತ್ತರ ಹಿಂದೂಸ್ಥಾನದಲ್ಲಿ ಬ್ಯಾಪ್ಟಿಸ್ಟ್ ಮಿಷನರಿಗಳು ಈ ಅಂತ್ಯಜರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಾರೆ. ... ಈ ವಿಷಯದಲ್ಲಿ ಹಿಂದೂ ಮಹಾಜನರೆಲ್ಲರೂ ... ತೆಯಿಂದ ಯೋಚಿಸಬೇಕಾಗಿರುವುದೆಂದೂ ಅಧ್ಯಕ್ಷರು ಭಾಷಣಮಾಡಿದರು. ಅದೇ ವಿಷಯವಾಗಿ ಸರ್ ಚಂದ್ರಾವರ್ಕರ್, ದೇವಧರ್, ಡಾ|| ಸದರ್ಲ್ಯಾಂಡ್ ... ರವರು ಪ್ರೋತ್ಸಾಹಕ ಭಾಷಣಗಳನ್ನು ಮಾಡಿದರು.

ತಾ|| ೨೯ ರಲ್ಲಿ ಆರ್ಯ ಪಟ್ಟಣದಲ್ಲಿ ಜೈನ ... ಯು ಮಿ॥ ... ರವರ ಅಧ್ಯಕ್ಷತೆಯಿಂದ ನೆರವೇರಿತು. ಡಾ|| ಜೀರಂಟ್ ಪ್ರೊಫೆಸರ್ ... ಚಂದ್ರ ವಿದ್ಯಾಭೂಷಣ ಮೊದಲಾದವರು ಉಪಯುಕ್ತ ಭಾಷಣಗಳನ್ನು ಮಾಡಿದರು.

ತಾ|| ೨೯ ರಲ್ಲಿ ಕರಾಚಿಯೊಳಗೆ ... ಸಭೆಯು ಡಾ|| ಮಧುರದಾಸ್ ... ರವರ ಅಧ್ಯಕ್ಷತೆಯಿಂದ ನೆರವೇರಿತು.

ಆಗ್ರಾದಲ್ಲಿ ತಾ|| ೩೦ ರಲ್ಲಿ ಮಹಮ್ಮದೀಯರ ವಿದ್ಯಾವಿಷಯಕ ಸಭೆಯು ನೆರವೇರಿತು. ಅದೇ ದಿನ ಕಾಶಿಯಲ್ಲಿ ವೈಶ್ಯರ ಸಭೆಯು ಸೇರಿದ್ದಿತು. ... ಲಕ್ನೋ ನಗರದಲ್ಲಿ ರಜ್ಜಬ್ ದಿನಗಳ ಮಹಾಸಭೆಯು ಡಿಸೆಂಬರ್ ತಾ|| ೨೯-೩೦ ರಲ್ಲಿ ನೆರವೇರಿತು. ಮಿ॥ ಜ್ಯಾಕಿನ್ಸ್ ... ರವರು ಸಭಾಧ್ಯಕ್ಷರಾಗಿದ್ದು ... ಹಿತೋಪದೇಶವುಳ್ಳ ದೀರ್ಘ ಭಾಷಣವನ್ನು ಮಾಡಿದರು.

ತಾ|| ೨೯ ರಿಂದ ೩ ದಿನಗಳ ವರೆಗೆ ಆಗ್ರಾದಲ್ಲಿ ಕ್ಷತ್ರಿಯ ಮಹಾಸಭೆಯು ಕಾಶ್ಮೀರ ಮಹಾರಾಜರ ಅಧ್ಯಕ್ಷತೆಯಿಂದ ನಡೆಯಿತು. ಅದರಂತೆ ನಾಸಿಕದಲ್ಲಿ ಮಹಾರಾಷ್ಟ್ರ ಸಭೆಯು ಧಾರ್ ಮಹಾರಾಜರ ಅಧ್ಯಕ್ಷತೆಯಿಂದ ನೆರವೇರಿತು.

ಹಳೆದೇಶದ ಸ್ವಾತಂತ್ರ್ಯ.

ದಕ್ಷಿಣದೇಶಕ್ಕೆ ಪ್ರಯಾಣಮಾಡಿದ್ದ ... ರವರು ಕಳೆದ ತಾ|| ... ರಲ್ಲಿ ... ಬರು.

ಸಂದರ್ಭಕ್ಕೆ ... ಮಹಾರಾಜರ ...
... ನ ... ಸೇ

ನಮ್ಮ ಬಾವುಟಗಳನ್ನು ಕಳೆದ ತಾ॥ ೬ ರಲ್ಲಿ ಕೋಲಾರದ ಡಿಸ್ಟ್ರಿಕ್ಟಿನ ಕಠ ರಕರ್ಗೆಟಿಗೆ ದಯಮಾಡಿಸಿದರು [illegible] ದಲ್ಲಿ ಈ ಸಂಸಾರವನ್ನು ಮುಗಿಸಿಕೊಂಡು ಬರುವರು.

ರಾಜಧಾನಿಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿದ್ದ ಮ॥ ಟಿ ಹನುಮಂತರಾವ್ ಬಿ ಎ, ಬಿ ಎಲ್, ರವರು ಕೆಲವು ಗಲ್ ತಾ॥ ಅಮಲ್ದಾರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಮುತುವರ್ಜಿಯನ್ನು ಮುಂದರಿಸಿ ಬೆಳಗ್ಗೆ ಸಾಯಂಕಾಲವೂ ಚಳಿ ಬೀಳುತ್ತಲೂ ಮಧ್ಯಾಹ್ನದ ಹೊತ್ತು ಬಿಸಿಲು ಕಾದು ಗಾಳಿಯು ಬೀಸುತ್ತಲೂ ಇದೆ. ಪ್ರಬಲವಾದ ರೋಗಗಳೇನೂ ಇಲ್ಲ.

ರಾಜಧಾನಿಯ ದ್ರಾಕ್ಷಾಪ್ರದರ್ಶನೋಪವನದ ವಿಸ್ತೀರ್ಣವನ್ನು ಇನ್ನೂ ಹೆಚ್ಚಿಸುವ ಉದ್ದೇಶದಿಂದ ಅದರ ಪೂರ್ವಕ್ಕೆ ಕಾರಂಜಿಕೆರೆಯ ವರೆಗಿರುವ ತೋಟಗಳನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಗೆಜೆಟ್ಟಿನಲ್ಲಿ ಪ್ರಕಟನೆ ಮಾಡಲ್ಪಟ್ಟಿದೆ.

ಕಣ್ಣೀಗಾಲದ ಕೇಸಿನಲ್ಲಿ ಶಿಕ್ಷಿತರಾಗಿರುವ ಕಾಳೇಗೌಡ ಮತ್ತು ಪುಟ್ಟಸ್ವಾಮಿಗೌಡ. ಇವರಿಬ್ಬರೂ ಚೀಫ್ ಕೋರ್ಟಿಗೆ ಮಾಡಿಕೊಂಡಿರುವ ಅಪೀಲ್ ವಿಚಾರಣೆಯು ಈದಿನ ಚೀಫ್ ಜಡ್ಜ್ ಮತ್ತು ಜಸ್ಟೀಸ್ [illegible] ರವರ ಮುಂದೆ ನಡೆಯಬೇಕಾಗಿರುವುದು.

ರಾಜಧಾನಿಯ [illegible] ಶ್ರೀ ಕಂಠಯ್ಯನವರು [illegible] ಯವರಿಂದ ಕಳುಹಿಸಲ್ಪಟ್ಟ [illegible] ಇದರ ಬೆಲೆ [illegible]

ರಾಜಧಾನಿಯ ಮ್ಯುನಿಸಿಪಲ್ [illegible] ನಿಯುಕ್ತರಾಗಿರುವ ಬಾಣಸವಾಡಿ [illegible] ಅಮಲ್ದಾರ್ ಮ॥ ಬಿ ನಾರಾಯಣರಾವ್ ಬಿ ಎ, ಬಿ ಎಲ್ ರವರು [illegible] ನೆಯ ತರಗತಿಯ ಅಸಿಸ್ಟೆಂಟ್ ಕಮೀಷನರಾಗಿ [illegible] ತಮ್ಮ ಹೊಸ ಕೆಲಸವನ್ನು ವಹಿಸಿಕೊಂಡರು.

[illegible]

ಭರತಖಂಡದ ವೃತ್ತಾಂತಗಳು.

[illegible]

ವಿದೇಶವೃತ್ತಾಂತಗಳು.

[illegible]

ಫ್ರೆಂಚ್ ಸೈನಿಕರ ಆಕಾಶವಿಮಾನಸಂಧಾನವೆಯನ್ನು ನೋಡುವುದಕ್ಕಾಗಿ ಆಂಗ್ಲ ಸೇನಾಮಂತ್ರಿಯಾದ ವಿನ್‌ಸ್ಟನ್ ಚರ್ಚಿಲ್‌ರವರು ಫ್ರಾನ್ಸಿಗೆ ಹೋಗಿದ್ದರು. ಆಗ ೮೦ ವಿಮಾನಗಳು ಹಾರಿಬಿಟ್ಟವು. ಆಗ ಚರ್ಚಿಲ್‌ರೊಡನೆ ಅನೇಕ ಆಂಗ್ಲೇಯ ಉದ್ಯೋಗಿಗಳೂ ಕೂಡಿ ಆಕಾಶಸಂಚಾರ ಮಾಡಿಕೊಂಡು ಸುರಕ್ಷಿತವಾಗಿ ಇಳಿದರು.

ಜರ್ಮನಿಯ ಒಬ್ಬ ರಾಜಕುಟುಂಬಿಯು ಒಂದುದಿನ ರಾತ್ರಿ ಮಲಗಿದ್ದಾಗ ಕೆಳ ಅಂತಸ್ತಿನಲ್ಲಿ ಏನೋ ಶಬ್ದವಾದುದನ್ನು ಕೇಳಿ, ಕಳ್ಳರು ಬಂದಿರಬಹುದೆಂದು ಯೋಚಿಸಿ, ತುಪಾಕಿಯನ್ನು ತೆಗೆದುಕೊಂಡು ಹೋಗಿ ನೋಡುವಲ್ಲಿ ತನ್ನ ಹೆಂಡತಿಯು ಮತ್ತೊಬ್ಬನೊಡನೆ ಮಲಗಿರುವುದನ್ನು ಕಂಡು ಗುಂಡಿನಿಂದ ಅವರಿಬ್ಬರನ್ನೂ ಹೊಡೆದು ಕೊಂದನು.

ಅಮೇರಿಕಾ ದೇಶದ ವಿಚೆಗಾನ್ ರಾಷ್ಟ್ರಕ್ಕೆ ಸೇರಿದ ಒಂದು ಪ್ರದೇಶದಲ್ಲಿ ಮುಷ್ಕರವಾಡಿ ಕೆಲಸಕ್ಕೆ ಹೋಗದೆ ನಿಂತ ಕೂಲಿಗಾರರಿಗೆ ಸಹಾಯಮಾಡುವುದಕ್ಕಾಗಿ ಕ್ರಿಸ್ಮಸ್ ಹಬ್ಬದಲ್ಲಿ ಏರ್ಪಡಿಸಿಕೊಂಡಿದ್ದ ಒಂದು ಸೋಟಕ್ಕೆ ಜನರು ವಿಶೇಷವಾಗಿ ಸೇರಿದ್ದರು. ಯಾರೋ ದುರ್ಮಾರ್ಗರು ಕಟ್ಟಡಕ್ಕೆ ಬೆಂಕಿಬಿದ್ದಿತೆಂದು ಸುಮ್ಮಸುಮ್ಮನೆ ಕೂಗಿಕೊಂಡುದರಿಂದ ಜನರು ವಿಗಲುಬಿದ್ದು ಹೊರಕ್ಕೆ ಓಡಿಹೋಗುವ ಭರದಲ್ಲಿ ೮೦ ಮಂದಿ ಸತ್ತರು.

ಪತ್ರವ್ಯವಹಾರ

ಶ್ರೀಪಟ್ಟಾಧೀಶ ಪಲ್ಲಕ್ಕಿಉತ್ಸವ, (ದಾವಣಗೆರೆ ತಾ॥ ಕಬ್ಬೂರು)

ವಾರ್ಧಕ॥ ವೈರಶೂರು ಸ್ವಕೀಯರವರ ಪದಸನ್ನಿಧಿಗೆ। ದೇಶಬಾಂಧವರೆಲ್ಲರಿಗೆ ನಾನೊರ್ವ ಬಾಲಕಂ। ಲೇಸಿನಿಂ ತಲೆವಾಗಿ ವಿಜ್ಞಾಪನಂ ಗೈದು ಬಳಿಕ ಬೇಡುವೆನೊಂದನು॥ ಈ ಕವನಮದೊಳು ತಾವು ದಯವಿಟ್ಟು ಪತ್ರಿಕೆಗೆ। ಸೇರಿಸಿಲ್ಲದೆ ಕಾಶಿ ಪ್ರಕಟಿಸುತೆ ಗುರುಕಾರ್ಯ। ಕಾಕೆಪುಟ್ಟ ಶರೀರನ ಮಾತನೇಕೆಂದು ನಾಂ ಪ್ರೀತಿಯಿಂ ಬಯಸುತಿಹೆನು॥

॥ಕಂದಪಂಚಕ॥

ಜನವರಿ ಯಿಪ್ಪತ್ತನ್ನೆರಡನೆ। ದಿನದೊಳು ಪುಷ್ಯ ಬಹುಳ ದ್ವಾದಶಿಯೊಳ್॥ ಪಲ್ಲಕ್ಕಿಉತ್ಸವಂ ಬಹು। ಜನ ಕೊಟ್ಟಿಗೆ ನಡೆವ ಅತುಳ ಜಯಜಯವರವಂ॥೧॥

ಆವ ಕು ದುರ್ಗದೊಳು ಶಿವಭಕ್ತರು। ಪಾದುಕೆಗಳ ನಂದಿಕೊಳುವ ಮಹದಾನಂದ ಶ್ರೀಯುತ ಗುರುಸ್ವಾಮಿಯವರಂ। ದೀಪದೊಳು ಕೈತವದ ದಳಕೆ ಭಕ್ತಸಮೂಹವಂ॥೨॥

ಗುರುವರ ತನ್ನನು ಕರದು। ಪರಿಜನದೊಡಂದೆ ಭಕ್ತರ ಪತ್ಯಕರಂ॥ ವಿಧವಿಧದ ಯಾಧಿಕಸ್ಥಾನ। ನಿರವಂ ಪರಿಪೂರ್ಣಗೊಳಿಸುವಿನ ಸೊಬಗನು॥೩॥

ಬಿಡಿಗಾರಿಗಳಿಂ ಬರುವ ಕೀರ್ತಿಯಂ ಜೋಡಿಸುತ ಸುಗಮ ಮಾಗಳ ತೆರದಿಂ॥ ಕೊಡಗ ಬಿಳಾರ್ ನಿಲ್ದಾಣ। ಕ್ಕದಿಯು ಬಲ್ಲಿಂದೆ ವೈಲಿ ಯೊಂದರೊಳಿಹುದೈ॥೪॥

ಚಂದ್ರನುತ ನಾ ಚಕೋರಂ। ಸಾಂದ್ರಾಪೇಕ್ಷೆಯೊಳ್ ಬಯಸುವಂದದಿ ಭಕ್ತ॥ ಬ್ರಾಂದವ ಬರವಂ ಕೋರುತೆ। ಚಂದದೆ ಮಹದೇಂದ್ರದಾದಮಂ ಭಜಿಸುತಿಹೆಂ॥೫॥

ಓರ್ವ ಗುರುಸೇವಾಧುರೀಣ.

ಇಳಕಲ್ಲ.

ಇಲ್ಲಿಗೆ ಕೊಲ್ಹಾಪುರದ ಸಂಗೀತನಾಟಕಮಂಡಳಿಯವರು ಬಂದು ಏರಡು ತಿಂಗಳಾಯಿತು. ಇವರಾಡುವ ನಾಟಕಗಳು ಬೋಧಪ್ರದವನ್ನೂ ಗಾಯನ ಮತ್ತು ಅಭಿನಯಗಳಿಂದ ವಿಚಾರ ಪ್ರೇಕ್ಷಕರ ಚಿತ್ತಾಕರ್ಷಣವನ್ನು ಮಾಡಿ ಆನಂದಪಡುತ್ತಿರುವರು. ನಾಟಕದ ಟಾಸ್ಫರ್ ಸೀನರಿಗಳು ಅತ್ಯುತ್ತಮವಾಗಿರುವುವು ಇವರ ನಾಟಕಗಳನ್ನು ನೋಡಿ ಆನಂದಪಟ್ಟ ಪ್ರೇಕ್ಷಕರು ಕಂಪನಿಗೆ ಬಹುಮಾನ ಮಾಡಿದ ವಿವರ:— ಶ್ರೀಮಂತ ಸಂಗಪ್ಪನವರು ಸರ್ಕಾರಿಯ ದಕ್ಷಿಣ ಇವರು ಒಂದು ಬೆಳ್ಳಿಯ ಪದಕ, ಒಂದು ಜರದ ರುಮಾಲು, ಒಂದು ಶಲ್ಯ. ಶ್ರೀಮಂತ ರಾಜಾ ಬನಬಸಪ್ಪನವರು ಸರದೇಸಾಯಿ ಜೇನೂರ ಇವರು ಒಂದು ಜರದ ರುಮಾಲು, ಒಂದು ಶಲ್ಯ. ಇಳಕಲ್ಲ ಊರಲ್ಲಿ ನಾಟಕ ಕಂಟ್ರಾಕ್ಟು ಹಿಡಿದ ಜನರ ಕಡೆಯಿಂದ ಒಂದು ಬೆಳ್ಳಿಯ ಪದಕ. ಬಸಪ್ಪನವರು ಅಮೀನಗಡದ ಇವರು ಒಂದು ಬೆಳ್ಳಿಯ ಪದಕ. ಈ ಪ್ರಕಾರ ಕಂಪನಿಯವರನ್ನು ಗೌರವಿಸಿದರು. ಕನಿಷ್ಠಭಾವದ ಕಡೆಯ ಪ್ರಯೋಗನೋಡಲಿಕ್ಕೆ ಈ ಭಾಗದ ಡಿ. ಡಿ. ಕಲೆಕ್ಟರ ಸಾಹೇಬರವರು ರಾ. ಸಾ. ಮಾಮಲೇದಾರರೂ ಮತ್ತು ಕೆಲವು ವಕೀಲರೂ ಬಂದಿದ್ದರು. ಪ್ರಯೋಗವು ಚೆನ್ನಾಗಿ ಆದುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿದರು. ಇಲ್ಲಿ ಸ್ಟೇಜಿನ ಹಿಡುಗು ಅಲಂಬದಾದು ಒಂದ ಸಂಘದವರು ಬಾಗಲಕೋಟೆ [illegible] ... ಕೆ. ಇವರ ನಾಟಕಗಳನ್ನು ... ಕೆಯು ಇತ್ಯಾದಿ ಪೂರ್ಣವಾ...

ದ್ದರಿಂದ ಜನರು ಬಹಳೇ ಹಳಹಳಿಸುತ್ತಿರುವರು. ಈ ಕಂಪನಿಯವರು ಶೀಘ್ರವೇ ಇಲ್ಲಿಗೆ ಪುನಃ ಬಂದು ಜನರ ಕೋರಿಕೆಯನ್ನು ಪೂರ್ಣಮಾಡುವರೆಂದು ನಂಬುತ್ತೇನೆ.

ಒಬ್ಬ ಪ್ರೇಕ್ಷಕ.

ತಿಪಟೂರು.

ಮೈಸೂರ ಸಂಸ್ಥಾನದಲ್ಲಿ ತುಮಕೂರುಜಿಲ್ಲೆಯ ಪ್ರಸಿದ್ಧ ಸ್ಥಲವಾದ ತಾ॥ ತಿಪಟೂರಲ್ಲಿರುವ ಕೆರೆಯನ್ನು ಅಲ್ಲಿಯ ನಿವಾಸಿಗಳು ಭ್ರಷ್ಟಮಾಡಿರುವರು. ಈ ಊರು ವ್ಯಾಪಾರದಲ್ಲಿ ಒಳ್ಳೆಯ ಊರ್ಜಿತಾವಸ್ಥೆಯನ್ನು ಹೊಂದಿದ್ದು, ತಾಲೂಕಿನ ಮುಖ್ಯಆಫೀಸು, ಮುನ್ಸಿಪಾಲಿಟಿ ಆಫೀಸು, ಆಸ್ಪತ್ರೆ- ಮುಂತಾದುವುಗಳಿಂದ ಒಳ್ಳೆಯ ನಾಗರಿಕತೆಯನ್ನೂ ಹೊಂದಿರುವುದು. ಅದರೆ ಈ ಕೆರೆಯಲ್ಲಿಯ ನೀರನ್ನು ಯಾವತ್ತು ಜಾತಿಯ ಜನರು ಬಂಟೆಗಳನ್ನು ತೊಳೆಯಲಿಕ್ಕೂ, ಭಾಂಡಗಳನ್ನು ತಿಕ್ಕುವದಕ್ಕೂ,ಮನೆಯ ಸ್ನಾನಾದಿ ಇತರ ಕೆಲಸಕ್ಕೂ ಉಪಯೋಗಮಾಡುವರು. ಹೀಗಿದ್ದು ಇದೇ ಕೆರೆಯಲ್ಲಿ ಯಾವತ್ತು ಸಣ್ಣದೊಡ್ಡ ಸುಜ್ಞಾನ ವ ಅಜ್ಞಾನಜನರು ದೀರ್ಘಶಂಕೆಯನ್ನು ಮಾಡಿ, ತಮ್ಮ ತಮ್ಮ ಪೃಷ್ಠಗಳನ್ನು ನಿರ್ಮಲಮಾಡಿಕೊಂಡು ಹೋಗುವರು. ಇದರಮೇಲಿಂದ ಈ ಊರ ಸಭ್ಯಜನರ ಮರ್ಯಾದೆಯನ್ನು ವರ್ಣಿಸಲಿಕ್ಕೆ ನನಗೆ ಬುದ್ಧಿಯು ಸಾಲದು. ಇರಲಿ. ಈ ಕೆರೆಗೆ ಸರಿಯಾದ ಕಾವಲುಗಾರರನ್ನು ಮಾಡಿಸಿ, ಜಲಸಂಗ್ರಹವನ್ನು ಮಾಡಿಟ್ಟುಕೊಂಡರೆ ಬೇಸಗೆಯಲ್ಲಿ ಪ್ರತಿವರ್ಷ ಸಂಬಳಬೇಕಾಗುತ್ತಿರುವ ನೀರಿನ ಅಭಾವವು ದೂರವಾಗುವುದು. ಕಾವಲುಗಾರರಿ ಮಾಡಿಸುವ ಮಾತು ಒತ್ತಟ್ಟಿಗಿರಲಿ, ಇದ್ದ ನೀರನ್ನೇ ಈಪರಿ ಹೇಸಿಕೆಯಿಂದ ಹೊಲಸುಮಾಡಿ, ಪ್ಲೇಗು, ಮಾರಿಕಾ, ಸಿಡುಬು, ಮೈಲಿ ಮುಂತಾದ ಅಂಟುರೋಗಕ್ಕೆ ತಮ್ಮಿಂದ ತಾವೇ ಆಸ್ಪದಮಾಡುತ್ತಿರುವರು. ಅಲ್ಲದೆ, ಶಾಸ್ತ್ರಕ್ಕೂ ಎಲ್ಲ ಜಾತಿಯ ಧರ್ಮಕ್ಕೂ ಸಹ ವಿರೋಧವಾದ ಮಾತೆಂಬುದನ್ನು ಅಮಲ್ದಾರರೂ, ಆ ಊರ ಸ್ವಚ್ಛಗೃಹಸ್ಥರೂ ಮತ್ತು ಮೈಸೂರ ಸರ್ಕಾರದವರೂ ಸಹ ವಿಚಾರಿಸದೆ ಇರುವುದು ಬಹು ಆಶ್ಚರ್ಯಕರವಾದ ಮಾತೇ ಸರಿ. ಮೈಸೂರು ಸಂಸ್ಥಾನವು ಸುಧಾರಿಸಿದ ಪ್ರದೇಶಗಳಲ್ಲಿ ಬಹು ಮುಂದುವರಿದಿದ್ದು ಮೈಸೂರ ಸರ್ಕಾರದವರು ಈ ಊರ ಆರೋಗ್ಯದ ಕಡೆಗೆ ಇನ್ನುಮೇಲಾದರೂ ಲಕ್ಷ್ಯಗೊಟ್ಟು ಈ ಕೆರೆಯ ಸುವ್ಯವಸ್ಥೆಯನ್ನು ಮಾಡಬೇಕೆಂಬುದಾಗಿ ಬಯಸುವ,

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಶಿವಯೋಗಮಂದಿರದ ವಿದ್ಯಮಾನ.

(ಮಣಸಿನಮಲ್ಲೀದೇವರಹಳ್ಳಿ ಶ್ರೀ ಕಲ್ಲಿನಾಥಾರ್ಯರಿಂದ)

ಶ್ರೀ ಶಿವಯೋಗಮಂದಿರದ ವಿಶೇಷೋತ್ಸವವನುಯಾವುದ ಪದ್ಧತಿಯಂತೆ ಬರುವ ಮಾಘ ಮಾಸದ ಶಿವರಾತ್ರಿಯಲ್ಲಿ ನಡೆಯುವುದಾಗಿದೆ. ಸದ್ಭಕ್ತಜನರು ಈ ಮಂದಿರಕ್ಕೆ ಹೋಗಿ ಒಂದಾವೃತ್ತಿಯಾದರೂ ದರ್ಶನ ತೆಗೆದುಕೊಂಡು ಬಂದರೆ ವಿಶೇಷ ಫಲವುಂಟು. ನಾವು ಪತ್ರಿಕಾಮುಖೇನ ಈ ಮಂದಿರದ ಪ್ರಶಸ್ತ್ಯವನ್ನು ಕೇಳುತ್ತ ಪ್ರತ್ಯಕ್ಷತಃ ಅಲ್ಲಿಯ ವಿದ್ಯಮಾನವನ್ನು ನೋಡಬೇಕೆಂದಭಿಲಾಷಿಸಿ, ಹೋದ ಶ್ರಾವಣ ಮಾಸಾರಂಭದಲ್ಲಿ ಕೆಲ ಜನರ ಸಮೇತ ಹೋದೆವು. ಸೋಲವಾಗಿ ಕೇಳಿದುದರಲ್ಲಿದ್ದ ಅಂಕಿತಂತಲೂ ಹತ್ತುಭಾಗ ಹೆಚ್ಚಾಗಿಯೇ ಇದ್ದಿತು. ಅವುಗಳಲ್ಲಿ ಕೆಲವನ್ನು ಸಾಧ್ಯವಾದಮಟ್ಟಿಗೆ ಇಲ್ಲಿ ಉದಾಹರಿಸಲಾಗುತ್ತದೆ.— ಈ ಸಂಸ್ಥೆಯು ಈಗ್ಗೆ ೮-೯ ವರ್ಷಗಳಲ್ಲಿ ಇಳಕಲ್ಲ ಶ್ರೀ ಮಹಾಂತಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು, ಅವರು ಶಿವೈಕ್ಯರಾದನಂತರ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಕೃಪಾಶ್ರೋಕ್ಷೆಯಲ್ಲಿರುತ್ತದೆ. ಈ ಸ್ಥಳವು ಬಾದಾಮಿ ಗ್ರಾಮದ ನಿಲ್ದಾಣಕ್ಕೆ ಸಮೀಪದಲ್ಲಿರುವ ಮಲಪ್ರಭಾನದಿ ಮತ್ತು ಮಹಾಕೂಟಕ್ಷೇತ್ರದ ಮಧ್ಯದಲ್ಲಿರುತ್ತದೆ. ಮಹಾಕೂಟಕ್ಷೇತ್ರದ ದೇವಾಲಯ ಮೊದಲಾದ ಕಟ್ಟಡಗಳು ಹಿಂದೆಯಾಳುತ್ತಿದ್ದ ಚಾಲುಕ್ಯವಂಶದ ರಾಜರು ಕಟ್ಟಿಸಿರುವುದಾಗಿ ಶಿಲಾಲೇಖನದಲ್ಲುಂಟೆಂದು ಜನರು ಹೇಳುತ್ತಾರೆ. ಇಲ್ಲಿಗೆ ೨ ಮೈಲಿಯ ದೂರದಲ್ಲಿ ಶತಕತ್ರುಮಾ ಅನುಭವಸೂತ್ರಾದಿ ಗ್ರಂಥಕಾರರಾದ ಮಗ್ಗೆಯ ಮಾಯಿದೇವಾಚಾರ್ಯರು ವಾಸಿಸುತ್ತಿದ್ದ ಶಿವಪುರಿಯೆಂಬ ಗ್ರಾಮವೂ, ಅವರು ಸ್ತೋತ್ರಮಾಡಿರುವ ಸೋಮೇಶ್ವರ ದೇವರೂ ಸಹ ಇದ್ದು ಕಲ್ಯಾಣಪಟ್ಟಣದಂತೆ ಈಗ್ಗೆ ಪ್ರಸಿದ್ಧಿಗೆ ಬರುತ್ತಿಲ್ಲವಾಗಿರುತ್ತದೆ. ಈ ಮಂದಿರದ ಹವೆಯು ಚೆನ್ನಾಗಿರುತ್ತದೆ. ಶ್ರಾವಣ ಶುಕ್ಲ ಯಾರಭ್ಯ ವೇ॥ ಸೋಮನಾಥಶಾಸ್ತ್ರಿಗಳಿಂದ ಪ್ರಭುಲಿಂಗಲೀಲಾ ಪುರಾಣಶ್ರವಣವೂ, ಮತ್ತು ದಾವಣಗೆರೆ ವೇ॥ ನಿರಾನಿಮಠದ ಶಾಂತವೀರಾಚಾರ್ಯರು ವಿಜಾಪುರದ ವೇ॥ ಮಲ್ಲಿಕಾರ್ಜುನಶಾಸ್ತ್ರಿಗಳು, ವೇ॥ ಬಸವಲಿಂಗಶಾಸ್ತ್ರಿಗಳು ಇವರುಗಳು ಪ್ರತಿನಿತ್ಯವೂ ನಮ್ಮ ಮತೋದ್ಧಾರಕ್ಕಾದ ಅ... ... ನಿತ್ಯಕ್ಕೂ ಮಹುವ... ಪತ್ರಿಯನ್ನು ಆ... ನಮ್ಮ ಗಳಿಗೆ ... ...ಗಳ

ನ್ನು ಬರೆದಿಟ್ಟಿರುವ ಪುರಾತನ ಚರಿತ್ರೆ— ಮೊದಲಾದುವುಗಳನ್ನು ಉಪನ್ಯಾಸದ ಮೂಲಕ ಪಂಡಿತಪಾಮರರಿಗೆ ವೇದ್ಯವಾಗುವಂತೆ ತಮ್ಮ ಭಾಷಣಗಳನ್ನು ಮಾಡಿ, ಪ್ರತಿವರ್ಷವೂ ಈ ವಿಧವಾದ ಶಿವಭಕ್ತಸೇವೆಯಲ್ಲಿರುತ ಸಭ್ಯರ ಸನ್ನಿಧಿಯಲ್ಲಿ ಒಪ್ಪಿರುತ್ತಾರೆ. ಅಲ್ಲದೆ ಇವರು ಗ್ರಾಮಾಂತರಗಳಿಗೆ ಹೋಗಿ ವಿದ್ಯಾವಂತರ ದರ್ಶನವೂ ಸಹ ಇಲ್ಲದಿರುವ ವೀರಶೈವರಿಗೆ ಹಿತೋಪದೇಶವಾಡಿ ಮತಜ್ಞಾನ ಹುಟ್ಟಿಸುವುದಾಗಿ ಒಪ್ಪಿಕೊಂಡಿರುವುದಕ್ಕೆ ಯಾರುತಾನೇ ಸಂತೋಷಪಡರು? ಮತ್ತು ಜನಗಳಿಗೆ ವೀರಶೈವ ಮತಸ್ವರೂಪವು ಸುಲಭವಾಗಿ ಬೋಧೆಯಾಗುವಂತೆ ಉಪನ್ಯಾಸ ಮಾಡಿ ಧನ್ಯರನ್ನು ಮಾಡುವುದು— ಇತ್ಯಾದಿ ಕಾರ್ಯಗಳಿಗೆ ವೇ॥ ಬಸವಲಿಂಗಶಾಸ್ತ್ರಿಗಳೂ ವೇ॥ ಮಲ್ಲಿಕಾರ್ಜುನಶಾಸ್ತ್ರಿಗಳೂ ಬದ್ಧಕಂಕಣರಾಗಿ ತಮ್ಮ ಸಂಚಾರದ ವಿಷಯಕವಾದ ವಿಚಾರವನ್ನು ಮಾರಿತು ಅವರು ಶ್ರೀ ಹಾನಗಲ್ಲ ಸ್ವಾಮಿಗಳ ಪಾದಾಗ್ರದಲ್ಲಿ ಶರೀರಮಾನಸಾದಿಗಳನ್ನು ಅರ್ಪಿಸಿರುತ್ತಾರೆ. ವೇ॥ ಕೊಲ್ಹಾಪುರದ ವೀರಬಸವಶಾಸ್ತ್ರಿಯವರು ಈ ಸಂಸ್ಥೆಗೆ ಮಾಡುತ್ತಿರುವ ಸಹಾಯ [illegible] ಹೇಳತೀರದು. ಇವರು ಕೇವಲ ಶ್ರೀಮಂತರೂ ವಿದ್ಯಾವಂತರೂ ಇದ್ದು ಮುಂಬಯಿ-ಬೆಂಗಳೂರು ಮೊದಲಾದ ಪಟ್ಟಣಗಳಲ್ಲಿ ವೀರಶೈವ ಮತವಿಷಯಕವಾಗಿ ... ತ್ಯಶಿಕ್ಷಣಿಗೆ ಅನುಸರಿಸಿದ್ದಾಗ ರವ ತಮ್ಮ ಅಮೋಘವಾದ ಉಪನ್ಯಾಸದಿಂದ ಪರಮತದವರನ್ನು ಸಹ ತಲೆದೂಗಿಸುವಂತೆ ಭಾಷಣಮಾಡಿರುತ್ತಾರೆಂಬುದು ಎಲ್ಲರಿಗೂ ತಿಳಿದೇ ಇರುತ್ತದೆ. ಅದರಂತೆ ಇವರು ಯಾವಾಗಲೂ ಶ್ರೀಶಿವಯೋಗಮಂದಿರದಲ್ಲಿ ನೆಲಮಾಳಿಗೆಮಾಡಿಕೊಂಡು ತಮಗಿದ್ದ ... ... ಕೈವಲ್ಯ ಪದವಿಯನ್ನು ಬಿಟ್ಟು, ಶಿವಶರಣರ ಸೇವೆಯಿಂದ ಸ್ವರ್ಗಗಳು ಪ್ರತಿಕಂಕಲ್ಪರಾಗಿ, ಶ್ರೀ ಹಾನಗಲ್ಲ ಸ್ವಾಮಿಗಳ ಸಕಲಕೋಟಿಕಲ್ಲದ್ದು ಶಿವಾಚಾರಪರಾಧುರಂಧರರಾಗಿ ... ಇವರು ಕೊನೆಯದಿನ ಎಂದರೆ ಸೋಮವಾರ ಮಾಡಿದ ಉಪನ್ಯಾಸದಿಂದ ಅನಂತ ದೇಶದಿಂದ ಬಂದು ನೆರೆದಿದ್ದ ವೀರಶೈವ ವಿದ್ವಾಂಸರಲ್ಲಿಯ ಬಹುಮಟ್ಟಿಗೆ ಸಂತೋಷಪಟ್ಟರು. ಈ ಸಂಸ್ಥೆಗೆ ಚೈತನ್ಯಸ್ವರೂಪರಾದ ಹಾನಗಲ್ಲ ಶ್ರೀಗಳವರಿಗೆ ಬಂದಂಥ ಭಕ್ತಾದಿಗಳಲ್ಲಿ ಅತುಲವಾದಂತಹ ಕರುಣೆ, ಅದಕ್ಕನುಸರಿಸಿಯೇ ಅಲ್ಲದಕ್ಕೆ ಕಾರ್ಯಸಾಗದ ಮನಸ್ಸೂ ಸಹ ಇರುತ್ತ, ಅಹಿಂಸಾಧರ್ಮವೂ ಸಹ ... ಅತ್ಯಂತ ಪ್ರಯತ್ನಪೂರ್ವಕವಾಗಿ ಕಾರ್ಯಗತಿಸುತ್ತಿದ್ದಾರೆ. ಇಲ್ಲಿ ಒಂದು ನೂರು ರೂ. ಸಂಬಳ (ಪಗಾರ) ದಿಂದ ನಲ್ವತ್ತು ರೂ. ಸಂಬಳದವರೆಗೂ ಇದ್ದು ಕೆಲಸಮಾಡತಕ್ಕವರು ೫೦ ಜನರ ವರೆಗೂ ಇರುತ್ತಾರೆ. ಇಲ್ಲಿಯ ವೆಚ್ಚವು ಮಾಹೆಯಾನ ೧೦೦೦ ರೂ. ವರೆಗೆ ಇರಬಹುದು. ಪ್ಲೇಗ್ ಜಿನ ಬೆಂಗಳೂರು ಇಲ್ಲಿಗೆ ಸೇರಿಸಿದರು ... ದಿಂದ ದೂರದಲ್ಲಿ ನಿಂತುಕೊಂಡು ೩೦-೪೦ ... ಬಾಳುವ ಗೋವುಗಳನ್ನೂ ಮತ್ತೂ ಬೇಕಾದ ಹಾಲ, ... ದಲಿಂದ ಸಾಮಾನುಗಳನ್ನೂ ತಂದು « ನಮ್ಮ ... ರುಗಳು ಮರಣಕಾಲದಲ್ಲಿ ಈ ವಿಧವಾಗಿ ... ದು ಹೇಳಿರುವರಾದುದರಿಂದ ಇದನ್ನು ... ಎಂದು ಒಪ್ಪಿಸುತ್ತಿದ್ದರು ... ವೀರಶೈವ ... ಲ್ಲಿ ಶಿವಭಕ್ತಿಯು ನಿಸರ್ಗವಾಗಿದೆಯೆಂದು ... ಬಹುದು ಏಕೆಂದರೆ— ಪೂರ್ವಕಾಲದಲ್ಲಿ ಶ್ರೀ ಬಸವಾದಿ ಪುರಾತನರು ಅಲ್ಲಿಯೇ ಜನಿಸಿದರು. ಮತ್ತೂ ... ದಲ್ಲಿ ಗದ್ದುಗೆಯಾಗಿ ಈಗಲೂ ಮಹತ್ತು ... ಳಗಳ ವ್ಯಕ್ತಿ ಉತ್ತರದೇಶದ ಮೂರ್ತಿಗಳೇ ... ತ್ತಾರೆ. ಈ ಸಂಸ್ಥೆಗೆ ಸಮಸ್ತ ವೀರಶೈವರು ಕಾಶಿ-ಗಿರಿ ಕೇದಾರಾದಿ ಕ್ಷೇತ್ರಗಳ ಯಾತ್ರೆಗಳನ್ನು ತ್ಯಜಿಸಿದಂತೆ ... ಇಲ್ಲಿಗೆ ಹೋಗಿ ಸುಲಭವಾಗಿ ಪುಣ್ಯಸಂಪಾದನೆ ಮಾಡಬಹುದು. ಇದಕ್ಕಿಂತ ಮೇಲೆನೇಳಿದ ಕ್ಷೇತ್ರಗಳು ವೀರಶೈವರ ಅತಿಶಯವಾಗಲಾರವೆಂದು ಕೇಳಬಹುದು.

ಪಟ್ಟಾಭಿಷೇಕೋತ್ಸವ.

ಶಿಕಾರಿಪುರ ತಾ॥ ತೊಗರಿಸಿ ಪಂಚೇಹಿರೇಮಠದ ಶ್ರೀ ಸ್ವಾಮಿ ಪಟ್ಟಾಧ್ಯಕ್ಷ ಮಹಾಂತದೇಶಿಕೇಂದ್ರ ಸ್ವಾಮಿಗಳವರು ಪ್ರಮಾದೀಚ ಸಂ॥ ದ ಕಾರ್ತಿಕ ಬ॥ ೧೩ ರಲ್ಲು ಲಿಂಗೈಕ್ಯರಾದರು. ಇದಕ್ಕೆ ಪೂರ್ವಭಾವಿಯಾಗಿಯೇ ಶಿರಗ್ರಾಮದ ಹಿರೇಮಠದ ವೀರಭದ್ರಯ್ಯನವರ ಪುತ್ರ ... ವರ್ಷ ವಯಸ್ಸಿನ ಚೆನ್ನಬಸವದೇವರನ್ನು ... ದು ಇದುವರೆಗೂ ತಮ್ಮ ಪಾದಸನ್ನಿಧಿಯಲ್ಲಿಟ್ಟುಕೊಂಡು ವಿದ್ಯಾಬುದ್ಧಿ ಆಚಾರವಿಚಾರಗಳನ್ನು ಬೋಧಿಸುತ್ತಿದ್ದರು. ತಾವು ಶಿವಲಿಂಗೈಕ್ಯರಾಗುವ ಹಿಂದಾಗಿ ಸಮಸ್ತ ... ಕ ಭಕ್ತಾದಿಗಳನ್ನು ತಮ್ಮ ಮುಂದಿಟ್ಟು ಕರೆಯಿಸಿಕೊಂಡು ತಾವು ಐಕ್ಯವಾದನಂತರ ಈ ಮಠದ ಪಟ್ಟದವರಿಗೆ ಮಲ್ಲಿಕಾರ್ಜುನದೇವರಿಗೆ ... ಸ್ಟನ ಮಹಂತಿನ... ಪ್ರವಹಿಸ್ಸ ಕಾಗಿರು...

...ಹರಿಂಬ ಗಾವಣಾಶಿತದಿಂದ ಪಟ್ಟಾಭಿಷೇಕಮಹೋತ್ಸವ ವನ್ನು ನೆರವೇರಿಸಬೇಕೆಂ" ಎಂದು ಹೇಳಿ ಪಟಪತ್ರಿಗೆಯು ಕೊಂಡಿದ್ದರು. ಮಾರ್ಗಶಿರ ಶು॥ ೪ ಯಲ್ಲಿ ಶಿವಲಿಂಗೇಶ್ವರಾ ಸ್ವಾಮಿಗಳವರ ಗುರುಪ್ರಸ್ತಾವಾಯಿತು. ಈ ವೇಳೆಗೆ ಇ ಗೆ ಬಿಜಯಂಗೈಸಿದ ಶ್ರೀಮತ್ಸಹಾಪಟ್ಟಾಧ್ಯಕ್ಷರುಗಳೆಂ ಟ್ಟಿಹಳ್ಳಿ ಕಲ್ಲಿನ ಕಂತೆಮಠದ ಸಿದ್ಧಲಿಂಗದೇಶಿಕೇಂದ್ರ ಸ್ವಾಮಿಗಳವರು, ತೊಗರಿಸಿ ಪಂಚಪಣ್ಣಿಗೆ ಮಠದ ಚೆನ್ನ ಶರದೇಶಿಕೇಂದ್ರ ಸ್ವಾಮಿಗಳು, ... ನ್ಯಾಪುರ ಹಿ ರೇಮಠದ ಪಟ್ಟದಸ್ವಾಮಿಗಳವರು, ಸೊರಬ ತಾ॥ ಶಾಸ್ತ್ರ ... ಮಠದ ಗುರುಬಸವರಾಜದೇಶಿಕೇಂದ್ರ ಮಹಾಸ್ವಾ ಮಿಗಳವರು- ಇವರುಗಳು ಪ್ರಮಾದೀಚ ಸಂವತ್ಸ ... ಮಾ ರ್ಗಶಿರ ಶು॥ ೧೧ ರಲ್ಲು ಪಟ್ಟಾಭಿಷೇಕವನ್ನು ನೆರವೇ ... ಕೆಂದು ನಿಶ್ಚಯಿಸಿದರು. ತತ್‍ಕ್ಷಣವೇ ಪಬಂಧನ ಕಾರ್ಯ ಗಳನ್ನು ಅತಿ ತ್ವರಿತವಾಗಿ ನಡೆದು, ನಿಯಮಿತ ... ... ರ್ತದಲ್ಲಿ ವಿಧ್ಯುಕ್ತವಾಗಿ ಪಟ್ಟಾಭಿಷೇಕವು ಸದರಿ ಮಠ ಕ್ಕೆ ನೆರವೇರಿಸಲ್ಪಟ್ಟಿತು. ಈ ಶುಭಮುಹೂರ್ತಕ್ಕೆ ಅ ನೇಕ ಭಕ್ತಮಾಹೇಶ್ವರರು ಕೂಡಿದ್ದರು. ಮಾರನೆಯ ದಿವ ಸ ಪ್ರಾತಃಕಾಲ ೭ ಗಂಟೆಯಿಂದ ೧೧ ಗಂಟೆಯ ವರೆಗೂ ಉತ್ಸವ ... ಹೇಲಿ ಭೋಜನವಾಯಿತು ... ಸಭೆಯು ಸೇರಿ, ಶಿವಲಿಂಗೇಶ್ವರರಾದ ಮಹಾಂತ ದೇಶಿಕೇಂದ್ರ ಮಹಾಸ್ವಾಮಿಗಳವರ ಗುಣಕಥನವೂ ಮುಂ ... ...

ಅಹಾ! ... ಶಿವಲಿಂಗೇಶ್ವರರಾದ ಸ್ವಾಮಿ ಗ ... ಕರ್ತವ್ಯ, ವೈರಾಗ್ಯ ... ಮುಂತಾದುವನ್ನು ... ... ಇದ್ದವರಿಗೆ ಈಗ ಬಹಳ ವ್ಯಸನ ... ಆದಾಗ್ಯೂ ಈ ಸ್ವಾಮಿ ಇದ್ದಂತಾ ... ಸದರಿ ಸ್ವಾಮಿಗಳವರ ಪದವನ್ನೇರಿದ ಈಗಿನ ಮಹಾಂತಸ್ವಾಮಿಗಳವರಿಗೆ ಅವರಿಗಿಂತಲೂ ಹೆಚ್ಚು ಗುಣಾತಿಶಯಂಗಳನ್ನು ಈಶನು ಕೊಟ್ಟು ಕಾಪಾಡಿ ವೀ ರಶೈವಮತವನ್ನು ಅಭಿವೃದ್ಧಿಗೆ ತರಲಿ ಎಂಬದಾಗಿ ನಿರಂ ತರದಲ್ಲಿಯೂ ಪ್ರಾರ್ಥಿಸುತ್ತಿರುವ ಪಾದಧ್ಯಾನಮಾಡುವ,

ಕಿ ... ವೀರಶೈವ ಮತಾಭಿಮಾನಿ

... ಲಗಟ್ಟಿಯಲ್ಲಿದ್ದ ಸಭೆ

ನೈಜಾಂ ಇಲಾಖೆ ರಾಯಚೂರ ಜಿಲ್ಲಾ ಸಂಸ್ಥಾನ ಗ ಬಗಟ್ಟಿಯಲ್ಲಿ ಶ್ರೀಮನ್ಮಹಾರಾಜ ರಾ॥ ವೆಂಕಟರಾವ ದೇಶಾಯರ ನಡೆಯಿಂದ ಸ್ಥಾಪಿಸಲ್ಪಟ್ಟ ಶ್ರೀ ಅನಾದೇಶ್ವ ರಾನುವಾದಿಕ ಸಂಸ್ಕೃತ ವೀರಶೈವ ಪಾಠಶಾಲಾಭಿವೃದ್ಧಿ ಗೆ ವೀರಶೈವ ಮತೋದ್ಧಾರಕರೆಂದು ಈ ೨ ರ ವತಿಯಿಂ ... ರವರ ರಾಜಧಾನಿಯಲ್ಲಿ ತಾ॥ ... ... ದ ದಿವಸ ವೀರಶೈವಮಂಡಳಿಯು ಸಭೆಗೂಡಿತ್ತು. ... ಯಲ್ಲಿ ... ರವರ ... ... ದವರೆಂಬ ... ... ಶಿವಲಿಂಗಸ್ವಾಮಿ ದೇಶಿಕೇಂದ್ರ ಇವರು ಸ ಭ್ಯಾಧ್ಯಕ್ಷತೆಯನ್ನು ವಹಿಸಿದರು. ಹಾಗೂ ಪಾಠಶಾಲಾ ... ಗಳು ... ... ಪರಮೇಶ್ವರ ಪ್ರಾ ... ನವಾದ ಗಾನವನ್ನು ಮಾಡಿದರು. ನಂತರ ನೆರೆ ... ಸಮ್ಮುಖದಲ್ಲಿ ಅಧ್ಯಕ್ಷರು ಸರಸವಚನಗಳಿಂದ ... ವಿಷಯಕವಾಗಿ ಭಾಷಣಮಾಡಿ ... ಅ ... ... ಕುವೆಂಪು ... ...

... ... ಮತ್ತು ಇಲ್ಲಿಯ ಪಾಠಶಾಲಾಧ್ಯಾಪಕರಾದ ... ... ಲಿಂಗದೂಗೂರು ಇವರು ಗುರುಭಕ್ತಿ ... ... ನರ್ವಜನಾಂಗಕ್ಕೆ ... ... ಮತ್ತು ... ... ಭಾಷಣಮಾಡಿ, ... ಭಾಷಣಮಾಡಿದರು. ಅನಂತರ ...

... ಬಸ್ಸಿಕೋಡ ... ... ಲಗಟ್ಟಿ,
... ...
... ...

... ... ಅನಂತರ ... ಬಿ ವೆಂಕಟರಾವ ... ... ಶ್ರೀ ಶಂಕರರಂ ಸ್ತುತಿಸಿ, ... ರು ನಂತರ ಗಂಧಪುಷ್ಪ ತಾಂಬೂಲಾದಿ ವಿನಿಯೋಗಗಳಿಂ ದಲೂ, ವಿದ್ಯಾರ್ಥಿಗಳ ... ... ದಿಂದಲೂ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ... ...

ಹೊಸ ಶೋಧ
ಜಗದ್ಗುರು ಫೋಟೋ ಕ್ಯಾಲೆಂಡರ್.

ಶ್ರೀ ಜಗದ್ಗುರು ... ... ರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ಇದಕ್ಕ ... ...

ಈ ನವ್ಯ ಹೊಸಕಲ್ಪನೆಗಾ ಕ್ಯಾಲೆಂಡರು ಅಪೂರ್ವ ಮತ್ತು ಸುಂದರವಾಗಿದ್ದು, ನಿತ್ಯದಲ್ಲಿ ತಿಥಿ-ವಾರ-ಮಾಸ, ತಾರೀಖು ತಿಳಿಯುವುದು ಮತ್ತು ಇತರ ಕ್ಯಾಲೆಂಡರಂತೆ ವರ್ಷದನಂತರ ನಿರುಪಯೋಗಿ ಆಗಲಾರದು. ಕಾರಣ, ಇದನ್ನು ನೋಡಿದ ಪ್ರತಿಯೊಬ್ಬರೂ ತಮ್ಮತಮ್ಮ ಮನೆಯ ಲ್ಲಿ ಮಾಡಿಸದೇ ಇರಲಾರರು.

ಕಲ್ಲಿನ ಮೇಲ ಫೋಟೊ.

ಎಂದಿಗೂ ಕೆಡದ ಛಾಯಾದೀಪ ಸುಂದರ ಕಲ್ಲಿನಮೇಲೆ ಶ್ರೀ ಜಗದ್ಗುರು-ಶ್ರೀ ಅಥಣಿ ಶಿವಯೋಗಿ-ಶ್ರೀ ಹಾನಗಲ್ಲಸ್ವಾ ಮಿ-ಯಿಂತಹ ... ... ಕೊಡುತ್ತೇವೆ. ಕ್ರಯ ಕ್ಯಾಬಿನೇಟ್ ಸೈಜ್ ೨ ರೂ., ಸ್ಟಾಂ ಪ ಫೋಟೋ ಬೇಕಾದವರು ಫೋಟೋ ಕಳುಹಿಸಿದರೆ ಕ್ರ ಯ ೪ ರೂ.

ಫ್ರೋಟೋ — ಶ್ರೀ ಜಗದ್ಗುರುಗಳ ಸೊಲ್ಲಾಪುರದ ಪಂ ಚಕಲಶಮುಕ್ತ ಬಿನ್ನವಾಲಕಿಯುತ್ಸವದ ಫೋಟೋ ೧ ರೂ., ಶ್ರೀಗಳ ಕೊಲ್ಲಾಪುರ ಸಂಸ್ಥಾನದಲ್ಲ ವ್ಯಾಘ್ರರಥೋ ಳ ಸಹಿತ ಆದ ... ... ಫೋಟೋ ೧ ರೂ., ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಶ್ರೀಗಳ ಫೋ ಟೋ ೮ ರೂ. ಶ್ರೀ ಕಲ್ಯಾಣದ ಬಸವೇಶ್ವರರ ... ಫೋ ಟೋ (ಇದು ವೀರಶೈವರ ಮುದ್ರೆಯಿಂದ ಸಿಕ್ಕಿರುತ್ತವೆ) ಕ್ರಯ ಫುಲ್ ಸೈಜ್ ೧ ರೂ., ಬಿಟೀಸ್ ಚಿಕ್ಕಡಿದ್ದು ೧॥ ರೂ., ಕ್ಯಾಬಿನೇಟ್ ಸೈಜ್ ೪ ಆ., ಬಣ್ಣದ್ದು ೧೨ ಆಣೆ ಶ್ರೀ ಶಿವಯೋಗಮಂದಿರದಲ್ಲ ಯೋಗಾಭ್ಯಾಸಮಾಡುತ್ತಿರು ವ ಶಿವಯೋಗಿಗಳ ಗ್ರೂಪ್ ಕ್ರಯ ೧ ರೂ., ಕ್ಯಾಬಿನೇಟ್ ೪ ಆ., ಇತರಯೋಗ ... ಶ್ರೀ ಸೊಲ್ಲಾಪುರ ಸಿದ್ಧರಾಮೇ ಶ್ವರ, ಶ್ರೀ ಹಂಪೆ ವಿರೂಪಾಕ್ಷೇಶ್ವರ, ಶ್ರೀ ಕೆಂಪಿನಮಠಾಧಿ, ಶ್ರೀ ಭ್ರಮರಾಂಬಿಕಾದೇವಿ ಮೊದಲಾದ ಫೋಟೋಗಳು ಸಿ ಗುತ್ತವೆ.

ಸೂಚನೆ — ಶ್ರೀ ಜಗದ್ಗುರು, ಶ್ರೀ ಅಥಣಿ ಶಿವಯೋಗಿ ಈ ಪ್ರಕಾರ ... ... ಯೋಗಿಗಳ ಫೋಟೋಗಳನ್ನು ... ... ಇರುವವು.

ಫ್ರೋಟೋ ಪೇಪ — ... ...

ಊರೂರಿಗೆ ಏಜೆಂಟರು ಬೇಕಾಗಿರುತ್ತಾರೆ. ಅರ್ಜಿಗೆ ...

ಮ್ಯಾನೇಜರ್ ಕಳುಹಿ ... ರಜಕೂಸ್ವಾಮಿ ...

ಆಶ್ಚರ್ಯವಾದುದು! ಅಸಮಾನವಾದುದು!!

37 ಆರೋಗ್ಯದಾಯಕ ಮಹಿಮಾ !!!

ಟಿ. ಸಿ. ಎನ್.
ಪರಿಮಳದ ನಶ್ಯ.

ಜಗತ್ಪ್ರಸಿದ್ಧವಾದ ... ... ಎಂಬ ... ... ಅನೇಕ ... ... ಕೊಟ್ಟಿರುವರು. ಇದರ ಸೇವನೆಯಿಂದ ತಲೆನೋವು, ಅರತ



ಲೆನೋವು, ತಲೆನೋವು, ನೆಗಡಿ ... ... ಮೊದಲಾದ ಸಕಲ ವ್ಯಾಧಿಗಳ ನ್ನು ನಾಶಪಡಿಸಿ, ಸ್ಮರಣಶಕ್ತಿ ಯೂ, ... ಶಕ್ತಿಯೂ, ... ಒಂದು ಸೇರು ಇತರ ನಶ್ಯಕ್ಕೆ ಇದರ ಒಂದು ಚಿಮಟಿ ನಶ್ಯ ಸೇರಿಸಿದಲ್ಲಿ ಅತಿ ಪರಿಮಳಭರಿತವಾಗುವು ದು. ಅನೇಕ ವ್ಯಾಧಿಗಳನ್ನು ಧ್ವಂಸಮಾಡುವ ಅಪೋಘ ... ... ಮತ್ತು ಬಹು ಸುಲಭಬೆಲೆಯ ಈ ಔಷಧ ರೂಪಾಂತರದ ನಶ್ಯವು ಇರುವರೆಗೆ ಬೇರೆ ... ... ಹೊರಹೊರಡಿ ಇತರ ... ... ಹುದು.

ಕ್ರಯ ... ೧ ಕ್ಕೆ ೪ ... ವಿ ಪಿ ಚಾರ್ಜು ೩ ಆಣೆ.
,, ದರ್ಜನ ೧ ಕ್ಕೆ ... ರೂ ವಿ ಪಿ ಚಾ. ೩ ಆಣೆ
... ... ೧ ಕ್ಕೆ ೧ ಆಣೆ. ... ೧ ಕ್ಕೆ ... ಆಣೆ
ವಿ ಪಿ ಚಾರ್ಜು ೪ ಆಣೆ

ರಿಯಲ್ ಗಾರ್ಡ್ ಕೈವಳೀವರ್
ಜಾಮೆಲ್ಡ್ ವಾಚ್.



ಇದು ಎಂದೂ ಕೆಟ್ಟುಹೋಗದ ಥ ... ... ನಿಕ್ಕಲ್ ಬೆಳ್ಳಿ ಯಿಂದ ತಯಾರಿಸಿ, ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು, ... ಭಾಗದಲ್ಲಿ ... ... ಅಂಥ ಪ್ರಕಟನೆಗಳಿಗೆ ಮೋಸಹೋಗಬೇಡಿರಿ. ನ ಮ್ಮಲ್ಲಿ ತರಿಸಿಕೊಂಡರೆ ... ... ಸಂತೋಷಕ ರವಾಗಿಯೂ ಇರುತ್ತ ದೆ.

ವಿಳಾಸ:- ... ... ಕೆ. ಪಿ.
... ...
... ...

ಸಮಸ್ತ ಸ್ತೀರಸ್ಯೆವೆಭಾಂಧವರಿಗೆ ವಿಧಿತಪಡಿಸುವುದೇನೆಂದರೆ— ಕಳೆದವರ್ಷ ನಿಟ್ಟಾಣಿಯಲ್ಲಿ ಕೂಡಿದ್ದ ೭ ನೆಯ ವೀರಶೈವಮಹಾಸಭೆಯ ರಿಪೋರ್ಟ್ ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವವು ಈ ಸಾರೆಯು ಬುಕ್ಕುಗಳು ಒಳ್ಳೆಯ ಅಕೃತಿಯುಳ್ಳವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳೆಂತಿರುವ ಪ್ರತಿಜ್ಞ ಮುಖಂಡರ ಛಾಯಾಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು. ವೇಳಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ಸೂಗು ಇರುವುದರಿಂದ ಹಿಂಧಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟಪಟ್ಟವರು ಮುಂಚೆ ಸಾಗಿಯೇ ಸ್ವಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರ್ಗಿಮಠ,
ಬೇರ್ಗ್ಸ, ಸ್ವಾಗತಕಮಿಟಿ,
೭ ನೆಯ ಮಹಾಸಭೆ ನಿಟ್ಟಾಣಿ.

ಪರಿಮಳದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೨ ಆಣೆಯಿಂದ ೧೦ ರೂ ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಿಗೆ-ರೋಜಾ ಮೊದಲಾದ ಅತ್ತರುಗಳೂ ಪಾಮ್ಯೂ ಭೃಂಗಾಮಲಕತೈಲ ಮೊದಲಾದವುಗಳೂ ಬಿಕರಿಗೆ ಸಿದ್ಧವಾಗಿರುವುವು ಅಪೇಕ್ಷಕರು ೫ ರೂ. ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು. 20

ವಿಳಾಸ— ಎಸ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿಕ
171 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ —ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೩೬ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲೆಗೊಳ್ಳುವುದು. ಇದು ಅಮೃತಕ್ಕೆ ಸಮಾನ, ೪೮ ಮಾತ್ರೆ ಸೀಸೆ ೧—೦— ೦

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ ಸುಮಾರು ೩೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ವಜ್ರಕಪೂರ್ರಮಾತ್ರೆ.— ಇದರಿಂದ ಗರ್ಭ ಬೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ — ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ —ಮೇಹಜಾಡ್ಯಗಳಲ್ಲಿ ಬಹುಳ ಖ್ಯಾತಿಯಾದ ಔಷಧಿ ಸೇರಿನ ಡಬಿ ೪ ೦ ೦ ೧೬ ದಿನಗಳ ಔಷಧ ೭— ೦—೦

ಸುಖಭೇದಿ ಮಾತ್ರೆ.—೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೨೮ ಮಾತ್ರೆ ಸೀಸೆ ೧ ೪ – ೧

ಮಲಶೋಧಕ ವಟಿಕಾ —ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಪಳುವಾಗ್ಗೆ ... ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.—ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦ ಮಾತ್ರೆ ಸೀಸೆ. ೦—೪—೦

ಪುರಂಡ ಸಂಜೀವಿನಿ.— ೩೦ ಮಾತ್ರೆ ಸೀಸೆ ೭—೦—೦

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦

ಅಜೀರ್ಣಮಾತ್ರೆ.— ೫೦ ಮಾತ್ರೆ ಸೀಸೆ ೧—೧೬—೦

ದಂತಶುದ್ಧಿ ಚೂರ್ಣ.—ಡಬ್ಬಿ ೧ಕ್ಕೆ ೦—೩—೦

ನಮ್ಮಲ್ಲಿ ಈ ನೊಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸಲವತ್ತಿಯಾಕ್ಕೆ ದೊರಕುವುವು. ವಿಪಾಲು ಖರ್ಚು ಅವರೇ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಸಚಿತ್ರ ಶುಕಸಪ್ತತಿ ಕಥೆಗಳು | ಸಚಿತ್ರ ಭಟ್ಟಿವಿಕ್ರಮಾದಿತ್ಯರಾಯನ ಚರಿತ್ರೆ

8 ರೂ. ೧—೮—೦ (೪೧೨ ಪುಟ) ವಿಪಾಲು ಚಾರ್ಜು ೪ ಆಣೆ. | ರೂ ೧—೮—೦. (೪೭೩ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ ! ನೀವು ಕ್ರಿತನೂ ಬೇಕಾದರೆ, ವಾಕ್ಚಾತುರಿಯೂ ಹೆಚ್ಚಬೇಕಿದ್ದರೆ, ಲೋಕರೀತಿಯನ್ನು ತಿಳಿಯಬೇಕೆನ್ನುವುದಾದರೆ, ನೀತಿಯೂ ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳವರಾಗಬೇಕಾದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೬೨ ಕಥೆಗಳುಳ್ಳ ಸಾಗರದಂತಿರುವ ಸ್ವಂದಿನ ಪುಸ್ತಕವಾಗಿದೆ. ಬೆಲೆ ರೂ ೧—೪—೦ ಒಪಾಲ್ ಚಾರ್ಜು ೩ ಆಣೆ. ಟೀಗಲ್ ಬರಿ ರಾಜ ಪತ್ನಿ ಇತ್ಯಾದಿ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ

ವಿಳಾಸ— ಎಂ ಆರ್ ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

೧೯೦೫ನೇ ಇಸವಿಯ ಪಾಕೆಟ್ ಡೈರಿ



ಎ. ಬಿ. ಸಿ. ಡಿ. ಜೆ. ನಂ॥ ೧. ಜೆ. ನಂ॥ ೨.

ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ನುಣುಪಾದ ಬಿಳಿಕಾಗದದಲ್ಲಿ ಮುದ್ರಿಸಿ, ಪ್ರತಿಪುಟಕ್ಕೂ ರೂಲು ಹಾಕಿ ಬಹಳ ನೋಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ ಬೈಂಡು ಮಾಡಿ ಮೇಲುಗಡೆಯಲ್ಲಿ ಹೊಳೆಯುವ ಅಕ್ಷರಗಳನ್ನು ಒಡಿಸಿದೆ. ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟುದಾರರು, ಸರ್ಕಾರಿಉದ್ಯೋಗಸ್ಥರು, ಮೊದಲಾದ ಸಮಸ್ತಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಎ. ನಂ॥ ಪೆನ್ಸಿಲ್ ಇರತಕ್ಕ ಚಿಕ್ಕ ಡೈರಿ ೧ ಕ್ಕೆ ೩. ಆಣೆ } { ಸಿ. ನಂ॥ ಪೆನ್ಸಿಲ್ ಇರತಕ್ಕ ದೊಡ್ಡಡೈರಿ ೧ ಕ್ಕೆ ೩ ಆಣೆ.
ಬಿ. „ ಪೆನ್ಸಿಲ್‌ಇಟ್ಟಿರುವ ಚಿಕ್ಕಪಾಕೆಟ್‌ಡೈರಿ ೧ಕ್ಕೆ ೫ ಆ } { ಡಿ „ ಪೆನ್ಸಿಲ್‌ಇಟ್ಟಿರುವ ದೊಡ್ಡಪಾಕೆಟ್ ೧ಕ್ಕೆ ೮ ಆಣೆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರು " ಜನಿವಾ " ಡೈರಿ.

ಈ ಡೈರಿಯು ಮೇಲಿನ ಡೈರಿಗಳಿಗಿಂತ ಉತ್ತಮ ; ದಪ್ಪಕಾಗದ ; ಚರ್ಮ ಬೈಂಡು.

" ಜನಿವಾ " ನಂ॥ ೧. ಚಿಕ್ಕ ಡೈರಿ ೧ ಕ್ಕೆ ೪ ಆಣೆ. | " ಜನಿವಾ " ನಂ॥ ೨. ಚಿಕ್ಕ ಪಾಕೆಟ್ ಡೈರಿ ೧ ಕ್ಕೆ ೬ ಆಣೆ.

೧೨ ಪ್ರತಿಗಳು ಒಟ್ಟಾಗಿ ತರಿಸಿಕೊಂಡರೆ ೧ ಪ್ರತಿಯು ಉಚಿತವಾಗಿ ಕೊಡಲ್ಪಡುವುದು.

23 ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಸಬ್ಲಿಷರ್, ಬೆಂಗಳೂರು ಸಿಟಿ

ಆಯುರ್ವೇದ ಪಂಚಾನನ ಪಂಡಿತರ ಸಿದ್ಧೌಷಧಗಳು 35

ಲೋಕಾಮೋದಕರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತುಬೀಳುವಿಕೆ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಪಕ್ಕನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಮಾಂಸಖಂಡಗಳನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಂಜುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೩ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ.)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಕಾಲುಗಳಿಗೆ ಬರುವ ಸೆಳೆತ, ಮತ್ತು ಆಯಾಸಗಳಿಂದ ಜೀವಕ್ಕೇ ಭಯವಾಗುವುದರಿಂದ ಬೇಗನೆ ಗುಣಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ; ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ತೋರುತ್ತದೆ, ಸಮಯದಲ್ಲಿ ಡಾಕ್ಟರ್ ಬೇಡದೆ, ಪೂರ್ವಪುಣ್ಯದಿಂದ ಸಿಕ್ಕುವ ನಿಧಿಯಂತಿದೆ. ಮನೆಯೊಂದು ಸಹಾಯವು ಬಹಳ ಅವಶ್ಯಕವಾದ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಔಷಧವಿದೆ.

ಅನುಪಾನಪತ್ರಿಕೆ ಔಷಧದೊಡನೆ ಇರುವುದು ... ೧—೫—೦

ವಿಪಾಲ್

ವಿಳಾಸ

ನಾಳೆ ನೆಯ ಇಸವಿ ಜನವರಿ ತಾ॥ ೫ ರಿಂದ ೧೧ನೇ ತಾರೀಖು ಜನವರಿ ತಾ॥ ೧೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೨೬ನೆಯ ಕ್ರೋಧಿ ಸಂ॥ ರ ಪುಷ್ಯ ಶು॥ ನವಮಿಯಿಂದ ಪುಷ್ಯ ಶು॥ ಚತುರ್ದಶಿವರೆಗಿನ ಪಂಚಾಂಗ

ತಾ॥	ವಾರ	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ	ತೇದಿ ದಿನ
5	[1] ಸೋಮ	ನ	60	ರೇವತಿ	1.0	22
6	[2] ಮಂಗ	ನ	22-22	ಅಶ್ವಿನಿ	17-7	23
7	[3] ಬುಧ	ದ	6 49	ಭರಣಿ	22 32	24
8	[4] ಗುರು	ಏ	10-11	ಕೃತ್ತಿಕೆ	26 53	25
9	[5] ಶುಕ್ರ	ದ್ವಾ	12-22	ರೋಹಿ	30 7	26
10	[6] ಶನಿ	ತ್ರ	13-16	ಮೃಗಶಿರ	32-1	27
11	[7] ಭಾ	ಚ	12-57	ಆರ್ದ್ರಾ	32-1	28

(1) ತ್ರಿವ್ಯಷ್ಟಿ. ಸೂರ್ಯೋದಯ ಗಂ. ೬-೪೯. (2) ಅಮೃತಸಿದ್ಧಿಯೋಗ, ಸೂ ಅ ೬-೪೯. (3) ದಶಮಿಪಾಣಿ, ಸ ಅ ೩-೦. (4) ಸರ್ವತ್ರೈಕಾದಶಿ, ಶ್ರೀರಂಗದಲ್ಲಿ ವೈಕುಂಠೋತ್ಸವಾರಂಭ, ತ್ರೈಲೋಕ್ಯಗೌರೀವ್ರತಂ. (5) ದ್ವಾದಶಿ, ಮುಕ್ಕೋಟಿದ್ವಾದಶಿ, ಕೂರ್ಮದ್ವಾದಶಿ. (6) ಅಂಧಕಾಸುರಸಂಹಾರ, ಕಾಕಂಬುರೀವ್ರತಂ, (7). ಶ್ರೀಗೌರೀ ಖಂಡಿಂಗಾತ್ಸವೆ, ಅರಿಷ್ಟೋತ್ಸವ, ಬನಶಂಕರೀ ವ್ರತಂ.

ರಾ॥ ವೈ. ಪಿಚ್ಚೋಬಾಚಾರ್ಯ

REGISTERED M NO 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦ } [illegible] } ಅಂಚೆವೆಚ್ಚ ಸೇರಿ ೧—೨—೦

REGISTERED M NO 124

ಸಂಪುಟ ೨೨) ಮೈಸೂರ್ ಸ್ಟಾರ್ ಸರ್ ೧೯೦೮ ನೇ ಇಸವಿ ಜನವರಿ ತಾರೀಖು ೧೩ ನೇ ಸೋಮವಾರ. (ಸಂಚಿಕೆ ೨

ದಿ ಜನರಲ್ ಏಜನ್ಸಿ, ಮೈಸೂರು.

19 ಇವರಲ್ಲಿ ದೊರೆಯುವ ಪುಸ್ತಕಗಳು.

ಅತ್ತಿಗೆ	(ಬಿ. ವೆಂಕಟಾಚಾರ್ಯರಿಂದ)	೦— ೩—೧
ಶಾಂತಿ	,,	೦— ೪—೦
ಕೊಹಿನೂರು	,,	೦—೧೨—೦
ಚಂದಮಹಲ	,,	೧ ೦—೦
ಮಾಧವೀಲತಾ	,,	೧— ೦—೮
ಕಳಾವತಿ (ಮ। ಎಮ್ ಶ್ರೀಕಂಠ ಶಾಸ್ತ್ರಿಗಳು)		೧— ೨—೧
ಮಾಲತೀಮಧುಕರ	,,	೧— ೨—೦
ಅನಂಗಸುಂದರಿ	,,	೧ ೪ ೦
ನಿರುಪಮಾ	,,	೦—೧೨—೦
ಚಂಡಮಾರುತ (ಮ।ಬಿ. ಸುಬ್ಬರಾವ್, ಬಿ ಎ.,)		೦— ೨—೧

ರಾವರಿಂದ

17

ದೊಡ್ಡ ಕಂಪನಿ! ಜೋಗಸಾದ ಪದಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ಶೀರೆ, ಜರೀಸೀರೆ, ಶಾಲು, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಸಕ, ಜಗನ್ನಾಥಜಾಳಿಗೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಪದಾರ್ಥಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪನಿ, ಬನಾರಸ್ ಸಿಟಿ. (ಕಾಶಿ)

ಓದಿನೋಡಿರಿ! ಓದಿನೋಡಿರಿ!!

೧೨ ತಿಂಗಳ ಭವಿಷ್ಯತ್ಫಲ.

ಆಯ್ಯಾ ಲೋಕಾಭಿಮಾನಿಗಳೇ! ಪ್ರತಿಯೊಂದು ತಿಂಗಳ ಬರುಗುವ ಭವಿಷ್ಯತ್ಫಲವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರು ತಮ್ಮ ಜನ್ಮನಕ್ಷತ್ರ ಹೆಸರನ್ನು ಬರೆದು ಕಳುಹಿಸಿದರೆ ನಾವು ತಮ್ಮ ಪತ್ರ ಬಂದ ಟಪಾಲಿಂದ ಮುಂದಿನ ವರ್ಷದವರೆಗೂ ಪ್ರತಿತಿಂಗಳಲ್ಲಿಯೂ ಉಂಟಾಗುವ ಲಾಭ-ನಷ್ಟ-ದುಃಖ-ಕಷ್ಟ-ವಿವಾಹ-ಸಂತಾನ- ಗ್ರಹಚಾರದ ಪರಿಹಾರವಾಗುವುದಕ್ಕೆ ಮಾಡುವ ಶಾಂತಿಗಳು ಮುಂತಾದ ಸಕಲ ಫಲಗಳನ್ನೂ [illegible] ಕಳುಹಿಸುವೆವು. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತಮ್ಮ ಅಡ್ರೆಸ್ಸನ್ನು ತಿಳಿಸಿರಿ. ಟಪಾಲ್ ಖರ್ಚು [illegible]. ೧೨ ತಿಂಗಳ ಭವಿಷ್ಯತ್ಫಲ ಕಿಮ್ಮತ್ತು ರೂ. ೧—೦—೦ [illegible] ಪೋಸ್ಟೇಜ್ [illegible].

ಎಸ್. ಎಂ.

ವೀರಶೈವ ಪಾಕ್ಷಿಕ ಪತ್ರಿಕೆ.

15

೧ ನೇಯ ಭಾಗ, ಡೆಮ್ಮಿ ೫೬ ಪುಟ, ವಿ ಪಿ. ಮೂ. ೦ ೩—೦

೨ ನೇಯ ಭಾಗ, ಡೆಮ್ಮಿ ೧೬೮ ಪುಟ, ವಿ. ಪಿ. ಮೂ. ೦—೬—೦

[ಸ್ತ್ರೀಪುರುಷರಿಗೂ ಶಿವಶರಣರಿಗೂ ಉಪಯೋಗ]

ವಿಳಾಸ :— ಜೇರಿಗೆ ಬಸವಲಿಂಗಪ್ಪ, ಅರಳೇಪೇಟೆ, ಬೆಂಗಳೂರು ಸಿಟಿ.

ಊದಿನ ಕಡ್ಡಿಗಳು

42

ವಿಧವಿಧವಾದ ಊದಿನಕಡ್ಡಿಗಳು [illegible] ೧ ಕ್ಕೆ ೧೨ ೬—೦—೦; ೩—೦—೦; ೨—೪ ೦, ೧ ೮—೦; ಕಸ್ತೂರಿ ಪಿಲ್ಲೆ ತೊಲಾ ೧ ಕ್ಕೆ ೧—೦—೦; ಪುನುಗಿನ ತೊಲಾ ೧ ಕ್ಕೆ ೧೨ ಆಣೆ; ದಶಾಂಗಪೊಟ್ಟಣ ೧ ಕ್ಕೆ ೮ ಆಣೆ; ಧೂಪದಗಟ್ಟಿ ೧ ಕ್ಕೆ ೨ ಆಣೆ; ಬಾಲಗಂಧದೂಪ ಟಿನ್ ೧ ಕ್ಕೆ ೪ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ. ಎಲ್. ಉಪಾಧ್ಯಾಯ, ಗುಂಡಿಜಾರಿ, ಮೈಸೂರು

ನ್ಯಾಯದರ್ಪಣ. 25

ಹೊಸಪುಸ್ತಕ.

ಮನುಷ್ಯವರ್ಗದ ಪ್ರತಿಯೊಬ್ಬರೂ ಅವಶ್ಯಕವಾಗಿ ತಿಳಿದುಕೊಳ್ಳಬೇಕಾದ ಸಿವಿಲ್ ಕ್ರಿಮಿನಲ್ ಮತ್ತು ಇತರ ಸಕಲ ವಿಷಯಕವಾದ ಸಮಸ್ತ ವ್ಯವಹಾರ ಧರ್ಮಗಳೂ ಇದರಲ್ಲಿರುತ್ತವೆ.

ಬೆಲೆ ರೂ 1—0—0 ವಿ ಪಿ. ಮೂಲ್ಯ 1—4 0

ಎಂ. ಎ. ಸುಬಪ್ಪನವರು, ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಭಸ್ಮ ವನಸ್ಪತಿಗಳಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

7

ರಕ್ತಶುದ್ಧಿ ಮತ್ತು ರಕ್ತವೃದ್ಧಿಯ ಮೇಲೆ ಅತಿಉತ್ತಮ ಲೇಹ! (ಗುಣವಾಗದಿದ್ದರೆ ಹಣ ವಾಪಸ !!) ಲೇಹ!!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಿನ ಸ್ತ್ರೀಯರು, ವಾತರೋಗವುಳ್ಳವರು, ರಕ್ತಪಿತ್ತರೋಗವುಳ್ಳವರು, ತೃಷೆಯುಳ್ಳವರು, [illegible]ವರು, ಕೆಮ್ಮಿನವರು, ಕಫವುಂಟಾದವರು, ಮೂಲವ್ಯಾಧಿಯವರು, ಪಾಂಡುರೋಗದವರು, ಮೇಹರೋಗದವರು, [illegible] ಮುಂತಾದವರು [illegible] ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ವಾಸಿಯಾಗುವುದು. ಇದು ಗುಣವಾಗಿ ಜನನೇಂದ್ರಿಯ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಸ್ಖಲನ ಮುಂತಾದವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, [illegible], [illegible], ಗರ್ಭದ್ರವ್ಯವೇ ಇದ ಮೇಲೆ ಹೆಚ್ಚಿಗುವ ಎಲ್ಲಾ ತರಹ ಬಾಧೆಗಳು, ಮುಖ್ಯ ರೋಗಗಳು, ಪಿತ್ತದ ಬಾಧೆಗಳು, [illegible], [illegible] ಮುಂತಾದವು ಅತಿ ತ್ವರಿತವಾಗಿ ಗುಣವಾಗುವುದು. [illegible] ಶಾಂತಿಯೂ ರತಿಸುಖವೂ ಹೆಚ್ಚುವುದು. [illegible] ಪಟ್ಟ ಮನುಷ್ಯನಿಗೆ [illegible] [illegible] [illegible] ಬೆಲೆ [illegible] ಬೆಂಗಳೂರಿನಲ್ಲಿ [illegible]

ವಿಳಾಸ —ವೈದ್ಯ, ಶಿ [illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಸಟೀಕ ಶತಕತ್ರಯ	೧—೦—೮
ವರವಾದಿಗಳಬಾಂಕೆಬಸವಾರಾವಳಿ	೦—೪—೦
ಶಿವಪೂಜಾವಿಧಿ	೦—೪—೦
ಚಾಮರಸನ ಚರಿತ್ರೆ	೦—೫—೦
ಸಟೀಕ ಗಂಗಾವೃತ	೦— ೮—೦
ಸಟೀಕ ವಿವಾಹವಿಧಿ	೧ ೬—೦
[illegible] (೨ನೇಯ ಭಾಗ)	೦—೩—೦
ವ [illegible]ಂಚಕ	೦— ೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶೇಖರದೇಕ್ಷಾಗಶತಕ	೦—೧—೦

ಅಂಚೆಯವೆಚ್ಚ ಬೇರೆ

ಹೊಸಪುಸ್ತಕಗಳು.

119

ಬಸವರಾಜವಿಜಯಂ— ಬೆಲೆ ೧—೮—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಹೊಸಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧—೪—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗಷ್ಟೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶರ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣ-ಸೂಕ್ಷ್ಮ-ಪಂಚಾಕ್ಷರಿ. ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಅತಿ ಸುಲಭವಾಗಿ [illegible] ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ. [illegible] [illegible] [illegible] ಈ ಗ್ರಂಥದಲ್ಲಿ [illegible] ಶಿವಯೋಗಗಳು ಬಹ ಸುಲಭವಾಗಿ [illegible] ವಿವರಿಸಲ್ಪಟ್ಟಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಬಾಲಬೃಹರಿಕೆ [illegible]— ಬೆಲೆ ೧ ೩—೦ [illegible] ಚರಿತ ವರ್ಣನೆ, ಅನೇಕ ಪುರಾಣ ಕಥೆಗಳನ್ನು [illegible]

ವೀರಶೈವ ಧರ್ಮ [illegible] - ಬೆಲೆ ೧—೩—೦ [illegible]

ಪಂಚಾಕ್ಷರೀ - ಬೆಲೆ ೧ ೦ [illegible] ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧—೩—೦. ೨ ನೆ ಪ್ರಕರಣಕ್ಕೆ ೧ ರೂ.

ಕೌಶಂದವಪುರಾಣಂ ೧—೬—೦; ಸಟೀಕ ಷಟ್ಸ್ಥಲ[illegible] ೩ ಆಣೆ, ಸಟೀಕ ಶತಕತ್ರಯ [illegible] ೩ ಆಣೆ; ಬೆಮ್ಮ [illegible] ದೇವರ [illegible] ೩ ಆಣೆ; ಸಟೀಕ [illegible] ೧೨ ಆಣೆ; ಸ್ತುತಿ [illegible] ೩ ಆಣೆ [illegible] ೭ ಆಣೆ; [illegible] ೧ ಆಣೆ

ವೀರಶೈವ ಗ್ರಂಥ [illegible]— [illegible] ಮುಖಪತ್ರಿಕೆ [illegible] ೨—೪—೨.

[illegible] ಮೈಸೂರು.

ಹೊಸಪುಸ್ತಕ.

ಶ್ರೀಮನ್ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರದ ೩ನೆಯ (ಪಾದಪ್ರಕರಣವು) ಭಾಗವಾದ ಸಿದ್ಧವಾಗಿದೆ. ಪಲನಾಡು ಚೋಳನ ಸಭೆಯಲ್ಲಿ ಶ್ರೀಮನ್ಮಲ್ಲಿಕಾರ್ಜುನ ಪಂಡಿತಾರಾಧ್ಯರು ಅನೇಕ ಪರಮತದವರೊಡನೆ ಸಪ್ರಮಾಣವಾಗಿ ವಾದಮಾಡಿ ಜಯಶೀಲರಾದ ವಿಷಯವು ಇದರಲ್ಲಿ ನಿರೂಪಿತವಾಗಿದೆ. ಅನೇಕ ಮತಖಂಡನಗಳು ಸಯುಕ್ತಿಕವಾಗಿವೆ. ತೆಲುಗು ಮೂಲಗ್ರಂಥದ ಕೆಳಗೆ ಅದಕ್ಕೆ ತಕ್ಕ ಕನ್ನಡದ ಅರ್ಥವೂ ರಸವತ್ತಾಗಿ ಬರೆದು ಅಚ್ಚು ಮಾಡಲ್ಪಟ್ಟಿದೆ. ಪ್ರತಿಯೊಬ್ಬ ಶಿವಭಕ್ತರೂ ಪರಿಗ್ರಹಿಸಿಡಲು ಅರ್ಹವಾದುದು. ಉತ್ತಮವಾದ ಕಾಗದ, ಶುದ್ಧವಾದ ಮುದ್ರಣ. ಬೆಲೆ ವಿ.ಪಿ.ಯಿಂದ ೧-೩-೦

ಎಚ್ ಆರ್ ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಳಿ, ಮೈಸೂರು

ಊರಿ ರೇಷ್ಮೆಗೂಡುಗಳು ಮತ್ತು ಅವುಗಳನ್ನು ಸಾಕತಕ್ಕ ವಿಧಾನ

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ [illegible] ರೇಷ್ಮೆ ಕಾರ್ಖಾನೆಯ ಮ್ಯಾನೇಜರವರಾದ ಮಿ॥ ಜಾಕ್ಸನ್‌ರವರು ಊರಿ ರೇಷ್ಮೆಗೂಡುಗಳನ್ನು ಸಾಕತಕ್ಕ ಕ್ರಮವನ್ನು ಕುರಿತು ಬರೆದಿರುವ ಲೇಖನದ ಭಾಷಾಂತರವನ್ನು ಜನಗಳ ತಿಳುವಳಿಕೆಗಾಗಿ ಇಲ್ಲಿ ಪ್ರಕಟಪಡಿಸುತ್ತದೆ.

ಹರಳುಗಿಡ — ಹರಳಿನ ಬೀಜವು ಬಹಳ ಅಗ್ಗವಾಗಿ ಮಾರಲ್ಪಡುತ್ತಿ[illegible] ಎಣ್ಣೆಯನ್ನು ತೆಗೆಯಲು ಹೆಚ್ಚಾಗಿ ಹರಳನ್ನು ಬೆಳೆ[illegible] ಊರಿ ರೇಷ್ಮೆ ಹುಳುಗಳ ಆಹಾರಕ್ಕಾಗಿ ಹೇರಳವಾಗಿ ಬೆಳೆಸುವ [illegible] ಜಾತಿಯ ಹರಳನ್ನು ಆರಿಸಿ ನೆಡಬೇಕು. [illegible] ಜಾತಿಯ ಹರಳೆಲೆಯನ್ನಾದರೂ ಊರಿ ರೇಷ್ಮೆ ಹುಳುಗಳು ತಿನ್ನುವುವು. ಮಿ॥ ಜಾಕ್ಸನ್‌ರವರು ಸದಾ ಕಾಲದಲ್ಲೂ ಸೊಪ್ಪು ಇರತಕ್ಕ ತರಹೆಯ ಹರಳನ್ನು ಬೆಳೆಯುತ್ತಿರುವುದಾಗಿ ತಿಳಿಯಬರುತ್ತದೆ.

ಹರಳನ್ನು ಬಿತ್ತತಕ್ಕ ಕಾಲ — ಸಾಮಾನ್ಯವಾಗಿ ಮಳೆಗಾಲದಲ್ಲಿ ಬಿತ್ತನೆಮಾಡಬೇಕು. ಗಿಡಗಳ ಮತ್ತು ಸಾಲುಗಳ ಮಧ್ಯೆ ನಾಲ್ಕು ಅಡಿ ದೂರವಿರಬೇಕು. ಹರಳುಗಿಡಗಳ ಸುತ್ತಮುತ್ತ ಹುಲ್ಲು ಮತ್ತು ಇತರ ಕಳೆಗಳು ಯಾವುವೂ ಇರದಂತೆ ನೋಡಬೇಕು. ಅವಶ್ಯವಿದ್ದರೆ ಹರಳುಗಿಡಗಳನ್ನು ಕಿತ್ತು ದೂರದೂರವಾಗಿ [illegible]ಬೇಕು. ಗಿಡಗಳು ಎರಡುಮೂರು ಅಡಿ ಎತ್ತರವಾಗಿರುವಾಗ್ಗೆ ತುದಿಯನ್ನು ಜಿಗುಟಿ ಹೆಚ್ಚಾಗಿ ಕವಲೊಡೆಯುವಂತೆ ಮಾಡಬೇಕು. ಬಿತ್ತನೆಯಾದ ಎರಡುಮೂರು ತಿಂಗಳೊಳಗೆ ಎಲೆಗಳು ಕೀಳಲು ಸಿದ್ಧವಾಗಿರುವುವು. ಎಲೆಗಳನ್ನು ಬಹಳ ಎಚ್ಚರಿಕೆಯಿಂದಲೂ ಮತ್ತು ಬುದ್ಧಿವಂತಿಕೆಯಿಂದಲೂ ಕೀಳಬೇಕೇ ಹೊರತು ಗಿಡಗಳು ಬೋಳಾಗುವಂತೆ ಎಲೆಗಳನ್ನು ತರಚಬಾರದು. ಹುಳುಗಳ ವಯಸ್ಸಿಗನುಗುಣವಾಗಿ ಸೊಪ್ಪನ್ನು ಕೀಳಬೇಕು. ಅಂದರೆ ಪ್ರಾರಂಭದಲ್ಲಿ ಎಳೆಯಾದ ಎಲೆಗಳನ್ನೂ ಬರಬರುತ್ತ ಬಲಿತ ಎಲೆಯನ್ನೂ ಕೀಳಬೇಕು.

(ಎ) ಊರಿ ರೇಷ್ಮೆ ಹುಳುಗಳು — ಹಿಪ್ಪಲಿ ನೇರಳೆ ಸೊಪ್ಪನ್ನು ತಿನ್ನತಕ್ಕ ರೇಷ್ಮೆಹುಳುಗಳನ್ನು ಸಾಕುವಂತೆಯೇ ಊರಿ ರೇಷ್ಮೆ ಹುಳುಗಳನ್ನೂ ಸಾಕತಕ್ಕದ್ದು. ಹೊಸದಾಗಿ ಪ್ರಾರಂಭಮಾಡುವವರು ಮೊದಲು ಯಾರಾದರೂ ಸಾಕುತ್ತಿರುವವರಿಂದ ಸುಮಾರು ೨೦೦ ಗೂಡುಗಳನ್ನು ಕೊಂಡುಕೊಂಡು ಕೆಲಸಕ್ಕೆ ಮೊದಲುಮಾಡಬಹುದು. ಗೂಡುಗಳಿಂದ ಚಿಟ್ಟೆಗಳು ಸುಮಾರು ಹತ್ತು ದಿನಗಳಲ್ಲಿ ಹೊರಕ್ಕೆ ಬರುವುವು. ಸುಮಾರು ೮-೧೦ ಗಂಟೆಗಳ ಕಾಲ ಚಿಟ್ಟೆಗಳು ಸೇರಲು ಅವಕಾಶಕೊಟ್ಟನಂತರ ಗಂಡುಚಿಟ್ಟೆಗಳನ್ನು ಬೇರೆ ಮಾಡಬೇಕು. ಆಗ್ಗೆ ಹೆಣ್ಣು ಚಿಟ್ಟೆಗಳು ಮೊಟ್ಟೆಗಳನ್ನಿಡಲು ಆರಂಭಿಸುವುವು. ಹಿಪ್ಪಲಿನೇರಳೆ ಸೊಪ್ಪನ್ನು ತಿನ್ನತಕ್ಕ ರೇಷ್ಮೆಹುಳುಗಳಿಗೆ ಹಿಡಿಸುವ ಹಾಗೆ ಇವುಗಳಿಗೂ ಬುಟ್ಟಿಗಳಲ್ಲಿ ಕಪ್ಪಾದ ಕಾಗದವನ್ನು ಹಾಕಿ, ಅದರಮೇಲೆ ಮೊಟ್ಟೆಯಿಡುವಂತೆ ಮಾಡುವುದು ಒಳ್ಳೆಯದು. ಸುಮಾರು ಹತ್ತು ದಿನಗಳಲ್ಲಿ ಮೊಟ್ಟೆಗಳೊಡೆಯುವುವು. ಗೂಡುಗಳಿಂದ ಚಿಟ್ಟೆಗಳೆಲ್ಲವೂ ಒಂದೇ ದಿನದಲ್ಲಿ ಹೊರಕ್ಕೆ ಬಾರದೆ, ಐದಕ್ಕೆ [illegible] ದಿವಸಗಳಲ್ಲಿ ಎಲ್ಲವೂ ಹೊರಕ್ಕೆ ಬರುವುವೆಂಬುದನ್ನು ತಿಳಿದುಕೊಳ್ಳಬೇಕು.

ಹುಳುವನ್ನು ಸಾಕಲು ಆರಂಭಿಸಬೇಕಾದ ಕಾಲ — ಮೊಟ್ಟೆಗಳೊಡೆದ ಎರಡನೆಯ ದಿವಸ ಮೊದಲು ಮತ್ತು ಎರಡನೆ [illegible] ಹುಳುಗಳಿಗೆ ಸೊಪ್ಪನ್ನು ಕೊಡಲು ಆರಂಭಿಸಬೇಕು. ಎಳೆ [illegible] ಎಲೆಗಳನ್ನು ಕತ್ತರಿಸಿ ಹುಳುಗಳ ಮೇಲೆ ಉದುರಿಸಬೇಕು. ಒಂದೊಂದು ತಟ್ಟೆ[illegible]

[illegible] ...ನ್ನು ಇರಿಸಬಾರದು ಮೊದ
[illegible] ಎರಡನೆಯವರ ಮೂರರ
[illegible] [illegible]ವರ್ತಿಯೂ ಹೆಚ್ಚು [illegible]
ತ್ತಿನಿಂದ ಪ್ರಾರಂಭಿಸಿ ರಾತ್ರಿ ೯ ಗಂಟೆಯೊಳಗೆ ಮೇವನ್ನು ಕೊಡಬೇಕು. ಸುಮಾರು ೩ ದಿವಸಗಳಲ್ಲಿ ಮೊದಲನೆ ಜ್ವರವು ಬರುವುದು. ಆಗ್ಗೆ ಹುಳುಗಳೆಲ್ಲವೂ [illegible] ಕೆಲವು ಹುಳುಗಳು ಜ್ವರದವಸ್ಥೆಗೆ ಬರಲು ಸಾವಕಾಶವಾಗುವುದು. ಇವುಗಳಿಗೆ ಹಗಲು ಹೊತ್ತಿನಲ್ಲಿ ಸ್ವಲ್ಪಸ್ವಲ್ಪವಾಗಿ ಒಂದೆರಡುವೇಳೆ ಮೇವನ್ನು ಕೊಡಬೇಕು. ಹುಳುಗಳೆಲ್ಲವೂ ಸತ್ತಂತೆ ಬಿದ್ದಿರುವಾಗ್ಗೆ ಮೇವನ್ನು ನಿಲ್ಲಿಸಬೇಕು. ಹುಳುಗಳು ಪೊರೆಯನ್ನು ಬಿಟ್ಟು ಹೊರಕ್ಕೆ ಬಂದಕೂಡಲೇ ಮೊದಲಿನಂತೆ ಪುನಃ ಮೇವನ್ನು ಕೊಡಬೇಕು. ಒಟ್ಟು ನಾಲ್ಕುವೇಳೆ ಪೊರೆಬಿಡುವುವು. ಪ್ರತಿಸಲವೂ ಪೊರೆಬಿಟ್ಟಕೂಡಲೇ ಮೇವನ್ನು ಕೊಡಬೇಕು. ನಾಲ್ಕನೆಯಾವರ್ತಿ ಪೊರೆಬಿಟ್ಟಾಗ ಅಂದರೆ ಕೊನೆ ಐದಾರು ದಿನಗಳು ಬಹಳ ಸೊಪ್ಪನ್ನು ದಿನಕ್ಕೆ ಐದುವೇಳೆಯಂತೆ ಮೇಯಿಸಬೇಕು. ಹುಳುಗಳು ಗೂಡುಕಟ್ಟಲು ಸಿದ್ಧವಾಗಿರುವಾಗ್ಗೆ ಮುಚ್ಚಳವಿಲ್ಲದ ಬುಟ್ಟಿಗಳಲ್ಲಿ ಒಣಗಿದ ಮಾವಿನ ಎಲೆಗಳನ್ನು ಹರವಿ ಮೇಲೆ ಹುಳುಗಳನ್ನಿಡಬೇಕು. ನಂತರ ಸುಮಾರು ಮೂರು ದಿವಸಗಳು ಅವುಗಳ ತಂಟೆಗೆ ಹೋಗಕೂಡದು. ಗೂಡುಗಳನ್ನು ತೆಗೆದುಕೊಂಡ ನಂತರ ಸ್ವಲ್ಪಕಾಲದಲ್ಲಿ ಚಿಟ್ಟೆಗಳು ಹೊರಕ್ಕೆ ಬಂದು ಪುನಃ ಕೋಟಿ ಮೊಟ್ಟೆಗಳನ್ನಿಡುವುವು. ಚಿಟ್ಟೆಗಳು ಗೂಡಿನಿಂದ ಹೊರಕ್ಕೆ ಬಂದನಂತರದಲ್ಲಿ ಗೂಡುಗಳನ್ನು ಮಾರಬಹುದು. ಚಿಟ್ಟೆಗಳು ಒಳಗಿರುವ [illegible] ಗೂಡುಗಳನ್ನು ಯಾರೂ ಕೊಳ್ಳುವುದಿಲ್ಲ. ಮೊಟ್ಟೆಗಳು ॥ ಪೌಂಡಿಗೆ ೩ ರೂ ನಂತೆ ಮಾರಾಟವಾಗುವುವು. ಗೂಡುಗಳು ೧ ಪೌಂಡಿಗೆ ೧೨ ರಿಂದ ೧೪ ಆಣೆಗಳಂತೆ ಬೆಲೆ ಬಾಳುವುವು.

ಹುಳುಗಳಿಗೆ ಮೇವನ್ನು ಕೊಡುವ ಮತ್ತು ಅವು ತಿಂದ ಎಂಜಲೆಲೆಗಳನ್ನು ದಿನಬಿಟ್ಟು ದಿನ ತೆಗೆಯತಕ್ಕ ಕೆಲಸದಲ್ಲಿ ಮಾತ್ರ ಆಲಸ್ಯ ಮಾಡಕೂಡದು. ಹಿಪ್ಪಲಿನೇರಳೆ ಸೊಪ್ಪನ್ನು ತಿನ್ನತಕ್ಕ ರೇಷ್ಮೆ ಹುಳುಗಳಿಗೆ ಬರತಕ್ಕ ಯಾವ ವ್ಯಾಧಿಯೂ ಊರಿ ರೇಷ್ಮೆ ಹುಳುಗಳಿಗೆ ತಗಲುವುದಿಲ್ಲ.

ಗೂಡುಗಳಿಂದ ರೇಷ್ಮೆಯನ್ನು ನೂಲತಕ್ಕ ರಾಟೆ [illegible] ಮತ್ತು ನೆಯ್ಯತಕ್ಕ ಮಗ್ಗಗಳು ತಾತಾ[illegible] [illegible]ದಲ್ಲಿ ಬಹಳವಾಗಿ ಮಾರಲ್ಪಡುವುವು. ಊರಿ ರೇಷ್ಮೆ ಹುಳುಗಳ ಗೂಡುಗಳಿಗೂ ಬಹಳ ಗಿರಾಕಿಯಿರುತ್ತದೆ.

ಕರುಗಳ ಪೋಷಣೆ

ಕ್ಷಾಮ ಮತ್ತು ರೋಗಾದ್ಯುಪದ್ರವಗಳಿಂದ ಈ ದೇಶದ ದನಗಳ ಸಂಖ್ಯೆಯು ದಿನೇದಿನೇ ಕಡಿಮೆಯಾಗುತ್ತಿರುವ ಕಾರಣ ಅವುಗಳ ಬೆಲೆಯು ವಿಪರೀತವಾಗಿರುತ್ತದೆ. ಒಬ್ಬ ರೈತನು ಸಾಧಾರಣವಾದ ಒಂದುಜತೆ ಉಳುವ ಎತ್ತುಗಳನ್ನು ಕೊಳ್ಳಬೇಕಾದಲ್ಲಿ ಸುಮಾರು ಇನ್ನೂರು ರೂಪಾಯಿಗಳನ್ನಾದರೂ ವಿನಿಯೋಗಿಸಿಕೊಳ್ಳಬೇಕು. ಇನ್ನೂರು ರೂ ಅಂದರೆ ಬಡರೈತನಿಗೆ ಎಂಟುಹತ್ತು ವರ್ಷಗಳು ಕಷ್ಟಪಟ್ಟು ಕೂಡಿಟ್ಟ ಹಣವಾದಂತಾಯಿತು. ಆದರೆ ಸುಲಭವಾಗಿ ಆ ಬ[illegible] ಕಾರ್ಯಕ್ಕೆ ಒದಗುವ ರಾಸುಗಳನ್ನು ಒದಗಿಸಿಕೊಳ್ಳಬೇಕಾದರೆ ಸುಮ್ಮನೆ ಒಳ್ಳೇ ತಳಿಯ ಹೆಣ್ಣುಕರುವನ್ನು ನಾಲ್ಕಾರು ರೂಪಾಯಿಗಳಿಗೆ ಕೊಂಡು ಅದನ್ನು ಸಾಕಿ ಉತ್ತಮವಾದ ತಳಿಯ ಹೋರಿಯಿಂದಲೇ ಭರಾಯಿಸಿ ಅದರಿಂದ ಹುಟ್ಟುವ ಕರುಗಳನ್ನು ಇತರ ದನಗಳೊಡನೆ ಸ್ವಲ್ಪ ಮುತುವರ್ಜಿಯಿಂದ ನೋಡಿಕೊಂಡರೆ ಸಾಕಾಗಿರುತ್ತದೆ. ಆದುದರಿಂದ ಪ್ರತಿರೈತನೂ ಕರುಗಳ ಪಾಲನೆಯ ಕ್ರಮವನ್ನು ಚೆನ್ನಾಗಿ ತಿಳಿದುಕೊಂಡಿರುವುದು ಅವಶ್ಯಕವೆಂದು ಹೇಳಬಹುದು.

ಈಗ ರೂಢಿಯಾಗಿ ಜನಗಳು ಕರುಗಳ ಪೋಷಣೆಯ ವಿಷಯದಲ್ಲಿ ಬಹಳ ಅಲಕ್ಷ್ಯವುಳ್ಳವರಾಗಿರುತ್ತಾರೆ. ಅನೇಕರು ಕರುವು ಹುಟ್ಟಿದ ಸ್ವಲ್ಪಕಾಲದಲ್ಲಿಯೇ ಅದನ್ನು ತಾಯಿಯಿಂದ ಬೇರೆಮಾಡಿಬಿಡುವರು. ಇಂಥ ಕರುಗಳ ಅವಸ್ಥೆಯು ಅತ್ಯಂತ ಶೋಚನೀಯವಾದುದಾಗಿರುತ್ತದೆ. ಕರುವಿಗೆ ತನ್ನ ತಾಯಿಯ ಹಾಲಿನಷ್ಟು ಉತ್ತಮವಾದ ಆಹಾರವು ಮತ್ತಾವುದೂ ಇರುವುದಿಲ್ಲ. ತಾಯಿಯ ಹಾಲನ್ನೇ ಸೇವಿಸಿ ಬೆಳೆಯುವ ಕರುವಿನ ಅಂದವೂ, ಆರೋಗ್ಯ ಮತ್ತು ದೃಢಕಾಯವೂ ಇತರ ಆಹಾರವನ್ನು ಸೇವಿಸಿ ಬೆಳೆಯುವ ಕರುಗಳಿಗೆ ಇರುವುದಿಲ್ಲ.

ಮುಖ್ಯವಾಗಿ ಹಾಲುಮಾರುವವರು ಕರುಗಳನ್ನು ಯಾವುದೋ ಒಂದು ಅತಿ ಕತ್ತಲಾದ ಮೂಲೆಯಲ್ಲಿ ಕಟ್ಟಿಹಾಕಿ ನೀರು ಬೆರಸಲ್ಪಟ್ಟು ಅತಿ ಕೊಳೆಯಾಗಿ ಹಳಸಿ ಮೂರಾಬಟ್ಟೆಯಾಗಿರುವ ಹಾಲನ್ನು ದಿನಕ್ಕೆ ಎರಡಾವರ್ತಿ ಕೊಡುತ್ತಾರೆ. ಇಂಥ ಹಾಲಿನ ಸೇವನೆಯಿಂದ ಕೇವಲ ಚಿಕ್ಕವಯಸ್ಸಿನವುಗಳಾದ ಇವುಗಳಿಗೆ ಆಮಶಂಕೆ, ಭೇದಿ ಮೊದಲಾದ ರೋಗಗಳು ಪ್ರಾಪ್ತವಾಗುವುವು. ಇವುಗಳಿಗೆ ತಾಯಿಯ ಶುದ್ಧವಾದ ಹಾಲು ಸ್ವಪ್ನದಲ್ಲಿಯೂ [illegible] ಹೇಳಬಹುದು. ಹೀಗೆಲ್ಲಾ ಮಾಡುವುದು ಶುದ್ಧ ಅವಿವೇಕವಾಗಿದೆ. ದನಗಳನ್ನು ಸಾಕುವವರು ಕರುಗಳು ತಾಯಿಯ ಮೊಲೆಯನ್ನು ಚೀಪಲು ಮೊದಲು ಕೊಂಚವಾಗಿಯೂ ಎರಡುಹೊತ್ತು ಬಿಟ್ಟು ಎರಡು ತಿಂಗಳ ನಂತರದಲ್ಲಿ ಪೂರ್ತಿಯಾಗಿ ಉಣ್ಣುವುದಕ್ಕೆ ಬಿಡಬೇಕು. ಕೆಲವು ಚತುರರಾದ ಗೌಳಿಗರು ಕೆಳಗೆ ಹೇಳಲ್ಪಡುವ ಕ್ರಮವನ್ನನುಸರಿಸಿ ಕರುಗಳನ್ನು ಪೋಷಣೆಮಾಡುತ್ತಾರೆ.

ಕರುವು ಹುಟ್ಟಿದ ಸುಮಾರು ಒಂದು ತಿಂಗಳಕಾಲ ಕರುವಿಗೆ ಒಂದು ಮೊಲೆಯ ಹಾಲನ್ನು ಪೂರ್ತಿಯಾಗಿ ಬಿಟ್ಟು ಉಳಿದ ಮೂರು ಮೊಲೆಯ ಹಾಲನ್ನು ಮಾತ್ರ ಕರೆದುಬಿಡುವರು. ಅಲ್ಲಿಂದ ಮುಂದೆ ಸುಮಾರು ಹದಿನೈದು ದಿನಗಳ ಕಾಲ ಮೂರು ಮೊಲೆಯ ಹಾಲನ್ನು ಕರುವಿಗೆ ಬಿಟ್ಟು ಒಂದು ಮೊಲೆಯ ಹಾಲನ್ನು ಮಾತ್ರ ಕರೆದುಕೊಳ್ಳುವರು. ಅಲ್ಲಿಂದಾಚೆಗೆ ಹಾಲನ್ನು ಕರೆಯುವುದೇ ಇಲ್ಲ. ಈ ರೀತಿಯಲ್ಲಿ ಹುಟ್ಟಿದ ಎರಡುತಿಂಗಳನಂತರದಲ್ಲಿ ಕರುವು ತನ್ನ ತಾಯಿಯ ಪೂರ್ತಿ ಹಾಲನ್ನು ಕುಡಿಯುವಂತಾಗುವುದು.

ಆದರೆ ಮೇಲೆ ಹೇಳಿದಂತೆ ಮಾಡಲಾರದವರು, ಅಂದರೆ ಹಾಲನ್ನು ಮಾರಿ ಜೀವಿಸುವವರು ಹುಟ್ಟಿದ ಕರುವನ್ನು ಸಾಕುವರು ಹೇಗೆಂದರೆ— ಹುಟ್ಟಿದ ೪೮ ಗಂಟೆಗಳ ಕಾಲ ಕರುವು ತಾಯಿಯ ಜತೆಯಲ್ಲಿಯೇ ಇರುವುದು. [illegible] ಹಾಲನ್ನು ಕುಡಿಸುವುದು. ಅಭ್ಯಾಸಿಸಿ [illegible] ಒಂದು ತಿಂಗಳ ಕಾಲ ಅದರ ತಾಯಿಯ ಹಾಲನ್ನೇ ಕುಡಿ[illegible] ಸತ್ತಿ[illegible] ಹಾಲನ್ನು [illegible] ಕಾಲಕ್ಕೆ [illegible] [illegible] ಬೇಕು. [illegible] ಸ ಬಹಳ ಮುಖ್ಯವಾದ ಅವಕಾಶವಿಲ್ಲ [illegible] ಕಟ್ಟಿಗೆಯಲ್ಲಿ ಕಟ್ಟಬೇಕು. [illegible] ಸ್ವಲ್ಪ ಜೋಳದ ಹಿಟ್ಟಿನ ಗಂಜಿ, ಹುಲ್ಲು ಮತ್ತು ರುಚಿಯಾದ ಹಸಿ ಗರಿಕೆಯನ್ನು ತಿನ್ನಬಿಡಬೇಕು. ಸ್ವಲ್ಪಸ್ವಲ್ಪವಾಗಿ ಜೋಳದ ಅಂಬಲಿ, ಹುಲ್ಲು ಇವುಗಳನ್ನು ಹೆಚ್ಚಿಸುತ್ತಾ ಹಾಲನ್ನು ಕೊಂಚಕೊಂಚವಾಗಿ ಕಡಿಮೆಮಾಡುತ್ತಾ ಬರಬಹುದು.

ಕರುಗಳಿಗೆ ಸಾಮಾನ್ಯವಾಗಿ ಆಮಶಂಕೆಯು ಬಹಳ ಹಿಂಸೆಯನ್ನು ಕೊಡುವುದು. ಅನಾರೋಗ್ಯಕರವಾದ ಕೊಟ್ಟಿಗೆ, ಹೆಚ್ಚಾಗಿ ಹಾಲು ಕುಡಿಸುವುದು ಮತ್ತು ಸಾಮಾನ್ಯವಾಗಿ ಅಶುಚಿಯಾದ ಆಹಾರ ಇವೇ ಇದಕ್ಕೆ ಕಾರಣಗಳಾಗಿರುತ್ತವೆ. ಆಮಶಂಕೆಯಿಂದ ನರಳುತ್ತಿರುವ ಕರುವು ಮಂಕಾಗಿರುವುದು ಮತ್ತು ಅದರ ಹೊಟ್ಟೆಯು ಹಸಿ [illegible]ವಾಗಿರುವುದು.

ಅಪೀಮಿನೊಡನೆ ಹರಳೆಣ್ಣೆಯನ್ನು ಬೆರಸಿ ಕುಡಿಸುವುದು ಒಳ್ಳೆ ಚಿಕಿತ್ಸೆಯಾಗಿರುತ್ತದೆ. ಸ್ವಲ್ಪ ಸುಣ್ಣದ ತಿಳಿಯನ್ನು ಕುಡಿಸಬೇಕು. ಕೆಲವು ದಿನಗಳ ಕಾಲ ಅಕ್ಕಿ ಗಂಜಿಗೆ ಹಾಲನ್ನು ಬೆರಸಿ ಕುಡಿಸುವುದು ಒಳ್ಳೆಯದು. ಹೀಗೆ ಮಾಡಿದಲ್ಲಿ ಕೆಲವು ದಿನಗಳೊಳಗೆ ಪ್ರಾಣಿಯು ಗುಣಹೊಂದುವುದು.

ಕೊಟ್ಟಿಗೆಯನ್ನು ಚೊಕ್ಕಟ ಶುಭ್ರವಾಗಿಟ್ಟಿರಬೇಕು. ಕರುಗಳಿಗೆ ವಾರಕ್ಕೊಂದಾವರ್ತಿಯಾದರೂ ಮೈಯನ್ನು ತೊಳೆಯಬೇಕು. ಇಲ್ಲದಿದ್ದರೆ ಹೇನು ಹತ್ತುವುವು. ಇದರಿಂದ ಬೆಳವಣಿಗೆಯು ಕಡಿಮೆಯಾಗುವುದು. ಅಲ್ಲದೆ ಈ ರೋಗವು ಸಾಂಕ್ರಾಮಿಕವಾದುದರಿಂದ ಕೊಟ್ಟಿಗೆಯಲ್ಲಿರುವ ಇತರ ರಾಸುಗಳಿಗೂ ಹಬ್ಬಬಹುದು. ಇದಕ್ಕೆ ಚಿಕಿತ್ಸೆಯಾವುದೆಂದರೆ — ಕರುವಿನ ಮೈಯನ್ನೆಲ್ಲಾ ಚೆನ್ನಾಗಿ ತೊಳೆದು ಕೂದಲನ್ನೆಲ್ಲಾ ಕತ್ತರಿಸಿ ಗಂಧಕದ ಮುಲಾಮನ್ನು ಎರಡುಮೂರು ದಿನಗಳಿಗೊಂದಾವೃತ್ತಿ ಹಚ್ಚಿ ಮತ್ತು ಸಾಬೂನಿನಿಂದ ತೊಳೆದು ಹೊಸದಾಗಿ ಹಚ್ಚುತ್ತಾ ಬರಬೇಕು. ಹೀಗೆ ಮಾಡಿದಲ್ಲಿ ಕೆಲವು ದಿನಗಳಲ್ಲಿ ರೋಗವು ಪೂರ್ಣವಾಗಿ ಗುಣವಾಗುವುದು.

ಮೇಲೆ ಕಂಡ ಕ್ರಮವನ್ನನುಸರಿಸಿ ಕರುಗಳನ್ನು ಪೋಷಿಸಿದರೆ ಅವು ಜಾಗ್ರತೆಯಾಗಿ ಬೆಳೆದು ಆರುತಿಂಗಳೊಳಗೆ [illegible] ಬಲವಾಗಿಯೂ ದಷ್ಟಪುಷ್ಟವಾಗಿಯೂ ತಾಯಿಯ ಹಾಲನ್ನು [illegible] ಕುಡಿದು ಬೆಳೆದ ಕರುಗಳನ್ನು ಕಂಡಹಾಗಿರುವುವು. ಅಲ್ಲದೆ ಇಂಥ ಕರುಗಳು ತಾಯಿಯ ಹಾಲನ್ನು ಕುಡಿದು ಬೆಳೆದ ಕರುಗಳಿಗಿಂತಲೂ ದೀರ್ಘವಾದ, ಉತ್ತಮವಾದ ಮತ್ತು [illegible]ದವಾದ ಹಸು ಅಥವಾ ಹೋರಿಗಳಾಗುವುವು. ಪೂರ್ಣವಾಗಿ ಬೆಳೆದಲ್ಲದೆ ಕರುಗಳನ್ನು ಕೆಲಸಕ್ಕೆ ಹಾಕಬಾರದು. ಅಲ್ಲದೆ ಗಂಡುಕರುಗಳಿಗೆ ಚಿಕ್ಕವಯಸ್ಸಿನಲ್ಲಿಯೇ [illegible]ಬೇಕು. ಅಂತೂ ಮೇಲೆ ಹೇಳಿದ ರೀತಿಗಳಲ್ಲಿ ಕರುಗಳನ್ನು ಸಾಕುವುದರಿಂದ ನಮ್ಮ ದನಗಳ ತಳಿಯು ಅಭಿವೃದ್ಧಿ ಹೊಂದುವುದಲ್ಲದೆ ಆರಂಭಕಾರ್ಯಗಳಿಗೆ ಒಳ್ಳೇ ದೃಢಕಾಯವಾದ [illegible]

ರೈತರ ಕರುಗಳು ಬಹ[illegible]
[illegible]

[illegible]
ಅವಶ್ಯವಾಗಿ ಪ್ರಜೆಗಳು।

ನಮ್ಮ ಪ್ರಾಚೀನ ಸರ್ವ ಕಲಾಶಾಲೆಗಳು

(ಹಿಂದಿನ ಶೇಷ.)

ಉದಾಂತಪುರಿ.

ಇದುವರೆಗೆ ನಲಂದಾಕ್ಷೇತ್ರದ ವಿಷಯವು ವಿವರಿಸಲ್ಪಟ್ಟಿತಷ್ಟೆ. ಇನ್ನು ಉದಾಂತಪುರಿ-ವಿಕ್ರಮಶೀಲಾ ಎಂಬ ೨ ಆಶ್ರಮಗಳ ವಿಷಯವನ್ನು ಹೇಳಬೇಕಾಗುವುದು. ಪಾಲಾವಂಶದವರು ಮಗಧರಾಜ್ಯಾಧಿಪತ್ಯವನ್ನು ಹೊಂದುವುದಕ್ಕೆ ಮೊದಲೇ ಉದಾಂತಪುರೀ ವಿಹಾರವು ಸ್ಥಾಪಿಸಲ್ಪಟ್ಟಿತು. ಇದಕ್ಕೆ ಸಮೀಪದಲ್ಲಿ ಒಂದು ಪಟ್ಟಣವನ್ನು ನಿರ್ಮಿಸಿದ್ದುದರಿಂದಲೂ ಆ ಪುರವು ಸಂಪಾದಿಸಿದ ಕೀರ್ತಿವೈಭವದಿಂದಲೂ ಮತ್ತು ಆ ಪಟ್ಟಣವು ಮಗಧರಾಜರಿಗೆ ಮುಖ್ಯರಾಜಧಾನಿಯಾಗಿದ್ದುದರಿಂದಲೂ ರಾಜ್ಯದಲ್ಲೆಲ್ಲಾ ಆ ಉದಾಂತಪುರೀ ವಿಹಾರದ ಹೆಸರೇ ಹೆಸರಾಗಿದ್ದಿತು. ಬರಬರುತ್ತ ಮಗಧ ಎಂಬ ಹೆಸರೇ ಮರೆತುಹೋಗುತ್ತ ಬಂದಿತು. ಮಹೀಪಾಲನೆಂಬ ರಾಜನ ಕಾಲದಲ್ಲಿ ಉದಾಂತಪುರಿಯೊಳಗೆ ಹೀನಯಾನಶಾಖೆಗೆ ಸೇರಿದ ಒಂದು ಸಾವಿರ ಜನರೂ, ಮಹಾಯಾನಶಾಖೆಗೆ ಸೇರಿದ ಐದುನೂರು ಜನರೂ ವಾಸವಾಗಿದ್ದರು. ಪಾಲಾ ವಂಶದ ರಾಜರು ಈ ವಿಹಾರದಲ್ಲಿ ದೊಡ್ಡ ಪುಸ್ತಕಭಾಂಡಾಗಾರವನ್ನು ಸ್ಥಾಪಿಸಿದ್ದರು. ಅದರ ೧೨೦೦ನೆಯ ವರ್ಷದಲ್ಲಿ ಅಲ್ಲಿನ ಪುಸ್ತಕಗಳನ್ನು ಪ್ರಜೆಗಳು [illegible]ದ್ದರು. ಚೀನಾದೇಶದ ತಾರಾನಾಥ್ ಎಂಬ [illegible]ದೊಳಗೆ ಇದ್ದ ಟಿಬೆಟ್ ದೇಶದ ಮುಖ್ಯ ಸನ್ಯಾಸಿಯ ಶಾಕ್ಯನಗರದಲ್ಲಿನ ಮಠವು ಉದಾಂತಪುರೀ ಮಠದ ಪ್ರತಿಯನ್ನನುಸರಿಸಿಯೇ ಕಟ್ಟಲ್ಪಟ್ಟಿತು. ವಿದ್ಯಾಭ್ಯಾಸದಲ್ಲೂ ಕೂಡ ಶಾಕ್ಯನಗರದ ಮಠವು ಉದಾಂತಪುರೀ ಮಠದ ಶಿಕ್ಷಣಕ್ರಮವನ್ನೇ ಅನುಸರಿಸಿದ್ದಿತು.

ವಿಕ್ರಮಶೀಲ

ಗಂಗಾನದಿಯ ಎಡದಡದಲ್ಲಿರುವ ಒಂದು ಪರ್ವತದ ಶಿಖರದ ಮೇಲೆ ೮ ನೆಯ ಶತಮಾನದೊಳಗೆ ಧರ್ಮಪಾಲನಿಂದ ಸ್ಥಾಪಿಸಲ್ಪಟ್ಟ ವಿಕ್ರಮಶೀಲವೆಂಬ ದೇವವಿಹಾರವಿದ್ದಿತು. ಅದರ ಮಧ್ಯದಲ್ಲೊಂದು ಭವನ ಸುತ್ತಲೂ ಪ್ರಾಕಾರದೊಳಗೆ ೧೦೮ ದೇವಾಲಯಗಳೂ ಅವುಗಳ ಸುತ್ತಲೂ ಒಂದು ಗೋಡೆಯೂ ಇದ್ದುವು. ಅದರಲ್ಲಿ ೧೦೮ ಮಂದಿ ಮಹಾಚಾರ್ಯರೂ ೬ ಕಳಾಶಾಲೆಗಳೂ ೧೦೮ ಮಂದಿ ಪಂಡಿತರುಗಳೂ ಇರುವುದಕ್ಕೆ ರಾಜನು ಏರ್ಪಡಿಸಿದ್ದನು. ಶಾಸ್ತ್ರಭವನವೆಂದು ಕರೆಯಲ್ಪಡುತ್ತಿದ್ದ ಮಧ್ಯದ ಮನೆಯಲ್ಲಿ ಆ ಮತದ ಪಾರಪ್ರವರ್ತರುಗಳೂ "ಪ್ರಜ್ಞಾಪಾರಮಿತಾ" ಗ್ರಂಥಗಳನ್ನು ಓದುತ್ತಿದ್ದರು. ಭಯಪಾಲ ರಾಜನ ಕಾಲದಲ್ಲಿ ಆ ಸರ್ವಕಲಾಶಾಲೆಯು ೬ ಮಂದಿ ದ್ವಾರಪಂಡಿತರ ಅಧ್ಯಕ್ಷತೆಯ ಕೆಳಗೆ ಇಡಲ್ಪಟ್ಟಿದ್ದಿತು. ಆಗಲೇ ಬಟಾರಿ ಎಂಬ ಯೋಗಿಯು ಬಾಲಕರಿಗೆ ಉಚಿತವಾಗಿ ಭೋಜನವು ನಡೆಯುವುದಕ್ಕೆ ಸಾಧಕವಾಗಿ ಒಂದು ಛತ್ರವನ್ನು ನಿರ್ಮಿಸಿದನು. ಮೇಲೆ ಕಂಡ ಮಠದ ನಾಲ್ಕು ಹೆಬ್ಬಾಗಿಲ ಬಳಿಯಲ್ಲೂ ನಾಲ್ಕು ಕಳಾಶಾಲೆಗಳಿದ್ದುವು. ಅವುಗಳಲ್ಲಿ ವಿದ್ಯಾರ್ಥಿಗಳು ಉಚಿತವಾಗಿ ಶಿಕ್ಷಣವನ್ನು ಪಡೆಯುತ್ತಿದ್ದರು. ಈ ಶಾಲೆಗಳೆಲ್ಲಾ ದ್ವಾರಪಂಡಿತರ ಅಧಿಕಾರಕ್ಕೊಳಪಟ್ಟಿದ್ದುವು. ಮಧ್ಯದಲ್ಲಿನ ಕಳಾಶಾಲೆಯಲ್ಲಿ ಮಾತ್ರ ಬ್ರಹ್ಮಜ್ಞಾನವಿದ್ಯೆಯ ಶಿಕ್ಷಣವನ್ನು ಕೊಡುವ ಇಬ್ಬರು ಪಂಡಿತರು ಇದ್ದರು. ಇವರು ಆ ಕಳಾಶಾಲೆಗಳ ಆಧಾರವಾದ ಎರಡು ಸ್ತಂಭಗಳೆಂದು ಎಣಿಸಲ್ಪಟ್ಟಿದ್ದರು. ನಾಲ್ಕು ದಿಕ್ಕಿನಲ್ಲಿದ್ದ ಸರ್ವ ಕಲಾಶಾಲೆಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಪ್ರೋತ್ಸಾಹಾರ್ಥವಾಗಿ ಮಠದಲ್ಲೇ ನಾಲ್ಕು ಸತ್ರಗಳಿದ್ದುವು. ಇದಕ್ಕೆ ಬೇಕಾದ ಹಣವು ರಾಜನಿಂದಲೂ ದೊಡ್ಡ ಮನೆತನದವರಿಂದಲೂ ಸಹಾಯ ಮಾಡಲ್ಪಡುತ್ತಿದ್ದಿತು. ೧೨ನೆ ಶತಮಾನದ ಆರಂಭದಲ್ಲಿ ಸಿಂಹಳದೇಶದ ರಾಜನಾದ [illegible]ನಾಥನೆಂಬುವನ ಮಕ್ಕಳುಗಳೊಳಗೊಬ್ಬನಿಂದ ಆ ವಿಹಾರದಲ್ಲಿ ಮತ್ತೊಂದು ಸತ್ರವು ಕಟ್ಟಲ್ಪಟ್ಟಿತು. ಆ ರಾಜಪುತ್ರನು ತಾನೂ ಬೌದ್ಧಮತವನ್ನವಲಂಬಿಸಿ ಬಟಾರಿ ಎಂಬ ಹೆಸರನ್ನು ತಾಳಿದನು. ೩ ಮಂದಿ ಸಭಿಕರೊಡನೆ ಕೂಡಿದ ಮಠಾಧಿಪತಿಯು ಅಧ್ಯಕ್ಷನಾಗಿ ಒಂದಾನೊಂದು ಕಾಲದ ಮೇಲ್ವಿಚಾರಣೆಯಿಂದ ಪಾಲಿಸಲ್ಪಡುತ್ತಿದ್ದ ಆ ಸರ್ವಕಲಾಶಾಲೆಯು ೧೩ನೆಯ ಶತಮಾನದವರೆಗೂ ಅಭಿವೃದ್ಧಿದಶೆಯಲ್ಲಿಯೇ ಇದ್ದಿತು.

ಪರಿಶ್ರಾಮಿಕ ವಿಷಯ.

ಕಲಕತ್ತೆಯಲ್ಲಿ ಸೇರಿದ್ದ ೩ ನೇ ಪರಿಶ್ರಾಮಿಕ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ [illegible] ಪ್ರಸ್ತಾಪಿಸಿದ ಭಾಷಣದಲ್ಲಿನ ಕೆಲವು ಮುಖ್ಯ ವಿಷಯಗಳು:- ಭರತಖಂಡದ ಉದ್ಯೋಗಗಳನ್ನು ೩ ವಿಧವಾಗಿ [illegible] ವುಗಳಲ್ಲಿ ೧ ನೆಯದು ವ್ಯವಸಾಯ, [illegible]ಸಿದ ಕೆಲಸಗಳು, ೨ ನೆಯದು [illegible] ಕಾರ್ಖಾನೆಗಳು, ಗಣಿಗಳು ಮೊದಲಾದವುಗಳ ಕೆಲಸ, ೩ ನೆಯದು ಸಣ್ಣ ಸಣ್ಣ ಕೈಗಾರಿಕೆಗಳು, ಹೀಗೆ ೩ ಭಾಗ ಮಾಡಬಹುದು. ನಮ್ಮಲ್ಲಿನ ವ್ಯವಸಾಯಾಭಿವೃದ್ಧಿ ಕಾರ್ಯವು ಒಟ್ಟಿನಲ್ಲಿ ತೃಪ್ತಿಕರವಾಗಿಯೇ ನಡೆಯುತ್ತಿದೆ. ಪೂಸಾದ ರೀಸರ್ಚ್ ಇನ್ಸ್ಟಿಟ್ಯೂಟಿನಲ್ಲಿ ಶಾಸ್ತ್ರೀಯ ಪರಿಶೋಧನೆಗಳನ್ನು ನಡೆಯಿಸುವುದಕ್ಕೂ ಪೈರುಗಳನ್ನು ಹೊಸದಾಗಿ ಬೆಳೆಯಿಸುವ ವಿಧಾನವನ್ನು ಕಂಡುಹಿಡಿಯುವುದಕ್ಕೂ ವ್ಯವಸಾಯ ಕಳಾಶಾಲೆಗಳನ್ನೂ ಮಾದರಿ ಶಾಲೆಗಳನ್ನೂ ಸ್ಥಾಪಿಸುವುದಕ್ಕೂ ಸರ್ಕಾರದವರು ಎಷ್ಟೋ ದ್ರವ್ಯವನ್ನು ವೆಚ್ಚ ಮಾಡುತ್ತಿದ್ದಾರೆ. ವ್ಯವಸಾಯ ಪದ್ಧತಿಗಳನ್ನು ಅಭಿವೃದ್ಧಿಗೊಳಿಸುವುದಕ್ಕೂ ದೇಶಭಾಷೆಯಲ್ಲಿ ವ್ಯವಸಾಯಶಾಸ್ತ್ರವನ್ನು ಹೇಳಿಕೊಡುವ ಪಾಠಶಾಲೆಗಳನ್ನು ಸ್ಥಾಪಿಸುವುದಕ್ಕೂ, ಸರ್ [illegible] ಮೈಸೂರು ಸರ್ಕಾರದವರು ೪ ಲಕ್ಷ ರೂ ಗಳನ್ನು ಕೊಡುವ [illegible] ರದವರಿಗೆ ಕೊಟ್ಟಿದ್ದಾರೆ. ವ್ಯವಸಾಯದಲ್ಲಿ ಸಹಕಾರ ಪದ್ಧತಿಯ ಪ್ರಜೆಗಳು ವ್ಯವಸಾಯಕ್ಕೆ ಬೇಕಾದ ಅಧಿಕಾರಿಗಳ [illegible] ಬಳಿ ಕೆಲಸ ಮಾಡುತ್ತಿದ್ದಾರೆ. ವ್ಯವಸಾಯ ಸಂಘಗಳನ್ನೂ ವಿದರ್ಶನ ಕ್ಷೇತ್ರಗಳನ್ನೂ ಸ್ಥಾಪಿಸುವುದಕ್ಕೂ, ಹೊಸ ಯಂತ್ರ ಪ್ರದರ್ಶನಗಳನ್ನು ಜನಗಳಿಗೆ ತೋರಿಸುವುದಕ್ಕೂ ಇವರುಗಳ ಬಾಯಿಂದ ಮಾಡುತ್ತಿದ್ದಾರೆ. ಅನ್ಯೋನ್ಯ ಸಹಾಯಕ ಸಂಘಗಳ ಮೂಲಕ ಬೇಸಾಯಗಾರರಿಗೆ ಸಾಲ ಕೊಡುವ ಏರ್ಪಾಡುಗಳು ಬಲವಾಗಿ ದೊರೆಯುವಂತೆ ಮಾಡುತ್ತಿದ್ದಾರೆ. ಸರ್ಕಾರದೊಡ್ಡನ ಗಳು ದೇಶದ ಸರ್ವ ಭಾಗಗಳಲ್ಲೂ ನಾಟಿ ಕೊಂಡು ನಾಯಕರಾಗಿ ನಾಲ್ಕು ಮುಖಗಳಿಂದಲೂ ವ್ಯಾಪಿಸುತ್ತಿವೆಯೆಂಬ ಸಂಗತಿಯು ಪ್ರಗತಿಗೆ ಸಹಾಯಕ ಸಂಘಗಳ ಮತ್ತೂ ಅವುಗಳ ನಿಜಸ್ಥಿತಿಗಳ ಪದ್ಧತಿಗಳಿಂದ ಗೊತ್ತಾಗುತ್ತದೆ. ವ್ಯವಸಾಯದ ಬ್ಯಾಂಕನ್ನೂ, ಬೊಂಬಾಯಿ ಪಟ್ಟಣದ ಲೋ ಕೋ ಆಪರೇಟಿವ್ ಬ್ಯಾಂಕನ್ನು ಸ್ಥಾಪಿಸಬೇಕೆಂದು ನಾವು ಅಪೇಕ್ಷಿಸುತ್ತಿದ್ದೆವು. ಇವುಗಳಲ್ಲಿ ೨ ನೆಯದನ್ನು ಬೊಂಬಾಯಿ ಸರ್ಕಾರದವರು ಬಲಪಡಿಸಿ ಪರಸ್ಪರ ಸಹಾಯಕ ಸಂಘಗಳಿಗೆ ಬೇಕಾದ ಧನಸಹಾಯವನ್ನು ಮಾಡುವುದಕ್ಕೆ ಸೆಂಟ್ರಲ್ ಬ್ಯಾಂಕನ್ನು ಸ್ಥಾಪಿಸಿ, ಪ್ರೋತ್ಸಾಹಕಾರವನ್ನು ಮಾಡಿದ ತಕ್ಷಣ ಉಳಿದ ಅಧಿಕಾರಿಗಳಲ್ಲೂ ಜಿಲ್ಲೆಗಳಲ್ಲೂ ಆಯಾ ಸಂಘಗಳಿಗೆ ಬೇಕಾದಷ್ಟು ಹಣವಿಲ್ಲದೆ ತೊಂದರೆಪಡುತ್ತಿದ್ದಾರೆ. ಹಿಂದೂದೇಶಕ್ಕೆಲ್ಲಾ ಸಂಬಂಧಪಟ್ಟಂಥ ವ್ಯವಸಾಯದ ಬ್ಯಾಂಕೊಂದನ್ನು ಸ್ಥಾಪಿಸಬೇಕಾದ ಆವಶ್ಯಕವು ಸದ್ಯಕ್ಕೆ ಕಾಣುವುದಿಲ್ಲ.

ಸಕ್ಕರೆ

ಕೈಗಾರಿಕೆಗೆ ಸಂಬಂಧಪಟ್ಟ ಕಸುಬಿನಲ್ಲಿ ಸಕ್ಕರೆಯನ್ನು ತಯಾರಿಸುವುದು ಮುಖ್ಯವಾಗಿದೆ. ಇದು ಹೊರಗಿನಿಂದ ನಮ್ಮ ದೇಶಕ್ಕೆ ವಿಶೇಷವಾಗಿ ಬರುತ್ತಲಿದೆ. ಕಬ್ಬಿನ ಸಾಗುವಳಿಯು ನಮ್ಮಲ್ಲಿ ವಿಶೇಷವಾಗಿ ಆಗುತ್ತಿರುವುದರಿಂದ ನಾವು ಸಕ್ಕರೆಯನ್ನು ಅತ್ಯಂತ ಸುಲಭವಾಗಿ ಇಲ್ಲಿ ತಯಾರಿಸಲು ಬೇಕಾದ ಯಂತ್ರ ಸಾಧನಗಳನ್ನು ಸ್ಥಾಪಿಸುವುದು ಅವಶ್ಯಕವು. ಬಿರತಖಂಡದಲ್ಲಿ ಸಕ್ಕರೆ ಸಾಗುವಳಿಗೆ ಅನುಕೂಲಿಸುವ ಕಬ್ಬು ಅಷ್ಟು ಶ್ರೇಷ್ಠವಾಗಿಲ್ಲದಿರುವುದರಿಂದ ಸರ್ಕಾರದವರು ಇದಕ್ಕಾಗಿ ಶೋಧನೆಯನ್ನು ನಡೆಯಿಸುತ್ತಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಸಂಯುಕ್ತರಾಷ್ಟ್ರಗಳಲ್ಲಿ ಉತ್ತಮವಾದ ಬಿತ್ತನೆಗಳನ್ನು ಆರಿಸುತ್ತಲೂ ಅನ್ಯದೇಶಗಳಿಂದ ಬಿತ್ತಗಳನ್ನು ತರಿಸುತ್ತಲೂ ಅದರ ರಸವನ್ನು ಉತ್ತಮಪಡಿಸಲು ತಗಲುವ ಪ್ರಯತ್ನಮಾಡುತ್ತಿದ್ದಾರೆ. ಸಕ್ಕರೆಯನ್ನು ಮಾಡುವುದಕ್ಕೆ ಉತ್ತಮವಾದ ಕಬ್ಬು ಬೆಳೆವವರೂ ಲಾಭಕರವಾಗಿ ಆ ಕೆಲಸವನ್ನು ಮಾಡಿ, ಜಯಶೀಲರಾಗಬಹುದೋ ಇಲ್ಲವೋ ಎಂಬ ವಿಷಯದಲ್ಲಿ ಸಂಶಯವಿದೆ. ಪಶ್ಚಿಮ ಹಿಂದೂಸ್ಥಾನದ ಪ್ರಾಂತಗಳಲ್ಲಿನ ಕಬ್ಬಿನ ಸಾಗುವಳಿ ಮೊದಲಾದುದನ್ನು ತಿಳಿದುಕೊಂಡು ಬರುವುದಕ್ಕಾಗಿ ಇಂಡಿಯಾ ಸರ್ಕಾರದವರ ದ ವ್ಯವಸಾಯದಿಂದ ಹೋಗಿದ್ದ ಅನುಭವಶಾಲಿಗಳೊಬ್ಬರು ಬೆಲ್ಲವನ್ನು ಮಾಡುವ ಕಾರ್ಖಾನೆಗಳಲ್ಲೇ ಈ ಸಕ್ಕರೆಯ ಕೈಗಾರಿಕೆಯನ್ನು ಆರಂಭಿಸುವುದು ಯುಕ್ತವೆಂತಲೂ, ಈ ಬೆಲ್ಲದ ದಂಡೆಯುಗಳಲ್ಲಿ ಅನುಕೂಲವಾಗಿ ಕೆಲಸವು ಸಾಗುತ್ತಿದ್ದರೆ ದಿನಕ್ರಮೇಣ ಸಕ್ಕರೆಯು ಪರಿಶುಭ್ರತೆಯ ವಿಷಯವಾಗಿ ವಿಚಾರವನ್ನು ಮಾಡಿಕೊಳ್ಳಬಹುದೆಂತಲೂ ಅವರು ಅಭಿಪ್ರಾಯಪಡುತ್ತಾರೆ. ಇಂಥಹ ಯಂತ್ರಶಾಲೆಗಳ ನಮ್ಮ ನಾಡಿನ ನೆಲದಲ್ಲಿ ಸ್ಥಾಪಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಬಿ[illegible]

ಕಾಟನ್ ಮಿಲ್ಲುಗಳ ಬಗ್ಗೆ ದಿನದಿನಕ್ಕೆ ಅಭಿವೃದ್ಧಿಯಾಗುತ್ತಿರುವ ಕಾರ್ಖಾನೆಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಗಾರರಿಗೆ ಮುತ್ತಿಗೆ ಹಾಕಿ ಅವರಲ್ಲಿ ಕೆಲವನ್ನು ಹೇಳಿದರು. [illegible] ಕೊಂಡರು ಹತ್ತಿಗೆ ಅನುಕೂಲಗಳು [illegible]

[illegible] ಯನ್ನು [illegible]

[illegible] ಸಂಬಂಧ [illegible]

[illegible]

ತ್ತಮವಾದ ಲಾಭವು ಮತ್ತು ಸ್ವಭಾವದ ಕ್ರಮಕ್ರಮವಾಗಿ ಸಕ್ಕರೆಯನ್ನು ಪರಿಶುಭ್ರಗೊಳಿಸುವ ಯಂತ್ರಗಳನ್ನೂ ಸ್ಥಾಪಿಸಿಕೊಳ್ಳಬಹುದು.

ಹತ್ತಿಯ ಯಂತ್ರಾಭ್ಯಾಸಗಳು.

ನಮ್ಮ ದೇಶದ ದೊಡ್ಡ ಯಂತ್ರೋದ್ಯೋಗಗಳಲ್ಲಿ ಹೊಂಬಾಯಿಯಲ್ಲಿರುವ ಹತ್ತಿಯ ಕಾರ್ಖಾನೆಗಳೂ ಬಂಗಾಳದ ಸೆಣಬಿನ ಗಿರಣಿಗಳೂ ಮುಖ್ಯವಾದವುಗಳು. ನೆಯ್ಗೆ ಪದಾರ್ಥಗಳ ಉತ್ಪತ್ತಿಯು ಕ್ರಮಕ್ರಮೇಣ ಹೆಚ್ಚುತ್ತಲಿದೆ. ಇವುಗಳಲ್ಲಿ ಒಳ್ಳೆಯ ನಾಜೂಕಾದ ಪದಾರ್ಥಗಳನ್ನು ತಯಾರಿಸುವುದಕ್ಕೆ ಅಲಕ್ಷ್ಯತೆಯು ನಡೆಯುತ್ತಿದೆ. ಅಮೇರಿಕಾದೇಶದ ಹತ್ತಿಯು ಇಲ್ಲಿಗೆ ವಿಶೇಷವಾಗಿ ಬಂದಿಳಿಯುತ್ತಿರುವುದರಿಂದಲೇ ಇಲ್ಲಿ ಹೆಚ್ಚು ನಯವಾದ ನೂಲನ್ನಿಳಿಸುವುದಕ್ಕೆ ಅವಕಾಶವಾಗುತ್ತದೆ. ಕಳೆದ ೧೦ ವರ್ಷಗಳ ಕಾಲದಲ್ಲಿ ಈ ದೇಶದ ನೆಯ್ಗೆಯ ಪದಾರ್ಥಗಳ ಉತ್ಪತ್ತಿಯು ದ್ವಿಗುಣವಾಗಿ ಹೆಚ್ಚಿದೆ. ಆದರೆ ಅನ್ಯದೇಶದಿಂದ ಬರುತ್ತಿರುವ ನಯವಾದ ನೆಯ್ಗೆಯ ವಸ್ತುಗಳು ಬರುವುದು ನಿಂತು ಹೋಗುವುದಿಲ್ಲ. ಬಳಿಯ ಬಟ್ಟೆಗಳನ್ನು ಬಳಸುವ ಮಾದರಿ ಸರಕುಗಳನ್ನೂ ನಮ್ಮ ದೇಶದಲ್ಲಿ ಸ್ವಲ್ಪವಾಗಿಯೇ ಇಳಿಸುತ್ತಿರುವುದರಿಂದ ನಮಗೆ ಹೊರಗಿನಿಂದ ಅವುಗಳು ವಿಶೇಷವಾಗಿ ಬರುವುದಕ್ಕೆ ಅವಕಾಶವಾಗಿದೆ. ನಾವು ಸ್ವಂತ ಉದ್ಯೋಗಗಳಿಗಾಗಿ ಅನ್ಯದೇಶಗಳನ್ನು ವಲಂಬಿಸಿರುವ ಪರ್ಯಂತರವೂ, ನಮ್ಮ ಕೈಗಾರಿಕೆಗಳಿಗೆ [illegible] ರಾಜಕೀಯ ಜಾತೀಯ ನಮ್ಮ ನಾಡು ಬರಿಯು ಕೊಳ್ಳಗೆ ಹಾಗುವವರೇನೂ, ಅಮೇರಿಕಾ ಜಪಾನು ದೇಶಗಳಲ್ಲಿನ ತಡಕೇಡು ಹೊಂದ ಹತ್ತಿಯನ್ನು ನಮ್ಮ ದೇಶದಲ್ಲಿ ಬೆಳೆಯದಿರುವವರೆಗೂ, ಈ ನೆಯ್ಗೆಯ ಕೆಲಸದಲ್ಲಿ ಮಾಂಚೆಸ್ಟರಿನೊಡನೆ ಆಗಲಿ ಅಥವಾ ಆ ತೆರದ ಮಹತ್ವದ ದೇಶದೊಡನೆ ಆಗಲಿ ನಾವು ಸರಿದೂಗಲಾರೆವು. ಇದೇ ಸಮಯದಲ್ಲಿ ನಮ್ಮ ಯಂತ್ರಶಾಲೆಗಳೊಳಗೆ ನಿರ್ಮಿಸಲ್ಪಡುವ ಬಟ್ಟೆಗಳ ಮೇಲೆ ವಿಧಿಸಲ್ಪಡುತ್ತಿರುವ ಸುಂಕದ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಅದೇನೆಂದರೆ ಸರ್ಕಾರದ ಆದಾಯವನ್ನು ವೃದ್ಧಿಪಡಿಸಿಕೊಳ್ಳುವ ಉದ್ದೇಶದಿಂದ ಈ ಬಟ್ಟೆಗಳ ಮೇಲೆ ಸುಂಕವನ್ನು ಹಾಕುತ್ತಿರುವರೇ ಹೊರತು ನಮ್ಮ ದೇಶದ ನೆಯ್ಗೆಯ ಉದ್ಯೋಗವನ್ನು ಸಂರಕ್ಷಿಸುವುದಕ್ಕಲ್ಲ.

ಇಂಗ್ಲೆಂಡಿನಲ್ಲಿ ಬೆಳೆಯುವ ಗೋಧಿಗೆ ಅಲ್ಲಿ ಸುಂಕವಿಲ್ಲ. ಆದರೆ ಆ ದೇಶಕ್ಕೆ ಹೊರಗಿನಿಂದ ಬರುವಂಥ ಆ ಸರಕಿನ ಮೇಲೆ ೨ ಆಣೆಯಂತೆ ಸುಂಕವನ್ನು ಹಾಕಿರುವರು. ಹೀಗೆ ಇಂಗ್ಲೆಂಡಿನಲ್ಲಿ ಮಾಡುತ್ತಿದ್ದರೂ, ಮಾಂಚೆಸ್ಟರಿನ ಯಂತ್ರಶಾಲಾಧಿಕಾರಿಗಳು ಬಲಾತ್ಕರಿಸಿದ ಕೂಡಲೇ ಭರತಖಂಡದಲ್ಲಿ ನೆಯ್ಯಲ್ಪಡುವ ಬಟ್ಟೆಗಳ ಮೇಲೆ ಸುಂಕವನ್ನು ವಿಧಿಸುವುದಕ್ಕೆ ಅಂಗ್ಲಪ್ರಭುತ್ವದವರು ಇಂಡಿಯಾ ಸರ್ಕಾರದವರನ್ನು ನಿರ್ಬಂಧಗೊಳಿಸಿದರು. ಕೇವಲ ಅನ್ಯಾಯವಾಗಿ ಬಲಾತ್ಕಾರದಿಂದ ವಿಧಿಸಲ್ಪಟ್ಟಿರುವ ಈ ಸುಂಕವನ್ನು ತೆಗೆದುಹಾಕಬೇಕೆಂದು ನಿರಂತರ ಪ್ರಯತ್ನಗಳು ಹೇಗೆ ನಡೆಯುತ್ತಿರುವವೋ ನಾವೂ ಹಾಗೆಯೇ ಕೋರುತ್ತೇವೆ. ಇದನ್ನು ತೆಗೆಯುವುದರಿಂದ ದೇಶದ ಆದಾಯವು ತಗ್ಗಿಹೋಗುವುದೆಂದು ಪ್ರಭುತ್ವದವರು ಆಕ್ಷೇಪಿಸುತ್ತ ಯಾವುದಾದರೂ ಒಂದು ನಿಧಾನವಾಗಿ ತಪ್ಪಿಸಿಕೊಳ್ಳುತ್ತಿದ್ದಾರೆ. ಕಂದಾಯವನ್ನು ಸಲ್ಲಿಸುವವರಿಗೆ ಕೂಡ ವಿಶೇಷ ಕಷ್ಟ? [illegible] ಸರ್ಕಾರದ ವೆಚ್ಚಗಳನ್ನು ಕಡಿಮೆ ಮಾಡುವ ಸಾಧನಗಳನ್ನು [illegible] ಸರ್ಕಾರದ ಕೆಲಸಗಳಲ್ಲಿ ಮಿತವ್ಯಯವನ್ನು ಮಾಡಿಕೊಳ್ಳಲು ಸಾಧ್ಯವಾಗದೆ ಹೋಗಲಾರದು. ಇವುಗಳನ್ನು ವಿಧಿಸುವುದರಿಂದ ನೆಯ್ಗೆಯ ಬಟ್ಟೆಗಳನ್ನು ವಿಶೇಷವಾಗಿ ಅಬಿವೃದ್ಧಿ ಹೊಂದುವ ನಮ್ಮ ಕೈಗಾರಿಕೆಗೆ ನಷ್ಟವೇನೂ ಉಂಟಾಗುವುದಿಲ್ಲವೆಂದು ಕೆಲವರಿಂದ ವಾದಿಸಲ್ಪಡುತ್ತಿದ್ದರೂ ಇಂಥಹ ಕಂದಾಯ ಭಾರವು ಇದರ ಮೇಲೆ ನಿರಂತರ ಇಲ್ಲದೆಯೇ ಇದ್ದರೆ ಈ ಕೈಗಾರಿಕೆಯು ಇನ್ನೂ ವಿಶೇಷಾಭಿವೃದ್ಧಿಯನ್ನು ಹೊಂದಲು ಎಷ್ಟು ಅವಕಾಶವಾಗುವುದೋ ಅದನ್ನು ಯೋಚಿಸಬೇಕಾಗಿದೆ.

ರಾಸ್ಯಕಶಸ್ತ್ರ. ತೊಗಲಿನ ಹದಮಾಡುವ ಯಂತ್ರಶಾಲೆಗಳೂ, ಕಬ್ಬಿಣದ ಕಾರ್ಖಾನೆಗಳೂ, ಗೋಂದಿ ಬೇಲಗಳನ್ನು ತಯಾರು ಮಾಡುವ ಕಾರ್ಖಾನೆ ಮೊದಲಾದವುಗಳೂ ನಮ್ಮಲ್ಲಿ ಅಭಿವೃದ್ಧಿಗೊಳ್ಳುತ್ತಲೇ ಇವೆ. ವಿದೇಶದಿಂದ ಕೃತ್ರಿಮವಾದ ನೀಲಿಯು ನಮ್ಮ ದೇಶಕ್ಕೆ ಬರುತ್ತಿರುವುದರಿಂದ ನಮ್ಮ ದೇಶದ ನೀಲಿಯ ಕೈಗಾರಿಕೆಯು ಕ್ಷೀಣಿಸಿಹೋಗುತ್ತಿದೆ. ಕೃತಕ ದ್ರವ್ಯಗಳು ಬರುತ್ತಿರುವ ಪ್ರಕೃತಿಜನ್ಯದಿಂದ ಆ[illegible] [illegible] ಬರುತ್ತಿರುವ [illegible] ನೀಲಿ [illegible]

[illegible]

[illegible]

ಚಂದಾದಾರರಿಗೆ ವಿಜ್ಞಾಪನೆ.

ಮೈಸೂರ್ ಸ್ಟಾರ್ ಪತ್ರಿಕೆಯ ಚಂದಾದವಧಿಯು ಪೂರೈಸಿರುವವರಿಗೆಲ್ಲಾ ಮುಂದಾಗಿ ಕಾಗದವನ್ನು ಬರೆದಿದ್ದಾಗ್ಯೂ ಹಣವನ್ನು ಕಳುಹಿಸದೆ ಇರುವವರಿಗೆಲ್ಲಾ ಪತ್ರಿಕೆಗಳು ವಿ ಪಿ ದ್ವಾರಾ ಕಳುಹಲ್ಪಡುತ್ತಿರುವುದಾದುದರಿಂದ, ಚಂದಾದಾರರೆಲ್ಲರೂ ಈ ಪತ್ರಿಕೆಯ ಪುರೋಭಿವೃದ್ಧಿಯ ಮೇಲಿನ ಪೂರ್ಣಾಭಿಮಾನವನ್ನಿಟ್ಟು ಹಣವನ್ನು ಪ್ರೇಷಿಸುವರಿಗೆ ಸಲ್ಲಿಸಿ, ವಿ ಪಿ ಯನ್ನು ತೆಗೆದುಕೊಂಡು ಋಣಮುಕ್ತರಾಗದೆ ಸಾಮಾನ್ಯರಂತೆ ಹಿಂದಿರುಗಿಸಲಾರರೆಂದು ನಾವು ಪೂರ್ಣವಾಗಿ ನಂಬಿರುತ್ತೇವೆ ಇಷ್ಟರಮೇಲೂ ವಿ ಪಿ ಯನ್ನು ಹಿಂದಿರುಗಿಸುವಂತಹ ಮಹನೀಯರುಗಳ ಹೆಸರು ಇತರರ ತಿಳುವಳಿಕೆಗಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು

ಮೈಸೂರ್ ಸ್ಟಾರ್

ಸೆ॥ ೧೯೧೪ನೆಯ ಜನವರಿ ತಾ॥ ೧೨ ನೆಯ ಸೋಮವಾರ

ದಕ್ಷಿಣಾಫ್ರಿಕಾ ಭಾರತೀಯರ ಸ್ಥಿತಿ

ಪ್ರತಿವರ್ಷ ೧೫ ೨೦ ಹುಡುಗರನ್ನು ತೆಗೆದುಕೊಳ್ಳುವುದರಲ್ಲಿ ಬರುವುದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತು ಸೂಟಿಗಳು ದೊರೆಯುವುವು. ಇದಲ್ಲದೆ ವರ್ಷಕ್ಕೆ ಭರತಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ ಮತ್ತೊಮ್ಮೆ ಬೇಸಗೆ ಸಮಯಕ್ಕೆ ಒಂದೊಂದು ತಿಂಗಳ ಸತತ ಸೂಟಿಗಳು ಸಿಗುವುವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವುದರಲ್ಲಿ ಬರುವುದು. ಈ ಶಾಲೆಯ ಮುಖ್ಯ ಉದ್ದೇಶವೇನೆಂದರೆ- ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಂದೆತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವುದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ ನೆಯ ತಾರೀಖಿನೊಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು. ಅರ್ಜಿ ನಿಕಾಲೆ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ ಹೆಚ್ಚು ಸವಲತ್ತು ಸಿಗುವುದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ, ಇರುವ ಊರು, ತಾಲ್ಲೂಕು, ಮತ್ತೂ ಜಿಲ್ಲಾ ಇಂತೀದ ಹೊಲವು ಎಷ್ಟು? ಅದು ಎಲ್ಲಿರುವುದು? ಸರ್ಕಾರಕ್ಕೆ ದರವರ್ಷ ಕೊಡಬೇಕಾದ ಕಂದಾಯ ಗೇಣೀಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವುದೇ? ಹೇಗೆ? ಮತ್ತೂ ಹೊಲಗಳನ್ನು ತಾನೆಯಿಂದ ಮಾಡುವರೋ ಹೇಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತ್ತಿಸಿ ಅರ್ಜಿ ಕಳಿಸಬೇಕು. ಮತ್ತೂ ಅರ್ಜಿಯನ್ನು ಶಾಲೆಗೆ ಒಬ್ಬ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯು ... ತಮ್ಮ ಪಾಲಕರ ಕಡೆಯಿಂದ ಒಂದು ಕರಾರು ಪತ್ರ ತಕ್ಕೊಂಡು ಅರ್ಜಿ ಲಗತ್ತ ಇಟ್ಟು ಕಳಿಸಬೇಕು.

ಸಹಿ ಟಿ ಗಲ್ಬರ್

ಡಿ ಪ್ರಿನ್ಸಿಪಾಲ್ ಆಗ್ರಿಕಲ್ಚರ್ ಕಾಲೇಜು, ಕೃಷಿಭಾಗ

ಧಾರವಾಡ

ನ್ಯಾಯದರ್ಪಣ. 12

... ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನು ಮತ್ತೂ ರೂಲ್ಸ್ ಮನೆಗಳನ್ನು ಸಿದ್ಧಮಾಡಿಕೊಳ್ಳತಕ್ಕ ಕಾನೂನೂ, ಅದರ ಸಂಬಂಧರತಕ್ಕ ನಾನಾವಿಧಗಳಾದ ಡಸ್ತಾವೇಜು ವಗೈರೆಗಳ ಅನೇಕ ನಮೂನೆಗಳೂ ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ.

ಬೆಲೆ ರೂ 1 8—0 ವಿ ಪಿ ಮೂಲ್ಯ 1—12—0

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ಶ್ರೀಬಸವೇಶ್ವರ

ಶ್ರೀ ಶಂಕರರ ದ್ವಿತೀಯಾವತಾರರಾದ ಶ್ರೀ ಕಲ್ಯಾಣದ ಬಸವೇಶ್ವರ ಇವರ ಪ್ರಧಾನತೆ ವಸ್ತ್ರಧರಿಸಿ ಧ್ಯಾನಮಾಡಿರುವ ಬಾಸ ಫೋಟೋ (ಇವು ರಾಮೋತಿಗಳ ಚಿತ್ರದಂತೆ ಕಣ್ಣಿಗೆ ವಿಶೇಷವಾದ ಸೌಂದರ್ಯದಿಂದ ಸಿಕ್ಕುತ್ತವೆ.) ಕ್ರಯ ಫುಲ್ಲ್‌ಸೈಜ ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೆಟ್ ಸೈಜ ಬಣ್ಣದ್ದು ॥। ರೂ ಸಾದಾ ॥ ರೂ.

ಶ್ರೀ ಜಗದ್ಗುರು ಚಿತ್ರದುರ್ಗಸ್ವಾಮಿಗಳ ಸುಂದರ ಫೋಟೋ ಕೈಬಣ್ಣದ್ದು ॥ ರೂ. ಶ್ರೀಗಳ ಸೊಲ್ಲಾಪುರದ ಸಂಚಲನೆಯುಕ್ತ ಅದ್ಭುತಾಲಂಕೃತ ಫೋಟೋ ೧ ರೂ. ಸೊಲ್ಲಾಪುರದ ವ್ಯಾಸನಪೀಠ ಸಮೇತವಾದ ಉತ್ಸವದ ಫೋಟೋ ೧ ರೂ. ಶ್ರೀ ಶಿವಯೋಗಮಂದಿರದಲ್ಲಿ ಯೋಗಾಭ್ಯಾಸ ಮಾಡುತ್ತಿರುವ ಶಿವಯೋಗಿಗಳ ಗ್ರೂಪು ಫುಲ್ಲ್‌ಸೈಜು ೧ ರೂ ಕ್ಯಾಬಿನೆಟ್ ॥ ರೂ. ಅಥಣಿ ಶಿವಯೋಗಿ ಮುಂತಾದ ಸತ್ಪುರುಷರ ... ಸಿಗುತ್ತವೆ. ಕ್ರಯ ॥।, ೧।, ...

ಸ್ಟ್ಯಾಂಪ್ ಕಳುಹಿ ಕ್ಯಾಟಲಾಗನ್ನು ತರಿಸಿಕೊಳ್ಳಿ.

ಊರೂಟಿಗೆ ಮಾರಾಟಕ್ಕೆ ಇದೆ.

ಜಾಲಗಿ ಗಂಗಸಾ..

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ [illegible] ಕೆಲ್ಲವಾಸನೆಯಿಂದ ಎದು, ನೆತ್ತಿ, ನೆಗಡಿ, [illegible] ತಲೆ ಸೋರುವುದು [illegible] ಗಿದ್ದರೂ ತಪ್ಪದೆ ಗುಣವಾಗುತ್ತದೆ [illegible] ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದ [illegible] ವಾಸನೆಯು ಘಮಘಮಿಸುತ್ತದೆ [illegible]

ಉತ್ತಮಗಂಧ ನಸ್ಯದಪುಡಿ

[illegible]

ಮುಖವೋಲ್ಲಾಸಿನೀ ಹೂಗೀಸೂಪ್ಪು

[illegible]

ವಿಳಾಸ — [illegible]

8 [illegible]

ದೊಡ್ಡ ಕಂಪನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟ, ರುದ್ರಾಕ್ಷಿ ಮೊದಲಾದ ಅಪೂರ್ವವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ [illegible] ಪುಟಗಳುಳ್ಳ [illegible] ಕ್ಯಾಟಲಾಗನ್ನೂ, ವಿಶ್ವೇಶ್ವರನ ಪಟಗಳನ್ನೂ ಇನಾಮಾಗಿ ಕಳುಹಿಸುವೆವು

ವಿಳಾಸ — ಎಸ್. ಯೂ. ಎನ್. ಮತ್ತು ಕಂಪನಿ, ಬನಾರಿಸ್ ಸಿಟಿ (ಕಾಶೀ)

ಅಗ್ಗವಾದ ಸಾಮಾನುಗಳು.



ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ [illegible] ಕಾಶ್ಮೀರ ಶಾಲು, ಶೀರೆ, ಪೇಟ, ನೇಪಾಳ ಕಸ್ತೂರಿ, [illegible] ಮೊದಲಾದ ಅಪೂರ್ವವಾದ [illegible]

[illegible] ರುದ್ರಾಕ್ಷಿ [illegible]

ವಿಳಾಸ — [illegible] ರುದ್ರಾಕ್ಷಿ ಅಂಡ್ ಕಂಪನಿ

13 ಬನಾರಸ್ ಸಿಟಿ

ದಿ ಜನರಲ್ ಏಜನ್ಸಿ, ಮೈಸೂರು.

[illegible]

[illegible] 11

[illegible]

24 [illegible]

ಬಿ. ವಿ. ಪಂಡಿತರ

ತಾರಕಾಮೃತ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್ ಸ್ವಾರಿ ಮಾಡುವವರು [illegible] ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಿದ್ದಾರೆ [illegible]

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ [illegible]

ಶ್ರೀಕರ ಕಸ್ತೂರಿ ಮಾತ್ರೆ

[illegible]

ವಿಳಾಸ — ಕೆ. ವಿ. ನಾರಾಯಣ [illegible]
ಮ್ಯಾನೇಜರ್, [illegible]
ಬಸವನಗುಡಿ

ಅತ್ಯಾಶ್ಚರ್ಯವಾದುದು! ಅಸಮಾನವಾದುದು!!

10 ಆರೋಗ್ಯಬೀಜದ ಖನಿಯು!!!

ಟಿ. ಸಿ. ಎನ್.

ಪರಿಮಳಾನಂದನಸ್ಯ.

[illegible]



[illegible]

[illegible]

ರಿಯಲ್ ಗೋಲ್ಡ್ ಪ್ಲೇಟೆಡ್ ಜುಬಿಲಿ ವಾಚ್.



[illegible]

ವಿಳಾಸ—ಟಿ. [illegible]

ವಿದ್ಯಾರ್ಥಿ ನಿಲಯ

ವರಿ ಸೆಪ್ಟೆಂಬರು ತಿಂಗಳಿನಲ್ಲಿ ಕೂಡಿದ, ಆ ಸೇವಾ ಸಂಘದ ವಾರ್ಷಿಕೋತ್ಸವದ ಕಾರ್ಯಕ್ರಮ [illegible] ಕ್ರಿಯೆಗೆ ಸಿದ್ಧವಾಗಿರುವುದು. ಈ ಆರಕ್ಕೂ [illegible] ಗಳು ಒಳ್ಳೆಯ ಅಪತಿವ್ರವಾಗಿಯೂ, ಆಡ್ಯಕರವಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರ ಸ್ತಂಭಗಳೆಂದೆನಿಸುವ ಪ್ರತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಕ್ಕಿಯಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ವಿಳಾಸದೊಂದಿಗೆ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಸೇಕ್ರೇಟರಿ, ಸ್ವಾಗತ ಕಮಿಟಿ,
ಆ ಸೇವಾ ಮಹಾಸಭೆ ನಿಡಸೋಶಿ

ವ್ಯಾಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾದ ಎಲ್ಲಾ ರಾಗುತ್ತಿರುವ ಊದುಬತ್ತಿಗಳು ಸೇರು ೧ಕ್ಕೆ ೦ [illegible] ೧ ರೂ ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾದಿಗಂಧ ಅಥವಾ ಅರಗಜ, ಪುನುಗು, ಜವಾಜಿ, ದಶಾಂಗ, ಧೂಪದ ಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತು ಶೃಂಗಾರವಸ್ತುಗಳೂ ಮೊದಲಾದವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ಇಗೋ ಕೆಳಗಿನ ವಿಳಾಸಕ್ಕೆ ಆರ್ಡರನ್ನು ಕೊಡಬೇಕು. ಇನ್ನು ಹೆಚ್ಚು ವಿವರಗಳನ್ನು ತಿಳಿಯಬೇಕಾದರೆ ಕ್ಯಾಟಲಾಗನ್ನು ತರಿಸಿ ನೋಡಬಹುದು. 32

ವಿಳಾಸ:- ಎಸ್. ಕಳ್ಳಪ್ಪ, ಊದುಬತ್ತಿ ಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ.

ಓದಿರೋದಿರಿ!!!

೧೨ ತಿಂಗಳ ಭವಿಷ್ಯತ್ತು.

ಅಯ್ಯಾ ಲೋಕಾಭಿಮಾನಿಗಳೇ! ಪ್ರತಿಯೊಂದು ತಿಂಗಳಲ್ಲಿ ಜರಗುವ ಭವಿಷ್ಯತ್ತುಗಳನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರು ತಮ್ಮ ವಯಸ್ಸು ಹೆಸರನ್ನು ಮಾತ್ರ ಬರೆದು ಕಳುಹಿಸಿದರೆ ನಾವು ತಮ್ಮ ಪತ್ರ ಬಂದ ದಿನದಿಂದ ಒಂದು ವರ್ಷ ವರೆಗೂ ಪ್ರತಿತಿಂಗಳಲ್ಲಿಯೂ ಉಂಟಾಗುವ ಲಾಭ-ಸುಖ-ದುಃಖ-ಕಷ್ಟ-ನಷ್ಟ ದೇಹಪೀಡೆ-ಗ್ರಹಚಾರ ಹೀಗೆ ಪರಿಹಾರವಾಗುವುದಕ್ಕೆ ಮಾಡುವ ಶಾಂತಿಕ್ರಮವನ್ನು ಸಹ ಬೆನ್ನಾಗಿ ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ನಿಮ್ಮ ಅಪೇಕ್ಷೆಯು ಪೂರ್ಣವಿರಲಿ. ಪೋಸ್ಟೇಜ್ ಹಾಸಲು ಪ್ರತ್ಯೇಕ. ೧೨ ತಿಂಗಳ ಭವಿಷ್ಯತ್ತಿನ ಕಿಮ್ಮತ್ತು ರೂ ೧-೦-೦ ನಮ್ಮಲ್ಲಿ ಜ್ಯೋತಿಷಸಂಬಂಧವಾದ ಪುಸ್ತಕಗಳೆಲ್ಲವೂ ದೊರೆಯುತ್ತವೆ.

ಎಚ್. ಎಂ. ಸಿದ್ಧಾಂತಿಗಳು,
20 ಗಡೇಕಟ್ಟಿ, ಬಳ್ಳಾರಿ.

19 ಸಚಿತ್ರ ತೆನಾಲಿರಾಮಕೃಷ್ಣ ಕಥೆಗಳು ರೂ. ೧-೪-೦ (೨೫೦ ಪುಟ)

ಅಂಚೆ ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೪-೦. (೨೩೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾತ್ಸರ್ಯವು ಬೇಕಾದರೆ, ವಾಕ್ಚಾತುರಿಯೊಳಿಪ್ಪವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂಬ ಅಪೇಕ್ಷೆಯಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನು ಕಲಿಸಿದರೆ, ಉತ್ಸಾಹಶಕ್ತಿ ಉಲ್ಲಾಸವು ಬಂದಿದ್ದರೆ ಬಯಸಿದ್ದು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೪೦ ಪುಟಗಳಿಂದ ಕೂಡಿದ ೬೦ ಕಥೆಗಳನ್ನು ಚಿತ್ರಗಳಿಂದ ಸಿಂಗರಿಸಿ ಪುಸ್ತಕವಾಗಿದೆ. ಬೆಲೆ ರೂ ೧ ಅ ೮ ಅಂಚೆಹಾಸಲು ೩ ಆಣೆ. ಇಂಗ್ಲೀಷು ಕನ್ನಡ ಸಂಸ್ಕೃತ ತೆಲುಗು ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ:- ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಚಿತ್ರ ಬೃಹಸ್ಪತಿ ಕಥೆಗಳು

ಹುಡುಗರುಗಳಿಗೂ ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರ ಸಮ್ಮತವಾದ ಕಥೆಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಸೇರಿರುವುವು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಸ್ವಧರ್ಮಾಚರಣೆಯಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತಶಾಸ್ತ್ರಗಳನ್ನೂ ಬ್ರಹ್ಮಜ್ಞಾನ ನಿರ್ಣಯ ಮುಂತಾದ್ದನ್ನೂ ತಿಳಿಸುವುದು (3) ಸ್ತ್ರೀಯರ ಪಾತಿವ್ರತ್ಯಧರ್ಮ, ಪರೋಪಕಾರ ಧರ್ಮ, ಲೋಕಾನುಭವ ವಿವಿಧನೀತಿ ಮುಂತಾದ ಗುಣಗಳನ್ನು ಬೋಧಿಸುವುದು (4) ಸನಾತನಸಂಸ್ಕೃತವಾಗಿ ಕಥಾರೂಪದಲ್ಲಿ ಚಿತ್ರ ಕಥಾ ಚಮತ್ಕಾರ ರೋಚಿತವಾಗಿ ಸುಲಭಕ್ಕೆ ಓದುವ ರೀತಿಯಲ್ಲಿ ಹಿರಿಯರು ಕಿರಿಯರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು (5) ಅಲ್ಲಲ್ಲಿ ಕಥಾನುಕೂಲವಾದ ಚಿತ್ರಗಳನ್ನು ಚಿತ್ರಿಸಿ ಚಿಕ್ಕ ವಯಸ್ಕರಿಗೂ ಮನೋರಂಜಕವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ ಒಂದಕ್ಕೆ ೧-೦-೦; ಅಂಚೆ ಹಾಸಲು ೪ ಆಣೆ

(೩೬ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತ ವು. (೯೬೦ ಪುಟಗಳು)

ಇದರ ಕ್ರಯ ಪ್ರತಿ ಒಂದಕ್ಕೆ ರೂ ೪-೦-೦; ಅಂಚೆ ಹಾಸಲು ೧೦ ಆಣೆ

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ. ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸಲ್ಪಡುವು

36 ಸರ್ವ ವಿಳಾಸ:- ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ, ಬುಕ್ಕು ಸೆಲ್ಲರ್ಸ್, ಬೆಂಗಳೂರು ಸಿಟಿ

ಧರ್ಮ ವನಸ್ಪತಿಯಿಂದಲೇ ತಯಾರಿಸಿದ

ಧಾತುಪೌಷ್ಟಿಕ ಲೇಹವು.

19

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ 'ಲೇಹ' (ಗುಣವಾಗದಿದ್ದರೆ ಹಣ ಪರತ !!) ದೇಹ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತಪಿತ್ತಗಳುಳ್ಳವರು, ರಕ್ತಪುಷ್ಟಿ ಕಡಿಮೆಯಾದವರು, ತೃಷೆಯುಳ್ಳವರು, ದಮ್ಮುಳ್ಳವರು, ಕೆಮ್ಮುಳ್ಳವರು, ಕಫ ಉಬ್ಬಸದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಜ್ವರಬಾಧಿತ ರೋಗಪೀಡಿತರು, ಧಾತುಹೋಗುವವರು, ಅಜೀರ್ಣವಾಗುವವರು, ದೇಹದ ಮೇಲೆ ಇರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನರಿಂದ ದೂರವಾಗುವುದು. ತೆಳಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ವ ತೋತ್ಸಾಹಕ, ಗರ್ವ, ಬಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬೆಕ್ಕೆಗಳು, ಹುಣ್ಣುಗಳು, ಚಿತ್ತದ ರೋಗಗಳು, ಕಜ್ಜಿತುರಿ, ಚರ್ಮರೋಗ, ಮುಂತಾದವು ಅತಿ ಶೀಘ್ರದಲ್ಲಿ ಗುಣವಾಗಿ ಶರೀರಕ್ಕೆ ನಿರೋಗತ್ವವೂ, ಶಾಂತಿಯೂ ರಕ್ತಿ ಪುಷ್ಟಿ ಪೂರ್ಣಶಕ್ತಿಯೂ ಉಂಟಾಗುತ್ತದೆ. ಇದು ಮನುಷ್ಯನಿಗೆ ೮೦ ತೊಲೆಯಿಂದ ೪೦ ತೊಲೆ ಉಪಯೋಗಿಸಬೇಕಾಗುವದು. ಕಿಮ್ಮತ್ತು ೪೦ ತೊಲೆಗೆ ರೂ ೩-೪-೦ ೪ ತೊಲೆಗೆ ರೂಪಾಯಿ ೩ ಹಾಸಲು ಪ್ರತ್ಯೇಕ. ಪ ದಾವಲು ಓರ್ಡರ್ ಮೇರೆ ಅನುಭವ ಪತ್ರಿಕೆ ಔಷಧ ಸಂಗಡ ಸ್ಲೇರವಾನಿಸಿ ವುದು.

ವಿಳಾಸ:- ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರ ಕನ್ನಡ

೧೯೨೬ ನೆಯ ಇಸವಿ ಏಪ್ರಿಲ್ ತಾ|| ೧೩ ರಿಂದ ೧೯೨೬ ನೆಯ ಏಪ್ರಿಲ್ ತಾ|| ೧೯ ರವರೆಗೆ ನಡೆಯುವ ಶಾಲಿವಾಹನಶಕೆ ೧೮೪೮ ನೆಯ ಅನಂದನಾಮ ಸಂ|| ರ ಚೈತ್ರ ಬ|| ೫ ರಿಂದ ಚೈತ್ರ ಬ|| ದಶಮಿ ವರೆಗಿನ ಪಂಚಾಂಗ.

ತಾ|	ವಾರ	ತಿ.	ಗಳಿಗೆ	ನಕ್ಷತ್ರ	ಗಳಿಗೆ.	ಟಿಪ್ಪಣಿ
13	ಸೋ	ತ	14 20	ವಿಶಾಖ	3 5	1
14	ಮಂ	ಚ	9 26	ಜ್ಯೇಷ್ಠ	57 3	2
15	ಬುಧ	ಪಂ	5 -21	ಮೂಲ	55-32	3
16	ಗುರು	ಷ	2 -14	ಪೂಷಾ	55- 1	4
17	ಶುಕ್ರ	ಸ	೦ - 7	ಉಷಾ	53-17	5
18	ಶನಿ	ನ	58 47	ಶ್ರವಣ	57-37	6
19	ಭಾ	ದ	6೦	ಧನಿಷ್ಠ	6೦	7

(1) ಚತುರ್ಥೀತಿಥಿ, ಸಂಕಷ್ಟಹರಗಣಪತಿವ್ರತಂ, ವಿಷುವತ್ಪುಣ್ಯಕಾಲ (2) ವತ್ಸರಾರಂಭ ಜಯಂತೀ (3) ಪಂಚಮೀತಿಥಿ (4) ಶ್ರೀರಂಗದಲ್ಲಿ ಚೈತ್ರೋತ್ಸವಾರಂಭ (5) ಸಪ್ತಮೀತಿಥಿ (6) ನವಮೀತಿಥಿ (7) ದಶಮೀತಿಥಿ

ಮೈಸೂರು [illegible] ಪಂಚಾಂಗಕರ್ತೃಗಳವರಿಂದ ಸ್ವಾಮಿ ಕಳಿಸಿದುದು [illegible]

ಲೋಕೋಪಕಾರ ಆಯುರ್ವೇದ ಪಂಡಿತರ ಸಿದ್ಧೌಷಧಗಳು 47



ಲೋಕೋಪಕಾರಕ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆ ಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಭಳಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಸೋತಿತ (ಭಾರ), ಮೈನಡುಕ, ಶೀತವಾತಗಳಿಂದಾದ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಬಿಕ್ಕಳಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ನಿಂದಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಒಳ್ಳೆ ಬೊಜ್ಜು ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ, ಬೇಗ ಜೀರ್ಣಗೊಳಿಸಿ, ಯಾವ ಕಾಯಿಲೆಯೂ ಬಾರದಂತೆ ಶರೀರಕ್ಕೆ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಕೊಡಿಸುತ್ತದೆ. ಸ್ತ್ರೀಯರ ಮುಟ್ಟಿನ ಶೂಲೆ, ಮಕ್ಕಳ ಎಲ್ಲಾ ಜ್ವರ, ಸ ಬ್ಬಿಯ ಕ, ಸ್ಮೃತಿಭ್ರಂಶಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಚಿಂತಿತವಾಗಿ ಜ್ಞಾನಿಗಳ ಸೂಚನೆಗೆ ಗುರಿಯಾಗುವುದಿಲ್ಲ. ಒಟ್ಟಿನಲ್ಲಿ ಶಕ್ತಿವರ್ಧಕವಾಗಿದೆ— ೩೦ ಮಾತ್ರೆಗಳುಳ್ಳ ಡಬ್ಬಿಗೆ ೮ ಆಣೆ; ೪ ಡಬ್ಬಿಗೆ ೧ ರೂ; ೧ ರಿಂದ ೧೦ ಡಬ್ಬಿವರೆಗೆ ಪೋಸ್ಟೇಜು ೪ ಆಣೆ.

ಪ್ರೈಮ್ವೆರಾಸವ (ಶುಷ್ಕಾತಿಸಾರ ಪದ್ಧತಿ)

ಮಲಬದ್ಧತೆ, (ಕೆಂಪುರೋಗ) ಶೀತಜ್ವರ, ಅಜೀರ್ಣಭೇದಿಗಳಿಗೆ ಈ ಪ್ರೈಮ್ವೆರಾಸವವು ಸಂಜೀವಿನಿಯಾಗಿದೆ. ಕ್ಷಯರೋಗದ ಜ್ವರ ತೀವ್ರವಾಗಿ ಕೊಡುವುದಕ್ಕಾಗುವಂತೆ ರೋಗದವರೊಳಗೆ ಕೆಲಸಮಾಡುತ್ತದೆ. ಬುದ್ಧಿಬಲವಾಗಿ ಇದರಲ್ಲಿ ಅಪ್ರಮಾಣ ಸೇರಿಲ್ಲ. ಜೊತೆಗೆ ರುಚಿಯಾದ, ಮತ್ತು ಕ್ಷಯ ಸಮ್ಮತ, ಈ ಔಷಧವನ್ನು ಕೊಟ್ಟು ಜೊತೆಯಲ್ಲೇ ಸೇರಿಸಿಟ್ಟರೆ ಗುಣ ತೋರುತ್ತದೆ. ಸಮಯದಲ್ಲಿ ಪ್ರಾಣಾಪಾಯ ತಪ್ಪಿಸಿ, ಜಿಂದಿನ್ಯೂಡಿನಿಂದ ಜಾಗ್ರತೆಯಿಂದ ನಿಮ್ಮಲ್ಲಿಟ್ಟರೆ. ಪ್ರತಿಯೊಂದು ಸಮಯದಲ್ಲಿ ಅನುಕೂಲಕರವಾದ ಔಷಧವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಾಗಿದೆ.

ಅನುಪಾನವನ್ನು ಚೀಟಿಯೊಡನೆ ಇರುವುದು. ಒಂದು ಬುಡ್ಡಿಯ ಬೆಲೆ. [illegible]

ಪೋಸ್ಟೇಜ್ ಪ್ರತ್ಯೇಕ.

ವಿಳಾಸ:— ಶ್ರೀ ಆಯುರ್ವೇದ [illegible] ಮೈಸೂರು

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಪ್ರ ವಾರ್ಷಿಕ ಚಂದಾ ೧—೦—೦

ಮಹಿಶೂರಪುರೀತಾರಾ ಪರಮಭಗತಲಜವಮಂಡಲಹಿತ್ಯೈಷಾ| ಘನಪಥಕೃತಾವತಾರಾ ಪಶ್ಯೈತ್ನಷ್ಟತ್ತಬೋಧರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೀವೋಧೀಮದ್ದಶೀಲನಾಕಲಿತಸಾದ್ಯಗ್ಭಾಲಪಾಲಂವಲಂ॥
ಸೀಮಾತೀತಯಶೋವಿಭ್ರಾಜಿತವಿಪುಲಂಸದ್ವೃತ್ತಮಾಲಾಕುಲಂ॥ ಶ್ರೀಮಂಟಿತ್ತಿಕೆಯಂ ರಧಾಪ್ಪೂರಕೆ ಗೌರೀಶಾನುಕಂಪೋಜ್ವಲಂ॥

ಅಂಚೆವೆಚ್ಚ ಸೇರಿ ೧—೧೪—೦

REGISTERED M No 134

ಸಂಪುಟ ೨೩) ಮೈಸೂರ್ ಸ್ಟಾರ್ ಸನ್ ೧೯೧೧ ನೆಯ ಇಸವಿ ಏಪ್ರಿಲ್ ತಾರೀಖು ೨೦ ನೆಯ ಸೋಮವಾರ. (ಸಂಚಿಕೆ ೧೬

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚ ಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.



12 ಈ ಲಾಗಾಯತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚ ಬೆಳ್ಳಿಯ ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿರುತ್ತೇವೆ

ಪ್ಯಾನ್ಸಿಸ್ಟೈಲ್ ಕ್ರಿಸ್ವ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8 0 ಪೋಸ್ಟೇಜು 0 1 0

ಈ ಲಾಗಾಯತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚ ಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ

ಮುಂಗಡವಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತಳಿಸಿಕೊಳ್ಳುವುದುತ್ತಮ

ತಯಾರಿ ಹೊಸತರಹ ! ಪದಾರ್ಥ ಅತ್ಯುತ್ತಮ !! ಬೆಲೆ ಬಹಳಸುಲಭ !!!

ಬಜಾರಿನಲ್ಲಿ ಸಿಕ್ಕುವ ಕಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ ಈ ಕೆಳಭಾಗದಲ್ಲಿ ಕಂಡ ನಮ್ಮ ಕಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ

"ನ್ಯಾಷನಲ್ ಬ್ಲೂಬ್ಲಾಕ್ ಇಂಕ್ ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨೦ ಔನ್ಸ್ ಅಂದರೆ ½ ಸೀಸೆ ಅತ್ಯುತ್ತಮವಾದ ಬ್ಲೂಬ್ಲಾಕ್ ಕಾಯಿಯಾಗುತ್ತೆ ಪೊಟ್ಟಣ ೧ಕ್ಕೆ ಕ್ರಯ ೦-೨-೦. ಒಂದು ಡಜನ್ ಪೊಟ್ಟಣಗಳಿಗೆ ೧ ೫ ೦ ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಮೆ ರವಾನಿಸಲಾಗುವುದಿಲ್ಲಾ

ಜೋಮಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲಾ ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚಪುಂಟಾಗುವುದು.

ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ಕ್ಕೆ ೦-೩-೦ ಪೋಸ್ಟೇಜು ಅಲಾಯಿದಾ

ವೇ|| ಶಿವಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಕೂಡ ಅತ್ಯವಶ್ಯಕವೇ ಕಾದ್ದು

೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಳಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮಂಚಸ್ಯ ಶಿವಭಕ್ತ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಕರ್ಯವುಳ್ಳ ಪುಸ್ತಕ ೧ಕ್ಕೆ ಕ್ರಯ ೦-೩-೦

೨) ಮನೋವಿಜಯ — ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೪-೦

೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ಕ್ಕೆ ೦-೩-೦

೪) ಮುಕ್ತಾಂಗವಕೆಂಡಮಾಲೆ— ಕ್ರಯ ಪ್ರತಿ ೧ಕ್ಕೆ ೦-೧-೦ ಪೋಸ್ಟೇಜು ಅಲಾಯಿದಾ

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಲ್ ಗಡಿಯಾರಗಳು.



ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆ ಸಮಯ

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಸಾಮಾನು ಕಾಣುವಂತೆ ೨ ಪಕ್ಕದ ಕ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾಗ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರು ಮಾಡಿರುವುದಲ್ಲದೆ ಮೇಲುಭಾಗದಲ್ಲಿ ಬಂಗಾರ ಬಣ್ಣದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧ ಘಂಟೆ ಹೊಡೆಯುತಕ್ಕ ಕ್ಲಾಕ್ ೧ಕ್ಕೆ ೮ ೪-೦

(೨) ಘಂಟೆ ಅರ್ಧ ಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೯ ೮ ೦

(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಸ್ವರಮಧುರಗಾನಮಾಡತಕ್ಕ ಕ್ಲಾಕ್ ೧ಕ್ಕೆ ೫ ೪ ೦

೪) ನಾವಿಷ್ಟಪಟ್ಟ ಘಂಟೆಗೆ ಸರಿಯಾಗಿ ಕಿವಿಗೆ ಸಂತಸವಾಗುವಂತೆ ಸ್ವರ-ಮಧುರಗಾನವಮಾಡತಕ್ಕ ಕ್ಲಾಕ್ ೫ ೪

ಕಾಗದ ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ಕೋರಿರೆ ತಿಳಿಸದೇ ಇರತಕ್ಕ ವಿಳಾಸಗಳಿಗೆ ನಾವು ಜವಾಬುದಾರರಲ್ಲ

೧೮. ವಿಳಾಸಗಳಿಗೆ ನಾವು ನಿಜಾ ಕೊಡುವುದಿಲ್ಲವೆಂಬಂತೆ ... ರವರ ಕಟ್ಟ

ಎಂ. ಎಸ್. ಸಿದ್ದಪ್ಪ ಅಂಡ್ ... ಕೃಷ್ಣರಾಜಮೊಹಲ್ಲಾ. ಮೈಸೂರು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಸಟೀಕ ಶಟಸ್ಥಲತ್ರಯ	೧—೦—
ಜರಪಾದಿಗಜಾಂಕುಶಾವಳಿ	೦—೪—೦
ಶಿವಪೂಜಾವಿಧಿ	೦—೪—೦
ಚಾರುಶೀಲೆ ಚರಿತ್ರೆ	೦—೪—೦
ಸಟೀಕ ನಂದೀವ್ರತ	೦—೮—೦
ಸಟೀಕ ವಿವಾಹವಿಧಿ	೦—೩—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಸೇರಿ.

ಹೊಸ ಪುಸ್ತಕಗಳು.

131

ಬಸವರಾಜವಿಜಯಂ— ಬೆಲೆ ೧ ೮-೦, ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶವಿಜಯಂ— ಬೆಲೆ ೧-೪-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು, ಷಟ್ಸ್ಥಲ ಕರಣಹಸುಗೆ ಮಂಟಪ ಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ಪದವರಸದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿರಂಜನ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಪಂಚಸೂತ್ರೀ— ಬೆಲೆ ೧ ರೂ ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಪಿಷ್ಟ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಾದಪ್ರಕರಣ ೧-೩-೦ ಶಂಕರಪುರಾಣಂ— ೧-೩-೦, ಸಟೀಕ ತತ್ವಪ್ರಕಾಶಿಕಾ ೩ ಆಣೆ; ಸಟೀಕ ಶತಸೂತ್ರಲಕ್ಷ್ಮಂ ೩ ಆಣೆ, ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೩ ಆಣೆ; ಸಟೀಕ ದೀಕ್ಷಾವಿಧಿ ೨ ಆಣೆ; ಸ್ತುತಿಮುಕ್ತಾವಳಿ ೩ ಆಣೆ; ಶಕ್ತಿಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨-೪-೦

ಎಸ್ ... ಕರಿಬಸ
... ಶಂಕರಮೊಹಲ್ಲಾ

ಮೈಸೂರು ನಿಯಮ

ಕಳೆದ ಜೂನ್ ೧೮ ನೇ ಸೋಮವಾರ ಮಧ್ಯಾಹ್ನ ಈ ಸಭೆಯು ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನ್ ಸರ್ ಎಂ ವಿಶ್ವೇಶ್ವರಯ್ಯ, ಸಿ ಐ ಇ ಯವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಆಗ ಸಭಾಸದರುಗಳಿಂದ ೧ ನೆಯ ಕೌನ್ಸಿಲರ್ ಮ|| ಎಚ್ ವಿ ನಂಜುಂಡಯ್ಯ, ಸಿ ಐ ಇ ಯವರು, ೨ ನೆಯ ಕೌನ್ಸಿಲರ್ ಸರದಾರ್ ಎಂ ಕಾಂತರಾಜಅರಸಿನವರು, ಕಂಟ್ರೋಲರ್ ದಿವಾನ್ ಬಹದ್ದೂರ್ ಕೆ. ಎಸ್ ಚಕ್ರವರ್ತಿಯವರು, ರೆವಿನ್ಯೂಕಮಿಷನರ್ ಮ|| ಕೆ ಎಸ್. ಚೆನ್ನಸ್ವಾಮಯ್ಯರ್‌ರವರು, ಎಕ್ಸೈಸ್ ಕಮಿಷನರ್ ಮ|| ಪಿ ರಾಘವೇಂದ್ರರಾಯರು, ವಿದ್ಯಾಭ್ಯಾಸ ಶಾಖೆಯ ಇ|| ಜನರಲ್ ರಾವ್ ಬಹದ್ದೂರ್ ಎಂ ಶ್ಯಾಮರಾಯರು, ಚೀ|| ಮತ್ತು ರೆ|| ಸೆಕ್ರೆಟರಿ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರು, ಗವರ್ನಮೆಂಟ್ ಅಡ್ವೊಕೇಟ್ ಸಿ. ಎಸ್. ದೊರೆಸ್ವಾಮಯ್ಯರ್‌ರವರು, ಮ|| ಸಿ ಶ್ರೀನಿವಾಸಯ್ಯಂಗಾರರು, ಮ|| ಬಿ ಕೆ ಪಿ ಪುಟ್ಟಣ್ಣ ಶೆಟ್ಟರು, ಮ|| ಎ ರಂಗಸ್ವಾಮಯ್ಯಂಗಾರರು, ಮಿ|| ಸಯ್ಯದ್ ಅಬ್ದುರ್ ಹಲೀಂ ರವರು, ಮ|| ಗಳಾದ ಎಂ ವೆಂಕಟಕೃಷ್ಣಯ್ಯನವರು, ಎಂ ಕರಣಿಕ ಕೃಷ್ಣಮೂರ್ತಿರಾಯರು, ಬಿ ನರಸಿಂಗರಾಯರು, ಎಚ್ ಆರ್, ಬಾಲಕೃಷ್ಣರಾಯರು, ಬಿ. ಕೆ. ಗರುಡಾಚಾರರು, ಎಸ್ ವೆಂಕಟೇಶಯ್ಯನವರು, ವಿ. ವೆಂಕಟಸ್ವಾಮಯ್ಯನವರು ಮತ್ತು ಶಂಕರನಾರಾಯಣರಾಯರು ಇವರುಗಳು ಸಭೆ ಅಲಂಕರಿಸಿದ್ದರು

"ಮೈಸೂರ ನಿಯಮನಿರ್ಮಾಣಸಭೆಯ ವಿಧಿಯು ಬದಲಾವಣೆಯಿಲ್ಲ ಮತ್ತು ಮೈಸೂರ ಹೈಕೋರ್ಟಿನಲ್ಲಿ ಶ್ರೀಮನ್ಮಹಾರಾಜರವರಿಂದ ನಾಮಕರಣ ಹೊಂದಿರುತ್ತಾರೆ ದಿ|| ಬ|| ಚಕ್ರವರ್ತಿಯವರು, ಮ|| ಗಳಾದ ಪಿ ರಾಘವೇಂದ್ರರಾಯರು, ಕೆ ಆರ್ ಶ್ರೀನಿವಾಸಯ್ಯಂಗಾರರು, ಬಿ ಕೆ ಗರುಡಾಚಾರರು, ಎಸ್ ವೆಂಕಟೇಶಯ್ಯನವರು, ವಿ ವೆಂಕಟಸ್ವಾಮಯ್ಯನವರು ಮತ್ತು ಕೆ ಶಂಕರನಾರಾಯಣರಾಯರುಗಳು ಈ ಸಭೆಯ ಹೊಸ ಮೆಂಬರುಗಳಾಗಿರುತ್ತಾರೆ" ಎಂದು ಈ ಸಭೆಯ ಸೆಕ್ರೆಟರಿಯವರಾದ ಮ|| ಎಸ್ ಪಿ ರಾಜಗೋಪಾಲಾಚಾರಿಯವರು ಓದಿ ತಿಳಿಸಿದರು. ಬಳಿಕ,

ದಿವಾನರು ಮಾಡಿದ ಭಾಷಣದ ಮುಖ್ಯಾಂಶವು —

ಶ್ರೀಮನ್ ಮಹಾರಾಜರವರಿಂದ ನಾಮಕರಣ ಹೊಂದಿರುವ ನೂತನ ಸಭ್ಯರು ಪ್ರಕಾರ ಈ ನಿಯಮನಿರ್ಮಾಣಸಭೆಯ ಸಭಿಕರುಗಳ ಸಂಖ್ಯೆಯು ಅವರ ಶಕ್ತ್ಯನುಸಾರ ಹೆಚ್ಚಿಸಲ್ಪಟ್ಟಿರುವುದರಿಂದ ಇದಕ್ಕೆ ಹೊಸ ಕಳೆ ಬಂದಿದೆ. ಉಪಯುಕ್ತವಾದ ಶಾಸನಕಾರ್ಯದಲ್ಲಿ ಇದು ಸ್ವಲ್ಪ ವಿಶೇಷವಾಗಿದೆ ಈ ದಿವಸ ನಿಮಗೆ ಪ್ರಶ್ನೆಗಳನ್ನು ಕೇಳುವ ಮತ್ತು ವಿಶೇಷವಾಗಿ ಚರ್ಚಿಸಿ ಒಂದಿರುವ ಅಧಿಕಾರವು ಕೊಡಲ್ಪಟ್ಟಿರುತ್ತದೆ ಡಿಸ್ಟ್ರಿಕ್ಟ್ ಪಟ್ಟಣ ಮತ್ತು ಗ್ರಾಮಗಳಲ್ಲಿ ಬರುವ ಮುಖಂಡರುಗಳು ಸರ್ಕಾರದವರ ಕೂಡ ಸೇರಿ ಜನೋಪಯುಕ್ತ ಕಾರ್ಯಗಳನ್ನು ಮಾಡಲು ಅವಕಾಶ ಕಲ್ಪಿಸಲ್ಪಟ್ಟಿರುವುದು. ಪ್ರತಿಯೊಂದು ಸಂದರ್ಭದಲ್ಲೂ ಚರ್ಚೆ ಮಾಡುವಾಗ್ಗೆ ಉದ್ದೇಶಕರ್ತೃಗಳ ಮೇಲೆ ಲಕ್ಷ್ಯವಿಟ್ಟಿರಬೇಕು. ಈ ಸಭೆಯಲ್ಲಿ ನಡೆಯುವ ಚರ್ಚೆಗಳನ್ನು ಇಟ್ಟುಕೊಂಡು ನಾವುಗಳು ನಮ್ಮ ಜನರ ಪುರೋಭಿವೃದ್ಧಿಗೆ ಸಾಧಕವಾದ ಕಾರ್ಯಗಳನ್ನು ಮಾಡಲು ಅನುಕೂಲವಾಗುವುದು. ಮುಂದುವರಿದ ಇತರ ದೇಶದ ಸಭೆಗಳಲ್ಲಿ ಮಾತಿಗೂ ಬರವಣಿಗೆಗೂ ಚರ್ಚೆಗಳಿಗೂ ಇದನ್ನು ಹೋಲಿಸಿನೋಡಿದರೆ ಇದು ಏನೂ ಇಲ್ಲವೆಂದೇ ತೋರುವುದು. ಇವರ ಮುಖ್ಯ ವ್ಯತ್ಯಾಸವೇನೆಂದರೆ—ಉಪಯೋಗವಿಲ್ಲದೆ ಕೇಳುತ್ತಿರುವ ಉಪಾಯಗಳಿಗಿಂತ ಹೊಸ ಉಪಾಯಗಳು ವಿಶೇಷವಾಗಿ ಬಂದಿರಬೇಕಾಗುವುದು. ಮತ್ತು ದೇಶದಲ್ಲಿ ನಡೆದಿರುವ ಕಾರ್ಯವು ಅದರ ಮೇಲೆ ಮಾಡಲ್ಪಟ್ಟಿರುವ ವಿಮರ್ಶೆಯಿಂದ ಹೋಲಿಸಲ್ಪಟ್ಟಲ್ಲಿ ಅದು ಅಜಗಜಾಂತರವಾಗಿ ಕಡಿಮೆಯಾಗಿರುವುದು. ಆರ್ಥಿಕವೃದ್ಧಿಗೆ ಅಭಿವೃದ್ಧಿಯನ್ನು ಹೊಂದಿರ ನಮ್ಮಂಥ ದೇಶದಲ್ಲಿ ಅಭಿವೃದ್ಧಿಗೆ ಸಾಧಕವಾದ ಉಪಾಯಗಳನ್ನು ಕಂಡುಹಿಡಿಯಬಲ್ಲಂಥ ಶೋಧಕಾವಿಗಳೂ ಮತ್ತು ಅವನ್ನು ನುಷ್ಠಾನಕ್ಕೆ ತರಲು ಸಮರ್ಥರಾದ ಪ್ರಜೆಗಳೂ ಜನೋಪಯುಕ್ತ ಕಾರ್ಯಕ್ಕೆ ಅವಶ್ಯಕವಾಗಬೇಕಾಗಿರುವರು. ಅಂತಹ ಪ್ರಯತ್ನದಲ್ಲೂ ಕ್ರಿಯೆಯಲ್ಲೂ ನಿರುತ್ಸಾಹವುಂಟಾಗುವಂತೆ ನಾವು ಏನನ್ನೂ ಮಾಡಬಾರದು. ಹಾಗೆ ಮಾಡಿದುದೇ ಆದರೆ, ಈ ದೇಶಕ್ಕೆ ಅತ್ಯವಶ್ಯಕವಾಗಿರುವ ಉತ್ಸಾಹವೂ, ಶಕ್ತಿಯೂ ಮೂಲದಲ್ಲಿಯೇ ಹಾಳಾಗಿಹೋಗುವುವು. ಮುಂದೆ ರಚನಾಶಕ್ತಿಯು ಕೆಲಸಗಳು ಬೆಳೆದಂತೆಯೂ, ದೇಶದಲ್ಲಿ ಬಹಳ ಯೋಜನಾಪರರೂ, ಕೆಲಸಗಾರರೂ ಉತ್ಪನ್ನವಾಗಬೇಕು ಮತ್ತು ಕಾರ್ಯವನ್ನು ನಡೆಸಬಲ್ಲ ಸ್ವತಂತ್ರ ರಚನಾಶಕ್ತಿಯು ಬೇಕಾಗುವುದರಿಂದ ಶಾಸನ ನಿರ್ಮಾಣಕ್ಕೆ ಸಂಬಂಧಪಟ್ಟ ಈ ಸಭೆಯು ಸಹಾಯಕ್ಕೆ ಮತ್ತು ಉತ್ತೇಜನಕ್ಕೂ ಸಾಧಕವಾಗಬೇಕು, ಆದರೆ ರಚನಾಶಕ್ತಿಯು [redacted] ರಮಟ್ಟಿಗೆ ನೀವು ಬುದ್ಧಿಯನ್ನು ಉಪಯೋಗಿಸಬಾರದೆಂಬುದು ನನ್ನ ಪ್ರಾರ್ಥನೆಯು. ಇನ್ನು ಮುಂದೆ ನಮ್ಮ ಸಭೆಯು ವರ್ಷವರ್ಷ ಕೂಡುವುದು ಮತ್ತು ಈ ಸಭೆಯಲ್ಲಿ ಪ್ರಜಾಪ್ರತಿನಿಧಿಗಳಾದ ಸಭಿಕರುಗಳ ಸಂಖ್ಯೆಯು ಹೆಚ್ಚಿದುದರಿಂದ ನಮ್ಮ ವಿಚಾರಗಳಿಗೆ ಹೆಚ್ಚು ಪ್ರಾಮುಖ್ಯವುಂಟಾಗುವುದು. ಅಷ್ಟೊಂದು ಪ್ರಜೆಗಳ ಪ್ರತಿನಿಧಿಗಳ ಅಗತ್ಯವನ್ನು ಬಯಸಲು ನಮಗೆ ಬಹಳ ಹರ್ಷವಾಗಿರುತ್ತದೆ. ಮತ್ತು ಈ ಸಭಾಕಾರ್ಯದಲ್ಲಿ ಅವರುಗಳೊಡನೆ ಸೇರುವುದು ಒಂದು ವಿಶೇಷವಾದ ಅಧಿಕಾರವೆಂದೇ ಭಾವಿಸುತ್ತೇನೆ."

ಬಳಿಕ ಮ|| ಎಂ ವೆಂಕಟಕೃಷ್ಣಯ್ಯನವರು ದಿವಾನರ ಭಾಷಣಕ್ಕೆ ಉತ್ತರವನ್ನು ಕೊಡುವಾಗ್ಗೆ—"ಈ ಸಭೆಯನ್ನು ಪ್ರಕೃತಸ್ಥಿತಿಗೆ ತಂದುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತೇವೆ. ಬ್ರಿಟಿಷ್ ಇಂಡಿಯಾದ ಕೌನ್ಸಿಲ್ಲುಗಳಲ್ಲಿ ಕೂಡ ಇಷ್ಟೊಂದು ಅಭಿವೃದ್ಧಿಕಾರಕವಾದ ಉತ್ಸಾಹವು ತೋರಿಸಲ್ಪಟ್ಟಿಲ್ಲವೆಂದು ನನಗೆ ತೋರುತ್ತದೆ. ದಿವಾನರು ಅಪ್ಪಣೆ ಕೊಡಿಸಿದುದರಲ್ಲಿ ರಚನಾಶಕ್ತಿ ಸಾಧ್ಯವಾದ ಬುದ್ಧಿಯನ್ನು ನಡೆಸುವುದು ಅವರಿಗೆ ಸಮ್ಮತವೆಂಬುವುದು ವ್ಯಕ್ತವಾಗುವುದು ಮತ್ತು ಸರ್ಕಾರದ ಉಪಾಯ (ಕಾರ್ಯಕ್ರಮ)ಗಳನ್ನು ನಿಯಮಬದ್ಧವಾಗಿ ಮಾಡುವುದರ ಪರಿಮಿತಿಯನ್ನು ನಾವು ಮೀರಿ ನಡೆಯುವುದಿಲ್ಲವೆಂದು ವಾಗ್ದಾನಮಾಡುವೆವು. ಸರ್ಕಾರದವರಿಗೆ ಸಹಾಯಕರಾಗಿದ್ದು ನಮ್ಮ ಕೈಲಾದಮಟ್ಟಿಗೆ ಕೆಲಸ ಮಾಡುವುದು ನಮ್ಮ ಕರ್ತವ್ಯವಾಗಿದೆ" ಎಂದು ಹೇಳಿದರು

ಬಳಿಕ ಈ ಕೆಳಗೆ ಕಾಣಿಸಿರುವ ಸಭೆಯಲ್ಲಿ ಪ್ರಶ್ನೋತ್ತರಗಳು ನಡೆದುವು

ಮ|| ಬಿ ನರಸಿಂಗರಾಯರ ಪ್ರಶ್ನೆ —

I (a) ರಿಟ್ರೆಂಚ್‌ಮೆಂಟ್ ಕಮಿಟಿಯು ಯಾವಾಗ ಸ್ಥಾಪಿತವಾಯಿತು? (b) ಯಾವ ಶಾಖೆಗಳಲ್ಲಿ ಮತ್ತು ಎಷ್ಟರಮಟ್ಟಿಗೆ ವೆಚ್ಚವು ಕಡಿಮೆ ಮಾಡಲ್ಪಟ್ಟಿರುವುದು? (c) ಈ ಕಮಿಟಿಯು ಉದ್ಯೋಗದಲ್ಲಿ ಸಹಾಯಕರಾಗಿರಲು ಉದ್ಯೋಗಸ್ಥರಲ್ಲದ ದೊಡ್ಡ ಮನುಷ್ಯರುಗಳನ್ನು ಮೆಂಬರುಗಳನ್ನಾಗಿ ಸರ್ಕಾರದವರು ನಿಯಮಿಸಲಾಗುವುದಿಲ್ಲವೆ?

ಮ|| ಕೆ ಆರ್ ಶ್ರೀನಿವಾಸಯ್ಯಂಗಾರರ ಉತ್ತರ —

(a) ೧೯೧೦ ರಲ್ಲಿ ಸ್ಥಾಪಿಸಲ್ಪಟ್ಟು ೧೯೧೧ ರಲ್ಲಿ ಕ್ರಮಪಡಿಸಲ್ಪಟ್ಟಿತು (b) ತತ್ಸಂಬಂಧ ವಿಷಯದ ಸ್ಟೇಟ್‌ಮೆಂಟು ಸಭಿಕರಿಗೆ ಕೊಡಲ್ಪಟ್ಟಿದೆ (c) ಈ ರಿಟ್ರೆಂಚ್‌ಮೆಂಟ್ ಕಮಿಟಿಗೆ ಉದ್ಯೋಗಸ್ಥರಲ್ಲದವರನ್ನು ಸಭಿಕರನ್ನಾಗಿ ಮಾಡುವ ಆವಶ್ಯಕತೆಯು ಸರ್ಕಾರದವರಿಗೆ ಕಂಡುಬರುವುದಿಲ್ಲ. ಆದರೆ ಉದ್ಯೋಗಸ್ಥರಲ್ಲದ ದೊಡ್ಡ ಮನುಷ್ಯರು ತಮಗೆ ತೋರುವ ಅಭಿಪ್ರಾಯವನ್ನು ಖಾಸಗಿಯಾಗಿ ಬರೆದು ಕಳುಹಿದಲ್ಲಿ ಕಮಿಟಿಯವರು ಅಗತ್ಯವಾಗಿ ಪರ್ಯಾಲೋಚಿಸುವರು.

II (a) ಇನಾಂದಾರರು ತಮಗೆ ಸಲ್ಲಬೇಕಾಗಿರುವ ಜೋಡಿ ಕಂದಾಯದ ಬಗೆಗೆ ಸರ್ಕಾರಕ್ಕೆ ಬರೆದುಕೊಂಡಿರುವ ಅರ್ಜಿಗಳು ಇತ್ಯರ್ಥವಾಗದೆ ಇರುವುವೆಷ್ಟು? (b) ಮೊದಲು ಕೊಡಲ್ಪಟ್ಟ ಅಂತಹ ಅರ್ಜಿಗಳ ತಾರೀಖೇನು? (c) ಅವುಗಳು ಇತ್ಯರ್ಥವಾಗಲು ಇನ್ನೆಷ್ಟು ಕಾಲವು ಹಿಡಿಯುವುದು?

ಮ|| ಎಂ ಕಾಂತರಾಜ ಅರಸಿನವರು ಕೊಟ್ಟುತ್ತರ,—

(a) ಪ್ರಾಯಶಃ ೬೫ ಅರ್ಜಿಗಳು ಇತ್ಯರ್ಥವಾಗಬೇಕಾಗಿವೆ (b) ೧೯೦೬ ನೆಯ ಜುಲೈ ತಾ|| ೧೧ ರಲ್ಲಿ (c) ಇಂಥವುಗಳನ್ನು ಇತ್ಯರ್ಥ ಮಾಡುವ ಬಗೆಗಾಗಿ ಹುಟ್ಟಿರುವ ಕೆಲ ಸಾಮಾನ್ಯ ವಿಧಿಗಳನ್ನನುಸರಿಸಿ ಅರ್ಜಿಗಳನ್ನು ಇತ್ಯರ್ಥ ಮಾಡಬೇಕಾಗಿದೆ. ಜಾಗ್ರತೆಯಲ್ಲಿ ಇತ್ಯರ್ಥ ಮಾಡಲು ಪ್ರಯತ್ನಪಡುತ್ತಿದೆ.

III (a) ಮೈಸೂರು ಸೀಮೆಯ ಕಾರಾಗೃಹಗಳಲ್ಲಿ ಎಷ್ಟು ಜನ ಅಪ್ರಾಪ್ತವಯಸ್ಸಿನ ಬಂದಿಗಳಿರುವರು? (b) ಇವರುಗಳನ್ನು ಇತರ ಬಂದಿಗಳ ಸಹವಾಸದಿಂದ ತಪ್ಪಿಸಿ, ವಿದ್ಯಾಬುದ್ಧಿಸಂಪನ್ನರಾಗುವಂತೆ ಮಾಡಲು ಯಾವ ಏರ್ಪಾಡು ಮಾಡಲ್ಪಟ್ಟಿದೆ?

ಮ|| ಕಾಂತರಾಜ ಅರಸಿನವರುತ್ತರ.—

(a) ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ೧೮ ಜನ ಅಪ್ರಾಪ್ತವಯಸ್ಸಿನ ಬಂದಿಗಳಿರುವರು. ಮೈಸೂರು ಜೈಲಿನಲ್ಲಿ ಯಾರೂ ಇಲ್ಲವು (b) ಬೆಂಗಳೂರಿನ ಮತ್ತು ಮೈಸೂರಿನ ಕಾರಾಗೃಹಗಳಲ್ಲಿ ಅಪ್ರಾಪ್ತವಯಸ್ಸಿನ ಬಂದಿಗಳು ಇತರರ ಸಹವಾಸದಿಂದ ಬೇರ್ಪಡಿಸಲ್ಪಟ್ಟು ಪ್ರತ್ಯೇಕವಾದ ಒಂದು ಭಾಗದಲ್ಲಿ ಸ್ಥಳಕಾಣಿಸಲ್ಪಟ್ಟಿರುವರು. ಓದಲೂ ಬರೆಯಲೂ ಚಿತ್ರ ಮತ್ತು ಒಳ್ಳೆಯ ನಡತೆಯಲ್ಲಿ ಪಟ್ಟು ಬಂದಿಯು ಈ ಅಪ್ರಾಪ್ತವಯಸ್ಸಿನ ಬಂದಿಗಳಿಗೆ ಹೇಳಿಕೊಡಲು ಕೆಲಸ, ಮಗ್ಗ ನೇಯುವುದು, ಜಮಖಾನ ನೇಯುವುದು ಮೊದಲಾದ ಕಸಬನ್ನು ಕಲಿಸಲು ನಿಯಮಿಸಲ್ಪಟ್ಟಿರುವನು [redacted]

ಮ|| ಕೃಷ್ಣ [redacted] ರ ಪ್ರಶ್ನೆ —

IV ಬೆಂಗಳೂರ ಮತ್ತು ಮೈಸೂರ ಮ್ಯುನಿಸಿಪಾಲಿಟಿಗಳಲ್ಲಿರುವ ಪ್ರಜೆಗಳಿಗೆ ನಲ್ಲಿಯ ನೀರಿಗಿಟ್ಟಿರುವ ನಿಬಂಧನೆಗಳಿಂದಲೂ ತತ್ಸಂಬಂಧವಾದ ನೂತನವಿಧಿಗಳಿಂದಲೂ ಉಂಟಾಗಿರುವ ತೊಂದರೆಯ ಭಾಗವನ್ನು ಸರ್ಕಾರದವರು ತಿಳಿದಿರುತ್ತಾರೆಯೆ? ಪ್ರತಿನಿತ್ಯವೂ ಜನರುಪಯೋಗಕ್ಕೆ ನೀರು ಅತ್ಯವಶ್ಯಕವಾಗಿರುವುದರಿಂದ ಮ್ಯುನಿಸಿಪಾಲಿಟಿಯವರುಗಳು ಈ ನಿರ್ಬಂಧ ಪದ್ಧತಿಯನ್ನು ತಪ್ಪಿಸಲು ಸಾಧ್ಯವಲ್ಲದಿರುವ ಪಕ್ಷಕ್ಕೆ ಅದರಿಂದುಂಟಾಗುವ ತೊಂದರೆಯ ಭಾಗವನ್ನು ಕಡಿಮೆ ಮಾಡಲು ಸಿದ್ಧರಾಗಿರುವರೆ? ಎಂದು ಮ|| ಗಳಾದ ಎಂ ಅಣ್ಣಾಜಿರಾಯರು, ರಾಮಚಂದ್ರಯ್ಯರವರು, ಎಂ ಕೆ ಕೃಷ್ಣಮೂರ್ತಿರಾಯರು ಮತ್ತು ಮೊಘಾರವರು ಇವರುಗಳ ಉದಾಹರಣೆಯನ್ನು ಕೊಟ್ಟ

ಮ|| ಕೆ ಆರ್ ಶ್ರೀನಿವಾಸಯ್ಯಂಗಾರರುತ್ತರ —

ಯಾವ ತೊಂದರೆಯ ಭಾಗವೂ ಸರ್ಕಾರದವರಿಗೆ ತಿ ಯದು ನೀರನ್ನೊದಗಿಸುವ ವಿಧಾನವನ್ನನುಸರಿಸಿ ಹಾಕ ದುವ ಹೆಚ್ಚು ತೆರಿಗೆಯು ಮ್ಯುನಿಸಿಪಾಲಿಟಿಯವರ ಗ ಮೇಲಾಗಲಿ ಅಥವಾ ಪಟ್ಟಣವಾಸಿಗಳ ಮೇಲಾಗಲಿ ರದೆ ಜನರಲ್ ಟ್ಯಾಕ್ಸನ್ನು ಕೊಡುವವರ ತಲೆಯಮೇ ಹೊರುವುದು. ನವೀನ ವಿಧಿಯನ್ನು ಬದಲಾಯಿಸಲು ಯಾ ವ ಕಾರಣವೂ ತೋರಿಸಲ್ಪಟ್ಟಿಲ್ಲವು

V ಸಂಸ್ಥಾನದ ನಾನಾ ಶಾಖೆಗಳಲ್ಲೂ, ಬೆಂಗಳೂರು ಮ್ಯುನಿಸಿಪಾಲಿಟಿಯಲ್ಲೂ ಕಳೆದ ೧೦ ವರ್ಷಗಳಿಂದ ಹಣವನ್ನು ದುರುಪಯೋಗಪಡಿಸಿರುವವರ ಸಂಖ್ಯೆಯೆಷ್ಟು? ಹೀಗೆ ದುರುಪಯೋಗವಾಗಿರುವ ಹಣದ ಮೊತ್ತವೆಷ್ಟು? ಇದನ್ನು ಕಂಡುಹಿಡಿದು ತಪ್ಪಿಸಲು ಯಾವ ಉಪಾಯವು ಕೈಗೊಳ್ಳಲ್ಪಟ್ಟಿದೆ? ಅಲ್ಲದೆ ಸಂಬಂಧಪಟ್ಟ ಲೆಕ್ಕಗಳಲ್ಲುಂಟಾಗಿರುವ ಅವ್ಯವಸ್ಥೆಯನ್ನು ಪರಿಹರಿಸಿಕೊಳ್ಳಲು ಯಾವ ಏರ್ಪಾಡು ಮಾಡಲ್ಪಟ್ಟಿದೆ? ಇದುವರೆಗೆ ವಸೂಲಾದುದು ಹೋಗಿ ಇನ್ನೆಷ್ಟು ಉಳಿದಿದೆ?

ಮ|| ಕೆ ಆರ್ ಶ್ರೀನಿವಾಸಯ್ಯಂಗಾರರುತ್ತರ.

ಹಣದ ದುರುಪಯೋಗವಾದಂತೆಲ್ಲಾ ತಕ್ಕ ಪ್ರತೀಕಾರವು ಮಾಡಲ್ಪಡುತ್ತಿದೆ. ಇಂತಹ ದುರುಪಯೋಗವಾದ ಹಣದ ಲೆಕ್ಕವು ಸಿದ್ಧಗೊಳಿಸಲ್ಪಟ್ಟಿಲ್ಲವು. ಕಳೆದ ೧೦ ವರ್ಷಗಳಲ್ಲಿ ದುರುಪಯೋಗಪಡಿಸಲ್ಪಟ್ಟ ಹಣದ ಲೆಕ್ಕದ ವಿವರವನ್ನು ಶೇಖರಿಸುವುದರಿಂದ ಸರ್ಕಾರಕ್ಕೆ ಪ್ರಯೋಜನವೇನೂ ಕಂಡುಬರುವುದಿಲ್ಲ.

ಮ|| ಗಳಾದ ಎ ವೆಂಕಟಕೃಷ್ಣಯ್ಯನವರ ಮತ್ತು ಎಚ್ ಆರ್ ಬಾಲಕೃಷ್ಣರಾಯರ ಪ್ರಶ್ನೆ —

VI (1) ಬೆಂಗಳೂರ ದಂಡಿನ ಉತ್ಪತ್ತಿಯಲ್ಲಿ ಉಳಿದಿರುವ ಮೊಬಲಗಿನಲ್ಲಿ ಪ್ರತಿ ವರ್ಷದ ಎಷ್ಟು ಹಣವು ನಮ್ಮ ಸರ್ಕಾರದವರಿಗೆ ಕೊಡಲ್ಪಟ್ಟಿತು? (2) ಅದು ಯಾವ ರೀತಿ ವಿನಿಯೋಗಿಸಲ್ಪಟ್ಟಿದೆಯೆ? ಹಾಗಿದ್ದರೆ ಎಷ್ಟು? (3) ಯಾವ ಗೊತ್ತಾದ ಉದ್ದೇಶಗಳಿಗೆ ಈ ಮೊಬಲಗು ಉಪಯೋಗಿಸಲ್ಪಡತಕ್ಕದ್ದಾಗಿದೆ? (4) ಹಿಂದಿನ ಉತ್ಪತ್ತಿಯು ಹಣದಲ್ಲಿ ನಮ್ಮ ಸರ್ಕಾರಕ್ಕೆ ಬರದೆ ನಿಂತಿರುವುದೆಷ್ಟು? ಇದು ಯಾವಾಗ ದಂಡಿನ ಸರ್ಕಾರದವರಿಂದ ನಮ್ಮ ಸರ್ಕಾರಕ್ಕೆ ಕೊಡಲ್ಪಡಬೇಕಾಗಿದೆ? (5) ಈಗ ನಿಂತಿರುವ ಮತ್ತು ಮುಂದೆ ಸಲ್ಲುವ ಈ ಉತ್ಪತ್ತಿಯ ಹಣವನ್ನು ಉಪಯೋಗಿಸುವ ಕ್ರಮವು ಸರ್ಕಾರದವರಿಂದ ಗೊತ್ತುಪಡಿಸಲ್ಪಟ್ಟು ದ ತಿಳುವಳಿಕೆಗಾಗಿ ಪ್ರಕಟಗೊಳಿಸಲ್ಪಡುವುದಿಲ್ಲವೆ?

ದಿ|| ಬ|| ಚಕ್ರವರ್ತಿಯವರುತ್ತರ —

(1) ೧೯೦೮—೦೯ ರ ಕಡೆಯವರೆಗೆ ಬೇಕಾದ ೨೯೦೯-೧೦ ರಲ್ಲಿ ೩೦ ಲಕ್ಷ ರೂ. ಬಂದಿರುತ್ತದೆ (2) ಈ ಮೊಬಲಗು ಸಂಸ್ಥಾನದ ಸಾಮಾನ್ಯ ಉತ್ಪತ್ತಿಯ ಕೂಡ ಸೇರಿಸಲ್ಪಟ್ಟಿದೆ. (3) VI ರಲ್ಲಿ ೧ ರ ಉತ್ತರವನ್ನು ನೋಡಿ. (4) ೧೯೧೦ ರ ಕಡೆಯವರೆಗೆ ಬರಬೇಕಾದ ಹಣದ ಶೇಷವು ರೂ ೯೨೯೮೯-೧೦ ಇಲ್ಲಿಂದೀಚೆಗೆ ಉಳಿದಿರುವ ಹಣವೆಷ್ಟು ಎಂಬುವುದು ಇನ್ನೂ ಗೊತ್ತುಪಡಿಸಲ್ಪಟ್ಟಿಲ್ಲವು ಮತ್ತು ಇದು ಯಾವಾಗ ವ್ಯವಸ್ಥೆ ಮಾಡಲ್ಪಡುವುದೆಂಬುದು ಹೇಳಲಸಾಧ್ಯವು (5) ಈ ಹಣದ ಮೊಬಲಗು ಸಾಮಾನ್ಯ ಶೇಷ ಧನದೊಡನೆ ಸೇರಿಸಲ್ಪಡುವುದು. ಈ ಉತ್ಪತ್ತಿಯ ಮೊಬಲಗನ್ನು ಯಾವುದಾದರೂ ಪ್ರತ್ಯೇಕ ಉದ್ಯೋಗಗಳಿಗುಪಯೋಗಿಸಲು ಗೊತ್ತಾದ ಗಳನ್ನು ಮಾಡುವ ಉದ್ದೇಶವು ಸರ್ಕಾರದವರಿಗಿಲ್ಲವು.

VII. (1) ಇದುವರೆಗೆ ರಿಟ್ರೆಂಚ್‌ಮೆಂಟ್ ಕಮಿಟಿಯವರು ಮಾಡಿರುವ ಯಾವ ಸೂಚನೆಗಳು ಸರ್ಕಾರದವರಿಂದ ಸಮ್ಮತಿಸಲ್ಪಟ್ಟಿವೆ? ಮತ್ತು ಇದರಿಂದ ಎಷ್ಟು ಹಣ ಉಳಿಸಲ್ಪಟ್ಟಿದೆ? (2) ಇದುವರೆಗೆ ಇದೇ ಕಮಿಟಿಯವರು ಮಾಡಿರುವ ಯಾವ ಸೂಚನೆಗಳು ಸರ್ಕಾರದಿಂದ ಸ್ವೀಕೃತವಾಗಿವೆ? ಮತ್ತು ಆ ಸೂಚನೆಗಳಿಂದ ಎಷ್ಟು ಹಣ ಉಳಿಸಲ್ಪಡುತ್ತಿದೆ [redacted]

...ದವರನ್ನು ಮೆಂಬರ್‍ಗಳನ್ನಾಗಿ ನೇಮಿಸುವ ಆವಶ್ಯಕತೆಯನ್ನು ಸರ್ಕಾರದವರು ಪರ್ಯಾಲೋಚಿಸುವರೆ?

ಮಿ॥ ಕೆ. ಆರ್. ಶ್ರೀನಿವಾಸಯ್ಯಂಗಾರರುತ್ತರ:—

(1) ಮತ್ತು (2) ಈ ಪ್ರಶ್ನೆಗಳಿಗುತ್ತರವನ್ನೊಳಕೊಂಡಿರುವ ಒಂದು ಸ್ಟೇಟ್‍ಮೆಂಟು ಮೆಂಬರಿಗೆ ಕೊಡಲ್ಪಟ್ಟಿದೆ (3) ಇದರುತ್ತರವು ನಂ. 1 (೧) ಯನ್ನು ನೋಡಿ

VIII ಈ ವರ್ಷದ ಬಜೆಟ್ಟಿನ (ಆಯವ್ಯಯದ)ಲ್ಲಿ ಎಕ್ಸ್ ಟ್ರಾಆರ್ಡಿನರಿ ಮಿಸಲೇನಿಯಸ್ ಬಾಬಿನಲ್ಲಿ ಹೆಚ್ಚಾಗಿ ವ್ಯಯಮಾಡಲು ಗೊತ್ತಾಗಿರುವ ೪ ಲಕ್ಷ ರೂ. ಗಳಲ್ಲಿ ಈಗಲೇ ಎಷ್ಟು ಹಣವು ಸ್ಯಾಂಕ್ಷನ್ ಮಾಡಲ್ಪಟ್ಟಿದೆ? ಮತ್ತು ಈ ಹಣದಲ್ಲಿ ಯಾವಯಾವ ಕಾರ್ಯಗಳು ಮಾಡಲ್ಪಡಬೇಕೆಂದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ?

ಮಿ॥ ಬಿ॥ ಚಕ್ರವರ್ತಿಯವರುತ್ತರ—

ಸ್ಯಾಂಕ್ಷನ್ನಾಗಿ ಖರ್ಚಿಗೆ ಕೊಡಲ್ಪಟ್ಟಿರುವುದನ್ನು ತೋರಿಸುವ ಪಟ್ಟಿಯು ಕೌನ್ಸಿಲ್ ಟೇಬಲಿನ ಮೇಲಿಡಲ್ಪಟ್ಟಿದೆ

IX (1) ಎಫಿಷಿಯೆನ್ಸಿ ಆಡಿಟ್ಟಿನ ವಿಚಾರವಾಗಿ ಹುಟ್ಟಿರುವ ಸರ್ಕಾರದಪ್ಪಣೆಯನ್ನು ಸರ್ಕಾರದವರು ದಯವಿಟ್ಟು ಕೌನ್ಸಿಲ್ ಟೇಬಲ್ಲಿನ ಮೇಲಿಡಲಾಗುವುದೆ? (2) ಹಾಗಿಲ್ಲದಿದ್ದರೆ, ಎಫಿಷಿಯನ್ಸಿ ಆಡಿಟ್ಟಿನ ನಿಯಮ ವಿಚಾರದಲ್ಲಿ ಈ ವರೆಗೂ ಪ್ರಕಟವಾಗಿರುವ ಮುಖ್ಯಭಾಗದ ಮತ್ತು ಈ ಹೊಸಕ್ರಮದಿಂದ ಕೆಲಸವು ಯಾವ ರೀತಿಯಲ್ಲಿ ಈಗ ನಡೆಯುತ್ತಿರುವುದೆಂಬುದರ ಸ್ಟೇಟ್‍ಮೆಂಟನ್ನು ಸರ್ಕಾರದವರು ದಯವಿಟ್ಟು ಕೊಡುವರೆ? (3) ಸಂಭವಿಸಬಲ್ಲ ಲಾಭಗಳನ್ನು ಗಣಿಸಿ ಸರ್ಕಾರದ ಮತ್ತು ಪ್ರಜೆಗಳುಪಯೋಗಾರ್ಥವಾಗಿ ಸ್ಥಳದ ವಿದ್ಯಮಾನಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿಯಲು ಈಗ ಎಫಿಷಿಯನ್ಸಿ ಆಡಿಟ್ ಶಾಖೆಯಲ್ಲಿರುವ ಅಧಿಕಾರಿಗಳ ಕೆಲಸಗಳಿಗೆ ತೊಂದರೆಯು ಬಾರದಂತೆ ಯೋಗ್ಯರಾದೊಬ್ಬ ಅಧಿಕಾರಿಯನ್ನು ನಿಯಮಿಸುವುದರ ಮೂಲಕ ಎಫಿಷಿಯನ್ಸಿ ಆಡಿಟ್ ಶಾಖೆಯು ಸಾವರ್ಥ್ಯವನ್ನು ಹೆಚ್ಚಿಸುವುದರ ಆವಶ್ಯಕತೆಯನ್ನು ಸರ್ಕಾರದವರು ದಯವಿಟ್ಟು ಪರ್ಯಾಲೋಚಿಸುವರೆ?

ಮಿ॥ ಕೆ. ಆರ್. ಶ್ರೀನಿವಾಸಯ್ಯಂಗಾರರುತ್ತರ.—

(1) ಮತ್ತು (2) ಇವುಗಳ ವಿಚಾರದಲ್ಲಿ ಹುಟ್ಟಿರುವ ಆರ್ಡರನ್ನು ಮೆಂಬರುಗಳು ತಮ್ಮ ಸ್ವಾಂತದ ತಿಳಿವಳಿಕೆಗಾಗಿ ನೋಡಲು ಸರ್ಕಾರದವರು ಸಂತೋಷದಿಂದ ಸಮ್ಮತಿಸುವರು ಇದನ್ನು ಕೌನ್ಸಿಲ್ ಟೇಬಲ್ಲಿನ ಮೇಲೆ ಈಗಾಗಲೇ ಇಡಲು ಸರ್ಕಾರದವರಿಗೆ ಆವಶ್ಯಕತೆಯು ತೋರಿಬರುವುದಿಲ್ಲವು. (3) ಅಂತಹ ಅಧಿಕಾರಿಯನ್ನು ನಿಯಮಿಸುವ ಆವಶ್ಯಕತೆಯು ತೋರಿದ ವೇಳೆಯಲ್ಲಿ ಈ ಸೂಚನೆಯು ಪರಿಗಣಿಸಲ್ಪಡುವುದು

X. (1) ಸಿವಿಲ್ ಕೋರ್ಟುಗಳ ಕೆಲಸಗಾರರ ಸಂಬಳಗಳನ್ನು ಹೆಚ್ಚಿಸುವ ವಿಚಾರವು ಸರ್ಕಾರದವರ ಆಲೋಚನೆಗೆ ಬಂದಿರುವುದೆ? (2) ಹಾಗಿಲ್ಲದಿದ್ದಲ್ಲಿ ಈ ಕೆಲಸಗಾರರಿಗೆ ಬಹಳ ವರ್ಷಗಳ ಹಿಂದೆ ಗೊತ್ತುಪಡಿಸಿರುವ ಅಲ್ಪಸಂಬಳವನ್ನೂ, ಆಹಾರ್ಯಪದಾರ್ಥಗಳ ಬೆಲೆ ಏರಿರುವುದನ್ನೂ, ರೆವಿನ್ಯೂ ಮತ್ತು ಇತರ ಶಾಖೆಗಳ ಸಂಬಳವು ಈಚೆಗೆ ಹೆಚ್ಚಿಸಲ್ಪಟ್ಟಿರುವುದನ್ನೂ ಲಕ್ಷ್ಯಕ್ಕೆ ತಂದು ಈ ಪ್ರಶ್ನೆಯ ವಿಚಾರವನ್ನು ತ್ವರಿತದಲ್ಲಿ ಪರ್ಯಾಲೋಚಿಸಲಾಗುವುದಿಲ್ಲವೆ?

ಮಿ॥ ಎಚ್. ವಿ. ನಂಜುಂಡಯ್ಯನವರುತ್ತರ—

(1) ಮತ್ತು (2) ಒಂದು ವರ್ಷದಲ್ಲಿ ೮೧೦೦ ರೂ. ವ್ಯಯದಿಂದ ಪ್ರೋಸೆಸ್ ಕೆಲಸಗಾರರ ಸಂಬಳವನ್ನು ಹೆಚ್ಚಿಸಲು ಸರ್ಕಾರದವರು ಈಗತಾನೆ ಅಪ್ಪಣೆಮಾಡಿರುತ್ತಾರೆ ಸಿವಿಲ್ ಕೋರ್ಟಿನ ಇತರ ಕೆಲಸಗಾರರ ಸಂಬಳವನ್ನು ಹೆಚ್ಚಿಸುವ ವಿಚಾರವು ಚೀಫ್ ಕೋರ್ಟಿನ ಪರ್ಯಾಲೋಚನೆಯಲ್ಲಿರುವುದು,

ಸ್ಟೇಟ್‍ಮೆಂಟು.

I. (b) ಮತ್ತು VII (1) ನೆಯ ಪ್ರಶ್ನೆಗಳು.

ಯಾವಯಾವ ಶಾಖೆಗಳಲ್ಲಿ ಎಷ್ಟೆಷ್ಟು ಮೊಬಲಗು ಕಡಿಮೆಮಾಡಲ್ಪಟ್ಟಿರುವುದೆಂಬುದನ್ನು ತೋರಿಸುವ ಪಟ್ಟಿ.—

ರಿಜಿಸ್ಟ್ರೇಷನ್ ಶಾಖೆ	ರೂ. ೮೦೦೦
ಜ್ಯುಡಿಷಿಯಲ್ ಶಾಖೆ	೫೧೦೦೦
ಎಕ್ಸೈಜ್ ಶಾಖೆ	೬,೭೮೦೦
ಕಾರಾಗೃಹ ಶಾಖೆ	೧,೨೦೦೦
ಭೂಗರ್ಭಶೋಧನ ಶಾಖೆ	೧,೨೦೦೦
ಚಿಲ್ಲರೆ ಬಾಬುಗಳು	
ಟ್ರಾವೆಲರ್ಸ್ ಬಂಗಲೆಗಳು	೮೩,೦೦
ಹೆಡ್ ಕ್ವಾರ್ಟರ್ ಆಫೀಸುಗಳು	೩,೦೦೦
ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್	೩,೦೦೦
ಮುಜರಾಯಿ ಪ್ರಿವಿ ಡಿವಿಜನ್ನು	೯೩,೦೧
ದಿವಾನರ ಖರಖು	೩,೦೦೦
ಲ್ಯಾಂಡ್ ರೆವಿನ್ಯೂ ಶಾಖೆ	೭೩,೦೧
ಮರಾಮತ್ ಶಾಖೆ	೧,೧೩,೯೦೧
ಒಟ್ಟು	೭,೩೩,೦೦೦

ಈ ಶಾಖೆಗಳಲ್ಲಿ ಕೆಲವುಗಳಲ್ಲಿ ಕೆಲಸವು ಹೆಚ್ಚಿದುದರಿಂದ ಅಲ್ಲಿ ಸ್ವಲ್ಪ ಖರ್ಚಿನ ಮೊಬಲಗು ಹೆಚ್ಚಿಸಲ್ಪಟ್ಟಿದೆ.

VII (2) ನೆಯ ಪ್ರಶ್ನೆ.

ಖರ್ಚು ಕಡಿಮೆಯಾಗಬೇಕೆಂದು ರಿಟ್ರೆಂಚ್‍ಮೆಂಟ್ ಕಮಿಟಿಯವರಿಂದ ಸೂಚಿಸಲ್ಪಟ್ಟು ಸರ್ಕಾರದವರಿಂದ ಅನುಮೋದಿತವಾಗದಿರುವುದರ ಸ್ಟೇಟ್‍ಮೆಂಟು.—

೨ ನೆಯ ಭೂಗರ್ಭಶಾಸ್ತ್ರಶೋಧಕರ ಸ್ಥಾನವನ್ನು ತಪ್ಪಿಸುವುದು ಇತ್ಯಾದಿ	೧೧೦೦೦
ಕೋಟೆಗಳಲ್ಲಿರುವ ಕುದುರೆಯನ್ನಿಳಿಸುವ ಅಲಯವನ್ನು ತೆಗೆದುಬಿಡುವುದು	೩೦೦೦೦
ಸಿಪಾಯಿಗಳನ್ನು ಕಡಿಮೆಮಾಡುವುದು ಮೊದಲಾಗಿ	೨೩೫೦೦
ಶಿವಮೊಗ್ಗೆಯಲ್ಲಿರುವ ಸವಾರರನ್ನು ತೆಗೆಯುವುದು	೨೧,೨೦೦
ವಾಯುಮಂಡಲಶಾಸ್ತ್ರಶಾಖೆಯನ್ನು ತಪ್ಪಿಸುವುದು	೧೨ ೦೦
ಒಟ್ಟು	೯೩೮೦೦

VIII ನೆಯ ಪ್ರಶ್ನೆ

೪ ಲಕ್ಷ ರೂ ಗಳಲ್ಲಿ ಖರ್ಚುಮಾಡಲ್ಪಡಲು ಗೊತ್ತಾಗಿರುವುದರ ವಿವರ

(೧) ಮರೆಮರೆ ಒಗಗುವ ಖರ್ಚು.

೧೯೧೪ ನೆಯ ಮಾರ್ಚಿಯಿಂದ ತಾಲ್ಲೂಕಾಫೀಸಿನ ಕೆಲಸಗಾರರ ಸಂಬಳವನ್ನು ಪುನರ್ವಿಮರ್ಶೆ ಮಾಡಿರುವುದು	೧೩೯೩೯
೧೯೧೬ ನೆಯ ಅಕ್ಟೋಬರಿಂದ ಸಿಟಿ ಪೋಲೀಸ್ ಸಂಬಳವನ್ನು ಹೆಚ್ಚಿಸಿದುದರಿಂದ	೪೯೮.೩
ಕಂಟ್ರೋಲರಾಫೀಸಿನ ಪುನರ್ವಿಮರ್ಶೆಯಿಂದ	೧೦೩೪೮
೧೯೧೪ ನೆಯ ಮಾರ್ಚಿಯಿಂದ ಡಿಸ್ಟ್ರಿಕ್ಟಾಫೀಸಿನ ಕೆಲಸಗಾರರ ಸಂಬಳವನ್ನು ಹೆಚ್ಚಿಸಿದುದರಿಂದ	೧೩೫೫
ಎಫಿಷಿಯನ್ಸಿ ಆಡಿಟ್ ಶಾಖೆಯಿಂದ	೯೩.೦೩
ಬಿ॥ ಮತ್ತು ಡಿ॥ ಕೆಕ್ರೆಟರಿಯಟ್ಟಿನಲ್ಲಿ ಟೈಪಿಸ್ಟುಗಳಿಗೆ ರಿಕಾರ್ಡ್ ಸಾರ್ಟಿಂಗ್ ಏರ್ಪಾಡು ಮಾಡಿದುದರಿಂದ	೨೧೦೦
೧೯೧೩ ನೆಯ ಮಾರ್ಚಿಯಿಂದ ವ್ಯವಸಾಯಶಾಖೆಯನ್ನು ಪುನರ್ವಿಮರ್ಶೆ ಮಾಡಿದುದರಿಂದ	೨೭೬೧
ಒಟ್ಟು	೧೧೫೧೯

(೨) ಮರೆಮರೆ ಒಗಗದ ಖರ್ಚು

ಮೈಸೂರು ಸಂಸ್ಥಾನದ ಕ್ಯಾಲೆಂಡರ್ ಖರ್ಚು	೭೮೫೦೦
ಕಬ್ಬಿಣ ಉದ್ಯಮಗಳಭಿವೃದ್ಧಿಗಾಗಿ	೩೫೦೦
ಮಲೆನಾಡಿನಭಿವೃದ್ಧಿ ಕಾರ್ಯಕ್ಕಾಗಿ	೧೦೦೧೯
ಒಟ್ಟು	೩೮೮೫೦೦

ಈ ೨ ಬಾಬಿನ ಒಟ್ಟು ಖರ್ಚು ೪೯೩೫೧೯

ಲೋಕಲ್ ಬೋರ್ಡ್ ರೆಗ್ಯುಲೇಷನ್

೧೯೦೨ ನೆಯ ಇಸವಿಯ ಲೋಕಲ್ ಬೋರ್ಡ್ ರೆಗ್ಯುಲೇಷನ್ನನ್ನು ತಿದ್ದುಪಡಿಮಾಡುವ ಬಿಲ್ಲನ್ನು ಸಭೆಯವರ ಆ...

ಮೈಸೂರು ದಸರಾ ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧ ಪ್ರದರ್ಶನವು ೧೯೧೮

ಈ ವರ್ಷದ ಪ್ರದರ್ಶನವು ಬರುವ ಸೆಪ್ಟೆಂಬರು ಮಾಹೆ ೨೦ ನೇ ತಾರೀಖು ಅಥವಾ ಆ ಸುಮಾರಿನಲ್ಲಿ ತೆರೆಯಲ್ಪಡುವುದು.

ಈ ಪ್ರದರ್ಶನದ ಸಂಬಂಧದ ಪ್ರಕಟನೆಗಳು ಅಚ್ಚಿನಲ್ಲಿದ್ದು ತ್ವರಿತದಲ್ಲಿಯೇ ಪ್ರತಿಗಳು ಕಳುಹಿಸಲ್ಪಡುವುವು.

ಈ ಪ್ರದರ್ಶನದಲ್ಲಿ ಈ ಕೆಳಗೆಕಂಡ ವಿಷಯಗಳ ಫೋಟಾಫೋಟೋಗಳು ಏರ್ಪಡಿಸಲ್ಪಟ್ಟಿವೆ ಇಷ್ಟಪಡುವವರು ತಮಗೆ ಅನುಕೂಲ ತೋರುವುವುಗಳಲ್ಲಿ ಸ್ಪರ್ಧೆ ಮಾಡಬಹುದು ಮತ್ತು ಈ ಫೋಟೋಗಳ ಸಂಬಂಧವಾದ ಶಾಸನ ಮತ್ತು ಇತರ ತಪ್ಸೀಲುಗಳನ್ನು ಮೈಸೂರಿನಲ್ಲಿರುವ ಪ್ರದರ್ಶನ ಸೆಕ್ರೆಟರಿಯವರ ಆಫೀಸಿಗೆ ಬರೆದು ತಿಳಿದುಕೊಳ್ಳತಕ್ಕದು.

ಫೋಟಾಫೋಟೋಗಳು.—(೧) ಸೈಜು; (೨) ಲಲಿತ. (೩) ಮರ ಮತ್ತು ಲೋಹಗಳಲ್ಲಿ ಕೆತ್ತನೆ ಕೆಲಸ. (೪) ಬಣ್ಣದ ಮಡಕೆಗಳನ್ನು ಮಾಡುವ ಕೆಲಸ

ಕೇ ರಂಗನಾಥರಾವ್ ಸಾಹೇಬ್,

ಲೋಚನೆಗಿಡಲು ಮಿ॥ ಕಾಂತರಾಜ ಅರಸಿನವರು ಸಭ್ಯರ ಅಪ್ಪಣೆಯನ್ನು ಕೇಳುವಾಗ್ಗೆ ಯೂನಿಯನ್ನಾಗಿ ಮಾರ್ಪಡದಿರುವ ಗ್ರಾಮಗಳಲ್ಲಿ ಮನೆಗಂದಾಯ ಬಂಡಿ ಮತ್ತು ಗಾಡಿಕಂದಾಯಗಳಿಲ್ಲದೆ ಹೊಸತರ್ಹ ರೂಲ್ಸಿನ ಪ್ರಕಾರ ಅಂಗಡಿ ಕಂದಾಯವು ವಿಧಿಸಲ್ಪಡುವುದು ತಪ್ಪುಗಳಲ್ಲಿರಿಗೂ ವೇದ್ಯವೇ ಇದೆ. ಅಂಗಡಿಯ ಕಂದಾಯವು ವ್ಯಾಪಾರದ ಸ್ವಭಾವವನ್ನನುಸರಿಸಿಯೂ, ಮನೆಗಂದಾಯವು ಸ್ವತ್ತಿನ ಸ್ವಭಾವವನ್ನನುಸರಿಸಿಯೂ ವಿಧಿಸಲ್ಪಡುವುದು. ಒಂದು ಗ್ರಾಮವು ಯೂನಿಯನ್ನಾಗಿ ಮಾಡಲ್ಪಟ್ಟಿದ್ದಲ್ಲಿ ಲೋಕಲ್ ಬೋರ್ಡ್ ರೆಗ್ಯುಲೇಷನ್ನು ಸ್ಥಳದ ಕಂದಾಯಕ್ಕೆ ಸ್ವಾಯುಸುತ್ತದೆ. ಮತ್ತು ಲೋಕಲ್ ಬೋರ್ಡ್ ೯೮ (೨) ರೂಲಿನ ಪ್ರಕಾರದ ಅಂಗಡಿಯ ಕಂದಾಯವು ತಪ್ಪಿಸಲ್ಪಡುವುದು ಲೋಕಲ್ ಬೋರ್ಡ್ ರೆಗ್ಯುಲೇಷನ್ನಿನ ಪ್ರಕಾರ ವಿಧಿಸಲ್ಪಡುವ ಮನೆಯ ಕಂದಾಯವು ಹೊಸತರ್ಹ ಅಂಗಡಿ ಕಂದಾಯಕ್ಕಿಂತ ಕಡಿಮೆಯಾಗಿರುವುದರಿಂದ ಯೂನಿಯನ್ನಿನಲ್ಲಿ ಈ ಬಾಬಿಂದಾಗುವ ಉತ್ಪನ್ನವು ಯೂನಿಯನ್ನಾಗಿ ಮಾರ್ಪಡದಿರುವ ಗ್ರಾಮದಲ್ಲಾಗುವ ಉತ್ಪನ್ನಕ್ಕಿಂತ ಕಡಿಮೆಯಾಗಿರುವುದು. ಇದು ಅಕ್ರಮಪದ್ಧತಿಯಾಗಿರುವುದರಿಂದ ಕಲ ಡಿಸ್ಟ್ರಿಕ್ಟ್ ಬೋರ್ಡಿನವರು ಯೂನಿಯನ್ನುಗಳಲ್ಲಿ ಹೊಸತರ್ಹ ಅಂಗಡಿ ತೆರಿಗೆಯು ವಿಧಿಸಲ್ಪಡುವ ಬಗೆಗೆ ರೆಗ್ಯುಲೇಷನ್ನು ಬದಲಾಯಿಸಲ್ಪಡಬೇಕೆಂದು ಸೂಚಿಸಿರುತ್ತಾರೆ. ಸಂಸ್ಥಾನದ ಯೂನಿಯನ್ನುಗಳುತ್ಪನ್ನವು ಬಹಳಮಟ್ಟಿಗೆ ಕಡಿಮೆಯಾಗಿರುವುದೆಂಬುದರಲ್ಲಿ ಅನುಮಾನವೇನೂ ಇಲ್ಲವು ೧೯೧೬—೧೭ ರಲ್ಲಿ ಎಲ್ಲಾ ಡಿಸ್ಟ್ರಿಕ್ಟ್ ಯೂನಿಯನ್ನುಗಳ ದಾರಿಕ್ಕೆ ಉತ್ಪನ್ನಕ್ಕಿಂತ ಕೆಳಗಿನ ಖರ್ಚಿನಲ್ಲಿ ೭೩೫ ರೂ. ಹೆಚ್ಚಾಗಿಯೂ, ಮೈಸೂರು ಡಿ॥ ನಲ್ಲಿ ೧೨ ರೂ ಕಡಿಮೆಯಾಗಿಯೂ ಆಗಿರುತ್ತದೆ ಇದರಿಂದ ಯೂನಿಯನ್ನಿನ ಉತ್ಪನ್ನವನ್ನು ಹೆಚ್ಚಿಸಬೇಕೆಂಬಾವಶ್ಯಕತೆಯು ವ್ಯಕ್ತವಾಗುವುದು ಈಗಿನ ಪದ್ಧತಿಯು ... ಗ್ರಾಮಗಳಲ್ಲಿ ಮನೆಯ ... ಮತ್ತು ಅಂಗಡಿಯ ಕಂದಾಯವನ್ನೂ ವಿಧಿಸುವಲ್ಲಿ ಅಂತರವನ್ನು ... ಮಾಡುವುದು ಕಷ್ಟವಾಗಿದೆ. ಹೆಚ್ಚು ಉತ್ಪನ್ನವಿದ್ದ ಅಂಗಡಿಗಳು ಕೇವಲ ಒಂದು ಸಾಮಾನ್ಯವಾದ ವಾಸದ ಮನೆಯು ದರದಂತೆ ಕಂದಾಯವು ವಿಧಿಸಲ್ಪಡಬೇಕಾಗಿದೆ ಇದರಿಂದ ವರ್ತಕರುಗಳು ಮತ್ತು ವ್ಯಾಪಾರಿಗಳಿಗಿಂತ ವಾಸದ ಮನೆ ಹೆಚ್ಚಾಗಿ ಕಂದಾಯದ ಭಾರವನ್ನು ಹೊರಬೇಕಾಗಿರುವುದು ಈ ಕಾರಣಗಳಿಂದ ಸರ್ಕಾರದವರು ಲೋಕಲ್ ಬೋರ್ಡ್ ರೆಗ್ಯುಲೇಷನ್ನಿನ ೩೦ ನೆಯ ಸೆಕ್ಷನ್ನನ್ನು ಅನುಕೂಲವಾಗಿ ತಿದ್ದುಪಡಿ ಮಾಡುವುದರ ಮೂಲಕ ಯೂನಿಯನ್ನುಗಳಲ್ಲಿ ಮನೆಯ ಕಂದಾಯದ ಜತೆಗೆ ಅಂಗಡಿಯ ಕಂದಾಯವನ್ನೂ ವಿಧಿಸುವ ಅಧಿಕಾರವನ್ನು ಡಿಸ್ಟ್ರಿಕ್ಟ್ ಬೋರ್ಡಿನವರಿಗುಂಟುಮಾಡಿಕೊಡಲು ಸರ್ಕಾರದವರು ನಿರ್ಧರಿಸಿರುವರು. ಯೂನಿಯನ್ನುಗಳಲ್ಲಿ ಮನೆಗಂದಾಯದ ಜತೆಗೆ ಅಂಗಡಿಯ ಕಂದಾಯವು ವಿಧಿಸಲ್ಪಡುವ ಪ್ರಯುಕ್ತ ಹೊಸತರ್ಹ ರೂಲ್ಸಿನ ಪ್ರಕಾರ ವಿಧಿಸಲ್ಪಡುವ ಅಂಗಡಿಯ ಕಂದಾಯದ ದರವು ಈ ಬಿಲ್ಲಿನಲ್ಲಿ ಕಡಿಮೆಮಾಡಲ್ಪಟ್ಟಿದೆ ಎಂದು ಹೇಳಿದರು. ಅನಂತರ ಮಿ॥ ಕೆ. ಆರ್. ಶ್ರೀನಿವಾಸಯ್ಯಂಗಾರರು ಅನುಮೋದನವನ್ನು ಕೊಡಲು ಸಭೆಯಿಂದ ಅಂಗೀಕೃತವಾಯಿತು

ಅನುಮೋದಿತವಾದ ಬಿಲ್ಲುಗಳು.

(1) ಮೈಸೂರು ಕೋರ್ಟ್ ಫೀ ರೆಗ್ಯುಲೇಷನ್ನಿನ ತಿದ್ದುಪಡಿಯ ಬಿಲ್ಲು; (2) ೧೯೩ ನೆಯ, ಮೈಸೂರು ಗಣಿಗಳ ರೆಗ್ಯುಲೇಷನ್ನಿನ ತಿದ್ದುಪಡಿಯ ಬಿಲ್ಲು, ಮತ್ತು ೧೯೦೨ ನೆಯ ಮೈಸೂರು ಲೋಕಲ್ ಬೋರ್ಡ್ ರೆಗ್ಯುಲೇಷನ್ನಿನ ತಿದ್ದುಪಡಿಯ ಬಿಲ್ಲು.

ಕ್ರಿಮಿನಲ್ ಕೋಡಿನ ತಿದ್ದುಪಡಿ.

ಮಿ॥ ಎಚ್. ವಿ. ನಂಜುಂಡಯ್ಯನವರು ತಿದ್ದುಪಡಿಯಾಗಬೇಕಿರುವ ೧೯೧೧ ನೆಯ ಸಿವಿಲ್ ಪ್ರೊಸೀಜರ್ ಕೋಡಿನ ಬಿಲ್ಲು ಸಭೆಯಲ್ಲಿ ಇಡಲ್ಪಡಬೇಕೆಂದು ಸೂಚಿಸಿದುದಲ್ಲದೆ ತಿದ್ದುಪಡಿಯ ವಿಚಾರದಲ್ಲಿ ಸಂಕ್ಷೇಪವಾಗಿ ಪ್ರಸ್ತಾಪಿಸಿದರು. ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟರು ಈ ಸೂಚನೆಯನ್ನು ನುಮೋದಿಸಿ, ತಾವು ಮ್ಯುನಿಸಿಪಲ್ ಪ್ರೆಸಿಡೆಂಟರಾಗಿಲ್ಲದಿದ್ದರೂ ಇದಕ್ಕೆ ಒಪ್ಪಬೇಕಾಗಿರುತ್ತಿದ್ದೆನೆಂದು ತಿಳಿಸಿದರು. ಈ ಸೂಚನೆಯು ಸಭೆಯಲ್ಲಿ ಒಪ್ಪಲ್ಪಟ್ಟು ಮಿ॥ ಗಳಾದ ಎಚ್. ವಿ. ನಂಜುಂಡಯ್ಯನವರು, ಕೆ. ಪಿ. ಪುಟ್ಟಣ್ಣಶೆಟ್ಟರು, ಕೆ. ಶ್ರೀನಿವಾಸಯ್ಯಂಗಾರರು, ಎಸ್. ಆರ್. ಬಾಲಕೃಷ್ಣರಾಯರು ಮತ್ತು ಸಿ. ಎಸ್. ಬೊಳದವೆಯ್ಯನವರು ಇವರುಗಳಿಂದ ಕೂಡಿದ ಕಮಿಟಿಯ ಪರ್ಯಾಲೋಚನೆಯ ಬನೆಗೆ ಇಡಲ್ಪಟ್ಟಿತು.

ಮಿ...ಮತ್ತು ಅಟ್ವಿನ್ಸ್ ... ಬಿಲ್ಲಿನ ತಿದ್ದುಪಡಿಯ ವಿಚಾರದಲ್ಲಿ ... ಕಮಿಟಿಯವರ ... ರನ್ನು [illegible] ... ಟ್ಟಿತು.

ಮೈಸೂರ್ ಸ್ಟಾರ್

[illegible]ನೆಯ ಏಪ್ರಿಲ್ ತಾ॥ ೨೧ನೆಯ ಸೋಮವಾರ

ಮೈಸೂರು ನಿಯಮನಿರ್ಮಾಣ ಸಭೆ

ಪ್ರಜಾಹಿತಾಭಿಲಾಷೆಯಿಂದ ನಮ್ಮ ಶ್ರೀಮನ್ಮಹಾರಾಜರವರ ಔದಾರ್ಯಾತಿಶಯದಿಂದ ನಮ್ಮ ದೇಶದ ನಿಯಮನಿರ್ಮಾಣದ ಸಭೆಯು ಸ್ವರೂಪವು ವಿಸ್ತಾರಗೊಂಡುದು ಮಾತ್ರವೇ ಅಲ್ಲದೆ ಅದರ ಸ್ಥಾಪನೆಯ ಉದ್ದೇಶವು ದಿನದಿನಕ್ಕೂ ಅತ್ಯಂತ ಸಾರ್ಥಕವಾಗುತ್ತ ಬರುತ್ತಿರುವುದು ನಿಜವಾಗಿಯೂ ಸಂತೋಷಪ್ರದವಾಗಿದೆ. ಇದನ್ನು ವಿಸ್ತಾರಗೊಳಿಸಿ, ಇದರ ಫಲವು ದೇಶಕ್ಕೆ ಅಧಿಕವಾಗಿ ಲಭಿಸುವಂತೆ ಮಾಡುವ ಉದ್ದೇಶದಿಂದ ಇದರಲ್ಲಿ ನವೀನ ಸುಧಾರಣೆಗಳನ್ನು ಶ್ರೀಮನ್ಮಹಾರಾಜರವರು ಅನುಗ್ರಹಿಸಿರುವುದನ್ನು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂತ್ರಿವರ್ಯರು ತಮ್ಮ ಉಪನ್ಯಾಸದೊಳಗೆ ಒಪ್ಪಿಸಿಕೊಡಿಸಿದ್ದರು. ಅದರಮೇರೆಗೆ ಸುಧಾರಣೆಗಳೆಲ್ಲಾ ಈಗ ನಡೆದಿರುವುವು. ಕಳೆದ ವಾರದಲ್ಲಿ ನೆರೆದಿದ್ದ ಈ ಸಭೆಯ ನಡವಳಿಕೆಗಳನ್ನು ನಾವು ಈ ಪತ್ರಿಕೆಯ ಬೇರೊಂದು ಕಡೆಯಲ್ಲಿ ಮುದ್ರಿಸಿರುವೆವು. ಅದನ್ನು ಓದುವುದರಿಂದ ಈ ಸಭೆಯ ಮೂಲಕವಾಗಿ ಪ್ರಜಾಹಿತವಾದ ಕಾರ್ಯಗಳನ್ನು ಕುರಿತು ಚರ್ಚಿಸಲೂ, ರಾಜ್ಯಕಾರ್ಯನಿರ್ವಾಹದಲ್ಲಿ ಅನೇಕ ಮುಖ್ಯ ವಿಷಯಗಳನ್ನು ಎಷ್ಟು ನಿಷ್ಕಲ್ಮಷಮನಸ್ಸಿನಿಂದ ಚರ್ಚಿಸುವುದಕ್ಕೂ ಸರ್ಕಾರದವರು ಅವಕಾಶಕೊಟ್ಟಿರುವರೆಂಬುದು ಗೊತ್ತಾಗುವುದು.

ಬ್ರಿಟಿಷ್ ಇಂಡಿಯಾದಲ್ಲಿರುವ ಪ್ರಾಂತಿಕ ನಿಯಮನಿರ್ಮಾಣ ಸಭೆಗಳೂ, ಸಾಮ್ರಾಜ್ಯ ಶಾಸನಸಭೆಯೂ ಸಹ ಲಾರ್ಡ್ ಮಿಂಟೋರವರ ಕಾಲದಲ್ಲಿ ವಿಸ್ತಾರಗೊಂಡರೂ, ಅವುಗಳಲ್ಲಿನ ನಡವಳಿಕೆಗಳು ಪ್ರಜೆಗಳಿಗೆ ಪೂರ್ಣವಾದ ತೃಪ್ತಿಯನ್ನುಂಟುಮಾಡತಕ್ಕದ್ದಾಗಿರುವುದಿಲ್ಲ. ಏಕೆಂದರೆ—ಪ್ರಜಾಹಿತಕರವಾದ ವಿಷಯಗಳನ್ನು ಕುರಿತು ಆ ಸಭೆಯ ಚರ್ಚೆಗಳಲ್ಲಿ ಪ್ರಜಾಪ್ರತಿನಿಧಿಗಳಿಂದ ಹೊರಬಿದ್ದರೂ ಸರ್ಕಾರದ ಪಕ್ಷದ ಔದಾಸೀನ್ಯದಿಂದಲೂ, ಸರ್ಕಾರದ ಪಕ್ಷವನ್ನೇ ನಿರೀಕ್ಷಿಸುತ್ತಿರುವ ಇತರ ಕೆಲ ಸಭಿಕರೂ ಸಹ ವಿರುದ್ಧಾಭಿಪ್ರಾಯಗಳನ್ನು ಕೊಡುತ್ತಿರುವ ಕಾರಣದಿಂದಲೂ, ಪ್ರಜಾಪ್ರತಿನಿಧಿಗಳ ಸಂಖ್ಯೆಯು ಆ ಇದಿರುಪಕ್ಷದ ಸಭಿಕರಿಗಿಂತ ಕಡಿಮೆಯಾಗಿರುವುದರಿಂದಲೂ ಅವರ ಅಭಿಪ್ರಾಯಗಳು ಅಪಜಯವನ್ನು ಹೊಂದುತ್ತಲೂ ಹಿಂದೆಗೆದುಕೊಳ್ಳಬೇಕಾಗುತ್ತಲೂ ಇರುವುದೇ ಹೆಚ್ಚಾಗಿದೆ. ಮೈಸೂರಿನ ನಿಯಮನಿರ್ಮಾಣಸಭೆಯಲ್ಲಾದರೋ ಈಗಿನ ಸುಧಾರಣೆಗನುಸಾರವಾಗಿ ಪ್ರಜಾಪ್ರತಿನಿಧಿಗಳಿಂದ ಆರಿಸಲ್ಪಟ್ಟಿರುವ ಮತ್ತು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿರುವ ಅಧಿಕಾರಿಗಳಲ್ಲದ ಸಭಿಕರ ಸಂಖ್ಯೆಯು ಹೆಚ್ಚಾಗಿರುವುದರಿಂದ ಬ್ರಿಟಿಷ್ ಇಂಡಿಯಾ ಸರ್ಕಾರದ ಸಭೆಗಳಲ್ಲಿರುವಂತೆ ಸೋಲುವುದಕ್ಕೆ ಎಡೆಯಿರುವುದಿಲ್ಲ. ಮತ್ತು ಇಂಗ್ಲೀಷು ಸರ್ಕಾರದ ಸಭೆಗಳಲ್ಲಿರುವಂತೆ ಈ ಸಭೆಯಲ್ಲೂ ಸರ್ಕಾರದ ಆಯವ್ಯಯ ಸಂಬಂಧದಲ್ಲೂ ಉಳಿದ ಆಡಳಿತದ ಸಂಬಂಧದಲ್ಲೂ ಪ್ರಜಾಹಿತಕರವಾದ ವಿಷಯಗಳ ಸಂಬಂಧದಲ್ಲೂ ಕೆಲ ಮಿತವಾದ ಚರ್ಚೆಗಳನ್ನು ಸಭಿಕರು ನಡೆಸುವುದಕ್ಕೆ ಅವಕಾಶವನ್ನಿತ್ತಿರುವುದರಿಂದ ಈ ಸಭೆಯ ಪ್ರಯೋಜನವು ಉತ್ತರೋತ್ತರ ವಿಶೇಷವಾಗಿ ದೃಗ್ಗೋಚರವಾಗುವ ಸಂಭವವಿದೆ. ಬರಿಯ ಶಾಸನಗಳನ್ನು ನಿರ್ಮಿಸುವಷ್ಟನ್ನೇ ಈ ಸಭೆಯು ಕಾರ್ಯವನ್ನಾಗಿಟ್ಟುಕೊಂಡಿದ್ದರೆ, ಮಾಡುವುದಕ್ಕೆ ಇನ್ನೂ ಕೆಲಸವೂ ಇಲ್ಲದೆ ದೊರೆಕೊಳ್ಳಲಿಕ್ಕಾಗದ ಕೆಲವು ವಿಷಯಗಳನ್ನು ಮುಟ್ಟಿ ನೋಡಬೇಕಾಗುವುದೇ ಇದರ ಉದ್ದೇಶವೆನಿಸಿಕೊಳ್ಳುತ್ತಿತ್ತು. ಅದಕ್ಕೆ ಬದಲು ಈ ಎರಡನೆಯ ವಿಧದ ಸೌಲಭ್ಯವನ್ನು ಇದರಲ್ಲಿ ಉಂಟುಮಾಡಿರುವುದರಿಂದಲೂ, ಹೆಚ್ಚು ಜನರೇ ಇದರಲ್ಲಿ ಸಭಿಕರಾಗಿ ಸೇರುವುದಕ್ಕೆ ಅವಕಾಶ ದೊರೆತಿರುವುದರಿಂದಲೂ ಪ್ರಜಾಹಿತಕ್ಕೆ ಅತ್ಯವಶ್ಯಕವೂ, ಸರ್ಕಾರದಲ್ಲಿ ಸಾಂಕೇತಿಕಪ್ರವರ್ತನವನ್ನು ಹೆಚ್ಚಾಗಿಸುಮಾಡಲು ಸಾಧಕವೂ ಆದ ಉಪಯುಕ್ತವಾದ ಚರ್ಚೆಗಳು ಇಲ್ಲಿ ನಡೆಯುತ್ತಿದ್ದರೆ, ಅದರಿಂದ ದೇಶಕ್ಕೆ ಶ್ರೇಯಸ್ಸುಂಟಾಗುವುದು ನಿಶ್ಚಯ. ಅದರ ಆಶಯವೂ ಇನ್ನೂ ಉದಾರವಾದ ವಿಧಾನವನ್ನು ಮಾಡಿ ನಿಯಮನಿರ್ಮಾಣಸಭೆಗೆ ವಿಶೇಷವಾದ ಸ್ವಾತಂತ್ರ್ಯವನ್ನು ನೀಡುವುದಕ್ಕಾಗಿ ಪ್ರಜೆಗಳು ಶ್ರೀಮನ್ಮಹಾರಾಜರವರಿಗೂ ಅವರ ಗೌರ್ನಮೆಂಟಿನವರಿಗೂ ಕೃತಜ್ಞರಾಗಿರುತ್ತಾರೆ. ಈ ಸಭೆಯು ಅನಾಸಕ್ತಿಯಿಂದ ಪ್ರಜಾಪ್ರತಿನಿಧಿಸಭೆಯವರು ಈ ದೊರೆತಿರುವ ಸೌಕರ್ಯವನ್ನು ತಮ್ಮ ಕರ್ತವ್ಯನಿಷ್ಠೆಯಿಂದ ಸಾರ್ಥಕಗೊಳಿಸಿ, ಇನ್ನೂ ಹೆಚ್ಚಿನ ಸೌಕರ್ಯದ ವರವನ್ನು ಈ ಸಭೆಗೆ ದೊರಕಿಸಿಕೊಡುವರೆಂದು ನಂಬಿರುವ ಶ್ರೀಮನ್ಮಹಾರಾಜರವರಲ್ಲಿ ಸಂತೋಷವುಂಟಾಗುವಂತೆ ನಡೆಯಬೇಕೆಂದು ಕೋರುವೆವು.

ತೆಲುಗರ ಮಹೋದ್ಯಮ

ಲಾರ್ಡ್ ಕರ್ಜನ್ನರವರು ವಂಗದೇಶ ವಿಭಾಗವನ್ನು ಮಾಡಿದ ಬಳಿಕ ಒಂದೊಂದು ದೇಶಭಾಷೆಯ ಜನರನ್ನು ಒಂದೊಂದೇ ಅಧಿಕಾರಕ್ಕೆ ಒಳಪಟ್ಟಿರುವಂತೆ ಮಾಡುವುದರ ಪ್ರಯೋಜನವೂ ಆವಶ್ಯಕತೆಯೂ ಪ್ರಜೆಗಳಿಗೆ ಚೆನ್ನಾಗಿ ಸ್ಫುರಿಸುವುದಕ್ಕಾರಂಭಿಸಿತು. ಅದರಮೇಲೆ ಬಂಗಾಳಿಗಳು ಮಾಡಿದ ಸಾಹಸದಿಂದ ಅವರಿಷ್ಟಾರ್ಥವು ಫಲಿಸಿತು. ವಂಗದೇಶವನ್ನು ಬಿಟ್ಟರೆ ದೇಶಾಭಿಮಾನ ಭಾಷಾಭಿಮಾನಗಳಲ್ಲಿ ಮಹಾರಾಷ್ಟ್ರವು ಎರಡನೆಯದು. ಅದು ಒಂದೇ ಒಂದು ಬೊಂಬಾಯಿ ಅಧಿಪತ್ಯಕ್ಕೆ ಸೇರಿರುವುದರಿಂದ ಅವರಲ್ಲಿ ಭಿನ್ನಾಧಿಪತ್ಯದ ನಿಮಿತ್ತವಾದ ತೊಂದರೆಗಳು ಸ್ವಲ್ಪವಿರುವುದಿಲ್ಲ. ಅದರಂತೆಯೇ ಉರ್ದುಭಾಷೆಯವರ ಸ್ಥಿತಿಯೂ ಆಗಿರುತ್ತದೆ. ಅವುಗಳನ್ನು ಬಿಟ್ಟರೆ ದಕ್ಷಿಣದಲ್ಲಿ ಆಂಧ್ರರು, ದ್ರಾವಿಡರು, ಕರ್ನಾಟಕರು—ಇವರುಗಳ ಸ್ಥಿತಿಯು ಪರ್ಯಾಲೋಚಿಸಲ್ಪಡತಕ್ಕದ್ದು. ಇವರಲ್ಲಿ ಆಂಧ್ರರು ಮೊದಲನೆಯವರಾಗಿ ತಲೆಯೆತ್ತಿ ತಮ್ಮ ಸರ್ವವಿಧದ ಏಳಿಗೆಗೂ ಸಾಹಸವನ್ನು ಈಗ ಮಾಡುತ್ತಿರುವುದು ಸಂತೋಷಪ್ರದವೂ ಅವರ ನೆರೆಯ ಕನ್ನಡಿಗರಾದ ನಮಗೆ ಅನುಕರಣೀಯವಾಗಿಯೂ ಇರುತ್ತದೆ.

ಆಂಧ್ರಭಾಷೆಯನ್ನಾಡುವ ಜನರು ಮದ್ರಾಸು ಆಧಿಪತ್ಯದ ಉತ್ತರದ ಜಿಲ್ಲೆಗಳಲ್ಲಿ ವಿಶೇಷವಾಗಿರುವರಲ್ಲದೆ ಹೈದರಾಬಾದು ಸಂಸ್ಥಾನದಲ್ಲಿಯೂ ಮೈಸೂರಿನ ಕೋಲಾರ ಜಿಲ್ಲೆಯಲ್ಲಿಯೂ, ಬೆಂಗಳೂರು ಜಿಲ್ಲೆಯಲ್ಲಿಯೂ ವಿಶೇಷವಾಗಿದ್ದಾರೆ. ಸ್ವದೇಶೀಯ ಸಂಸ್ಥಾನಕ್ಕೆ ಅಧೀನರಾದವರನ್ನು ಬಿಟ್ಟರೆ ಉಳಿದವರೆಲ್ಲಾ ಇಂಗ್ಲೀಷರ ಆಳಿಕೆಗೊಳಪಟ್ಟಿರುವ ತಮ್ಮ ಜನರ ಪರಿಪಾಲನೆಗಾಗಿಯೇ ಒಂದು ಆಧಿಪತ್ಯವೂ, ಒಂದು ಪ್ರತ್ಯೇಕವಾದ ವಿಶ್ವವಿದ್ಯಾಲಯವೂ ಆಗಬೇಕೆಂದು ಈಗ ಅವರುಗಳ ಮುಂದಾಳುಗಳು ಕೋರುತ್ತ ಅದಕ್ಕಾಗಿ ಸಾಹಸಪಡುತ್ತಿದ್ದಾರೆ. [illegible] ದಕ್ಷಿಣ ದೇಶಗಳಲ್ಲಿ ಈ ಪ್ರಯತ್ನವನ್ನು ಮಾಡತಕ್ಕವರಿಗೆ ಪ್ರಜೆಗಳಿಗೂ ಸಹ ಅನೇಕ ವಿಧವಲ್ಲಿ ಸಾಹಾಯ್ಯವೂ [illegible] ಉಂಟಾಗುವುದೆಂದು ನಂಬಿದ್ದ ಜನಗಳಲ್ಲಿ [illegible] ಬಹಳ ಮಾರ್ಗವಾಗುತ್ತದೆಯೆಂಬುವುದೇ ಅವರ ವಾದವಾಗಿರುತ್ತದೆ. ಈ ಕಾರಣದಿಂದ ಅವರುಗಳು—ಆಂಧ್ರಭಾಷೆಯನ್ನಾಡುವವರು ಯಾರೇ ಆಗಲಿ ಕುಲ ಜಾತಿ ಮತ ದೇಶ ತಾರತಮ್ಯವನ್ನಿಡದೆ ಅವರೆಲ್ಲರನ್ನೂ ಒಂದು ಕುಟುಂಬದವರನ್ನಾಗಿ ಭಾವಿಸಿ ಅವರೆಲ್ಲರಲ್ಲಿ ಜಾತೀಯತೆಯು ಸ್ಫುರಿಸುವಂತೆ ಮಾಡಲು ಪ್ರಯತ್ನಪಟ್ಟಿರುವುದು ಅಭಿನಂದನೀಯವಾಗಿದೆ.

ಈ ಉದ್ದೇಶಸಾಧನೆಗಾಗಿಯೇ ಆ ಜನರ ಮುಂದಾಳುಗಳು ಕಳೆದ ವರ್ಷ "ಆಂಧ್ರ ಮಹಾಸಭೆ" ಯೆಂಬುದನ್ನು ಸ್ಥಾಪಿಸಿದರು. ಅದರ ಎರಡನೆಯ ಅಧಿವೇಶನವು ಈಚೆ ತಿಂಗಳು ತಾ॥ ೧೨ರಿಂದ ೧೪ ದಿನಗಳವರೆಗೆ ಬೆಜವಾಡದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳಾಗಿ ೨ ಸಾವಿರ ಮಂದಿಗಳು ಬಂದಿದ್ದರು. ಆಂಧ್ರದೇಶೀಯರಾದ ದೊಡ್ಡ ದೊಡ್ಡ ಜಮೀನ್ದಾರರೂ, ಮಹಾವಿದ್ವಾಂಸರೂ, ದೇಶಾಭಿಮಾನಿಗಳೂ ನಿಯಮನಿರ್ಮಾಣ ಸಭಾಸದರುಗಳೂ ಸಹ ಅನೇಕ ಮಂದಿ ನೆರೆದಿದ್ದು ಸಭಾಧ್ಯಕ್ಷತೆಯನ್ನು ಜಗದ್ವಿಖ್ಯಾತರಾಗಿ ಕೀರ್ತಿಶಾಲಿಗಳಾದ ದಿವಾನ್ ಬಹದ್ದೂರ್ ಪುರಿಗಾಂ ವೆಂಕಟಪ್ಪಯ್ಯಪಂತುಲುಯವರು ವಹಿಸಿಕೊಂಡು ಪ್ರಖ್ಯಾತರಾಗಿದ್ದರು. ಶ್ರೀಯುತ ನ್ಯಾಯಪತಿ ಸುಬ್ಬರಾವುಪಂತುಲುಯವರು ಸಭಾಧ್ಯಕ್ಷರಾಗಿದ್ದರು. ಅವರಿಬ್ಬರ ದೀರ್ಘ ಭಾಷಣಗಳು ಅವರ ಉದ್ದೇಶವನ್ನು ಸಯುಕ್ತಿಕವಾಗಿ ಸಮರ್ಥಿಸುವುವು. ದೇಶಾಭ್ಯುದಯಕ್ಕಾಗಿ ಐಕಮತ್ಯದಿಂದ ಕರ್ತವ್ಯವನ್ನು ನೆರವೇರಿಸಲು ಸ್ವಜನರನ್ನು ಪ್ರೋತ್ಸಾಹಿಸತಕ್ಕುವುಗಳೂ ಆಗಿದ್ದುವು. ಸಭೆಯಲ್ಲಿ ಮಾಡಿದ ನಿರ್ಧಾರಗಳೊಳಗೆ ಆಂಧ್ರಭಾಷಾಭಿವೃದ್ಧಿಪ್ರಯತ್ನ, ಆಂಧ್ರರ ವಿದ್ಯೆ, ವಾಣಿಜ್ಯ, ಕೃಷಿ, ಶಿಲ್ಪಾದಿಗಳನ್ನು ಅಭಿವೃದ್ಧಿಗೊಳಿಸುವ ಪ್ರಯತ್ನ, ಆಂಧ್ರರಿಗಾಗಿ ಬೇರೊಂದು ವಿಶ್ವವಿದ್ಯಾಪೀಠವನ್ನು ಗೌರ್ನಮೆಂಟಿನವರಿಂದ ಸ್ಥಾಪಿಸಿಕೊಳ್ಳಲು ನಡೆಸುವ ಪ್ರಯತ್ನ, ಇವುಗಳಿಗೆ ಸಂಬಂಧಪಟ್ಟವೇ ವಿಶೇಷವಾಗಿದ್ದುವು. ವಿದ್ಯಾವಿಷಯಕವಾದ ನಿರ್ಧಾರಗಳೊಳಗೆ—ಪ್ರವೇಶಪರೀಕ್ಷೆಯವರೆಗೂ ವಿದ್ಯೆಯನ್ನು ಆಂಧ್ರಭಾಷೆಯೊಳಗೇ ಕಲಿಸುವಂತೆ ಏರ್ಪಡಿಸಬೇಕೆಂದೂ, ಸರ್ವಾಂಗಸಮೇತವಾದ ವಿದ್ಯಾಪೀಠವನ್ನು ಆಂಧ್ರರಿಗೋಸ್ಕರವೇ ಪ್ರತ್ಯೇಕವಾಗಿ ಸ್ಥಾಪಿಸಿಕೊಡಬೇಕೆಂದೂ, ಗೌರ್ನಮೆಂಟನ್ನು ಪ್ರಾರ್ಥಿಸಲು ನಿರ್ಧರಿಸಿದರು. ಮತ್ತು ಆಂಧ್ರದೇಶದ ಪ್ರತಿಗ್ರಾಮಗಳಲ್ಲೂ ಹಗಲಿನ ಅಥವಾ ರಾತ್ರಿಯ ಪಾಠಶಾಲೆಗಳು ಹೊಂದೊಂದರಂತೆಯಾದರೂ ಇರುವಂತೆ ಮಾಡಲೂ, ಪರಸ್ಪರ ಸಹಾಯಕ ಸಂಘಗಳನ್ನು ವಿಶೇಷವಾಗಿ ಸ್ಥಾಪಿಸಲೂ, ಆಂಧ್ರಪತ್ರಿಕೆಗಳಿಗೂ ಗ್ರಂಥಪ್ರಕಟನೆಗಳಿಗೂ ಪ್ರೋತ್ಸಾಹಕೊಡಲೂ [illegible]

ನ್ನು ಕುರಿತ ಆ ಸಭೆಯಲ್ಲಿ ಮಾಡಿ[illegible]
ಸಭೆಯಂತೆ ಆಂಧ್ರ ಮಹಿಳೆಯರ ೨ನೆಯ ಮಹಾಸಭೆಯು ಕೂಡ ಅದೇ ಪಟ್ಟಣದಲ್ಲಿ ಕೂಡಿ ಸ್ತ್ರೀಯರ ವಿದ್ಯಾಪ್ರಸಾರ ಸಮಾಜದ ಸಂಸ್ಕರಣಕ್ಕೆ ಸಂಬಂಧಿಸಿದ ಉಪನ್ಯಾಸಗಳೂ ನಿರ್ಧಾರಗಳೂ ನಡೆದುವು.

ಅಂತೂ ಅದರಲ್ಲಿ ನಡೆದ ಆದ್ಯಂತವಿಷಯಗಳನ್ನು ಪರಿಶೀಲಿಸುವಲ್ಲಿ ಆಂಧ್ರರಲ್ಲಿ ಸ್ವಾಭಿಮಾನಸ್ಫೂರ್ತಿಯು ವಿಶೇಷವಾಗಿದೆಯೆಂದು ಗೊತ್ತಾಗುವುದು. ಅವರಲ್ಲಿ ಹೀಗೆ ಹುಟ್ಟಿರುವ ಭಾಷಾಭೇದವನ್ನನುಸರಿಸಿದ ಆಧಿಪತ್ಯ ವಿಭಜನಾಪೇಕ್ಷೆ ಮೊದಲಾದವುಗಳು ಎಂದೂ ಐಕ್ಯಭಾವಕ್ಕೆ ಭಂಗಕರವೆಂದು ಕೆಲರು ಆಕ್ಷೇಪಿಸುತ್ತಿದ್ದರೂ, ಅವರ ಉದ್ದೇಶದಲ್ಲಿ ಪ್ರಜಾಹಿತಸಾಧನೆಗೆ ಅವಶ್ಯಕವಾದ ಪ್ರೋತ್ಸಾಹಕಾಂಶಗಳು ವಿಶೇಷವಾಗಿರುವುದರಿಂದ ಆಕ್ಷೇಪಿಸಲ್ಪಡತಕ್ಕುದಕ್ಕಿಂತಲೂ ಗುಣಾಂಶವೇ ವಿಶೇಷವಾಗಿದೆಯೆಂದು ಹೇಳಬಹುದು. ಹೊತ್ತುಹೊದಲು ಜನವರ್ಗಗಳಲ್ಲಿ ಅಭಿಮಾನವೆಂಬುದು ಹುಟ್ಟದಲ್ಲದೆ ಯಾವ ಕೆಲಸವೂ ಆಗಲಾರದು. ಆ ಅಭಿಮಾನವು ಮುಂದೆ ನಾನಾತರದಲ್ಲಿ ಪರಿಣಮಿಸಬಹುದು. ಯಾವ ತೆರದ ಅಭಿಮಾನದ ಗುರುತೂ ಇಲ್ಲದವರಿಂದ ಯಾವ ಮಹತ್ಕಾರ್ಯವೂ ನಿರ್ವಹಿಸಲ್ಪಟ್ಟಂತೆ ಪ್ರಪಂಚದ ಚರಿತ್ರೆಯಲ್ಲಿ ಗೊತ್ತಾಗುವುದಿಲ್ಲ. ಆದುದರಿಂದ, ಭಾಷಾಭಿಮಾನ ದೇಶಾಭಿಮಾನಗಳನ್ನು ಹುಟ್ಟಿಸಲು ಆಂಧ್ರರು ಕೈಕೊಂಡಿರುವ ಪ್ರಯತ್ನವು ಪ್ರಶಂಸನೀಯವಾಗಬೇಕು. ಅವರು [illegible] ವರ್ಷಗಳ ಹಿಂದಿನಿಂದ ವಿಶೇಷವಾದ ಚಳವಳಿಯನ್ನು ಹುಟ್ಟಿಸುತ್ತಿದ್ದಾರೆ. ಅನೇಕ ತರುಣರು ವಿದ್ಯಾಭ್ಯಾಸಕ್ಕಾಗಿ ಬಂಗಾಳ ಮೊದಲಾದ ಕಡೆಗಳಿಗೆ ಹೋಗುವುದೂ ಹೋಗುತ್ತಲೂ ಇದ್ದಾರೆ. [illegible] ವಿಷಯದಲ್ಲಿ ಅವರಲ್ಲಿ ಈಗ ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳಸುತ್ತಿದ್ದಾರೆ. ಆಂಧ್ರದೇಶದಲ್ಲಿ ಜಮೀನ್ದಾರರಾದ ಸಂಸ್ಥಾನಿಕರು ಅನೇಕರಿರುವುದರಿಂದ ಅವರುಗಳಲ್ಲಿ ಹಲವರು ಈ ಪ್ರಯತ್ನಗಳಿಗೆ ಉದಾರವಾಗಿ ಸಹಾಯ ಮಾಡುತ್ತಿದ್ದಾರೆ. [illegible] ಈ ವಿಷಯಗಳ ಬೆಳಗೆ ಬೊಂಬಾಯಿ [illegible] ಪತ್ರಿಕೆಯೆಂಬ ವಾರಪತ್ರಿಕೆ [illegible] ವರ್ಷ ಹಿಂದಿನಿಂದ ಪ್ರೋತ್ಸಾಹಿಸುವುದರಿಂದ [illegible] ಬಂದು ಕಳೆದ ಯುಗಾದಿಯಂದ ದಿನಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿದೆ. ಈ ಉದ್ಯಮ [illegible] ಉದಾರಮನಸ್ಕರಾದ [illegible] [illegible] ಸಹಾಯ ಮಾಡುತ್ತಿದ್ದಾರೆ. [illegible] ಆಂಗ್ಲ [illegible] ಸ್ಥಾಪಿಸಬೇಕೆಂದು ಕೇಳಿದ ಸಭೆಯ [illegible] ಹೊರಡಿಸಿರುತ್ತಾರೆ. ಇದಲ್ಲದೆ ಇನ್ನೂ ಅನೇಕ [illegible] ದಿನಪತ್ರಿಕೆಗಳೂ, ಮಾಸಪತ್ರಿಕೆಗಳೂ ಜಾಯಮಾನವಾಗಿ [illegible] ಗ್ರಂಥಪ್ರಚಾರಣಸಮಿತಿಗಳನ್ನು ಸ್ಥಾಪಿಸಿ ಧನಗಳನ್ನು ಕೂಡ ವಿನಿಯೋಗಿಸಿ ಭಾಷಾಭಿವೃದ್ಧಿಪಡಿಸುತ್ತಿದ್ದಾರೆ. ಕಾವ್ಯ ನಾಟಕ ಕಾದಂಬರಿ ಮೊದಲಾದ ಗ್ರಂಥಗಳು ಪ್ರತಿ ತಿಂಗಳಲ್ಲೂ ಹೊಸ ಹೊಸದಾಗಿ ಪ್ರಕಟವಾಗುತ್ತಿವೆ. ಯಾವುದೊಂದು ಪತ್ರಿಕೆಯಲ್ಲೂ ತಾತ್ಕಾಲಿಕ ವಿಷಯಗಳನ್ನೊಳಗೊಂಡ ಕವಿತೆಗಳು ಆಗಾಗ್ಗೆ ಗೋಚರವಾಗುತ್ತಲೇ ಇರುತ್ತವೆ. ಶತಾವಧಾನಿಗಳೂ ಪ್ರತ್ಯಕ್ಷಕವಿಗಳೂ ಅವರಲ್ಲಿ ಈಗಲೂ ಅನೇಕರಿರುವರೆಂದು ಗೊತ್ತಾಗುತ್ತದೆ. "ಆಂಧ್ರಶಬ್ದರತ್ನಾಕರ" ಎಂಬ ಸರ್ವಂಕಷವಾದ ಸಮಗ್ರ ಆಂಧ್ರಶಬ್ದನಿಘಂಟನ್ನು ಈ ಜನರು ತಮ್ಮ ಭಾಷೆಯಲ್ಲಿ ಬರೆಯಿಸುವ ಮಹಾಕಾರ್ಯವನ್ನು ಕೈಕೊಂಡಿದ್ದಾರೆ. ಇದಕ್ಕೆ ಸರ್ಕಾರದವರೂ ಸಹಾಯವನ್ನು ಮಾಡಿರುತ್ತಾರೆ. ಇವೆಲ್ಲಾ ಆಂಧ್ರರ ಸತ್ಪ್ರಯತ್ನದ ಭವಿಷ್ಯಕ್ಕೆ ಸೂಚಕಗಳಾಗಿರುತ್ತವೆ.

ನಮ್ಮ ನೆರೆಯ ಈ ಸಹೋದರರು ತಮ್ಮ ದೇಶಭಾಷೆಯ ಅಭಿವೃದ್ಧಿಗೋಸ್ಕರವಾಗಿ ಇಷ್ಟೆಲ್ಲಾ ಸಾಹಸವನ್ನು ಮಾಡುತ್ತಿರಲಾಗಿ ಕರ್ನಾಟಕ ಸಂಸ್ಥಾನಾಧೀಶರನ್ನೇ ಆಶ್ರಯಗಳನ್ನಾಗಿ ಪಡೆದಿರುವ ಕನ್ನಡಿಗರಾದ ನಾವು ಭಾಷೋಪಯೋಗಿಯೇ ಸ್ವಾರ್ಥವನ್ನು ಉಲ್ಲಂಘಿಸದ ಯಾವುದೊಂದು ವಿಶೇಷ ಪ್ರಯತ್ನವನ್ನೂ ನಡೆಸದೆ ಕುಳಿತಿರುವುದು ಲಜ್ಜಾಸ್ಪದವಲ್ಲವೇ? ಸ್ವದೇಶಭಾಷೆಯ ಅಭಿವೃದ್ಧಿಗೆ ಮನಸ್ಪೂರ್ತಿಕವಾಗಿ ಸಹಾಯಮಾಡುವ ಔದಾರ್ಯವು ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ನಿಸರ್ಗವಾಗಿರುತ್ತಿದ್ದರೂ, ಆ ಸಹಾಯವನ್ನು ನ್ಯಾಯವಾದ ರೀತಿಯಿಂದ ಉಪಯೋಗಿಸಿಕೊಂಡು ಶಾಶ್ವತಪ್ರಯೋಜನವನ್ನುಂಟುಮಾಡುವ ಸ್ಥಾಪನೆಗಳನ್ನು ನಡೆಯಿಸುವ ಮುಂದಾಳುಗಳ ಅಭಾವವು ನಮ್ಮ ದೇಶದಲ್ಲಿ ಸಂಪೂರ್ಣವಾಗಿರುವುದರಿಂದ ಕನ್ನಡಭಾಷೆಗೆ ಶೋಚನೀಯಸ್ಥಿತಿಯು ಒದಗಿರುತ್ತದೆ. ಬೇರೆ ದೇಶಭಾಷೆಯಲ್ಲಿರುವ ನಮ್ಮವರ ವಿದ್ಯಾಬುದ್ಧಿವಿವೇಕಗಳೆಲ್ಲ ಮುಂದಾಗಿ ಪ್ರಸಿದ್ಧಿಗೆ ಬರುವಂತೆ ಜನಗಳ ದೇಶಭಾಷೆಯಲ್ಲಿರುವ ಮಕ್ಕಳ ಮುಂದಾಳುಗಳು ಹಡಿಮೆಯೇ [illegible] ಹೀಗಿರುವ ಪುಸ್ತಕ ಸಂದರ್ಭದಲ್ಲಿ [illegible]

ಒಳದೇಶದ ವೃತ್ತಾಂತಗಳು.

ದಿವಾನರು ನಾಳೆ ನಗರದ ರಾಜಧಾನಿಗೆ ಬರುವರು. ಅಲ್ಲಿಯ ಕಚೇರಿಗಳನ್ನು ಪರೀಕ್ಷಿಸಿಕೊಂಡು ಉಪಕಾರಕ್ಕೆ ಹೊರಡುವುದಾಗಿ ವರ್ತಮಾನವಿದೆ.

ಶ್ರೀಮನ್ ಮಹಾರಾಜ ಯುವರಾಜರವರುಗಳೂ, ರಾಜಪರಿವಾರದವರೂ ಪರಿವಾರದೊಡನೆ ಕಳೆದ ಗುರುವಾರ ಬೆಳಿಗ್ಗೆ ಕೋಟಾರ ಬಾಡಿಗಳಲ್ಲಿ ಉಪಕಾರಕ್ಕೆ ದಯಮಾಡಿದರು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಮಿ॥ ಕೆ ಆರ್ ಶ್ರೀನಿವಾಸಯ್ಯಂಗಾರರಿಗೆ ಕಳೆದ ತಾ॥ ೧೪ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳು ಮತ್ತು ೧೪ ದಿವಸಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆ.

ಮದ್ರಾಸ್ ಹೈಕೋರ್ಟಿನ ವಕೀಲರು ... ಈಗ ಬೇರೆ ಯಾವ ... ಎಲ್ ಸಿ ... ಸಾಹೇಬರು ತಿಂಗಳೊಂದಕ್ಕೆ ೩೫೦೦ ರೂ ಸಂಬಳದ ಮೇಲೆ ೫ ವರ್ಷಕಾಲ ... ಕೋರ್ಟಿನ ಜಡ್ಜ್ ರಾಗಲೊಪ್ಪಿರುವುದಾಗಿ ವರ್ತಮಾನವಿದೆ.

ಮೈಸೂರ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೈಸೂರ್ ಸ್ಟಾರ್ ಪತ್ರಿಕೆಯ ಮೇಲೆ ನಡೆಯುತ್ತಿರುವ ವಿವಾದದಲ್ಲಿ ಫಿರ್ಯಾದಿಯ ವಿಚಾರಣೆಯು ಕಳೆದ ತಾ॥ ೧೩ ರಲ್ಲಿ ನಡೆದು ... ಇನ್ಸ್ಪೆಕ್ಟರ್ ನರಸಿಂಗರಾಯರ ವಿಚಾರಣೆಗಾಗಿ ನಾಳೆಯ ದಿನಕ್ಕೆ ಅಡ್ಜರ್ನ್ ಮಾಡಲ್ಪಟ್ಟಿರುವುದು.

ಸಂಸ್ಥಾನದಲ್ಲಿ ಕೆರೆಯ ಮತ್ತು ... ಹಾಲು ... ಜನರಿಗೆ ... ರೂ ಗಳವರೆಗೆ ಸುಲಭವಾದ ಬಡ್ಡಿಯಿಂದ ಸಾಲವನ್ನು ಸರ್ಕಾರ ಕೊಡಲೂ, ಇವರಿಗೆ ... ಮತ್ತು ದನಗಳು ... ಕೊಡಲು ಸರ್ಕಾರದವರು ಒಪ್ಪಿರುವರು.

ಒಕ್ಕಲಿಗರ ಪತ್ರಿಕೆಯ ಮೇಲೆ ತರಲ್ಪಟ್ಟಿರುವ ಮಾನನಷ್ಟದ ವಿವಾದವು ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕಳೆದ ತಾ॥ ೧೬ರಲ್ಲಿ ನಡೆದು ಫಿರ್ಯಾದಿಯ ಸಾಕ್ಷಿಗಳ ವಿಚಾರಣೆಯೆಲ್ಲವೂ ಮುಗಿದಿರುವುದರಿಂದ ಆಪಾದಿತರು ... ಇದರ ... ತಾ॥ ೨೭ ರಲ್ಲಿ ಕೊಡಬೇಕೆಂದು ಗೊತ್ತಾಗಿದೆ.

ಮಾಲೂರು ತಾಲ್ಲೂಕು ಅಮಲ್ದಾರರಾಗಿದ್ದ ಮಿ॥ ಬಿ ... ರವರು ಉದ್ಯೋಗದಿಂದ ನಿವೃತ್ತಿಗೊಳ್ಳುವುದರಿಂದ ಈಗ ... ಮಿ॥ ಎಚ್ ... ರವರು ಮಾಲೂರ ತಾ॥ ಅಮಲ್ದಾರರಾಗಿ ... ಮತ್ತು ಅಮಲ್ದಾರರಾಗಿದ್ದ ಮಿ॥ ಎಚ್ ... ರವರು ... ತಾ॥ ಗೆ ಬದಲಾಯಿಸಲ್ಪಟ್ಟಿರುವರು.

೧೯೧೧ನೆಯ ಇಸವಿಯಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ... ಚೀಫ್ ಕೋರ್ಟಿನವರ ಅನುಮತಿಯಿಂದ ಸರ್ಕಾರದವರು ಸಿವಿಲ್ ಕೋರ್ಟಿನ ... ಸಂಬಳವನ್ನು ... ರೂ ಇಂದ ... ರೂ ಗೂ ... ಸಂಬಳವನ್ನು ... ರೂ. ಇಂದ ... ರೂ ಗೂ ... ಹೆಚ್ಚಿಸಿರುತ್ತಾರಲ್ಲದೆ ಇನ್ನುಮೇಲೆ ಇವರಿಂದ ಉತ್ತಮವಾಗಿ ಕೆಲಸವು ನಡೆಯುವುದೆಂದು ನಿರೀಕ್ಷಿಸುತ್ತಾರೆ.

ಕನ್ನಂಬಾಡಿ ಕಟ್ಟೆಯನ್ನು ... ಅಡಿ ಎತ್ತರಕ್ಕೆ ಹೆಚ್ಚಿಸಿದಲ್ಲಿ ... ತಂಜಾವೂರು ... ಕೊಡಬೇಕಾಗುತ್ತದೆಂದು ನಿರ್ಧಾರವಾಗಿರುವುದಷ್ಟೆ. ಆದರೆ ಈ ಅಳತೆಯು ಕನ್ನಂಬಾಡಿ ಕಟ್ಟೆಯ ಹತ್ತಿರವೇ ಅಥವಾ ತಂಜಾವೂರು ... ಕಟ್ಟೆಯು ... ವಿವಾದವು ... ಈ ದಿವಸ ... ಕಟ್ಟೆಯು ... ಅಡಿಗೆ ಕಟ್ಟಲ್ಪಡತಕ್ಕದ್ದೇ ಇಲ್ಲವೆ? ಎಂಬುದು ಈ ತಿಂಗಳ ಕಡೆಯಲ್ಲಿ ನಿರ್ಧರಿಸಲ್ಪಡುವುದು.

ಹುಣಸೂರು ತಾ॥ ಅರೇನಹಳ್ಳಿ ಗ್ರಾಮದ ... ಎಂಬುವನಲ್ಲಿದ್ದ ... ಒಂದು ... ಮನೆಯ ... ತೆಗೆದುಕೊಂಡು ಹೋಗಿ ... ತಪ್ಪಿಸಿಕೊಂಡು ಓಡಿದರು. ... [illegible] ... ಯಿಂದ ಹಿಡಿಯಲ್ಪಟ್ಟನು.

...ಮೇಲೆ ವಿಚಾರಣೆಯಲ್ಲಿರುವವನು. ಪೋಲೀಸರು ಇವನು ... ಹುಡುಕುತ್ತಿದ್ದಾರೆ. ಈ ... ಸರ್ಕಾರದವರು ... ಒಬ್ಬ ಪತ್ರಿಕಾಸಂಪಾದಕರು ಬರೆದಿರುತ್ತಾರೆ.

ತಿರುವಾಂಕೂರಿನಲ್ಲಿ ಕುಡಿಯುವ ನೀರಿಗೆ ಅತ್ಯಂತ ಅಭಾವವಾಗಿರುವುದರಿಂದ ಅಲ್ಲಿಯ ಮ್ಯುನಿಸಿಪಾಲಿಟಿಯವರು ೪೦೦೦೦ ರೂ. ವ್ಯಯದಿಂದ ... ಈ ಊರಿನ ... ರಾತ್ರಿಯಲ್ಲಿ ... ರೀಡಿಂಗ್ ರೂಮಿನ ... ಕಳೆದ ... ಉತ್ಸವವು ... ಗಾಯನವೂ ನಡೆಯುತ್ತಿದ್ದು ... ದಿವಸ ... ಜನರಿಗೆ ... ಭೋಜನವು ನಡೆದು ... ಅತಿ ವಿಜೃಂಭಣೆಯಿಂದ ಜರುಗಿತು.

ಭರತಖಂಡದ ವೃತ್ತಾಂತಗಳು.

ಕಳೆದ ತಾ॥ ... ರಲ್ಲಿ ... ಮತ್ತು ... ಕಾರ್ಯಾಲಯವು ...

ಕಳೆದವಾರದಲ್ಲಿ ಭರತಖಂಡದ ನಾನಾಭಾಗಗಳಲ್ಲಿ ... ಸಂಬಂಧವಾದ ವಿಷಯಗಳನ್ನು ...

... ಇವರು ಅಲ್ಲಿ ೬ ತಿಂಗಳಕಾಲ ... ತಿಳಿಯಬರುತ್ತದೆ.

... ಕಳೆದ ತಾ॥ ... ರಲ್ಲಿ ...

ಭಾರತೀಯರ ... ರವೀಂದ್ರನಾಥ ಠಾಕೂರ್‌ರವರಿಂದ ... ಶಾಂತಿನಿಕೇತನ ... ಸಂಬಳಕ್ಕೆ ...

ದಿಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ... ಸಭೆಯಲ್ಲಿ ... ರೂ ...

ಬಂಗಾಳದ ರವೀಂದ್ರನಾಥ ಠಾಕೂರ್‌ರವರು ತಮ್ಮ ಅದ್ಭುತ ಕವಿತಾಶಕ್ತಿಯಿಂದ ... ಪ್ರಸಿದ್ಧರಾಗಿರುವರಷ್ಟೆ. ಈಗ ... ಅವನೀಂದ್ರನಾಥ ಠಾಕೂರ್‌ರವರು ತಮ್ಮ ಚಿತ್ರಕಲಾನೈಪುಣ್ಯದಿಂದ ... ಚಿತ್ರಗಳನ್ನು ...

ಪೋಲೀಸ್ ಇನ್ಸ್‌ಪೆಕ್ಟರನ್ನು ಕೊಂದವನಿಗೆ ಸಹಾಯ ... ವಿಚಾರಣೆಗೆ ... ಆತನು ... ಬಿಡ್ಡರ್ ಇ ... ರವರ ...

ತೀರಿದ ... ಅವರ ... ಮತ್ತು ... ಕ್ಷೇತ್ರದಲ್ಲಿ ... ಅಣ್ಣಾಸಾಹೇಬ ... ಶೀಲ ... ವಿಶೇಷ ... ಇವರು ... ಸರ್ಕಾರದವರು ... ಊರುಗಳು ... ಕನ್ಯೆಯ ... ಶೃಂಗೇರಿ ... ಮಠ ... ಗಂಡನ ... ತಿಳಿಸಿದ್ದಾರೆ. ... ಹೆಂಗಸರು ... ಕಟ್ಟಿ ...

ವಿದೇಶವೃತ್ತಾಂತಗಳು.

ಜರ್ಮನ್ ಚಕ್ರವರ್ತಿ ... ಎಸ್ಟೇಟ್ ... ಲೆಫ್ಟಿನೆಂಟ್ ... ಸರ್ಕಾರದವರು ...

ಕಳೆದ ತಾ॥ ... ರಲ್ಲಿ ... ಇಂಗ್ಲೆಂಡಿನ ...

ಇದುವರೆಗೆ ... ರೈಲ್ವೆ ... ಲಂಡನ್ ನಗರದಲ್ಲಿ ... ಸರ್ಕಾರದವರು ...

... ಅಮೇರಿಕಾದ ... ಸರ್ಕಾರದವರಿಗೆ ... ಪ್ರಕಟಿಸುತ್ತದೆ ... ರಷಿಯಾ ... ಕೋಟಿ ... ಲಕ್ಷ ... ಇದನ್ನು ... ಜರ್ಮನಿ ... ಪ್ರತಿ ...

ಸೀರಗ್ಗದ ಕನ್ಯೆಯು ಬೇಕು.

ಮುಸ್ಲರೂಪ, ... ಬ್ರಾಹ್ಮಣ ... ವಯಸ್ಸು ... ಕನ್ಯೆಯು ...

... ಮೈಸೂರು.

ಹುನಸೂರು ತಾ॥ ಅರೇನಹಳ್ಳಿ ಗ್ರಾಮದ ಪಟೇಲ್ ಶ್ರೀ ನ್ನಬಸಪ್ಪನವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಮಾರ್ಚಿ ತಾ॥ ೨೦ ರ ಸೋಮವಾರದ ದಿವಸ ಮೃತಪಟ್ಟರೆಂದು ತಿಳಿಸಲು ವಿಷಾದಪಡುತ್ತೇನೆ ಇವರಿಗೆ ಅವಸಾನಕಾಲದಲ್ಲಿ ೭೦ ವರ್ಷಗಳ ವಯಸ್ಸಾಗಿತ್ತು. ಇವರು ಜನಿಸಿದಾರಭ್ಯದಿಂದಲೂ ಮೃತಪಡುವವರೆಗೂ ಸುಖವಾಗಿದ್ದರಲ್ಲದೆ ಯಾವಭಾಗದಲ್ಲೂ ವ್ಯಸನವನ್ನಾಗಲಿ ಕಷ್ಟವನ್ನಾಗಲಿ ಪಟ್ಟವರಲ್ಲ. ಈಗ್ಗೆ ಕೆಲವು ತಿಂಗಳುಗಳಿಗೆ ಇವರು ತಮ್ಮ ಆಸ್ತಿಯನ್ನೆಲ್ಲಾ ತಮ್ಮ ಮಕ್ಕಳುಗಳಿಗೆ ವಿಭಾಗಮಾಡಿಕೊಡುವಾಗ್ಗೆ ಧರ್ಮಕಾರ್ಯಗಳಿಗೋಸ್ಕರ ಕೆಲವು ಮೊಬಲಗನ್ನು ತೆಗೆದಿರುತ್ತಾರೆ ಇದರಲ್ಲಿ ೧೯೦೭ ನೆಯ ಇಸವಿಯಲ್ಲಿ ಬೆಂಗಳೂರಿನಲ್ಲಿ ನಡೆದ ವೀರಶೈವ ಮಹಾಸಭಾಕಾಲದಲ್ಲಿ ಲಿಂಗಾಯತ ವಿದ್ಯಾವರ್ಧಕ ಫಂಡಿಗೆ ಕೊಡಲು ವಾಗ್ದಾನ ಮಾಡಿದ್ದ ೩೦೦ ರೂ. ಗಳ ಮೊಬಲಗೂ ಸಹ ಸೇರಿರುತ್ತದೆ. ಅಲ್ಲದೆ ಇವರ ಉತ್ತರಕ್ರಿಯಾದಿಗಳಾದ ದಿವಸ ಇವರ ಸ್ಮರಣಾರ್ಥವಾಗಿ ಔಷಧೀ ಫಂಡಿಗೆ ಸ್ವಲ್ಪ ದ್ರವ್ಯವನ್ನು ಸಹ ಬೇರೆ ತೆಗೆದರೆಂದು ತಿಳಿಯಬರುತ್ತದೆ. ಅವರ ವಾಗ್ದಾನವನ್ನು ನೆರವೇರಿಸಲು ಅವರ ಮಕ್ಕಳುಗಳು ಬದ್ಧಕಂಕಣರಾಗಿರುತ್ತಾರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಶ್ರೀ॥ ಚೆನ್ನಬಸಪ್ಪನವರು ಸದರಿ ತಾ॥ ನಲ್ಲಿ ಗಣ್ಯರಾಗಿಯೂ, ಮಾತುಗಾರಿಗಳಾಗಿಯೂ, ತಾ॥ ಬೋರ್ಡ್ ಮೆಂಬರಾಗಿಯೂ, ವಿಶ್ವಾಸ್ಯರಾಗಿಯೂ, ಧರ್ಮಿಷ್ಠರಾಗಿಯೂ ಇದ್ದರು. ಇವರಿಗೆ ೪ ಜನ ಗಂಡುಮಕ್ಕಳೂ ೩ ಹೆಣ್ಣುಮಕ್ಕಳೂ ಇರುತ್ತಾರೆ. ಇವರ ಹಿರೀ ಮಕ್ಕಳಾದ ಬಸವಲಿಂಗಪ್ಪನವರಿಗೆ ಸದರಿ ಗ್ರಾಮದ ಪಟೇಲಿ ಕೆಲಸವಾಗಿರುತ್ತೆಂದು ತಿಳಿಯ ಬರುತ್ತದೆ. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ವಿಯೋಗದಿಂದ ದುಃಖಪಡುತ್ತಿರುವ ಅವರ ಮಾತೃಶ್ರೀಯವರೇ ಮುಂತಾದವರಿಗೆ ಧೈರ್ಯವನ್ನೂ ಶ್ರೀ ಜಗದೀಶ್ವರನು ಕೊಡಲೆಂದು ಹಾರೈಸುತ್ತೇನೆ.

ಗುರ್ಕಿ ಶಿವಪ್ಪಶಾಸ್ತ್ರಿ

ತುಮಕೂರು ತಾ॥ ಗ್ವಾಸ್ಲಂಡದಲ್ಲಿ ರೀಡಿಂಗ್‌ರೂಮ್ ಸ್ಥಾಪನೆ

ಶ್ರೀ ಆನಂದನಾಮ ಸಂವತ್ಸರದ ಯುಗಾದಿಹಬ್ಬದ ದಿವಸ (೧೪-೪-೧೯೧೪) ಇಲ್ಲಿನ ಎ ವಿ ಸ್ಕೂಲಿನಲ್ಲಿ ಸೇರಿದ್ದ ಸಭೆಯಲ್ಲಿ ತಾಲ್ಲೂಕು ಅಮಲ್ದಾರ್ ಮ॥ರಾ॥ ಶ್ರೀ ರಾಮಚಂದ್ರರಾಯರವರು ಅಗ್ರಾಸನವನ್ನು ವಹಿಸಿದ್ದರು. ವಿದ್ಯಾರ್ಥಿನಿಪುಣರು ಗಾನರೂಪವಾಗಿ ದೇವತಾಪ್ರಾರ್ಥನೆಯನ್ನು ಮಾಡಿದ ತರುವಾಯ ಸಭಾಧ್ಯಕ್ಷರ ಅಪ್ಪಣೆಯ ಮೇರೆಗೆ ಬಾ॥ ಸ್ಕೂ॥ ಹೆ॥ ಮಾ॥ ಮ॥ ರಾ॥ ಸಿದ್ಧಲಿಂಗಪ್ಪನವರು ವಿದ್ಯಾಭ್ಯಾಸದ ಆವಶ್ಯಕತೆಯನ್ನೂ, ವೃತ್ತಪತ್ರಿಕೆಗಳನ್ನು ಓದುವುದರಿಂದ ಉಂಟಾಗುವ ಪ್ರಯೋಜನಗಳನ್ನೂ ಕುರಿತು ಲಲಿತವಾದ ಸರಣಿಯಿಂದ ಮನೋಹರವಾಗಿ ಉಪನ್ಯಾಸ ಮಾಡಿದರು. ಅನಂತರ ನಮ್ಮ ಅಮಲ್ದಾರ್ ಸಾ॥ ರವರು ಈ ಗ್ರಾಮವು ಸುಮಾರು ೭೦೦ ಮನೆಗಳಿಂದಲೂ ೩೦೦೦ ಪ್ರಜೆಗಳಿಂದಲೂ ಕೂಡಿದ್ದಾಗ್ಯೂ ಇಲ್ಲಿ ವಾಚನಶಾಲೆಯಿಲ್ಲದಿರುವುದು ಒಂದು ಕುಂದಕವೆಂದು ಸೂಚಿಸಿ ಸಭಿಕರ ಇಷ್ಟದಂತೆ ಒಂದು ರೀಡಿಂಗ್‌ರೂಮನ್ನು ಸ್ಥಾಪಿಸಿ ಅದಕ್ಕೆ ಮ॥ರಾ॥ ಪೇಷ್ಕರ್ ಪ್ರೊ॥ ಇಸ್ ಹನುಮಂತರಾಯರವರನ್ನು ಪ್ರೆಸಿಡೆಂಟರನ್ನಾಗಿಯೂ ಮ॥ರಾ॥ ಬಾ॥ ಸ್ಕೂ॥ ಹೆ॥ ಮಾ॥ ಸಿದ್ಧಲಿಂಗಪ್ಪನವರನ್ನು ಸೆಕ್ರೆಟರಿಗಳನ್ನಾಗಿಯೂ, ಮ॥ರಾ॥ ಪಾ॥ ಸಿದ್ಧಬಸವಯ್ಯನವರು, ಶ್ಯಾ॥ ಶ್ರೀನಿವಾಸರಾಯರವರು, ಶೇ॥ ಸೂ॥ ಮಾ॥ ಎಲ್ ನಾರಣಪ್ಪನವರು, ಗ॥ ಸ್ಕೂ॥ ಹೆ॥ ಮಾ॥ ಶಿವಯ್ಯನವರು, ಆರ್. ವೆಂಕಟರಾಯರವರು, ಜ॥ ಅಂ॥ ವೀರಬಸಪ್ಪನವರು, ಕ॥ ನರಸಯ್ಯನವರು, ಅಬ್ದುಲ್ಲಾ ಸಾಹೇಬರು ಇವರುಗಳನ್ನು ಮೆಂಬರುಗಳನ್ನಾಗಿಯೂ ಚುನಾಯಿಸಿ, ಪತ್ರಿಕೆಗಳನ್ನೂ ಸಾಧ್ಯವಾದಷ್ಟು ಪುಸ್ತಕಗಳನ್ನೂ ತರಿಸುವುದಕ್ಕೆ ತಕ್ಕ ಏರ್ಪಾಡು ಮಾಡಿದ್ದಲ್ಲದೆ ಪ್ರತಿದಿನ ಸಾಯಂಕಾಲ ೫ ಗಂಟೆಯ ಮೇಲೆ ರಾತ್ರಿ ೮ ಗಂಟೆಯವರೆಗೂ ಬಾ॥ ಸ್ಕೂಲಿನಲ್ಲಿ ಗ್ರಾಮಸ್ಥರು ಸೇರಿ ಓದಿ ಅಥವಾ ಓದಿಸಿ ಕೇಳಿ ವಿಷಯಗಳನ್ನು ತಿಳಿದುಕೊಂಡು ತಮ್ಮ ನಾಗರಿಕತೆಯನ್ನು ವೃದ್ಧಿಪಡಿಸಿಕೊಳ್ಳುವುದರ ಮೂಲಕ ದೇಶದ ಏಳಿಗೆಗೆ ಸಹಾಯ ಮಾಡುವುದು ಕರ್ತವ್ಯವೆಂತಲೂ, ಪ್ರತಿವಾರವೂ ಒಂದು ಉಪಯುಕ್ತ ವಿಷಯವನ್ನು ಕುರಿತು ಸರ್ವಸಮ್ಮತವಾಗಿರುವಂತೆ ಉಪನ್ಯಾಸ ಮಾಡುವುದು ಮುಖ್ಯವೆಂತಲೂ ಇವೇ ಮೊದಲಾದ ಸದುಪದೇಶಗಳನ್ನು ಸ್ವಾರಸ್ಯವಾಗಿ ಬೋಧಿಸಿದರು. ಕೊಪಕೊತಾಮನ್ಯಾಯದಂತೆ ಇದ್ದ ನಮಗೆ ಇವರು ಜ್ಞಾನೋಪದೇಶ ಮಾಡಿ ಉದ್ಧಾರ ಮಾಡಿದುದಕ್ಕಾಗಿ ನಾವು ಇವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ. ತರುವಾಯ ನಮ್ಮ ಶ್ರೀಮನ್ಮಹಾರಾಜರವರ ಮತ್ತು ಸಂಸ್ಥಾನಾಧಿಪತಿಗಳ ಶ್ರೇಯಃಪ್ರಾರ್ಥನೆಯನ್ನು ಮಾಡಿದ ಮೇಲೆ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಸಭೆಯು ಭರಕಾಸ್ತುಮಾಡಲ್ಪಟ್ಟಿತು.

ಇದರಂತೆ ನಮ್ಮ ಸಂಸ್ಥಾನದ ಎಲ್ಲಾ ಗ್ರಾಮ ಗ್ರಾಮಾಂತರಗಳಲ್ಲಿಯೂ ಕೂಡ ವಾಚನಶಾಲೆಗಳು ಏರ್ಪಟ್ಟು ಪ್ರಜೆಗಳೆಲ್ಲರೂ ಸಹೃದಯರಾಗಿ ತಿಳಿವಳಿಕೆ ಎಂಬ ಆಸ್ತಿಯನ್ನು ಸಮಾನವಾಗಿ ವಿಭಾಗಿಸಿಕೊಂಡು ನಿಕಮತ್ಯದಿಂದ ಇಹಪರಸುಖಗಳನ್ನು ಅನುಭವಿಸುವಂತೆ ಭಗವಂತನು ಅನುಗ್ರಹಿಸಲಿ ಎಂಬುದಾಗಿ ನಾವು ಆತನನ್ನು ವಿನಯಪೂರ್ವಕವಾಗಿ ಬೇಡಿಕೊಳ್ಳುವೆವು.

ನಮ್ಮ ಈ ನೂತನ ರೀಡಿಂಗ್‌ರೂಮಿಗೆ ಪ್ರೀಯಾಗಿ ಪುಸ್ತಕಗಳನ್ನೂ, ಅರ್ಧ ಛಾರ್ಜಿಗೆ ವೃತ್ತಪತ್ರಿಕೆಗಳನ್ನೂ ಯಾವ ಮಹನೀಯರು ಕಳುಹಿಸಿಕೊಡುತ್ತಾರೆಯೋ ಅಂಥವರ ಹೆಸರನ್ನು ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸುವೆವು.

ದೇಶಸೇವಕ,

ಜ॥ ಅಂ॥ ಎಸ್ ವೀರಭದ್ರಪ್ಪ

ಆನರೆಬಲ್ ಮಿಸರ್ಟರ್ ಡಬ್ಲ್ಯು ಡಿ ಶೆಪ್ಪರ್ಡ್ ಸಾಹೇಬ ಬಹದೂರ ಸಿ ಐ ಇ ಐ ಸಿ ಎಸ್. ಕಮಿಷನರ ದಕ್ಷಿಣಭಾಗ ಇವರ ಸನ್ಮಾನಾರ್ಥ ಗಾರ್ಡನ್‌ಪಾರ್ಟಿಯ ಸಮಾರಂಭವು

ದಕ್ಷಿಣಭಾಗದ ಲೋಕಪ್ರಿಯ ಕಮಿಷನರರಾದ ಆನರೇಬಲ್ ಮಿಸ್ಟರ್ ಶೆಪ್ಪರ್ಡ್ ದೊರೆಗಳು ಮುಂಬಯಿ ಸರಕಾರದ ಆಕ್ಟಿಂಗ್ ಕೌನ್ಸಿಲರಾಗಿ ವರ್ಗಮಾಡಲ್ಪಟ್ಟಿದ್ದು ಅವರು ಬೇಗನೆ ಮುಂಬಯಿಗೆ ತೆರಳುವವರಿದ್ದ ಕಾರಣ ಅವರ ಸನ್ಮಾನಾರ್ಥವಾಗಿ ಬೆಳಗಾಂ ಜಿಲ್ಲೆಯ ಯಾವತ್ತು ಜನರ ಪತಿಯಿಂದ ರಾ॥ ರಾ॥ ರಾವ ಬಹಾದೂರ ಚನಮಲ್ಲಪ್ಪ ಅರಟಾಳ, ಎ ಎಲ್ ಪಿ ಜೆನ್ನಿನರ ಡಿಸ್ಟ್ರಿಕ್ಟ ಡಿಪ್ಯುಟಿ ಕಲೆಕ್ಟರ ಇವರು ಏಪ್ರೀಲ್ ತಾ॥ ೧೨ ರವಿವಾರದ ದಿವಸ ಸಾಯಂಕಾಲದ ೫॥ ಗಂಟೆಗೆ ಬೆಳಗಾವಿಯ ಗವರ್ನಮೆಂಟ್ ಗಾರ್ಡನ್ನಲ್ಲಿ (ಸರಕಾರದ ಉದ್ಯಾನದಲ್ಲಿ) ಗಾರ್ಡನ್ ಪಾರ್ಟಿಯನ್ನು (ವನವಿಹಾರ ಸಮಾರಂಭವನ್ನು) ಮಾಡಿಸಿದ್ದರು. ಈ ಸಮಾರಂಭಕ್ಕಾಗಿ ಬೆಳಗಾಂವ, ಅಥಣಿ, ಗೋಕಾಕ, ಚಿಕ್ಕೋಡಿ, ಹೈಲಹೊಂಗಲ, ಧಾರವಾಡ, ಗದಗ, ವಿಜಾಪುರ, ಬಾಗಲಕೋಟ ಮೊದಲಾದ ಕಡೆಯಿಂದ ೨೦೦೦ ಜನ ಸದ್ಗೃಹಸ್ಥರು ಮಿಳಿತರಾಗಿದ್ದರು. ಈ ಸಂದರ್ಭದಲ್ಲಿ ಯುರೋಪಿಯನ್, ಪಾರ್ಸಿ, ಬ್ರಾಹ್ಮಣ, ಲಿಂಗಾಯತ, ಜೈನ, ಮರಾಠೆ, ಮುಸಲ್ಮಾನ, ಮೊದಲಾದ ಯಾವತ್ತು ಜಾತಿಯ ಗೃಹಸ್ಥರಿಗೋಸ್ಕರ ಅವರವರ ಜಾತಿಯ ಸಾಂಪ್ರದಾಯದ ಪ್ರಕಾರ ಚಹಾಪಾನದ ಫಲಾಹಾರದ ವ್ಯವಸ್ಥೆಯನ್ನು ಇಡಿಸಿದ್ದರು. ಯುರೋಪಿಯನ್ ಮತ್ತು ಪಾರ್ಸಿ ಜನರ ಚಹಾಪಾನಕ್ಕೋಸ್ಕರ ಗೌವರ್ನಮೆಂಟ್ ಗಾರ್ಡನದ ವಿಶಾಲವಾದ ಸುಂದರ ಮಂದಿರವನ್ನು ಗೊತ್ತುಮಾಡಿದ್ದರಲ್ಲದೆ ಬ್ರಾಹ್ಮಣ, ಲಿಂಗಾಯತ, ಜೈನ, ಮುಸಲ್ಮಾನ ಮೊದಲಾದವರಿಗೋಸ್ಕರ ಬೇರೆ ಬೇರೆ ತೇರೆಗಳನ್ನು ಹೂಡಿಸಿ ಅಲ್ಲಿ ಕುಳಿತುಕೊಳ್ಳುವುದಕ್ಕೆ ಕುರ್ಚಿ, ಬೆಂಚುಗಳನ್ನು ಸಾಲುಸಾಲಾಗಿ ಇರಿಸಿದ್ದರು. ಇದಲ್ಲದೆ ಕೆಲ ಕೆಲವು ಡೇರೆಗಳಲ್ಲಿ ಗ್ರಾಮೋಫೋನೋದ ಮಂಜುಳಗಾಯನದ ವ್ಯವಸ್ಥೆಯನ್ನು ಮಾಡಿದ್ದರು. ಪಾಶ್ಚಿಮಾತ್ಯ ಪದ್ಧತಿಯ ಪ್ರಕಾರ ವಾದ್ಯವಾದ್ಯದ ವ್ಯವಸ್ಥೆಯನ್ನು ಮಾಡಿಸಿದ್ದಲ್ಲದೆ ಪೌರ್ವಾತ್ಯ ಪದ್ಧತಿಯ ಪ್ರಕಾರ ವೀಣಾ ಮೃದಂಗಸಹಿತರಾದ ಗಾಯಕರು ಗಾಯನವನ್ನು ಮಾಡುವ ವ್ಯವಸ್ಥೆಯನ್ನು ಮಾಡಿದ್ದರು.

ಆಮಂತ್ರಣಪತ್ರದಲ್ಲಿ ಸೂಚಿಸಿದ ವೇಳೆಗಿಂತ ಮುಂಚಿತವಾಗಿ ಯಾವತ್ತು ನಿಮಂತ್ರಿತ ಸದ್ಗೃಹಸ್ಥರು ಉದ್ಯಾನಕ್ಕೆ ಬಂದು ಆನರೇಬಲ್ ಮಿಸ್ಟರ್ ಶೆಪ್ಪರ್ಡ್ ದೊರೆಗಳ ಆಗಮನವನ್ನು ನಿರೀಕ್ಷಿಸುತ್ತ ನಿಂತರು. ಬಳಿಕ ದೊರೆಗಳು ತಮ್ಮ ಯುರೋಪಿಯನ್ ಸ್ನೇಹಿತರೊಂದಿಗೆ ಸರಿಯಾದ ವೇಳೆಗೆ ಬಂದು ರಥದಿಂದ ಕೆಳಗಿಳಿದ ಕೂಡಲೆ ಯಾವತ್ತು ಜನರು ಆನಂದದಿಂದ ಕರತಾಡನವನ್ನು ಮಾಡಿ ಅವರಿಗೆ ಸ್ವಾಗತವನ್ನು ಮಾಡಿದರು. ಬಳಿಕ ದೊರೆಗಳು ರಾ॥ ಬ॥ ಅರಟಾಳ ಸಾಹೇಬ ಮತ್ತು ಮಿ॥ ರಂಗೋ ಗೋವಿಂದನಾಯಕ ವಕೀಲ ಇವರೊಡನೆ ಯಾವತ್ತು ಸದ್ಗೃಹಸ್ಥರ ಬಳಿಗೆ ಹೋಗಿ ಅವರ ಭೇಟಿಯನ್ನು ತೆಗೆದುಕೊಂಡು ಅವರೊಡನೆ ಹಸ್ತಾಂದೋಲನ(ಶೇಕಹ್ಯಾಂಡ)ವನ್ನು ಮಾಡಿ ಸುಪ್ರಸನ್ನಹೃದಯದಿಂದ ಅವರ ಕ್ಷೇಮಕುಶಲಗಳನ್ನು ವಿಚಾರಿಸುತ್ತ ಸ್ವಲ್ಪಹೊತ್ತು ಅಡ್ಡಾಡಿದರು. ಆಮೇಲೆ ಅವರು ರಾ॥ ರಾ॥ ಸಿದ್ಧರಾಮಪ್ಪ ಹುಕ್ಕೇರಿ ಎಂಬ ಗಾಯಕನ ಗುಂಪಿನಲ್ಲಿ ಹೋಗಿ ನಿಂತರು. ಅಲ್ಲಿ ಅವರು ದೊರೆಗಳ ಸ್ವಾಗತಪರವಾದ ಪದ್ಯಗಳನ್ನೂ, ದೊರೆಗಳ ಗುಣಾನುವಾದದ ಪದ್ಯಗಳನ್ನೂ ಮನೋಹರವಾಗಿ ಹಾಡಿದರು. ಅವುಗಳನ್ನು ಕೇಳಿ ದೊರೆಗಳೂ ದೊರೆಗಳ ಸ್ನೇಹಿತರೂ ಕಿವಿಗೊಟ್ಟು ಕೇಳಿ ಬಹಳ ಆನಂದಪಟ್ಟರು. ಈ ಬಳಿಕ ಸಮಾರಂಭದ ಮುಖ್ಯ ವ್ಯವಸ್ಥಾಪಕರಾದ ರಾ॥ ಬ॥ ಅರಟಾಳ ಸಾಹೇಬರ ವಿನಂತಿ[illegible] ದೊರೆಗಳು ಈ ಗಾಯಕನಿಗೆ ಮತ್ತು ಈ ಮೇಳದ ಜನರಿಗೆ ಸ್ವಹಸ್ತದಿಂದ ಉಡುಗರೆಗಳನ್ನು ಕೊಟ್ಟು ಅವರಿಗೆ ಸನ್ಮಾನ ಮಾಡಿದರು. ಬಳಿಕ ದೊರೆಗಳವರ ಮತ್ತು ಅವರ ಸಂಗತ ಬಂದಿದ್ದ ಯುರೋಪಿಯನ್ ಸಭ್ಯಸ್ತ್ರೀಪುರುಷರ ಮತ್ತು ಕೆಲ ನೇಟೀವ್ ಸದ್ಗೃಹಸ್ಥರ ಛಾಯಾಚಿತ್ರವನ್ನು ತೆಗೆದುಕೊಳ್ಳುವ ಕೆಲಸವು ನಡೆಯಿತು. ಅನಂತರ ಉದ್ಯಾನದ ಮಂದಿರದೊಳಗೆ ಯುರೋಪಿಯನ್ ಮತ್ತು ನೇಟೀವ್ ಜಮೀಜನರು ಬಂದು ಕುಳಿತರು. ಅಲ್ಲಿ ರಾ॥ ಬ॥ ಅರಟಾಳ ಇವರು ಆ॥ ಶೆಪರ್ಡ ದೊರೆಗಳ ಬುದ್ಧಿವಿಶೇಷವನ್ನೂ ಸದ್ಗುಣಗಳನ್ನೂ ಬಹು ಚಾತುರ್ಯದಿಂದ ಶ್ಲಾಘಿಸಿ ಅವರು ಉತ್ತರಧ್ರುವಾಗಿ ಹೆಚ್ಚು ಘನವಾದ ಪದವನ್ನು ಹೊಂದಲೆಂದು ತಮ್ಮ ಸುಂದರವಾದ ಭಾಷಣದಲ್ಲಿ ಅಭಿಪ್ರದರ್ಶನಮಾಡಿದರು. ತರುವಾಯ ಅದಕ್ಕೆ ಆ॥ ಶೆಪರ್ಡ ದೊರೆಗಳು ಸಮಯೋಚಿತವಾದ ಉತ್ತರವನ್ನು ಕೊಟ್ಟು ತಮ್ಮ ಸನ್ಮಾನಾರ್ಥವಾಗಿ ಜರುಗಿದ ಸಮಾರಂಭಕ್ಕೆ ದೂರದೂರದಿಂದ ಬಂದ ಜನರ ಆಭಾರವನ್ನು ಮನ್ನಿಸಿ ಸಮಾರಂಭದ ಕೆಲಸದಲ್ಲಿ ಅವಿಶ್ರಾಂತ ಶ್ರಮವನ್ನು ತೆಗೆದುಕೊಂಡ ರಾ॥ ಬ॥ ಅರಟಾಳ, ಮಿ॥ ರಂಗೋ ಗೋವಿಂದ ನಾಯಕ, ಆನರೇಬಲ್ ಮಿ॥ ಬೆಳವಿ ಮತ್ತು ರಾ॥ ರಾ॥ ವಕ್ರಿ ಮೊದಲಾದವರ ಉಪಕಾರಗಳನ್ನು ನೆನೆದು ತಮ್ಮ ಅಮೋಘವಾದ ಭಾಷಣದಿಂದ ಆನಂದಗೊಳಿಸಿದರು. ಈ ಬಳಿಕ ರಾ॥ ಬ॥ ಅರಟಾಳ ಸಾಹೇಬರು ಆ॥ ಶೆಪರ್ಡ ದೊರೆಗಳ ಆತಿಥ್ಯ [illegible] ಚಹಾಪಾನಕ್ಕಾಗಿ [illegible] ಮಾಡಲು ಆ॥ ಶೆಪರ್ಡ ದೊರೆಗಳೂ ಅವರ [illegible] ಯುರೋಪಿಯನ್ ಸ[illegible] ಸಾಂಪ್ರದಾಯಾನುವರ್ತಿ[illegible] ಫಲಾಹಾರವನ್ನು [illegible] ಆನಂದಪಟ್ಟರು. ಆ ಸಮಯಕ್ಕೆ [illegible] ಸದ್ಗೃಹಸ್ಥರು ತಂತಮ್ಮ [illegible] ತೇರೆಗಳಲ್ಲಿ [illegible] ಫಲಾಹಾರವನ್ನು ತೆಗೆದುಕೊಂಡರು. ಈ ಪ್ರಕಾರ ಎಲ್ಲರೂ [illegible] ಆ॥ ಮಿಸ್ಟರ್ ಶೆಪರ್ಡ ದೊರೆಗಳು ಮತ್ತು ಅವರ ಮಿತ್ರಮಂಡಲದವರು ಸ್ವಸ್ಥಳಕ್ಕೆ ಹೋಗಲು ನಿರೋಪವನ್ನು ತೆಗೆದುಕೊಂಡು [illegible]

ಈ [illegible] ಸಮಾರಂಭವು [illegible] ಶೆಪರ್ಡ ದೊರೆಗಳ ಲೋಕಪ್ರಿಯತೆಯನ್ನು [illegible] ತೋರುತ್ತಿದೆ. ದೊರೆಗಳು ಅಸಾಧಾರಣ ಬುದ್ಧಿಶಾಲಿಗಳೂ, [illegible] ನ್ಯಾಯನಿಷ್ಠರೂ, ಪರೋಪಕಾರಿಗಳೂ ಉದಾರಮನಸ್ಕರೂ ಆಗಿರುವುದರಿಂದ ಅವರ ಹೆಸರು ಹಿಂದುಸ್ಥಾನದಲ್ಲಿ ಅಜರಾಮರವಾಗಿ ಉಳಿಯುವುದೆಂಬುದರಲ್ಲಿ ಸಂಶಯವಿಲ್ಲ. [illegible]ಗಳನ್ನು ಸಮದೃಷ್ಟಿಯಿಂದ ನೋಡಿ [illegible]ರೆಲ್ಲರನ್ನೂ ಸಹೋದರಭಾವದಿಂದ ಪ್ರೀತಿಸುವ [illegible] ಆನರೇಬಲ್ ಡಬ್ಲ್ಯು ಡಿ ಶೆಪರ್ಡ ದೊರೆಗಳ [illegible] ಸಮಾಜದವರಿಗೆ ಅತ್ಯಂತ [illegible] ದೊರೆಗಳು ಸರಕಾರದ ಕೆಲಸದಲ್ಲಿ [illegible] ಕೂಡಲೇ ೧೮೯೬ ನೆಯ ಇಸವಿಯಲ್ಲಿ ಬೆಳಗಾವಿಗೆ [illegible] ಕಲೆಕ್ಟರಾಗಿ ಬಂದು, ಕಾರವಾರ, ಧಾರವಾಡ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಕೆಲಸಮಾಡಿದರು. ಇವರು ಸರಕಾರದಲ್ಲಿ ಕೆಲವರ್ಷ ಸೆಟಲ್ಮೆಂಟ್ ಆಫೀಸರಾಗಿದ್ದು ಬಳಿಕ ಕಲೆಕ್ಟರ ಕೆಲಸವನ್ನು ನೋಡಿದರಲ್ಲದೆ ಪುಣೆಯ ಕಲೆಕ್ಟರ ಕೆಲಸವನ್ನೂ ಸಹ ಕೆಲವರ್ಷ ನೋಡಿದರು. ಇವರು ೧೯೦೭ರಲ್ಲಿ ಕೆಲವು ದಿವಸ ಮತ್ತೂ ೧೯೦೮ ರಿಂದ ೧೯೧೧ ನೆಯ ಇಸವಿಯ ಪ್ರಾರಂಭದವರೆಗೆ ಮುಂಬಯಿಯಲ್ಲಿ ಮ್ಯುನಿಸಿಪಲ್ ಕಮಿಷನರೆಂಬ ಅತ್ಯಂತ ಗೌರವದ ಮತ್ತೂ ಜನರ ವಿಶ್ವಾಸಪೂರ್ಣವಾದ ಉದ್ಯೋಗವನ್ನು ಮಾಡಿದ್ದು ಅಲ್ಲಿ ಬಹಳ ಲೋಕಪ್ರೀತಿಯನ್ನು ಗಳಿಸಿದರು. ಅಲ್ಲಿಂದ ಇವರು ೧೯೧೧ ನೆಯ ಇಸವಿಯ ಏಪ್ರಿಲ್ ತಿಂಗಳಲ್ಲಿ ನಮ್ಮ ದಕ್ಷಿಣಭಾಗದ ಕಮಿಷನರಾಗಿ ಬಂದರು. ದೊರೆಗಳು ಪ್ರಾರಂಭದಿಂದಲೂ ಉತ್ತಮರೀತಿಯಿಂದ ಕೆಲಸಮಾಡುತ್ತ ಬಂದಿರುವುದರಿಂದ ಇವರಿಗೆ ೧೯೧೦ ನೆಯ ಇಸವಿಯಲ್ಲಿ ಕೇಸರ ಹಿಂದ್ ಪದಕವು ದೊರಕಿದುದಲ್ಲದೆ ೧೯೧೨ ರಲ್ಲಿ ಸಿ ಐ ಇ ಪದವಿಯು ದೊರಕಿತು. ದೊರೆಗಳಲ್ಲಿ ಅಸಾಧಾರಣ ಬುದ್ಧಿಯೂ, ಉದಾರಮನಸ್ಸೂ, ಮತ್ತೂ ಪ್ರಜೆಗಳ ಕಲ್ಯಾಣದ ಬಗ್ಗೆ ಅತ್ಯಂತ ಆತುರತೆಯೂ ಇವುಗಳ ತ್ರಿವೇಣೀ ಸಂಗಮವಾಗಿರುವುದರಿಂದ ಇವರ ಆಡಳಿತವು ದಕ್ಷಿಣಭಾಗದ ಪ್ರಜೆಗಳಿಗೆ ಬಹಳ ಸುಖಪ್ರದವಾಯಿತೆಂಬುದರಲ್ಲಿ ಸಂದೇಹವಿಲ್ಲ. ಪರಮೇಶ್ವರನು ಈ ಉದಾರಚರಿತರಾದ ಮಹನೀಯರಿಗೆ ಆಯುರಾರೋಗ್ಯಗಳನ್ನಿತ್ತು, ಇವರಿಗೆ ಇನ್ನೂ ಹೆಚ್ಚು ಹೆಚ್ಚಿನ ಉಚ್ಚಪದವಿಯನ್ನು ಕೊಟ್ಟು ಇವರ ಉತ್ಕರ್ಷವನ್ನು ಮಾಡಲಿ!

ಓರ್ವ ಸಮಾಜಸೇವಕ!

ಶಕ್ತಿ ವನಸ್ಪತಿಗಳಿಂದ ತಯಾರಿಸಿದ ಧಾತುಪೌಷ್ಟಿಕ ಲೇಹವು

20

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಗೂ ಪೋಲೆ ಅತಿಉತ್ತಮ ಲೇಹ! (ಗುಣವಾಗದಿದ್ದರೆ ಹಣ ವಾಪಸ !!) ಬೇಕೆ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಗ್ರಸ್ತರು, ರಕ್ತಪಿತ್ತರೋಗ ಪೀಡಿತರು, ಕ್ಷಯರೋಗಿಗಳು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಗೇಹಸಂಬಂಧ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಓಕ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ ಕಾಂತಿಯೂ ರತಿಸುಖಕ್ಕೆ ಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೪೦ ಕಾಲಿಯಿಂದ ೪೦ ತೊಲೆಯವರೆಗೆ ಬೇಕಾಗುವದು ಕಿಮ್ಮತು ೪೦ ತೊಲೆಗೆ ರೂ ೩-೮-೦ /೦ ತೊಲೆಗೆ ರೂಪಾಯಿ ೬ ಬೀಳುವದು ೬ [illegible] ಖರ್ಚು ಬೇರೆ ಅನುಭವ ಪತ್ರಿಕೆ ಔಷಧ ಸಂಗಾತೀ ರವಾನಿಸುವೆವು

ವಿಳಾಸ —ವೈದ್ಯ, ಜಿ ಎಲ್ ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ ಜಿಲ್ಲ ಉತ್ತರ ಕನ್ನಡ

3

ಮೊದ್ದ ಕಂಪನಿ ! ಸೋಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ರಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮವಾಗಿ ಕಳುಹಿಸುವೆವು

ವಿಳಾಸ— ಎಸ್. ಯೂ ಎನ್ ಮತ್ತು ಕಂಪೆನಿ,

ಬನಾರಿಸ್ ಸಿಟಿ (ಕಾಶೀ)

ಅಗ್ಗವಾದ ಮಾಲುಗಳು.

S.N RUDRAKSHA & CO
BENARES CITY

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೮ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮುಗುಟ, ಕಾಶ್ಮೀರ ಶಾಲು, ರೇಷ್ಮೆ ಜರೀಸೀರೆ, ಜರಿಕಣ, ಪೇಟ, ಮೊಳಕಾಲ್ಮುರು ನಮೂನೆ ವಸ್ತ್ರ ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರೀ ಭಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಷ್ಟಪಡುವರಿಗೆ ವಿ ಪಿ ಮೂಲಕ ಕಳುಹಿಸಲಾದೀತು.

ರುದ್ರಾಕ್ಷಿಗಳ ವಿವರ:—

ರುದ್ರಾಕ್ಷಿ ಕಂಠಿ ಅಂದರೆ ೩೦ ಮಣಿ

ವ ಸರ ೧ ಕ್ಕೆ ೧೨ ಆಣೆಯಿಂದ ೩೦ ರೂಪಾಯಿಯವರೆಗೆ ೪ ಮುಖದ ಕಂಠಿ ೧ಕ್ಕೆ ೪ ಆಣೆಯಿಂದ ೩೦ ರೂಪಾಯಿವರೆಗೆ ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ ವರೆಗೆ ೭ ಮುಖದ ಕಂಠಿ ೧ಕ್ಕೆ ೧೦ ರೂ ಯಿಂದ ೧೫೦ ರೂ ವರೆಗೆ ಇದರಂತೆ ೪, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ ಯಿಂದ ೩೦ ರೂ ವರೆಗೆ ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ ೫ ರಿಂದ ರೂ ೩೦ ವರೆಗೆ ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಲಾಗಾಯಿತು ರೂ ೧೦ ವರೆಗೆ ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ ಸಾಧಾರಣ ತರ ೬ ಆಣೆ ಯಿಂದ ರೂ ೩ ವರೆಗೆ ಗೌರೀಶಂಕರ ರುದ್ರಾಕ್ಷಿ– ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು ರುದ್ರಾಕ್ಷಿ ಮಣಿ ೧ಕ್ಕೆ ರೂ ೫ ಲಾಗಾಯಿತು ರೂ ೫೦ ವರೆಗೆ ಇಷ್ಟಪಡುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ವಿಳಾಸ– ಎಸ್ ನೇಪಾಳ ರುದ್ರಾಕ್ಷಿ ಅಂಡ್ ಕಂಪನಿ

14 ಬನಾರಸ್ ಸಿಟಿ

ದಿ ಜನರಲ್ ಏಜನ್ಸಿ, ಮೈಸೂರು

[illegible]

12

[illegible]

ಬಿ. ವಿ. ಮು [illegible]

[illegible]

ವಿದ್ಯಾರ್ಥಿಗಳು, ಪ್ರಯಾಣಿಕರು, ಫಿಸಿಕಲ್ ಟ್ರೇನಿಂಗ್ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅನುಭವಿಸಿದ ಸುವಾಸನೆಯ ಈ ಮಾತ್ರೆಗಳ ಗುಣಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಿದ್ದಾರೆ ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಸುಲಭ, ಹೊಟ್ಟೆನೋವು ನಾನಾತರದ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ಥ ಸಂಕಟ, ಜಲದೋಷಗಳನ್ನು ಜಾಗರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ ೧೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಅನುಪಾನಪತ್ರಸಹಿತ ೦-೮-೦

ಶ್ರೀಕರ ಕಸ್ತೂರಿ ಮಾತ್ರೆ.

ಈ ಮಾತ್ರೆಗಳನ್ನು ಒಂದೇವೇಳೆ ಪರೀಕ್ಷಿಸಿರಿ ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವವು ಮನೆಯಲ್ಲಿ ಸಣ್ಣ ಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ನಾಲೆನಾಡು ವಾಸಸ್ಥರು ಮತ್ತೂ ನೋಂಕರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತವೇಸರಿ ಶೀತವಾಯು, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈನೋವು ಮತ್ತೂ ಬಾಧೆಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ ವಿಶೇಷವಾದ ಅನುಪಾನ ಪತ್ರಸಹಿತ ೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೦ ೮ ೦ ನಾಲ್ಕಾಣೆ ಬೆಲೆ ಬಾಳುವ ಏರು ಸೀಸೆಗಳನ್ನು ಪಟ್ಟಿಗೆ ತರಿಸಿದರೆ ಒಂದು ಇನಾಮು. ಈ ಬ ಪ್ರತ್ಯೇಕ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ

ವಿಳಾಸ— ಕೆ. ವಿ ನಾರಾಯಣಾಚಾರ್,

ಮ್ಯಾನೇಜರ್, ವೈದ್ಯ

ನಂಜನಗೂಡು,

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ಕ್ಕೆ ಕ್ರಯ ೧೨ ಆಣೆ, ಶ್ರೀಗಳ ಸೊಲ್ಲಾಪುರದ ಪಂಚಕಲಶ ಯಾತ್ರೆ ಅದ್ದು ಪಲ್ಲಕ್ಕಿ ಉತ್ಸವದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ ಸೊಲ್ಲಾಪುರದಲ್ಲಿ ಮಠ್ಯ ಸತ್ರೊಳಿಸುವ ಆದ ಮಾರಂಭದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮರಾಜರ ಚಿತ್ರದಂತೆ ಕಲ್ಪಿತವಲ್ಲಾ) ಕ್ರಯ ಸಲ್ಲಸ್ಕೆಪ ಬಣ್ಣದ್ದು ೧॥ ರೂ ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೪ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜೆ ಮಾಡುತ್ತಿರುವ ಫೋಟೋ ಕ್ರಯ ೧ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ಕ್ಕೆ ಕ್ರಯ ಫುಲ್ಸ್ಕೇಪ ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೪ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ಸಿದ್ಧಾರೂಢ ಸದ್ಗುರುಸ್ವಾಮಿ, ಹಾವೇರಿ [illegible] ಫೋಟೋ ಬಣ್ಣದ್ದು ಮತ್ತು ಸಾದಾ, [illegible] ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ [illegible] ಪನೋರಾಗಗಳು, ಬಳ್ಳಾರಿ [illegible] ಫೋಟೋ [illegible] ಕ್ಯಾಬಿನೇಟ್ ಸೈಜು ೪ ಆಣೆ

ಯೂರೋಪಿಯನ್ [illegible] ಗರಿಯಾ [illegible] ಗಳು, [illegible] ಫೋಟೋ ಬೇಕಾದ ಸತ್ಯಗ ಪರ ದೇವರದೂ [illegible] ಕ್ರಯಕ್ಕೆ ಕೊಡುವೆವು ಕ್ರಯ [illegible] ೧, ೧, ೧, ಪ್ರಕಾರ, ಮತ್ತು [illegible] ಕ್ರಯ [illegible]

[illegible] ಕೊಳ್ಳಿರಿ

ನಮ್ಮ ವಿಳಾಸ – ಗಂಗಪ್ಪ ದೇಶಿ

7 ಆರ್ಟಿಸ್ಟ್ ಸೊಲ್ಲಾಪುರ

ಊದುಬತ್ತಿಗಳು

1

ವಿಧವಿಧವಾದ ಊದುಬತ್ತಿಗಳು ಸೇರು ೧ಕ್ಕೆ [illegible] ಕಸ್ತೂರಿ ಮಲ್ಲಿ ತೊಲ ೧ಕ್ಕೆ ೧ ೧, ಮಸಿಗಂಧ ತೊಲ ೧ಕ್ಕೆ ೧೨ ಆಣೆ ದಶಾಂಗ ಫ್ಲಿ [illegible] ೮ ಆಣೆ ಧೂಪ [illegible] ೧ಕ್ಕೆ ೨ ಆಣೆ ಬಾಲಗ್ರಹ [illegible] ೧ಕ್ಕೆ ಆಣೆ ಅಪೇಕ್ಷೆಯುಳ್ಳವರು [illegible]

[illegible] ಎಲ್ ಉಪಾಧ್ಯಾಯ,

[illegible], ಮೈಸೂರು

ನ್ಯಾಯದರ್ಪಣ, 13

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಇಂಥಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಲದಾಗ ಜಾಗೆಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ [illegible] ಮತ್ತು ರೂಲ್ಸು, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅದರ ಜೊಯಿಲ್ಲರತಕ್ಕ ನಾನಾವಿಧಗಳಾದ ದಸ್ತೈವಜು ವಸ್ತೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ

ಬೆಲೆ ರೂ 1 8—0 ವಿ ಪಿ ಮೂಲ [illegible]

ಎಂ ಎಸ್

[illegible], ಲಕ್ಷ್ಮೇಶ್ವರ

ಸವ ... ಶ್ರೀ ಶಿವತದಭಿಸಾವದೇಸಿಂ

ದಕೆ- ಕಳೆದವರ್ಷ ನವ್ಯಾಣೆಯಲ್ಲಿ ಕಳೆದ ೬ ನೆಯ ವಿ ರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವವು ಈ ಸಭೆಯ ಬುಕ್ಕುಗಳು ಒಳ್ಳೆಯ ಅಚ್ಚುತಿವಾದಾ ಯಿಂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಪ್ರತಿಯೊಬ್ಬ ಮಹನಿಯರ ಛಾಯಾಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ಸಾರಿಗೆ ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೬ ನೆಯ ಮಹಾಸಭೆ ನಿಪ್ಪಾಣಿ

... ವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ಕ್ಕೆ ೮ ಆಣೆಯಿಂದ ೧೦ ರೂ ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಎಣ್ಣೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ. ಮಲ್ಲಿಗೆ-ಸಂಪಗೆ ರೋಜಾ ಮೊದಲಾದ ಅತ್ತರುಗಳೂ ಮತ್ತೂ ಶೃಂಗಾರಮಲಕತ್ತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು ಅಪೇಕ್ಷಕರು ೫ ರೂ ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು 3೭

ವಿಳಾಸ- ಎಸ್ ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ

ಒದಿನೋಡಿ

೧೨ ತಿಂಗಳ ಭವಿಷ್ಯತ್ಫಲ

ಅಯ್ಯಾ ಲೋಕಾಭಿಮಾನಿಗಳೆ! ಪ್ರತಿಯೊಂದು ತಿಂಗಳಲ್ಲಿ ಬರುಗುವ ಭವಿಷ್ಯತ್ಫಲವನ್ನು ತಿಳಿದುಕೊಳ್ಳಬೇಕೆಂದು ಅಪೇಕ್ಷೆಯುಳ್ಳವರು ತಮ್ಮ ವಯಸ್ಸು ಹೆಸರನ್ನು ಪತ್ರದಲ್ಲಿ ಬರೆದು ಕಳುಹಿಸಿದರೆ ನಾವು ತಮ್ಮ ಪತ್ರ ಬಂದ ದಿನದಿಂದ ಒಂದು ವರ್ಷದವರೆಗೂ ಪ್ರತಿತಿಂಗಳಲ್ಲಿಯೂ ಉಂಟಾಗುವ ಲಾಭ ಸುಖ ದುಃಖ ಕಷ್ಟ-ನಷ್ಟ-ದೇಹಪೀಡೆ ಗ್ರಹಪೀಡೆ ಪರಿಹಾರವಾಗುವುದಕ್ಕೆ ಮಾಡುವ ಶಾಂತಿಕ್ರಮವನ್ನು ಸಹ ಬೇರ್ಪಾಗಿ ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದರೆ ನಿಮ್ಮ ಅಭೀಷ್ಟ ಪೂರ್ಣವಿರಲಿ ಟಪಾಲ್ ಹಾಸಲು ಪ್ರತ್ಯೇಕ ೧೨ ತಿಂಗಳ ಭವಿಷ್ಯತ್ಫಲ ಕಿಮ್ಮತು ರೂ. ೧. ನಮ್ಮಲ್ಲಿ ಜ್ಯೋತಿಷಸಂಬಂಧವಾದ ಪುಸ್ತಕಗಳೆಲ್ಲವೂ ದೊರೆಯುತ್ತವೆ

ಎಚ್ ಎಂ ಸಿದ್ಧಾಂತಿಗಳು,
21 ಗಣೇಶಬೀದಿ, ಬಳ್ಳಾರಿ

20 ಸಚಿತ್ರ ಶುಕಸಪ್ತತಿ ಕಥೆಗಳು ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ
ರೂ. ೧-೪-೦ (೩೧೦ ಪುಟ) ಟಪಾಲು ಹಾಸಲು ೪ ಆಣೆ ರೂ ೧-೪-೦. (೩೭೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ತತ್ವಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯ ಲ್ಲಾಸ ಕೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ ೩೩೦ ಪುಟಗಳಿಂದ ಕೂಡಿದ ೩೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧-೮-೦ ಟಪಾಲ್ ಹಾಸಲು ೩ ಆಣೆ ಈಗಲೇ ಬರೆಯಿರಿ ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ

ವಿಳಾಸ— ಎಂ ಆರ್ ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

೩೧೦ ಪುಟ

ಸಚಿತ್ರ ಶುಕಸಪ್ತತಿ ಕಥೆಗಳು

ಶುಕಮಹರ್ಷಿಗಳು ಲೋಕದವರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧನೀತಿ ಮುಂತಾದುವುಗಳನ್ನು ಬೋಧಿಸುವುದು (4) ಪದರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವವರಕ್ಷ ಚಿತ್ರಗಳನ್ನು ಇಟ್ಟಿರುವುದರಿಂದ ಓದುಗಾರರವರಿಗೂ ಮನೋರಂಜಿತವಾಗಿರುವುದು ಹೀಗೆ ಸರ್ವತ್ರರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧-೪-೦; ಟಪ್ಪಾಲು ಹಾಸಲು ೪ ಆಣೆ

(೩೮ ಸಂಧಿಗಳು) ಸಟೀಕಾ ತಾತ್ಪರ್ಯ ಪ್ರಮೇಯ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ಕ್ಕೆ ರೂ ೩-೦-೦, ಟಪಾಲು ಹಾಸಲು ೧೦ ಆಣೆ

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

37 ನಮ್ಮ ವಿಳಾಸ- ಎಂ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಸು ಪಬ್ಲಿಷರ್, ಬೆಂಗಳೂರು ಸಿಟಿ

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಂಡದರಿಂದ ಮೂಗಿನಲ್ಲಿ ಸಿಕ್ಕೆ ಸಿಡುಕು, ಕೆಟ್ಟವಾಸನೆಬರುವುದು, ಶೀತ, ನೆಗಡಿ ಉಸಿರುಕಟ್ಟಿಕೊಳ್ಳುವುದು (ಪೀನಸ) ಮತ್ತು ಬೆಳಗಿನವೇಳೆಗಳಲ್ಲಿ ವಿಶೇಷವಾಗಿ ತಲೆ ನೋಯುವುದು, ತಲೆಯಲ್ಲಿ ಗುಂಯಿ ಗುಟ್ಟುವುದು ಧಿಮ್ಮೆನ್ನುವುದು, ಈ ಯಾವ ರೋಗವಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ ಬಾಧಕವಿಲ್ಲ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರೆಸಿದರೆ ವಾಸನೆಯು ಘಮಘಮಿಸುತ್ತದೆ ೧ ಡಬ್ಬಿಯ ಬೆಲೆ ೫ ಆಣೆ ೧ ಡಜನ್ ಡಬ್ಬಿಗೆ ೧-೧೪-೦

ಉತ್ತಮವಾದ ನಶ್ಯದಪುಡಿ

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ ಮೂಗಿಗೆ ಹಿತವಾಗಿ ಸುವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣವಿಲ್ಲ ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಕೀರ್ತಿ ನಿಜವು ತಿಳಿಯುತ್ತದೆ ೫ ತೊಲೆ ತೂಕದ ೧೦ ಆಣೆ ೪ ಸೇರಿಗೆ ೩-೪-೦

ಮುಖಿಲೋಲಾಸಿನಿ ಹೊಗೇಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಅರೋಚಕಗಳು ಹೋಗುವುವು ನಿತ್ಯಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖರ, ರಸಭರಿತ ವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಹಾಕಿಕೊಳ್ಳಿ ಉಪಯೋಗಿಸಿರಿ ೧ ಡಬ್ಬಿಗೆ ೪ ಆಣೆ ಒಂದು ಡಜನ್ ಡಬ್ಬಿಗೆ ೧-೧೪-೦ ಟಪಾಲ್‌ಖರ್ಚು ಬೇರೆ

ವಿಳಾಸ— ಕೆ ಮಲ್ಲಿಕಾರ್ಜುನಶೆಟ್ಟಿ,
ಗೋಪಿಶೆಟ್ಟಿಪುರ, ಹಾಸೂರು ಪೋಸ್ಟ್
9 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೇ ಇಸವಿ ಏಪ್ರಿಲ್ ತಾ|| ೨೦ ರಿಂದ ೧೯೧೪ ಏಪ್ರಿಲ್ ತಾ|| ೨೬ ರ ವರೆಗೆ ಸಲ್ಲುವ ಶಾಲೀವಾಹನ ೧೮೩೬ ನೆಯ ಆನಂದನಾಮ ಸ|| ದ ಚೈತ್ರ ಬ|| ದಿಂದ ವೈಶಾಖ ಶು|| ಪಾಡ್ಯದ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
20	¹ ಸೋ	ದ	1 -15	ಧನಿಷ್ಠ	1 -34
21	² ಮಂ	ಏ	4 4	ಶತಭಿಷ	5 55
22	³ ಬುಧ	ದ್ವಾ	7 -57	ಪೂರ್ವಾ	11-17
23	⁴ ಗುರು	ತ್ರ	12-37	ಉತ್ತರಾ	17-25
24	⁵ ಶುಕ್ರ	ಚ	17-45	ರೇವತಿ	23-57
25	⁶ ಶನಿ	ಅ	22-56	ಅಶ್ವಿನಿ	30-32
26	⁷ ಭಾ	ಪಾ	27-24	ಭರಣಿ	36-41

(1) ದಶಮಿನಾತಿಥಿಃ (2) ಸರ್ವತ್ರೈಕಾದಶೀ (3) ಸ್ವರ್ಣಃ ಶ್ರೀಶ್ವೇತವರಾಹಸ್ವಾಮಿರಥಃ (4) ಚತುರ್ದಶೀ ಮಾಸಶಿವರಾತ್ರಿ (5) ಸರ್ವತ್ರಕರಗದಮಾವಾಸ್ಯಾ ಶ್ವೇತವರಾಹಜಯಂತೀ, ಶ್ರೀರಂಗದ ರಂಗಸ್ವಾಮಿ (6) ಸರ್ವತ್ರಾದರ್ಶಾಮಾವಾಸ್ಯಾ (7) ಪ್ರಥಮಾತಿಥಿಃ

ಮೈಸೂರು: ವೈ ವಿರೂಪಾಕ್ಷಯ್ಯನವರಿಂದ ... ಪ್ರೆಸ್ಸಿನಲ್ಲಿ ...

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 48

ಲೋಕಾಪಕಾರಕ ಕಸ್ತೂರಿ ಮಾತ್ರೆ— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಧನುರ್ವಾತ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈಕಾಲು ಜೋತಿತ (ಬಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗಳೂ ಬಾರದಿರುವಂತೆ, ನೀರುಗಳ ಹನಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾಕೆ ಮದ್ದು)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈವಿಕಾರದಿಂದ ತೋರಿದಾಗಲೂ, ಅತಿಸ್ಥೂಲವಾಗುವಂತೆ ರೋಗದವೇಳೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಕೆ, ಮೂತ್ರವು ಕಟ್ಟಿದರೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಹೇಳಬಾರದೇನಿದೆ. ಒಂದೇಒಂದು ಬುದ್ದಿಯ ನಿಮ್ಮಲ್ಲಿರಲಿ. ಮುತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನವತ್ತುವು ಔಷಧದೊಂದಿಗೆ ಇರುತ್ತದೆ. ಒಂದು ಬುದ್ದಿಯ ಬೆಲೆ ೧-೦-೦
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ವೆಂಕಟಾಚಲ ವೈದ್ಯಶಾಲಾ, ಮೈಸೂರು

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ } ೧—೦—೦

ಮಹಿಶೂರಪುರೀತಾರಾತ್ಕಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಞನಸ್ಸತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಸಾಕಪಿಶಸಾದ್ಭುತ್ಕಾಲಪಾಲಂಪಲಂ
ಸೀಮಾತೀತಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಕೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ

ಅಂಚೆವೆಚ್ಚ ಸೇರಿ } ೧—೧೪—೦

REGISTERED M No 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಏಪ್ರಿಲ್ ತಾರೀಖು [illegible] ನೆಯ ಸೋಮವಾರ. (ಸಂಚಿಕೆ ೧೭

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

13 ಈ ಲಾಗಾಯತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಹೊಸವರ್ಷದ ಯುಗಾದಿಹಬ್ಬದಲ್ಲಿ ಬಹುಮಾನಿಸುವುದಕ್ಕಾಗಿ 2000 ಅಚ್ಚಬೆಳ್ಳಿಯ

ಕೊರಳ ಸರಪಣಿಗಳನ್ನು ಸೀದಾ ಸೀಮೆಯಿಂದ ತರಿಸಿದ್ದೇವೆ

ಪ್ಯಾನ್ಸಿಸ್ಟೈಲ್ ರೈಲ್ವೆ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3-8-0 ಪೋಸ್ಟೇಜು 0-4-0

ಈ ಲಾಗಾಯತು ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚ

ಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ

ಮುಂದಿನಂತಗ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು

ತರಿಸಿಕೊಳ್ಳುವುದುತ್ತಮ

ಯಾರಿ ಹೊಳತರಹ! ಪದಾರ್ಥ ಅತ್ಯುತ್ತಮ!! ಬೆಲೆ ಬಹಳಸುಲಭ!!!

ಬಜಾರಿನಲ್ಲಿ ಸಿಕ್ಕುವ ಶಾಯಿಪುಡಿಗಳನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ ಈ ಕೆಳಭಾಗದಲ್ಲಿ ಕಂಡ ನಮ್ಮ ಶಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ

"ನ್ಯಾಚುರಲ್ ಬ್ಲೂಬ್ಲ್ಯಾಕ್ ಇಂಕ್‌ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨೦ ಔನ್ಸ್ ಅಂದರೆ ॥ ಸೀಸೆ ಅತ್ಯುತ್ತಮವಾದ ಬ್ಲೂಬ್ಲ್ಯಾಕ್ ಶಾಯಿಯಾಗುತ್ತೆ. ಪೊಟ್ಟಣ ೧ ಕ್ಕೆ ಕ್ರಯ ೦-೨-೦. ಒಂದು ಡಜನ್ ಪೊಟ್ಟಣಗಳಿಗೆ ೧-೪-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ. ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಿಮೆ ರವಾನಿಸಲಾಗುವುದಿಲ್ಲ.

ಜ್ವಾಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಗುರಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ ಓದುತ್ತ ಓದುತ್ತಾ ಹೊಸಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವುದು.

ವಾಚಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ ಕ್ರಯ ಪ್ರತಿ ೧ ಕ್ಕೆ ೦-೬-೦ ಪೋಸ್ಟೇಜು ಅಲಾಯಿದಾ

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯಾವಶ್ಯಕವೇ ಆದ್ದು

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಉಮಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧-೨-೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ. ಇಷ್ಟು ಸೌಲಭ್ಯವುಳ್ಳ ಪುಸ್ತಕ ೧ ಕ್ಕೆ ಕ್ರಯ ೦-೬-೦.

(೨) ಮನೋವಿಜಯ— ಸರ್ವರಿಗೂ ಅತ್ಯಾವಶ್ಯಕವಾದ ಪುಸ್ತಕ ಕ್ರಯ ೦-೪-೦

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ ಕ್ಕೆ ೦-೩-೦

(೪) ಮುಕ್ತ್ಯಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೮-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಲ್ ಗಡಿಯಾರಗಳು.



ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗದ ಶಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರಾಗಿರುವುದಲ್ಲದೆ ಮೇಲುಭಾಗದಲ್ಲಿ ಬಂದೋಬಸ್ತಾದ ಹಿಡಿಯನ್ನೂ ಸಹ ಇಟ್ಟಿರುತ್ತೆ.

(೧) ಘಂಟೆ ಅರ್ಧಘಂಟೆ ಹೊಡೆಯತಕ್ಕ ಕ್ಲಾಕ್ ೧ ಕ್ಕೆ ೮-೪-೦

(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೫ ೮-೦

(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ ಮೃದುಮಧುರಗಾನಮಾಡತಕ್ಕ ಕ್ಲಾಕ್ ೧ ಕ್ಕೆ ೫ ೪-೦

(೪) ಕಾಲಘಂಟೆ ಪ್ರತಿಘಂಟೆಗೆ ಸರಿಯಾಗಿ ಕರ್ಣಾನಂದವಾಗುವಂತೆ ಮೃದುಮಧುರಗಾನಮಾಡತಕ್ಕ ಕ್ಲಾಕ್ ೫-೪-೦

ಕಾಗದ ಬರೆಯತಕ್ಕವರು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ಕೋರಿದೆ. ತಿಳಿಯದೇ ಇರತಕ್ಕ ವಿಳಾಸಗಳಿಗೆ ನಾವು ನಿಗಾಕೊಡುವುದಿಲ್ಲವೆಂಬಂಶವನ್ನು ಸರ್ವರೂ ಗಮನಿಸತಕ್ಕದ್ದು.

ಎಸ್. ಸಿದ್ದಪ್ಪ ಅಂಡ್ ಬ್ರದ[illegible] ಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೪—೦
ಶಿವಪೂಜಾವಿಧಿ	೦—೪—೦
ಚಾರುಶೀಲೆ ಚರಿತ್ರ	೦—೫—೦
ಸಟೀಕ ನಂದೀವ್ರತ	೦—೮—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ ೨ನೆಯ ಭಾಗ	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕ	೦—೧—೦

ಅಂಚೆಯ ವೆಚ್ಚ ಬೇರೆ

ಹೊಸ ಪುಸ್ತಕಗಳು.

132

ಬಸವರಾಜವಿಜಯಂ— ಬೆಲೆ ೧ ೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶವಿಜಯಂ — ಬೆಲೆ ೧ ೪ ೦ ದ್ವಿತೀಯ ಸಂಪುಟ ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು ಷಟ್ಸ್ಥಲ ಕರಣಹಸುಗೆ ಪಂಚೀಕರಣ ಶಾಸ್ತ್ರಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೮ ಆಣೆ ಸಿಂಗೀಶ ನಂದನರಾದ ಶ್ರೀ ಚೆನ್ನಸದಾಶಿವಯೋಗೀಂದ್ರರು ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸವಿಸ್ತಾರವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮನಾಥನ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು ಸವ್ಯಾಖ್ಯಾನ

ಪಂಚಶ್ಲೋಕೀ — ಬೆಲೆ ೧ ರೂ ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನಂ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೦ ಆಣೆ; ಸ್ತುತಿಮುಕ್ತಾವಳಿ ೪ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ

ವೀರಶೈವ ಗ್ರಂಥಪ್ರಕಾಶಿಕಾ— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ. ವರ್ಷದ ಚಂದಾ ೨-೪-೦.

ಎಚ್ ಆರ್ ಕರಿಬಸವಶಾಸ್ತ್ರಿ

(ಸಂಸ್ಕೃತಪಾಠಶಾಲೆ, ಮೈಸೂರು

ಒಬ್ಬೆದಾರಿಗೆ

(ಜಮೀನನ್ನು ಹದಗೊಳಿಸುವುದು)

(ಅ) ಎತ್ತರವಾದ ಪ್ರದೇಶಗಳ ಜಮೀನು — ತೆಂಗಿನ ಮರಗಳನ್ನು ಬೆಳೆಸಬೇಕಾದ ಜಮೀನುಗಳಲ್ಲಿ ಇತರ ಸಸ್ಯಗಳೇನಾದರೂ ಬೆಳೆದು ಬಂದಿದ್ದರೆ ಅದೆಲ್ಲವನ್ನೂ ಬೇರುಸಹಿತ ಕೀಳಿಸುವುದು ಉತ್ತಮ. ಹೀಗೆ ಮಾಡಿದಲ್ಲಿ ಆ ವ್ಯಾಪಾರದಿಂದ ದೊರೆಯಬಹುದಾದ ಪೂರ್ಣ ಪ್ರಯೋಜನವನ್ನು ಪಡೆಯಬಹುದು. ಸಾಧಾರಣವಾಗಿ ತೆಂಗಿನ ಮರಗಳಿಗೆ ವಿಶಾಲವಾದ ಬೇರುಗಳೆಲ್ಲಾ ಹರಡಿಕೊಳ್ಳಲು ವಿಶಾಲವಾದ ಪ್ರದೇಶವು ಬೇಕಲ್ಲದೆ ತೆಂಗಿನ ಗಿಡಗಳಿಗೆ ಸ್ವಲ್ಪವೂ ನೆರಳಿರಕೂಡದು. ಮತ್ತೂ ಅವಕ್ಕೆ ಇತರ ಗಿಡಗಳ ಗೋಷ್ಠಿಯು ಸರಿಹೋಗುವುದಿಲ್ಲ. ಒಂದು ತೆಂಗಿನ ಗಿಡವು ಮತ್ತೊಂದು ತೆಂಗಿನ ಗಿಡಕ್ಕೆ ಅತಿ ಸಮೀಪದಲ್ಲಿದ್ದಾಗ್ಯೂ ಒಂದಕ್ಕೊಂದು ಸರಿಹೋಗುವುದಿಲ್ಲ. ಇವುಗಳಿಗೆ ವಿಶೇಷ ಗಾಳಿ ಮತ್ತು ಬಿಸಿಲು ಅವಶ್ಯಕವಾಗಿರುತ್ತವೆ. ಗಿಡದ ತಳಕ್ಕೆ ನೆರಳಿದ್ದಾಗ್ಯೂ ತುದಿಗೆ ಮಾತ್ರ ಪೂರ್ತಿ ಬೆಳಕಿರಬೇಕು. ಆದರೆ ತೆಂಗಿನ ತೋಟಕ್ಕಾಗಿ ಆರಿಸಲ್ಪಡುವ ಪ್ರದೇಶದಲ್ಲಿ ಇರುವ ಗಿಡಗಂಟಿಗಳನ್ನೆಲ್ಲಾ ಕತ್ತರಿಸಿ ಸುಟ್ಟು ಬೇರನ್ನೆಲ್ಲಾ ಅಗೆದುಹಾಕಬೇಕು. ಅನಂತರ ಜಮೀನನ್ನೆಲ್ಲಾ ಆಳವಾಗಿ ಉತ್ತು ಕಲ್ಲು ಕಡ್ಡಿಗಳನ್ನೆಲ್ಲಾ ತೆಗೆದು ಹಾಕುವಮಟ್ಟಿಗೆ ಸಮಮಾಡಿ ಗುಳಿಗಳನ್ನು ತೋಡಿ ಒಂದು ಬೇಸಗೆಯಲ್ಲಿ ಪೂರ್ತಿ ಗುಂಡಿಯನ್ನು ಮುಚ್ಚದೆ ಬಿಸಿಲಿಗೆ ಬಿಟ್ಟಿರಬೇಕು. ಸುಮಾರು ಇಪ್ಪತ್ತೆಂಟರಿಂದ ಮೂವತ್ತು ಅಡಿಗಳ ದೂರಕ್ಕೆ ಒಂದೊಂದರಂತೆ ಗುಳಿಗಳನ್ನು ಮಾಡುವುದು ಉತ್ತಮ. ಪ್ರತಿಗುಳಿಯೂ ಉದ್ದ ಅಗಲ ಮತ್ತೂ ಆಳದಲ್ಲಿ ಎರಡು ಅಡಿಗಳ ಪ್ರಮಾಣವುಳ್ಳದ್ದಾಗಿ, ನಾಲ್ಕು ಅಡಿಗೆ ಒಳಪಟ್ಟು ಇರಬೇಕು. ಜಿಗುಟು ಜಮೀನುಗಳಲ್ಲಿ ಎರಡು ಅಡಿ ಆಳ ಉದ್ದ ಮತ್ತೂ ಅಗಲದ ಗುಳಿಗಳೂ ಮತ್ತೂ ಮರಳು ಪ್ರದೇಶದಲ್ಲಿ ನಾಲ್ಕು ಅಡಿಯವುಗಳೂ ಇದ್ದರೆ ಅನುಕೂಲ.

(ಆ) ತಗ್ಗು ಪ್ರದೇಶಗಳ ಜಮೀನು — ತಗ್ಗು ಪ್ರದೇಶಗಳಲ್ಲಿರುವ, ಮುಖ್ಯವಾಗಿ ನೀರು ನುಗ್ಗುತಕ್ಕ ಮತ್ತೂ ಕೆರೆಗಳ ಬಯಲು ಜಮೀನುಗಳಾದ ತೋಟಗಳಲ್ಲಿ ನೀರು ಬಸಿದು ಹೋಗುವ ದಿಂಡುಗಳನ್ನು ಕಟ್ಟಿ ಅವುಗಳ ಮಧ್ಯ ಜಾಗಗಳು ಅಥವಾ ಕಾಲುವೆಗಳನ್ನು ತೋಡುವುದು ಇವೇ ಮೊದಲಾದ ಉಪಾಯಾಂತರಗಳಿಂದ ನೀರು ಬಸಿದುಹೋಗುವಂತೆ ಮಾಡಬೇಕು.

ಬಿತ್ತನೆಯ ಬೀಜದ ಆರಿಸುವಿಕೆ — ಬಿತ್ತನೆಗೆ ಬೇಕಾದ ಸಸ್ಯದ ಆರೋಗ್ಯವಾಗಿರತಕ್ಕ ಮತ್ತೂ ಹೇರಳವಾಗಿ ಫಲವೀಯುವುದೆಂದು ಗೊತ್ತಾದ ಮರಗಳ ಪೂರ್ತಿಯಾಗಿ ಬಲಿತಿರುವ ಕಾಯಿಗಳನ್ನೇ ಉಪಯೋಗಿಸಬೇಕು. ಕಾಯಿಗಳು ದೊಡ್ಡದಾಗಿಯೂ ಭಾರವಾಗಿಯೂ ಮತ್ತೂ ದುಂಡಗಾಗಿ ತಿರುಳು ಕೈಪುಗಳಾಗಿಯೂ ಇರಬೇಕು. ಕಾಯಿಗಳು ದಪ್ಪವಾಗಿರುವುದನ್ನು ನೋಡಿ ಜನರು ಮೋಸಹೋಗುವುದುಂಟು. ಸಿಪ್ಪೆಯು ದಪ್ಪವಾಗಿದ್ದಾಗ್ಯೂ ಒಳಗಿನ ತಿರುಳು ತೆಳುವಾಗಿರುತ್ತದೆ. ಆದುದರಿಂದ ಬಿತ್ತನೆಗೆ ಕಾಯಿಗಳನ್ನು ಆರಿಸುವಾಗ್ಗೆ ಮಧ್ಯದ ಒಂದೊಂದನ್ನು ಒಡೆದು ತಿರುಳು ದಪ್ಪವಾಗಿದೆಯೇ ಇಲ್ಲವೇ ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಅಲ್ಲದೆ ಬಿತ್ತನೆಗೆ ಉದುರಿ ಬಿದ್ದಿರುವ ಕಾಯಿಗಳನ್ನು ಗಿಡದ ಮೇಲಿನಿಂದ ಎತ್ತಿಹಾಕದೆ ನಿಧಾನವಾಗಿ ಕೆಳಕ್ಕೆ ಇಳಿಸಿಕೊಳ್ಳಬೇಕು. ಹೀಗೆ ಇಳಿಸಿದನಂತರದಲ್ಲಿ ಕಾಯಿಗಳನ್ನು ಒಂದು ತಿಂಗಳಕಾಲ ಇಲ್ಲಿ ಮತ್ತೂ ಗಾಳಿಯ ಸಂಚಾರವುಳ್ಳ ತಂಪಾದ ಸ್ಥಳದಲ್ಲಿ ಇಟ್ಟಿರಬೇಕು.

ಸಸಿಮಾಡುವ ಕ್ರಮ — ತೆಂಗಿನ ಕಾಯಿಗಳನ್ನು ಮೊದಲು ಸಸಿಮಾಡಿ ನಂತರ ಬೇರೆಕಡೆ ನೆಡಬೇಕಾಗುವುದು. ತೆಂಗಿನ ಕಾಯಿಗಳು ಸಾಮಾನ್ಯವಾಗಿ ನೆಲ್ಲು... ಇವು ಮೊದಲುಮಾಡುವುಗಳ ಕಾಲವಲ್ಲದ ತಂಪಾದ ಜಾಗದಲ್ಲಿ ಇಟ್ಟಿದ್ದರೆ ಮೊಳೆಯುವುವು. ಆದಾಗ್ಯೂ ಒಬ್ಬು ಹುಯ್ದು ಬೆಳೆದ ಸಸಿಗಳು ಬಾಳ್ವಿಕೆಯಾಗಿ ಫಲಬಿಡುವುವೆಂದು ತಿಳಿಯಬರುವುದರಿಂದ ಈ ರೀತಿಯಲ್ಲಿ ಮೊದಲು ಒಬ್ಬು ಹುಯ್ದು ನಂತರ ನೆಡುವುದೇ ಉತ್ತಮವೆಂದು ಹೇಳುವರು.

ಸಸಿಗಳನ್ನು ಎಬ್ಬಿಸುವ ಪ್ರದೇಶವು ನೀರಿಗೆ ಸಮೀಪವಾಗಿಯೂ, ಫಲವತ್ತಾದುದಾಗಿಯೂ, ಗೋಡುಪ್ರದೇಶವಾದುದಾಗಿಯೂ, ಸುಮಾರಾಗಿ ಗಿಡಗಳ ನೆರಳು ಬೀಳತಕ್ಕದ್ದಾಗಿಯೂ ಇರಬೇಕು. ಸ್ವಭಾವದಿಂದ ಮರಗಳ ನೆರಳು ಇಲ್ಲದ ಪಕ್ಷದಲ್ಲಿ ಸುಮಾರು ಆರೇಳು ಅಡಿ ಎತ್ತರವಾಗಿ ತೆಂಗಿನ ಗರಿಯನ್ನು ಹೊದಿಸಿ, ಚಪ್ಪರವನ್ನು ಹಾಕಬೇಕು. ಮೇಲೆ ಹೊದಿಸಿದ ತೆಂಗಿನ ಗರಿಗಳನ್ನು ಸಸಿಗಳಲ್ಲಿ ಎರಡು ಗರಿಯು ಹೊರಟನಂತರದಲ್ಲಿ ತೆಗೆದುಬಿಡಬೇಕು. ಜಮೀನನ್ನು ಸುಮಾರು ಒಂದೂವರೆ ಅಡಿ ಆಳವಾಗಿ ಅಗೆದು ಮಡಿಗಳನ್ನೆಲ್ಲಾ ಚೆನ್ನಾಗಿ ಪುಡಿಮಾಡಿ ಹತ್ತು

ಹುಲ್ಲು ತಿಪ್ಪೆಗೊಬ್ಬರ ಮುಂತಾದ ... ರ, ಬೂದಿ ಮತ್ತೂ ತಿಪ್ಪೆಯ ಗೊಬ್ಬರ ಇವುಗಳನ್ನು ಸ್ವಲ್ಪ ಹಾಕಿ ಚೆನ್ನಾಗಿ ಮಿಶ್ರಮಾಡಬೇಕು. ನಂತರದಲ್ಲಿ ನೆಲವನ್ನು ಮಟ್ಟಮಾಡಿ ಸುಮಾರು ಎರಡು ಅಡಿ ಉದ್ದಗಲ ಮತ್ತೂ ಒಂದು ಅಡಿ ಆಳವಾಗಿರುವ ಪಾತಿಗಳನ್ನು ಮಾಡಿ ಪಾತಿಗಳ ಮಧ್ಯೆ ಅರ್ಧ ಅಥವಾ ಮುಕ್ಕಾಲು ಅಡಿ ಆಳವಾದ ಚರಂಡಿಗಳನ್ನು ಮಾಡಬೇಕು. ಹೆಚ್ಚು ಮಳೆ ಆಗುವ ಪ್ರದೇಶಗಳಲ್ಲಿ ಚರಂಡಿಗಳನ್ನು ಒಂದು ಅಥವಾ ಒಂದೂವರೆ ಅಡಿ ಆಳವಾಗಿ ತೋಡಬೇಕು. ನಂತರದಲ್ಲಿ ಪಾತಿಗಳ ಮಧ್ಯೆ ಗುಳಿಗಳನ್ನು ಮಾಡಿ ಅವಕ್ಕೆ ಬಿತ್ತನೆಯ ಕಾಯಿಗಳನ್ನು ಸ್ವಲ್ಪ ಓರೆಯಾಗಿ ಮುಚ್ಚನ್ನು ಮೇಲಕ್ಕೆ ಮಾಡಿ ಇಡಬೇಕು. ನಂತರ ಕೊಂಡಕೊಂಡಿಯಾಗಿ ಮಣ್ಣನ್ನು ಸುಮಾರು ಮೂರು ಅಂಗುಲ ಪ್ರಮಾಣ ಸುತ್ತಲೂ ಹಾಕಿ ಕಣ್ಣಿನ ಭಾಗವು ಮಾತ್ರ ಮೇಲಕ್ಕೆ ಕಾಣುವಂತೆ ಮಾಡಬೇಕು. ಗುಳಿಗಳ ಸುತ್ತಲಿರುವ ಚರಂಡಿಗಳಿಗೆ ನೀರನ್ನು ಬಿಟ್ಟು ತೇವವು ಆರದಂತೆ ನೋಡಿಕೊಳ್ಳಬೇಕು. ಬೇಸಗೆಯಲ್ಲಿ ಪ್ರತಿನಿತ್ಯವೂ ನೀರನ್ನು ಬಿಡಬೇಕಲ್ಲದೆ ಪಾತಿಯಮೇಲೆ ಕತ್ತರಿಸಿದ ಹುಲ್ಲು ಒಣಗಿದ ಎಲೆ ಇವುಗಳನ್ನು ಸುಮಾರು ಅರ್ಧಅಡಿ ಮಟ್ಟಕ್ಕೆ ಮುಚ್ಚಬೇಕು. ನೆಟ್ಟ ಮೂರು ತಿಂಗಳು ಮೊದಲುಗೊಂಡು ಆರು ತಿಂಗಳಲ್ಲಿ ಮೊಳಕೆಯೊಡೆಯುವುದು. ಮತ್ತೂ ಸಸಿಗಳಿಗೆ ಸುಮಾರು ಒಂದು ವರುಷ ವಯಸ್ಸಾಗಿರುವಾಗ್ಗೆ ಅವುಗಳನ್ನು ಕಿತ್ತು ತೋಟಗಳಲ್ಲಿ ನೆಡಬಹುದು. ಸಸಿಗಳ ಗರಿಗಳನ್ನು ದನಕರುಗಳು ತಿಂದುಬಿಟ್ಟರೆ ಅವುಗಳಲ್ಲಿ ಫಲವು ಗರಿಬಿಡುವುದು ಬಹಳ ನಿಧಾನವಾಗ ವುದರಿಂದ ಅವುಗಳಿಗೆ ದನಕರುಗಳ ಬಾಧೆಯಿಲ್ಲದಂತೆ ಸುತ್ತಲೂ ಒತ್ತಾಗಿ ಬೇಲಿಯನ್ನು ಹಾಕಿಡಬೇಕು.

ಸಸಿಗಳನ್ನು ಸಾಮಾನ್ಯವಾಗಿ ಮುಂಗಾರುಮಳೆ ಬಿದ್ದಾಗ್ಗೆ ಕಡ್ಡ ತೋಟದಲ್ಲಿ ನೆಡುವರು. ತೋಟದ ಜಮೀನನ್ನು ಹದಗೊಳಿಸಿಕೊಂಡು ಪಾತಿಗಳನ್ನು ಮಾಡಿ ಪ್ರತಿಪಾತಿಯಲ್ಲಿ ಗುಳಿಗಳನ್ನು ಮಾಡಿ ಒಂದೊಂದಕ್ಕೆ ಒಂದೊಂದು ಕೆಕ್ಕೆ ಬೂದಿ ಗೊಬ್ಬರ ಮತ್ತೂ ಎರಡು ಅಡಿ ಉಪ್ಪನ್ನು ಹಾಕಬೇಕು. ಸ್ವಲ್ಪ ಮೋಡವಾಗಿದ್ದ ಅಥವಾ ಸೋನೆಮಳೆ ಸುರಿಯುತ್ತಿರುವ ದಿನ ಸಸಿಗಳನ್ನು ಮೆಲ್ಲಗೆ ಕಿತ್ತು, ಕಿತ್ತುಕೊಂಡ ಬೇರುಗಳನ್ನೆಲ್ಲಾ ಕಾಯಿಯು ಹೊರಗಿನ ಮಟ್ಟಿಯ ಸಮಕ್ಕೆ ಕತ್ತರಿಸಿ ತೋಟದಲ್ಲಿ ಮಾಡಿರುವ ಗುಳಿಗಳೊಳಗಿಟ್ಟು ಕಾಯಿಯು ಪೂರ್ತಿಯಾಗಿ ಮುಚ್ಚಿ ಗರಿಯು ಮಾತ್ರ ಕಾಣುವಂತೆ ಮಣ್ಣನ್ನು ಹಾಕಬೇಕು. ಬೇಸಗೆಯಲ್ಲಿ ನೂತನ ಸಸಿಗಳ ಸುತ್ತಲೂ ಸುಮಾರು ನಾಲ್ಕು ಅಂಗುಲಗಳ ಪ್ರಮಾಣ ಕತ್ತರಿಸಿದ ಹುಲ್ಲು, ಒಣಗಿದ ಎಲೆಗಳು, ಸೊಪ್ಪುಸೆದೆ ಮೊದಲಾದುವುಗಳನ್ನು ಹರಡಿ ಕು ಅದರಮೇಲೆ ಮಣ್ಣುಚೆದರ ಸೊಪ್ಪುಸೆದೆಯನ್ನು ಆಗಾಗ್ಗೆ ತೆಗೆದು ಮರಳುಹುಳುಗಳು ಸೇರದಂತೆ ನೋಡಿಕೊಳ್ಳಬೇಕು. ಮಳೆಬಿದ್ದ ಸೊಪ್ಪುಸೆದೆಗಳು ಕೊಳೆಗಾಗ್ಗೆ ಅವುಗಳ ಜತೆಗೆ ಸ್ವಲ್ಪ ಬೂದಿ ಮತ್ತೂ ಸುಣ್ಣವನ್ನು ಹಾಕಿ ಜನಿವಾರವನ್ನೇ ಉತ್ತುಬಿಡಬೇಕು. ಮಳೆಗಾಲದನಂತರ ಪಾತಿಗಳಲ್ಲಿ ಇಂಗಿಹೋಗದೆ ನಿಂತಿರುವ ನೀರನ್ನು ಮೇಲಕ್ಕೆ ಎತ್ತಿಹಾಕಬೇಕು. ಪಾತಿಯು ಸುತ್ತಲೂ ಒಂದು ಅಡಿ ಎತ್ತರವಾಗಿ ದಿಂಡನ್ನು ಕಟ್ಟುವುದು ಉತ್ತಮ. ಸರೇಟು

ಮರಸಾಲೆ ಸೊಪ್ಪು

ಬೆನ್ನಾಗಿ ವ್ಯವಸಾಯ ಮಾಡಲ್ಪಟ್ಟ ಮರಸಾಲೆ ಸೊಪ್ಪಿನ ತೋಟಗಳಲ್ಲಿ ಒಂದಾವೃತ್ತಿ ನಟ್ಟ ಗಿಡಗಳಿಂದ ಅನೇಕ ವರ್ಷಗಳಕಾಲ ಸೊಪ್ಪನ್ನು ಕತ್ತರಿಸಬಹುದು. ಮತ್ತಾವ ಪೈರಿಗೂ ಈ ಗುಣವಿರುವುದಿಲ್ಲ. ಮೆಕ್ಸಿಕೋ ದೇಶದ ಕೆಲವು ತೋಟಗಳಲ್ಲಿ ಸುಮಾರು ಇನ್ನೂರು ವರ್ಷಗಳ ಕೆಳಗೆ ನಟ್ಟ ಪೈರಿನಿಂದ ಈಗಲೂ ಸೊಪ್ಪನ್ನು ಕತ್ತರಿಸುತ್ತಿರುವರೆಂದು ತಿಳಿಯಬರುತ್ತದೆ. ಇಷ್ಟು ದೀರ್ಘಕಾಲ ಬಾಳತಕ್ಕ ಈ ಪೈರು ಒಂದು ವರ್ಷದೊಳಗೆ ಪೂರ್ಣ ಬೆಳವಣಿಗೆಗೆ ಬರುವುದಿಲ್ಲವೆಂಬುದು ಸ್ವಭಾವಸಿದ್ಧವಷ್ಟೇ ಇದೆ.

ಈ ಮರಸಾಲೆಸೊಪ್ಪು ಯಾವುದೋ ಗೊತ್ತಾದ ಹವಾ ಮತ್ತೂ ಭೂಗುಣಗಳುಳ್ಳ ಪ್ರದೇಶದಲ್ಲಿ ಮಾತ್ರ ಸಮರ್ಪಕವಾಗಿ ಬೆಳೆಯುತ್ತದೆಂದು ಕೆಲ ಪಂಡಿತರು ಅಭಿಪ್ರಾಯಪಡುವರು. ಆದರೆ ಇದು ಯಾವದೇಶಕ್ಕಾದರೂ ಮತ್ತೂ ಎಂಥ ಜಮೀನಿನಲ್ಲಾದರೂ ಬೆಳೆಯುವುದೆಂದು ಈಚೆಗೆ ನಿರ್ಧರಿಸಲ್ಪಟ್ಟಿರುತ್ತದೆ. ಆದಾಗ್ಯೂ ಗಾಳಿ ಮತ್ತೂ ನೀರಿನ ಸಂಚಾರಕ್ಕೆ ಅನುಕೂಲವಾದ ಲೋಹಸಂಬಂಧವಾದ ಸಸ್ಯಾಹಾರ ಪದಾರ್ಥಗಳು ವಿಶೇಷವಾಗಿರತಕ್ಕ ಮತ್ತೂ ಸ್ವಲ್ಪ ಮಟ್ಟಿಗೆ ಕ್ಷಾರವಿರುವ ಜಮೀನುಗಳಲ್ಲಿ ಮರಸಾಲೆಸೊಪ್ಪು ಬಹಳ ಚೆನ್ನಾಗಿ ಬೆಳೆಯುವುದು. ನೀರು ನಿಲ್ಲತಕ್ಕ ಮತ್ತೂ ಬಹಳ ಹುಳಿಯುಳ್ಳ ಪ್ರದೇಶಗಳಲ್ಲಿ ಮರಸಾಲೆಸೊಪ್ಪು ಬೆಳೆಯುವುದೇ ಇಲ್ಲ.

ಜಮೀನನ್ನು ಹದಮಾಡುವುದು. — ಬಿತ್ತನೆಗೆ ಎರಡು ಮೂರು ವರ್ಷಗಳಿಗೆ ಮುಂಚಿನಿಂದಲೂ ಜಮೀನನ್ನು ಉತ್ತು ಹದಗೊಳಿಸಬೇಕು. ಸೊಪ್ಪನ್ನು ಬಿತ್ತುವುದಕ್ಕೆ ಮುಂಚೆ ಜಮೀನುಗಳನ್ನು ಮಡಿಗಳಾಗಿ ವಿಂಗಡಿಸಬೇಕು. ಬಿತ್ತನೆಯು ಹಿಂದಿನ ಚಳಿಗಾಲದಲ್ಲಿ ಹೇರಳವಾಗಿ ಗೊಬ್ಬರವನ್ನು ಹಾಕಿ ಚೆನ್ನಾಗಿ ಉತ್ತು, ಬೇಸಗೆಯ ಪ್ರಾರಂಭದ ಮಳೆಯನಂತರ ಮತ್ತೆ ಉತ್ತು ಹದಮಾಡಬೇಕು. ಈ ಬೆಳೆಯನ್ನು ತೆಗೆದ ಮೇಲೆ ಪುನಃ ಚೆನ್ನಾಗಿ ಉತ್ತು ಮಣ್ಣನ್ನೆಲ್ಲಾ ಪುಡಿಮಾಡಬೇಕು. ಬಿತ್ತನೆಗೆ ಮುಂಚೆ ಉಳಬಾರದು.

ಬಿತ್ತನೆಯ ಕ್ರಮ — ದಕ್ಷಿಣ ಆಫ್ರಿಕ ಮತ್ತೂ ಅಮೆರಿಕಾ ದೇಶಗಳಲ್ಲಿ ಕೈಯಿಂದ ಹಿಡಿಹಿಡಿಯಾಗಿ ಬೀಜವನ್ನು ಎರಚುವುದು ವಾಡಿಕೆಯಾಗಿದೆ. ಇದಕ್ಕಿಂತಲೂ ಕೂರಿಗೆಗಳಿಂದ ಬಿತ್ತನೆಮಾಡುವುದು ಉತ್ತಮವಾಗಿರುವುದೆಂದು ಕೆಲವರ ಹೇಳಿಕೆ. ಹೀಗೆ ಕೂರಿಗೆಗಳಿಂದ ಬಿತ್ತನೆಮಾಡಿದರೆ ಬೀಜಗಳೆಲ್ಲವೂ ಸಮವಾಗಿ ಹಂಚಲ್ಪಡುವುದಲ್ಲದೆ ಮೇಲೆ ಒಂದೇ ಮಟ್ಟಕ್ಕೆ ಮಣ್ಣನ್ನು ಹರಡಿದಂತಾಗುವುದು. ಅಲ್ಲದೆ, ಬಿತ್ತನೆ ಎರಚುವ ಕ್ರಮದಲ್ಲಿ ಬೇಕಾಗುವಷ್ಟು ಬೀಜವು ಕೂರಿಗೆಯ ಕ್ರಮಕ್ಕೆ ಬೇಕಾಗುವುದಿಲ್ಲವೆಂದು ಹೇಳುವರು. ಕೂರಿಗೆಗಳಿಂದ ಎರಡು ಅಡಿಗಳ ದೂರಕ್ಕೆ ಒಂದೊಂದು ಸಾಲಿನಂತೆ ಬಿತ್ತನೆಮಾಡಿದರೆ ಎಕರೆಗೆ ೪ ಪೌಂಡು ಬೀಜವು ಸಾಕಾಗುವುದೆಂದು ಹೇಳುವರು.

ನೀರು ಹಾಕುವುದು — ಸಂಧ್ಯಾಕಾಲಗಳಲ್ಲಿ ನೀರು ಹಾಕಿಯೇ ಮರಸಾಲೆ ಸೊಪ್ಪನ್ನು ಬೆಳೆಸಬೇಕು. ಆದರೆ ಬಿತ್ತನೆಯಾಗುವಾಗ ಮಾತ್ರ ನೀರನ್ನು ಹಾಕುವ ವಿಷಯದಲ್ಲಿ ಬಹು ಎಚ್ಚರಿಕೆಯಾಗಿರಬೇಕು. ಬಿತ್ತನೆಯ ಮೇಲೆ ಜಮೀನಿಗೆ ನೀರು ಹಾಕಿದರೆ ಮೇಲಿನ ಮಣ್ಣೆಲ್ಲಾ ಹೆಪ್ಪುಗಟ್ಟಿಕೊಂಡು ತೇವವು ಕೆಳಭಾಗದಲ್ಲಿ ಕಡಿಮೆಯಾಗುವುದರಿಂದ ಬೀಜಗಳು ಮೊಳೆಯುವುದೇ ಇಲ್ಲ. ಬಿತ್ತನೆಗಳ ಮೊಳಕೆ ಪೈರಗಳು ಸ್ವಲ್ಪ ಎತ್ತರ ಬೆಳೆಯುವವರೆಗೆ ನೀರನ್ನು ಹಾಕಬಾರದು. ಮುಖ್ಯವಾಗಿ ಬಿತ್ತನೆಯಾದನಂತರ ಸುಮಾರು ಆರುವಾರಗಳ ಕಾಲ ಬಹಳ ಮಟ್ಟಿಗೆ ನೋಡಿಕೊಳ್ಳಬೇಕು. ಬಿತ್ತನೆಗೆ ಮುಂಚೆ ಸುಮಾರು ನಲವತ್ತು ಗಂಟೆಕಾಲ ಜಮೀನನ್ನು ನೆನೆಸಿ ಬಿತ್ತನೆಮಾಡಿದರೆ ಪೈರು ಸುಮಾರು ಹತ್ತು ಹನ್ನೆರಡು ಅಂಗುಲ ಎತ್ತರವಾಗುವವರೆಗೂ ಬಹಳ ಜೋರಾಗಿ ಬೆಳೆಯುವುದು. ನ ತರದಲ್ಲಿ ಪೈರಿಗೆ ನೀರನ್ನು ಹಾಯಿಸುವುದರಿಂದ ಯಾವ ಅನಾನುಕೂಲವೂ ಇರುವುದಿಲ್ಲ. ಪೈರು ಚೆನ್ನಾಗಿ ನಿಂತ ತರ ವಾಯು ವ ಕಟಾವಿನ ನಂತರದಲ್ಲೂ ಹೇರಳವಾಗಿ ಒ ದಾವೃತ್ತಿ ನೀರನ್ನು ಹಾಯಿಸಿದರೆ ಸಾಕಾಗಿರುತ್ತದೆ.

ಸ್ವಾ ಗೆ

ಪುಣ್ಯಕ್ಷೇತ್ರಗಳಿಗೆ ಹೋಗ ವರಿಗೆ ಬುದ್ಧಿವಾದಗಳು

ಬೆಂಗಳೂರು ಡಿಸ್ಟ್ರಿಕ್ಟು ಮೆಡಿಕಲ್ ಅಂಡ್ ಸ್ಯಾನಿಟರಿ ಆಫೀಸರಾದ ಮಿ॥ ವಿ ಮುತ್ತುಸ್ವಾಮಿನಾಯ್ಡುರವರಿಂದ ಬರೆಯಲ್ಪಟ್ಟುದು

ವೈಸೂರು ಸಂಸ್ಥಾನದ ಗ್ರಾಮವಾಸಿಗಳಿಗೆ ಚಿಕ್ಕಿತ್ಸೆಯ ಮೂಲಕ ಅರಿಕೆಮಾಡಿಕೊಳ್ಳುವುದೇನೆಂದರೆ — ಪರಸ್ಥಳ ಪುಣ್ಯಕ್ಷೇತ್ರಗಳಿಗೆ ಪ್ರಯಾಣಮಾಡುವವರ ಆಯಾ ಸ್ಥಳದ ಆರೋಗ್ಯ ವಿಷಯ ಹೇಗೆ ಇರುವುದು ? ಅಲ್ಲಿಗೆ ಹೋದರೆ ಕ್ಷೇಮವಾಗಿ ವಾಪಸು ಊರಿಗೆ ಬರುವ ಸೇರುತ್ತೇವೋ ? ಅಲ್ಲಿ ಸಾಂಕ್ರಾಮಿಕ ವ್ಯಾಧಿಗಳು ಏನೂ ಇಲ್ಲವೆ ? ಎಂಬ ವಿಷಯಗಳಿಗೆ ಮನಸ್ಸುಕೊಡದೆ ಹೋಗುವವರಾಗಿದ್ದಾರೆ. ಹೀಗೆ ವಿಚಾರಮಾಡದೆ ಹೋಗುವುದರಿಂದ ಅನೇಕ ಅಪಾಯಗಳಿಗೂ, ಕಷ್ಟನಷ್ಟಗಳಿಗೂ ಗುರಿಯಾಗುತ್ತಾರೆ. ಇದಕ್ಕೆ ಒಂದು ದೃಷ್ಟಾಂತವನ್ನು ಕೊಡುವೆನು. ಬೆಂಗಳೂರು ಡಿ|| ಮಾಗಡಿ ತಾ|| ಗೆ ಸೇರಿದ ಸೋಲೂರು ಎಂಬ ಗ್ರಾಮದ ಏಳು ಜನರು ಹಿಂದೂಪುರ ತಾ|| ಗೆ ಸೇರಿದ ಕಾರೆಬೆಟ್ಟ ಸ್ಥಳಕ್ಕೆ ಶ್ರೀ ರಂಗನಾಥದೇವರ ಸೇವೆಗಾಗಿ ಹೋಗಿದ್ದರು. ಅಲ್ಲಿನ ಜನರಿಗೆ ಕಾಲರಾ ತಗುಲಿ ವ್ಯಾಪಿಸಿರಲು ಉಳಿದ ೪ ಜನರು ವಾಪಸು ಊರಿಗೆ ಬಂದರು. ಬಂದವರ ಪೈಕಿ ಒಬ್ಬ ಹುಡುಗನಿಗೆ ಅದೇ ಕಾಯಿಲೆ ತಗುಲಿ ಮೃತಪಟ್ಟನು. ಬಾಕಿ ೩ ಜನವನ್ನು ಊರಿನ ಜನರುಗಳು ಒಂದಾಗಿ ಸೇರಿ ಇವರೆಲ್ಲರನ್ನೂ ಊರಹೊರಗೆ ಒಂದು ಪಟಬದಲ್ಲಿ ಇರುವಂತೆ ಏರ್ಪಾಡುಮಾಡಿದರು. ಇವರುಗಳ ಯಾತ್ರೆಗೆ ಹೋಗಿ ಬಂಧುಗಳನ್ನು ಕಳೆದುಕೊಂಡುದಲ್ಲದೆ ಊರಹೊರಗೆ ವನವಾಸಮಾಡಬೇಕಾಯ್ತು. ಆದುದರಿಂದ ಯಾವ ಗ್ರಾಮಸ್ಥರೇ ಆಗಲಿ ಯಾತ್ರೆ ಹೋಗಬೇಕೆಂದು ಉದ್ದೇಶವುಳ್ಳವರು ಹೋಗಬೇಕಾದ ಸ್ಥಳದ ಆರೋಗ್ಯಸ್ಥಿತಿಯನ್ನು ತಿಳಿದುಕೊಂಡು ಪ್ರಯಾಣಮಾಡತಕ್ಕದ್ದು. ಈ ವಿಷಯವಾಗಿ ಡಿಸ್ಟ್ರಿಕ್ಟ್ ಮೆಡಿಕಲ್ ಅಥವಾ ಸ್ಯಾನಿಟರಿ ಆಫೀಸರವರಿಗೆ ಬರೆದುಕೊಂಡುದಾದರೆ, ಅವರು ಈ ವಿಷಯವಾಗಿ ತಕ್ಕ ತಿಳುವಳಿಕೆಯನ್ನು ಕೊಡುವರು. ಇದಲ್ಲದೆ ಪ್ರಯಾಣದಲ್ಲಿ ಏನಾದರೂ ಅಕಸ್ಮಾತ್ತಾಗಿ ಅಂಟು ಕಾಯಿಲೆಗಳಿಗೆ ದೇಹದ ಬಿಡ....

ವ್ಯಾತವನ್ನು ಸ್ಥಳದ ಆಸ್ಪತ್ರೆಗಳಲ್ಲಿ ದೊರೆಯುವಂತೆ ತಕ್ಕ ಏರ್ಪಾಡು ಮಾಡುವರು.

ತಿರುಪತಿಯಲ್ಲಿ ಎಲ್ಲಾ ಕಾಲಗಳಲ್ಲಿಯೂ ಕಾಲರಾ ಅಂಟುವ್ಯಾಧಿ ಇದ್ದೇಯಿರುತ್ತದೆ. ಆದುದರಿಂದ ಅಲ್ಲಿಗೆ ಹೋಗುವ ಕಾಲದಲ್ಲಿ ಯಾತ್ರಾಸ್ಥರು ಬಹಳ ಜಾಗರೂಕರಾಗಿರಬೇಕು. ಈ ಕಾಯಿಲೆಯು ನೀರಿನ ಸಂಬಂಧವಾಗಿ ಹುಟ್ಟುವುದು. ಕಾಲರಾ ರೋಗಕ್ಕೆ ತಗಲಿದ ನೀರನ್ನು ಯಾರು ಪಾನಮಾಡುವರೋ ಅವರೆಲ್ಲರಿಗೂ ಈ ಕಾಯಿಲೆ ತಗಲುವುದು. ಗ್ರಾಮಸ್ಥರು ತಮ್ಮ ತಮ್ಮ ಸ್ಥಳಗಳನ್ನು ಬಿಟ್ಟು ಹೊರಟಲಾಗಾಯ್ತು ಕ್ಷೇತ್ರಕ್ಕೆ ಹೋಗಿ ಹಿಂದಿರುಗಿ ಬರುವವರೆಗೂ ದಾರಿಯಲ್ಲಿ ದೊರೆಯುವ ನೀರನ್ನು ಕಾಯಿಸಿಕೊಂಡೇ ಕುಡಿಯಬೇಕು. ಏಕೆಂದರೆ–ಯಾವ ನೀರಿನಲ್ಲಿ ಏನು ದೋಷವಿದ್ದಾಗ್ಯೂ ಈ ಮೂಲಕ ನಿವೃತ್ತಿಯಾಗುವುದು. ಬಾಯಾರಿಕೆಗೆ ಕಣ್ಣಿಗೆ ಕಂಡ ನೀರನ್ನೆಲ್ಲಾ ಕುಡಿಯುವುದು ವಾಡಿಕೆಯಾಗಿರುತ್ತದೆ. ಆವಾಗಕ್ಕೆ ನೀರನ್ನು ಕಾಯಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಪ್ರಯಾಣಕಾಲದಲ್ಲಿ ಹಿಂದೆ ಉಳಿದಿದ್ದಂಥ ಸ್ಥಳದಲ್ಲಿಯೇ ಸ್ವಲ್ಪ ನೀರನ್ನು ಕಾಯಿಸಿಕೊಂಡು ಒಂದು ತಂಬಿಗೆಯಲ್ಲಿ ತಂಗಳಿ ಅಥವಾ ಒಂದು ಬೊಂಬಿನ ವಣಿಗೆಯಲ್ಲಿ ಆಗಲಿ ತುಂಬಿಕೊಂಡು ಮುಂದಕ್ಕೆ ಹೊರಡಬೇಕು.

ಸಾಧಾರಣವಾಗಿ ಯಾತ್ರೆ, ಕಾರ್ತಿಕ, ಪುಷ್ಯ, ಮಾಘ ಈ ಮಾಸಗಳಲ್ಲಿ ಹೊರಡುವುದು ವಾಡಿಕೆ. ಇವುಗಳಲ್ಲಿ ಕಾರ್ತಿಕದಲ್ಲಿ ಹೊರಡುವುದು ಉತ್ತಮ. ಏತಕ್ಕೆಂದರೆ ಆಗ್ಗೆ ಮುಂಗಾರುಮಳೆ ತೀರಿಹೋಗಿರುತ್ತದೆ, ಹೊಲ ಮುಂತಾದುದರ ಬೆಳೆಗಳು ಕೊಯಿಲಿಗೆ ಬಂದಿಲ್ಲವೆ ಇರುವುದರಿಂದಲೂ, ಮತ್ತು ಎಲ್ಲಾ ಕಡೆಗಳಲ್ಲಿಯೂ ಕೆರೆ, ಕುಂಟೆಗಳು ತುಂಬಿ ನೀರು ಯಥೇಷ್ಟವಾಗಿ ದೊರೆಯುವುದರಿಂದಲೂ, ಕಾಲರಾ ಮುಂತಾದ ಕಾಯಿಲೆಗಳು ಈ ಕಾಲದಲ್ಲಿ ಆಗುವುದು ಅಪರೂಪವಾದುದರಿಂದಲೂ ಪ್ರಯಾಣಕ್ಕೆ ಅನುಕೂಲವೆಂದು ನಮಗೆ ತೋರುತ್ತದೆ.

ಈ ಪತ್ರಿಕೆಯನ್ನು ತರಿಸಿಕೊಂಡು ಓದುವಂಥ ಎಲ್ಲಾ ಚಂದಾದಾರರುಗಳೂ ಮೇಲೆ ತಿಳಿಸಿದ ವಿಷಯವನ್ನು ತಮ್ಮ ತಮ್ಮ ಸ್ಥಳದ ಜನಗಳನ್ನು ಒಟ್ಟಾಗಿ ಕರೆಸಿಕೊಂಡು ಅವರುಗಳಿಗೆ ಈ ತಿಳುವಳಿಕೆ ಕೊಡುವರು ಎಂದು ಸಂಪೂರ್ಣನಂಬಿದವರಾಗಿ ಈ ಮೂಲಕ ತಿಳಿಸುತ್ತೇನೆ.

ಜಪಾನಿನ ಈಗಿನ ಮಂತ್ರಿವರ್ಯರು

ಪರಿಸ್ಥಿತಿಯ ಮುಖ್ಯ ಮಂತ್ರಿಪದವಿಯನ್ನು ಈಗ ಕೌಂಟ್ ಓಕುಮಾಯವರು ಅಲಂಕರಿಸುವರು. ಇವರಿಗೆ ಈಗ ೭೭ ವರ್ಷಗಳ ಮೇಲೆಯೇ ವಯಸ್ಸಾಗಿರುವುದು. ಇವರು ಕಳೆದ ೧೫ ವರ್ಷಗಳಿಂದಲೂ ರಾಜಕಾರ್ಯಸಂಬಂಧವಿಲ್ಲದೆ ವಿಶ್ರಾಂತಿಯಲ್ಲಿದ್ದರು. ಸದ್ಯಕ್ಕೆ ಜಪಾನಿನ ರಾಜ್ಯಸೂತ್ರವನ್ನು ಧರಿಸುವುದಕ್ಕೆ ಇವರಷ್ಟು ಸಮರ್ಥರಾದ ರಾಜನೀತಿಜ್ಞರು ಮತ್ತೊಬ್ಬರಿಲ್ಲದುದರಿಂದ ದೇಶೋದ್ಧಾರಕ್ಕಾಗಿ ಈ ಪ್ರಧಾನ ಮಂತ್ರಿಪದವಿಯ ಭಾರವನ್ನು ವಹಿಸಿಕೊಳ್ಳಬೇಕಾಯಿತು. ಇವರು ಸ್ವಾತಂತ್ರ್ಯಾಭಿಲಾಷೆಯುಳ್ಳ ವಿಷಯ ಪ್ರಖ್ಯಾತರು. ಈ ಕಾರಣದಿಂದಲೇ ಜಪಾನ್ ರಾಜ್ಯದ ಅಧಿಕಾರಿಗಳಿಗೆ ವಿರುದ್ಧವಾಗಿ ಹೋರಾಡಿ ಬಹಳ ಕಷ್ಟವನ್ನು ಹಿಂದೆ ಅನುಭವಿಸಿರುವರು. ಈ ಮಹಾಪುರುಷರ ಚರಿತ್ರೆಯು ದೇಶಭಕ್ತರಿಗೆಲ್ಲಾ ಪ್ರೋತ್ಸಾಹಕರವಾಗಿರುವುದು. ಇವರು ಜಪಾನಿನ ಸಾಮುರೈ ಎಂಬ ಕುಲಕ್ಕೆ ಸೇರಿದ ಒಬ್ಬ ಬಡ ಸೈನಿಕನ ಕುಟುಂಬದಲ್ಲಿ ೧೮೩೮ರಲ್ಲಿ ಜನಿಸಿದರು. ಚಿಕ್ಕಂದಿನಿಂದ ಇವರಿಗೆ ಚೀನಾಭಾಷೆಯಲ್ಲಿ ಸ್ವಲ್ಪ ಸಾಹಿತ್ಯಜ್ಞಾನದ ಶಿಕ್ಷಣ ವಿದ್ಯಾಭ್ಯಾಸವಾಗಿದ್ದಿತು. ಬಳಿಕ ಸ್ವಲ್ಪಕಾಲದ ಮೇಲೆ ಆಂಗ್ಲಭಾಷೆಯನ್ನೂ ಹಾಲೆಂಡ ಭಾಷೆಯನ್ನೂ ಚೆನ್ನಾಗಿ ಅಭ್ಯಾಸಮಾಡಿದರು. ಆ ಭಾಷೆಗಳಲ್ಲಿ ಐತಿಹಾಸಿಕ ಗ್ರಂಥಗಳನ್ನೂ ಶಾಸ್ತ್ರೀಯಗ್ರಂಥಗಳನ್ನೂ ಚೆನ್ನಾಗಿ ಮನನಮಾಡಿದುದರಿಂದ ಇವರ ಮನಸ್ಸು ನೂತನವಾದ ಮಾರ್ಗಕ್ಕೆ ತಿರುಗಿ ವಿಕಸಿತವಾಯಿತು. ಇವರು ಯೌವನಕ್ಕೆ ಬಂದ ಕಡಲೇ ಕಾಯ್ದೆಗಳು ಇವರನ್ನು ತಮ್ಮ ವಂಶಪಾರಂಪರ್ಯವಾಗಿ ಬಂದ ಸೈನಿಕವೃತ್ತಿಯಲ್ಲಿ ತೊಡಗಿಸಬೇಕೆಂದಿದ್ದರು. ಆದರೆ ಇವರ ಮನಸ್ಸಿಗೆ ಅದು ರುಚಿಸಲಿಲ್ಲ. ಆ ಕಾಲದಲ್ಲಿ ಹಿಂದಿನಿಂದ ನಡೆದು ಬಂದಿದ್ದ ಪ್ರಭುತ್ವರೀತಿಯನ್ನು ಇಡಿದ ಅರಸನಿಗೆ ಅಧೀನರಾಗಿ ಮುಖ್ಯ ಜಮೀನ್ದಾರರೂ ಅವರಿಗೆ ಅಧೀನರಾಗಿ ಸಾಮಾನ್ಯ ಜಮೀನ್ದಾರರೂ ಇದ್ದು ಕೊಂಡು ರಾಜ್ಯದ ಆಳಿಕೆಯನ್ನು ನಡೆಸುತ್ತಿದ್ದ ಪದ್ಧತಿಯನ್ನು ಅಳಿಸಿ ಸುಸಂಸ್ಕೃತವಾದ ಸಾಂಸ್ಥಾನಿಕ ಪ್ರಭುತ್ವ ಪದ್ಧತಿಯನ್ನು ಸ್ಥಾಪಿಸಬೇಕೆಂಬ ಮಹತ್ತರವಾದ ಉದ್ದೇಶದಿಂದ ಹೋರಿಕೊಂಡು ದೇಶಸೇವೆಯಲ್ಲಿ ಕಾಲವನ್ನು ಕಳೆಯಲು ನಿರ್ಧರಿಸಿದರು. ಆದರೆ ೧೮೬೮ನೆಯ ವರ್ಷದಲ್ಲಿ ಆಳಿಕೆಯಲ್ಲಿ ಪರದಾಡಿದ ರಾಜಕೀಯ ವಿಪ್ಲವದಲ್ಲಿ ಇವರು ಸ್ಪಷ್ಟವಾದ [illegible] ಆದರೆ ಇವರು ಸಾರ್ವಜನಿಕ ಬಹಿರಂಗ [illegible] ಅವರಿಂದ ಇವರ ಇವರನ್ನು ನೋಡಿದರೆ ಆ ವಿಪ್ಲವಕ್ಕೆ ಮೂಲಭೂತರಾದ ಸೂತ್ರಧಾರಿಗಳಲ್ಲಿ ಇವರೊಬ್ಬರಾಗಿದ್ದರೆಂದು ಹೇಳಲು ಸಂಶಯವು ತೋರುವುದಿಲ್ಲ. ಜಪಾನೀಯರು ಆಂಗ್ಲಪದ್ಧತಿಯನ್ನು ಅನುಸರಿಸಿ ವಿದ್ಯಾಪ್ರಸಾರವನ್ನು ಪ್ರಜೆಗಳಲ್ಲಿ ಮಾಡುವುದು–ಲೋಕಸಮಾರ್ಗ ವಾರ್ತಾಪತ್ರಿಕೆಗಳನ್ನು ಸ್ಥಾಪಿಸುವುದು–ಈ ಕಾರ್ಯಗಳನ್ನು ಆ ಕಾಲದಲ್ಲಿ ನಡೆಸಿ, ಆವಾಗ ಅವರಿಗೆ ಇವರು ಮಹೋಪಕಾರಿಗಳಾಗಿ ತುಂಬಾ ಸಹಾಯಕರಾಗಿದ್ದರು. ರಾಜ್ಯದಲ್ಲೆಲ್ಲಾ ಚೆನ್ನಾಗಿ ನೆಮ್ಮದಿಯು ಸ್ಥಾಪಿತವಾದ ಬಳಿಕ ವಿದೇಶ ವಿಷಯಕವಾದ ವ್ಯವಹರಣೆಗಳಲ್ಲಿ ಇವರೇ ಮುಖ್ಯ ಸಹಾಯಕರಾಗಿ ನಿಂತರು. ಬಳಿಕ ೧೮೭೩ನೆಯ ವರ್ಷದಲ್ಲಿ ಇವರು ರಾಷ್ಟ್ರದ ಆಂತರಂಗಿಕ ವ್ಯವಹಾರಶಾಖೆಯ ಮತ್ತೂ ದ್ರವ್ಯವಿಷಯಕ ಶಾಖೆಯ ಕಾರ್ಯದರ್ಶಿಗಳಾದರು. ೧೮೮೦ನೆಯ ವರ್ಷದಲ್ಲಿ ದ್ರವ್ಯಶಾಖೆಯ ಮಂತ್ರಿಪದವಿಯನ್ನು ಪಡೆದರು. ಅದೇ ಕೆಲಸದಲ್ಲಿ ೧೧ ವರ್ಷಗಳ ಕಾಲ ಇದ್ದು, ಬಳಿಕ ತಮಗೂ ಆಗಿನ ಮಂತ್ರಿಯೊಬ್ಬರಾಗಿದ್ದ ಪ್ರಿನ್ಸ್ ಇಟೋರವರಿಗೂ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯವುಂಟಾದುದರಿಂದ ಕೆಲಸವನ್ನು ಬಿಟ್ಟುಬಿಟ್ಟರು. ಆಗ ಜಪಾನ್ ರಾಜ್ಯದಲ್ಲಿ ಸತ್ಸುಮಾ–ಚೋಷ್ಯು ವಂಶದವರ ಕೈಯಲ್ಲಿ ಸರ್ವಾಧಿಕಾರ ಸೂತ್ರವು ಇದ್ದಿತು. ಇವರೇ ಆ ಹಿಂದಿನ ರಾಜ್ಯವಿಪ್ಲವಕ್ಕೆ ಕಾರಣಭೂತರಾಗಿದ್ದವರು. ಇಂಥವರ ಪ್ರಾಬಲ್ಯವನ್ನು ಅಳಿಸಿ ಲೀವರಲ್ ಪ್ರಜಾಶಕ್ತಿಯನ್ನು ದೇಶದಲ್ಲಿ ವಿಸ್ತರಿಸಬೇಕೆಂದು ಕೌಂಟ್ ಓಕುಮಾಯವರು ಆಲೋಚಿಸಿದರು. ಅದರಿಂದ ಕೂಡಲೇ ಇವರ ವಿಷಯದಲ್ಲಿ ಬಹು ಜನ ಶತ್ರುಗಳು ಉದಯಿಸಿದರು. ಇವರನ್ನು ಹತ್ಯೆಗೊಳಿಸಬೇಕೆಂದು ಸಹ ಪ್ರಯತ್ನಗಳು ನಡೆದುವು. ಒಂದಾವೃತ್ತಿ ವಿರುದ್ಧಪಕ್ಷದವರಾರೋ ಕೆಲರು ಇವರ ಮೇಲೆ ಬಾಂಬು ಎಸೆದರು. ಅದರಿಂದ ಇವರು ಒಂದು ಕಾಲನ್ನು ಕಳೆದುಕೊಂಡು ಕುಂಟರಾಗಬೇಕಾಯಿತು. ಆದರೆ ದೈವಾನುಗ್ರಹದಿಂದಲೂ ಜಪಾನಿನ ಅನ್ನಪಾನ ವಿಶೇಷದಿಂದಲೂ ಇವರು ಪ್ರಾಣಾಪಾಯದಿಂದ ಉಳಿದುಕೊಂಡರು. ಬಳಿಕ ಇವರು ೧೮೯೬ನೆಯ ವರ್ಷದಲ್ಲಿ ವಿದೇಶೀಯ ಶಾಖೆಯ ಮಂತ್ರಿಪದವಿಯನ್ನು ಹೊಂದಿದರು. ಆದರೆ ಆಗಲೂ ಮಂತ್ರಿಮಂಡಲದ ಭಿನ್ನಾಭಿಪ್ರಾಯ ಬಂದುದರಿಂದ ಮರಳಿ ಕೆಲಸವನ್ನು ಬಿಟ್ಟರು. ೧೮೯೮ನೆಯ ವರ್ಷದಲ್ಲಿ ಮೂರನೆಯಾವೃತ್ತಿ ಇವರಿಗೆ ಮಂತ್ರಿ ಮಂಡಲದಲ್ಲಿ ಕೆಲಸಮಾಯಿತು. ಮುಖ್ಯ ಮಂತ್ರಿಪದವಿಯೂ ಲಭಿಸಿತು. ಅದನ್ನು ಸ್ವಲ್ಪ ಕಾಲದಲ್ಲಿ ಬಿಡಬೇಕಾಯಿತು. ಆದಾಗ್ಯೂ ಇವರು ರಾಜಕಾರ್ಯದಿಂದ ವಿರಾಮವನ್ನು ಪಡೆದು ಮನೆಯಲ್ಲಿ ಸುಖದಿಂದ ಕಾಲಕಳೆಯುವುದರಲ್ಲಿ ಹತ್ತು ವರ್ಷಕಾಲ ಸ್ವರ್ಗದ ತೋರಿಕೆಯಂಥಾ ವ್ಯವಸಾಯಗಳಲ್ಲಿ ತತ್ಪರರಾಗಿದ್ದ ಕಾಲವನ್ನು ಮಾಡಿಸುತ್ತಲೂ, ವಿಸ್ತಾರವಾದ ಪ್ರಜೆಗಳಲ್ಲಿ ವಿದ್ಯಾಪ್ರಸಾರವನ್ನು ಮಾಡಿಸುತ್ತಲೂ ಕಾಲಯಾಪನೆ ಮಾಡುತ್ತಿದ್ದರು. ಆಗ ಇವರು ಜಪಾನಿನ ಪ್ರಜೆಗಳಿಂದ ಲೇ ಪಡೆದಿದ್ದ ಒಂದು ಸ್ವತಂತ್ರವಾದ ಸರ್ವಕಳಾಶಾಲೆಯು ಪರಿಸ್ಥಿತವು. ಇದು ಈಗ ವಿಶ್ರಾಂತಿಯನ್ನು ನಡೆಸುವ ವಿಶ್ರಾಂತಿಗೆ ಈ ಲೋಕ್ಯರನ್ನು ಒರೆಗೆ ಕೊಡಲು ಜಪಾನ್ ದೇಶದಲ್ಲಿ ಒಂದು ಪ್ರಿನ್ಸ್ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಡುವುದಕ್ಕೂ ಈ ಮಹಾಪುರುಷನೇ ಕಾರಣರು. ಪರದೇಶಗಳಿಂದ ವಿದ್ಯಾರ್ಥಿಗಳು ಹಿಂದೂ ದೇಶವೇ ಮೊದಲಾದುವುಗಳಿಂದ ಜಪಾನ್ ದೇಶಕ್ಕೆ ಹೋಗುವ ವಿದ್ಯಾರ್ಥಿಗಳು ಮೊದಲಾದವರಿಗೆಲ್ಲಾ ಇವರು ಅತ್ಯಂತ ಪ್ರಿಯರು ಮತ್ತೂ ಪ್ರೋತ್ಸಾಹಕರು. ಈ ಮಹಾಪುರುಷರಿಗೆ ಈಗ ಪ್ರಜಾಶಾಸನದ ಮತವನ್ನು ಮೆರೆಯಿಸಿ ರಾಜ್ಯಸೂತ್ರವನ್ನು ನಡೆಸುವ ಸುಸಮಯವು ಲಭ್ಯವಾದುದರಿಂದ ಅದನ್ನು ವ್ಯರ್ಥವಾಗಿ ಹಾಳು ಮಾಡಲಾರದೆ ತಮ್ಮ ವಾರ್ಧಕ್ಯವನ್ನೂ ಲಕ್ಷಿಸದೆ ಮರಳಿ ರಾಜ್ಯಸೂತ್ರವನ್ನು ಹಿಡಿದು ಮುಖ್ಯಮಂತ್ರಿಯಾಗಿರುವರು. ಕಾರ್ಯವಿಲ್ಲದೆ ಸ್ಥಿರವಾದ ಸತ್ಸಂಕಲ್ಪವುಳ್ಳವರಿಗೆ ಪದವಿಯ ಮಡದಲ್ಲಿ ಹೇಗೆ ಬಯಲಾಗುವುದೇ ಬಹುಕಷ್ಟ. ಅಂಥವರಿಂದಲೇ ಒಂದು ವರ್ಗಕ್ಕೋ ಅಥವಾ ಒಂದು ಮತಕ್ಕೋ ಇಲ್ಲದೆ ಒಂದು ದೇಶಕ್ಕೇ ನಿಜಕಲ್ಯಾಣವಾಗುವುದೆಂಬುದಕ್ಕೆ ಈ ಕೌಂಟ್ ಓಕುಮಾರಂಥ ಮಹಾಪುರುಷರ ಚರಿತ್ರೆಯೇ ನಿದರ್ಶನವಲ್ಲವೆ?

ಸ್ತ್ರೀಶಿಕ್ಷಣ ಮತ್ತೂ ಅಭಿಪ್ರಾಯ ನಿವೇದನ

«ಭಾರತೀ ವಿಲಾಸ.»

ಈ ಮಾಸಪತ್ರದ ೩ನೆಯ ವರ್ಷದ ೧೦–೧೧ನೆಯ ಸಂಚಿಕೆಗಳನ್ನು ಆದರದಿಂದ ಸ್ವೀಕರಿಸಿದೆವು. ಲೇಖನ ವರ್ಷದಿಂದ ಈ ಮಾಸಪತ್ರದ ಲೇಖನದಲ್ಲಿ ಬೆಳೆದ ರೂಢಿಗಳಲ್ಲಿ ಅಭಿವೃದ್ಧಿಯನ್ನೂ ಕಂಡು ಸಂತೋಷಿಸುತ್ತೇವೆ. ಇದರಲ್ಲಿ ವಿದ್ಯಾನೀತಿ ಧರ್ಮ [illegible] ವಿವಿಧ ವಿಷಯಗಳಲ್ಲಿ ಉತ್ತಮೋತ್ತಮ ಲೇಖನಗಳೂ [illegible] ಗಳೂ ಪ್ರಕಟ [illegible]

ಶಾಖಾಶಕ್ಯ ... [illegible]

ವಿದ್ಯಾಪ್ರಸಾರ ಮತ್ತು ಸುವಿಚಾರ ನವರಸಗಳನ್ನು ಒಳಗೊಂಡಿರುವ ಈ ಪತ್ರಿಕೆಯು ಉಪಯುಕ್ತವಾಗಿರುವುದರಿಂದ ಅದನ್ನು ಪ್ರೋತ್ಸಾಹಿಸಿ ಜನರೆಲ್ಲಾ ಕೊಂಡು ಓದಬೇಕೆಂದು ವಿನಂತಿಸುತ್ತೇವೆ. ಮಾರುವಂತೆ ಇದರ ಚಂದಾ ಬಹಳ ಕಡಮೆ. ಇದರ ಕರ್ತರು ದೇಶಭಾಷಾಭಿಮಾನಿಗಳ ಪ್ರೋತ್ಸಾಹ ಹೊಂದಲಿ.

«ಸಂಯಮ»

ಸಂಚರಣ ಗೂಡಿನ «ಶ್ರೀಸೀತಾರಾಮ» ಮಂದಿರದ ಲೋಕಹಿತೈಷಿ ಮಂಡಲಿಯ ಭಾಷಾಬಿವೃದ್ಧಿಯಿಂದಲೂ ಹಿತಕರವಾದ ಸಣ್ಣ ಸಣ್ಣ ಗ್ರಂಥಗಳನ್ನು ಪ್ರಕಟಿಸಿ ದೇಶಸೇವೆಯನ್ನು ಕೈಕೊಂಡು ಸ್ವಲ್ಪದರದ ಆದನ್ನು ಸಿದ್ಧಾರ್ಥರು ಕಳೆದ ಶ್ರೀರಾಮನವಮಿಯ ಸಮಯದಲ್ಲಿ «ಸಂಯಮ» ಎಂಬ ಚಿಕ್ಕ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು ಆಕೃತಿಯಲ್ಲಿ ಸಣ್ಣದಾಗಿದ್ದರೂ ಪ್ರತಿಪಾದಿತವಾಗಿರುವ ವಿಷಯದಿಂದ ಘನವಾದುದು. ಇಂದ್ರಿಯಗಳನ್ನು ಹತೋಟಿಯಲ್ಲಿಡದೆ ಪಶುವಿನಂತೆ ವರ್ತಿಸುವುದರಿಂದ ಬರುವ ಅನೇಕ ದುಷ್ಪರಿಣಾಮಗಳನ್ನೂ ಸಂಯಮದಿಂದ ದೊರೆಯುವ ಸುಖಫಲಗಳನ್ನೂ ಸ್ಪಷ್ಟವಾಗಿ ತಿಳಿಸಿದೆ. «ಸಂಯಮದಿಂದ ಆರೋಗ್ಯವು ಸಾಧ್ಯವಾಗುವುದು. ಸದ್ಗುಣಗಳು ನೆಲೆಗೊಳ್ಳುವುವು. ವಿದ್ಯೆಯು ಹೆಚ್ಚುವುದು. ಮನಸ್ಸು ನಿರ್ಮಲವಾಗುವುದು» ಎಂದು ಈ ಗ್ರಂಥದಲ್ಲಿ ಹೇಳಲ್ಪಟ್ಟಿರುವ ಮಾತುಗಳು ಸತ್ಯವಾದುವು. ಈ ಗ್ರಂಥದಲ್ಲಿ ಉತ್ತಮವಾದ ಭಾಷೆಯೂ ಲಲಿತವಾದ ಶೈಲಿಯೂ ಇರುವುದರಿಂದ ಇದು ಪ್ರತಿಪಾದಿತವಾಗಿರುವುದು. ಎಲ್ಲರೂ ಓದಬೇಕಾದುದು. ವಿದ್ಯಾರ್ಥಿಗಳೂ, ಯುವಕರೂ ಇದನ್ನು ಓದಿ ಸಂಯಮಿಗಳಾಗುವರೆಂದು ನಂಬಿದ್ದೇವೆ. ಈ ಪುಸ್ತಕವನ್ನು ಉಚಿತವಾಗಿ ಕೊಡುವರು. ಶ್ರೀಗುರುಮಠಗಳಲ್ಲಿ ಕಾಲಯಾಪನೆಯಾಗುತ್ತಿರುವ ಈ ಗ್ರಂಥವನ್ನು ವಿವೇಕದಿಂದ ಓದುವವರಿಗೆ ಪ್ರಯೋಜನವಾಗುವುದೆಂದು ನಂಬುತ್ತೇವೆ.

«ಅಗಾರ್ದಿ ಗಾಜಿನ»

ಮೈಸೂರು ಅರಮನೆ ಆಸ್ಥಾನದ ಕರ್ತರು ಈ ಹೆಸರಿನ ಒಂದು ಸಚಿತ್ರವಾದ ಪುಸ್ತಕವನ್ನು ಪ್ರಕಟಿಸಿ, ಅದರ ಪ್ರತಿಯೊಂದನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದ್ದೇವೆ. ಇದು ಉತ್ತಮವಾದ ಕಾಗದದ ಮೇಲೆ ಮುದ್ರಿತವಾಗಿದ್ದು ಪುಟಗಳಲ್ಲಿ ಮುದ್ರಿತವಾಗಿರುತ್ತದೆ. ಉಪಯುಕ್ತವಾದ ಅನೇಕ ವಿಷಯಗಳ ಮೇಲೆ ವಿದ್ವಾಂಸರುಗಳಿಂದ ಬರೆಯಲ್ಪಟ್ಟ ಲೇಖನಗಳು ಇರುವುವು. ಮಹಾಪುರುಷರ ಮತ್ತೂ ಪ್ರಸಿದ್ಧ ಸ್ಥಳಗಳ ಛಾಯಾಚಿತ್ರಗಳು ಈ ಪುಸ್ತಕದಲ್ಲಿ ಚೆನ್ನಾಗಿ ಮುದ್ರಿಸಲ್ಪಟ್ಟಿರುವುವು. ಇದನ್ನು ಪತ್ರಿಕಾಕರ್ತರು ತಮ್ಮ ಪತ್ರಿಕೆಯ ಚಂದಾದಾರರಿಗೆ ಉಚಿತವಾಗಿ ಕೊಡಲು ಏರ್ಪಡಿಸಿರುವರು. ಅಭಿಪ್ರಾಯಪಟ್ಟ ರೀತಿಯಲ್ಲಿ ಇಂಥಹ ಪ್ರಯತ್ನದಲ್ಲಿ ತೊಡಗಿದವರಿಗೆ ಪ್ರೋತ್ಸಾಹವೂ, ಅಂಥ ಪ್ರಯತ್ನದಿಂದ ಆಯಾ ದೇಶದ ಭಾಷೆಗೂ ಪ್ರಜೆಗಳಿಗೂ ಪ್ರಯೋಜನವೂ ಉಂಟಾಗುವುದು ನಿಜವಷ್ಟೆ.

«ಚಿತ್ರ ಭಾರತ»

ಕನ್ನಡಿಗರಲ್ಲಿ ಪ್ರಸಿದ್ಧವಾಗಿರುವ ಇಂತಹ ಪ್ರಯತ್ನದ ಮಾಸಪತ್ರಿಕೆಗಳು ಹಿಂದೂ ದೇಶದ ಇತರ ಭಾಷೆಗಳಲ್ಲಿ ತೋರಿಬರುವವೆಂದರೆ ಹುಟ್ಟಿಸಲು ಸಚಿತ್ರವಾದವು ಕನ್ನಡಿಗರು ಸ್ವಲ್ಪವೇ. ಜನಪ್ರಿಯವಾದ ಚಿತ್ರಗಳನ್ನೂ ಲೇಖನಗಳನ್ನೂ ಕೊಡುತ್ತಿರುವ ಪತ್ರಿಕೆ ಇದೊಂದೇ. ಇದರಲ್ಲಿ ಅಧಿಕ ಧನವ್ಯಯದಿಂದ ಸಾಧ್ಯವಾದ ಚಿತ್ರಗಳೂ ಮನೋಹರವಾದ ವಿಷಯಗಳೂ ಮುದ್ರಿಸಲ್ಪಡುವುವು. ಈ ಪತ್ರಿಕೆಗೆ ಬಂಧುಗಳಿಗೆ ಬೇಕಾದ ಉತ್ತೇಜನ ದೊರೆಯಬೇಕು. ಈ ಮಾಸಪತ್ರಿಕೆ ಆರಂಭವಾಗಿ ಸ್ವಲ್ಪಕಾಲವಾದರೂ ಕಾಲಕ್ಕೆ ಸರಿಯಾಗಿ ಪ್ರಕಟವಾಗುತ್ತಿರುವುದಕ್ಕೆ ಇದರ ಸಂಪಾದಕರ ಶ್ರಮವೂ ಪ್ರೋತ್ಸಾಹವೂ ಕಾರಣವೆಂದು ಹೇಳಬೇಕು. ಕನ್ನಡಿಗರು ಈ ಪತ್ರಿಕೆಯನ್ನು ಕೊಂಡು ಓದಿ ಇದರ ಸಂಪಾದಕರನ್ನು ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ. [illegible]

ವಿಳಾಸ: [illegible]

…ಶ್ರಿಯ ಅನೇಕ ಸ್ಥಳಗಳ ಪ್ರಾಚೀನ ಸ್ಥಿತಿಗಳನ್ನು ವಿವರಿಸುತ್ತಿರುವ ಚಾರಿತ್ರಿಕ ಪ್ರಸಂಗಗಳ ವರ್ಣನೆಯು ಲೇಖನವನ್ನೂ, ವೈದಿಕರು ಸಂಸ್ಕೃತದ ಮೂಲಪುಸ್ತಕದ ಚರಿತ್ರೆಯನ್ನು ಪ್ರಕಟಿಸುವ ಕಾರ್ಯದಲ್ಲಿಯೂ, ಶೋಧಿಸಿದ ಚಿತ್ರಲೇಖನಗಳ ಚಾರಿತ್ರಿಕ ಕೆಲಸ ವ್ಯವಹಾರದ ವಿಷಯಗಳ ಮೊದಲಾದವನ್ನೂ ಇತ್ತ ಕಟ್ಟಿಗೆ ಮುದ್ರಿತವಾಗಿವೆ. ಬರಬರುತ್ತ ಇದರಲ್ಲಿ ಉತ್ತಮವಾದ ಶೋಧನೆಗಳು ನಡೆಯುತ್ತಿವೆ. ಇಂತಹ ಪ್ರಯತ್ನವು ಇತರೆಡೆಗಳಲ್ಲಿ ಕನ್ನಡಿಗರಲ್ಲಿ ದೊರೆವುದಿಲ್ಲ. ಇದನ್ನಾದರೂ ದೇಶೀಯರು ಸ್ವಹಸ್ತ ಪರಿಶ್ರಮ ಸಹಾಯಗಳಿಂದ ಪೋಷಿಸಿ, ಇದರ ಬೆಳವಣಿಗೆಯಿಂದ ತಮಗೆ ಜ್ಞಾನಲಾಭವನ್ನೂ ಕನ್ನಡಿಗರ ಗೌರವಕ್ಕೆ ಸ್ವಲ್ಪ ಪ್ರತಿಷ್ಠೆಯನ್ನೂ ಉಂಟುಮಾಡಿಕೊಳ್ಳುವುದು ಅವಶ್ಯಕವಾಗಿರುವುದು.

“ಶ್ರೀರಾಮಚರಿತೆ”

ಕಾಳಿದಾಸಕೃತವಾದ ರಘುವಂಶಕಾವ್ಯದ ೯ ಸರ್ಗಗಳವರೆಗಿನ ಕಥಾಭಾಗವನ್ನು ಗಣಿಸಿದ ಮ॥ ಎಸ್. ಜಿ. ನರಸಿಂಹಾಚಾರ್ಯರು ಷಟ್ಪದೀಕಾವ್ಯವಾಗಿ ರಚಿಸಿರುವುದು ಪ್ರಸಿದ್ಧವಾಗಿದೆಯಷ್ಟೆ. ಅದರ ಮುಂದಕ್ಕೆ ೯ ನೆಯ ಸರ್ಗದಿಂದ ೧೫ ನೆಯ ಸರ್ಗದಂತ್ಯವಾದ ಭಾಗವನ್ನು ಗಂಜಾಮಿನ ಕಾಲೇಜಿನ್ನಾಗಲಿದ್ದರಾದ ಮ॥ ಎಂ. ಕೃಷ್ಣಸ್ವಾಮಿಗಳು ಷಟ್ಪದಿಯ ರೂಪದಿಂದ ರಚಿಸಿ, ಅದಕ್ಕೆ “ಶ್ರೀರಾಮಚರಿತೆ” ಎಂದು ಹೆಸರಿಟ್ಟಿರುತ್ತಾರೆ. ಇದನ್ನು ಕರ್ನಾಟಕ ಗ್ರಂಥಮಾಲಾ ಕರ್ತರು ತಮ್ಮ ಗ್ರಂಥಗಳಲ್ಲಿ ಮುದ್ರಿಸಿ ಈ ಗ್ರಂಥಕರ್ತರನ್ನು ಪ್ರೋತ್ಸಾಹಿಸಿದ್ದಾರೆ. ಗ್ರಂಥಕರ್ತರ ಈ ರಚನೆಗೆ ಇದೇ ಮೊದಲಲ್ಲ. ಇವರು ಕರ್ಣಾಟಕ ಚೋರೇಶ್ವರ ಕರ್ಣಾಟಕ ಭಾಷಾಶಬ್ದಕೋಶ ಎಂಬುದು ಮೊದಲಾದ ಕೆಲ ಗ್ರಂಥಗಳನ್ನು ಮೊದಲೇ ರಚಿಸಿದವರಾದುದರಿಂದ ಈಗಿನ ಕೃತಿಯು ಶಯ್ಯೆಯಲ್ಲಿ ಮಾಧುರ್ಯಗೊಂಡಿದೆ. ಒಟ್ಟು ಇರುವ ೯ ಸಂಧಿಗಳಲ್ಲಿ ಮೊದಲನೆಯದು ಭಾಮಿನೀಷಟ್ಪದಿಗಳಲ್ಲಿ ವಾಗಿ ಉಳಿದುವೆಲ್ಲಾ ಕುಸುಮಷಟ್ಪದಿಯ ಪದ್ಯಗಳಲ್ಲಿ ವಾಗಿವೆ. ಗ್ರಂಥಕರ್ತರು ಸಾಧ್ಯವಾದವರೆಗೂ ಆ ಮೂಲ ಪದ್ಯಗಳಲ್ಲಿ ಕಾಳಿದಾಸನ ಅಭಿಪ್ರಾಯವನ್ನು ಇಳಿಸಿಯೂ ತುಂಬಾ ಶ್ರಮಸಾಹಸಗಳನ್ನು ತೋರಿಸಿದ್ದಾರೆ. ಲಾಕ್ಷಣಿಕ ಮರ್ಯಾದೆಯು ಬೇಕಾಗಿ ಅನುಸರಿಸಲ್ಪಟ್ಟಿದೆ. ಚಿಕ್ಕದಾದ ಈ ಗ್ರಂಥಕ್ಕೆ ೧೦ ಆಣೆ ಬೆಲೆಯಿಟ್ಟಿರುವುದು ಹೆಚ್ಚಲ್ಲ.

ಮೈಸೂರ್ ಸ್ಟಾರ್

ಸೆಪ್ಟಂಬರ್ ನೆಯ ಏಪ್ರಿಲ್ ತಾ॥ ೨೩ ನೆಯ ಸೋಮವಾರ

ರಾಜಧಾನಿಯ ಪುರೋಭಿವೃದ್ಧಿ

ವಿಶಿಷ್ಟತರವಾದ ಅಲಂಕಾರದಲ್ಲೂ ರಾಜಧಾನಿಯನ್ನು ಉತ್ತಮ ಸ್ಥಿತಿಗೆ ತರುವ ವಿಷಯದಲ್ಲಿ ವಿಶೇಷ ಪ್ರಯತ್ನಗಳು ನಡೆಯುತ್ತಿವೆ. ಇದುವರೆಗೆ ನಡೆದಿರುವ ಪಟ್ಟಣದ ವಿಸ್ತರಣೆಯಲ್ಲೂ ಪಟ್ಟಣದ ಪ್ರತಿಯೊಂದು ಭಾಗದಲ್ಲಿ ವಿಶೇಷವಾಗಿರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಪಟ್ಟಣಗಳ ಅಭಿವೃದ್ಧಿಯು ಶ್ರೇಯಸ್ಕರವೆಂದು ಅನುಭವಿಗಳು ಹೇಳುತ್ತಾರೆ. ಶಾಸ್ತ್ರದ ಮಾತಿಗೆ ಲಕ್ಷ್ಯಕೊಡದೆ ಹೋದರೂ, ಪಟ್ಟಣಗಳಲ್ಲೂ ಪುರೋಭಿವೃದ್ಧಿಯನ್ನು ಮಾಡುವುದರಿಂದ ಆಯಾ ಭಾಗದಲ್ಲಿ ಮನೆಮಠಗಳನ್ನು ಕಟ್ಟಿಕೊಂಡವರು ಹೊಸ ಮನೆಗಳನ್ನು ಮಾಡಿಕೊಳ್ಳುವುದಕ್ಕೆ “ಬಡಾವಣೆ” ಗಳನ್ನು ಕಟ್ಟಿಕೊಳ್ಳಲು ಅನುಕೂಲವಾಗುವುದು. ಮತ್ತು ಬೆಳವಣಿಗೆಯಲ್ಲೂ ಒಂದೇ ಸಮನಾಗಿ ಪಟ್ಟಣವು ವಿಸ್ತರಿಸಿದರೆ ಸೌಂದರ್ಯವೂ ವೃದ್ಧಿಯಾಗುವುದು. ಆದರೆ ಈ ವಿಚಾರಕ್ಕೆ ಇದುವರೆಗೂ ಗಮನಕೊಟ್ಟಂತೆ ಕಾಣುವುದಿಲ್ಲ. ನೋಡಿದರೂ ಈಗಿನ ಸಿಟಿ ಟ್ರಸ್ಟ್ ಬೋರ್ಡಿನ ಅಧ್ಯಕ್ಷರು ಮೊದಲಾದವರ ಗಮನಕ್ಕೆ ಬರುವುದೆಂದು ಕೇಳಿ ಸಂತೋಷಿಸುತ್ತೇವೆ. ಈ ಸಂಕಲ್ಪವು ಯುಕ್ತವಾಗಿರುವುದರಿಂದ ಗೌರ್ನಮೆಂಟಿನವರ ಅನುಮತಿಯು ಇದಕ್ಕೆ ದೊರೆಯಬಹುದೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ವಾಸಕ್ಕೆ ಅನುಕೂಲವಾದ ಬಾಡಿಗೆಯ ಮನೆಗಳು ಸಾಮಾನ್ಯ ಜನರಿಗೆ ದೊರೆವುದು ದುರ್ಲಭವಾಗಿದೆ. ಬಡವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದು ಕಷ್ಟವಾಗಿ ಹೋಗಿದೆ. ಆದುದರಿಂದ, ಸರ್ಕಾರ ವಿಧಿಗೆ ಅನುಸರಿಸಿ ಹೊಸ ಮನೆಗಳ ಸಾಲನ್ನು ನೂತನವಾಗಿ ಕಟ್ಟುವ ಕ್ರಮದಲ್ಲಿ ಕೆಲವೆಡೆಗಳನ್ನು ಭಾಗಿಸುವುದು ಉತ್ತಮವಾಗುತ್ತದೆ. ನಿವೇಶನಗಳನ್ನು ಕೊಡುವ ಸಹಾಯವೂ, ಕಟ್ಟಿಕೊಳ್ಳುವ ಕ್ರಮವೂ ಅನುಕೂಲವಾಗುವುದು. ಮತ್ತು ನಿಯಮವಾದ ವರಮಾನವುಳ್ಳ ಬಡಜನರಿಗೆ ಕಟ್ಟಲ್ಪಡುವ ಮನೆಗಳ ಅಭಿವೃದ್ಧಿಯ ಕ್ರಮವನ್ನು ಸ್ಮರಿಸಿ ಗೌರ್ನಮೆಂಟಿನವರು ಸಾಲರೂಪವಾಗಿ ಕೊಟ್ಟು…

…ಎಲ್ಲ ವರ್ತಕರುಗಳಲ್ಲಿ ಅದನ್ನು “ಕಂಟ್ರಾಕ್ಟ್” ಎಂದು ರೂಪಿಸಿಕೊಳ್ಳುವಂತೆ ಮಾಡುವುದು ಕೂಡ ಅತ್ಯವಶ್ಯಕವಾಗಿ ಕಾರ್ಯವಾದುದರಿಂದ ಅದನ್ನು ಕೂಡ ಗೌರ್ನಮೆಂಟಿನವರು ಅನುಮೋದಿಸುವುದು ಅವಶ್ಯಕವಾಗಿರುವುದು. ಆದರೆ ಇಂತಹ ಸಹಾಯವನ್ನು ಸರ್ಕಾರದ ಉದ್ಯೋಗಿಗಳಿಗೆ ಮಾತ್ರವೇ ದೊರೆಯಬೇಕೆಂಬ ಸಂಕಲ್ಪವನ್ನು ಇಟ್ಟುಕೊಂಡರೆ ಮಾತ್ರ ಸಾಮಾನ್ಯಪ್ರಜೆಗಳಿಗೆ “ದೇವರು ವರವನ್ನು ಕೊಟ್ಟರೂ ಪೂಜಾರಿಯು ವರವನ್ನು ಕೊಡನು” ಎಂಬ ಗಾದೆಯಂತೆ ಸಹಾಯವಾವುದೂ ಆಗದೆಯೇ ಹೋಗುವುದು.

ಮತ್ತು ಕಳೆದವಾರದಲ್ಲಿ ನಮ್ಮ ಮಂತ್ರಿವರ್ಯರವರು ರಾಜಧಾನಿಯ ಪರಾಮರಿಕೆಗಾಗಿ ದಯಮಾಡಿಸಿದ್ದಾಗ್ಗೆ ಬುಧವಾರದ ದಿವಸ ವರ್ತಕರು ಮೊದಲಾದ ಪುರಜನರನ್ನೂ ಸರ್ಕಾರದುದ್ಯೋಗಿಗಳನ್ನೂ ಕರೆಯಿಸಿಕೊಂಡು ಈ ನಗರದ ಸಾಂಪತ್ತಿಕಾಭಿವೃದ್ಧಿ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿದರು. ಗೌರ್ನಮೆಂಟಿನವರು ಮನಃಪೂರ್ವಕವಾಗಿ ಇದರ ಪುರೋಭಿವೃದ್ಧಿಯನ್ನು ಬಯಸಿ ಹೀಗೆ ಕೆಲಸ ಮಾಡುತ್ತಿರುವುದು ಸಂತೋಷಪ್ರದವಾಗಿದೆ. ಆದರೆ ಇಲ್ಲಿನ ಜನರಲ್ಲಿ ಸಾಂಪತ್ತಿಕಾಭಿವೃದ್ಧಿಯು ನಿಜವಾಗಿ ಆಗಬೇಕಾದರೆ ಇಲ್ಲಿ ವ್ಯಾಪಾರದ ವ್ಯವಹಾರವು ಮುಖ್ಯವಾಗಿ ಸಬಲಿಸಬೇಕು. ವ್ಯಾಪಾರವನ್ನು ಬಲಪಡಿಸಿ ಸಂಪತ್ತನ್ನು ಗಳಿಸಬೇಕೆನ್ನುವ ಜನರೇನೂ ಇಲ್ಲಿ ಕಡಿಮೆಯಾಗಿಲ್ಲ. ಆದರೆ ಸ್ಥಳವು ವ್ಯಾಪಾರಾಭಿವೃದ್ಧಿಗೆ ತಕ್ಕುದಾಗಿಲ್ಲ. ಚತುರಶ್ಕ್ಕಿನ ಲೋಹಮಾರ್ಗಸಂಬಂಧದಿಂದಲೂ ನೀರಾವರಿಗಳ ಯಾತಾಯಾತದಿಂದಲೂ ಪ್ರಾಶಸ್ತ್ಯಗೊಂಡು ಸಾಂಪತ್ತಿಕಸ್ಥಿತಿಯಲ್ಲಿ ಬಳೆಯುತ್ತಿರುವಂತಹ ಬೆಂಗಳೂರಿನ ಅನುಕೂಲ್ಯವು ಇದಕ್ಕಿರುವುದಿಲ್ಲ. ಪಶ್ಚಿಮ ದಿಕ್ಕಿನಿಂದ ವ್ಯಾಪ್ತಿಗೊಳಿಸುತ್ತಿರುವ ಈಗಿನ ಲೋಹಮಾರ್ಗದ ವಿಸ್ತಾರದಿಂದ ಕಿಂಚಿತ್ತು ಯಾತಾಯಾತವಾದರೂ ದಕ್ಷಿಣದಿಕ್ಕಿನ ಲೋಹಮಾರ್ಗವು ಭವಾನಿ ಈರೋಡಿನವರೆಗೆ ಸಂಬಂಧಿಸುವವರೆಗೂ ಯಾತಾಯಾತದ ಅಭಿವೃದ್ಧಿಯು ವಿಶೇಷವಾಗಿ ಆಗಲಾರದು. ಈ ವಿಚಾರವು ೨೦ ವರ್ಷಗಳಿಂದ ಚರ್ಚೆಯಲ್ಲಿದ್ದರೂ ಕೊನೆಮುಟ್ಟಿಲ್ಲ. ನಮ್ಮ ಗೌರ್ನಮೆಂಟಿನವರು ಕೃಷ್ಟಿ ನಡೆಸಿ ಇಂಡಿಯಾ ಗೌರ್ನಮೆಂಟಿನವರೊಡನೆ ಪತ್ರವ್ಯವಹಾರ ನಡೆಯಿಸಿ, ತನ್ಮೂಲಕ ಈಸ್ಟ್ ಇಂಡಿಯಾ ರೈಲ್ವೇ ಕಂಪನಿಯವರು ದಕ್ಷಿಣದ ಮೈಸೂರು ದೇಶದ ಎಲ್ಲೆಯವರೆಗೂ, ಅಲ್ಲಿಂದಾಚೆಗೆ ಸಂಪನ್ಮೂಲವರೆಗೆ ನಮ್ಮ ಗೌರ್ನಮೆಂಟಿನವರೂ ಲೋಹಮಾರ್ಗವನ್ನು ಬೇಗನೆ ಪ್ರತಿಷ್ಠಾಪಿಸುವಂತಾಗಬೇಕು. ಇದಲ್ಲದೆ ಬೆಂಗಳೂರಿನಲ್ಲಿರುವ ಮುಖ್ಯವಾದ ಸಾಲ್ಕ್ರೂ ಸರ್ಕಾರಿ ಕಚೇರಿಗಳನ್ನಾದರೂ ಮೈಸೂರಿಗೆ ವರ್ಗಾಯಿಸುವಂತೆ ಮಾಡಬೇಕು. ಹಿಂದೆ ೧೯ ಸಲ ಈ ಪ್ರಯತ್ನವನ್ನು ಮಾಡಿಯೂ ಸರ್ಕಾರದವರು ಅದಕ್ಕೆ ಸಡಿಲಬಿಟ್ಟಿರುತ್ತಾರೆ. ಅದನ್ನು ಕೊನೆಸಾಗಿಸುವಂತಾಗಬೇಕು. ಮತ್ತು ಧನಸಂಪತ್ತಿಯುಳ್ಳ ರಾಜಬಂಧುವರ್ಗದವರೂ ಇತರ ನಾಗರಿಕರೂ ಸಹ ಮುಂದಾಗಿ ನಿಂತು ಇಲ್ಲಿನ ವ್ಯಾಪಾರಕ್ಕೆ ಸಾಗುವಂಥಾದ ದೊಡ್ಡ ಯಂತ್ರಾಲಯಗಳನ್ನು ಸ್ಥಾಪಿಸಲು ಸನ್ನದ್ಧರಾಗಬೇಕು. ಅವುಗಳಲ್ಲಿ ಯಾವಜಾತಿಯ ಕಾರ್ಖಾನೆಯು ಲಾಭಯುಕ್ತವೆಂಬ ವಿಷಯವಾಗಲ್ಲಿ ಸಾಗಿಸಬೇಕೆಂದು ತಕ್ಕ ಸೂಚನೆಯನ್ನು ಗೌರ್ನಮೆಂಟಿನವರು ಕೊಡಿಸಿ ಪ್ರೋತ್ಸಾಹಬುದ್ಧಿಯನ್ನು ಪ್ರಜೆಗಳಲ್ಲಿ ಹುಟ್ಟಿಸಬೇಕಾಗಿರುವುದು. ಮೈಸೂರು ದೇಶೀಯರ ಪುಣ್ಯವಿಶೇಷದಿಂದ ಕನ್ನಂಬಾಡಿಯ ಜಲಾಶಯದ ಏನೆಯ ಕಲ್ಪನೆಯು ವಿಷಯದಲ್ಲೂ ಅನುಕೂಲವಾದ ತೀರ್ಮಾನವುಂಟಾದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಮತ್ತು ರಾಜಧಾನಿಯ ಸುತ್ತಮುತ್ತಲೂ ಕಬ್ಬು ಬತ್ತ ಮೊದಲಾದ ನೀರಾವರಿಯ ವ್ಯವಸಾಯಕ್ಕೆ ವಿಶೇಷ ಸಹಾಯವೂ ಪ್ರೋತ್ಸಾಹಗಳುಂಟಾಗುವುದರಿಂದ ರಾಜಧಾನಿಯ ವ್ಯಾಪಾರಾದಿ ಸಾಂಪತ್ತಿಕವೃದ್ಧಿಗೆ ಅದೂ ಕಾರಣವಾಗುವುದು. ಮುಖ್ಯವಾಗಿ ರಾಜಧಾನಿಯು ತೋಗಬೇಕಾದಂತಹ ಹೊರಗಣ ಅಲಂಕಾರಕ್ಕಿಂತಲೂ ಒಳಗಿನ ತಿರುಳಾದ ಸಾಂಪತ್ತಿಕಾಲಂಕಾರಕ್ಕೆ ವಿಶೇಷ ಪ್ರಧಾನವಾದ ಹದಿಯನ್ನು ದೂರಾಲೋಚನೆಯಿಂದ ಸ್ಥಾಪಿಸಲು ಗೌರ್ನಮೆಂಟಿನವರ ಪ್ರೋತ್ಸಾಹಸಹಾಯ್ಯಗಳೂ, ಪ್ರಜೆಗಳ ಪುರೋಭಿವೃದ್ಧಿ ಕಾಂಕ್ಷಾಗರಿಷ್ಠವಾದ ಉದ್ಯಮಗಳೂ ಪರಸ್ಪರವಿಸಿತವಾಗಿ ನಡೆಯುವಂತಾಗಬೇಕೆಂದು ಕೋರುವೆವು.

ಮೈಸೂರು ಸ್ಟಾರ್ ಪತ್ರಿಕೆಯಮೇಲೆ ತರಲ್ಪಟ್ಟ ಕ್ರಿಮಿನಲ್ ವಿವಾದದ ಪರ್ಯವಸಾನವು.

೧೯೧೩ ನೆಯ ಅಕ್ಟೋಬರ್ ತಾ॥ ೧೩ ನ ಸ್ಟಾರ್ ಪತ್ರಿಕೆಯಲ್ಲಿ “ಒಬ್ಬ ಅಧಿಕಾರಿಯ ದೌಷ್ಟ್ಯವು” ಎಂಬ ಶಿರೋಲೇಖನವುಳ್ಳ ಟಿಪ್ಪಣಿಯಲ್ಲಿ ಕಂಡ ಸಂಗತಿಯು ಸುಳ್ಳು; ಅದರಿಂದ ತಮಗೆ ಬಹಳ ಅವಮಾನವಾಗಿರುವುದೆಂದು ಮೈಸೂರು ಡಿ. ಬೆಳ್ಳಾಳಿಯರ ಶ್ರೀ ಎ. ಕೃಷ್ಣರಾಯರು…

…ಸ್ಟಾರ್ ಪತ್ರಿಕೆಯ ಎಡಿಟರ್ ಮೇಲೆ ಕ್ರಿಮಿನಲ್ ವಿವಾದವನ್ನು ತಂದಿದ್ದರು. ತಾ॥ ಮ್ಯಾಜಿಸ್ಟ್ರೇಟರಲ್ಲಿ ವಿವಾದವನ್ನು ತಂದಿದ್ದರು. ಈ ಲೇಖನವು ಒಬ್ಬ ವರದಿಗಾರರಿಂದ ಬಂದಿದ್ದುದರ ಮೇಲೂ ಇತರ ವಿಚಾರಣೆಯಿಂದಲೂ ನಾವು ಅದನ್ನು ವಾಸ್ತವವೆಂದು ತಿಳಿದು ಪ್ರಕಟಿಸಿಕೊಳಿಸಿದೆವು. ಆದರೆ ಮ॥ ಬಿ ಕೃಷ್ಣರಾಯರು ಆ ಸಂಗತಿಯು ಸುಳ್ಳೆಂದೂ ಅದರಿಂದ ತಮಗೆ ಅವಮಾನವಾಗುವುದೆಂದೂ ಹೇಳುತ್ತಿರುವುದರಿಂದ, ಯಾರೊಬ್ಬರನ್ನೂ ಅವಮಾನಪಡಿಸುವುದು ನಮ್ಮ ಉದ್ದೇಶವಲ್ಲವಾದ ಪ್ರಯುಕ್ತ ಇಂಥ ಲೇಖನವು ಪತ್ರಿಕೆಯಲ್ಲಿ ಮುದ್ರಿತವಾದುದಕ್ಕಾಗಿ ವಿಷಾದಿಸಿ, ಮ॥ ರಾಯರ ಕ್ಷಮೆಯನ್ನು ಬೇಡುತ್ತೇವೆ. ಕೋರ್ಟಿನಲ್ಲಿ ಇದೇ ಒಪ್ಪಂದದ ಮೇಲೆ ವಿವಾದವು ತಳ್ಳಲಪಡುವಲ್ಪಟ್ಟಿತು.

ಬಿಳಿದೇಶದ ವೃತ್ತಾಂತವು.

ಚಿತ್ರದುರ್ಗದ ಮುನಿಸೀಫರಾದ ಮ॥ ಬಿ. ವೆಂಕೋಬರಾಯರು ಡೆಪ್ಯುಟಿ ಕಮಿಷನರ್ ರ ಡೆಪ್ಯುಟಿ ರಿಜಿಸ್ಟ್ರಾರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯಲ್ಲಿರುವ ಚಾಮರಾಜೇಂದ್ರ ಟೆಕ್ನಿಕಲ್ ಶಾಲೆಯಲ್ಲಿನ ಚಿಕ್ಕ ಗಳಿಗೆಗಳು ಪರದೇಶ ಬಂದಿರುವುದೆಂದು ಕೂಲಿಗಳ ವಿದ್ಯಾಭ್ಯಾಸ ಸಂಬಂಧವ್ಯಾಪಾರಿಗಳು ವಿಚಾರಣೆ ನಡೆಯಿಸುತ್ತಿರುವರು.

ರಾಜಧಾನಿಯಲ್ಲಿ ಬಿಸಿಲಿನ ತಾಪವು ಅತಿ ಪ್ರಬಲವಾಗಿದೆ. ಆಗಾಗ ಸ್ವಲ್ಪ ಮೋಡ ಕವಿಯುವುದರ ಹೊರತು ಮಳೆಯು ಆಗುತ್ತಿಲ್ಲ. ದನಕರುಗಳಿಗೆ ಕಾಲುಬಾಯಿ ಜ್ವರಗಳು ಪ್ರಬಲವಾಗಿ ಜಾನುವಾರುಗಳು ಸಾಯುತ್ತಿವೆ.

ಕಳೆದ ಶುಕ್ರವಾರ ರಾತ್ರಿ ರಾಜಧಾನಿಯ ಮ್ಯಾನಸಿಪಲ್ ಆಫೀಸಿನ ಇರಿಸಿದ್ದ ಕಬ್ಬಿಣದ ಕೂರಿಬೆಲ್ಲಗಳನ್ನು ಬೀಗ ಮುರಿದು ಯಾರೋ ಕಳ್ಳರು ಅಪಹರಿಸಿರುವರು. ಪೊಲೀಸರು ಕಳ್ಳರನ್ನು ಹುಡುಕುತ್ತಿರುವರು.

ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್ ಸಭ್ಯರಾದ ರಾ॥ ಕೃಷ್ಣರಾಯರು ೭ ವಾರಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡಿರುವುದರಿಂದ ತಾ॥ ಜಗನ್ನಾಥರಾಯರು ವೈಸರಾಯ್ ಕೌನ್ಸಿಲಿನ ಉದ್ಯೋಗವನ್ನು ಕಳೆದ ತಾ॥ ೨ ರಲ್ಲಿ ಮ॥ ಕೃಷ್ಣರಾಯರಿಂದ ವಹಿಸಿಕೊಂಡಿರುವರು.

ಬೆಂಗಳೂರಿನ ಆಸ್ಪತ್ರೆಯ ವಾರ್ಡಿನಲ್ಲಿ ವಿದ್ಯಾರ್ಥಿಯ ದೀಪದ ಶಿಕ್ಷಕರು ಸಂಕಟಪಡುತ್ತಿದ್ದರು. ಅವರ ರೋಗವು ಅತಿಯಾದುದನ್ನು ಕಂಡು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದ ಸೀತಾರಾಮಯ್ಯನವರು ಕಳೆದ ತಾ॥ ೨೦ ರಲ್ಲಿ ಸತ್ತುಹೋದರು.

ಕೇರಳದೇಶಕ್ಕೆ ಎರಡು ತಿಂಗಳ ರಜವನ್ನು ತೆಗೆದು ಹೋಗಿದ್ದ ತಾ॥ ಎಸ್. ಸುಬ್ಬರಾಯರು ಕಳೆದ ತಾ॥ ೧೧ ರಲ್ಲಿ ರಾಜಧಾನಿಗೆ ಹಿಂತಿರುಗಿ ಬಂದು ಜನರಲ್ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಉದ್ಯೋಗವನ್ನು ತಾ॥ ರಾಮಸ್ವಾಮಿಯವರಿಂದ ವಹಿಸಿಕೊಂಡರು.

ರೈಲ್ವೆಯ ಚೀಫ್ ಇಂಜನಿಯರಾದ ಮಿ॥ ಇ. ಎ. ಎಸ್. ಬೆಲ್ ಅವರು ರಜವನ್ನು ಪಡೆದುಕೊಂಡು ಕಳೆದ ಶುಕ್ರವಾರ ಸೀಮೆಗೆ ಪ್ರಯಾಣಮಾಡಿರುವುದರಿಂದ ಅವರು ಬರುವವರೆಗೆ ಸೂಪರಿಂಟೆಂಡಿಂಗ್ ಇಂಜನಿಯರಾದ ಮಿ॥ ಕೈಸರ್ ಅವರು ರೈಲ್ವೆ ಚೀಫ್ ಇಂಜನಿಯರುದ್ಯೋಗವನ್ನು ನೋಡುವವರಾಗಿರುವರು.

ಕೆಲದಿನಗಳಲ್ಲಿ ಬೆಂಗಳೂರು ಮುನಸಿಪಾಲಿಟಿಯೊಂಬುವರು ಒಂದು ವಿಶೇಷ ಸಂಗತಿಯಲ್ಲಿ ಬಾಂಡುಳಿಯಲ್ಲಿದ್ದ ಕಾಡುಬೆಕ್ಕನ್ನು ಕಾಣದೆ ಅದರ ಮೇಲೆ ಕಾಲಿಟ್ಟು ಕಚ್ಚಲು ಮೈಯಲ್ಲ ಬಳಲಿಹೋಗಿ ಬೆಂದುಹೋಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಿದಾಗ್ಯೂ ಬದುಕದೆ ಕಳೆದ ತಾ॥ ೨೦ ರಲ್ಲಿ ಸತ್ತುಹೋದರು.

ಕಳೆದ ಸೋಮವಾರದಾರಭ್ಯ ಬೆಂಗಳೂರಿನಿಂದ ಕೂಡುವ ಜಯಮಲ ವಾರಪತ್ರಿಕೆಯೊಂದು ಪ್ರಕಟವಾಗಿ ಅದರ ಮೊದಲನೆಯ ಸಂಚಿಕೆಯು ಬಂದಿರುತ್ತದೆ. ಶ್ರೀಮದ್ಯುವರಾಜರು ಪಶ್ಚಿಮ ದೇಶ ಪ್ರಯಾಣಮಾಡಿ ಬಂದುದರ ಜ್ಞಾಪಕಾರ್ಥವಾಗಿ ಇದು ಹೊರಡಿಸಲ್ಪಟ್ಟಿತೆಂದು ಅದರಲ್ಲಿ ತಿಳಿಯಲ್ಪಟ್ಟಿದೆ. ಆದರೆ “ಕುರುವಿಜಯ” ವೆಂದು ನಾಮಕರಣ ಮಾಡುದರ ಕಾರಣವು ಮಾತ್ರ ವ್ಯಕ್ತವಾಗಿಲ್ಲ.

ನಮ್ಮ ಶ್ರೀಮನ್ಮಹಾರಾಜರವರು ಚಾಮರಾಜನಗರದ ತಾಲ್ಲೂಕಿನಲ್ಲಿ ಎರಡು ಭೂಮಿಗಳನ್ನು ಕೊಂಡುಕೊಂಡು ಅದರಲ್ಲಿ ಕಾಫಿ ತೋಟಗಳನ್ನು ಮಾಡಬೇಕೆಂದು ಕೋರಿರುತ್ತಾರೆಂದೂ, ಈ ವಿಚಾರದಲ್ಲಿ ತಕ್ಕ ಸೂಚನೆಯನ್ನು ಕೊಡುವ ಬಗೆಗೆ ಚಿಕ್ಕಮಗಳೂರಿನ ಕಾಫಿ ತೋಟಗಾರರಾದ ಮ॥ ಶ್ರೀನಿವಾಸರಾಯರು ಕಳೆದವಾರ ರಾಜಧಾನಿಗೆ ಬಂದಿದ್ದು ಅರಮನೆಯ ಕಂಟ್ರೋಲರು ಮುಂತಾದ ಅಧಿಕಾರಿಗಳೊಡನೆ ಅಧ್ಯಕ್ಷರವರುಗಳೊ…

ಕರುವ ಸ್ಥಳಕ್ಕೆ ಹೋಗಿ ನೋಡಬಹುದು ಎಂದರೆಂಬುದು ಸುತ್ತೇನೆ

ನವಾಬರು ತಮ್ಮ ಪ್ರಿ. ಸೆಟ್ ಸೆಕ್ರೆಟರಿ ಅಂತರ್ ಸೆಕ್ರೆಟರಿಗಳೊಡನೆ ಕಳೆದ ಮಂಗಳವಾರದ ಬೆಳಿಗ್ಗೆ ರಾಜಧಾನಿಗೆ ಪ್ರಯಾಣಿಸಿ ಆ ದಿವಸ ಡಿಸ್ಟ್ರಿಕ್ಟ್ ಆಫೀಸು, ಸಿಟಿಮ್ಯಾಜಿಸ್ಟ್ರೇಟ್ ಕೋರ್ಟು ಮ್ಯುನಿಸಿಪಲ್ ಆಫೀಸು ತಾಲೂಕು ಕಚೇರಿ ಮೊದಲಾದುವುಗಳನ್ನು ಪರಾಮರಿಸಿ ಮಾರನೆಯ ಬೆಳಿಗ್ಗೆ ದೊಡ್ಡಮಾರ್ಕೆಟ್ಟಿನ ಬಳಿಗೆ ಒಂದು ಅಲ್ಲಿಯ ಕಟ್ಟಡವನ್ನೆಲ್ಲಾ ಇವರೂ ಪರಿಶೀಲನೆಮಾಡಿ ೬ ದ್ವಾರಗಳನ್ನುಳ್ಳ ಹೊರುವ ಭಾಗವನ್ನು ಪರಾಮರ್ಶಿಸಿ ಅನಂತರ ಮಧ್ಯಾಹ್ನದಲ್ಲಿ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಅಧಿಕಾರಿಗಳ ಮತ್ತು ಮುಖ್ಯರಾದ ದೊಡ್ಡ ಮನುಷ್ಯರ ಸಭೆಯನ್ನು ಕೂಡಿಸಿ ಪ್ರಜಾನಿಯ ವ್ಯಾಪಾರ ಮೊದಲಾದ ವಿಚಾರಗಳ ಭಿನ್ನಹವನ್ನು ಕುರಿತು ಪರ್ಯಾಲೋಚಿಸಿ ತಾ|| ೬ ರ ರಾತ್ರಿ ನಗರಕ್ಕೆ ಹಿಂದಿರುಗಿ ದಯಮಾಡಿದರು

ಮದನ ಕಾನ್ಸಿಲಿನ ಆಕ್ಟಿಂಗ್ ಚೀಫ್ ಜಡ್ಜರಾದ ಮಿ|| ಎಚ್ ವಿ. ನಂಜುಂಡಯ್ಯ, ಎಂ ಎ, ಎಂ ಎಲ್ ಸಿ. ಇ, ಯವರು ಟ್ರಾವಂಕೂರು ಸಂಸ್ಥಾನದ ದಿವಾನಗಿರಿಯನ್ನೊಪ್ಪಿಕೊಂಡು ನಮ್ಮ ಶ್ರೀಮನ್ಮಹಾರಾಜರವರ ಅಪ್ಪಣೆಯನ್ನು ಪಡೆಯಲು ಉದಕಮಂಡಲಕ್ಕೆ ಹೋಗಿ ರುವಾಗಿರಿಯುತ್ತೇವೆ ನಮ್ಮ ದೇಶೀಯರಾರೂ ಇವರ ಹೊರಗಣ ಸಂಸ್ಥಾನಗಳಿಗೆ ಹೋಗಿ ಇಂತಹ ಉನ್ನತ ಪದವಿಯನ್ನು ಪಡೆದಿರಲಿಲ್ಲವು ಇಂತಹುದರಲ್ಲಿ ಮಿ|| ನಂಜುಂಡಯ್ಯನವರು ಹೈದರಾಬಾದು ಮೈಸೂರು, ಮತ್ತೂ ಬರೋಡಾ ಸಂಸ್ಥಾನಗಳನ್ನು ಬಿಟ್ಟರೆ ಇತರ ದೇಶೀಯ ಸಂಸ್ಥಾನಗಳಲ್ಲೆಲ್ಲಾ ಆದಾಯದಲ್ಲೂ ವಿಸ್ತೀರ್ಣದಲ್ಲೂ ಜನದಲ್ಲೂ ಗಣ್ಯವಾದ ತಿರುವನಂತಪುರದ ಮಂತ್ರಿಪದವನ್ನು ಪಡೆಯುವುದು ಈ ದೇಶೀಯರಿಗೆ ಕೀರ್ತಿಪ್ರತಿಷ್ಠೆಯನ್ನುಂಟುಮಾಡತಕ್ಕದಾಗಿದೆ.

ಮಾತೃಭಾಷೆ ಬಾಲ್ಯದ ವಿದ್ಯಾರ್ಥಿಗಳಲ್ಲಿ ಸಂಸ್ಕೃತಾದಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಮಾಡುವವರಾಗಿದ್ದು ತನರಾಗಿದ್ದವರಿಗೆ ಸಹಾಯಮಾಡಬೇಕೆಂಬುದಕ್ಕಾಗಿ ಒಂದು ನಿಧಿಯು ಶ್ರೀ ಶಿವಗಂಗಾ ಸ್ವಾಮಿಗಳಿಂದ ನಿರ್ಮಿಸಲ್ಪಟ್ಟಿದ್ದು ಅದರ ಪುಸ್ತಕವೃದ್ಧಿ ಕಾರ್ಯನಿರ್ವಾಹಕ್ಕಾಗಿ / ಡಿಸ್ಟ್ರಿಕ್ಟ್ ಮುತ್ಸದ್ದಿ ಮಹನೀಯರು ನಿಯುಕ್ತರಾಗಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ. ವಿದ್ಯೆಯು ಗೌರವಪ್ರತಿಷ್ಠೆಗಳನ್ನುಂಟುಮಾಡುವುದಕ್ಕೆ ಇಷ್ಟು ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ವಿದ್ಯಾಸ್ಪೃಹೆ ವ್ಯಾಸಂಗಶಕ್ತಿಯನ್ನು ಪ್ರೋತ್ಸಾಹಿಸುವರಾಗಿದ್ದರೂ ಈ ಜನರು ಇಷ್ಟು ಮಾತ್ರವಲ್ಲದೆ ಅವಶ್ಯವಾಗಿದೆಯೆಂದು ತಿಳಿದು ಸಹಕರಿಸುತ್ತಿರುವುದು ಅವರ ಕರ್ತವ್ಯದಕ್ಷತೆಯನ್ನು ನಿದರ್ಶನಪಡಿಸುತ್ತಿದೆ.

ವಿದ್ಯಾಪ್ರಾಪನೆ ಮೊದಲಾದುವುಗಳಲ್ಲಿ ಆಮೆಗಿಂತಲೂ ಮಂದವಾಗಿ ನಡೆಯುತ್ತಿರುವ ನಮ್ಮ ದೇಶದ ಇತರ ಜನಪದಗಳ ಮುಂದಾಳುಗಳು ಮೇಲೆ ಕಂಡವರ ಪ್ರಯತ್ನವನ್ನು ನೋಡಿ ಎಚ್ಚರಗೊಳ್ಳುವರೆ ?

ರಾಜಧಾನಿಯ ಸಂಗೀತ ಸಮಾಜದವರು ತಂಜಾವೂರಿನ ವೀಣೆ ಪಲ್ಲವಂ ಸಂಜೀವರಾಯರನ್ನು ಕರೆಯಿಸಿ ಅವರ ಕೊಳಲಿನ ವಾದನವನ್ನು ಕಳೆದ ತಾ|| ೧೯ ೨೦ ರಲ್ಲಿ ಜವಳೀ ಪೇಟೆಯಲ್ಲಿ ಮಾಡಿಸಿದರು ಸಮಾಜದ ಮೆಂಬರುಗಳು ಮತ್ತು ಅಲ್ಲದೆ ಇತರ ನಾಗರಿಕರೂ ವಿಶೇಷವಾಗಿ ಬಂದು ಕರ್ಣಾನಂದಗೊಂಡರು. ಮಿ|| ರಾಯರಿಗೆ ಕೊಳಲಿನ ವಾದದಲ್ಲಿರುವ ಅದ್ಭುತವಾದ ಸಾಮರ್ಥ್ಯವನ್ನು ನೋಡಿ, ಸಭಿಕರು ನಿಬ್ಬೆರಗಾದರು. ಶ್ರೀ ಕೃಷ್ಣನು ಇತರ ವಾದ್ಯಗಳನ್ನೆಲ್ಲಾ ಬಿಟ್ಟು ವೇಣುವಿನ ಕೊಳಲನ್ನು ಏತಕ್ಕೆ ಪ್ರೀತಿಸಿದನೆಂಬುದರ ತತ್ವವು ಈ ರಾಯರ ಅದ್ಭುತಪಾಂಡಿತ್ಯದಿಂದ ಸಭಿಕರಿಗೆ ಸ್ಫುರಿಸುವಂತಾಯಿತು. ಬೋಟಬಿದ್ದ ಅಚೇತನವಾದ ಬಿದಿರಾದರೂ ತನ್ನಲ್ಲಿ ಹುಟ್ಟಿದ ಇಂಪಾದ ಗಾನದ ಶಕ್ತಿಯಿಂದ ಜಗತ್ತನ್ನು ಮೋಹಗೊಳಿಸಿ ವಶಪಡಿಸಿಕೊಳ್ಳುತ್ತಿರುವುದನ್ನು ನೋಡುವಲ್ಲಿ ಸಚೇತನನಾದ ಮನುಷ್ಯನ ಜನ್ಮದಲ್ಲಿ ಅಂಥ ಇನಿಸುಡಿಯು ಸದಾ ವಾಸಮಾಡಿಕೊಂಡ್ದರೆ ಎಷ್ಟು ಲೋಕವಶ್ಯವಾಗುವುದೆಂಬ ನೀತಿಯನ್ನು ಸಾರುವಂತಿದ್ದಿತು. ಮುಖ್ಯವಾಗಿ ಸಂಗೀತ ಸಮಾಜದವರು ಈಗ ಮಾಡಿದ ಏರ್ಪಾಟಿನಿಂದ ಬೆಂಗಳೂರಿನ ಬಂದಿದ್ದ ಸಮಾಜದ ಕಾರ್ಯದಲ್ಲಿ ನವೀನವಾಗಿ ರಸತುಂಬುವುದಕ್ಕೆ ಅವಕಾಶವಾಯಿತು.

ವಿಶೇಷ ಪಡೆದ ಆಡಳಿತಗಳು ಈ ಬಾಕಿ ಲಕ್ಷ ರೂ. ಗಳಷ್ಟಾಗಿರುವುದು.

ಕಲ್ಕತ್ತಾದ ಖೇದಾರಿಪುರದ ತೀರದಲ್ಲಿ ನಿಂತಿದ್ದ ಗೋಣಿನಾರಿನ ಗಟ್ಟಗಳಿಗೆ ಬೆಂಕಿಬಿದ್ದು ಸುಟ್ಟುಹೋಗುವುದಕ್ಕೆ ಒಬ್ಬ ಯೂರೋಪ್ಯ ತರುಣನು ಕಾರಣನೆಂದು ಗೊತ್ತಾಗಿ ಅವನು ಹಿಡಿಯಲ್ಪಡುವುದರಲ್ಲಿದ್ದಾನೆ

ರಂಗೂನ್ ಪಟ್ಟಣದಲ್ಲಿ ಯಾಚಕರ ಉಪದ್ರವವು ನಗರ ನಿವಾಸಿಗಳಿಗೆ ದುಸ್ಸಹವಾಗಿದ್ದುದರಿಂದ ಪೋಲೀಸರು ಅವರಲ್ಲಿ ಮುನ್ನೂರು ಜನರನ್ನು ಹಿಡಿದು, ಪರಿಶೋಧಿಸುವಲ್ಲಿ ಅವರಲ್ಲಿ ಕೆಲರ ಹತ್ತಿರ ಬಹಳ ಹಣವು ಸಿಕ್ಕಿತು. ಕೆಲರು ಒಳ್ಳೆಯ ದೃಢಗಾತ್ರರಾಗಿದ್ದರು ಇವರೆಲ್ಲರನ್ನೂ ಜೋಳಿಯಮೇಲೆ ಬಿಟ್ಟರುತ್ತಾರೆ.

ಪಂಜಾಬು ದೇಶದಲ್ಲಿ ಉರ್ದುಭಾಷೆಯ ಪತ್ರಿಕೆಗಳ ಪ್ರಚಾರವು ಬಹಳವಾಗಿರುತ್ತದೆ ಲಾಹೋರ್ ಪಟ್ಟಣವೊಂದರಲ್ಲೇ ದಿನಪತ್ರಿಕೆಗಳು ೪ ಹೊರಡುತ್ತವೆ ಇವುಗಳಲ್ಲಿ ೩ ಹಿಂದೂಗಳದು ೩ ಮಹಮ್ಮದೀಯರವು ಇತ್ತೀಚೆ ಮೊನ್ನೆತಾನೇ "ದೀಪಕ" ಎಂಬ ದೈನಿಕಪತ್ರಿಕೆಯೊಂದು ಆರಂಭಗೊಂಡಿರುವುದು

ಅಮೃತಸರೋವರದಲ್ಲಿ ಒಂದು ಯಾಗವನ್ನು ಮಾಡುತ್ತಿರುವಾಗ ಗೋಪಾಲದಾಸ್ ಎಂಬಾತನು ಮನಃಪೂರ್ವಕವಾಗಿ ತಾನೇ ಯಾಗಕುಂಡಕ್ಕೆ ಬಿದ್ದು ಅಗ್ನಿಗಾಹುತಿಯಾದನು ಕೂಡಲೇ ಆತನ ಪತ್ನಿಯೂ ಕುಂಡಕ್ಕೆ ಬಿದ್ದಳು ಹೀಗೆ ಸತಿಪತಿಗಳಿಬ್ಬರೂ ದಾರವೊರ್ಛೆ ಬುದ್ಧಿಯಿಂದ ಅಗ್ನಿಪ್ರವಿಷ್ಟರಾದರಂತೆ

ಮಿ|| ಕಲಿಸ್ಲೊಳಗೆ ವಿರೂಪಾಕ್ಷಪ್ಪನವರಿಗೆ ಧಾರವಾಡದ ಹುದ್ದೆ. ಟಿ|| ಕಲೆಕ್ಟರ್ ಕೆಲಸವು ಅನಿತ್ಯವಾಗಿ ಕೆಲಕಾಲದ ಮಟ್ಟಿಗೆ ಕೊಡಲ್ಪಟ್ಟಿರುವುದು ಈ ಅವಧಿಯು ಮುಗಿದಕೂಡಲೇ ಅವರು ಬೀದಜನರಿಗೆ ನಪತಿಯನ್ನು ಕಲ್ಪಿಸಿ ಕೊಡುವ ಕೆಲಸಕ್ಕಾಗಿ ಸ್ಪೆಷಲ್ ಡ್ಯೂಟಿಯ ಆಫೀಸರಾಗಿ ನೇಮಿಸಲ್ಪಡುವರೆಂದು ಕೇಳುತ್ತೇವೆ

ಮೆಸ್ಪೊಟೇಮಿಯದಲ್ಲಿ ಜಟ್ಟಿ ತ್ರಿಪುರ ಕೆಲೆ ಸುಲಿಗೆ-ಕನ್ನಗಳ- ಮೊದಲಾದ ದುಷ್ಕೃತ್ಯಗಳನ್ನು ಅಡಗಿಸುವುದಕ್ಕಾಗಿ ಸರ್ಕಾರದವರು ಪೋಲೀಸು ಶಾಖೆಯವರಿಂದ ಮಾಡಿಸಿದ ಪ್ರಯತ್ನಗಳು ಅಷ್ಟೇನೂ ಫಲಕಾರಿಯಾಗಲಿಲ್ಲ ಈಗ ಕೆಲ ಜಿಲ್ಲೆಗಳಲ್ಲಿ ಸೈನಿಕರನ್ನಿರಿಸಿ ಅವರಿಂದ ಪೋಲೀಸರ ಕೆಲಸವನ್ನು ಮಾಡಿಸಬೇಕೆಂದು ಪ್ರಯತ್ನಿಸಿದ್ದಾರೆ

ಪೀಲಿಂ ಜಿಲ್ಲೆಯ ರಾಷಪ್ಪಿಂಡಿಯ ಬಾಲ್ಯನ್ಯಾಯಗಳು ಕಳೆದ ವರ್ಷದಲ್ಲಿ ವರಹ ದರ ಸ್ವದೇಶೀಸಾಮಗ್ರಿಗಳ ಬಳಿಗೆ ಹೋಗಿದ್ದು ತಮ್ಮ ಜನರನ್ನು ಸೇನೆಯ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ವಿಜ್ಞಾಪನೆಮಾಡಿಕೊಂಡರು ಅವಶ್ಯಕತೆಯುಂಟಾದಾಗ ನಿಮ್ಮ ಪ್ರಾರ್ಥನೆಯನ್ನು ನೆರವೇರಿಸಲು ಪ್ರಯತ್ನಿಸುವೆವೆಂದು ಅವರು ಉತ್ತರಕೊಟ್ಟರು

ಕಳೆದ ತಾ|| ೧೩ ರಲ್ಲಿ ಮುದ್ರಾಪಿಸದ ಪಾಠಶಾಲೆಯ ಕಟ್ಟಡದಲ್ಲಿರುವ ಪರೀಕ್ಷಾಮಂದಿರದಲ್ಲಿ ಅಕ್ಷರಗಳನ್ನು ಎಣಿಸಿ ಹಾಕುವ ಮನೆಯೊಳಗೆ ಬೆಂಕಿಬಿದ್ದು ರೂ. ೩೦ ಬೆಲೆಯ ಸರಕುಗಳು ಸುಟ್ಟು ನಷ್ಟವಾಯಿತು ಅಲ್ಲಿ ಕೆಲಸ ಕೆಲಸದಲ್ಲಿದ್ದಾತನಿಗೆ ಬಲವಾದ ಗಾಯಗಳಾಗಿ ಸ್ಪತ್ರೆಯಲ್ಲಿ ಸತ್ತನು ಇತರ ಕೆಲವರಿಗೆ ಅಲ್ಪಸ್ವಲ್ಪ ಗಾಯಗಳಾದವು.

ದಕ್ಷಿಣಾಫ್ರಿಕಾ ಭಾರತೀಯರ ಕಷ್ಟವನ್ನು ವಿಚಾರಿಸುವುದಕ್ಕಾಗಿ ಏರ್ಪಟ್ಟಿದ್ದ ಕಮಿಷನಿನವರ ತೀರ್ಮಾನವು ಈಗ ಪ್ರಕಟಿಸಲ್ಪಟ್ಟಿದೆ ಇದು ೫೦ ಪುಟಗಳುಳ್ಳದಾಗಿದೆ ಅದರಲ್ಲಿ ಕೊಟ್ಟಿರುವ ಮುಖ್ಯಾಭಿಪ್ರಾಯಗಳನ್ನು ಮುಂದಣ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ

ಕಲ್ಕತ್ತಾಸಮೀಪದ ಹೌರಾದಲ್ಲಿ ಬಿದ್ದ ವಿಪರೀತವೃಷ್ಟಿಯಿಂದ ಗಂಗಾನದಿಯಲ್ಲಿ ಪ್ರಯಾಣಿಕರ ದೋಣಿಗಳೆರಡು ಮುಳುಗಿಹೋದುವು. ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಹೋಗುತ್ತಿದ್ದ ಇನ್ನೆರಡು ದೋಣಿಗಳು ಸಹ ಮುಳುಗಿಹೋದುವೆಂದು ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ

ಈ ವರ್ಷದ ಮಾವಿನಬೆಳೆಯು ಅತಿವೃಷ್ಟಿಯಿಂದ ಹಾನಿಗೊಳಗಾಗಿದೆ. ಬೊಂಬಾಯಿಯಲ್ಲಿ ೧೦೦ ಹಣ್ಣಿಗೆ ೩-೪ ರೂ. ಬೆಲೆ ಇರುತ್ತಿದ್ದುದು ಈಸಲ ೧೫ರೂ ನಷ್ಟಾಗಿದೆ ೮ ರೂ ಬೆಲೆ ಹಣ್ಣಿಗೆ ೧೦ರೂ ಬೆಲೆಯಾಗಿದೆ ಬೊಂಬಾಯಿ ಮಾರಕಟ್ಟೆಗೆ ಹಣ್ಣು ಬರುವುದು ಬಹಳ ಕಡಿಮೆಯಾಗಿದೆ

ಕಾಶೀಪಟ್ಟಣದಲ್ಲಿ ಪೊಲೀಸಿನವರ ಬಾಧೆಯನ್ನು ತಡೆಯಲಾರದೆ ದೋಣಿನಡೆಸುವವರೂ ಕೊಳಾಯಿಗಳನ್ನು ಶುಭ್ರಪಡಿಸುವವರೂ ನೀರನ್ನು ಹೊರುವ ಜನರೂ ಸಹ ಮುಷ್ಕರಹಿಡಿದು ಕೆಲಸಕ್ಕೆ ಬಾರದೆ ನಿಂತುಬಿಟ್ಟಿದ್ದಾರೆ. ಇದರಿಂದ ಹಾದೀಬೀದಿಯಲ್ಲಿ ಕಸಕಡ್ಡಿಯು ಮಯವಾಗಿದೆ

ಸ್ವೀಡನ್ನಿನ ಯುದ್ಧವು ಪ್ರಾರಂಭವಾದ ಬಳಿಕ ಬೆಳ್ಳಿಯ ವ್ಯಾಪಾರದಂತೆ ಮುತ್ತಿನವ್ಯಾಪಾರವೂ ಜರುಗುತ್ತಿಲ್ಲವೆಂದು ಸುದ್ದಿಯುಂಟಾಗಿದೆ. ಲಂಡನ್‌ಪಟ್ಟಣದಲ್ಲಿ ಬೊಂಬಾಯಿಯವರ್ತಕರ ಸಂಬಂಧದ ಮುತ್ತುಗಳು ೪ ಕೋಟಿ ರೂ ನಷ್ಟು ಫ್ರಾನ್ಸ್ ಇಂಗ್ಲೆಂಡ್ ವರ್ತಕರ ಸಂಬಂಧದ ಮುತ್ತುಗಳು ೨೦ಕೋಟಿ ರೂ ವಷ್ಟು ಮಾರಾಟವಿಲ್ಲದೆ ನಿಂತುಹೋಗಿವೆಯಂತೆ.

ಕಳೆದವಾರ ಬೊಂಬಾಯಿಯಲ್ಲಿ ಬಂಗಾಳಕೊಲ್ಲಿಯ ಬಿರುಗಾಳಿಯು ಭಯಂಕರವಾಗಿ ಬೀಸಿ ದೊಡ್ಡ ಮನೆ ಮೊದಲಾದವುಗಳು ಹಾನಿಹೊಂದಿದವು ಮರಗಳು ತಂತಿಕಂಬಗಳು ಬಿದ್ದುಹೋದುವು ಸಮುದ್ರದಲ್ಲಿ ಹಡಗುಗಳು ನಷ್ಟವಾದುವು. ಪ್ರಯಾಣಿಕರುಗಳೂ ಅದರ ಜನರು ಅಪಾಯದಲ್ಲಿ ಸಿಕ್ಕಿ ಬಹಳ ಕಷ್ಟಪಡುತ್ತಿದ್ದಾರೆ.

ಇಂಡಿಯಾ ಕೌನ್ಸಿಲ್‌ನ ಕಾರ್ಯನಿರ್ವಾಹಕ ಸ್ಥಾನವನ್ನು ಸರ್ ಕೃಷ್ಣಗೋವಿಂದಗುಪ್ತರವರು ಬಿಟ್ಟಮೇಲೆ ಅವರಿದ್ದಸ್ಥಾನಕ್ಕೆ ಆನರಬಲ್ ಸರ್ ಶಂಕರನ್‌ನಾಯರ್‌ರವರು ನೇಮಿಸಲ್ಪಡುವರೆಂದು ಪ್ರಕಟವಾಗಿದೆ. ಇವರಿಗೆ ಮಂದ್ರಾಸ್ ಕೌನ್ಸಿಲಿನ ಕಾರ್ಯಕಾರಿ ಸದಸ್ಯತೆಯು ದೊರಕುವುದೆಂದು ಹಿಂದೆ ಸುದ್ದಿಯುಂಟಾಗಿದ್ದು ಹುಸಿಯಾಯಿತು. ಈಗಿನ ಸುದ್ದಿಯಾದರೂ ಸಫಲವಾಗಲಿ.

ಸಂಯುಕ್ತ ರಾಜ್ಯಗಳಲ್ಲಿ ಚರ್ಮದ ಬೆಲೆಯು ಏರಿಕೊಂಡಿರುವುದರಿಂದ ಚರ್ಮದ ಜೋಡುಗಳನ್ನು ಕೊಳ್ಳುವುದು ಬಡವರಿಗೆ ಅಸಾಧ್ಯವಾಗಿ ಪರಿಣಮಿಸಿದೆ ಆದುದರಿಂದ ಬೇರೊಂದು ಪದಾರ್ಥದಿಂದ ಉತ್ತಮವಾದ ಜೋಡುಗಳನ್ನು ನಿರ್ಮಿಸುವುದನ್ನು ತೋರಿಸಿದವರಿಗೆ ೧॥ ಸಾವಿರ ರೂ ಗಳ ಬಹುಮಾನವನ್ನು ಕೊಡತಕ್ಕದೆಂದು ಬ್ರಿಟಿಷ್ ಇಂಡಿಯಾ ಸಂಘದವರು ಪ್ರಕಟಿಸಿದ್ದಾರೆ

ಬವೇರಿಯಾದಲ್ಲಿ ಗಾಜಿನ ಕೆಲಸದವನೊಬ್ಬನು ಗಾಜಿನಿಂದಲೇ ಒಂದು ಗಡಿಯಾರವನ್ನು ನಿರ್ಮಿಸಿದ್ದಾನೆ ಇದರಲ್ಲಿ ಕೆಲ ಭಾಗಗಳನ್ನು ಸರಿಮಾಡುವುದಕ್ಕಾಗಿ ಒಂದು ಸಣ್ಣ ಯಂತ್ರವನ್ನು ನಿರ್ಮಿಸಬೇಕಾಯಿತಂತೆ. ಈ ಗಡಿಯಾರದ ಕೆಲಸವನ್ನು ಮುಗಿಸುವುದಕ್ಕೆ ೩ ವರ್ಷಗಳ ಕಾಲವು ಹಿಡಿಯಿತು ಇದರಲ್ಲಿನ ಚಕ್ರಗಳು ಮೊಳೆಗಳು ಮೊದಲಾದ ಸಕಲ ಸಾಮಗ್ರಿಗಳೂ ಗಾಜಿನವೇ ಆಗಿರುತ್ತವೆ

ಈ ವರ್ಷದ ಕೊನೆಯಲ್ಲಿ ಮದ್ರಾಸು ಆಧಿಪತ್ಯದಲ್ಲಿ ನಡೆಯುವ ದೇಶೀಯ ಮಹಾಸಭೆಯ ಸ್ವಾಗತಸಂಘಾಧ್ಯಕ್ಷತೆಗೆ ಡಾ॥ ಸರ್ ಎಸ್ ಸುಬ್ರಹ್ಮಣ್ಯ ಐಯ್ಯರ್‌ರವರೂ, ಕಾರ್ಯದರ್ಶಿಗಳಾಗಿ ಮ॥ ಗಳಾದ ಎ ರಂಗಸ್ವಾಮಿ ಅಯ್ಯಂಗಾರರು ಸಿ. ಪಿ ರಾಮಸ್ವಾಮಿ ಅಯ್ಯರು, ಟಿ ರಂಗಾಚಾರಿಯರವರು ಎಲ್ ಎ ಗೋವಿಂದರಾಘವ ಅಯ್ಯರು, ವಿ ಚಕ್ರಪಾಣಿ ಪಿಳ್ಳೆಯವರು, ಜಿ ಎ ನಟೇಶನ್‌ರವರು ಸಹ ಕಳೆದ ತಾ॥ ೩೦ ರಲ್ಲಿ ಮದ್ರಾಸಿನಲ್ಲಿ ಕೂಡಿದ್ದ ಸಭೆಯಲ್ಲಿ ಆರಿಸಲ್ಪಟ್ಟರು

ಭರತಖಂಡದಲ್ಲಿರುವ ಕುಷ್ಠರೋಗಿಗಳಿಗೆ ಸಹಾಯವನ್ನು ಮಾಡುವುದಕ್ಕಾಗಿ ಏರ್ಪಟ್ಟಿರುವ ಸಂಘದವರು ೧೮೭೪ನೆಯ ವರ್ಷದಲ್ಲಿ ಕೆಲಸಕ್ಕೆ ಆರಂಭಿಸಿದರು ಈಗ ಅವರು ೨೦೦೦ ರೋಗಿಗಳು ವಾಸಮಾಡಬಹುದಾದ ೪೫ ವೈದ್ಯಾಲಯಗಳನ್ನು ನಡೆಸುತ್ತಿದ್ದಾರೆ ಮತ್ತು ೩॥ ಸಾವಿರ ರೋಗಿಗಳನ್ನು ಕಾಪಾಡುವ ಇನ್ನು ೫೦ ವೈದ್ಯಾಲಯಗಳಿಗೆ ಧನಸಹಾಯಮಾಡುತ್ತಿದ್ದಾರೆ ಒಟ್ಟಿಗೆ ೮೦ ಸ್ಥಳಗಳಲ್ಲಿ ತಮ್ಮ ಕಾರ್ಯಾಲಯಗಳನ್ನು ಸ್ಥಾಪಿಸಿದಾರೆ ಅವುಗಳಲ್ಲಿ ೪೫ ಇಂಡಿಯಾ-ಸಿಲೋನ್-ಬರ್ಮಾಗಳಲ್ಲೇ ಇರುವುವು

ಭರತಖಂಡದ ಅಂಚೆಯ ಮತ್ತು ತಂತಿಯ ಶಾಖೆಗಳ ದಿನಕ್ಕೆ ಒಂದಾಗಿಮಾಡಿ ಅದಕ್ಕೆ ಒಬ್ಬನೇ ಒಬ್ಬ ಡೈರೆಕ್ಟರ್ ಜನರಲ್ಲಿರುವಂತೆ ಇಂಡಿಯಾಗೌರ್ನ್ಮೆಂಟಿನವರು ಕಳೆದ ೧೯೧೪ನೆಯ ವರ್ಷದ ಏಪ್ರಿಲ್ ತಾ॥ ೧ರಲ್ಲಿ ಏರ್ಪಡಿಸಿದರು ಈ ಏರ್ಪಾಡು ತೃಪ್ತಿಕರವಾದುದೆಂದು ಇದುವರೆಗಿನ ಪರೀಕ್ಷೆಯಲ್ಲಿ ಗೊತ್ತಾದುದರಿಂದ ಅದನ್ನು ಈಗ ಶಾಶ್ವತಪಡಿಸಿರುತ್ತಾರೆ ಈ ಡೈರೆಕ್ಟರ್ ಜನರಲ್‌ರವರಿಗೆ ತಿಂಗಳೊಂದಕ್ಕೆ ೩೫೦೦ ರೂ ಸಂಬಳವು ಇದು ವರ್ಷ ೧ಕ್ಕೆ ೨೫೦ ರೂಪಾಯಿಗಳ ಮೇಲೆ ಏರಿ ೪೦೦೦ ರೂ ಗಳವರೆಗೂ ಹೆಚ್ಚುವುದು

ರಾಜಮಹೇಂದ್ರದಲ್ಲಿ ಆಶ್ಚರ್ಯಕರವಾದ ನೀತಿಬೋಧಕವು ಕಳೆದ ವಾರದಲ್ಲಿ ನಡೆಯಿತೆಂದು ಪ್ರಕಟವಾಗಿದೆ ಜೋಗೆಂದರೆ-ಒಂದು ಸಭೆಯೊಳಗೆ ವೀರರಾಘವನಾಯ್ಡು ಎಂಬುವರು ದೂರದಲ್ಲಿ ಕುಳಿತು, ಒಂದು ಪುಸ್ತಕವನ್ನು ನೋಡುತ್ತಾ, ತನ್ನ ಕಣ್ಣಿನಲ್ಲಿ ಸಂಜ್ಞೆಯನ್ನು ಮಾಡುತ್ತಿರಲು, ಅದನ್ನು ದೂರದಿಂದಲೇ ನೋಡುತ್ತಿದ್ದ ವೀರಭದ್ರಸ್ವಾಮಿಯವರು ಗ್ರಹಿಸಿಕೊಂಡು, ಬಾರು ಕಾಗದಮೇಲೆ ಬರೆಯುತ್ತ ಬಂದರಂತೆ. ಹೀಗೆ ಬರೆದುದರಲ್ಲಿ ಬೀಜಗಣಿತದ ಅರ್ಥವಿರದ ಮಾಡಿ ಸಂಜ್ಞೆಗಳು ಕೂಡ ಆ ಪುಸ್ತಕದಲ್ಲಿದ್ದಂತೆಯೇ ಬರೆಯಲ್ಪಟ್ಟಿದ್ದುವಂತೆ!

ಪ್ರಪಂಚದಲ್ಲಿ ನಾಗರಿಕತೆಯು ವೃದ್ಧಿಯಾಗುತ್ತ ಬಂದಂತೆಲ್ಲ ವಸ್ತುಗಳಿಗೆ ಪ್ರತಿಯಾಗಿ ಕೃತ್ರಿಮ ವಸ್ತುಗಳನ್ನು ನಿರ್ಮಿಸುವುದೂ, ಅಥವಾ ಮಿಶ್ರಪದಾರ್ಥವನ್ನು ಕಲ್ಪಿಸುವುದೂ ಹೆಚ್ಚುತ್ತಿದೆಯಷ್ಟೆ. ಅದರಂತೆ ವ್ಯಾಪಾರಿಗಳು ಆಹಾರ್ಯವಸ್ತುಗಳಲ್ಲಿ ಇತರ ಪದಾರ್ಥಗಳನ್ನು ಮಿಶ್ರಮಾಡಿ ಮಾರುವುದೂ ಹೆಚ್ಚುತ್ತಿದೆ. ಇದರಿಂದ ವಸ್ತುಶೋಧಕ ಯಂತ್ರಶಾಲೆಗಳನ್ನು ಸ್ಥಾಪಿಸುವ ಅವಶ್ಯಕತೆಯು ಮುಖ್ಯವಾಗಿ ನಗರಗಳಲ್ಲಿ ವಿಶೇಷವಾಗಿ ಉಂಟಾಗಿದೆ ಪ್ಯಾರಿಸ್ ನಗರದಲ್ಲಿ ಆಹಾರ್ಯವಸ್ತುಪರೀಕ್ಷಕ ಮಂದಿರವೊಂದನ್ನು ಸ್ಥಾಪಿಸಿದ್ದಾರೆ. ಅಲ್ಲಿಗೆ ಯಾರಾದರೂ ಆಹಾರ್ಯಪದಾರ್ಥಗಳನ್ನು ತೆಗೆದುಕೊಂಡುಹೋದರೆ ಮುಂ ಕೆಲಸಗಾರರಿಂದ ಅದನ್ನು ೧ ಗಂಟೆ ಕಾಲದೊಳಗಾಗಿ ಪರೀಕ್ಷಿಸಿ ಅದರಲ್ಲಿನ ಗುಣದೋಷಗಳನ್ನು ತಿಳಿಯಿಸಿಬಿಡುವರು. ... ಸುಲಭವಾಗಿದೆ!

ವೈರಿಯೋ ... [illegible]

[illegible] ... ರಾವ್ ... [illegible] ... ಗಂಗಬ್ಬ ... [illegible] ... ರಾಮಚಂದ್ರ ... [illegible] ... ಬಿ. ಜಿ. ... [illegible] ... ಸಭೆಗೆ ಬಂದಿತ್ತು. ರಾವ್ ... [illegible] ... ಶ್ರೀಮಂತ ... [illegible] ... ವಿಭೂತಿಯನ್ನು ಧರಿಸಿ ... [illegible] ... ಸ್ಥಳದ ಮಠಸ್ಥರ ಅನೇಕ ಜನ ಶಿಷ್ಯರಿಂದ ಸಭೆಯು ಶೋಭಾಯಮಾನವಾಗಿತ್ತು. ಸದರೀ ಶ್ರೀಮಂತ ಮಲ್ಲಪ್ಪನವರ ಮನೆತನದ ಹಾಗೂ ಜವಾಬ್ದಾರಿಯ ವಿವಾಹದ ಪರೋಪಕಾರ ಬುದ್ಧಿ, ಸಹನಶೀಲತೆ, ದಯಾರ್ದ್ರ ಸ್ವಭಾವ, ಪ್ರಾಮಾಣಿಕತನ, ರಾಜಭಕ್ತಿ, ಮೊದಲಾದ ಮೇಲಾದ ಗುಣಗಳ ಬಗ್ಗೆ ರಾವ ಸಾಹೇಬ ಅಧ್ಯಕ್ಷರೂ ಮತ್ತು ರಾವ ಸಾಹೇಬ ಶಿವಮೂರ್ತಿ ಸ್ವಾಮಿಯವರೂ, ಪಂಡಿತ ಮಾಸ್ತರರೂ ಯಾವತ್ತು ಸಭಿಕರಿಗೆ ಚೆನ್ನಾಗಿ ಬೋಧವಾಗುವಂತೆ ತಮ್ಮ ತಮ್ಮ ಗಂಭೀರವಾಣಿಗಳಿಂದ ಹೇಳಿದರು. ಅನಂತರ ಅಧ್ಯಕ್ಷರ ಹಾಗೂ ಶ್ರೀಮಂತರ ವ ಯಾವತ್ತು ಸಭಿಕರ ಆಭಾರ ಮನ್ನಿಸಿ ಸದರೀ ಶ್ರೀಮಂತರ ಅನುಕರಣವನ್ನು ನಮ್ಮಲ್ಲಿಯ ಶ್ರೀಮಂತ ಬಾಂಧವರು ತೆಗೆದುಕೊಳ್ಳಬೇಕೆಂದು ಹೇಳಿ ಶ್ರೀ ಬಸವಾಪತಿಯು ಹಾಗೂ ನಮ್ಮ ಪರಮ ಪೂಜ್ಯ ದಯಾಳು ಸರಕಾರದವರ ಹೆಸರಿಂದ ಜಯ ಘೋಷಗಳಾಗಿ ಯಾವತ್ತರಿಗೂ ಹಾರ, ತುರಾಯಿ, ಗಂಧ, ಪರಿಮಳ ದ್ರವ್ಯಗಳಿಂದ ಮನ್ನಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಗೋಕಾಕಫಾಲ್ಸ್ ಓರ್ವ ಪ್ರೇಕ್ಷಕ.

ದೀರೂರು ನೋಟ್ಸ್

ಈ ಊರಿನಲ್ಲಿ ಪ್ಲೇಗು ಉಪಾಧಿಯು ಶಾಂತವಾಗಿ ಸುಮಾರು ೩ ತಿಂಗಳಾಯಿತು. ಈ ಭೀತಿಯಿಂದ ಚದರಿಹೋಗಿದ್ದ ಜನರು ಊರನ್ನು ಬಂದು ಸೇರುತ್ತಿದ್ದಾರೆ. ಪರ್ಷೇ ವರ್ಷ ಇಲ್ಲಿ ಪ್ಲೇಗ್ ಬಾವಳಿ ತಪ್ಪಿಲ್ಲವಾದುದರಿಂದ ಪುನಃ ಸ್ಥಳಾಂತರ ... ಎಷ್ಟು ಉಂಟಾಗುವದೋ ಎಂಬ ಶಂಕೆಯು ಜನರಿಗೆ ಇನ್ನೂ ಇದೆ. ಅಸಿಸ್ಟಂಟ್ ಕಮಿಶನರ್ ಸಾಹೇಬರವರೂ ಮಾಮಲೇದಾರ್ ರವರೂ ಇಲ್ಲಿಗೆ ಬಂದಿದ್ದು ದವಾಖಾನೆ ಕಟ್ಟಡವನ್ನು ಪೂರೈಸಿಕೊಂಡು ಬರುವಮಾಡಿಸಿದರು. ಕೆಲವರು ಸೆಂಟ್ರಲ್ ಸ್ಥಳ ತರಗತಿಯ ... [illegible] ... ಪರೀಕ್ಷೆಗೆ ... [illegible] ... ವಿದ್ಯಾರ್ಥಿಗಳಿಗೂ ... [illegible] ... ವಿದ್ಯಾರ್ಥಿಗಳಿಗೂ ... [illegible] ... ಇದೆ.

ಪ್ರತ್ಯಕ್ಷದರ್ಶಿ.

... ತಾರೀಖು ೨೦-೮-೧೯೧೧ನೆಯ ಈ ದಿವಸ ನಮ್ಮ ದಕ್ಷಿಣ ಭಾಗದ ... [illegible] ... ಈ ಬೆಳಗಿನ ಜಾವದ ... ಸ್ಟೇಷನ್ ... ಗಾಡಿಯಿಂದ ... ದಯಮಾಡಿಸಿದರು. ಈ ಸಂಬಂಧ ... ಸ್ಟೇಷನ್ ಮೇಲೆ ... ತಾಂಬೂಲ ವಿಡಾದ ಸಂತರ್ಪಣೆ ... ಸಮಾರಂಭವು ... ವಿದ್ಯುತ್ ... ನೆರವೇರಿತು. ಗಾಡಿಯು ಆಗಮಿಸುವ ... ವಿದ್ಯಾರ್ಥಿಗಳ ... ಹುಬ್ಬಳ್ಳಿ ... ಬೆಳಗಾಂವಿ ... ಕೊಲ್ಲಾಪುರ ... ಮತ್ತು ... ಗೋಕಾಕ ... ಮಿರಜ, ಹಾವೇರಿ, ಧಾರವಾಡ

... ಶೀಲತೆ ಕಡೆಯಾರಿಸಿ ... [illegible]

... [illegible] ... ಗಾಡಿಯು ಬರಲು ... ಜನರು ಆನಂದಭರಿತ ... ಅನಂತರ ರಾವಸಾಹೇಬ ... ಜ್ಯೇಷ್ಠ ... ಶಿವಯೋಗಿ ... ಸ್ವಾಮಿಗಳವರು ... ಮುಂತಾದವರು ಸತ್ಕಾರ ... ಹಾರ, ಗಂಧ, ತಾಂಬೂಲಾದಿ ಪರಿಮಳ ದ್ರವ್ಯಗಳಿಂದ ಸತ್ಕರಿಸಿದರು. ಮತ್ತು ... "ವಿಭೂತಿಪಂಡಿತ ಪರಮಶೆಟ್ಟಿ" ... ಅನೇಕ ಶ್ರೀಮಂತ ... ಅಧಿಕಾರಿ ... ಘೋಷ ... ಈ ಸಂದರ್ಭಕ್ಕೆ ... ಜನರು ಕೂಡಿದ್ದರು. ನಂತರ ... ಸಂತೋಷವನ್ನು ... ವ್ಯಕ್ತಪಡಿಸಿ ... ಮುಂದೆ ... ತೃಪ್ತರಾಗಿ ... ಮಾಡಿದ ... ಇವರು ಇದೇ ಪ್ರಕಾರ ... ರಾವ ಸಾಹೇಬ ಮಲ್ಲಪ್ಪ ... ಶೆಟ್ರೆ, ... ಮಂಗಸೂಳಿ ವಕೀಲರಾಗೂ ಹಿಪ್ಪರಿಗಿ ... ರಿಗಳೂ, ಮತ್ತು ಎಷ್ಟೋ ಸ್ಟೇಷನಗಳ ಮೇಲೆ ಹೀಗೇ ಸಮಾರಂಭವು ನಡೆಯಿತೆಂದು ತಿಳಿಸಲು ತುಂಬಾ ಆನಂದಪಡುತ್ತೇನೆ.

ಓರ್ವ ಪ್ರೇಕ್ಷಕ.

ನೋಟೀಸ್.

ರಾವ್‌ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿ ಬಡ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು ಮೈಸೂರ್ ದೇಶೀಯರಾಗಿಯೂ, ಇಂಗ್ಲೀಷ್ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಬ್ರೌಢ ವಿದ್ಯಾಭ್ಯಾಸಮಾಡಲು ಬೈತನ್ಯವಿಲ್ಲದವರಿಗೆ ಮಾತ್ರ ಅವಕಾಶಕೊಡಲಾಗುವುದು. ಬೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ ತಾವು ಹಿಂದೆ ಓದಿದ ಸ್ಕೂಲ್ ಯಾ, ಕಾಲೇಜಿನ ಮುಖ್ಯೋಪಾಧ್ಯಾಯರಿಂದಲೂ ಸಹ ತಮ್ಮ ಯೋಗ್ಯತಾಪಟುತ್ವವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಇದ್ದ ವಿದ್ಯಾರ್ಥಿಗಳು ಪೈಕಿ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದರೆ ಅವರಿಗೆ ಮೊದಲು ಅವಕಾಶಕೊಟ್ಟ ನಂತರ ಇತರರಿಗೆ ಅವರ ಯೋಗ್ಯತಾನುಸಾರ ಸಾಧ್ಯವಾದಷ್ಟು ಸ್ಥಳ ದೊರೆಯುತ್ತದೆ. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ೧೯೧೧ನೇ ಜೂನ್ ೧ನೇ ತಾರೀಖಿನೊಳಗಾಗಿ ಅರ್ಜಿ ಕಳುಹಿಸತಕ್ಕದ್ದು.

ಯಸ್. ಶಿ. ವೀರಭದ್ರಯ್ಯ, ಬಿ.ಎ. ಬಿ.ಎಲ್.
ಆನರರಿ ಸೆಕ್ರೆಟರಿ

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ವಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ಬೀಶ್ವರ, ಬಸವೇಶ್ವರ, ಗಣಪತಿ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಗ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಹಾಕಿಸಿ ಕಲ್ಪಿಸ್ತ ಕಾಲದಲ್ಲಿ ಬಹಳ ಸುಲಭವಾದ ಧಾರೆಯಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ.

ಚೆನ್ನಾದ ಇಲಿಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ಸುಂದರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೧-೮-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೆ ೧ ರೂ. ಕೊಡಬೇಕಾಗುವುದು. ನೂರು ಕಡ್ಡಿ ಕಾಗದದಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೩-೦-೦ ರೂಪಾಯಿ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೆ ೧-೮-೦ ಆಗುವುದು. ಕಳುಹಬೇಕು. ಕಲ್ಪಿಸ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನು ಪಡೆದ ಅನಂತರ ವಿಪಿ ಪಾರ್ಸಲ್ ಮೂಲಕ ಕಳುಹಿಸಲಾಗುವುದು. ಒಂದುಸಾರಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದರೆ ೦-೮-೦ ರೂ. ಕೊಡಬೇಕು. ಪೂರ್ವ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್ ಪ್ರೆಸ್, ಮೈಸೂರ್.

೫೦೦ ರೂಪಾಯಿಗಳು ಬಹು

ಲೋಕಪ್ರಸಿದ್ಧವಾದ ಸಾಲಾಮಿಸ್ರೀ

2 ಮುರಬ್ಬಾ.

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರೀ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವರು. ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂಡನೆ ಬೇಗ ವೀರ್ಯವು ಹರಿಯುತ್ತಿದ್ದರೂ, ಬೇಗ ಆಯಾಸವಾಗುವುದರಿಂದ ಮೇಲುಸಿರು ಬರುವದು ಇವು ಇವೇ ಮುಂತಾದ ರೋಗಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು.

ಈ ಪಂಜಾಬ್ ಸಾಲಾಮಿಸ್ರೀಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೆಚ್ಚಾಗುತ್ತಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ಜ್ವರ ಖಾಸ ರೋಗಗಳನ್ನು ನಿರ್ಮೂಲಪಡಿಸುವುದು.

ಈ ಸಾಲಾಮಿಸ್ರೀ ಎಂಬುದು ಹಿಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹುಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಬರೀ ಗಡ್ಡೆ ಇವುಗಳನ್ನು ಪಕ್ವಮಾಡಿ ಪ್ರತ್ಯೇಕವಾಗಿ ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರೀಯೋ ಅಥವ ಬೇರೇ ತರಕಾರಿಯೋ ಎಂಬುದು ಚೆನ್ನಾಗಿ ತಿಳಿದು ಬರುತ್ತೆ. ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರೀ ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸಿದ್ದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಒಂದು ತೊಲಾ ಮುರಬ್ಬಾವಿರುವ ಡಬ್ಬಾ ಒಂದಕ್ಕೆ ರೂ ೧-೪; ಪೋಸ್ಟ್ ಖರ್ಚು ನಾಲ್ಕು ಆಣೆ ಈ ಜಾಹೀರಾತಿನ ಜೊತೆಯಲ್ಲಿ ಔಷಧದ ಸಂಗಡ ಇರುತ್ತೆ.

ಅತ್ಯುತ್ತಮವಾದ ಮಹೌಷಧಗಳು.

೧. ಧಾತುಪುಷ್ಟಿ ಚೂರ್ಣ— ಕ್ರಯ ೫ ಆಣೆ.

೨. ರೋಮನಾಶಕ ಮತ್ತು ವೃಷ್ಟಿಕ ಔಷಧ ತೈಲವು ಬೇಕಾದ ಹೊಸತಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೇದು ಕ್ರಯ ೨ ಆಣೆ.

೩. ಪಾಂಡುನಾಶಿನಿ ತೈಲವು ಕ್ರಯ ೮ ಆಣೆ.

೪. ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೩ ಪೈ.

೫. ಕೆಮ್ಮಿನ ರೋಗಕ್ಕೆ ಔಷಧ ೪ ಆಣೆ.

೬. ವ್ರಣಕ್ಕೆ ಔಷಧ ೪ ಆಣೆ.

೭. ಅತ್ಯುತ್ತಮವಾದ ವೀರ್ಯವೃದ್ಧಿಯ ಗುಳಿಗೆ ೪ ಆಣೆ.

೮. ತಲೆನೋವಿಗೆ ತೈಲವು ೨ ಆಣೆ ೩ ಪೈ.

೯. ಪ್ರಮೇಹ ನಿವಾರಣ ಭಸ್ಮವು—೮ ಆಣೆ.

೧೦. ಬುದ್ಧಿ ಚುರುಕಿಗೆ ಮಾತ್ರೆಗಳು—ರೂ. ೧.

೧೧. ಮೂಲವ್ಯಾಧಿಗೆ ಔಷಧ—೪ ಆಣೆ.

೧೨. ಕಣ್ಣಿಗೆ ಸುರ್ಮಾ—೪ ಆಣೆ.

೧೩. ದಂತಚೂರ್ಣವು—೧ ಆಣೆ ೩ ಪೈ.

೧೪. ಕೂದಲು ಬೆಳೆಯುವ ಎಣ್ಣೆ (ಹಿಂದೋಲ ತೈಲ) ೪ ಆಣೆ.

ವಿಳಾಸ.— ಬಿ. ಮುನ್ನಾಲಾಲ್, ಡಿಲ್ಲಿ ವೈದ್ಯರು.
... ಹಳೇ ಸಿದ್ಧಿಕಟ್ಟೆ, ಬೆಂಗಳೂರು.

ಶುದ್ಧ ವನಸ್ಪತಿಯಿಂದಲೇ

ಧಾತುಪೌಷ್ಟಿಕ ಲೇಹವು.

22

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ಪೇಶ! (ಗೊಂಬಾಗಸಿದ್ಧರ ಹಣ ಸರತ !!) ದೇಶ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಮಿಶ್ರೀತವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಬುಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧ ರೋಗವಿದ್ದವರು, ಧಾತುಸೋರುವವರು, ಉಷ್ಣಹೋಗುವವರು, ಸೇವಿಸಲಿಕ್ಕೆ ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಚಾಕಿ, ಗುಹ್ಯಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಿಗುಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯವಾಗಿ ಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೩೦ ತೊಲೆಯಿಂದ ೪೦ ತೊಲೆ ಮಟ್ಟಿಗೆ ಬೇಕಾಗುವದು. ಕಿಮ್ಮತ್ತು ೩೦ ತೋಲೆಗೆ ರೂ ೩-೪-೦. ೪೦ ತೊಲೆಗೆ ರೂಪಾಯಿ ೩ ಬೇಳುವರು ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು

ವಿಳಾಸ.—ವೈದ್ಯ, ಜಿ ಎಲ್ ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬಸವಾಪಿ, ಜಿಲ್ಲ ಉತ್ತರಕನಡಾ

32

ದೊಡ್ಡ ಕಂಪನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಶಣ, ಪೇಟಾ, ಕಾಶ್ಮೀರ್ ಶಾಲು, ರುದ್ರಾಕ್ಷ, ಮುಂತಾದ ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅನಮೋಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,

ಬನಾರಸ್ ಸಿಟಿ (ಕಾಶೀ)

ಅಗ್ಗವಾದ ಮಾಲುಗಳು.



S. N. RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮ ಜಾತಿ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೧ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎಲ್ಲಾ ನಮೂನೆಯಲ್ಲಿ ದೊರೆಯುವುದು ಮತ್ತು ಇವುಗಳಲ್ಲದೆ ರೇಷ್ಮೆ ಮಗುಟ, ಕಾಶ್ಮೀರ ಶಾಲು, ರೇಷ್ಮೆ ಜರಿ ಸೀರೆ, ಜರಿಕಣ, ಪೇಟ, ದೊಳೆಕಾಲ್ಲುರು ನಮೂನೆ ವಸ್ತ್ರ ಜಗನ್ನಾಥ ಜಾಗಂಟಿ, ನೇಪಾಳ ಕಸ್ತೂರಿ, ಉತ್ತಮವಾದ ಜರಿ ಬಾರ್ಡರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇದ್ದೆ ಸಿದವರಿಗೆ ವಿ. ಪಿ ಮೂಲಕ ಕಳುಹಿಸಲಾಗುತ್ತೇ.

ರುದ್ರಾಕ್ಷಿಗಳ ವಿವರ:—

೧ ಮುಖದ ರುದ್ರಾಕ್ಷಿ ಕಂಠಿ ಅಂದ್ರ ವ ಸರ ೧ ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ. ೫ ಮುಖದ ಕಂಠಿ ೧ಕ್ಕೆ ೪ ಆಣೆಯಿಂದ ೭೦ ರೂಪಾಯಿವರೆಗೆ. ೩ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೧ ರೂ. ಯಿಂದ ೧೫೦ ರೂ. ವರೆಗೆ ಇದರಂತೆ ೪, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೭೦ ರೂ ವರೆಗೆ ಇವರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದವಾಳ ಪ್ರಮಾಣದ ಸರ ೧ಕ್ಕೆ ರೂ ೫ ರಿಂದ ರೂ. ೭೦ ವರೆಗೆ ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೪-೦ ಲಾಗಾಯಿತು ರೂ ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೩ ಆಣೆಯಿಂದ ರೂ ೭ ವರೆಗೆ ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳೆಲ್ಲಾ ಶ್ರೇಷ್ಠವೆಂದು ಹೇಳುವರು ರುದ್ರಾಕ್ಷಿ ಮಣಿ ೧ಕ್ಕೆ ರೂ ೫ ಲಾಗಾಯಿತು ರೂ. ೫೦ ವರೆಗೆ ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,

16 ಬನಾರಸ್ ಸಿಟಿ

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು.— ಚಂದ್ರಮಾರುತ ೦-೨-೦; ಚರಿತಾವೈತಾ ೦-೫-೦; ರಾಜಕಥಾವಳ್ಳರಿ ೦-೫-೦, ಪ್ರಿಯದರ್ಶಿನಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-[illegible]; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೪-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೪-೦; ಪದ್ಮಿನಿ ೦-[illegible]; ಸತ್ಯಸಂಧೇಯಿನಿ ೦-೪-೦, ಕೋಹಿನೂರು ೦-೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦, ಸೀತಾವನವಾಸ ೧-೧-೦; ರಜನಿ ೦-೧-೦. ‹4

ದೇಸಿಯುತಾಯಿದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಮನಸ್ಸಿಗೆ ಅಧಿಕಾನಂದವಾದ ಆನಂದವನ್ನುಂಟು

32 ಮಾಡುವುದರಲ್ಲಿ ಸುಪ್ರಸಿದ್ಧವಾದ

ಬಿ. ವಿ. ಪಂಡಿತರ

ಅಮೃತಾಂಜನ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್ ಸವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅವಶ್ಯಕವಾದ ಸುವಾಸನೆಯುಳ್ಳ ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರಿಗೂ ಮಲಬಂಧ, ಹೊಟ್ಟೆನೋವು, ನಾನಾ ತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ತಸಂಕಟ, ಜಲದೋಷಗಳನ್ನು ಬಾತರೆ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ ೧೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಅನುಪಾನಪತ್ರಸಹಿತ ೦-೪-೦.

ಶ್ರೀ ಕರ ಕಸ್ತೂರಿ ಮಾತ್ರೆ.

ಈ ಮಾತ್ರೆಗಳನ್ನು ಒಂದೇ ವೇಳೆ ಪರೀಕ್ಷಿಸಿರಿ ಇದರ ಗುಣ ಮತ್ತೂ ಸುವಾಸನೆಗಳು ನಿಮಗೆ ಅನುಭವವಾಗುವುವು ಮನೆಯಲ್ಲಿ ಸಣ್ಣ ಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತೂ ನೋಂಕುರೋಗಸ್ಥರು ಹಳ್ಳಿಗಳವರಿಗೆ ಈ ಮಾತ್ರೆಗಳು ಅಮೃತವೇ ಸರಿ. ಶೀತ ಜ್ವರ, ವಿಷಮಜ್ವರಗಳು, ಸಿಡುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ಮೈಕೈನೋವು ಮತ್ತೂ ಬಾಧೆಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ ವಿಶೇಷವಾದ ಅನುಪಾನ ಪತ್ರಸಹಿತ ೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೦-೮-೦ ನಾಲ್ಕಾಣೆ ಪೆಲೆ ಬಾಳುವ ಬಿಡು ಸೀಸೆಗಳನ್ನು ಪೆಟ್ಟಿಗೆ ತರಿಸಿದರೆ ಒಂದು ಇನಾಮು, ಬಿ ವಿ ಪ್ರತ್ಯೇಕ, ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಜೆ. ವಿ. ನಾರಾಯಣರಾವ್,

ಮ್ಯಾನೇಜರ್, [illegible]

[illegible]

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಪಲ್ಲಕ್ಕಿ ಉತ್ಸವದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸಪಪತ್ತಿಯುಕ್ತ ಆದ ಸಮಾರಂಭದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಜಮಾದಕರ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೆಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಕಾಗಿ ತನ್ನ ನೇತ್ರವನ್ನು ಪಡಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ವೀರಭದ್ರೇಶ್ವರನ ಫೋಟೋ ೧ಕ್ಕೆ ಕ್ರಯ ಫುಲ್ಸೈಜು ೧ ರೂಪಾಯಿ ಕ್ಯಾಬಿನೆಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಮಠ ಹುಬ್ಬಳ್ಳಿ ಶ್ರೀ ಸಿದ್ಧಾರೂಢ ಸದ್ಗುರುಮಹಾರಾಜ, ಶಾಶಿಲಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪಿ ವಿರೂಪಾಕ್ಷೇಶ್ವರ, ಶಿವಯೋಗಿಗಳು ಧ್ಯಾನದಲ್ಲಿರುವ ಶಿವಯೋಗಿಗಳು, ಬಸವ, ಶಿವ ಪಾರ್ವತಿ ಫೋಟೋ ಕಲರ್ ಫುಲ್ಸೈಜು ಕ್ರಯ ೧ಕ್ಕೆ ೧ ರೂಪಾಯಿ ಕ್ಯಾಬಿನೆಟ್ ಸೈಜು ೮ ಆಣೆ

ಹೋಟೋಗ್ರಾಫರ್.— ನಮ್ಮಲ್ಲಿ ನಯವಿರುವ ಸರ್ವ ತರಹ ಚಿತ್ರ ತಯಾರಿಸಿಕೊಡುತ್ತೇವೆ. ಮನುಷ್ಯರ ಕಿರಿದ ಫೋಟೋ ದಿಂದ ದೊಡ್ಡ ಫೋಟೋ ತೆಗೆದುಕೊಡುವೆವು. ಕೆಳಗಿನ ಕ್ರಮಕ್ಕೆ ಕೊಡುವೆವು ಕ್ರಯ ಇಲ್ಲದೂ ೧, ೧॥, ೧, ೧॥, ಪ್ರಕಾರ, ಮತ್ತೂ ದೊಡ್ಡದು ರೂ ೧॥ ರೋಲ್ಡ್ ಗೋಲ್ಡ್ ಬಂಗಾರದ್ದು ಫ್ರೇಮ್ ಗಾಜಿನ ಸಹಿತ ಕ್ರಯ ೫, ೫॥ ರೂ

ಫೋಟೋ ತರಿಸಲು ಬೇಕಾಗುತ್ತಿದ್ದರೆ ಅವರ ಟಿಕೇಟು ಕಳುಹಿಸಿ ಅಗ್ರಿಮದಲ್ಲಿ ಬೇಕಾದದ್ದು ತರಿಸಿಕೊಳ್ಳಿರಿ.

ನಮ್ಮ ವಿಳಾಸ— ಗಂಗಪ್ಪಾ ಜೋಶಿ,

9 ಆರ್ಟಿಸ್ಟ್ ಸೊಲ್ಲಾಪುರ,

ಉಡುಗೊರೆ ಗ ೨

3

ವಿಧವಿಧವಾದ ಊದುಬತ್ತಿಗಳು, ಸೇರು ೧ಕ್ಕೆ ೧-೭-೦, ೫-೦-೦, ೩-೦-೦, ೨-೦-೦, ೧-೫-೦; ಕಸ್ತೂರಿ ಪಿಲ್ಲಿ ತೋಲಾ ೧ಕ್ಕೆ ೧-೦-೦, ಪರಿಮಳ ತೋಲಾ ೧ಕ್ಕೆ ೧೨ ಆಣೆ ದಶಾಂಗಧೂಪ್ಪ ೧ಕ್ಕೆ ೮ ಆಣೆ ಧೂಪವರ್ತಿ ೧ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ಕ್ಕೆ ೮ ಆಣೆ ಅವೆ ಕ್ಷೇಮವುಳ್ಳವರು ತರಿಸಿಕೊಳ್ಳಬಹುದು

ಪಿ ಎಲ್ ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಓದಿನೋಡಿರಿ!! ಓದಿನೋಡಿರಿ!!!

೧೨ ತಿಂಗಳ ಭವಿಷ್ಯತ್ಫಲ.

ಅಸ್ಯಾಲೋಚನಿಯಾಗಿ! ಪ್ರತಿಯೊಂದು ತಿಂಗಳ ಪ್ರವರವಾಗುವ ಭವಿಷ್ಯತ್ಫಲವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳವರು ತಮ್ಮ ವಯಸ್ಸು ಹೆಸರನ್ನು ಮಾತ್ರ ಬರೆದು ಕಳುಹಿಸಿದರೆ ನಾವು ತಮ್ಮ ಪತ್ರ ಬಂದ ದಿನದಿಂದ ಒಂದು ವರ್ಷದವರೆಗೂ ಪ್ರತಿತಿಂಗಳಲ್ಲಿಯೂ ಉಂಟಾಗುವ ಲಾಭ-ನಷ್ಟ-ದುಃಖ-ರೋಗ-ನಷ್ಟ-ಪ್ರಯೋಜನ-ಪ್ರಯಾಣ ಇವೇ ಪರಿಹಾರವಾಗುವುದಕ್ಕೆ ಮಾಡುವ ಶಾಂತಿಕ್ರಮವನ್ನು ಸಹ ಚೆನ್ನಾಗಿ ಒಂದು ಪುಸ್ತಕದಲ್ಲಿ ಬರೆದು ಕಳುಹಿಸುತ್ತೇವೆ. ಇದನ್ನು ನೋಡಿದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ನಿಮ್ಮ ಅಕ್ಷರನ್ನು ಪೂರ್ಣವಾಗಿರಿ. ಟಪಾಲ್ ಹಾಸಲು ಪ್ರತ್ಯೇಕ. ೧೨ ತಿಂಗಳ ಭವಿಷ್ಯತ್ಫಲ ಪುಸ್ತಕ ರೂ. ೧-೦-೦ ನಮ್ಮಲ್ಲಿ ಜ್ಯೋತಿಷಸಂಬಂಧವಾದ ಪುಸ್ತಕಗಳೆಲ್ಲವೂ ದೊರೆಯುತ್ತವೆ ತಿಳಿಸು,

ಶ್ರೀ [illegible] | [illegible]

ಬರೆ— ಕಳೆದಿದ್ದ ವಿಷ್ಣುಹಾವವ್ರ ಶ್ರೀಗಿರಿ ೭ ನೇದಾ ವ್ರಿಗಸ್ಟೈವರು ಹಾನಲೆಯ ರಿಲೀಜಿಯಸ್ ಇನ್‌ಸ್ಟಿಟ್ಯೂಷನ್ ಮೊದಲಾದ ಕಪಾರಿ ಗ್ರಂಥಕ್ಕೆ ಸಿದ್ಧಾಂತನಗಳು ಈ ಸಾರಿಯು ಬಂದ್ಯಗಳು ಬಳ್ಳಿಯ ಅನ್ವೀತಿಮಾಡಿದರೂ, ಗಗ್ಗ ಸಿಟ್ಟ ಗಿರುವ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳೆಂತಿರುವ ಪ್ರತಿಯೊಬ್ಬ ನಾಯಕರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು ಮೇಲಾ ಕೃತಿಗಳು ಪತ್ರಿಯಕ್ಕೆ ಒಂದೇ ನೋಗ ಇರುವುದರಿಂದ ಹಿಂದಿನಿಂದ ನೋಡುವವರಿಗೆ ಕೃತಿಗಳು ನಿಶ್ಚಯವಾಗಿ ಸಿಗಲಾರವು ಕಾರಣ, ಇವುಗಳನ್ನು ಅಪೇಕ್ಷಿಸುವವರು ಪೋಸ್ಟೇಜ್ ಸಹಿತವಾಗಿ ಮತ್ತು ಸ್ಪಷ್ಟವಾದ ವಿಳಾಸದಿಂದ ಅರ್ಜಿಯ ಕಳುಹಿಸಬಹುದು

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಚೇರ್ಮನ್, ಸ್ವಾಗತಕಮಿಟಿ,
೭ ನೇಯ ಮಹಾಸಭೆ ನಿಪ್ಪಾಣಿ

...ದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ ಕ್ಕೆ ೮ ಆಣೆಯಿಂದ ೧೦ ರೂ ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಎಣ್ಣೆಗಳು, ಜವಾಜಿಗಂಧ ಅಥವಾ ಅರಗಜ, ಪುನುಗು, ಜವಾಜಿ, ಬಿಕ್ಕಾಂಗ, ಧೂಪದಗಂಧ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ-ರೋಜಾ ಮೊದಲಾದ ಅತ್ತರುಗಳೂ ಮತ್ತು ಶೃಂಗಾರಮಲಕತ್ತೈಲ ಮೊದಲಾದವುಗಳೂ ಬಿಕರಿಗೆ ಸಿದ್ಧವಾಗಿರುವುವು ಅಪೇಕ್ಷಕರು ೫ ರೂ ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು 34

ವಿಳಾಸ— ಎಸ್ ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ

...ನ್ಯಾಯದರ್ಪಣ. 1

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಾಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗವರ್ನ್ಮೆಂಟಿನ ಕಾನೂನೂ ಮತ್ತು ರೂಲ್ಸುಗಳೂ ಮನೆಗಳನ್ನು ಸಿಸ್ಟೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಿಸಿಯಿರತಕ್ಕ ನಾನಾವಿಧಗಳಾದ ದಸ್ತಾವೇಜು ವಗೈರೆಗಳ ಅಸಲ್ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ

ಬೆಲೆ ರೂ 1—8—0 ವಿ ಪಿ ಮೂಲ್ಯ 1—12—0

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

22 ಸಚಿತ್ರ ಶಂಕರವಿಜಯ ಕಥೆಗಳು — ರೂ ೧—೪—೦ (೩೧೦ ಪುಟ) ಪೋಸ್ಟ್ ಚಾರಲು ೪ ಆಣೆ

ಸಚಿತ್ರ ಭಟ್ಟಿವಿಕ್ರಮಾದಿತ್ಯರಾಯನ ಚರಿತ್ರೆ — ರೂ ೧—೪—೦, (೫೭೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ ! ಮೂರ್ಖತೆಯು ಬೇಕಾದರೆ, ಪಾಂಡಿತ್ಯ ಹೆಚ್ಚಬೇಕಾಗಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನು ಸಂಪಾದಿಸಬೇಕು, ಬುದ್ಧಿಶಕ್ತಿ ಹೆಚ್ಚಬೇಕೆಂಬ ಅಪೇಕ್ಷೆಯಿದ್ದರೆ ದಯಮಾಡಿ ಈ ವಿದ್ಯಾಮಂಜರಿಕಥೆಗಳನ್ನು ಓದಿರಿ ೩೭೦ ಪುಟಗಳಿಂದ ಕೂಡಿದ ೩೦ ಕಥೆಗಳಿಂದ ಕೂಡಿದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧—೮—೦ ಪೋಸ್ಟ್ ಚಾರಲು ೩ ಆಣೆ.

ಇನ್ನೂ ಎಲೆ ನಿಮ್ಮ ಇಷ್ಟದ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ

ವಿಳಾಸ— ಎಂ ಆರ್ ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಚಿತ್ರ ಬೃಹಸ್ಪತಿ ಕಥೆಗಳು

ಶೌನಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಕಾರ್ಯನಿರ್ವಹಣ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಭ್ರಾಂತ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು, (3) ಸ್ತ್ರೀ ಪಾತಿವ್ರತ್ಯಧರ್ಮ, ಪತಿಶುಶ್ರೂಷಾಧರ್ಮ, ಲೋಕಾನುಭವ ವಿವಿಧರೀತಿ ಮುಂತಾದುವುಗಳನ್ನು ಬೋಧಿಸುವುದು (4) ದೇವವಾಣೀಸಂಸ್ಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು (5) ಅಲ್ಲಲ್ಲಿ ಕಥಾಸಂದರ್ಭಕ್ಕೆ ಅನುಸಾರವಾದ ಚಿತ್ರಗಳನ್ನು ಇಟ್ಟಿರುವುದರಿಂದ ಓದುವಾರರಿಗೂ ಮನೋರಂಜಕವಾಗಿರುವುದು ಹೀಗೆ ಸರ್ವರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ, ಇದರ ಕ್ರಯ ಪ್ರತಿ ೧ಕ್ಕೆ ೧—೪—೦, ಪೋಸ್ಟ್ ಚಾರಲು ೪ ಆಣೆ

(೩೪ ಸಂಧಿಗಳು) ಸಚಿತ್ರ ಜೈಮಿನೀ ಭಾರತವು. (೫೩೦ ಪುಟಗಳು)

ಇದರ ಕ್ರಯ ಪ್ರತಿ ೧ಕ್ಕೆ ರೂ ೪—೦—೦, ಪೋಸ್ಟ್ ಚಾರಲು ೧೦ ಆಣೆ

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸುವೆವು

39 ನಮ್ಮ ವಿಳಾಸ— ಎಂ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ

ಶಿವಶ್ಯಾಮಸುಂದರ ವಿಶಾಲ ಪಂಡಿತರ ಸಿದ್ಧೌಷಧಗಳು 10

ಲೋಕಾಮೃತ-ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ದೊಡ್ಡಿಕೊಳ್ಳ

ಸಂಧುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಎದೆನೋವು, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಉತ್ತಮ ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನಿರುಗಿಹ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ ಸ್ತ್ರೀಯರ ಮುಟ್ಟುಕೋಲಿ, ಮಕ್ಕಳ ಏಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ರೂಪಾಯಿ ಹೆಚ್ಚು, ೧ ರಿಂದ ೫ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈ ಮೀರಿಹೋದ ರೋಗಿಯಾದಾಗ್ಯೂ, ಅಳ್ಳದವಾಗುವಂತೆ ರೋಗದ ದೇಹದ ಕೆಲಸಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ದೊಡ್ಡಮನುಷ್ಯರಿಗೆ, ಮಕ್ಕಳುಗಳಿಗೆ ಕೊಡಬಹುದು, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ತೋರುತ್ತದೆ. ಕಷ್ಟದಲ್ಲಿ ಬೇಕಾದಾಗ, ಬಂದೊಡನೆ ಬುದ್ಧಿಯು ನಿಶ್ಚಲವಿರಲಿ, ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಯಿಲೆಯನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವೆಂದು ತಿಳಿಯಿರಿ.

ಅನುಪಾನಪತ್ರವು ಔಷಧದೊಡನೆ ಇರುವುದು ಒಂದು ಬುಡ್ಡಿಯ ಬೆಲೆ ೧—೦—೦,
ಪೋಸ್ಟ್ ಖರ್ಚು ಬೇರೆ.

ವಿಳಾಸ — ಶಿವಶ್ಯಾಮಸುಂದರ ವೈದ್ಯಶಾಲಾ, ಮೈಸೂರು

ಗಂಧರಾಜ ನಸ್ಯದಪುಡಿ



ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚರ್ಮ ಕೆಡುವುದು ಕೆಟ್ಟವಾಸನೆಬರುವುದು, ಶೀತ, ನೆಗಡಿ ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸೀನು ಮತ್ತು ನೆಗಡಿಯವೇಳೆಗಳಲ್ಲಿ ಮಾತ್ರ ತಲೆನೋವು ಉಂಟಾಗುವುದು, ತಲೆಯಲ್ಲಿ ನೀರು ತುಂಬಿಕೊಂಡಿರುವುದು, ಈ ಯಾವುದಾದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ ಒಂದು ಚಿಟಿಕೆ ಈ ಪುಡಿಯನ್ನು ಸೇವಿಸಿದೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ ೧ ಡಬ್ಬಿಯ ಬೆಲೆ ೬ ಆಣೆ ೧ ಡಜನ್ ಡಬ್ಬಿಗೆ ೧—೧೪—೦

ಉತ್ತಮವಾದ ನಸ್ಯದಪುಡಿ

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳೆಲ್ಲ ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ ಎಂಟು ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೩—೪—೦

ಮಹಾಸೋಲಾಪುರಿ ಹೊಗೆಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಆರೋಗ್ಯಗಳು ಹೋಗುವವು ಸೇವಿಸುವವರೆಗೆ ಸುಟ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಕೂಡಿರುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ ೧ ಡಬ್ಬಿಗೆ ೭ ಆಣೆ ಒಂದು ಡಜನ್ ಡಬ್ಬಿಗೆ ೧ ೧೪—೦ ಪೋಸ್ಟ್‌ಖರ್ಚು ಬೇರೆ

ವಿಳಾಸ— ಕೆ ಮಲ್ಲಿಕಾರ್ಜುನಶೆಟ್ಟಿ,
ಗೋಪನಶೆಟ್ಟಿಪಾಳ್ಯ, ಹನೂರು ಪೋಸ್ಟ್
11 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೇಯ ಇಸವಿ ಮೇ ತಾ ೪ ರ ಿಂದ ೧೯೧೪ ನೇಯ ಮೇ ತಾ ೧೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೇಯ ಆನಂದನಾಮ ಸಂ॥ ದ ವೈಶಾಖ ಶು॥ ದಶಮಿ ಯಿಂದ ವೈಶಾಖ ಬ॥ ದ್ವಿತೀಯವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶ್ರೀಪಿ ಮೆ
4	¹ ಸೋ	ದ	2) 26	ಪ ಪು	47 7	22
5	² ಮಂ	ಏ	21 31	ಹುಬ್ಬ	43 15	23
6	³ ಬುಧ	ದ್ವಾ	16 0	ಉತ್ತರ	40- 0	24
7	⁴ ಗುರು	ತ್ರ	10-5	ಹಸ್ತ	35-52	25
8	⁵ ಶುಕ್ರ	ಚ	4-1	ಚಿತ್ತ	38-50	26
9	⁶ ಶನಿ	ಅ	[illegible]1 49	ಸ್ವಾತಿ	27-31	27
10	⁷ ಭಾ	ಪಾ	16-13	ವಿಶಾಖ	23-42	28

(1) ಬೌರಶ್ರೀರಾಮನವಮಿ, (2) ಮಂತ್ರಾಲದ ಅನಾದಿ ನರಸಿಂಹಸ್ವಾಮಿ ರಥ (3) ಸರ್ವಶ್ರೀಗೌರವ (4) ಪರಕಾಲ ಮಠಾಧ್ಯಕ್ಷ, ಮೇಲುಕೋಟೆ ಅಪ್ರಮೇಯಸ್ವಾಮಿ ರಥ, (5 ಶ್ರೀ ನೃಸಿಂಹಜಯಂತಿ, ಬಿಳಿಗಿರಿರಂಗಸ್ವಾಮಿರಥ, (6 ಅರ್ಧನಾರೀಶ್ವರವ್ರತ. (7) ಶ್ರೀರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರ

ಮೈಸೂರು ... ಸ್ಕೂ ಬರೋಡಾಪ್ರೆಸ್ಸಿನವರಿಂದ ಸಪ್ತಪ್ರಿಂಟೆಡ್ ... ಟೆಡ್

REGISTERED M. NO. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ } [illegible]

ಶ್ರೀಮಹೀಶೂರಪುರೀಶ್ವರಾ ವರಪಾಧಿಗತರಾಜಮಂಡಲಹಿತೈಷಿ [illegible] ಪತ್ರಿಕಾ ಸತ್ಯಾರ್ಥ ಪ್ರೋತ್ಸಾಹ [illegible]
[illegible] { ಅಂಚೆವೆಚ್ಚ ಸೇರಿ [illegible]
[illegible] ಗೌರೀಶಾನುಕಂಪೋಜ್ವಲಂ [illegible]

REGISTERED M. NO. 124

[illegible]) ಮೈಸೂರ್ ಸ್ಟಾರ್ ಸನ್ [illegible] ನೆಯ ಇಸವಿ ಮೇ ತಾರೀಖು [illegible] ನೆಯ ಸೋಮವಾರ. (ಸಂಖ್ಯೆ [illegible]

ಎಂ. ಎಸ್ ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚ ಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.



15 ಈ ವಾಗ್ದಾನವು ೨ ತಿಂಗಳುವರಿಗೆ ಮಾತ್ರ.

[illegible]

[illegible]

[illegible]

ಈ [illegible] ೨ ತಿಂಗಳೊಳಗಾಗಿ ಮೇಲ್ಕಂಡ ಒಂದು ವಾಚ್ ತರಿಸತಕ್ಕವರಿಗೆ [illegible]

[illegible]

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ

ಕಡಗಾರಿ ಹೊಸತರಹ! ಪದಾರ್ಥ ಅತ್ಯುತ್ತಮ! ಬೆಲೆ ಬಹಳ ಸುಲಭ!!!

ಬಜಾರಿನಲ್ಲಿ ಸಿಕ್ಕಿದ ಕಡಿಯುಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬಣ್ಣವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ ಈ ಕೆಳಭಾಗದಲ್ಲಿ ಕಂಡ ನಮ್ಮ ಕಡಿಯುಪುಡಿಯನ್ನು ಒಂದುಸಾರಿ ಉಪಯೋಗಿಸಿರಿ

"ನ್ಯಾಷನಲ್ ಬ್ಲ್ಯಾಕ್ [illegible] ಇಂಕ್ ಪೌಡರ್" ೧ ಪೊಟ್ಟಣ [illegible] ಅತ್ಯುತ್ತಮವಾದ ಬ್ಲ್ಯಾಕ್ ಶಾಯಿಯಾಗುತ್ತೆ ಪೊಟ್ಟಣ ೧ಕ್ಕೆ ಕ್ರಯ [illegible] ಪೊಟ್ಟಣಗಳಿಗೆ [illegible] ಪ್ಯಾಕಿಂಗ್ ಪೋಸ್ಟೇಜು ಮಾಫಿ ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಿಮೆ ರವಾನಿಸಲಾಗುವುದಿಲ್ಲ

ಜುವಾಲೆ ಇದೊಂದು ಅತ್ಯುತ್ಕೃಷ್ಟವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ [illegible] ಓದುತ್ತಾ ಹೊಸಹೊಸ ಭಾವಗಳು [illegible] ವಾಗುವುದು

ಮಂಟಿಕರೆ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡುತ್ತಲೇ [illegible] ಸಮುದ್ರದಲ್ಲಿ ಮುಳುಗಿಹೋಗುವಿರಿ ಕ್ರಯ ಪ್ರತಿ ೧ಕ್ಕೆ [illegible] ಪೋಸ್ಟೇಜು ಅಲಾಯಿದಾ

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು

೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, [illegible] ಶತಕ, [illegible] ಶತಕ, ಸಂಗಮೇಶ್ವರ ಶತಕ, [illegible] ನೇ ಶತಕಗಳು ವೀರಶೈವಧರ್ಮರಹಸ್ಯ ಶಿವರಹಸ್ಯ ಮುಂತಾದವುಗಳಿಂದಲೂ [illegible] ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ ಇಷ್ಟು ಸೌಕರ್ಯವುಳ್ಳ ಪುಸ್ತಕ ೧ಕ್ಕೆ ಕ್ರಯ [illegible]

(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ [illegible]

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ಕ್ಕೆ [illegible]

(೪) ಮುಕ್ತ್ಯಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ [illegible] ಪೋಸ್ಟೇಜು ಅಲಾಯಿದಾ

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆಸಮಯ

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟ್ರಾವಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳ್ಳೆ [illegible] ಪಕ್ಕದ [illegible] ಗಟ್ಟಿಯಾದ ನಿಕ್ಕಲ್ ಲೋಹದಿಂದ [illegible] ಮುಚ್ಚಿತವಾಗಿ [illegible] ಸಹ ಇಟ್ಟಿರುತ್ತೆ

(೧) ಘಂಟೆ ಅರ್ಧಘಂಟೆ ಹೊಡೆಯುವುದಕ್ಕೆ ಕ್ಲಾಕ್ ೧ಕ್ಕೆ [illegible]

(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ [illegible]

(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಘಂಟೆಗೂ [illegible] ಕ್ಲಾಕ್ ೧ಕ್ಕೆ [illegible]

(೪) [illegible] ಘಂಟೆಗೆ ಸರಿಯಾಗಿ [illegible] ಕ್ಲಾಕ್ [illegible]

[illegible]

[illegible] ಕೊಡುವುದಿಲ್ಲವೆಂಬ [illegible]

ಎಂ. ಎಸ್. ಸಿದ್ದಪ್ಪ ಅಂಡ್ [illegible]

[illegible] ಮೊಹಲ್ಲಾ, ಮೈಸೂರು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಸಟೀಕ ಶತಕತ್ರಯ	[illegible]
[illegible]	[illegible]
[illegible]	[illegible]
[illegible]	[illegible]
ಸಟೀಕ [illegible]	[illegible]
ಸಟೀಕ [illegible]	[illegible]
ವಿವೇಕ [illegible]	[illegible]
ವ್ರತಪಂಚಕ	[illegible]
[illegible]	[illegible]
[illegible]	[illegible]

ಅಂಚೆ ವೆಚ್ಚ ಬೇರೆ

ಹೊಸ ಪುಸ್ತಕಗಳು.

134

ಬಸವರಾಜವಿಜಯ— ಬೆಲೆ [illegible] ಸುಲಭವಾಗಿ [illegible] ಬಸವಪುರಾಣದ ಕಥೆಗಳೆಲ್ಲಾ [illegible]

[illegible]— ಬೆಲೆ [illegible] ಸಿದ್ಧವಾಗಿ [illegible] ಚರಿತ್ರೆಗಳು [illegible] ಕಾಲದಲ್ಲಿ [illegible] ವಿಷಯಗಳೆಲ್ಲಾ ಇದರಲ್ಲಿ [illegible] ಸರಳವಾದ [illegible] ಬರೆಯಲ್ಪಟ್ಟಿವೆ

[illegible]— ಬೆಲೆ [illegible] ಈ ಗ್ರಂಥದಲ್ಲಿ [illegible] ವಿಶೇಷಾರ್ಥ ವಿಚಾರವೂ ಇರುತ್ತವೆ

[illegible]— ಬೆಲೆ [illegible] ಚರಿತ್ರೆಯನ್ನೂ, ಅನೇಕ [illegible] ಗ್ರಂಥ

ವೀರಶೈವ ಧರ್ಮ [illegible] — ಬೆಲೆ [illegible] ವೀರಶೈವಮತದ [illegible]

ಪಂಚಾಕ್ಷರೀ— ಬೆಲೆ [illegible] ವೇದಾಗಮಪುರಾಣಾದಿ ಪ್ರಮಾಣಗಳಿಂದ [illegible]

[illegible]— ವೀರಶೈವ [illegible] ಚರಿತ್ರೆ ಸಟೀಕ ೧ನೆ ಪ್ರಕರಣಕ್ಕೆ [illegible] ನೆ ಪ್ರಕರಣಕ್ಕೆ [illegible]

[illegible]— [illegible], ಸಟೀಕ [illegible]

[illegible]

ವೀರಶೈವಾಶ್ರಮ

ಈ ವರ್ಷದಿಂದ ವೀರಶೈವಾಶ್ರಮವು ಯಾ ವಿದ್ಯಾರ್ಥಿಗಳ ಸಲುವಾಗಿ ಬೆಂಗಳೂರು ಪೇಟೆಗೆ ಮಧ್ಯಭಾಗದ ನಾಗಪ್ಪ ಬ್ಲಾಕಿನಲ್ಲಿ ಮುನಿಸಿಪಲ್ ಡೋರ್ ನಂಬರು ೧೪೧ನೆ ನಂಬರಿ ಮನೆಗೆ ಬದಲಾಯಿಸಲ್ಪಟ್ಟಿರುತ್ತೆ. ಈ ನಿವಾಸವು ಸುಂದರವಾದ ಕಟ್ಟಡವಾಗಿಯೂ, ವಿಶಾಲವಾಗಿಯೂ ಆರೋಗ್ಯಕ್ಕೆ ಅವಕಾಶವಿಲ್ಲದೆ ರಾಜಬೀದಿಯಲ್ಲಿ ಇರುತ್ತದಲ್ಲದೆ ಮುನಿಸಿಪಲ್ ಗಾರ್ಡ್ (ಉದ್ಯಾನವನ)ಕ್ಕೆ ಬಹಳ ಸಮೀಪದವಾಗಿರುತ್ತದೆ. ಇದರಲ್ಲಿ ಸುಮಾರು ೩೦ ಜನ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಿಟ್ಟಿರುವಷ್ಟು ವಸತಿಯಿರುತ್ತದೆ. ಸದರಿ ಸಂಸ್ಥೆಗೆ ಸೇರಬೇಕೆಂದು ಅಪೇಕ್ಷಿಸುವ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ೧೯೧೮ ನೇ ಫೆ॥ ತಾ॥ ೧೫ ರ ಒಳಗಾಗಿ ತಲ್ಪುವಂತೆ ಅರ್ಜಿ ಕೇಳಿ ಹಾಕಿಕೊಳ್ಳತಕ್ಕದ್ದು. ಸದರಿ ಆಶ್ರಮವು ೧೯೧೮ ನೇ ಜೂನ್ ೧ ನೇ ತಾ॥ ಲಾಗಾಯ್ತು ಆರಂಭಿಸಲ್ಪಡುತ್ತದೆ.

ಎಚ್. ಕೆ. ವೀರಬಸವಯ್ಯ ಬಿ ಎ ಬಿ ಎಲ್

ಬೆಂಗಳೂರು. ಸೆಕ್ರೆಟರಿ.

ಅರಕಲಗೂಡು.

ಬಿಸಿಲಿನತಾಪ ಬಹಳ ಜಾಸ್ತಿ. ಈಗ್ಗೆ ೮-೧೦ ದಿವಸದಲ್ಲಿ ಮಾತ್ರ ಸ್ವಲ್ಪ ಮಳೆಯಾಗಿ ತಾಪವನ್ನು ಇನ್ನೂ ಜಾಸ್ತಿ ಮಾಡಿತು. ಈಗ ಮಳೆ ಬರುವ ಸೂಚನೆಯುಂಟೇ ವಿನಾ ಮಳೆ ಸೇರಿ ಬರುವುದಿಲ್ಲ. ಜನಗಳೆಲ್ಲ ಈ ವರುಷ ಮಳೆ ಎಂದು ಕ್ಷೇಮವೋ ಎಂದು ಮಾತನಾಡಿಕೊಳ್ಳುತ್ತಿದ್ದಾರೆ. ಇಲ್ಲಿ ನೀರಿನ ಕಷ್ಟ ಬಹಳವಾಗಿದೆ. ಹೋಗಿಗೂ ಕೋಟೆಗೂ ಮಧ್ಯೆ ಇರುವ ಕೆರೆಯಲ್ಲಿ ನೀರು ಬಹಳ ಇಂಗಿಹೋಗಿ ಈಗ ಜನಗಳು ಒಳ್ಳೇ ನೀರನ್ನು ಕುಡಿಯಲು ಸಿಕ್ಕುವುದಿಲ್ಲ. ಮನುಷ್ಯನಿಗೆ ತನ್ನ ಪ್ರಾಣಕ್ಕೆ ಒಳ್ಳೇ ಆಹಾರ ಕುಡಿಯಲು ಒಳ್ಳೇ ನೀರು ಇರಬೇಕು. ಇಲ್ಲಿ ಒಳ್ಳೇ ನೀರಿಲ್ಲವೇ ಇಲ್ಲ. ಪ್ರಜಾಹಿತೈಷಿಗಳಾದ ನಮ್ಮ ದಿವಾನರು ಈ ಕಡೆ ಸವಾರಿ ಬಂದಿದ್ದಾಗ ಇಲ್ಲಿ ಜನರ ನೀರಿನ ಕಷ್ಟವನ್ನು ನೋಡಿದಾಗ್ಯೂ ಇನ್ನೂ ಏನೂ ನಿವಾರಣೆಯನ್ನು ಮಾಡಲಿಲ್ಲ. ಇದೊಂದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಕೆರೆಯಲ್ಲಿ ಕೆಸರಿನ ಗುಂಡಿ ಕೊಳೆತು ನೀರನ್ನು ಎಷ್ಟುಸಲ ಸೋಸಿ ಕಾಸಿದರೂ ನೀರು ನಿರ್ಮಲವಾಗುವುದಿಲ್ಲ. ಇಲ್ಲಿ ಧಾರಣೆಮಾಸಿಗಳು ಸುಮಾರಾಗಿವೆ. ಅವಲ್ ಅಕ್ಕಿ ರೂಪಾಯಿಗೆ ೭ ಸೇರು, ದುಯಂ ಅಕ್ಕಿ ೯ ಸೇರು, ರಾಗಿ ರೂಪಾಯಿಗೆ ೧೪ ಸೇರು ಸಿಕ್ಕುತ್ತದೆ. ಇಲ್ಲಿ ನೀರಿನ ಕಷ್ಟ ಜೋರಾಗಿ ಜನಗಳಿಗೆಲ್ಲ ಕಾಲುಬ್ಬಳ ಬಾಯಿಬ್ಬಳವೆಂಬ ರೋಗಬಂದು ಕರಾವಿಗೆ ಬಹಳ ಕಷ್ಟವಾಗಿದೆ. ರಾತ್ರಿಹೊತ್ತು ಬೀದಿಗಳಲ್ಲಿ ಕತ್ತೆಗಳ ಹಿಂಡುಗಳು ಸೇರಿ ಜನಗಳಿಗೆ ಬಹಳ ತೊಂದರೆ ಯನ್ನುಂಟುಮಾಡುತ್ತಿವೆ. ಬೀದಿಯು ಲಾಂದ್ರಕಂಬಗಳಿಗೆ ಸರಿಯಾಗಿ ಎಣ್ಣೆ ಹಾಕದೆ ಅವುಗಳು ಬಹಳ ಹೊತ್ತು ಉರಿಯುವುದೇ ಇಲ್ಲ. ಅಮಲ್ದಾರರ ಮನೆ ಮುಂದಿರುವ ಕಂಬವೊಂದು ಮಾತ್ರ ಬೆಳಗೂ ಪ್ರಕಾಶಮಾನವಾಗಿ ಉರಿಯುತ್ತದೆ. ಮಿಕ್ಕವುಗಳು ರಾತ್ರಿ ೯ ಗಂಟೆಗೆ ಮುಂಚೆ ಆರಿಹೋಗುತ್ತವೆ. ಈ ಊರು ಕೆರೆಸೋಬಿಗೆ ಎರಡು ಕಡೆಗೂ ಕಟಕಟಿಗಳನ್ನು ಕಟ್ಟದಿರುವುದರಿಂದ ಆಗಾಗ್ಗೆ ಬಂಡಿಗಳು ಕೆರೆಕೆಳಕ್ಕೆ ಬಿದ್ದು ಅನಾಹುತವಾಗುತ್ತದೆ. ಈಗ್ಗೆ ೧೪-೨ ದಿವಸದಲ್ಲಿ ಊರಿನಲ್ಲಿ ಒಂದು ನೀರನ್ನು ಹೇರುವ ಗಾಡಿ ಕೆಳಕ್ಕೆ ಬೀಳುವ ಸಂದರ್ಭದಲ್ಲಿದ್ದು ಅನಂತರ ದಾರಿಕಾರರಿಂದ ಮೇಲಕ್ಕೆ ಎಳೆಯಲ್ಪಟ್ಟಿತು. ಸರ್ಕಾರದವರು ಈ ಕಷ್ಟವನ್ನು ತಪ್ಪಿಸಿಯಾರೆಂದು ನಂಬಿರುತ್ತೇನೆ. ಈ ಏರಿಯಮೇಲೆ ಪ್ರತಿದಿವಸವೂ ಅನೇಕ ಗಾಡಿಗಳು ತಿರುಗುತ್ತವೆ. ಆದ್ದರಿಂದ ಸರ್ಕಾರದವರು ಇಲ್ಲಿ ಜನರನ್ನೇ ನಂಬದೆ ಮೇಲೆ ಹೇಳಿದ ಕಷ್ಟಗಳನ್ನು ನಿವಾರಣೆಮಾಡುತ್ತಾರೆಂದು ನಂಬಿರುತ್ತೇನೆ.

ಪುರನಿವಾಸಿ.

ತುಂಕೂರು ತಾಲ್ಲೂಕು ಕೋರದ ಗೌರ್ನ್ಮೆಂಟ್ ಎ. ಇ. ಸ್ಕೂಲಿನಲ್ಲಿ ನಡೆದ ವಿದ್ಯಾಭಿವೃದ್ಧಿ ವಿಷಯವಾದ ಸಭೆ.

ತಾ॥ ೩೧-೧೨-೧೭ನೆ ನೇ ಭಾನುವಾರ ಸಾಯಂಕಾಲ ೩ ಘಂಟೆಗೆ ತಾಲ್ಲೂಕು ಅಮಲ್ದಾರ್ ಮಿ॥ ಎಂ ಎಸ್. ರಾಮ ಚಂದ್ರರಾಯರವರು ದಯಮಾಡಿ ಇಲ್ಲಿಗೆ ದಯಮಾಡಿಸಿ, ಸರ್ಕಾರದವರು ಕಟ್ಟಿಸಿಕೊಟ್ಟಿರುವ ಹೊಸ ಸ್ಕೂಲ್ ಕಟ್ಟಡದಲ್ಲಿ ಗ್ರಾಮಸ್ಥರನ್ನೆಲ್ಲಾ ಸೇರಿಸಿ ಸಂಪದಭ್ಯುದಯ ಸಂಘದ ಪ್ರಕ್ರಮ, ವಿದ್ಯಾಭಿವೃದ್ಧಿ ವಿಷಯವಾದ ಉಪನ್ಯಾಸವನ್ನು ಸರಳವಾಗಿ ಜನರಿಗೆ ಅರ್ಥವಾಗುವಂತೆ ತಿಳಿಸಿಕೊಡುವುದು ಮನೋಹರವಾದ ನಾಟಕಾರರ ಕಾಗಿ ... ಅಲ್ಲದೆ ... ವೃತ್ತಿ ... ಯಥಾಪ್ರಕಾರ ವಿಷಯವನ್ನು ಕುರಿತು ಪ್ರಸ್ತಾಪಿಸಿ ... ಗ್ರಾಮಸ್ಥರು

ಮಾಡಿಕೊಳ್ಳಬೇಕೆಂದು ಉಪನ್ಯಾಸಕೊಡಿಸಿರುವ ಮೇರೆ, ಇಲ್ಲಿನ ಬಾಯ್ಸ್ ಸ್ಕೂಲ್ ಮಾಸ್ಟರ್ ಮಿ॥ ರಾ॥ ಬಿ. ಎಂ ರಾಮೇಗೌಡರವರಿಂದ ತಾ॥ ೨೬ ೧೨ ರಲ್ಲು ಒಂದು ಸಭೆಯು ನೆರವೇರಿಸಲ್ಪಟ್ಟಿತು. ಗ್ರಾಮದ ಮುಖಂಡ ಮರುಳಸಿದ್ದಪ್ಪನವರಾಗಿದ್ದರು. ಈ ಊರಲ್ಲಿ ಮುಖ್ಯರು ಮೂರು ವೀರಶೈವ ಜನ ವೀರಶೈವರು, ಪಾಟೀಲ್ ಶಿವಭೋಗರು ಮುಖ್ಯರೂ ಕಥಾ ಕಾರ್ಯಗಳ, ಸ್ಕೂಲಿಗೆ ಬರತಕ್ಕ ೪೦ ಮಂದಿ ಬಾಲಕ ಬಾಲಕಿಯರಲ್ಲಿ ಒಂಬತ್ತು ಬಾಲಕರು ವೀರಶೈವರೇ ಆಗಿರುವರು. ಎಲ್ಲರೂ ವಿಶೇಷೋತ್ಸಾಹದಿಂದ ಸಭೆಯು ಸೇರಿದ್ದಾಗ ಮಾಸ್ಟರ್ ಮಿ॥ ರಾ॥ ಗೌಡರು ವಿದ್ಯಾಭ್ಯಾಸದ ವಿಷಯದಲ್ಲಿ ಸ್ತ್ರೀಶಿಕ್ಷಣ ಎಂಬುದನ್ನು ಕುರಿತು ಉಪನ್ಯಾಸ ಮಾಡಿದ್ದು ಬಹಳ ಸ್ತೋತ್ರಾರ್ಹವಾಗಿತ್ತು. ಈ ಊರಲ್ಲಿ ಬಹು ದಿವಸದಿಂದ ಸ್ಕೂಲ್ ಇದ್ದಾಗ್ಯೂ ಇಂತಹ ಅಪೂರ್ವವಾದ ಸಮಾರಂಭ ಆಗಲಿ ಇಷ್ಟು ಬಾಲಕರೇ ಆಗಲಿ ಸೇರಿ ಇರಲಿಲ್ಲ. ಇಷ್ಟು ಮಕ್ಕಳನ್ನೂ ಇವರೊಬ್ಬರೇ ನಿಭಾಯಿಸತಕ್ಕದ್ದು ಕಷ್ಟಸಾಧ್ಯವಾಗಿದೆ. ಸದ್ಯದಲ್ಲಿಯೇ ಇನ್ನೊಬ್ಬ ಮಾಸ್ಟರೂ ಒಂದು ಗರ್ಲ್ಸ್ ಸ್ಕೂಲೂ ಬರಬಹುದು. ವಿದ್ಯಾಭ್ಯಾಸದ ಇಲಾಖೆಯ ಡಿ॥ ಐ॥ ಮೆ॥ ಇನ್ಸ್‌ಪೆಕ್ಟರ್ ಸಾಹೇಬರವರು ೧೯೧೬ ರಲ್ಲಿ ಈ ಸ್ಕೂಲನ್ನು ಇನ್ಸ್‌ಪೆಕ್ಟ್ ಮಾಡಿ ಬಹಳ ಸಂತೋಷಪಟ್ಟು ಮೇಲೆ ಕಂಡ ನಮ್ಮ ಕೋರಿಕೆಯನ್ನು ನೆರವೇರಿಸಿಕೊಡುತ್ತೇವೆಂದು ವಾಗ್ದಾನಮಾಡಿದ್ದಾರೆ. ಆಂದರೆ ನಮ್ಮ ಕೋರಿಕೆಯೂ ಶೀಘ್ರದಲ್ಲಿಯೇ ನೆರವೇರಬಹುದೆಂಗ ಕಾಣುತ್ತದೆ. ನಮ್ಮ ಸ್ಕೂಲು ದಿನೇ ದಿನೇ ಹೆಚ್ಚುತ್ತಿರುವ ಸ್ಥಳವೇ ಸಾಲದಂತಾಗುತ್ತಾ ಇದೆ. ಸಭೆಯು ಆ ದಿವಸ ರಾತ್ರಿ ೧೦ ಘಂಟೆಗೆ ಮುಕ್ತಾಯವಾಯಿತು. ನಮ್ಮ ಮಾಸ್ಟರು ಎಲ್ಲಾ ಕಾಲ ಮಸ್ತವನ್ನೂ ವಿಶೇಷೋತ್ಸಾಹದಿಂದ ಸೇರಿಸಿ ಊಟ ಮಾಡಿಸುವುದರಿಂದ ನಮಗೆಲ್ಲಾ ಬಹಳ ಸಂತೋಷವು ಆಗಿದೆ.

ಪ್ರಜಾಹಿತೈಷಿ

ತುಮಕೂರು ತಾಲ್ಲೂಕು ತೊಟ್ಟಿಕೆರೆ ವಿ॥ ಎ॥ ಸ್ಕೂಲಿನಲ್ಲಿ ತಾ॥ ೧೧-೧-೧೮ ರ ಮಧ್ಯಾಹ್ನ ೪ ಗಂಟೆಯಲ್ಲಿ ನಡೆದ ವಿದ್ಯಾಭಿವೃದ್ಧಿ ಸಂಘ ರೋಚಕವಾದ ವಿಷಯ - ಈ ಗ್ರಾಮದಲ್ಲಿ ಈಗ್ಗೆ ೨೦ ೩೦ ವರ್ಷಗಳಿಂದಲೂ ಬಾಲಕ ಬಾಲಕಿಯರಿಗೆ ಸರಿಯಾದ ಸ್ಕೂಲ್ ಕಟ್ಟಡವಿಲ್ಲದ ವಿಷಯದಲ್ಲಿ ಲೇಟ್ ಡಿ॥ ಐ॥ ಡಿ॥ ಇನ್ಸ್‌ಪೆಕ್ಟರ್ ಸಾಹೇಬರವರಾದ ಮಿ॥ ಎಂ ಮಾಧವರಾಯರವರು ವಿಷಾದಪಟ್ಟು ಇದಕ್ಕಾಗಿ ಇಲ್ಲಿನ ಮಿ॥ ಶಾನುಭೋಗ ತಿಮ್ಮಣ್ಣನವರು, ರಾಮಯ್ಯನವರು, ಸಾ॥ ಲಕ್ಷ್ಮೀನರಸೇಗೌಡರವರು, ಕಾ॥ ಭೀಮಣ್ಣನವರು, ಗಾ॥ ಗಂಗಪ್ಪನವರು, ಸಿ॥ ಮಲ್ಲಪ್ಪನವರು, ಜಿ॥ ಮಲ್ಲಪ್ಪನವರು, ಯ॥ ಹೊನ್ನಪ್ಪನವರು, ಸಿ॥ ಹುಚ್ಚೀರಪ್ಪನವರು, ಪಟೇಲ್ ಬೋರ್ಯನವರು ೭ ದೇವಾಲಯ್ಯನವರು, ಭಾವಿಮನೆ ತಿಮ್ಮಪ್ಪನವರು ಇವರೇ ಮುಂತಾದ ಗ್ರಾಮ ಮುಖಂಡರಿಂದ ಚಂದಾ ವಸೂಲ್ಮಾಡಿ ಈ ಕಟ್ಟಡಕ್ಕೆ ಸರಿಯಾದ ಪಾಯವೆಂಬ ಸಸಿಯನ್ನು ಹಾಕಿದರು. ಇದನ್ನು ಸರ್ಕಾರ ದ್ರವ್ಯಸಹಾಯದೊಡನೆ ಲೇಟ್ ಡಿ॥ ಡಿ॥ ಇ॥ ಸಾಹೇಬರವರಾದ ವಿ॥ ಜೆ॥ ಯ॥ ವೆಂಕಟರಮಣಯ್ಯನವರು ಮತ್ತು ಹಾಲಿಯಿರುವ ತಾಲ್ಲೂಕ್ ಅಮಲ್ದಾರ್ ಸಾಹೇಬರವರು ಪ್ರಜೆಗಳಮೇಲೆ ಅಭಿಮಾನವಿಟ್ಟು ಪೂರ್ಣ ನಲಿಯುವಂತೆ ಮಾಡಿಸಿಕೊಟ್ಟದ್ದಕ್ಕಾಗಿ ಇವರುಗಳನ್ನು ಸದಾ ವಂದಿಸುತ್ತೇವಲ್ಲದೆ ಈ ರೀತಿ ಮಾಡಿಸಿಕೊಟ್ಟ ಈ ಹೊಸ ಕಟ್ಟಡದಲ್ಲಿ ಈ ದಿವಸ ಈ ಗ್ರಾಮದ ಪಿ॥ ಲಕ್ಷ್ಮೀನರಸೇಗೌಡರೇ ಮೊದಲಾದ ಗ್ರಾಮ ಮುಖಂಡರಿಂದ ನಡೆಯುವ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಜೋಡರಥೋತ್ಸವ ಸೂಚಕವಾದ ಒಂದನೆ ಸಭೆಯು ಈ ಸ್ಕೂಲಿನಲ್ಲಿ ಸೇರಲ್ಪಟ್ಟು ಅಗ್ರಾಸನಾಧಿಕಾರವನ್ನು ಮಿ॥ ತುಮಕೂರು ಕರಣೀಕ ನಲ್ಲಪ್ಪನವರು ವಹಿಸಿ ವಿದ್ಯಾವಿಷಯವಾಗಿಯೂ ಗ್ರಾಮದ ಸಂಘಗಳ ವಿಷಯವಾಗಿಯೂ ಇವುಗಳನ್ನು ಕುರಿತು ಪ್ರಜೆಗಳಿಗೆ ಬಹಳ ಉತ್ಸಾಹದಿಂದಲೂ, ಪ್ರೀತಿಯಿಂದಲೂ ಉದಾಹರಿಸಿಗರು, ಹಿರಿಕೊಟ್ಟ ಕೆರೆ ಮಿ॥ ಸ್ಕೂಲ್‌ಮಾಸ್ಟರ್ ಸುಬ್ಬರಾಮ ದೀಕ್ಷಿತರು ವ್ಯವಸಾಯ ವಿಷಯವನ್ನು ಕುರಿತು ಪ್ರಜೆಗಳಿಗೆ ತಿಳಿಸಿದರು. ಕೋರದ ರಮಣ ಶೇಕದಾರ್ಯರು ಗ್ರಾಮಸಂಬಾಯತಿ ವಿಷಯವನ್ನು ಓದಿ ತಿಳಿಸಿದರು. ಈ ಸೋಬ್ಗಿ ಸಭೆಯಾದ ಮೇಲೆ ಸ್ಕೂಲ್ ವಿದ್ಯಾರ್ಥಿಗಳನ್ನೂ ತಾಂಬೂಲವೇ ಮೊದಲಾದ ಅಲ್ಪಾಹಾರದಿಂದ ತೃಪ್ತಿಪಡಿಸಲು ಸಾ॥ ಗಂಗಪ್ಪನವರು, ಜಿ॥ ಮಲ್ಲಪ್ಪನವರು ಸಿ॥ ಹುಚ್ಚೀರಪ್ಪನವರು ಇವರುಗಳ ಧರ್ಮರೂಪಕವಾದ ಕೀರ್ತಿಸ್ಥಾಪನವಾಯಿತು. ಅಲ್ಲದೆ ವಿದ್ಯಾರ್ಥಿಗಳ ಉತ್ಸಾಹಕ್ಕೋಸ್ಕರ ಡಿ॥ ಅಚ್ ಡಿ॥ ಇನ್ಸ್‌ಪೆಕ್ಟರ್ ಸಾಹೇಬರವರಾದ ತಿರುನಾರಣಯ್ಯಂಗಾರ್ಯರವರು ದಯಪಾಲಿಸಿದ್ದ ಇನಾಂ ಪುಸ್ತಕಗಳನ್ನು ಅಗ್ರಾಸನಾಧಿಪತಿಗಳು ಕೆಲವು ವಿದ್ಯಾರ್ಥಿಗಳಿಗೆ ಕೊಟ್ಟು ಅವರುಗಳಿಗೆ ವಿದ್ಯಾ ವಿಷಯದಲ್ಲಿ ಉತ್ಸಾಹವನ್ನೂ ಪ್ರೋತ್ಸಾಹವನ್ನೂ ಬೋಧಿಸಿದರು. ಉಪಯುಕ್ತವಾದ ಕಾರ್ಯಾಂಗಗಳನ್ನು ಕೇಳಬಯಸುವರು.

ಈಗ್ಗೆ ಸುಮಾರು ೮-೧೦ ವರ್ಷಗಳ ಕೆಳಗೆ ಈ ಸ್ಕೂಲು ಬಹಳ ಹೀನಸ್ಥಿತಿಯಲ್ಲಿದ್ದು ಈಗ ಇಷ್ಟು ಅಭಿವೃದ್ಧಿಗೆ ಬಂದದ್ದು ಇಲ್ಲಿನ ಹಾಲಿಯಿರುವ ಅ॥ ಮಾ॥ ಗಿರಿಯಾಚಾರ್ಯರವರು ಹೆ॥ ಮಾ॥ ಚಂದಿಗರಯ್ಯನವರು ಇವರುಗಳ ಉತ್ಸಾಹಾಭಿವೃದ್ಧಿಯೇ ಕಾರಣವಾಗಿರುತ್ತದೆ. ಅಲ್ಲದೆ ಈ ಗ್ರಾಮವನ್ನು ಹಾಲಿಯಿರುವ ಡಿ॥ ಡಿ॥ ಇನ್ಸ್ ಸಾಹೇಬರವರಾದ ಮಿ॥ ಗೋಪಾಲ್‌ರಾಯರವರು ಮತ್ತು ಡಿ॥ ಅಚ್ ಡಿ॥ ಇನ್ಸ್ ಸಾಹೇಬರವರಾದ ಮಿ॥ ತಿರುನಾರಣಯ್ಯಂಗಾರ್ಯರವರು ಈ ಸ್ಕೂಲನ್ನು ಇನ್ನೂ ಪುರೋಭಿವೃದ್ಧಿಗೆ ತರಲು ಮಾಸ್ಟರುಗಳಿಗೆ ತುಂಬಾ ಶ್ರದ್ಧೆಯಿರುವಂತೆ ಮಾಡಿಸಿಕೊಟ್ಟಾರೆಂದು ಬೇಡುವ

ವಿದ್ಯಾಭಿಮಾನಿ

ಬರ್ಮಾದೇಶದ ತೆಂಗಿನ ವ್ಯವಸಾಯ

ಹಿಂದಿನ ಶೇಷ

ಸಸಿಗಳನ್ನು ನೆಟ್ಟತರುವಾಯ ಮಾಡಬೇಕಾದ ಕಾರ್ಯಗಳು - ಸಸಿಗಳನ್ನು ಚೆನ್ನಾಗಿ ಬೇರುಗಳು ಬಿಟ್ಟುಕೊಳ್ಳುವವರಿಗೆ ಪ್ರತಿ ವರುಷವೂ ಬೇಸಗೆಯಲ್ಲಿ ನೀರನ್ನು ಹಾಕುತ್ತಿರಬೇಕು. ಮೂರು ನಾಲ್ಕು ವರ್ಷಗಳ ಕಾಲ ನೀರು ಹಾಕಿದರೆ ಸಾಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಗಿಡಗಳ ಜೀವಿತಕಾಲದಲ್ಲೆಲ್ಲಾ ಬೇಸಿಗೆಯಲ್ಲಿ ನೀರನ್ನು ಹಾಕುತ್ತಲೇ ಇದ್ದರೆ ಹೀಚುಗಳು ಉದುರುವುದು ಕಡಿಮೆಯೆಂದು ಕೆಲವು ಅನುಭವಶಾಲಿಗಳು ಹೇಳುತ್ತಾರೆ. ಆದ್ದರಿಂದ ಸಾಧ್ಯವಾದರೆ ನೀರನ್ನು ಹಾಕುತ್ತಲೇ ಇರುವುದು ಉತ್ತಮ ಪಕ್ಷವೆಂದು ತೋರುತ್ತದೆ. ಬೇಸಿಗೆಯಲ್ಲಿ ಸಸಿಗಳಿಗೆ ವಾರಕ್ಕೆ ಎರಡಾವರ್ತಿಯೂ ಸ್ವಲ್ಪ ದೊಡ್ಡವುಗಳಿಗೆ ಒಂದಾವರ್ತಿಯೂ ನೀರನ್ನು ಹಾಕಿದರೆ ಸಾಕಾಗಿರುವುದು. ಆದರೆ ದೊಡ್ಡವಾಗಿ ಫಲಬಿಡುವ ಗಿಡಗಳಿಗೆ ತಿಂಗಳಿಗೊಂದಾವರ್ತಿ ಹೇರಳವಾಗಿ ನೀರನ್ನು ಹಾಕಬೇಕು.

ದುರ್ಬಲವಾಗಿರುವಂತೆ ಕಂಡುಬರುವ ಗಿಡಗಳ ಬೇರು ಸುತ್ತಲೂ ಅಗತೆಮಾಡಿ ಇತರ ಕಸ ಕಡ್ಡಿಗಳಿಲ್ಲದ ಹದವಾದ ಹಳೆಗದ ಸಗಣಿ ಗೊಬ್ಬರ ಅಥವಾ ಮೂಳೆ ಪುಡಿಯನ್ನು ಹಾಕಬೇಕು. ಬೇರುಗಳ ಮೇಲ್ಭಾಗದಲ್ಲಿ ಸ್ವಲ್ಪ ಬೂದಿ ಮತ್ತು ಉಪ್ಪನ್ನು ಹಾಕಬೇಕು. ಆರೋಗ್ಯವಾಗಿ ಬೆಳೆಯುವ ಮರಗಳಿಗೆ ಮೇಲೆ ಹೇಳಿದ ವ್ಯವಸಾಯವೇನೂ ಅವಶ್ಯಕವಾಗಿರುವುದಿಲ್ಲ.

ಸಸಿಗಳನ್ನು ನೆಟ್ಟನಂತರ ಒಂದು ವರ್ಷಕಾಲ ಎಲೆಗಳ ಪಕ್ಕಗಳಿಂದ ಅವುಗಳಿಗೆ ಮರೆಮಾಡುವುದು ಒಳ್ಳೇದು. ಆದರೆ ಸಸಿಗಳ ಮೇಲ್ಭಾಗಕ್ಕೆ ಮಾತ್ರ ಮರೆಮಾಡಬಾರದು.

ಮರಗಳು ಫಲಕ್ಕೆ ಬರುವವರೆಗೂ ಅವುಗಳ ಮಧ್ಯೆ ಇತರ ಬೆಳೆಗಳನ್ನಿಡಬಹುದು. ಆದರೆ ಬುಡಗಳ ಸುತ್ತ ಪೈರು ಬರಕೂಡದು. ಹಸುರು ಗೊಬ್ಬರದ ಪೈರನ್ನಿಟ್ಟು ಇವುಗಳನ್ನು ಮಳೆಗಾಲದಲ್ಲಿ ಬಿಡಿಸಿನಲ್ಲಿ ಉತ್ತುಬಿಡಬೇಕು. ಸಸಿಗಳು ಬೆಳೆದು ಗರಿಗಳು ದನಗಳಿಗೆ ನಿಲುಕುವಷ್ಟು ಎತ್ತರಕ್ಕೆ ಬಂದಾಗ್ಯೂ ರಾತ್ರಿಕಾಲದಲ್ಲಿ ಗಿಡಗಳ ಹಸು, ಎಮ್ಮೆ, ಕುದುರೆ, ಹಂದಿ ಇವುಗಳನ್ನು ಕಟ್ಟಬೇಕು. ಕಟ್ಟುವುದಕ್ಕೆ ಮೊದಲು ಕೆಳಕ್ಕೆ ಹುಲ್ಲು, ತರಗು ಕಸ ಕಡ್ಡಿ ಇವುಗಳನ್ನೆಲ್ಲಾ ಹಾಸಿರಬೇಕು. ಹಾಗೆ ಮಾಡಿದಲ್ಲಿ ದನಗಳ ಸಗಣಿ ಗಂಜಲ ಇವುಗಳೆಲ್ಲವೂ ಚೆಲ್ಲಿ ತೆಂಗಿನ ಮರಗಳಿಗೆ ಬಹಳ ಉತ್ತಮವಾದ ಗೊಬ್ಬರವಾಗಿ ಪರಿಣಮಿಸುವುದು. ಅಲ್ಲದೆ ತೆಂಗಿನ ತೋಟದಲ್ಲಿ ರಾತ್ರಿಕಾಲದಲ್ಲಿ ಕುರಿಗಳ ಮಂದೆಯನ್ನು ಕಟ್ಟಿರಬಹುದು. ಇವುಗಳನ್ನು ಪ್ರತಿ ರಾತ್ರಿಯೂ ಒಂದೇ ಸ್ಥಳದಲ್ಲಿ ನಿಲ್ಲಿಸದೆ ಒಂದೊಂದು ರಾತ್ರಿ ಒಂದೊಂದು ಭಾಗದಲ್ಲಿ ತಡೆದರೆ ಇಡೀ ತೋಟಕ್ಕೆ ಇವುಗಳ ಹಿಕ್ಕೆ ಮತ್ತು ಗಂಜಲವು ಬೀಳುವುದು. ಹೀಗೆ ಕುರಿಗಳನ್ನು ತಡೆಯುವುದಕ್ಕೆ ಮೊದಲು ಮತ್ತು ತರುವಾಯ ಸ್ವಲ್ಪ ಮಟ್ಟಿಗೆ ಕುಂಟೆ ಹೊಡೆದರೆ ಬಹಳ ಪ್ರಯೋಜನವುಂಟು. ಅಲ್ಲದೆ ಮರಗಳ ಬುಡದ ಸುತ್ತಲೂ ಸುಮಾರು ಎರಡು ಅಡಿ ... ಬೇರುಗಳ ಸುತ್ತಲ ಮಣ್ಣನ್ನು ಅಗೆದು ಮಳೆಗಾಲದ ಪೂರ್ತಿ ಬೇರುಗಳೆಲ್ಲವೂ ಬಿಸಿಲು ಕಾಣುವಂತಿಟ್ಟಿದ್ದು ಮಳೆಗಾಲವು ತೀರಿದೊಡನೆಯೆ ಮೂರು ನಾಲ್ಕು ಅಂಗುಲ ಪ್ರಮಾಣ ಬೂದಿ, ಮೂಳೆ ಬತ್ತದ ಹೊಟ್ಟು, ಗೋಡುಮಣ್ಣು, ದನದ ಸಗಣಿ ಮೊದಲಾದ ಗೊಬ್ಬರಗಳನ್ನು ಬೇರುಗಳ ಮೇಲೆ ಹಾಕಿ ಗೊಬ್ಬರದ ಮೇಲೆ ಮಣ್ಣನ್ನು ಹಾಕಿ ಸ್ವಲ್ಪಮಟ್ಟಿಗೆ ನೀರುಹಾಕಿದರೆ ಬಹಳ ಪ್ರಯೋಜನವುಂಟು. ಹುರಿ ಹೊಸೆಯುವ ಕೆಲಸಕ್ಕೆ ಬಾರದ ತೆಂಗಿನ ಮೊಟ್ಟೆ ಬಾನ್ನು ಹೆಣೆಯುವ ಕೆಲಸಕ್ಕಾಗದ ಗರಿ, ಒಲೆಗೆ ಹಾಕಲಿಕ್ಕೆ ಬಾರದ ಮೊಟ್ಟೆ, ಗೊಣಮಟ್ಟೆ ಮತ್ತು ಸಿಪರೆ ಇವೆಲ್ಲವನ್ನೂ ಮರಗಳ ಮಧ್ಯೆ ರಾಶಿಮಾಡಿ ಸುಡುವುದರಿಂದ ... ಉರಿಸಿ ಬೂದಿಯನ್ನೂ ದನದ ಸಗಣಿ ... ಗಳ ಸುತ್ತಲೂ

ಆಗರ [illegible] ಸ್ಯ ವಯಸ್ಸಿನ ಗಿಡಗಳಲ್ಲಿ ಬಹಳ ಒಂಗ್ರತೆಯಾಗಿ ಹೂವು ಬಿಡುವುದೆಂದೂ, ಫಲವಿರುತ್ತಿರುವ ಮರಗಳಲ್ಲಿ ಹೇರಳವಾಗಿ ಫಲಬಿಡುವುದೆಂದೂ ಹೇಳುತ್ತಾರೆ. ತೆಂಗಿನ ಮರಗಳಿಗೆ ಸುಣ್ಣವು ಅತ್ಯವಶ್ಯಕವಾಗಿದೆ. ಒಂದು ವರುಷ ಹಸುರು ಸೊಪ್ಪಿನ ಗೊಬ್ಬರವನ್ನು ಹಾಕುವುದು ಮುಂದಿನ ವರುಷ ಸುಣ್ಣವನ್ನು ಹಾಕುವುದು ಈ ಕ್ರಮವನ್ನು ವ್ಯವಸಾಯ ಮಾಡುವುದು ಉತ್ತಮವಾಗಿದೆ. ಎಕರೆಗೆ ಹತ್ತು ಹನ್ನೆರಡು ಕಂಡಿ ಸುಣ್ಣವು ಬೇಕಾಗುವುದು.

ಉತ್ಪತ್ತಿ:—ಮೇಲೆ ಹೇಳಿದ ಕ್ರಮದಂತೆ ವ್ಯವಸಾಯ ಮಾಡಿದರೆ ಸಸಿಗಳನ್ನು ನೆಟ್ಟ ಆರು ಅಥವಾ ಏಳನೆ ವರುಷದಲ್ಲಿ ಫಲ ಬಿಡಲು ಆರಂಭವಾಗುವುದು. ಪೂರ್ಣ ಫಲ ಬಿಡುವಾಗ್ಗೆ ಒಂದೊಂದು ಗಿಡಕ್ಕೆ ೫೦ರಿಂದ ೧೦೦ರ ವರೆಗೂ ಕಾಯಿ ಬಿಡುವುದು. ಮಧ್ಯವಯಸ್ಸಿನ ಮರಗಳಲ್ಲಿ ೧೫೦-೨೦೦ ಕಾಯಿಗಳು ಬಿಡುವುವೆಂದು ಹೇಳುತ್ತಾರೆ. ಎಳನೀರಿಗೆ ಬಹಳವಾಗಿ ಗಿರಾಕಿ ಇದ್ದ ಹೊರತು ಕಾಯಿಗಳು ಚೆನ್ನಾಗಿ ಬಲಿಯುವವರಿವಿಗೂ ಕೀಳಬಾರದು. ಕೆಳಭಾಗದ ಗೊನೆಯಲ್ಲಿ ಒಂದೆರಡು ಕಾಯಿಗಳು ತಳಲಾಗಿರುವುವೆಂದು ಕಂಡುಬಂದಾಗ್ಗೆ ಅದರ ಮತ್ತು ಅದರ ಮೇಲ್ಭಾಗದ ಗೊನೆಗಳ ಕಾಯಿಗಳನ್ನು ಕೀಳಬೇಕು. ಕಾಯಿಗಳನ್ನು ಕೀಳುವಾಗ್ಗೆ ಗಿಡಗಳ ಮೊಟ್ಟೆಗಳ ಮಧ್ಯೆ ಇರಬಹುದಾದ ಕಚರಾಗಳು, ಒಣಗಿದ ಗರಿಗಳು ಇವುಗಳೆಲ್ಲವನ್ನೂ ಕಿತ್ತು ಹಾಕಿ ಇರುವೆ ಅಳಲು ಮತ್ತು ಇಲಿ ಇವುಗಳ ಗೂಡುಗಳಿದ್ದರೆ ನೋಡಿ ತೆಗೆದುಹಾಕಬೇಕು. ೧ ನೂರು ೫೦ ಮೂ ಕೊಪ್ಪರಿಗೆ ೮೦೦ ರೂಪಾಯಿನವರಿವಿಗೂ ಅಷ್ಟೇ ಕೊಪ್ಪರಿ ಎಣ್ಣೆಗೆ ೩೫೦ ರೂಪಾಯಿನವರಿವಿಗೂ ಬೆಲೆ ಸಿಕ್ಕುವದು. ತೆಂಗಿನ ಕಾಯಿನ ಮೇಲಿನ ಮೊಟ್ಟೆಯನ್ನು ನೀರಿನಲ್ಲಿ ನೆನಸಿ ಕದವೆಯನ್ನು ತೆಗೆದು ಅದರಿಂದ ಹುರಿ, ಹಗ್ಗ ಮೊದಲಾದವುಗಳನ್ನು ತಯಾರಿಸುವುದು. ಕದವೆಯು ನೂರಕ್ಕೆ ೧-೦ ಮೊದಲ್ಗೊಂಡು ೨-೮-೦ ರೂಪಾಯಿಗಳವರಿವಿಗೂ ಬೆಲೆಯಾಗುವುದು.

ಕೆ. ಗಿ.

ದಕ್ಷಿಣಾಫ್ರಿಕಾ ವಿಚಾರಕ ಸಂಘದವರು ಮಾಡಿರುವ ತೀರ್ಮಾನದ ಮುಖ್ಯಭಾಗಗಳು

ದಕ್ಷಿಣಾಫ್ರಿಕಾದಲ್ಲಿ ೩ ವರ್ಷಗಳ ಕಾಲ ಅಥವಾ ಅದಕ್ಕಿಂತ ಹೆಚ್ಚಿನ ಕಾಲ ವಾಸಮಾಡಿಕೊಂಡಿದ್ದ ದೇಶೀಯರು ಎಂದರೆ ಈಗಲಾಗಲಿ ಅಥವಾ ಪೂರ್ವದಲ್ಲಾಗಲಿ ದಕ್ಷಿಣಾಫ್ರಿಕಾದಲ್ಲಿ ಒಬ್ಬಳಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವವರು ಆ ಪತ್ನಿಯರ ಹೆಸರುಗಳನ್ನೆಲ್ಲಾ ರಿಜಿಸ್ಟರ್ ಮಾಡಿಸುವುದಲ್ಲದೆ, ಅವರು ಭರತಖಂಡದಿಂದ ತಮ್ಮ ಮಕ್ಕಳುಮರಿಗಳನ್ನು ಕರೆದುಕೊಂಡು ದಕ್ಷಿಣಾಫ್ರಿಕಾಕ್ಕೆ ಹೋಗಿರುವುದಕ್ಕೆ ಅವಕಾಶವಾಗಬೇಕು.

ಆವರವರ ಮತಧರ್ಮಾನುಸಾರವಾಗಿ ಮದುವೆಯಾಗುವುದಕ್ಕೆ ಕೇಪ್ ಕಾಲನಿಯ ೧೯೧೦ ನೇ ವರ್ಷದ ೧೬ ನೇ ನಂಬರ್ ಆಕ್ಟನ್ನನುಸರಿಸಿ ಪುರೋಹಿತರನ್ನು ನಿಯಮಿಸಿಕೊಳ್ಳುವುದಕ್ಕಾಗಿ ಒಂದು ಶಾಸನವು ಏರ್ಪಡಬೇಕು.

ಒಬ್ಬ ಮನುಷ್ಯನು ಅನೇಕ ಮಂದಿ ಪತ್ನಿಯರನ್ನು ಮಾಡಿಕೊಳ್ಳುವ ಆಚಾರವನ್ನು ಹೊಂದಿದ್ದರೂ ಸದ್ಯಕ್ಕೆ ಒಬ್ಬಳೇ ಪತ್ನಿಯೊಡನೆ ವಾಸಮಾಡುತ್ತಿರುವಾಗ ಅಂಥ ಮದುವೆಯು ಆವರವರ ಮತಪದ್ಧತಿಪ್ರಕಾರ ಜರುಗಿದ್ದರೂ ಅದು ಸಲ್ಲತಕ್ಕುದೇ ಎಂದು ರಿಜಿಸ್ಟರ್ ಮಾಡಲು ಶಾಸನವಾಗಬೇಕು.

ನೆಟಾಲು ದೇಶದಲ್ಲಿ ೧೯೯೫ನೇ ವರುಷದ ೧೭ ನೇ ನಂಬರ್ ಆಕ್ಟಿನ ೩ನೇ ಪ್ರಕರಣದ ಪ್ರಕಾರ ಕೆಲವರು ದೇಶೀಯರು ಅಲ್ಲಿ ವಾಸಮಾಡಬೇಕಾಗಿದ್ದರೆ ವರ್ಷ ೧ಕ್ಕೆ ೬೪ ರೂ ತಲೆಗಂದಾಯವನ್ನು ತೆತ್ತು ಅಪ್ಪಣೆ ಚೀಟಿಯನ್ನು ಪಡೆಯಬೇಕೆಂದಿರುವ ನಿರ್ಬಂಧವನ್ನು ತಪ್ಪಿಸಿಬಿಡಬೇಕು.

೧೯೧೩ನೇ ವರ್ಷದ ಇಮಿಗ್ರೇಷನ್ ಶಾಸನವನ್ನನುಸರಿಸಿ ಕೈಗುರುತಿನ ಅಪ್ಪಣೆ ಚೀಟಿಯನ್ನು ಕೊಡಬೇಕೆಂದಿರುವ ನಿರ್ಬಂಧಿತ ವಿಷಯದಲ್ಲಿ ಸ್ವಲ್ಪ ಸುಧಾರಣೆಮಾಡಬೇಕು. ಈ ಸರ್ಟಿಫಿಕೇಟುಗಳು ೩ ವರ್ಷಗಳವರೆಗೆ ಮಾತ್ರ ಸ್ವತ ಹಾರದಲ್ಲಿರಬೇಕು.

ಕೇಪ್ ಟೌನಿನಲ್ಲಿ ಇಮಿಗ್ರೇಷನ್ ಶಾಖಾ ಕಾರ್ಯಾಲಯದಲ್ಲಿ ಒಬ್ಬ ಭಾಷಾಂತರಕಾರನು ಏರ್ಪಡಿಸಲ್ಪಡಬೇಕು.

ಕೆಲ ಸಮಯದಲ್ಲಿ ಕೇಪ್ ಟೌನ್ ಅಧಿಕಾರಿಗಳು ದೇಶೀಯರಿಂದ ಹುಟ್ಟಿದ ಗುರ್ತನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಹತ್ತು ಬೆರಳುಗಳನ್ನೂ ಒತ್ತಿಸಿಕೊಳ್ಳುತ್ತಿದ್ದ ಪದ್ಧತಿಯನ್ನು ತಪ್ಪಿಸಿಬಿಡಬೇಕು.

ಒಂದು ರಾಷ್ಟ್ರಭಾಗದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗುವಾಗ ತಾತ್ಕಾಲಿಕವಾದ ಅಪ್ಪಣೆ ಚೀಟಿಯನ್ನು ಕೊಡುವುದಕ್ಕೆ ಇಮಿಗ್ರೇಷನ್ ಅಧಿಕಾರಿಗಳು ಇಲ್ಲದಿರುವ ಸ್ಥಳದಲ್ಲಿ ದಂಡಾಧಿಕಾರಿಗಳಿಗೆ ಅಧಿಕಾರವಿರುವಂತೆ ಮಾಡಬೇಕು.

[illegible] ಅಪ್ಪಣೆ ಚೀಟಿಕೊಡುವುದಕ್ಕೂ, ತಾತ್ಕಾಲಿಕವಾದ ರಸೀದಿಯನ್ನು ಕೊಡುವುದಕ್ಕೂ ಸಹ ೧೩ ರೂ ನಂತೆ ಇರುವ ಫೀಯನ್ನು ಕಡಿಮೆಮಾಡಬೇಕು. ದೀರ್ಘಕಾಲಕ್ಕೆ ಅಪ್ಪಣೆ ಚೀಟಿಯು ಬೇಕಾಗಿದ್ದರೆ ಆ ಫೀಯು ಹೆಚ್ಚಾಗಿರಬಹುದು.

ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗುವುದಕ್ಕಾಗಿ ಕೇಳಿಕೊಂಡಾಗ, ಅವನು ಹೋಗತಕ್ಕ ಊರಿನಲ್ಲಿರುವ ಇಮಿಗ್ರೇಷನ್ ಅಧಿಕಾರಿಗಳಿಗೆ ಟೆಲಿಗ್ರಾಮನ್ನು ಕಳುಹಿಸಬೇಕಾಗಿರುವ ಪದ್ಧತಿಯನ್ನು ತಪ್ಪಿಸಿಬಿಡಬೇಕು.

ನೇಟಾಲಿನಲ್ಲಿ ವಾಸಮಾಡುವುದಕ್ಕೆ ಇಮಿಗ್ರೇಷನ್ ಅಧಿಕಾರಿಗಳು ಅಪ್ಪಣೆ ಚೀಟಿಯನ್ನು ಕೊಟ್ಟ ಬಳಿಕಲೂ ಆ ಚೀಟಿಯು ಯಜಮಾನನ ಹೆಬ್ಬೆಟ್ಟಿನ ಗುರ್ತು ಹಾಕಲ್ಪಟ್ಟಿರುವಾಗಲೂ ಯೂನಿಯನ್ ಪ್ರಭುತ್ವದ ಪ್ರದೇಶದಲ್ಲಿ ಪ್ರವೇಶಿಸುವುದಕ್ಕೆ ದೇಶೀಯರಿಗೆ ಸಂಪೂರ್ಣಾಧಿಕಾರವಿರುವಂತೆ ಭಾವಿಸಲ್ಪಡಬೇಕು.

ಭರತಖಂಡದಿಂದ ದಕ್ಷಿಣಾಫ್ರಿಕಾದಲ್ಲಿರುವ ತಮ್ಮ ಪತಿಗಳ ಬಳಿಗೆ ಮಕ್ಕಳುಗಳ ಸಮೇತ ಹೋಗುವ ಸ್ತ್ರೀಯರ ವಿಷಯವನ್ನು ಕುರಿತು ವಿಚಾರಮಾಡುವುದಕ್ಕಾಗಿ ಭರತಖಂಡದ ಸರ್ಕಾರದವರೊಡನೆ ಒಂದು ಏರ್ಪಾಡುಮಾಡಬೇಕು. ಈ ಸ್ತ್ರೀಯರ ವಿಷಯಕವಾಗಿ ವಿಚಾರಮಾಡಲು ಏರ್ಪಡುವ ಅಧಿಕಾರಿಗೆ ಈ ಸ್ತ್ರೀಯರು ನಿಜವಾಗಿ ಇಂಥವನ ಹೆಂಡತಿಯೇ ಎಂದು ತೋರಿಬಂದರೆ ಒಂದು ಸರ್ಟಿಫಿಕೇಟನ್ನು ಕೊಡುವಂತಾಗಬೇಕು. ಇದನ್ನು ಇಮಿಗ್ರೇಷನ್ ಆಫೀಸರು ಪ್ರಮಾಣವೆಂದು ಭಾವಿಸಬೇಕು. ಇತ್ಯಾದಿ.

ಈ ಮೇಲೆ ಕಂಡ ತೀರ್ಪುಗಳಲ್ಲಿ ತಲೆಗಂದಾಯವನ್ನು ತಪ್ಪಿಸಿದುದು, [illegible] ಸಂಬಂಧವಾದ ವಿಷಯಗಳಲ್ಲಿ ಭಾರತೀಯರಿಗೆ ಹೆಚ್ಚಾದ ಅನುಕೂಲವು ಉಂಟಾಗುವಂತಿರುವುದು. ಉಳಿದ ವಿಷಯಗಳು ಸಾಮಾನ್ಯವಾದುವುಗಳು. ಇಷ್ಟು ತೀರ್ಮಾನವಾಗಬೇಕಾದರೂ, ದಕ್ಷಿಣಾಫ್ರಿಕಾದಲ್ಲಿರುವ ಭಾರತೀಯರು ತೋರಿಸಿದ ಉಗ್ರವಾದ ಸಾತ್ವಿಕ ನಿರೋಧಮೂಲಕವಾದ ತಪಸ್ಸೂ, ಅದಕ್ಕೆ ಭರತಖಂಡದ ಸಹೋದರರೆಲ್ಲಾ ತೋರಿಸಿದ ಸಹಾನುಭೂತಿಯೂ ಮುಖ್ಯವಾಗಿ ನಮ್ಮ ವೈಸ್‌ರಾಯರು ತೋರಿಸಿದ ಅನುಕಂಪ ಸಹಾಯಗಳೂ ಮುಖ್ಯ ಕಾರಣಗಳು. ಹಿಂದಿದ್ದ ಕಾರ್ಯವು ಇಷ್ಟು ಮಟ್ಟಿಗಾದರೂ ಅನುಕೂಲವಾದುದು ಸ್ವಲ್ಪ ಸಮಾಧಾನಕರವೇ ಹೇಳಬಹುದು. ಈ ತೀರ್ಮಾನವನ್ನು ಅಲ್ಲಿನ ಪ್ರಭುತ್ವದವರು ವಿಸ್ತುಮಟ್ಟಿಗೆ ಅನುಮೋದಿಸಿ ವ್ಯವಹಾರಕ್ಕೆ ತರುವರೆಂಬುದು ನಿರೀಕ್ಷಿತವಾಗಿದೆ.

ಪ್ರಚಂಡವಾದ ಹಡಗುಗಳು

ಪ್ರಪಂಚದಲ್ಲಿ ಬರಬರುತ್ತ ಆಕಾಶಯಾನದ ನವನವ ಸಾಧಕಗಳು ಹೆಚ್ಚುತ್ತಿರುವುದರಿಂದಲೂ ಕೈಗೂಡಿಬಂದಿರುವ ಬಲಿಷ್ಠವಾದ ಸಾಧನಗಳಲ್ಲಿ ಒಬ್ಬರನ್ನೊಬ್ಬರು ಮೀರಿಸುವ ಕುತೂಹಲವು ರಾಷ್ಟ್ರರಾಷ್ಟ್ರಗಳಲ್ಲಿ ಹೆಚ್ಚಾಗಿರುವುದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜಲಯಾನ ಸಂಪತ್ತಿನಲ್ಲಿ ಇಂಗ್ಲರೂ ಜರ್ಮನರೂ ಅತ್ಯಂತ ಪ್ರಬಲರು. ಇವರೀರ್ವರಲ್ಲಿ [illegible]ಂತವ್ಯೊಳಗೆ ೧೦೦೦ ಅಡಿ ಉದ್ದವಾದ ಹಡಗನ್ನು ಮೊಟ್ಟಮೊದಲು ನಿರ್ಮಿಸಿ ಸಮುದ್ರಯಾನವನ್ನು ಮಾಡಬೇಕೆಂಬ ವಿಷಯದಲ್ಲಿ ವಿಶೇಷವಾದ ಸ್ಪರ್ಧೆ ನಡೆಯುತ್ತಿದೆ. ಕೆಲವು ಕಾಲದ ಹಿಂದೆ ಇವರೀರ್ವರಲ್ಲಿ ಯಾರಲ್ಲೂ ೯೧ ಅಡಿಯುದ್ದಕ್ಕೆ ಮೀರಿದ ಅಳತೆಯ ಹಡಗು ಇರಲಿಲ್ಲ. ಈಚೆಗೆ ೯೧೯ ಅಡಿ ಉದ್ದವೂ ೯೮ ಅಡಿಯಗಲವೂ ೫೦ ಸಾವಿರ ಟನ್ ತೂಕವುಳ್ಳ "ಇಂಪರೇಟರ್" ಎಂಬ ದೊಡ್ಡ ಹಡಗನ್ನು ಜರ್ಮನಿಯ ನೇಕ ಸಂಘದವರು ನಿರ್ಮಿಸಿದರು. ಪ್ರಪಂಚದಲ್ಲೆಲ್ಲಾ ಇದಕ್ಕೆ ಮಿಂಚಿದ ಹಡಗು ಮತ್ತೊಂದಿಲ್ಲವೆಂಬ ಖ್ಯಾತಿಯು ಇದಕ್ಕುಂಟಾಯಿತು. ಇದರ ಮೇಲೆ ಪುನಃ ಜರ್ಮನಿಯವರೇ ೯೫೦ ಅಡಿಗಳ ಉದ್ದವೂ ೧೦೦ ಅಡಿಗಳ ಅಗಲವೂ ಉಳ್ಳ "ವಾಟರ್‌ಲ್ಯಾಂಡ್" ಎಂಬ ಹಡಗನ್ನು ನಿರ್ಮಿಸುತ್ತಿರುವರು. ಇದು ಬರುವ ಜೂನ್ ತಿಂಗಳಲ್ಲಿ ಸಿದ್ಧವಾಗುವುದು. ಈಗ ಇಂಗ್ಲಿಷರ ನೌಕಾಸಂಘದಲ್ಲಿ "ಅಕ್ವಿಟಾನಿಯಾ" ಎಂಬ ಒಂದು ದೊಡ್ಡ ಹಡಗು ಕಟ್ಟಲ್ಪಡುತ್ತಿದೆ. ಇದು ೯೦೧ ಅಡಿಗಳ ಉದ್ದವಾಗಿದೆ. ಇಂಗ್ಲಿಷರ ಹಡಗುಗಳಲ್ಲೆಲ್ಲಾ ಇದೇ ದೊಡ್ಡದು. ಎಂದ ಬಳಿಕ ಇದುವರೆಗಿನ ಸ್ಪರ್ಧೆಯಲ್ಲಿ ಜರ್ಮನಿಯವರೇ ನೌಕಾ ನಿರ್ಮಿತಿಯಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ. ಆದರೆ ಕೆಲ ಇಂಗ್ಲಿಷ್ ಸಂಘದವರು ಈಗತಾನೇ ಇನ್ನು ಕೆಲವು ಬಲು ದೊಡ್ಡ ಹಡಗುಗಳನ್ನು ಕಟ್ಟುತ್ತಿದ್ದಾರೆ. ಅವುಗಳ ಫಲಿತಾಂಶವನ್ನು ಮುಂದೆ ಅರಿಯಬೇಕು.

ಮೇಲೆ ಹೇಳಿದ ಜರ್ಮನಿಯವರ "ಇಂಪರೇಟರ್" ಎಂಬ ಹಡಗಿನ ಸಾಮಗ್ರಿಯು [illegible] ರುವುದೆಂದರೆ ಅದು ಅಟ್ಲಾಂಟಿಕ್ [illegible] ಸಂಚರಿಸುವಾಗ [illegible] ರಲ್ಲಿ ೪೫೦ ಸಾವಿರ ಮಂದಿ ಪ್ರಯಾಣಿಕರನ್ನು ಸಾಗಿಸಿಕೊಂಡು ಹೋಗಬಹುದು. ಅವರಲ್ಲಿ ೭೬೩೦ ಜನರು ಮೊದಲನೆ ತರಗತಿಯ ಪ್ರಯಾಣಿಕರು. ಉಳಿದವರು ಮಧ್ಯದ ಜಾಗದಲ್ಲಿ ಕೆಳಗೂ ಪ್ರಯಾಣಮಾಡಿದರು. ಈ ಪ್ರಯಾಣಿಕರೆಲ್ಲರೂ ಒಟ್ಟಿಗೆ ೧ ಕೋಟಿ ರೂಗಳನ್ನು ಚಾರ್ಜಾಗಿ ಕೊಟ್ಟಿರುತ್ತಾರೆ. ಇದರಲ್ಲಿ ಖರ್ಚು ಕಳೆದು [illegible] ದವರಿಗೆ ೩೩ ಲಕ್ಷ ರೂಗಳ ಲಾಭವು ಬಂದಿದೆ. ಈ ಹಡಗನ್ನು ನಿರ್ಮಿಸುವುದಕ್ಕೆ ೧ ಕೋಟಿಯೂ ೫೫ ಲಕ್ಷ ರೂಗಳು ಖರ್ಚಾಯಿತಂತೆ. ಈ ಹಡಗಿನಲ್ಲಿ ಒಂದಾವರ್ತಿಗೆ ೭೦೦ ಮಂದಿಗಳು ಮೊದಲನೆಯ ತರಗತಿಯಲ್ಲೂ, ೬೦೦ ಮಂದಿಗಳು ೨ನೆ ತರಗತಿಯಲ್ಲೂ, ೯೦೦ ಮಂದಿಗಳು ೩ ನೆ ತರಗತಿಯಲ್ಲೂ, ೧೯೦೦ ಮಂದಿಗಳು ಮಧ್ಯದ ಜಾಗದಲ್ಲೂ, ಹಡಗಿನ ಕೆಲಸಗಾರರಾಗಿ ೧೧೯೦ ಮಂದಿಯೂ ಎಂದರೆ ಒಟ್ಟು ೫೩೦೦ ಮಂದಿಗಳು ಕುಳಿತು ಪ್ರಯಾಣಮಾಡಬಹುದು. ಈ ಹಡಗು ಕಟ್ಟಲ್ಪಡುವುದಕ್ಕೆ ಮುಂಚೆ ಪ್ರತಿಯೊಂದು ಹಡಗೂ ಒಂದಾವರ್ತಿಗೆ ೨೩೦೦ ಮಂದಿಗಳಿಗಿಂತ ಹೆಚ್ಚಾಗಿ ಕುಳ್ಳಿರಿಸಿಕೊಂಡು ಹೋದುದಿಲ್ಲ. ಪ್ರತಿ ಗಂಟೆಗೆ ೨೩ ಮೈಲುಗಳಂತೆ ಸಾಗಿಸುವ ೭೨ ಸಾವಿರ ಕುದುರೆಗಳ ಬಲವುಳ್ಳ ಎಂಜಿನ್ನುಗಳು ಈ ಹಡಗಿನಲ್ಲಿರುವುವು. ಇವುಗಳಲ್ಲಿ ದಿನ ೧ಕ್ಕೆ ೧ ಸಾವಿರ ಟನ್ನು ಕಲ್ಲಿದ್ದಲು ವೆಚ್ಚವಾಗುವುದು. ಈ ಹಡಗಿನಲ್ಲಿ ಸ್ನಾನಮಾಡುವುದಕ್ಕಾಗಿ ೬೫ ಅಡಿಗಳ ಉದ್ದವೂ ೪೪ ಅಡಿಗಳ ಅಗಲವೂ ೮ ಅಡಿಗಳ ಆಳವೂ ಉಳ್ಳ ನೀರಿನ ಕೊಳವು ಕೂಡ ನಿರ್ಮಿಸಲ್ಪಟ್ಟಿರುವುದು. ಅದರಲ್ಲಿ ಪ್ರಯಾಣಿಕರು ಸ್ವೇಚ್ಛೆಯಿಂದ ಈಜಾಡಬಹುದು. ಇನ್ನೂ ಅದೇ ಹಡಗಿನಲ್ಲಿಯೇ ನಾನಾವಿಧವಾದ ಆಟಗಳನ್ನಾಡುವುದಕ್ಕೆ ಸ್ಥಳಗಳೂ, ಬಗೆಬಗೆಯ ಪುಷ್ಪಗಳ ಉದ್ಯಾನಗಳೂ, [illegible] ಸಕಲ ಪದಾರ್ಥಗಳನ್ನೂ ಮಾರಾಟಮಾಡುವ ಅಂಗಡಿಗಳೂ ಇರುವುವು. ಈ ವಿಷಯ [illegible] ಒಂದು ಅದ್ಭುತವಾದ ನಗರ [illegible]. ಇದರಲ್ಲಿ ಇಂಥ ಉತ್ಕೃಷ್ಟ [illegible] ಯಲ್ಲವೂ [illegible] ಆಗಿರುತ್ತದೆ.

[illegible]

[illegible] ಕಲ್ಕತ್ತೆಯಲ್ಲಿ ಭರತಖಂಡದ ಮೊಗಲರ [illegible] ಹಾಕಿದ ಪಿತ್ರಾರ್ಜಿತ ಸಂಪತ್ತು [illegible] ಇವರು ತಮ್ಮ [illegible] ಅಲ್ಲ, ಪಾಶ್ಚಾತ್ಯರೆಲ್ಲರೂ [illegible] ಕೊಂಡಿದ್ದಾರೆ. ಇವರು [illegible] ದ ನಿರ್ಮಿಸಿರುವ ವಿಗ್ರಹವು ಪ್ರಸಿದ್ಧವಾಗಿರುವುದು. ಇವರು ಒಬ್ಬ ದಾನಶೀಲಳು ಮಹಿಳೆಯು ದೇವಾಲಯಕ್ಕೆ ಹೋಗುತ್ತಿರುವಂತೆ ಕಲ್ಲಿನ ಮೇಲೆ ಕೆತ್ತಲ್ಪಟ್ಟ ವಿಗ್ರಹವಾಗಿದೆ. [illegible] ಡೊರಲಾಯ ಆಂಗ್ಲ ಪ್ರಭುಗಳು [illegible] ಇದರಿಂದ ನಿರ್ಮಿತೆ [illegible] ಅವರು [illegible] ಅವರು ನಿಜವಾಯಿತು. ಈ ಮಹಾಕೃತಿಯನ್ನು [illegible], [illegible], [illegible] ಇವರ ಕೆಲವು [illegible] ಕೆಲವು ವಿದ್ಯಾರ್ಥಿಗಳನ್ನು [illegible] ಪಡೆದಿರುವರು. ಚಿತ್ರಲೇಖನದಲ್ಲಿ ರಾಜಾ ರವಿವರ್ಮರವರೂ ಕವಿತ್ವದಲ್ಲಿ ರವೀಂದ್ರನಾಥ ಟಾಗೂರ್‌ರವರೂ ಪ್ರಸಿದ್ಧರಾಗಿ ಭರತಖಂಡದ ರವಿಗಳಾಗಿಯೇ ಪರಿಣಮಿಸಿದರು. ಈ ಮಹಾತ್ಮರುಗಳು ಶಿಲ್ಪಶಾಸ್ತ್ರದಲ್ಲಿ ಅವರಂತೆಯೇ ಖ್ಯಾತಿಪಡೆದು ದೇಶಕ್ಕೆ ಗೌರವವನ್ನು ತರುತ್ತಿದ್ದಾರೆ. ಇಂಥ ರತ್ನಗಳೇ ಭರತಖಂಡದ ಪ್ರಾಚೀನ ಗೌರವವನ್ನು ಈಗಲೂ ಉಳಿಸತಕ್ಕ ಭಾಗ್ಯಗಳಲ್ಲವೆ?

ಸಿಕಿಂ ಸಂಸ್ಥಾನದಲ್ಲಿ ಆಂಗ್ಲ ಪತ್ರಿಕೆ ಸಂಘ

ಹಿಮವತ್ಪರ್ವತಕ್ಕೆ ಸೇರಿದಂತೆ ಇರುವ ನೇಪಾಳ ಸಂಸ್ಥಾನದ ಪೂರ್ವದ ಸಂಸ್ಥಾನಗಳ ಮಧ್ಯದಲ್ಲಿ ಸಿಕಿಂ ಎಂಬ ಸಣ್ಣ ಸಂಸ್ಥಾನವು ವರ್ಷ ೧ಕ್ಕೆ ೩೪ ಲಕ್ಷ ರೂ.ಗಳ ವರಮಾನವು ಸ್ವತಂತ್ರವಾಗಿ ಮಹಾರಾಜರವರ ಆಳ್ವಿಕೆ ನಡೆಯುತ್ತಿದೆ. ಇದಕ್ಕೆ ಗಾಂಗಟಾಕ್ ಎಂಬುದು ರಾಜಧಾನಿಯು. ಈ ದೇಶವು ಹಿಮಾಲಯ ಪರ್ವತದಲ್ಲಿ ಇರುವುದರಿಂದ ಇದರಲ್ಲಿ ಅದನ್ನು [illegible] ಬಹಳ ಸೊಗಸಾಗಿರುವುದು. [illegible] ವಿಶೇಷವಾಗಿ [illegible] ಮಹಾರಾಜರು [illegible] ಎಂಬ [illegible] ಆಂಗ್ಲ ಪತ್ರಿಕೆ

ಸಂಪನ್ನ ರವರ ಗಿರಿರಾಜ

—ಹೀಗೆ, ಪಿಗ್ಗಟ್ಟ್ ರ್ರವರು ತಮ್ಮ ಪದವಿಗೆ ಬರುವುದಕ್ಕೆ ಶಕ್ತಿಯನ್ನು ಆಸಂಘಟದವರು ನಿಷ್ಠೆಯಿಂದ ಸ್ಥಾಪಿಸಿರುವ ಯಂತ್ರಗಳಿಗೆ ಉಪಯೋಗಿಸಿಕೊಳ್ಳತಕ್ಕ ಕಾರ್ಖಾನೆಗಳಲ್ಲಿರುವ ಸಾಧನಗಳನ್ನು ಕಡಿದು ಪಟ್ಟಣಗಳನ್ನು ಸುಡುವುದಕ್ಕೆ ಬೇಕಾಗದವನ್ನು ನಿರ್ಮಿಸುವುದಕ್ಕೂ, ಬಿಡಿಸ ಕಾಡನ್ನು ಕಡಿದು ಅದರ ಸಾಮಾನುಗಳನ್ನು ನಿರ್ಮಿಸುವುದಕ್ಕೂ, ಆ ಕೆಲಸಗಳಿಗೆ ಗೆಲ್ಲ ದೇಶದ ಸುಣ್ಣವನ್ನು ಗಣಿಗಳನ್ನಿಟ್ಟು ಸುಟ್ಟು ಕೊಳ್ಳುವುದಕ್ಕೂ, ಬೇಕಾದ ಕಟ್ಟಡ ಮಾರ್ಗಗಳನ್ನು ಹೊಸದಾಗಿ ಹಾಕಿಕೊಳ್ಳುವುದಕ್ಕೂ ಅಪ್ಪಣೆಯನ್ನು ಕೊಟ್ಟಿದ್ದಾರಂತೆ. ಇದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು ಮ ಸ್ವಂದದ ಪತ್ರಿಕೆಯು ಬರೆದು ಪ್ರಕಟಿಸುವ ಮಾಡಿಕೊಳ್ಳುತ್ತಿರುವುದು. ಭರತಖಂಡವು ಕೈಗಾರಿಕಾ ವೃದ್ಧಿಗಾಗಿ ತವಕಪಡುತ್ತಿರುವ ಈ ಕಾಲದಲ್ಲಿ ನಮ್ಮ ಜನರ ಅಂಗವನ್ನೂ ಪತ್ರಿಕೆಗಳ ಮೂಲಕ ವಿದ್ಯಾಭ್ಯಾಸವನ್ನೂ ತೋರುತ್ತಿರುವ ಮಟ್ಟಿಗೆ ಆಶ್ಚರ್ಯಕರವಾಗಿ ತೋರುತ್ತಿರುವುದು ಕಡಿಮೆ. ಸಿಕ್ಕಿಂ ರಾಜರು ಆ ಕಾರ್ಖಾನೆಗಳಿಗೆ ಸ್ವತಃ ಸಾಹಸವನ್ನು ತೋರಿಸಿದ್ದರೆ ದೇಶದ ಪತ್ರಿಯು ಅಭಿವೃದ್ಧಿಗೆ ವಿಶೇಷ ಸಾಧಕವಾಗುತ್ತಿದ್ದಿತು. ಅಥವಾ ಸಭೆಯನ್ನೇ ಏರ್ಪಡಿಸಿ, ದೇಶೀಯರಿಂದ ಹಣಗಳನ್ನು ಸಾಲವಾಗಿ ಭಾಗದ ರೂಪದಿಂದತೆಗೆದು ಕೂಡಿಸಿ, ಕಾರ್ಖಾನೆ ವ್ಯವಹಾರ ಮಾಡಿಸಿದ್ದರೆ ಸ್ವದೇಶಭಾಗ್ಯಾಭಿವೃದ್ಧಿಗೆ ಸಹಾಯಕವಾಗುತ್ತಿದ್ದಿತು. ಅದನ್ನು ಬಿಟ್ಟು ಬೇರೆಯವರ ಸಂಪತ್ತಿಯೇ ಅಲ್ಲದೆ ಭೂಗರ್ಭದ ಸಂಪತ್ತಿಯನ್ನೂ ಕೂಡ ಅನ್ಯದೇಶೀಯರ ಹಸ್ತಗತವನ್ನು ಮಾಡುವ ಕಾರ್ಯದಲ್ಲಿ ಮೊದಲು ಕೊಡುತ್ತ ಬರುವುದರಲ್ಲಿ ಬಣ್ಣವೇನು?

ವೈಸೂರು ಸ್ಟಾರ್

ಸರ್ಗ್ಗಲ ನಿರು ಮೇ ತಾ॥ ೧೧ ನೆಯ ಸೋಮವಾರ

ಐರ್ಲ್ಯಾಂಡಿನ ಸ್ವರಾಜ್ಯ

ಐರ್ಲೆಂಡ್ ಎಂಬ ಭೂಭಾಗವು ಗ್ರೇಟ್‌ಬ್ರಿಟನ್ನಿನ ಪಶ್ಚಿಮದಲ್ಲಿದೆ. ಇದರಲ್ಲಿ ಆ ದೇಶದ ಮೂಲನಿವಾಸಿಗಳು-ಆ ದೇಶದವರೂ ಇಂಗ್ಲೆಂಡಿನವರೂ ಸೇರಿದ ಮಿಶ್ರಜನರು-ಇಂಗ್ಲೆಂಡಿನಿಂದ ಅಲ್ಲಿಗೆ ವಲಸೆಹೋಗಿ ಅಲ್ಲಿನ ಜನರೊಡನೆ ಸಂಬಂಧವನ್ನಿಟ್ಟುಕೊಳ್ಳದೆ ಇರತಕ್ಕವರು- ಎಂದು ಮೂರು ತೆರದ ಪ್ರಜೆಗಳಿದ್ದಾರೆ. ಮೊದಲನೆಯ ೨ ತೆರದವರೂ ಕ್ರೈಸ್ತಮತದೊಳಗಿನ ರೋಮನ್ ಕೆಥೋಲಿಕ್ ಪಂಥದವರು. ೩ ನೆಯ ತೆರದವರು ಪ್ರಾಟೆಸ್ಟೆಂಟ್ ಪಂಥದವರು. ಇವರೇ ಅಲ್‌ಸ್ಟರ್ ಎಂಬ ಜಿಲ್ಲೆಯಲ್ಲಿ ನೆಲಸಿರುವವರು. ಇಂಗ್ಲೆಂಡಿಗೂ, ಐರ್ಲ್ಯಾಂಡಿಗೂ ಸಂಬಂಧವುಂಟಾದಾರಭ್ಯ ಆಂಗ್ಲರು ವಿದೇಶೀಯರಂತೆಯೇ ಐರ್ಲ್ಯಾಂಡಿನಲ್ಲಿ ರಾಜ್ಯಭಾರವಮಾಡುತ್ತ ಬಂದರು. ೧೭ ನೆಯ ಶತಮಾನದ ಆರಂಭದಲ್ಲಿ ಎಂದರೆ ಮೊದಲನೆಯಜೇಮ್ಸ್ ಪ್ರಭುವಿನ ಕಾಲದಲ್ಲಿ ಐರ್ಲ್ಯಾಂಡಿನ ಒಂದು ಭಾಗವಾದ ಅಲ್‌ಸ್ಟರ್ ಎಂಬುದು ಆಂಗ್ಲಜನರಿಗೇ ಅಧೀನವಾಯಿತು. ಆಂಗ್ಲಪ್ರಭುತ್ವವು ಪ್ರಾಟೆಸ್ಟೆಂಟ್ ಪಂಥಕ್ಕೆ ಸೇರಿದುದಾದುದರಿಂದ ಅಲ್ಲಿದ್ದ ಅವರ ದೇವಾಲಯಕ್ಕೇ ಪ್ರಾಶಸ್ತ್ಯವೂ, ಆ ಪಂಥದ ಅಲ್‌ಸ್ಟರ್ ನಿವಾಸಿಗಳಾದ ಆಂಗ್ಲಜನರಿಗೇ ಸರ್ವಾಧಿಕಾರವೂ ದೊರೆತುದರಿಂದ ಅಲ್ಲಿನ ಇನ್ನೆರಡು ತೆರದ ಜನರಲ್ಲಿ ಅಸಮಾಧಾನಗಳು ಹೆಚ್ಚುತ್ತ ಬಂದುವು. ಮತವೈಷಮ್ಯದಿಂದಲೇ ಆಗ ನಡೆದ ಹೋರಾಟ ಕದನಗಳು ಅಪರಿಮಿತವಾಗಿದ್ದುವು. ಅಲ್ಲಿ ೬ ಭಾಗದಷ್ಟು ಪ್ರಜೆಗಳು ಕೆಥೋಲಿಕ್ ಪಂಥದವರಾಗಿಯೂ ೧ ಭಾಗದವರುಮಾತ್ರ ಪ್ರಾಟೆಸ್ಟೆಂಟರಾಗಿಯೂ ಇದ್ದರೂ, ರಾಜ್ಯದಾಡಳಿತದಲ್ಲಿ ಬಹುಭಾಗವು ಪ್ರಾಟೆಸ್ಟೆಂಟ್ ಧಾರ್ಮಿಕ ಕಾರ್ಯಗಳಿಗೆ ರಾಜ್ಯಕರ್ತರಿಂದ ಉಪಯೋಗಿಸಲ್ಪಡುತ್ತಿದ್ದುದೂ, ಮತ್ತು ಆ ದೇಶದಲ್ಲಿ ಮುಖ್ಯೋದ್ಯೋಗವಾಗಿದ್ದ ವ್ಯವಸಾಯದ ವಿಷಯದಲ್ಲಿ ಭೂಮಿಸ್ವಾಮಿಗಳ ಕೈಯಡಿತಕ್ಕೆ ಸಿಕ್ಕಿದ ಬೇಸಾಯಗಾರರು ಅನಿವಾರ್ಯವಾದ ತೊಂದರೆಯನ್ನು ಅನುಭವಿಸುತ್ತಿದ್ದುದೂ, ವಿದ್ಯಾಭ್ಯಾಸ ವಿಷಯದಲ್ಲಿ ಧಾರ್ಮಿಕ ವಿರೋಧ ಸಂಬಂಧದಿಂದ ಅಸಮಾಧಾನಗಳಿದ್ದುದೂ ಸಹ ಆ ದೇಶದಲ್ಲಿನ ಕ್ಷೋಭೆಗೆ ವಿಶೇಷ ಬಂಗ ಕಾರಣವಾಗಿ ಪರಿಣಮಿಸಿದ್ದಿತು. ಅನಂತರ ಗ್ಲಾಡ್‌ಸ್ಟನ್ ಮಹಾಶಯರು ಉದಾರಮತ ರಾಜಕೀಯ ಪಕ್ಷದ ಗ್ಲಾಡ್‌ಸ್ಟನ್ ಪ್ರಭುವು ಪ್ರಧಾನಿಯಾದ ಮಹಾರಾಣಿಯವರ ಕಾಲದಲ್ಲಿ ಮುಖ್ಯಮಂತ್ರಿಯಾಗಿದ್ದು, ಐರ್ಲ್ಯಾಂಡಿನ ಉದ್ಧಾರಕ್ಕಾಗಿ ತಮ್ಮ ಉದಾರಬುದ್ಧಿಯನ್ನಿಟ್ಟು ಪ್ರಯತ್ನಿಸಿಕೊಂಡನು. ಲೋಕಲ್ ಸರ್ಕಾರದ ತಮ್ಮ ಅನುಭವ ಸಾಮರ್ಥ್ಯದಿಂದ ಪಾರ್ಲಿಮೆಂಟಿನ ಮನಸ್ಸಿನ ಮನ್ನಣೆಯನ್ನು ಪ್ರಯತ್ನಿಸುವಂತೆ ಮಾಡಿ, ೧೮೬೯ ನೆಯ ಇಸವಿಯಿಂದ ೬-೭ ವರ್ಷಗಳೊಳಗಾಗಿ ಅಲ್ಲಿನ ಜನರಿಗೆ ಧಾರ್ಮಿಕ ವಿಷಯಗಳಲ್ಲಿ ತೊಂದರೆಯನ್ನು ಪರಿಹರಿಸುವ ಶಾಸನವನ್ನು ಸ್ಥಾಪಿಸಿಕೊಟ್ಟನು. ಬಳಿಕ ಆ ದೇಶದ ಆಡಳಿತವನ್ನು ತಾವೇ ನಡೆಸಿಕೊಂಡು ಹೋಗುವುದಕ್ಕೆ ಸಾಧಕವಾಗುವಂತೆ ತಮಗೆ ಸ್ವತಂತ್ರವಾದ ಪಾರ್ಲಿಮೆಂಟನ್ನು ನಡೆಸಿ ಕೊಡಿಸಿಕೊಡಬೇಕೆಂದು ಐರ್ಲ್ಯಾಂಡಿನವರು ಒಂದು ದೊಡ್ಡ ಚಳುವಳಿಯಾಗಿ ಪಾರ್ಲಿಮೆಂಟಿನವರನ್ನು ಕೇಳಿಕೊಂಡರು. ಅದಕ್ಕೆ ಪಾರ್ಲಿಮೆಂಟಿನ ಬಹುಜನರು ವಿರೋಧಿಸಿದರು. ಆದರೂ ಮುಖ್ಯಮಂತ್ರಿಯಾದ ಗ್ಲಾಡ್‌ಸ್ಟನ್ನಿಗೆ ಅದು ಸೂಕ್ತವೆಂದೇ ತೋರಿತು. ತನ್ನ ಮನಸ್ಸಿಗೆ ನ್ಯಾಯವೆಂದು ತೋರಿ ಒಪ್ಪಿದ ಕಾರ್ಯವನ್ನು ಸಾಧಿಸುವಲ್ಲಿ ಪ್ರಾಣವನ್ನಾದರೂ ಅರ್ಪಿಸಲು ಹಿಂಜರಿಯದ ಆ ಮಹಾನುಭಾವನು ಅದನ್ನು ಸ್ಥಾಪಿಸಿಕೊಡುವುದರಲ್ಲಿ ದೃಢಸಂಕಲ್ಪನಾದನು. ಆ ವಿಷಯದಲ್ಲಿ ಒಂದು "ಮಸೂದೆ"ಯನ್ನು ಪಾರ್ಲಿಮೆಂಟಿನ ಮುಂದಕ್ಕೆ ೧೮೮೬ ನೆಯ ವರ್ಷದಲ್ಲಿ ತಾನೇ ಇಟ್ಟನು. ಅದಕ್ಕೆ ಅನುಕೂಲ ಮತಗಳು ೩೧೧, ಪ್ರತಿಕೂಲ ಮತಗಳು ೩೪೩ ಬಿದ್ದು, ಅದು ವಿಧಿಯಾಗಲವಕಾಶವಿಲ್ಲದೆ ಹೋಯಿತು. ಗ್ಲಾಡ್‌ಸ್ಟನ್ನನು ಮುಖ್ಯ ಮಂತ್ರಿತ್ವವನ್ನು ಬಿಟ್ಟನು. ಆಬಳಿಕ ಮತ್ತೊಂದು ವೇಳೆ ತಾನು ಮಂತ್ರಿಯಾದಾಗ್ಗೆ ಇದೇ ವಿಷಯವನ್ನು ೧೮೯೩ ರಲ್ಲಿ ಪಾರ್ಲಿಮೆಂಟಿಗೆ ಗ್ಲಾಡ್‌ಸ್ಟನ್ನನು ತರಲು ಕಾಮನ್ಸ್ ಸಭೆಯಲ್ಲಿ ಅದು ಅನುಮೋದಿತವಾದರೂ ಲಾರ್ಡ್ಸ್ ಸಭೆಯವರಿಂದ ನಿರಾಕೃತವಾಯಿತು.

ಹೀಗೆ ಕಳೆದ ೩೫ ವರ್ಷದಲ್ಲಿಯೂ ವಿವಾದಾಸ್ಪದವಾಗಿರುವ ಈ ಸ್ವರಾಜ್ಯವಿಷಯವು ಈಗಿನ ಲಿಬರಲ್ ಪಕ್ಷದ ಪ್ರಭುತ್ವದಲ್ಲಿ ಮತ್ತೆ ತಲೆಯೆತ್ತಿತು. ಈಗಿನ ಮುಖ್ಯಮಂತ್ರಿಯವರಾದ ಮಿ॥ ಆಸ್ಕ್ವಿತ್‌ರವರು ಲಾರ್ಡ್ ಗ್ಲಾಡ್‌ಸ್ಟನ್ನರವರ ಉದಾರಮತದಲ್ಲೇ ಹೆಜ್ಜೆಯಿಟ್ಟು ಇದನ್ನು ವಿಧಿಯನ್ನಾಗಿ ಮಾಡಿಸಲು ಸಾಹಸಪಟ್ಟರು. ಈ ಕಾರ್ಯದಲ್ಲಿ ಅವರಿಗೆ ತುಂಬಾ ಜಯವಾಗುವ ಚಿಹ್ನೆಗಳೇ ಗೋಚರವಾಗುತ್ತ ಬಂದುವು. ಕಾಮನ್ಸ್ ಸಭೆಯಲ್ಲಿ ಇದು ಅನುಮೋದಿತವಾಯಿತು, ಲಾರ್ಡ್ಸ್‌ಗಳ ಸಭೆಯಲ್ಲಿ ಇದು ಅನುಮೋದಿತವಾಗದಿದ್ದರೂ ವಿಧಿಯಾಗಿ ಪರಿಣಮಿಸುವುದಕ್ಕೆ ಈಗ ಅವಕಾಶವಾಗಿರುವುದು.

ಕೆಥೋಲಿಕ್‌ಪಂಥದವರೇ ಹೆಚ್ಚಾಗಿರುವ ಐರ್ಲ್ಯಾಂಡಿಗೆ ಸ್ವರಾಜ್ಯದ ಅಧಿಕಾರವು ಸಿಕ್ಕಿ, ಸ್ವತಂತ್ರವಾದ ಪಾರ್ಲಿಮೆಂಟು ದೊರೆತುವಾದರೆ, ಅಲ್ಪಸಂಖ್ಯಾಕರಾದ ತಾವುಗಳು ಅದಕ್ಕೆ ಅಂಕಿತರಾಗಿ ಬಾಳಬೇಕಾಗುವುದಲ್ಲ ಎಂಬ ಚಿಂತೆಯು ಅಲ್‌ಸ್ಟರ್‌ಜಿಲ್ಲೆಯ ಆಂಗ್ಲಜನರಿಗೆ ಹತ್ತಿ, ಆ ಪಕ್ಷದವರು ಇದನ್ನು ನಿರೋಧಿಸುವುದಕ್ಕಾಗಿ ಕಳೆದ ೨-೩ ವರ್ಷಗಳಿಂದಲೂ ಅಸಮಸಾಹಸ ಮಾಡುತ್ತಿರುವರು. ಸರ್ ಎಡ್ವರ್ಡ್ ಕಾರ್ಸನ್‌ರವರೇ ಮೊದಲಾದ ಈ ಪಕ್ಷದ ಮುಂದಾಳುಗಳು ಪಾರ್ಲಿಮೆಂಟಿನಲ್ಲಿ ಎಷ್ಟೋ ವಾದಾನುವಾದಗಳನ್ನು ನಡೆಸಿದರು. ಅವೆಲ್ಲ ನಿಷ್ಫಲವಾದುವು. ನ್ಯಾಯದಲ್ಲಿ ಇದು ಕಡೆಗೊಳಿಸಲ್ಪಟ್ಟರೆ ಆಯುಧದಿಂದಲಾದರೂ ಇದನ್ನು ಪ್ರತಿಭಟಿಸಬೇಕೆಂದು ಅಲ್‌ಸ್ಟರಿನವರು ಮಹಾಪ್ರಯತ್ನವನ್ನು ಮಾಡಿರುವರು. ತಾವು ಒಳಗೊಳಗೆ ಸರ್ಕಾರದಮೇಲೆ ಕೈಮಾಡುವುದಕ್ಕಾಗಿ ಸೈನಿಕರನ್ನು ಕೂಡಿಸುತ್ತಲೂ ಮದ್ದುಗುಂಡು ಮೊದಲಾದುವುಗಳನ್ನು ಜತೆಗೊಳಿಸುತ್ತಲೂ ಇರುವರು. ಪ್ರಭುತ್ವದವರಲ್ಲಿರುವ ಸೈನಿಕರಿಗೆ ಸ್ವಜನರಮೇಲೆ ನೀವು ಕೈಮಾಡುವುದು ಅಧರ್ಮವಲ್ಲವೆ? ಎಂದು ಬೋಧಿಸಿ, ಈ ಪ್ರಬೋಧನೆಯಿಂದ ಸೇನಾಧಿಕಾರಿಗಳು ಕೆಲಸವನ್ನು ಬಿಟ್ಟುಬಿಡುವಂತೆಯೂ ಮಾಡಿದರು. ಈ ಗೊಡ್ಡು ಬೆದರಿಕೆಗೆ ಮಂತ್ರಿಮಂಡಲದವರ ಗುಂಡಿಗೆಯು ಲೇಶವೂ ನಡುಗಲಿಲ್ಲ. ಮುಖ್ಯಸೈನ್ಯಾಧಿಪತಿಯು ಕೆಲಸವನ್ನು ಬಿಟ್ಟುಬಿಡಲು, ಆ ಅಧಿಕಾರವನ್ನು ಮುಖ್ಯಮಂತ್ರಿಯವರೇ ವಹಿಸಿಕೊಂಡುಬಿಟ್ಟರು. ಕಡಿವಾಣದ ಪ್ರಸಕ್ತಿಯಿಲ್ಲದೆ ಈ ವಿಧಿಯನ್ನು ಶಾಂತಿಯಿಂದಲೇ ಅನುಷ್ಠಾನಕ್ಕೆ ಬರುವಂತೆ ಮಾಡಬೇಕೆಂಬುದು ಮಂತ್ರಿಮಂಡಲದವರ ಘನತರೋದ್ದೇಶವಾಗಿದೆ. ಆದುದರಿಂದ ಅಲ್‌ಸ್ಟರಿನವರ ಮನಸ್ಸಿಗೆ ವಿರೋಧವಿಲ್ಲದಂತೆ ಇದನ್ನು ವಿಧಿಗೊಳಿಸಬೇಕೆಂದು ಬೇಕಾದಷ್ಟು ಸಮಾಲೋಚನೆಗಳನ್ನು ಅವರು ನಡೆಯಿಸಿರುವರು. "ಈಗ ನಾವು ಐರ್ಲ್ಯಾಂಡಿಗೆ ಕೊಡುವ ಸ್ವರಾಜ್ಯದ ಕಾರ್ಯಕ್ರಮಗಳನ್ನು ನೀವು ನೋಡುತ್ತ ಕೆಲವು ಇಂದಿನಿಂದ ೬ ವರ್ಷಗಳವರೆಗೂ ನೀವುಗಳು ಅದಕ್ಕೆ ಅಧೀನರಾಗಿರಬೇಕಾದುದಿಲ್ಲ. ತದನಂತರ ಮುಂದೆ ಹೇಗೆ ನಡೆಯಬೇಕೆಂಬುದನ್ನು ಗೊತ್ತುಮಾಡುವೆವು" ಎಂದು ಕೆಲವು ಮಂತ್ರೀಶ್ವರರು ತಿಳಿಯಪಡಿಸಿದರು. ಅಷ್ಟಕ್ಕೂ ಅಲ್‌ಸ್ಟರಿನವರು ಒಡಂಬಡಲಿಲ್ಲ. ಎಂದೆಂದಿಗೂ ಆ ಪಾರ್ಲಿಮೆಂಟಿಗೆ ತಮ್ಮನ್ನು ಅಧೀನಗೊಳಿಸಬಾರದೆಂತೆ ಅದರ ಮಾತ್ರ ಆಗಬಹುದೆಂದು ಆ ಪಕ್ಷದವರು ಹೇಳುತ್ತಿರುವರು. ಮಂತ್ರಿಪಕ್ಷದವರೂ ಪ್ರತಿಪಕ್ಷದವರೂ ಈ ಸಂದರ್ಭದಲ್ಲಿ ನಡೆಯಿಸುತ್ತಿರುವ ವಾದಾನುವಾದಗಳೂ ಸಾಹಸಗಳೂ ಸಹ ಆ ಸ್ವರಾಜ್ಯಾಂಗದ ಘನತೆಯನ್ನೂ ದರ್ಪವನ್ನೂ ಪ್ರಕಟಪಡಿಸುವುದನ್ನು ಜಗತ್ತಿಗೆ ತೋರಿಸುತ್ತಲಿರುವುವು. ಒಂದು ಪಕ್ಷದವರು ಮುಂದಾದಾಗ ಪ್ರತಿಪಕ್ಷದವರು ತಗ್ಗಿಹೋಗುವುದೂ, ಇವರು ಮುಂದಾದಾಗ ಅವರು ಇಳಿದುಹೋಗುವುದೂ ಸಹ ಅತ್ಯಂತ ವಿಸ್ಮಯವನ್ನುಂಟುಮಾಡುತ್ತಿರುವುವು. ದೇಶಪ್ರತಿಷ್ಠೆಗೂ ಕೀರ್ತಿಗೂ ಕಳಂಕತರದಂತೆ ಸ್ವಪಕ್ಷಸಾಧನವನ್ನು ಮಾಡಲು ಅವರು ತೋರಿಸುತ್ತಿರುವ ಉಪಾಯಗಳು ಗಮನೀಯವಾಗಿರುವುವು. ಕಳೆದಿರುವ ವಾರಗಳಲ್ಲಿ ಅಲ್‌ಸ್ಟರಿನ ಜನರು ಸೇನಾಸಿದ್ಧತೆಯನ್ನು ವಿಶೇಷವಾಗಿ ನಡೆಯಿಸಿದರು. ಪ್ರಭುತ್ವದವರೂ ಮುಂದಾಲೋಚನೆಯಿಂದ ತಮ್ಮ ಸನ್ನಾಹವನ್ನು ನಡೆಯಿಸಿರುವರು. ಅಲ್‌ಸ್ಟರಿನವರು ಮೊನ್ನೆಯ ವಾರದಲ್ಲಿ ನೂರಾರು ಮೋಟಾರುಗಳನ್ನು ಕಲ್ಲಿದ್ದಲನ್ನು ಸಾಗಿಸುವ ವ್ಯಾಜದಿಂದ ಸಮುದ್ರತೀರಕ್ಕೆ ಕಳುಹಿಸಿ, ಅಲ್ಲಿ ಕಾವಲಿದ್ದ ಸರ್ಕಾರದ ಪ್ರೋಲೀಸರುಗಳನ್ನು ಅಲ್ಲಾಡಗೊಡದಂತೆ ಬೆದರಿಸಿಟ್ಟು, ೩೦ ಸಾವಿರ ಕೋವಿಗಳನ್ನೂ ಲಕ್ಷಾಂತರ ತೋಟಾಗಳನ್ನೂ ಬಂಡಿಗಳಲ್ಲಿ ತುಂಬಿಕೊಂಡು ಒಬ್ಬರ ಕೈಗೂ ಸಿಕ್ಕದಂತೆ ತಮಗೆ ಬೇಕಾದ ಸ್ಥಳಗಳಿಗೆ ಅವನ್ನು ಸಾಗಿಸಿರುವರು. ಈ ಕೆಲಸವನ್ನು ವಿಶ್ವಾಸಘಾತಕತನವೆಂದು ಮುಖ್ಯಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಜರೆದಿರುವರು. ಅಲ್‌ಸ್ಟರಿನವರು ಮೊದಲು ಸರ್ಕಾರದ ಮೇಲೆ ಕೈ ಮಾಡದಿದ್ದರೆ ತಮ್ಮ ಆಯುಧವನ್ನೆತ್ತುವುದಿಲ್ಲವೆಂಬುದು ಮಂತ್ರಿಮಂಡಲದವರ ಸಂಕಲ್ಪವಾಗಿದೆ. ಈಚೆಗೆ ಮಂತ್ರಿಯು ತಲವರು ಇದೇ ವಿಷಯವನ್ನು ಕುರಿತು ಒಂದು ಏರಿಂತಸಭೆಯಲ್ಲಿ ಆಲೋಚಿಸುತ್ತಿದ್ದಾರೆ. ಈಗ ಜರುಗುತ್ತಿರುವ ಪಾರ್ಲಿಮೆಂಟು ಮುಚ್ಚಲ್ಪಡುವುದರೊಳಗೆ ಈ ಐರ್ಲ್ಯಾಂಡ್ ಸ್ವರಾಜ್ಯ ವಿಷಯಕವಾದ ತೀರ್ಮಾನವನ್ನು ಹೇಗೆ ನಡೆಯಿಸಬೇಕೋ ಅದನ್ನು ನಿರ್ಧರಿಸುವುದಕ್ಕಾಗಿ ಮುಖ್ಯಮಂತ್ರಿಯವರು ಒಂದು "ಬಿಲ್ಲನ್ನು" ಪಾರ್ಲಿಮೆಂಟಿಗೆ ತರುವವರಾಗಿದ್ದಾರೆ. ಹೇಗೂ ಈ ಸ್ವರಾಜ್ಯವಿಧಿಯು ಶಾಸನವಾಗಿ ಏರ್ಪಡುವುದೇ ಸಿದ್ಧವೆಂದೂ, ಆದರಲ್ಲೂ ಅದು ಯುದ್ಧಪ್ರಸಕ್ತಿಯಿಲ್ಲದೆ ಶಾಂತರೀತಿಯಿಂದಲೇ ಅನುಷ್ಠಾನಕ್ಕೆ ಬರುವುದೆಂದೂ ದೀರ್ಘದರ್ಶಿಗಳೆಲ್ಲರೂ ನಿರೀಕ್ಷಿಸುತ್ತಿದ್ದಾರೆ. ಹಾಗಾಗುವುದೇ ಆಂಗ್ಲಪ್ರಭುತ್ವದ ಕೀರ್ತಿಪ್ರತಿಷ್ಠೆಗಳಿಗೆ ಯುಕ್ತವಾದುದು.

ಒಳದೇಶದ ವೃತ್ತಾಂತವು.

ಕಳೆದ ಸೋಮವಾರ ಮತ್ತೂ ಮಂಗಳವಾರ ಬೆಂಗಳೂರಲ್ಲಿ ಒಳ್ಳೆಯ ಮಳೆಯಾಯಿತು.

ನಮ್ಮ ಸಂಸ್ಥಾನದ ಚೀಫ್ ಎಲೆಕ್ಟ್ರಿಕ್ ಇಂಜನಿಯರಾದ ಮಿ॥ ಗಿಬ್ಸ್‌ರವರು ಉದ್ಯೋಗವನ್ನು ಬಿಟ್ಟು ಹೋಗುವುದಕ್ಕಾಗಿ ಸಿದ್ಧವಾಗಿದೆ.

ಜ್ಯೇಷ್ಠಮಾಸದಲ್ಲಿ ನಡೆಯುವ ಶ್ರೀಮನ್ಮಹಾರಾಜರ ವರ್ಧಂತಿ ಮಹೋತ್ಸವದ ಸಮಯದ ಕುದುರೆ ಜೂಜಿಗಾಗಿ ಈಗಿನಿಂದಲೂ ಸನ್ನಾಹಗಳು ನಡೆಯುತ್ತಿವೆ.

ತುಮಕೂರ ಡಿ॥ ಕಮೀಷನರ್ ಮಿ॥ ಬಿ ಜಿ ಕುಮಾರಸ್ವಾಮಿ ನಾಯುಡ್, ಬಿ ಎ, ಇವರು ವೈಸೂರ ರಿಯಾಸಿ ನಿರ್ಮಾಣ ಸಭೆಯ ಬಿದ್ಯೋಗಿಕ ಸಭಾಸದರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ರಬೇಷನರಿ ಅಸಿಸ್ಟೆಂಟ್ ಕಮೀಷನರಾಗಿರುವ ಮಿ॥ ಗುಲಾಂ ಮಹಮದ್ ಮೀರ್, ಬಿ ಎ, ಎಲ್ ಎಲ್ ಬಿ, ಇವರಿಗೆ ೩ನೇ ತರಗತಿಯ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿದೆ.

ಕೋಲಾರಪುರ ಈ॥ ಚಿಕ್ಕಾರಪುರ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಬಾವಿಯನ್ನು ತೋಡಿಸಲು ತಗಲುವ ೧೦೩೦ ರೂಗಳಲ್ಲಿ ಅರ್ಧಹಣವನ್ನು ಗ್ರಾಮದವರು ಕೊಡಲೊಪ್ಪಿದುದರಿಂದ ಸರ್ಕಾರದವರು ಉಳಿದ ೫೧೫ ರೂಗಳನ್ನು ಕೊಡಲಪ್ಪಣೆಮಾಡಿರುತ್ತಾರೆ.

೨ ನೆಯ ಕೌನ್ಸಿಲರಾದ ಸರ್ದಾರ್ ಎಂ. ಕಾಂತರಾಜ ಅರಸಿನವರು ನಿನ್ನೆಯ ದಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಪುರಪ್ರಮುಖರನ್ನು ಕೂಡಿಸಿ ಒಂದು ಸಭೆಮಾಡಿ ವ್ಯಾಪಾರಾಭಿವೃದ್ಧಿ ಶಿಲ್ಪಾಭಿವೃದ್ಧಿ ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿ, ಜನಾಭಿಪ್ರಾಯವನ್ನು ತಿಳಿದುಕೊಂಡರು.

ಶ್ರೀಮನ್ಮಹಾರಾಜರವರು ಹುಜೂರುಸೆಕ್ರೆಟರಿಯವರೊಡನೆ ಕಳೆದ ತಾ॥ ೭ ರ ಬೆಳಗ್ಗೆ ಊದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿ, ತಾ॥ ೯ ರಲ್ಲಿ ನಂಜನಗೂಡಿಗೆ ಬಿಜಯಮಾಡಿ ಶ್ರೀನಂಜುಂಡೇಶ್ವರಸ್ವಾಮಿಯ ಪೂಜಾಸೇವೆಯನ್ನು ನೆರವೇರಿಸಿಕೊಂಡು ಅದೇ ರಾತ್ರಿ ೧೧ ಗಂಟೆಯೊಳಗೆ ಪಟ್ಟಣಗಳಲ್ಲಿ ಊದಕಮಂಡಲಕ್ಕೆ ಪ್ರಯಾಣಮಾಡಿದರು.

ಕೆಲವು ತಾಲ್ಲೋಕು ಬೋರ್ಡು ಹೊಸಕೋಟೆಯ ನಿವಾಸಿಗಳು ಒಂದು ಸ್ಕೂಲ್ ಕಟ್ಟಡವನ್ನು ಕಟ್ಟಲು ೧೫೦೦ ರೂ ಗಳ ಚಂದಾಹಣವನ್ನು ಕೊಡಿಸಿರುವುದರಿಂದ ಸರ್ಕಾರದವರು ೧೦೦೦ ರೂ ಗಳನ್ನು ಕೊಡಲಪ್ಪಣೆಮಾಡಿರುವರು ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರ್ ರವರಿಂದ ಈ ಹೊಸ ಕಟ್ಟಡದ ಶಂಕುಸ್ಥಾಪನೆಯು ಈ ತಾ|| ೧೯ ರಲ್ಲಿ ನೆರವೇರಿಸಲ್ಪಡುವುದು

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಜನರಲ್ ಕಮಿಟಿ ಮೀಟಿಂಗ್ ೧೯೧೦ ನೆ ಇಸವಿ ಮೇ ತಾ ೨೫ ನೆಯ ಬುಧವಾರ ಬೆಳಿಗ್ಗೆ [illegible] ಘಂಟೆಗೆ ಸರಿಯಾಗಿ ಮಿ|| ದಿವಾನ್ ಬಹದ್ದೂರ್ ರಾಜಸಭಾಭೂಷಣ, ಕೆ ಪಿ ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯ ಮೇಲೆ ನೆರವೇರತಕ್ಕದ್ದೆಂದು ನಿರ್ಧರವಾಗಿರುವುದು

ಶ್ರೀರಂಗಪಟ್ಟಣದ ಜವಳಿ ವ್ಯಾಪಾರಿಗಳೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಮ|| ಎಸ್ ಸಿದ್ಧಲಿಂಗಶೆಟ್ಟರು ಹರಿಹರದಲ್ಲಿ ನಡೆದ [illegible] ಕೈಗಾರಿಕೆಯ ವಸ್ತುಗಳ ಮತ್ತು ದನಗಳ ಪ್ರದರ್ಶನಶಾಲೆಯಲ್ಲಿ ಸುಧಾರಿಸಿದ [illegible] ವ್ಯವಸಾಯಕ್ರಮವನ್ನು ಕುರಿತು ಕನ್ನಡ ಮನಸ್ಸಿಗೆ ಹತ್ತುವಂತೆ ಬಹು ರಸವತ್ತಾದ ಉಪನ್ಯಾಸಮಾಡಿದುದನ್ನು ಪ್ರದರ್ಶನದ ಕಮಿಟಿಯವರು ಮೆಚ್ಚಿ ಅವರಿಗೆ ಒಂದನೆ ತರಗತಿಯ ಬಹುಮಾನದ ಪತ್ರಿಕೆಯನ್ನು ಕೊಟ್ಟರು. ಈ ದೇಶದ್ದ ಮನುಷ್ಯರೇ ಬೀರೂರು, ದಾವಣಗೆರೆ ಮತ್ತು ಚಿತ್ರಕಲ್‌ದುರ್ಗ ಈ ಸ್ಥಳಗಳಲ್ಲಿ ರೈತರ ಪ್ರಾರ್ಥನೆಯ [illegible] ಸಹಾಯಕ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು

ಹಾಸನದ ಡಿ|| ಡೆಪ್ಯುಟಿ ಕಮಿಷನರಿಂದ ಎ|| ಕನಿಷ್ಠರು ಮ|| ಪಿ ಗೋಪಾಲರಾಜ ಅರಸ್, ಬಿ ಎ ಬಿ ಎಲ್, ರವರಿಗೆ ಕೋಲಾರದ ಡಿ|| ಟ್ರಜರರಾದ ಮ|| ಬಾಗಲಕೋಟೆ ಸುಬ್ಬರಾಜ ಅರಸಿನವರ ಕುಮಾರಿ ಜಿ|| ಸೌ|| ಸಣ್ಣಮ್ಮಣ್ಣಿಯವರನ್ನು ಕೊಟ್ಟ ಕಳೆದ ತಾ|| ೭ ರಲ್ಲಿ ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ಅಮೃತವಳಲ್ ಕ್ಯಾಪ್ಟನ್ ಸರಿಂಟೆಂಡೆಂಟರಾದ ಮ|| ನಂಜುಂಡರಾಜ ಅರಸಿನವರೇ ಮೊದಲಾದ ರಾಜಬಂಧುಗಳೂ, ಡೆ|| ಕಮಿಷನರು ಮೊದಲಾಗಿ ಸರ್ಕಾರಿ ಅಧಿಕಾರಿಗಳೂ, ವಕೀಲರುಗಳೂ, ಮೊದಲಾದವರುಗಳು ದಯಮಾಡಿದ್ದರು ಅರಮನೆಯಿಂದ ರಾಜನಮರ್ಯಾದೆಗಳೆಲ್ಲವೂ, ಉಡುಗೊರೆಯೂ ಕಳುಹಲ್ಪಟ್ಟಿದ್ದುವು ಅನಕಲ್ ತಾಲ್ಲೋಕಿನಿಂದ ಅತ್ತಿಬೆಲೆ ಶ್ರೀಮಂತ ಸಿದ್ದಬಸಪ್ಪನವರು ಮೊದಲಾದವರೂ, ಬೆಂಗಳೂರು ಹಾಸನಗಳಿಂದ ಕೆಲ ದೊಡ್ಡಮನುಷ್ಯರುಗಳೂ ದಯಮಾಡಿದ್ದರು ಈ ನೂತನದಂಪತಿಗಳಿಗೆ ಸಕಲ ಸುಖ ಸಂಪತ್ತನ್ನೂ ದೀರ್ಘಾಯುಷ್ಯವನ್ನೂ ಜಗದೀಶನು ದಯಪಾಲಿಸಲಿ,

ವರ್ತಮಾನಸಂಗ್ರಹ

ಅನ್ನೆಂಡ್ ಪೊಕ್ಟಿಯೆಂಬಾತನು ಶಿವಡಸೂ ನೂರಗನೂ ಆಗಿದ್ದಾನೆ ಈತನು ಕೇಂಬ್ರಿಡ್ಜ್ ವಿದ್ಯಾಪೀಠದಲ್ಲಿ ಎಂ ಎ ಪರೀಕ್ಷೆಯನ್ನು ಕೊಟ್ಟಿದ್ದಾನೆ ಇಂಥ ವಿಕಲಾಂಗರಲ್ಲಿ ಇಷ್ಟು ದೊಡ್ಡ ಪರೀಕ್ಷೆಯನ್ನು ಕೊಟ್ಟವರಲ್ಲಿ ಈತನೇ ಮೊದಲನೆಯವನಂತೆ

ಪ್ರಪಂಚದೊಳಗೆಲ್ಲಾ ಇದುವರೆಗೆ ನಿಶ್ಚಿತವಾಗಿ ಕೆಲಸ ಮಾಡುತ್ತಿರುವ ಮೋಟಾರು ಬಂಡಿಗಳು ಒಟ್ಟು [illegible] ಲಕ್ಷವಾಗಿರುವುವು. ಪ್ರತಿಯೊಂದು ಬಂಡಿಯೂ ೫ ಗಜದುದ್ದವಿದೆಯೆಂದು ಲೆಕ್ಕಹಾಕಿಕೊಂಡರೂ, ಇವುಗಳನ್ನೆಲ್ಲಾ ಸಾಲಾಗಿ ನಿಲ್ಲಿಸಿದರೆ ೩೦೦೦ ಮೈಲಿಗಳ ದೂರ ನಿಂತುಕೊಳ್ಳುವುವು. ಈ ಬಂಡಿಗಳನ್ನೆಲ್ಲಾ ಯೂರೋಪು ದೇಶದಲ್ಲೆಲ್ಲಾ ಪೂರ್ವದಿಂದ ಪಶ್ಚಿಮಕ್ಕೆ ೫ ಸಾಲಾಗಿ ನಿಲ್ಲಿಸಬಹುದು ಈ ಬಂಡಿಗಳೆಲ್ಲಾ ಓಡುವ ಪರಿಮಿತಿಯು ಗಂಟೆಯೊಂದಕ್ಕೆ ೫ ಕೋಟಿ ಮೈಲಿಗಳಷ್ಟಾಗುವುದು ಎಂದರೆ ಪ್ರಪಂಚದ ಸುತ್ತಲೂ ೨ ಸಾವಿರ ಪ್ರದಕ್ಷಿಣೆಯನ್ನು ಮಾಡಿದಷ್ಟಾಗುವುದು

ಮಧ್ಯಹಿಂದೂಸ್ಥಾನಕ್ಕೆ ಸೇರಿದ ಬರ್ವಾನಿಯೆಂಬಲ್ಲಿ ಕಳೆದ ಮಂಗಳವಾರ ಬಿಸಿಲಿನ ತಾಪವು ಅತ್ಯಂತ ಹೆಚ್ಚಾಗಿದ್ದು ಧೂಳಿಮಿಶ್ರವಾದ ಗಾಳಿಯೂ ೧ ಗಂಟೆಯವರೆಗೆ ಬೀಸಿ ಅನಂತರ ಗುಡುಗು ಮಿಂಚೂ ಮತ್ತು ಸಿಡಿಲುಗಳಿಂದ ಕೂಡಿ ದೊಡ್ಡ ಮಳೆಯೂ ಬಂದಿತು ಇದರಿಂದ ಮನೆಗಳ ಮೇಲು ಹೊದ್ದಿಕೆಗೆ ಹಾಕಿದ್ದ ತಗಡುಗಳೂ ಕಟ್ಟಿನದ ತೊಲೆಗಳೂ ಆಗರದೋಪಾದಿಯಲ್ಲಿ ಹಾರಾಡಿದುವು, ಅನೇಕ ಮರಗಳು ಬೇರುಸಹಿತ ಕಳಗುರುಳಿದುವು. ಮತ್ತೂ ಮಾರ್ಗದಲ್ಲಿ ತಿರುಗಾಡುತ್ತಿದ್ದ ಬಂಡಿಗಳೂ ತಲೆಕೆಳಗಾದುವು. ಈ ಅನಾಹುತದಿಂದ ಬಹಳ ಪದಾರ್ಥಗಳ ನಷ್ಟವಾಗಿರುವುದಲ್ಲದೆ ಪ್ರಾಣನಷ್ಟವೇನೂ ಆಗಲಿಲ್ಲವು

ಎನಾಮಲ್ಡ್ ಪಾತ್ರೆಗಳ [illegible] ದಿಂದ ಸ ರಗಳ ಹೀಳೆಯ ಶೀಟು [illegible] ಎಷ್ಟುವು

ವೆಂದು ವೈದ್ಯಶಾಸ್ತ್ರಪ್ರವೀಣರದರು ಅಭಿಪ್ರಾಯಪಟ್ಟಿದ್ದಾರೆ ನಮ್ಮ ದೇಶದ ಪ್ರತಿಯೊಂದು ಗ್ರಾಮಗಳಲ್ಲೂ ಕಡಿಮೆಯ ಬೆಲೆಯಿಂದ ದೊರೆಯುವ ಈ ಪಾತ್ರೆಗಳೇ ತುಂಬಿಕೊಂಡಿವೆ ಕಬ್ಬಿಣದ ತಗಡಿನ ಮೇಲೆ ಒಂದು ತರಹ ಮಟ್ಟಿನ ಲೇಪನ ಮಿಂದ ಇವುಗಳನ್ನು ನಿಶ್ಚಯಿಸುತ್ತಾರೆ ಇವುಗಳಲ್ಲಿ ಆಹಾರ್ಯ ಪದಾರ್ಥವನ್ನಿಟ್ಟು ಉಪಯೋಗಿಸುವುದರಿಂದ ಅದರ ಮಟ್ಟಿನ ರೇಣುಗಳು ಹೊಟ್ಟೆಗೆ ಹೋಗಿ ಜೀರ್ಣಕೋಶಕ್ಕೆ ಉದ್ರೇಕವನ್ನುಂಟುಮಾಡುವುದೆಂದೂ ಅದರಿಂದ ನರಗಳ ದೌರ್ಬಲ್ಯಾದಿರೂಪ ವ್ಯಾಧಿಗಳು ಹುಟ್ಟುವುವೆಂದೂ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ ಈ ಪಾತ್ರೆಗಳನ್ನು ಉಪಯೋಗಿಸುತ್ತಿರುವ ಜನರು ಇದನ್ನು ಗಮನಿಸಬೇಕು

ಹೈದರಾಬಾದು ಸೀಮೆಗೆ ಸೇರಿದ [illegible] ಡಿಸ್ಟ್ರಿಕ್ಟಿನ ಒಂದು ಗ್ರಾಮವಾಸಿಯಾದ ನಾರಾಯಣ ರಾಘು ಎಂಬ [illegible] ಜಾತಿಯ [illegible] ದತ್ತೂರಿ ಬೀಜದ ಹೂಗೆಯನ್ನು ಸೇದುವುದರಿಂದ [illegible] ನೇವಿಸುವುದರಿಂದಲೂ ಉಂಟಾಗುವ [illegible] ತಿಳಿದುಕೊಂಡು, ದೊಡ್ಡ ಪಟ್ಟಣಗಳಲ್ಲಿ ವಾರಗಟ್ಟಲೆ ಆಗುವ ಸಂತೆಗಳಿಗೆ ಬಂದು, [illegible] ಮೈಲಿ ದೂರಕ್ಕೆ ಪ್ರಯಾಣಮಾಡಬೇಕೆಂದು ಬಂಡಿಯವರಿಗೆ ಹೇಳಿ ಎಡೆಗೆ ಗೊತ್ತುಮಾಡಿ ಹೋಗುತ್ತ, ಮಾರ್ಗದಲ್ಲಿ ಬಂಡಿಯವನು ತನ್ನ ಅನ್ನಕ್ಕೆ ದತ್ತೂರಿ ಬೀಜದ ಪುಡಿಯನ್ನು ಹಾಕಿ ಅವನು ಅದನ್ನು ತಿಂದು ಮೈಮರೆಯುತ್ತಲೇ ಅವನ [illegible] ತೆಗೆದು ಒಂದು [illegible], [illegible], ಕಾಡಿನ [illegible] ಪ್ರದೇಶದಲ್ಲೋ ಬಿಸಾಡಿ, ಬಂಡಿಯನ್ನು ಜೊತೆ ಹೋಗಿ ಎತ್ತು ಬಂಡಿಗಳನ್ನು ವಿಕ್ರಯಿಸಿ [illegible] ತ್ತಿದ್ದನು ಇವನು ಈ ರೀತಿಯಾಗಿ ಕಳೆದ [illegible] ವರ್ಷಗಳಿಂದ ಈವರೆಗೆ ೩೦ ಕೊಲೆಗಳನ್ನು ಮಾಡಿರುವನು ರತ್ನವರ [illegible] ಸಿಕ್ಕಿದ ಇವನು ದರ ಮೇಲೆ ಅವರಿಗೆ ಪೋಲೀಸರಿಗೆ ಸಿಕ್ಕಿಬಿದ್ದ ಈಗ ಅಹಮದ್‌ನಗರ ಮತ್ತು ನಾಸಿಕ ಡಿ||ಗಳಲ್ಲಿ ಕಳೆದ ೩ ತಿಂಗಳಲ್ಲಿ ಅನೇಕ ಕೊಲೆಗಳನ್ನು ಮಾಡಿದುವರ ಮೇಲೆ ಪೋಲೀಸರು ಈ ನಾರಾಯಣನನ್ನು ಕಂಡು ಹಿಡಿದು ಅವನು ಮಾರಿದ್ದ ಬಂಡಿ ಎತ್ತುಗಳನ್ನು ಒಂದಕ್ಕೆ ಬರಮಾಡಿಕೊಂಡಿರುವರು

ಗ್ರೇಟ ಬ್ರಿಟನ್ನಿನಲ್ಲಿ ಪ್ರತಿ ವರ್ಷವೂ [illegible] ಕೋಟಿ ಟನ್ನುಗಳಷ್ಟು ಕಲ್ಲಿದ್ದಲು ಸಕಲ ಕಾರ್ಯಗಳಿಗೂ ಖರ್ಚಾಗುತ್ತಿರುವುದು. ಇದರಲ್ಲಿ ೩ ಕೋಟಿ ಟನ್ನು ಕಾರ್ಖಾನೆಯಾಗಳಲ್ಲಿ ಆವಿಯನ್ನು ಹುಟ್ಟಿಸುವುದಕ್ಕಾಗಿ, ೩ ಕೋಟಿ ಟನ್ನು ಕಬ್ಬಿಣದ ಕುಲುಮೆಗಳಿಗೋಸ್ಕರ, ೨ ಕೋಟಿ ಟನ್ನು ಗಣಿಗಳ [illegible] ೧|| ಕೋಟಿ ಟನ್ನು [illegible] ಗ್ಯಾಸನ್ನು ಹುಟ್ಟಿಸುವುದಕ್ಕೂ, ೧ ಕೋಟಿಯೂ ೩೦ ಲಕ್ಷ ಟನ್ನು ಹೊಗೆ ಬಂಡಿಗಳಿಗೂ ಉಪಯೋಗಿಸಲ್ಪಡುವುದು. ಇದು ಗ್ರೇಟ್ ಬ್ರಿಟನ್ನೊಂದರಲ್ಲಿ ಉಪಯೋಗಿಸಲ್ಪಡತಕ್ಕದು ಪ್ರಪಂಚದಲ್ಲೆಲ್ಲಾ ಇದನ್ನುಪಯೋಗಿಸುವ ಮಾದರಿಯಿಂದ [illegible] ಲೆಕ್ಕ ಹಾಕಿದರೆ ವರ್ಷ ೧ ಕ್ಕೆ ವೆಚ್ಚವಾಗುವ ಅದರ ಪರಿಮಾಣವನ್ನು ಇಷ್ಟೆಂದು ಊಹಿಸುವುದೇ ಅಸಾಧ್ಯವಾಗಿದೆ [illegible] ಇದು ಉಪಯೋಗಿಸಲ್ಪಡುತ್ತ ಬಂದರೆ ಕೆಲ ಕಾಲಾನಂತರ ಭೂಗರ್ಭದಲ್ಲಿರುವ ಕಲ್ಲಿದ್ದಲೆಲ್ಲಾ ಮುಗಿದುಹೋಗಬಹುದು ಅಂಥ ಕಾಲಕ್ಕೆ ಸರ್ವದಾ ಚ್ಯುತಿಯಿಲ್ಲದಂತೆ ದೊರೆಯುವ ಸಾಧನವೊಂದನ್ನು ಗೊತ್ತುಮಾಡಿರುವುದು ಆವಶ್ಯಕವೆಂದು [illegible] ಯೋಚಿಸಿ, ವಿದ್ಯುಚ್ಛಕ್ತಿಯೇ ಆಂಥ ಸಾಧನವೆಂದು ಗೊತ್ತುಮಾಡಿದ್ದಾರೆ ನೀರು ಪ್ರಪಂಚದ ಎಲ್ಲಾ ಭಾಗದಲ್ಲೂ ಸದಾ ದೊರೆಯುವುದರಿಂದಲೂ, ಅದರ ಪ್ರವಾಹದಿಂದ ವಿದ್ಯುಚ್ಛಕ್ತಿಯನ್ನು ಸುಲಭವಾಗಿ ಹುಟ್ಟಿಸಬಹುದೆಂಬುದು ಈ ಮೊದಲೇ ಸಿದ್ಧವಾಗಿರುವುದರಿಂದಲೂ ಇದರಭಿವೃದ್ಧಿಯೇ ಪ್ರಪಂಚದ ಮುಂದಿನ ಪರಿಶ್ರಮಾಭಿವೃದ್ಧಿಗೆ ಅತ್ಯುತ್ತಮವಾದ ಸಾಧನವೆಂದು ಸಿದ್ಧಾಂತಮಾಡಿದ್ದಾರೆ

ಅದ್ಭುತವಾದ ಸರ್ವಸಂಯೋಗಗಳು

ಹೊಗೆಬಂಡಿಗಳು ಹೋಗುತ್ತಿರುವಾಗ ಅವುಗಳ ಬಾಗಿಲು ತೆರೆದುಹೋಗದಂತೆ ಮಾಡುವ ಯುಕ್ತಿಯೊಂದನ್ನು ಹೊಸದಾಗಿ ಫಾಂಟ್ಜ್ ಕಾಸ್ಟಲ್ ಎಂಬ ಸಿಗ್ನಲರ್ ಎಂಬವನು ಕಂಡುಹಿಡಿದಿದ್ದಾನೆ ಇವನಿಗೆ ಈಚೆಗೆ ಬ್ರಿಟಿಷ್ ರೈಲ್ವೆ ಕಂಪೆನಿಯವರು [illegible] ರೂ. ಗಳ ಬಹುಮಾನವನ್ನು ಕೊಟ್ಟರು. ಇವನು ಗೊತ್ತುಮಾಡಿರುವುದರ ಫಲವೇನೆಂದರೆ–ಬಂಡಿಯು ಹೋಗುತ್ತಿರುವಾಗ ಅದರ ಕದಗಳನ್ನು ತೆರೆಯುವುದಕ್ಕೂ ಮುಚ್ಚುವುದಕ್ಕೂ [illegible] ರ್ಯಾಯಿಗೂ ಗಾರ್ಡಿಗೂ ಮಾತ್ರವೇ ಸಾಧ್ಯವಾಗುವುದು [illegible] ಇರುವ ಬಂಡಿಗಳೂ ಎಂಜನ್ನಿಗೂ ಪ್ರಯಾಣಿಕರು [illegible] ಬಂಡಿಗಳಿಗೂ ಹಿಂದು [illegible] ವಿರುವುದು. ಅದಕೆ [illegible] ಬಿಟ್ಟಿ [illegible] ರ್ ಸಂಬಂಧಿಸಿಲ್ಲ [illegible]

ಕದನ್ನು ತೆರೆಯುವ ಕಾಲದಲ್ಲೂ ಮುಚ್ಚುವ ಕಾಲದಲ್ಲೂ ಆ ಚಕ್ರಗಳನ್ನು ತಿರುಗಿಸಬೇಕಾದರೆ ಯಾವಾಗಲೂ ತೆಗೆಯುವುದೂ ಮುಚ್ಚುವುದೂ ಆಗುವುದಿಲ್ಲ ಈ ಸಾಧನದಿಂದ ಕಳ್ಳಕಾಕರು ಮಧ್ಯಮಾರ್ಗದಲ್ಲಿ ಬಾಗಿಲನ್ನು ತೆರೆದು ನುಗ್ಗಿ ಕಳವು ಕೊಲೆಗಳನ್ನು ಮಾಡುತ್ತಿದ್ದುದಕ್ಕೆ ಪ್ರತಿಬಂಧವುಂಟಾಗುವುದು.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿರುವ ಸುಪ್ರಸಿದ್ಧ ಎಡಿಸನ್ ಕಾರ್ಖಾನೆಯವರು ಯಂತ್ರಾಲಯಗಳ [illegible] ಗಳಿಂದ ಹೊರಡುವ ಕಲ್ಲಿದ್ದಲ ಹೊಗೆಯನ್ನು ಅಡಗಿಸುವುದಕ್ಕೆ ಒಂದು ಉಪಾಯವನ್ನು ಈಗ ಕಂಡುಹಿಡಿದಿದ್ದಾರೆ. ದೊಡ್ಡದೊಡ್ಡ ಯಂತ್ರಾಲಯಗಳು ತುಂಬಿರುವ ಮಹಾಪಟ್ಟಣಗಳಲ್ಲಿ ಹೊಗೆಯು ಅನಂತರವು ಎಷ್ಟಿರುವುದೆಂಬುದು ಬೊಂಬಾಯಿಯಂಥ ಪಟ್ಟಣಗಳನ್ನು ನೋಡಿರುವವರಿಗೆ ಸ್ವಲ್ಪಮಟ್ಟಿಗೆ ಗೊತ್ತು [illegible] ಹೊಗೆಯು [illegible] ಆ ಕಾರ್ಖಾನೆಯವರು [illegible] ದೊಡ್ಡ ಯಂತ್ರದ [illegible] ಸೇರಿಸಿ ಅಡಿಗೆ ಅದನ್ನು [illegible] ಅಲ್ಲಿ [illegible] ಮೇಲಕ್ಕೆ ಏಳುವುದಕ್ಕೆ [illegible] ಅದರೊಳಗಿರುವ [illegible] ತಾಕೋಗುವುದು [illegible] ಎಲ್ಲಾ [illegible] ಆಗುವುದು [illegible]

[illegible] ಅವರ [illegible], ಅದರಿಂದ ಯಂತ್ರಗಳನ್ನು [illegible] ಯಂತ್ರಗಳ [illegible] ದೊಡ್ಡ [illegible] ಎಂದು [illegible] ನೀರು [illegible] ವರು ಅದರಿಂದ [illegible] ಆ [illegible] ಈಗ ಇಂಥ ಯಂತ್ರಗಳ [illegible] ನೂತನ ರೀತಿಯಿಂದ [illegible] ಯಂತ್ರ [illegible] ಅದರ [illegible] ಮೇಲೆ ಹೇಳಿದಮೇರೆಗೆ ಯಂತ್ರಗಳನ್ನು [illegible] ಮಾಡಬಹುದು. [illegible] ಯಂತ್ರಕ್ಕೆ ಕಲ್ಲಿದ್ದಲನ್ನು ಉಪಯೋಗಿಸಿ ಕೆಲಸವನ್ನು ಮಾಡಿಸುವಾಗ [illegible] ರೂ ಗಳ ವೆಚ್ಚವು ಹಿಡಿಯುತ್ತಿದ್ದರೆ ಅಷ್ಟೇ ಕೆಲಸವನ್ನು ಇದರಿಂದ [illegible] ದಿರುವುದಕ್ಕೆ [illegible] ರೂ ಗಳ ವೆಚ್ಚವು ಮಾತ್ರ [illegible] ವುದಂತೆ

ಅಮೇರಿಕಾದ [illegible] ಯಲ್ಲಿರುವ [illegible] ರವರ [illegible] ಯನ್ನು [illegible] ದೇಹದ [illegible] ಮಧ್ಯಕಾಲದಲ್ಲಿ [illegible] ನಿಮಿಷಗಳ [illegible] ಹೃದಯಚಲನೆಯು ನಿಂತುಹೋದರೆ ಥಟ್ಟನೆ ಮರಣವುಂಟಾಗುವುದೆಂದೂ ಅಂಥ [illegible] ಇದುವರೆಗೆ ವೈದ್ಯರುಗಳು [illegible] ಇವರು [illegible] ಅಂಗಗಳ [illegible] ಯೋಗದಿಂದ [illegible] ಮಾಡಿಸುವುದರಿಂದ [illegible] ಅಮೇರಿಕಾದೊಳಗಿನ [illegible] ಇವರ [illegible] ಮೊದಲಾದ ಅಂಗಗಳು [illegible] ಬೇರೆಬೇರೆ ಯಾವಾಗಲೂ ಸಿದ್ಧಮಾಡಿ [illegible] ರೋಗಿಗಳು ಬಂದರೆ ಅವರ [illegible] ಆ ಸ್ಥಳಕ್ಕೆ [illegible] ಸಿದ್ಧವಾಗಿ [illegible] ಅಂಗ [illegible] ಮರಣ [illegible] ಅಭಿಪ್ರಾಯವಂತೆ [illegible] ಆವಶ್ಯಕವೆಂದು [illegible] ವನ್ನು [illegible]

[illegible]

ಪತ್ರವ್ಯವಹಾರ

ಧಾರವಾಡಜಿಲ್ಲಾ ಅರಟಾಳ ಗ್ರಾಮದಲ್ಲಿ ತಾ॥ ೩-೧-೧೮ ಇದರಂದು ದಿವಸ ಹಾಂಬಳದ ಸಮಾಧಾನ ವಿದ್ಯಾಪ್ರಿಯ ರಾ॥ ಬ॥ ರುದ್ರಗೌಡ, ಚನ್ನವೀರಗೌಡ ಅರಟಾಳ ಎಮ್. ಎಲ್. ಸಿ. ಓ. ಬಿ. ಇ. ಡಿ. ಕಲೆಕ್ಟರ ಬೆಳಗಾವ ಇವರು ತಿತಕ್ಕಿಯ ಮಾರ್ಗವಾಗಿ ಬೆಳಗಾವಿಯಿಂದ ಮೋಟಾರಗಾಡಿಯ ಮೇಲೆ ಅರಟಾಳಕ್ಕೆ ಹೋಗುವಾಗ ದಾರಿಯಲ್ಲಿ ತಿತಕ್ಕಿಯ ಶಾಲೆ ವಿದ್ಯಾರ್ಥಿಗಳೂ ಕೆಲ ಪುರಜನರೂ ಕಾದು ಕೊಂಡಿದ್ದು ಗಸ್ತಿಯ ಮೇಲಿರುವ ಧರ್ಮಶಾಲೆಯಲ್ಲಿ ಈ ಹೊತ್ತು ಮಧ್ಯಾಹ್ನದ ೧೧ ಘಂಟೆಗೆ ರಾ॥ ಬ॥ ರವರಿಗೆ ಪಾನಸುಪಾರಿ ಮಾಡಿದರು ಆ ವೇಳೆಯಲ್ಲಿ ಪಿಯಾನೋ ಪೆಟ್ಟಿಗೆಯ ಸ್ವರದಲ್ಲಿ ವಿದ್ಯಾರ್ಥಿಗಳು ಅಂದ ಸ್ವಾಗತಪದವು ರಾಷ್ಟ್ರಗೀತವೂ ಶ್ರೋತ್ರೀಯವಾಗಿದ್ದವು ಈ ಸಮಯದಲ್ಲಿ ಮಿ॥ ಇನಾಮದಾರ ತಾಲೂಕ ವಕೀಲರೂ ಇವರೂ ಪೋಸ್ಟಮಾಸ್ತರರೂ ಶಾಲಾಮಾಸ್ತರ ಜನರೂ ಗ್ರಾಮಸ್ಥರೂ ಮಿ॥ ಪಾಟೀಲ, ಬಾಪಿ, ನಾಗಲಾಪುರ ಮೊದಲಾದ ಕುಮುಖಂಡ ಜನರೂ ಹಾಜರಿದ್ದರು. ವಿದ್ಯಾರ್ಥಿಗಳ ಮಂಜುಳವಾದ ಗಾನರಸದಲ್ಲಿ ರಾ॥ಬ॥ ರವರು ಅರ್ಧತಾಸು ವಿಶ್ರಾಂತಿಯನ್ನು ಹೊಂದಿ ಆಭಾರ ಮನ್ನಿಸಿ ೧೧॥ ಘಂಟೆಗೆ ರಥಾರೂಢರಾಗಿ ಅರಟಾಳಾಭಿಮುಖರಾದರು

ತಮ್ಮ ಚಂದಾದಾರ,
ಮಹಾಂತಪ್ಪ ಸಂಗೊಳಿ.

೨೧-೮-೧೮

ಶ್ರೀ ಬಸವೇಶ್ವರ ಜಯಂತ್ಯುತ್ಸವ

ದಾವಣಗೆರೆ ತಾಲ್ಲೂಕು ಅಣಜಿಗ್ರಾಮದಲ್ಲಿ ಇದೇ ವೈಶಾಖಶುದ್ಧ ತೃತೀಯ (ತಾ॥ ೨೩ ೪ ೧೮) ಮಂಗಳವಾರದಲ್ಲು ಶ್ರೀ ಬಸವೇಶ್ವರ ಹುಟ್ಟಿದ ಹಬ್ಬವನ್ನು ಸಗ್ರಾಮಸ್ಥರೇ ಕೊಂಬುದಾಗಿ ಮಿ॥ ರಾ॥ ಶ್ರೀ ವಟಲ್ ಪಟೀಲರವರು ಡಂಗುರ ಹೊಡಿಸಿ ಪ್ರಸಿದ್ಧಪಡಿಸಿದ ಮೇರೆಗೆ ತಮ್ಮ ತಮ್ಮ ಮನೆಗಳಲ್ಲಿ ಅತಿ ಉತ್ಸಾಹದಿಂದ ಮಾಡಿದ್ದಲ್ಲದೆ ಸದ್ಧಕ್ತಿ ಯಿಂದ ಶ್ರೀ ನಂದೀಶ್ವರ ದೇವಾಲಯದಲ್ಲಿ ಚಪ್ಪರ ತಳಿರು ತೋರಣಗಳಿಂದಲಂಕರಿಸಿ, ಶ್ರೀ ಮರುದಿ ಬಸವೇಶ್ವರ ಸ್ವಾಮಿಯನ್ನು ಮಧ್ಯಾಹ್ನದಲ್ಲಿ ಶೇಖರಿಸಿದರು ಮಹಾಪೂಜೆ ಗೈದು ಪೂಜಾದಿಗಳಿಂದಚರಿಸಿ ನೈವೇದ್ಯದ ಬಳಿಕ ಸಾಯಂಕಾಲದಲ್ಲಿ ಶ್ರೀ ಮರುದಿ ಬಸವೇಶ್ವರ ದೇವನನ್ನು ಶ್ರೀ ಬಸವೇಶ್ವರ ಫೋಟೋವನ್ನು ಸಹ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮದ್ದು ಬಿರುಸು ಮುಂತಾದ ವಿನೋದಕರವಾದ ಸುತ್ತು ವಾದ್ಯಗಳೊಡನೆ ಮೆರವಣಿಗೆ ಮಾಡಿ, ಆನಂದದಿಂದ ಪೂಜೈಸಿದರು ಈ ಕಾರ್ಯದಲ್ಲಿ ಮುಂದಾಳುಗಳಾಗಿದ್ದ ಮಿ॥ ರಾ॥ ಶ್ರೀಗಳಂದ, ಎ ಎ ಸಿದ್ಧಲಿಂಗಪ್ಪನವರು, ಕುರವ ತಿಪ್ಪಯ್ಯನವರು, ಕೆ ಬಸಪ್ಪ ಶಿವಲಿಂಗಪ್ಪನವರು ಹೆಚ್. ಶಿದ್ಧಯ್ಯನವರು, ಗೌಡನಾಗಪ್ಪನವರು, ಹ್ಯಾಳೇದ ಗುರುಶಾಂತಪ್ಪ, ಕೊಟ್ರಕೊಟ್ರಪ್ಪ, ಕೊಡಬಗೆರೆ ನಾಗಪ್ಪನವರು, ಘನೀಮಳೆ ಚನ್ನವೀರಪ್ಪನವರು, ಮಲ್ಲೇಶಪ್ಪ ತಿಪ್ಪೇರುದ್ರಪ್ಪ, ಕಂಬೆಕೆರೆ ಸಿದ್ದಲಿಂಗಪ್ಪ, ಕಿವುಡರು ಶಾಂತವೀರಪ್ಪ, ಕಿವುಡರು ಶಿದ್ದಪ್ಪ, ಮುಂತಾದವರಿಗೆ ಆಯಾ ಸಾರ್ವಜನಿಕರನ್ನು ನಮಾಶಿಸನು ಸದಾಕಾಲವಿ ಎಂಬುದಾಗಿ ಬೇಡುತ್ತೇವೆ ಈ ಪದ್ಧತಿಯನ್ನು ಅನುಸರಿಸಿ ತಿತಕ್ಕಿ ಸುಗ್ರಾಮದಲ್ಲಿ ಮಿ॥ ಕೊಪ್ಪದಯ್ಯನವರು, ಸ್ಕೂಲ್ಮಾಸ್ತರ ಇವರ ಪ್ರೋತ್ಸಾಹದಿಂದಲೂ ಆಂಗ್ಲೇಯರಲ್ಲಿ ಮಿ॥ ರಾ॥ ಸಾಹುಕಾರ ಚಿಕ್ಕಮಠ ಗುರುಸಿದ್ಧಯ್ಯನವರ ಪ್ರೋತ್ಸಾಹದಿಂದಲು, ಹುಲಿಕಟ್ಟಿಯಲ್ಲಿ ಮಿ॥ ಬಸಪ್ಪ, ಮಹದೇವಪ್ಪ, ಮಾಗಪ್ಪ ಇವರ ಪ್ರೋತ್ಸಾಹದಿಂದಲು ಹಬ್ಬವನ್ನು ನಡೆಸಿದ್ದಾಗಿ ಕೇಳುತ್ತೇವೆ ಪ್ರತ್ಯಕ್ಷದರ್ಶಿ.

ಶ್ರೀಬಸವೇಶ್ವರ ಜಯಂತ್ಯುತ್ಸವ ದಾವಣಗೆರೆ

ಕಳೆದ ತಾ॥ ೨೮ ನೇಯ ಮಂಗಳವಾರ ಗ್ರಾಮವು ತಳಿರು ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು ಈ ಜಯಂತ್ಯುತ್ಸವವನ್ನು ಆಚರಿಸಲು ಜನಗಳು ಬಹು ಉತ್ಸಾಹಿಗಳಾಗಿದ್ದರು ಪ್ರಾತಃಕಾಲ ೬ ಘಂಟೆಯಿಂದ ೯ ಘಂಟೆಯವರೆಗೆ ಇಲ್ಲಿನ "ಶ್ರೀವಿರಕ್ತಮಠದ ಮುರುಘರಾಜೇಂದ್ರ" ಭಜನಾ ಸಂಘದವರು ಊರಲ್ಲಿ ಶಿವಕೀರ್ತನವನ್ನು ಮಾಡುತ್ತ ಸಂಚರಿಸಿ ಕೊನೆಗೆ ವಿರಕ್ತಮಠವನ್ನು ಸೇರಿದರು ಅನಂತರ ಇಲ್ಲಿನ "ಯಂಗ್‌ಮೆನ್ಸ್ ಸೊಸೈಟಿಯವರು" ಈ ವರ್ಷ ಈ ಜಯಂತಿಯ ನಿಮಿತ್ತ ಸ್ಥಾಪಿಸಿದ "ಶ್ರೀಬಸವೇಶ್ವರ ಜಯಂತಿ ಸ್ಕಾಲರ್‌ಸಿಪ್" ಎಂಬ ಧನರಾಶಿಗೆ ಚಂದಾಕೇಳಲು ಊರಲ್ಲಿ ಸಂಚರಿಸಿ ಸುಮಾರು ೧೨೫ ರೂ ಗಳನ್ನು ಕೂಡಿಸಿದರು ಈ ದ್ರವ್ಯವನ್ನು ನಮ್ಮ ಮಠದ ನಮ್ಮ ಲಿಂಗಾಯತರ ಯಾವ ವಿದ್ಯಾರ್ಥಿಯು ಮೆಟ್ರಿಕ್ ಆಗಿ ಇದರ ಬೆಟ್ಟಿನ ಪರೀಕ್ಷೆಯಲ್ಲಿ ಉತ್ತೀರ್ಣನಾಗುವನೋ ಅವನಿಗೆ ಕೊಡಲ್ಪಡುವುದೆಂದು ಇಲ್ಲಿನ ವೀರಶೈವ ಹಿತೋದ್ದೇಶಕ ಸಂಘದವರು ಯೋಚಿಸಿರುತ್ತಾರೆ ಈ ಸಂಘದವರು ನಡೆಸಿದ ಈ ಜಯಂತ್ಯುತ್ಸವವನ್ನು ಹೀಗೆ ಬೇರೆ ಗ್ರಾಮದವರು ಅನುಸರಿಸಿದರೋ ಅವರಿಗೆ ಹೇಳಲು ಈ ಅತ್ಯಂತ ಪ್ರಯೋಜನವಾದ ಧನರಾಶಿಯನ್ನು ಸ್ಥಾಪಿಸಿರುತ್ತಾರೆ, ಸಾಯಂಕಾಲ ೬ ಘಂಟೆಗೆ ಇ

ಲ್ಲಿನ ಮಹಾಮಠದ ಸೇರಿದ್ದರು. ದೇವಾಪುರದ ಮಿ॥ ಬಸವಲಿಂಗಪ್ಪ ನವರು ಶಿವಭಕ್ತಿಪರಾಯಣರಾದ ಬಾಲಕನೊಬ್ಬ ಕಥೆಯನ್ನು ಕೀರ್ತನರೂಪವಾಗಿ ೩ ತಾಸಿನ ವರೆಗೆ ಸುಲಲಿತವಾಗಿ ವಿವರಿಸಿದನಂತರ ಶ್ರೀರಂಗಪಟ್ಟಣದ ಮಿ॥ ಸಿದ್ಧಲಿಂಗದೇವರವರು ಶ್ರವಣೀಯವಾದ ವಿಷಯದಲ್ಲಿ ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದಬಳಿಕ ಮಿ॥ ಧರ್ಮಾಧಿಕಾರಿ ಎಡಿಟರವರು ಸಮಯೋಚಿತವಾದ ವಿಷಯಗಳನ್ನು, ನೂತನವಾಗಿ ಸ್ಥಾಪಿಸಿದ "ಶ್ರೀಬಸವೇಶ್ವರ ಜಯಂತಿ ಸ್ಕಾಲರ್‌ಶಿಪ್ಪಿನ" ಸಂಬಂಧವಾದ ಪ್ರಯೋಜನವನ್ನು, ಸಭಿಕರಿಗೆ ತಿಳಿಸಿದನಂತರ ಸಭೆಯು ಮುಕ್ತಾಯವಾಯಿತು. "ಓರ್ವಪ್ರೇಕ್ಷಕ"

ನೋಟೀಸು.

ರಾ॥ ರಾ॥ ಶಾಂತಪ್ಪ ಚನ್ನಗುಂಡಬಸಪ್ಪ ಸೊಪ್ಪಣ್ಣನವರ ಸಾ॥ ಬಂಕಾಪೂರ ಇವರಿಗೆ-ಕೆಳಗೆ ಸಹಿಮಾಡಿದವನ ಕಡೆಯಿಂದಾ ತಿಳುಹಿಸುವದೇನಂದರೆ-ಮುರಗೆಪ್ಪ ಚೆನ್ನೇರಿ ಬಂಕಾಪೂರ ಇವರ ಸಾಲದ ಫೇಡೀಗೆ ಮತ್ತು ಸಂಡಿಮ ಕಾ॥ಸಂಬಂಧಿ ಹಸ್ತಿತೀರಿಸೋ ಅಡಚಣೆಗೆ ಬಂಕಾಪೂರ ತಾಲ್ಲೂ ಖಾಜಾಪೂರಗ್ರಾಮದ ರಿಸಿಡನ್ಸ ಸರ್ವೆನಂಬರ ೨೩ ನೇ ಪೈಕಿ ಚ್ವಕರೆ ಜಮೀನು ನಿಮಗೆ ಖಬ್ಬಜಾವತ್ತಿ ಕೋರ್ಟದೋರಾಪನೀತ ಕರಾರಮಾಡಿ ತೋರಕೇಗೆ ೨೦೦೦ ರೂ ಖಾಯಕ್ಕೆ ನಿಮ್ಮ ಅನುಮತಿಯಂತೆ ನಿಮ್ಮ ವಿಶ್ವಾಸ ನನಗೆ ಇದ್ದದರಿಂದಾ ತಾ॥ ೧೮-೫-೧೯೧೮ ನೇ ಇಸ್ವಿದಿವಸ ನಿಮ್ಮ ಹೆಸರಿಲೆ ಕರಾರ ಖರೀದಿ ಅಂದರೆ ಹಣಾ ಕೊಟ್ಟಾಗ್ಯೆ ಜಮೀನು ಕರತ ಬಿಡೋ ಕರಾರಿನಿಂದಾ ಬರಕೊಟ್ಟು ಅದು ನಿಮ್ಮ ಕಡೆ ಪ್ರಕಾರಾ ನೊಂದಣಿಮಾಡಿ ಕೊಟ್ಟು ಅದರ ಖಾಬತ್ತ ಹಣಾ ನಿಮ್ಮ ಕಡೆಗೆ ಬಿಟ್ಟಿದ್ದೇನಷ್ಟೆ

ಸದ್ರಿಮುರಗೆಪ್ಪ ಚೆನ್ನೇರಿ ಯವರು ತಮ್ಮ ಎಲಾ ಹೀರಿಸಿಕೊಳ್ಳದೆ ಈ ದಿವಸ ನಿಪ್ಪಿದರು ಆದರೆ ಅವತ್ತಿನಿಂದಾ ೧೫ ದಿವಸದಲ್ಲಿ ಅವರ ಸಾಲ ಮುಕ್ತಾಮಾಡಿದರೆ ಜಮೀನು ನನ್ನ ಕಬ್ಬಾ ಬಿಡಲಿಕ್ಕೂ ಪ ಹಣಾಖರ್ಚಾ ಅಂದ ಖರ್ಚ್ಯ ಮಾವತಿಲೆತಲಿಕ್ಕೂ ಮತ್ತು ಖಬ್ಬಜಾವತ್ತಿ ಪತ್ರದ ಮೇಲೆ ಖರ್ಚಾಯ ಡಾಕಿ ಕೊಡಲಿಕ್ಕೂ ತಿರಾಮತ್ತ ಹಿದ್ದಾರು ಅವರಿಂದಾ ನನಗೆ ಪುಸ್ತಿಗೆ ಕೊಡಿಸಿರುತ್ತಾರೆ ಆದ್ದರಿಂದಾ ನಿಮಗೆ ಈ ನೋಟೀಸು ಕೊಡೋಭಾಗವಿತ್ತು.

ಸದರಹೂ ನಾನು ನಿಮಗೆ ತಾ॥ ೧೮-೫-೧೯೧೮ ನೇ ದಿವಸ ನೊಂದಾಯಿಸಿ ಕೊಟ್ಟ ಕರಾರ ಖರೀದಿ ಖತ್ತಿಸಬಾಬತ್ತ ಹಣಾ ನಿಮ್ಮ ಕಡೆ ೧೯೦೦ ರೂಪಾಯಿ ಅಕ್ಷರಂದಲೂ ಹದಿನೆಂಟುನೂರಾಯಿಪ್ಪತ್ತು ರೂಪಾಯಿಗಳು ಬಿಟ್ಟದ್ದೊರೂ ಈ ದತ್ತಿನಿಂದಾ ಎಂಟುದಿವಸದೊಳಗಾಗಿ ನನಗೆ ತಂದುಕೊಡದೇ ಕೆ ನಾನು ನಿಮ್ಮ ಸಮಕ್ಷಮಾ ಬರೇದೆಂದರಲೇ ಸದ್ರಿ ಮುರಗೆಪ್ಪನವರ ಸಾಲ ಫೇಡಮಾಡಿ ನಿಮ್ಮ ಇಚ್ಛೆ ಪ್ರಕಾರ ಅನಿರಿಂದಾ ಹಣಾ ಫೇಡಾದ ಬಗ್ಗೆ ಕಾಗದ ಪತ್ರಗಳವೇಲಿ ಬರ್ಮಾಯಿತಗೆಂತು ಅವು ದಾಖಲೇದ ಬಗ್ಗೆ ನಿಮಗೆ ಕೊಡುತ್ತೇನೆ ಮತ್ತು ನಿಮಗೆ ಪತ್ರಿ ಬರಕೊಟ್ಟ ಜಮೀನನ್ನು ಬಿಲ್ಲವರಿಂದಾ ಅಳತಿಮಾಡಿಸಿ ಹದ್ದು ಕಾಯಿನ್ನ ಮಾಡಿಸಿ ಕೊಡುತ್ತೇನೆ ಮತ್ತು ನಮ್ಮ ರೈತರಿಗೆ ಸಮಜಾತಿ ಹೇಳಿ ಅವರ ಜೋಳಿಕೆ ತಿರಿಕೊಂಡವರಿಗೆ ನಿಮಗೆ ಆ ಜಮೀನುಗುತ್ತಿಗೆ ಅವರಿಂದಾ ಲಾವಣಿ ಚೀಟಿರದಾ ಬರಸಿಕೊಡುತ್ತೇನೆ ಪರಂತು ಈ ವತ್ತಿನಿಂದಾ ಎಂಟು ದಿವಸದೊಳಗಾಗಿ ನಿಮ್ಮ ಮಾಲವತ್ತ ಹಣಾ ಕಟ್ಟಿಕೊಂಡು ಬಂದು ನನಗೆ ಕೊಟ್ಟು ಸದರಿ ಪ್ರಕಾರ ಯಾವತ್ತು ಕೆಲಸಗಳು ಮುಕ್ತಾ ಮಾಡಿಕೊಂಡು ಜೋಗಡೇಕಸ್ಸ ನೀನು ಎಂಬು ನಿವಸದಲ್ಲಿ ಖಾರದೆ ಸುಸ್ತಿಮಾಡಿದರೆ ಮುರಗೆಪ್ಪನವರು ಹಣಾ ತಿರಿಕೊಳ್ಳಲಿಕ್ಕಿಲ್ಲ ಮುಂದಿನ ಸಾಲ ಅಟ್ಟರವರಿಗೆ ಮುರಗೆಪ್ಪನವರು ನನ್ನ ಜಮೀನು ಬಿಡಲಿಕ್ಕಿಲ್ಲಾ ಅದರಿಂದಾ ನನಗೆ ಭಾರಿ ಲುಕ್ಸಾನ ಆದೀತು ಮುಂಚಿನ ನಿಮ್ಮಲ್ಲಿ ನಾನು ಸಾಲಾ ಖಾರೋ ಇರಾದೆಮಾಡಿದ್ದು ಮುರಗೆಪ್ಪನವರ ಹಣಾ ತೀರಿಸಿ ಅವರ ಆರಾಮದ ಜಮೀನು ಬಿಡಿಸೋ ಅಂತ್ಯಾದಿಂದಲೇ ಮಾಡಿರುತ್ತೇನೆ ಈ ನನ್ನ ಇಚ್ಛಾ ಈ ಕಾಲಕ್ಕೆ ಪೂರ್ಣ ಆಗದಿದ್ದರೆ ಮುಂದೆ ನನಗೆ ಈ ಕರಾರ ಖರೀದಿ ಸಂಬಂಧ ನಿಮ್ಮಲ್ಲಿ ಹಣಾ ತಕ್ಕೊಳ್ಳುವದು ಗರ್ಜಯಿಲ್ಲಾ, ಸದರಿ ಖತ್ತಿನಬಾಬತ್ತ ನಂದಿ ಕಂಟ್ರಾಕ್ಟಗೆ ಅಂತಾ ತಗೆಂಡ ಬಂದನೂರ ಯೊಂಭತ್ತು ರೂಪಾಯಿ ನಾನು ನಿಮಗೆ ವಾಪಸು ಕೊಟ್ಟು ಬಿಡುತ್ತೇನೆ. ಅವು ತಕ್ಕೊಂಡು ಆ ಕರಾರ ಖರೀದಿ ಬಗ್ಗೆ ಖಾಯಿದೆ ಸೀರ ಲೇಖಾ ಬರಕೊಟ್ಟು ಅದು ವಾಪಸು ನನ್ನದು ನನಗೆ ಕೊಟ್ಟುಬಿಡಬೇಕು. ಇದ ಈ ರೀತಿ ನೀವು ಮಾಡದಿದ್ದರೆ ಸದರಿ ಕರಾರಖರೀದಿ ಫೇಕಳವೆಂತಲೇ ವಬನ ಮುಂದಕಲೆವದ್ದರ್ದಂತಲೇ ತಿಳಕೊಳ್ಳತಕ್ಕದ್ದು. ಮುಂದೆ ಆ ಖರೀದಿ ಪತ್ರದವರಿಂದಾ ಸದರಹೂ ಜಮೀನಿನ ಮೇಲಿನ ಸ್ವತ್ವ ಯಾವದೇ ನಮಗೆ ಹಕ್ಕು ಪ್ರಾಪ್ತವಾಗಲಾರದು, ಅದು ರದ್ದುಬ ಖಾತೆಯಲ್ಲಾ ಆವೆ. ಇಲ್ಲಿ ಅದ್ದುಮಿಯ್ಯ ವಿಲೆಕರಪತ್ರೇವಿ ಪ್ಯಾ ಅರ್ಟೀ ಕರಾರು ಇವರ ಯಾದಗ್ಗ ಟಿಪ್ಪಣಿ ಗುರ್ತುನ ರಾಖು ಇತಿ, ಬಂಕಾಪೂರ, ತಾ॥ ೨೩-೫-೧೯

... ರೂಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ.

3

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವದು

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣಪರಿಯಂತರವೂ ದುಃಖಿಸುವವರು ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ದಿನ ಸೇವನೆಯಿಂದ—

ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಕ್ಷಣಕ್ಷಣಕ್ಕೂ ಮೂತ್ರನಾಗುತ್ತಿದ್ದರೂ, ಮೂತ್ರದ ಉರಿಯುತ್ತಿದ್ದರೂ, ಮೂತ್ರದ ಕೂಡಿಗೆ ವೀರ್ಯವು ಸೋರುತ್ತಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದು ಇತ್ಯಾದಿ ರೋಗಗಳೆಲ್ಲವೂ "ಪಂಜಾಬ್ ಸಾಲಾಮಿಸ್ರಿಮುರಬ್ಬಾ"ದ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಪುಷ್ಟಿಯುಳ್ಳದ್ದನ್ನಾಗಿಯೂ ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು. ಹೊಟ್ಟೆಯಲ್ಲಿರುವ ಜ್ವರದ ಗಡ್ಡೆಯನ್ನು ನಾಶಪಡಿಸುವುದು ಜ್ವರ ಮುಂತಾದ ರೋಗಗಳನ್ನು ನಿರ್ಮೂಲಪಡಿಸುವುದು

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ, ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ದೊರೆಯುವುದು. ಪಂಜಾಬಿನವರು ಸಾಲಾಮಿಸ್ರಿಯ ಹಣ್ಣನ್ನು ಹಿಡಿದು ತಿನ್ನುವರು. ಶೆತ್ಯಬಲ್ಲ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳೆಗಡ್ಡೆ, ತಾವರೆಗಡ್ಡೆ, ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೇ ತರಕಾರಿಯೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ವಸೂಲುಮಾಡಬಹುದು, ೧೪ ತೋಲದ ಮುರಬ್ಬಾವಿರುವ ಡಬ್ಬಿಗೆ ೧ ರೂ ೮ ಆಣೆ; ವಿ.ಪಿ. ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ

ಅತ್ಯುತ್ತಮವಾದ ನಾನಾ ಔಷಧಗಳು

೧. ಧಾತುಪುಷ್ಟಿಚೂರ್ಣ- ಕ್ರಯ ೪ ಆಣೆ.
೨. ರೋಮನಾಶಕ ಮತ್ತು ವೃದ್ಧಿಕರವಾದ ತೈಲವು ಬೇಳೆಗಳ ಬೆಳೆಯುವದಕ್ಕೂ ಮತ್ತು ಕೂದಲು ಬೆಳೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ.
೩. ಚಿಂತನಿವಾರಣ ತೈಲವು ಕ್ರಯ ೮ ಆಣೆ.
೪. ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೩ ಪೈ.
೫. ಕೆಮ್ಮಲು ರೋಗಕ್ಕೆ ಔಷಧ ೭ ಆಣೆ.
೬. ವ್ರಣಕ್ಕೆ ಔಷಧ ೬ ಆಣೆ.
೭. ಅತ್ಯಂತ ಶಕ್ತಿಕರವಾದ ವೀರ್ಯಸ್ತಂಭದ ಗುಳಿಗೆ ೮ ಆಣೆ.
೮. ತಲೆನೋವಿಗೆ ತೈಲವು ೨ ಆಣೆ ೩ ಪೈ.
೯. ಪ್ರಮೇಹ ನಿವಾರಣ ಭಸ್ಮವು-೪ ಆಣೆ.
೧೦. ಬಿಳಿ ಕಾರಕಕ್ಕೆ ಮಾತ್ರೆಗಳು-ರೂ. ೧
೧೧. ಮೂಲವ್ಯಾಧಿಗೆ ಔಷಧ-೪ ಆಣೆ.
೧೨. ರಕ್ತಕ್ಕೆ ಸಂಬಂಧ-೭ ಆಣೆ.
೧೩. ದಂತಚೂರ್ಣವು-೧ ಆಣೆ ೩ ಪೈ.
೧೪. ಕೂದಲು ಬೆಳೆಯುವ ಎಣ್ಣೆ (ಪಿಂಟೋಲ ವೈಲ) ೪ ಆಣೆ

ವಿಳಾಸ:— ಡಿ. ಪನ್ನಾಲಾಲ್, ಡಿಲ್ಲಿ ವೈದ್ಯರು, ೧೩, ಹಳೇ ಸಿದ್ದಿಕಟ್ಟೆ, ಬೆಂಗಳೂರು

ಕೇವಲ ವನಸ್ಪತಿಗಳಿಂದಲೇ ತಯಾರಿಸಿದ

ಮಾತ್ರೆಗಳು ಬಂದಿವೆ.

23

ರಕ್ತಶುದ್ಧಿ ಮತ್ತು ರಕ್ತವೃದ್ಧಿಯು ಬೇಕಾದರೆ ಅತಿಉತ್ತಮ ಔಷಧ! (ಗುಣವಾಗದಿದ್ದರೆ ಹಣ ಮರಳಿ !!) ಔಷಧ !!!

ಈ ಔಷಧವನ್ನು ಸ್ತ್ರೀಯರು, ಬಾಲಕರು, ಮುದುಕರು ಎಲ್ಲರೂ ಸೇವಿಸಬಹುದು, ವಾತರೋಗಪೀಡಿತರು ರಕ್ತಪಿತ್ತರೋಗವುಳ್ಳವರು, ತೃಷೆಯುಳ್ಳವರು, ಪದ್ಮರೋಗವುಳ್ಳವರು, ಕೆಮ್ಮುಳ್ಳವರ ಕಫ, ಉಬ್ಬಸದವರು, ಮೂಲವ್ಯಾಧಿಯುಳ್ಳವರು, ಪಾಂಡುರೋಗವುಳ್ಳವರು, ಮೇಹಸಂಬಂಧದ ರೋಗಬಿದ್ದವರು, ಧಾತುರೋಗವುಳ್ಳವರು, ಉಷ್ಣರೋಗವುಳ್ಳವರು ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನನಷ್ಟ ಇವು ಗುಣವಾಗಿ ಧಾತುಪುಷ್ಟಿ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಗರ್ಮಿ, ಟಾಕಿ, ಗುಪ್ತವ್ಯಾಧಿಯಿಂದ ಮೇಲೆ ಹುಟ್ಟಿಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತವೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೪೦ ತೊಲೆಯವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೊಲೆಗೆ ರೂ ೩-೪-೦ ೪೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಮಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ —ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನ್ನಡ.

33

ದೊಡ್ಡ ಕಂಪನಿ! ಯೋಗ್ಯವಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಶ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನೂ, ವಿಶ್ವೇಶ್ವರನ ೩ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಎಂ. ಎನ್. ಮತ್ತು ಕಂಪೆನಿ,

ಬನಾರಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.



ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ವಿರದ ನಮೂನೆಯಲ್ಲಿ ದೊರೆಯುವುವು. ಮತ್ತು ಇವುಗಳಲ್ಲದೆ ರೇಶ್ಮೆ ಮುಗುಟ, ಕಾಶ್ಮೀರ ಶಾಲು, ರೇಶ್ಮೆ ಜರಿ ಸೀರೆ, ಜರಿಕಣ, ಪೇಟ, ಮೊಳಕಾಲ್ಮೂರು ನಮೂನೆ ವಸ್ತ್ರ, ಜಗನ್ನಾಥ ಜಾಗಂಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರ್ಮನ್ ಬೀಗ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಟ್ಟಿರುವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು.

ರುದ್ರಾಕ್ಷಿಗಳ ವಿವರ.—

ಮುಖ ರುದ್ರಾಕ್ಷಿ ಕೆಂಪು ಅಂದರೆ ೫ ಮುಖದ ಸರ ೧ ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ. ೫ ಮುಖದ ಕೆಂಪು ೧ ಕ್ಕೆ ೪ ಆಣೆಯಿಂದ ೩೦ ರೂಪಾಯಿವರೆಗೆ. ೬ ಮುಖದ ಕೆಂಪು ೧ ಕ್ಕೆ ೧೨ ಯಿಂದ ೧೦೦ ರೂ ವರೆಗೆ. ೭ ಮುಖದ ಕೆಂಪು ೧ ಕ್ಕೆ ೧೦ ರೂ ಯಿಂದ ೧೫೦ ರೂ ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ ಕ್ಕೆ ೫ ರೂ ಯಿಂದ ೩೦೦ ರೂ ವರೆಗೆ ಇದರಲ್ಲಿಯೇ ಕೆಂಪು ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯ, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ ೫ ರಿಂದ ರೂ ೩೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಆರಂಭವಾಗುತ್ತದೆ ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೆ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ಕ್ಕೆ ರೂ ೫ ಆರಂಭವಾಗುತ್ತದೆ ರೂ ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,

17 ಬನಾರಸ್ ಸಿಟಿ

ದಿ ಜನರಲ್ ಏಜನ್ಸಿ, ಮೈಸೂರು

ಕಾದಂಬರಿಗಳು — ಚಂಡಮಾರುತ ೦-೨-೦, ಚರಿತ್ರಾವೃತ್ತಂ ೦-೪-೦, ರಾಜಕೀರ್ತಿವಲ್ಲರಿ ೦-೪-೦, ಪೀಟರ್ ಚರಿತ್ರೆ ೦-೨-೦, ವಿಯೋಗಿನಿ ೦-೩-೦, ಉನ್ಮತ್ತ ೦-೨-೬, ಸೀತೆ ೦-೪-೦, ಸಂಹಸಿಕೆ, ಕಲ್ಯಾಣನಾಥ ೦-೪-೦, ಮಹಾಲಕ್ಷ್ಮಿ ೦-೨-೦, ಕಾಂತಾಸುಂದರಿ ೦-೪-೦, ಪದ್ಮಿನಿ ೦-೨-೦, ಸತ್ಯಸಂಜೀವಿನಿ ೦-೪-೦, ಕೋಹಿನೂರು ೦-೧೨-೦, ಆನಂದಮಠ ೧-೦-೦, ರಾಧಾರಾಣಿ ೦-೩-೦, ಸೀತಾಪವನವಾಸ ೦-೧೨-೦, ರಜನಿ ೦-೧೨-೦ 45

ಬಿಸಿಲುಗಾಲದ ಆಯಾಸವನ್ನೂ ಬಾಯಾರಿಕೆಯನ್ನೂ ಪರಿಹರಿಸಿ ಸಂತುಷ್ಟಿ ಉಂಟುಮಾಡುವ ಆನಂದವನ್ನು ಉಪಯೋಗಿಸಿ

33 ಮಹಾತ್ಮರಲ್ಲರ ಸರ್ಟಿಫಿಕೇಟು ಪಡೆದ

ಬಿ. ವಿ. ಪಂಡಿತರ

ಆನಂದ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್ ಸ್ವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅತೀವ ಫಲವಾದ ಸುವಾಸನೆಯುಳ್ಳ ಈ ಮಾತ್ರೆಗಳ ಕಲ್ಪಾತಿಶಯಗಳನ್ನು ತಮ್ಮ ಮಿತ್ರರಲ್ಲಿ ಪ್ರಚಾರಪಡಿಸುತ್ತಿದ್ದಾರೆ. ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ.

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮಸ್ತರೋಗ ಮಲಬಂಧ, ಹೊಟ್ಟೆನೋವು, ಸಾಧಾರಣ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅಜೀರ್ಣ, ತಲೆನೋವು, ವಾಂತಿ, ವಾಕರಿಕೆ, ಪಿತ್ತಸಂಕಟ, ಜಲದೋಷಗಳನ್ನು ಬಹುಬೇಗ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ. ೧೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಅನುಪಾನಪತ್ರಸಹಿತ ೦-೪-೦

ಶ್ರೀಕರ ಕಸ್ತೂರಿ ಮಾತ್ರೆ

ಈ ಮಾತ್ರೆಗಳನ್ನು ಒಂದೇಸಲ ಪರೀಕ್ಷಿಸಿರಿ. ಇದರ ಗುಣ ಮತ್ತು ಸುವಾಸನೆಗಳು ನಿಮಗೆ ಅನುಭವವಾಗುವುವು. ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತು ಸೋಂಕುರೋಗಸ್ಥಳದಲ್ಲಿರುವವರಿಗೆ ಈ ಮಾತ್ರೆಗಳು ಅಮೃತವೇಸರಿ. ಶೀತವಾತಜ್ವರ, ವಿಷಮಜ್ವರಗಳು, ನಡುನೋವು, ಕೆಮ್ಮು, ಅಗ್ನಿಮಾಂದ್ಯ, ಅಜೀರ್ಣ, ಹಲ್ಲುನೋವು, ಅತಿಸಾರ, ಭೇದಿ, ಮಲಬಂಧ, ಮೈಕೈನೋವು ಮತ್ತು ಬಾಧೆಗಳನ್ನು ಅತಿಶೀಘ್ರವಾಗಿ ಗುಣಪಡಿಸುತ್ತವೆ. ವಿಶದವಾದ ಅನುಪಾನ ಪತ್ರಸಹಿತ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೦-೧-೦. ನಾಲ್ಕಾಣೆ ಬೆಲೆ ಬಾಳುವ ಐದು ಸೀಸೆಗಳನ್ನು ಕೊಳ್ಳುವವರಿಗೆ ಒಂದು ಇನಾಮು. ಪಿ. ಎ. ಪ್ರತ್ಯೇಕ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಬಿ. ವಿ. ಪಂಡಿತ

ವೈದ್ಯರಾಜ್,

ಮುಂಬಯಿ

ಶ್ರೀಜಗದ್ಗುರು

ಚಿತ್ರದುರ್ಗದ ಮುರುಘಾಸ್ವಾಮಿಗಳ ಅತ್ಯಂತ ಸುಂದರವಾಗಿ ಕನ್ನಡದ ಬಣ್ಣ ಕೊಟ್ಟಿರುವ ಫೋಟೋ ೧ಕ್ಕೆ ಕ್ರಯ ೧೨ ಆಣೆ, ಶ್ರೀಗಳ ಕೊಲ್ಲಾಪುರದ ಉತ್ಸವದಲ್ಲಿ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ. ಕೊಲ್ಲಾಪುರದಲ್ಲಿ ವ್ಯಾಖ್ಯಾನದ ಸಮಾರಂಭದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಂಗನಾಥನ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ ಸೈಜು ಬಣ್ಣದ್ದು ೧॥ ರೂ ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ.

ಕೇವಲವು ಸುದರ್ಶನ ಚಕ್ರಸಹಿತವಾಗಿ ತನ್ನ ಚಿತ್ರದನ್ನು ವಹಿಸಿ ಶ್ರೀ ಶಿವನ ಪೂಜಾವಮಾಡುತ್ತಿರುವ ಫೋಟೋ ಕ್ರಯ ೧ಕ್ಕೆ ೧ ರೂಪಾಯಿ. ಶ್ರೀ ನಾರಾಯಣನ ವಧೆಯನ್ನು ಮಾಡಿರುವ ಶ್ರೀ ವೀರಭದ್ರಾವತಾರದ ಫೋಟೋ ೧ಕ್ಕೆ ಕ್ರಯ ಫುಲ್ ಸೈಜು ೧ ರೂಪಾಯಿ, ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ.

ಶ್ರೀ ಜಗದ್ಗುರು ಕೋಟೆಂಪವಾಸ್ಯಗೌಡ, ಶ್ರೀ ಜಗದ್ಗುರು ಮೂರುಸಾವಿರ ಮಠ ಶ್ರೀ ಸಿದ್ದಲಿಂಗಸ್ವಾಮಿಗಳು, ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳು, ಬಾಳೆಹೊನ್ನೂರು ಶ್ರೀಗಳ ಫೋಟೋ ಸಿದ್ಧವಿದ್ದವೆ. ಮತ್ತು ಸಂದಾ, ಗೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಎಂಬ ವಿರಕ್ತ ಹಿರೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಮಾಜ ಮಕ್ಕಳ ಫೋಟೋ ಸಿಗುತ್ತವೆ. ಇವುಗಳ ಕ್ರಯ ೧ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಬೊಂಬಾಯಿಯ ಶ್ರೀ ಶಿವಪ್ರಭುರವರು ಸರ್ವರಿಗೆ ಹಚ್ಚಬಲ್ಲಂಥ ..... ಪ್ರಕಾರ — ಫೋಟೋ ಕೆಂಪು ಸಹಿತ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು ಕ್ರಯ ಸಿಲ್ವರು ೧, ೨, ೧, ೧॥, ಪ್ರಕಾರ, ಮತ್ತು ಗೋಲ್ಡರು ರು ೧॥ ರೋಲ್ಡ್ ಗೋಲ್ಡು ಬಂಗಾರದ್ದು ದುರ್ಲಭದ ಗ್ಲಾಸದೂ ಕೆ, ರು ೩॥ ೩॥ ರೂ.

ಪೂರೈಸಿದ ಪಂಚಾಯತಿ ಕೊಡಿ ...... ಟಿಕೀಟು ಗಳುಹಿಸಿ ಕ್ಯಾಟಲಾಗು ...... ಕೊಳ್ಳಿರಿ ...... ಸಿದ್ಧವಿರುವ ...... ಬೀದಿ

10 ಆರ್ಟಿಸ್ಟ್ ಕೊಲ್ಲಾಪುರ

ಊದಬತ್ತಿಗಳು

4

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೪-೦-೦, ೩-೦-೦, ೨-೪-೦ ಇಲ್ಲಿದೆ; ಕಸ್ತೂರಿ ಎಲ್ಲೆ ತೋಲ ೧ಕ್ಕೆ ೧-೦ ಪಚ್ಚೆಗಂಧ ತೋಲ ೧ಕ್ಕೆ ೧೨ ಆಣೆ ದೆಶಾಂಗಧೂಪ್ಪ ೧ಕ್ಕೆ ೦ ಆಣೆ ಧೂಪದಕಡ್ಡಿ ೧ಕ್ಕೆ ೨ ಆಣೆ ಬಾಲಕ, ಪುನುಗ ತೊಲ ೧ಕ್ಕೆ ೭ ಆಣೆ ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯರು,

ಸುಗಂಧಕಾರಿ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಲ್ಯಾಟಿಸ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಂದೀಶ್ವರ, ಉಮಾಮಹೇಶ್ವರ, ಗಣೇಶ, ಕಲಶ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪಡೆಯೋಣ. ಇಲ್ಲಿ ಕಾಣದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ.

ಚೆನ್ನಾದ “ಗಿಲ್ಟ್” ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ಸೊಗಸಾಗಿ ಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೬-೦-೦ ರೂ ಆಗುತ್ತದೆ. ಹೀಗಲ್ಲದೆ ಪಡೆಯುವ ಪತ್ರಿಕೆಗಳು ಬೇಕಾದರೆ ಅವುಗಳ ಕ್ರಯ ೧ ರೂ ಕೊಡಬೇಕಾಗುವುದು. ಸಾಧಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೮-೦ ರೂಪಾಯಿ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೆ ೦-೧೦-೦ ಆಗುತ್ತದೆ. ಕಳುಹಬೇಕು ...... ಕಳುಹಿಸುವುದಿಲ್ಲ, ಕಾಗದದ ಬೆಲೆಯನ್ನೂ ...... ಅಂಚೆ ಕೂಲಿ ಪತ್ರವನ್ನೂ ಮುಂಚಿತವಾಗಿ ಕಳುಹಿಸಿ ಅಂದಾಜನ್ನು ಮುದ್ರಿಸಿದ ಅನಂತರ ಅದನ್ನೇ ಪರಿಶೋಧಿಸಿ ...... ಮುದ್ರಿಸುವ ...... ಮಾಡಿಕೊಂಡಿರುತ್ತದೆ ...... ಬೀದಿ ವಿಳಾಸವನ್ನೂ ......

...... ವಿಳಾಸ.

ಸಮಸ್ತ ವೀರಶೈವಬಾಂಧವರಿಗೆ ವಿಜ್ಞಾಪಿಸುವುದೇನೆಂದರೆ– ಕಳೆದವರ್ಷ ನಿಪ್ಪಾಣಿಯಲ್ಲಿ ಕೂಡಿದ್ದ ೩ ನೆಯ ವೀರಶೈವಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುವು. ಈ ಸಾಲಿನ ಬುಕ್ಕುಗಳು ಒಳ್ಳೆಯ ಅಚ್ಚಿನವಾಗಿಯೂ, ಅಚ್ಚುಕಟ್ಟಾಗಿಯೂ ಬರೆದಿದ್ದು, ಅದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳೆಂತಿರುವ ವ್ಯಕ್ತಿಯೊಬ್ಬ ಮುಖಂಡರ ಭಾವಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವುವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನಕಲು ಇರುವುದರಿಂದ ಮುಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟವುಳ್ಳವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರದಿಂದ ಆರ್ಡರು ಕಳುಹಿಸಬಹುದು.

ಶಿವಮೂರ್ತಿಸ್ವಾಮಿ ಕಣಬರಗಿಮಠ,
ಸೇಕ್ರೆಟರಿ, ಸ್ವಾಗತಕಮಿಟಿ,
೩ ನೆಯ ಮಹಾಸಭೆ ನಿಪ್ಪಾಣಿ

ಪರಿಮಳದ್ರವ್ಯಗಳು.

ನಮ್ಮ ಬಹು ಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದುಬತ್ತಿಗಳು ಸೇರು ೧ಕ್ಕೆ ೪ ಆಣೆಯಿಂದ ೧೦ ರೂ ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನುಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ ಕೇದಗೆ ಮೊದಲಾದ ಅತ್ತರುಗಳೂ ಮತ್ತು ಬ್ರಹ್ಮಾಮಲಕತೈಲ ಮೊದಲಾದುವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ೫ ರೂ ಗೆ ಕಡಿಮೆಯಿಲ್ಲದಂತೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು 35

ವಿಳಾಸ ಎಲ್. ಕಳ್ಳಪ್ಪ, ಊದುಬತ್ತಿಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ

ನ್ಯಾಯದರ್ಪಣ. 16

ಇದರಲ್ಲಿ ಪ್ರತಿಮನುಷ್ಯನೂ ತಿಳಿದ ಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತು ರೂಲ್ಸುಗಳೂ, ನಿಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಸಲ್ಪಟ್ಟಿವೆ.

ಬೆಲೆ ರೂ 1—8—0 ವಿ ಪಿ ಮೂಲ್ಯ 1—12—0

ಎಂ. ಎಸ್. ಸಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

23 ಸಚಿತ್ರ ಶುಕಸಪ್ತತಿ ಕಥೆಗಳು ರೂ ೧–೪–೦ (೪೧೦ ಪುಟ) ಟಪಾಲು ಹಾಸಲು ೪ ಆಣೆ

ಸಚಿತ್ರ ಪಟ್ಟವಿಕ್ರಮಾದಿತ್ಯರಾಯನ ಚರಿತ್ರೆ ರೂ ೧–೪–೦. (೪೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಭವಿಕೆಯೂ ಬೇಕಾಗಿದ್ದರೆ, ಲೋಕರೀತಿಗಳನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನ [illegible] ಸಿದರೆ, ಉತ್ಸಾಹಶಕ್ತಿಯು ಬೇಕೆಂದಿದ್ದರೆ ದಯಮಾಡಿ ಈ ವಿದ್ಯಾಮಂಜರಿಕಥೆಗಳನ್ನು ಓದಿರಿ [illegible] ಕೂಡಿದ ೬೮ ಕಥೆಗಳುಳ್ಳ [illegible] ಪುಸ್ತಕವಾಗಿದೆ. ಬೆಲೆ ರೂ ೧–೬–೦ ಟಪಾಲ್ ಹಾಸಲು ೩ ಆಣೆ. ಈಗಲೇ [illegible] ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ

[illegible] ಎಂ ಆರ್ ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಚಿತ್ರ ಬೃಹತ್ಸಪ್ತತಿ ಕಥೆಗಳು

ಪುರುಷಾರ್ಥಗಳು ಲೋಕದಜನರಿಗೆ ಸುಲಭವಾಗಿ [illegible] ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುವು (2) ಜ್ಞಾನ, ಧ್ಯಾನ, ಯೋಗ [illegible] ವೇದಾಂತರಹಸ್ಯಗಳನ್ನೂ [illegible] ಮುಂತಾದ್ದನ್ನೂ ತಿಳಿಸುವುವು. (3) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ವಿವಿಧರೀತಿ ಮುಂತಾದುವುಗಳನ್ನು ಬೋಧಿಸುವುದು (4) ಪಠನಸೌಲಭ್ಯಕ್ಕಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು (5) ಅಲ್ಲಲ್ಲಿ ಕಥಾಸಂದರ್ಭಕ್ಕನುಸಾರ ಭಾವವಕ್ಷೆ ಚಿತ್ರಗಳನ್ನು ಇಟ್ಟಿರುವುದರಿಂದ ಓದುಗಾರರಿಗೂ ಮನೋರಂಜಕವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ ೧ಕ್ಕೆ ೧–೪–೦, ಟಪ್ಪಾಲು ಹಾಸಲು ೪ ಆಣೆ

(೩೮ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ಕ್ಕೆ ರೂ ೪–೦–೦, ಟಪಾಲು ಹಾಸಲು ೧೧ ಆಣೆ

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸಲಾಗುವುದು

40 ನಮ್ಮ ವಿಳಾಸ– ಎಂ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್, ಬೆಂಗಳೂರು ಸಿಟಿ

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು 1



ಲೋಕೋಪಯೋಗದ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಕೈ ಕಾಲು ಜೋಮು (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, [illegible] ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಉತ್ತಮ ಸುವಾಸನೆಯಾಗಿರುತ್ತದೆ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಶಿಥಿಲತೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು [illegible] ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟಿನ ಶೂಲೆ, ಸಕ್ಕರೆ ಎಳೆವು, ಜ್ವರ, ಬಚ್ಚು [illegible] ರ, ಕ್ಷಯಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರರಸವು (ಕಾಲರಾದಿ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರರಸವು ಸಂಜೀವನವಾಗಿದೆ, [illegible] ಮಾರಿಹೋದ ಕೋರಿಕೆಗಳೂ, ಆಕ್ಷೇಪಣೆಗೊಳ್ಳದಂತೆ ರೋಗದಮೇಲೆ ಕೆಲಸಮಾಡುತ್ತವೆ. ಖಂಡಿತವಾಗಿ ಇದರಲ್ಲಿ [illegible] ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮಲಬದ್ಧ ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ತೋರುತ್ತದೆ. ಸಮಯದಲ್ಲಿ ಹೇಗಾದರೇನು. ಒಂದೆರಡು ಬುಡ್ಡಿಯ ಇಟ್ಟುಕೊಂಡರೆ, ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಆಪತ್ತನ್ನು ಹೋಗಲಾಡಿಸುವ ಸಿದ್ಧಪ್ರಯೋಗವಾಗಿರುವುದು.

ಉಪಯೋಗವಿಧಾನವು ಬುಡ್ಡಿಯೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧–೦–೦, ಟಪಾಲು ಖರ್ಚು ಬೇರೆ.

ವಿಳಾಸ — ಕೆ [illegible] ಜಿಲ್ಲಾ, ಮೈಸೂರು

ಗಂಧರಾಜ ನಸ್ಯದಪುಡಿ

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಬಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರ ಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು [illegible] ವೇಳೆಗಳಲ್ಲಿ ಮಾತ್ರ, ತಲೆ ನೋವು, [illegible] ತು [illegible] ಈ ಯಾವುದಾಗಿದ್ದರೂ [illegible] [illegible] ೧ ಡಬ್ಬಿಯ ಬೆಲೆ ೪ ಆಣೆ [illegible]

[illegible] ನಶ್ಯದಪುಡಿ

ಸಾಧು ರಹಿತವಾದ ವಾಸನೆಗಳಿಂದ ಎಲ್ಲೇ [illegible] ಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಲ್ಲಿ ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. [illegible] ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೩ ೪ ೦

ಮುಖಪೋಲ್ಲಾಸಿನೀ ಹೊಗೆಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ಸೇವುಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ ೧ ಡಬ್ಬಿಗೆ ೪ ಆಣೆ ಒಂದು [illegible] ಡಬ್ಬಿಗೆ ೧–೧೪–೦ ಟಪಾಲ್‌ಖರ್ಚು ಬೇರೆ.

ವಿಳಾಸ — ಕೆ ಮಲ್ಲಿಕಾರ್ಜುನಶೆಟ್ಟಿ,
[illegible] ಪೇಟೆಪುರ, ಹರೂರು ಪೋಸ್ಟ್
12 ಕೊಳ್ಳೇಗಾಲದ ತಾಲ್ಲೂಕು

೧೯೧೪ ನೆಯ ಇಸವಿ ಮೇ ತಾ೹ ೧೧ ರಿಂದ ೧೯೧೪ ನೆ ಮೇ ತಾ೹ ೧೭ ರ ವರೆಗೆ ಶಾಲಿವಾಹನಶಕ ೧೮೩೬ ನೆಯ ಆನಂದನಾಮ ಸಂ॥ದ ವೈಶಾಖ ಬ॥ ಏಕಾದಶಿಯಿಂದ ವೈಶಾಖ ಬ॥ ಅಮಾವಾಸ್ಯೆಯವರೆಗಿನ ಪಂಚಾಂಗ

ತಾ॥	ವಾರ.	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ.	ಕ್ರೇ ವಿ.
11	ಸೋ	ಏ	41 15	ಅನೂ	20-16	2
12	ಮಂ	ದ್ವಾ	37- 4	ಜ್ಯೇ	17-58	3
13	ಬುಧ	ತ್ರ	33-48	ಮೂ	16- 9	6
14	ಗುರು	ಚ	31-37	ಪೂಷಾ	15-27	
15	ಶುಕ್ರ	ಪ	30-37	ಉಷಾ	15-52	
16	ಶನಿ	ದ	30-54	ಶ್ರ	17-34	
17	ಭಾ	ಅ	32-21	ಧ	20-32	

(1) ಸಂಕಟಹರ ಚತುರ್ಥಿ. (2) ಶ್ರೀ ನೃಸಿಂಹಜಯಂತಿ. (3) ಶ್ರೀಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮೋತ್ಸವಾರಂಭ

[illegible]
[illegible]

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

REGISTERED No. 124

ವಾರ್ಷಿಕ ಚಂದಾ [illegible]

[illegible]

ಮೈಸೂರ್ ಸ್ಟಾರ್ ಸಂ ೧೯೧೮ ನೆಯ ಇಸವಿ ಮೇ ತಾರೀಖು ೧೮ ನೆಯ ಸೋಮವಾರ. (ಸಂಚಿಕೆ ೨೦

ಎಂ. ಎಸ್. ಸಿದ್ದಪ್ಪ ಜಂಟ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

ಈ ರಿಯಾಯಿತಿ ೨ ತಿಂಗಳುಮಾತ್ರ.

[illegible] 2000 ಅಚ್ಚಬೆಳ್ಳಿಯ ಕೊರಳ ಸರಪಣಿಗಳನ್ನು [illegible] ಸೀಮೆಯಿಂದ ತರಿಸಿ [illegible]

[illegible] ವಾಚ್ ಒಕ್ಕೆ ಕ್ರಯ 3-8 ೦ ಪೋಸ್ಟೇಜು 0 4-0

ಈ [illegible] ೨ ತಿಂಗಳೊಳಗಾಗಿ [illegible] ಒಂದು ವಾಚ್ ತರಿಸತಕ್ಕವರಿಗೆ ಒಂದು ಅಚ್ಚ ಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ

ಮುಂದೆ [illegible] ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ

ಜಾರಿ ಜೋಕೆ [illegible]! ಸದಾರ್ಥ ಅತ್ಯುತ್ತಮ!! ಬೆಲೆ [illegible]!!

ಬಜಾರಿನಲ್ಲಿ ಸಿಕ್ಕುವ [illegible]

[illegible]

ಪಾಠಕರೆ! [illegible]

ವೇ|| ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯಾವಶ್ಯಕವಾದವು

೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, [illegible] ಶತಕ, ಸಂಗಮೇಶ್ವರ ಶತಕ, [illegible]

೨) ಮನೋವಿಜಯ— [illegible]

೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ಕ್ಕೆ ೦-೨-೦.

೪) [illegible] ಕ್ರಯ ಪ್ರತಿ ೧ಕ್ಕೆ ೦-೩-೦ ಪೋಸ್ಟೇಜು ಅಲಾಯಿದಾ

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಿಲ್ ಗಡಿಯಾರಗಳು.

ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆ ಸಮಯ



ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಿಲ್ ಗಡಿಯಾರವು [illegible]

(೧) ಘಂಟೆ ಅರ್ಧಘಂಟೆ [illegible] ಕ್ಲಾಕ್ ೧ಕ್ಕೆ ೩-೮-೦

(೨) ಘಂಟೆ ಅರ್ಧಘಂಟೆ [illegible] ಕ್ಲಾಕ್ [illegible]

(೩) ಘಂಟೆ [illegible] ಕ್ಲಾಕ್ ೧ಕ್ಕೆ [illegible]

[illegible]

ಎಂ. ಎಸ್. ಸಿದ್ದಪ್ಪ ಜಂಟ್ — ರಾಜಮೊಹಲ್ಲಾ, ಮೈಸೂರು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಸಟೀಕ ಶತಕತ್ರಯ	[illegible]
[illegible]	[illegible]
[illegible]	[illegible]
ಬಾರದ [illegible] ಚರಿತೆ	[illegible]
ಸಟೀಕ [illegible]	[illegible]
ಸಟೀಕ [illegible]	[illegible]
ವಿವೇಕಮಂಜರಿ [illegible]	[illegible]
ವ್ರತಪಂಚಕ	[illegible]
[illegible]	[illegible]
ಗುರು [illegible] ಶತಕಂ	[illegible]

[illegible]

[illegible]

18)

ಬಸವರಾಜವಿಜಯ— ಬೆಲೆ ೧ [illegible] [illegible]

[illegible]

ವೀರಶೈವ ಧರ್ಮ [illegible]

[illegible]

ಪಂಡಿತಾರಾಧ್ಯ [illegible]

[illegible]

ವೀರಶೈವ ಗ್ರಂಥ [illegible]

[illegible]

ಗ್ರಂಥಪ್ರಕಾಶಕರು.

ಪ್ರಾಂತೀಯಗಳು [ಮಿಸ್ಸಿಂಗ್]

ಮಳೆ ಇಲ್ಲ, ಬಿಸಲಿನ ತಾಪ ಹೆಚ್ಚು, ಕುಡಿಯಲು ನೀರೇ ಇಲ್ಲ; ದನಗಳು ಹೊಟ್ಟೆಗಿಲ್ಲದೆ ಕೊಂದರೆಪಡುತ್ತಾ ತಲೆ ಬಿಡಲು ಆರಂಭವಾಗಿದೆ. ಅಧಿಕಾರಿಗಳ ನಿಗಾ ಕಡಿಮೆ. ಈ ಊರಿನಲ್ಲಿ ಈ ತಿಂಗಳು ೧೪ ರ ಆರಭ್ಯ ಒಂದು ಸ್ಟೇಟ್ ಸ್ಕೂಲ್ ಸ್ಥಾಪಿತವಾಗಿರುತ್ತೆ. ಒಂದು ರೀಡಿಂಗ್ ರೂಂ ಸಹಾ ಸ್ಥಾಪಿತವಾಗುವದರಲ್ಲಿದೆ. ಸೊಸೈಟಿಯು ಮುಂದು ವರಿಯುವ ಸ್ಥಿತಿಯಲ್ಲಿದೆ. ಇಲ್ಲಿಗೆ ವರ್ಗಮಾಡಲ್ಪಟ್ಟಿರುವ ಸ್ಕೂಲ್ ಮಾಸ್ಟರ್ ಟಿ. ಎ. ದುಂಡ್ಯಾಬ ದೀಕ್ಷಿತರೆಂಬುವವರು ಬಂದಲಾಗಾಯ್ತು ಮುತುವರ್ಜಿಯಿಂದ ಕೆಲಸಮಾಡುತ್ತಿರುವರಲ್ಲದೆ ಜನಗಳಿಗೆ ಪ್ರೋತ್ಸಾಹಪಡಿಸಿ ಒಂದು ಸ್ಟೇಟ್‌ಸ್ಕೂಲ್ ಸ್ಥಾಪಿಸಿರುತ್ತಾರೆ. ಇವರಿಗೆ ವಾಸಕ್ಕೆ ಮನೆಯಿಲ್ಲದೆ ಬಹಳ ತೊಂದರೆಯನ್ನು ಪಡುತ್ತಾ ಇದ್ದಾರೆ. ಗ್ರಾಮಸ್ಥರು ಇದನ್ನು ಸರಿಮಾಡಿಕೊಡ್ವಾರೆಂದು ನಂಬಿರುತ್ತೇನೆ. ಈ ಗ್ರಾಮಸ್ಥರಲ್ಲಿ ಎರಡು ಪಾರ್ಟಿಯಾಗಿರುತ್ತೆ. ಇದನ್ನು ಹೇಗಾದರೂ ಮಾಡಿ ಒಂದಾಗಿ ಸೇರಿಸಬೇಕೆಂದು ಸದರಿಯವರು ಬಹಳವಾಗಿ ಪ್ರಯತ್ನಮಾಡುತ್ತಾ ಇರುತ್ತಾರೆ. ಗ್ರಾಮಾಭಿವೃದ್ಧಿಯ ವಿಷಯದಲ್ಲಿ ತನುಮನಗಳನ್ನೆಲ್ಲಾ ಉಪಯೋಗಿಸುತ್ತಾ ಇದ್ದಾರೆ. ಬಾಲಕರ ಸಂಖ್ಯೆ ಕಡಿಮೆಯಾಗುವುದರಿಂದ ಹತ್ತಿರದ ಹಳ್ಳಿಗೆ ವಿರಾಮಕಾಲದಲ್ಲಿ ಹೋಗಿ ವಿದ್ಯೆಯ ಪ್ರಯೋಜನವನ್ನು ತಿಳಿಸುತ್ತಾ ಇದ್ದಾರೆ. ಜನಗಳು ಇವರನ್ನೇ ಬಹಳವಾಗಿ ಕೊಂಡಾಡುತ್ತಾರೆ. ದೇವರು ಇವರ ಕೋರಿಕೆಯನ್ನು ನೆರವೇರಿಸಲೆಂದು ಕೋರುತ್ತೇನೆ.

ಚಿರತೆಯನ್ನು ಕೊಂದುದು

ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಕೆಂಕೆರೆ ಗ್ರಾಮಕ್ಕೆ ಸೇರಿದ ಪಾಳ್ಯದಲ್ಲಿ ವಾಸವಾಗಿರುವ ಹುಚ್ಚಣ್ಣನವರ ದನ ಎನ ಕೊಟ್ಟಿಗೆಯೊಳಕ್ಕೆ ನಿನ್ನೆ ಏಪ್ರಿಲ್ ತಾ|| ೮ ನೇ ಶುಕ್ರವಾರ ರಾತ್ರಿ ಘಂಟೆ ಸಮಯದಲ್ಲಿ ೧ ಚಿರುಬನು ನುಗ್ಗಿ ದನಗಳನ್ನು ಬೆದರಿಸಲು, ಕೂಡಲೆ ಅಲ್ಲಿ ಮಲಗಿದ್ದ ತಿಮ್ಮಯ್ಯನೆಂಬುವನು ದೀಪವನ್ನು ಹೊತ್ತಿಸಿ ಬೆಳಕುಮಾಡಿ ಹೊರಗೆ ಬಂದನಂತರ ಚಿಕ್ಕ ವೀರಯ್ಯನೆಂಬುವ ಮಗುದನೂ ಒಳಗೆ ಹೋಗಿ ಹುಡುಕುವಲ್ಲಿ ಸಂದಿಯಲ್ಲಿ ಇದ್ದ ಚಿರತೆಯು ಕೂಡಲೆ ಈತನ ತಲೆಯನ್ನು ಹಿಡಿದುಕೊಂಡಿತು. ಈತನ ಮಗ ಮರುಳಯ್ಯನೆಂಬುವನು ಇದನ್ನು ಕಂಡಕೂಡಲೆ ಓಡಿಹೋಗಿ ಆ ಚಿರತೆಯ ಬಾಲವನ್ನು ಹಿಡಿದು ಭದ್ರವಾಗಿ ಹಿಂದಕ್ಕೆ ಎಳೆಯಲು, ಅದು ಮುದುಕನನ್ನು ಬಿಟ್ಟು ಇವನನ್ನು ಪರಚಿತು. ಆಗ ಎ. ಸಾರಿ ಹಿಂದಕ್ಕೂ ಮುಂದಕ್ಕೂ ನೂಕಲು ಬಂದು ಕೊರಳಿಗೆ ಬಿಗ್ಗಿತು. ಆಗ ಮರುಳಯ್ಯನು ಆ ಚಿರತೆಯು ಎದೆಯಮೇಲೆ ಕುಳಿತು ಭದ್ರವಾಗಿ ಹಿಡಿದುಕೊಂಡಿರುವಲ್ಲಿ ತಿಮ್ಮಯ್ಯನೆಂಬುವನೂ ಚಿಕ್ಕ ವೀರಯ್ಯನೆಂಬುವನು ಸಹ ಕೊಡಲಿ ಮಚ್ಚಿನಿಂದ ಅದರ ಕಣ್ಣು ಮೂಗು ತಲೆಗಳನ್ನು ಚುಚ್ಚಿ ಪ್ರಾಣವನ್ನು ಕಳೆದುಬಿಟ್ಟರು. ಇವರಲ್ಲಿ ಚಿಕ್ಕ ವೀರಯ್ಯನೆಂಬುವನಿಗೆ ತಲೆಬುರುಡೆಯಲ್ಲಿ ೩ ಹಲ್ಲುಗಳು ನಟ್ಟು ಗಾಯವಾಗಿರುತ್ತೆ. ಮರುಳಯ್ಯನೆಂಬುವನ ಮೈ ಕೈಕಾಲುಗಳಲ್ಲಿ ಪರಚಿರುತ್ತೆ. ತಿಮ್ಮಯ್ಯನಿಗೆ ಏನೂ ಅಪಾಯವಾಗಿಲ್ಲ. ಇವರುಗಳು ಹುಳಿಯಾರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಾ ಇದ್ದಾರೆ. ಮರುಳಯ್ಯನಿಗೇನೂ ಬಾಧೆಯಿಲ್ಲದೆ ಚೆನ್ನಾಗಿದ್ದಾನೆ, ಚಿಕ್ಕ ವೀರಯ್ಯನಿಗೆ ಮಾತ್ರ ಇನ್ನೂ ಗುಣವಾಗಿಲ್ಲ.

ಸುಧಾರಿಸಿದ ವ್ಯವಸಾಯ ಪದ್ಧತಿಯಮೇಲೆ ಶ್ರೀರಂಗಪಟ್ಟಣದ ಬಿ. ಸ್ವಾಮಿ ವೇಸಾಂಯಗಾರರ ಭಾಷಣ

ಮೊನ್ನೆ ತಾ|| ರ ಪಟ್ಟಣದಲ್ಲಿ ನಡೆದ ಜನಗಳ ವ್ಯವಸಾಯದ ಮತ್ತು ಕೈಗಾರಿಕೆಯ ಪ್ರದರ್ಶನಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮಿಹರ್ಬ್ಯಾ ಡೆಪ್ಯುಟಿಕಮೀಷನರ್ ಸಾಹೇಬರವರು ಅಧ್ಯಕ್ಷರಾಗಿ ಸರ್ಕಾರದ ದೊಡ್ಡ ದೊಡ್ಡ ಅಧಿಕಾರಿಗಳೂ ಮತ್ತು ಈ ಪ್ರಾಂತದ ಅನೇಕ ಸಹಸ್ರ ರೈತರು ಸಹ ನೆರೆದಿದ್ದರು. ಅಲ್ಲಿ ಕೂಡಿದ ಈ ಸಭೆಯ ಅಗ್ರಾಸನವನ್ನು ಚಿತ್ರದುರ್ಗದ ಸಬ್ ಡಿವಿಜನ್ ಆಫೀಸರವರಾದ ವಿ. ರಾಮದೇವ್ರರಾಯರವರು ವಹಿಸಿದ್ದರು. ಆಗ್ಗೆ ಶ್ರೀರಂಗಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ಜಮೀನ್ದಾರರಾದ ಮೆ|| ಎಸ್. ಸಿದ್ದಲಿಂಗಯ್ಯ ದೇವರವರು ಸುಧಾರಿಸಿದ ವ್ಯವಸಾಯ ಪದ್ಧತಿಯಮೇಲೆ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು.

ಮೆ|| ದೇವರವರು ಬೋಧಪ್ರದವಾದ ತಮ್ಮ ಭಾಷಣದಲ್ಲಿ ನನ್ನೆ ಬಂದು ವರುಷದ ತಮ್ಮ ಸ್ವಂತ ವ್ಯವಸಾಯದ ಕರದಿನ ಅನುಭವದ ಫಲರೂಪವಾದ ಅನೇಕ ಅಮೂಲ್ಯವಾದ ಸೂಚನೆಗಳನ್ನು ಮಾಡಿದರು.

ವ್ಯವಸಾಯವು ಇತರ ಎಲ್ಲಾ ಕಸುಬುಗಳಿಗಿಂತಲೂ ಸ್ವತಂತ್ರ್ಯ ಪಾದವಲ್ಲುದು ಮತ್ತು ನಮ್ಮ ದೇಶದ ಏಳಿಗೆಗೆ ನಮ್ಮ ರೈತ ಪ್ರಜೆಗಳೇ ಮೂಲಾಧಾರರಾಗಿರುತ್ತಾರೆ ಎಂಬುವದನ್ನು ಸಿದ್ಧಾಂತಪಡಿಸಿದರು. ಅದಲ್ಲದೆ ನಮ್ಮ ರೈತರ ವ್ಯವ[redacted] ಅಜ್ಞಾನಿಗಳಾಗಿರುವ ಕೆಲವು ಸ್ವೀಕರಿಸದವಾದ ಅವರ ಶೋಚ್ಯಸ್ಥಿತಿಯನ್ನು ಸಹ ವಿವರಿಸಿ ಕೇಳಿದರು. ಸರ್ವಾಂತರಲೂ ಎಲ್ಲಾ ವಿಧದಲ್ಲೂ ನಮ್ಮ ಕಸುಬನ್ನು ಮುಂದುವರಿಸಿರುವ ಪಾಶ್ಚಾತ್ಯರ ಸುಧಾರಿಸಿದ ಶಾಸ್ತ್ರೀಯವಾದ ವ್ಯವಸಾಯ ಪದ್ಧತಿಯನ್ನು ಉಳುವದರ ಮುಖ್ಯ ಉದ್ದೇಶವನ್ನೂ, ಹೊಸತರಹೆಯ ಇಂಗ್ಲೀಷ್ ನೇಗಿಲುಗಳೂ ನಮ್ಮ ನಾಡು ನೇಗಿಲುಗಳೂ ಇರುವ ವ್ಯತ್ಯಾಸ ಮತ್ತು ಅವುಗಳಿಂದ ಆಗುವ ಕೆಲಸಗಳನ್ನೂ ವಿವರಿಸಿದ್ದಲ್ಲದೆ ರೈತರ ಪುರೋಭಿವೃದ್ಧಿಯ ಸಲುವಾಗಿ ಅವರು ಉಳುವ ನೇಗಲನ್ನಾದರೂ ಬದಲಾಯಿಸಿಕೊಂಡೇ ತೀರಬೇಕೆಂದು ಸಾಧಿಸಿದರು. ಗೊಬ್ಬರದ ಸಾರವು ಕೆಡದಂತೆ ಕೂಡಿ ಹಾಕುವ ವಿಧಾನವನ್ನೂ, ಅದನ್ನು ಉಪಯೋಗಿಸುವ ಸಂಗತಿಯನ್ನೂ, ದನಗಳ ಗಂಜಳದ ಶ್ರೇಷ್ಠಗುಣವನ್ನೂ, ಅದನ್ನು ಶೇಖರಿಸುವ ವಿಧಾನವನ್ನೂ ಬತ್ತದ ಬೀಜಗಳನ್ನು ಚುನಾಯಿಸುವ ಪದ್ಧತಿಯನ್ನೂ ಬೆಳೆಗಳನ್ನು ಬದಲಾಯಿಸುವುದರ ಉಪಯೋಗ, ಕಬ್ಬನ್ನು ಜೋಡುವಾಗ ಬೆಳೆದು ಬೆಲ್ಲವನ್ನು ಉತ್ತಮವಾದ ರೀತಿಯಲ್ಲಿ ಮಾಡುವ ವಿಧಾನ, ಭತ್ತವನ್ನು ಹುಲುಸಾಗಿ ಬೆಳೆಯಬೇಕಾದರೆ ಅನುಸರಿಸಬೇಕಾದ ಕ್ರಮಗಳು ಮತ್ತು ಅಲ್ಲಲ್ಲೇ ವ್ಯವಸಾಯದ ಸಂಘಗಳನ್ನು ಸ್ಥಾಪಿಸುವದರ ಅವಶ್ಯಕತೆ ಇವೇ ಮೊದಲಾದ ವ್ಯವಸಾಯಕ್ಕೆ ಸಾಧಾರಣ ವಿಷಯಗಳ ಬಹು ಸ್ವಾರಸ್ಯವಾಗಿ ಸಭಿಕರ ಮನಮುಟ್ಟುವಂತೆ ಮುಕ್ಕಾಲು ಗಂಟೆಯ ಪರ್ಯಂತವೂ ಒಂದು ದೀರ್ಘವಾದ ಭಾಷಣವನ್ನು ಮಾಡಿದರು.

ವಿದ್ಯೆಯ ಕೊರತೆಯೂ, ನಿರುತ್ಸಾಹವೂ, ದಾರಿದ್ರ್ಯವೂ ಮತ್ತು ಐಕಮತ್ಯದ ಅಭಾವವೂ ಸಹ ನಮ್ಮ ರೈತರ ಅವನತಿಗೆ ಮುಖ್ಯ ಕಾರಣಗಳೆಂದು ಉಪನ್ಯಾಸಕರು ಸೂಚಿಸಿದರು.

ಇವರ ಉಪನ್ಯಾಸವು ಸುಬೋಧವಾಗಿಯೂ, ಸಭಿಕರ ಮನಸ್ಸಿಗೆ ಚೆನ್ನಾಗಿ ನಾಟುವಂತೆಯೂ ಇದ್ದುದರಿಂದ ಈ ಪ್ರದರ್ಶನದ ಕಮಿಟಿಯ ಪ್ರೆಸಿಡೆಂಟರವರಾದ ಮೇ|| ಡೆಪ್ಯುಟಿಕಮೀಷನರ್ ಸಾಹೇಬರವರು ಈ ಉಪನ್ಯಾಸಕರಿಗೆ ಮೊದಲನೆಯ ಬಹುಮಾನಪತ್ರಿಕೆಯನ್ನು ಬಹು ಸಂತೋಷದಿಂದ ದಯಪಾಲಿಸಿದರು.

ಅನಂತರ ಮೆ|| ದೇವರವರು ಪ್ರಮುಖ ರೈತರ ಪ್ರಾರ್ಥನೆಯ ಪ್ರಕಾರ ಬೀರೂರಿನಲ್ಲಿ ಕಡೂರ್ ಡಿಸ್ಟ್ರಿಕ್ಟ್ ಸಬ್ ಡಿವಿಜನ್ ಆಫೀಸರರಾದ ಮೆ|| ಬಿ. ಟಿ. ಕೇಶವಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಈ ವಿಷಯದ ಮೇಲೆಯೇ ಒಂದು ಶ್ಲಾಘ್ಯವಾದ ಮತ್ತೊಂದು ಭಾಷಣವನ್ನು ಮಾಡಿದರು ಮತ್ತು ಚಿತ್ರದುರ್ಗ, ದಾವಣಗೆರೆ ಪಟ್ಟಣಗಳಲ್ಲಿ ಸಹ ತಮ್ಮ ಉಪನ್ಯಾಸದಿಂದ ವ್ಯವಸಾಯಗಾರರ ಅಜ್ಞಾನವನ್ನು ಹೋಗಲಾಡಿಸಿ ಅವರ ಪೂರ್ಣ ಪ್ರೀತಿಗೆ ಪಾತ್ರರಾದರು.

ನಮ್ಮ ವ್ಯವಸಾಯಗಾರರ ಪುರೋಭಿವೃದ್ಧಿಗಾಗಿಯೇ ಈ ಪ್ರಕಾರ ಉಪನ್ಯಾಸಗಳನ್ನು ಮಾಡುತ್ತಾ ತಮ್ಮ ಅಮೂಲ್ಯವಾದ ಕಾಲವನ್ನು ಕಳೆಯಲು ಸಿದ್ಧರಾಗಿರುವ ಅತ್ಯಂತ ನಿಪುಣ ರೈತರಾದ ಮೆ|| ದೇವರವರ ಶ್ಲಾಘ್ಯವಾದ ಉದ್ದೇಶವನ್ನು ಶ್ರೀ ಜಗದೀಶನು ನೆರವೇರಿಸಲೆಂದೂ ಅಭ್ಯಾರ್ಥಿತವಾಗಿ ದೊರೆತಿರುವ ಈ ಸುಸಮಯವನ್ನು ನಮ್ಮ ರೈತರು ಸಾರ್ಥಕಮಾಡಿಕೊಳ್ಳುವರೆಂದೂ ನಂಬಿ ಪ್ರಾರ್ಥಿಸುವವನಾಗಿ ಅಳಿರುತ್ತೇನೆ.

ಪ್ರತ್ಯಕ್ಷದರ್ಶಿ

ಕೋಲಾರ್ ಚಿನ್ನದ ಗಣಿಗಳು

೩೩ ವರುಷಗಳ ಕಾರ್ಯಕಲಾಪಗಳು

ಕೋಲಾರ್ ಚಿನ್ನದ ಗಣಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿರುವ ಬೋರ್ಡಿನವರು ಕಳೆದ ೧೯೧೩ ನೇ ಡಿಸೆಂಬರ್ ತಾ|| ೩೧ ಕ್ಕೆ ಪೂರೈಸಿದ ೩೩ ಸಂವತ್ಸರಗಳಲ್ಲಿ ಆ ಗಣಿಗಳ ಕೆಲಸ ನಡೆದಿರುವ ವಿಚಾರಗಳನ್ನು ಕುರಿತು ಒಂದು ರಿಪೋರ್ಟನ್ನು ಬರೆದು ಪ್ರಕಟಮಾಡಿದ್ದಾರೆ. ಈ ಗಣಿಗಳ ಪೂರ್ವಚರಿತ್ರೆಯು ಅನೇಕರಿಗೆ ತಿಳಿಯದೆ ಇಲ್ಲ. ಹಲವು ಕಂಪನಿಗಳು ಮೊದಲು ಚಿನ್ನ ತೆಗೆಯುತ್ತೇವೆಂದು ಪರಿಶ್ರಮಿಸಿ ಬಂದು, ಕೆಲವು ಹಣ ಖರ್ಚುಮಾಡಿ ಕೆಲಸವನ್ನು ಮುಂದರಿಸಲು ದ್ರವ್ಯಾದಿಗಳ ಸಹಾಯ ಪಡೆಯದೆ ಹಾಗೇ ನಿಂತುಹೋಗಿ ತುಂಬಾ ನಷ್ಟಪಟ್ಟವು. ಈಗ ಆದರೆನೋ ಪ್ರಪಂಚದಲ್ಲಿ ಚಿನ್ನವು ವಿಶೇಷವಾಗಿ ಉತ್ಪತ್ತಿಯಾಗುವ ಭಾರೀ ಗಣಿಗಳೊಳಗೆ ನಮ್ಮ ಸಂಸ್ಥಾನದ ಗಣಿಗಳೂ ಸೇರಿಕೊಂಡಿರುತ್ತವೆ. ಚಿನ್ನ ತೆಗೆಯುವುದಕ್ಕೆ ೧೮೮೦ ನೇ ಇಸವಿಯಲ್ಲಿ ಮೈಸೂರು, ಊರಿಗೆಂ, ನಂದಿದುರ್ಗ, ಮೈಸೂರು ರೀಫ್ ಎಂಬ ಕಂಪನಿಗಳೂ, ಆ ಮೇಲೆ ನೇ ವರುಷ ಬಾಲಘಾಟ್, ಸ್ಪೆಷಲ್ ರೀಫ್ ಕಂಪನಿಗಳೂ; ೧೮೯ ರಲ್ಲಿ ಛಾಂಪಿಯನ್ ರೀಫ್ ಕಂಪನಿಯೂ ಏರ್ಪಾಡಾದವು. ಇವುಗಳಲ್ಲದೆ ಇನ್ನೂ ಕೆಲವು ಕಂಪನಿಗಳು ಹುಟ್ಟಿ ಕೆಲವು ಕಾಲ ಕೆಲಸಮಾಡಿ ಕಾರ್ಯಸಾಗಿರುವುದನ್ನು ಸರಿಪಡಿಸಿ ನಷ್ಟಹೊಂದಿದವು. ೧೮೯೮ ನೇ [illegible] ಸೇ[redacted]ಯಲ್ಲಿ ೧೮ ಚಿನ್ನ ತೆಗೆವ ಕಂಪನಿಗಳಿದ್ದು ಕೆಲಸ ಮಾಡುತ್ತಿದ್ದವು. ಈ ಪೈಕಿ ಅವು ಕಂಪನಿಗಳು ಚಿನ್ನವು ಮೇಲಕ್ಕೆ ದೊರಕದೆ ಬಹಳ ನಷ್ಟವಾಗಿ ಅಗೆದು ಭೂಮಿಯನ್ನು ಶೋಧಿಸಲು ಬೇಕಾದಷ್ಟು ಮುತುವರ್ಜಿಯೂ ಸಾಧನೆಯೂ ಇಲ್ಲದೆ ದಿವಾಳಿಯಾದವು.

ಈಗಲಾದರೋ ಆರು ಕಂಪನಿಗಳು ಭಂಗಾರವನ್ನು ತೆಗೆಯುತ್ತಿವೆ. ಇವುಗಳ ಮೂಲಧನ ೨,೯೧,೦೦೦ ಪೌಂಡುಗಳು; ಈ ಷೇರುಗಳ ಬೆಲೆಯು ಈಗ ಹೆಚ್ಚಿರುವುದರಿಂದ ಅವುಗಳನ್ನು ವಿಕರಿಮಾಡಿದ ಪಕ್ಷದಲ್ಲಿ ೪೮,೦೬,೨೮ ಪೌಂಡು ಉತ್ಪತ್ತಿಯಾಗುವುದು. ೧೮೮೧ ನೇ ಇಸವಿಯಿಂದ ಕೋಲಾರ್ ಗಣಿಗಳಿಂದ ಎಲ್ಲಾ ಕಂಪನಿಗಳವರೂ ೧೧೩೦೩೦ ಟನ್‌ಗಳಷ್ಟು (ಟನ್ ೧ಕ್ಕೆ ಸುಮಾರು ೯೩|| ಮಣಗಳು) ಗಾರದ ಒರಳು ಬೆರಕೆಯಾದ ಕಲ್ಲುಗಳನ್ನು ಗಣಿಗಳ ಮೇಲಕ್ಕೆ ತಂದು ಪುಡಿಮಾಡಿ ಅವರಿಂದ ೧,೦೩೧೧,೦ ಔನ್ಸ್‌ಗಳಷ್ಟು (ಔನ್ಸ್ ೧ಕ್ಕೆ ೬೪ ರೂಪಾಯಿ ತೂಕ) ಚಿನ್ನದ ಗಟ್ಟಿಗಳನ್ನು ಉತ್ಪತ್ತಿಮಾಡಿದ್ದಾರೆ. ಈ ಭಂಗಕ್ಕೆ ೬೦,೮೨,೮೮,೫೧೧ ರೂಪಾಯಿ ಕ್ರಯ ವಾಗುತ್ತದೆ. ಗಣಿಗಳವರು ಬಹಳ ಹಣವನ್ನು ಉತ್ಪತ್ತಿಮಾಡಿಕೊಂಡು, ಇದರಲ್ಲಿ ಮೈಸೂರು ಗವರ್ನಮೆಂಟಿಗೆ ೩,೧೧,೨೩,೬೩೦ ರೂಪಾಯಿಯನ್ನು ರಾಜಭಾಗವಾಗಿಯೂ, ಕಂಪನಿಗಳ ಷೇರುದಾರರಿಗೆ ೬,೯೩,೧೯೩,೯೩೦ ರೂಪಾಯಿಯನ್ನು ಲಾಭವಾಗಿಯೂ ಹಂಚಿಕೊಟ್ಟಿದ್ದಾರೆ.

ಕೋಲಾರದಲ್ಲಿ ಚಿನ್ನ ತೆಗೆಯುವ ಗಣಿಗಳ ಪ್ರದೇಶ ಸುಮಾರು ೧೧೯೫ ಎಕರೆಗಳಾಗುತ್ತವೆ. ಈ ಗಣಿಗಳಲ್ಲಿ ೩೦೦ ಜನ ಯೂರೋಪ್ಯನ್ನರೂ, ೪೦೦ ಜನ ಆಂಗ್ಲೋಇಂಡಿಯನ್ನರೂ, ೨೪,೦೦೦ ದೇಶೀಯ ಜನರೂ ತಮ್ಮ ಸಂಸಾರಗಳ ಸಹಿತ ಚಿನ್ನ ತೆಗೆಯುವ ಬೇರೆ ಬೇರೆ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಒಟ್ಟು ಜನ ಸಂಖ್ಯೆಯು ೬೦,೦೦೦ ಕ್ಕೆ ಕಡಿಮೆಯಾಗಲಾರದೆಂದು ಹೇಳಬಹುದು. ಇವರಲ್ಲದೆ ಕೆಲಸಗಾರರ ಕೌಂಟಗಳ ನಿಮಿತ್ತ ಅಲ್ಲಿ ಬೇಕಾಗಿರುವ ಇತರ ಸಾಮಾನುಗಳ ವ್ಯಾಪಾರಗಳು ಬೇರೆ ಕೆಲವು ಸಾವಿರಾರು. ಗಣಿಗಳಲ್ಲಿ ಚಿನ್ನ ತೆಗೆಯುವ ನಾನಾ ಕೆಲಸಗಳಿಗೆ ... ೧೮೮೧ ನೇ ಇಸವಿಯಿಂದ ಇದುವರೆಗೆ ... ರೂಪಾಯಿಗಳು ಸಂಬಳ ಮತ್ತು ಕೂಲಿ ಹಣ ಪಾವತಿ ಮಾಡಲಾಗಿದೆ.

ಮೈಸೂರು ಗವರ್ನಮೆಂಟಿನವರು ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಗಣಿಯವರಿಗೆ ಬಿಕರಿ ಮಾಡುತ್ತಿದ್ದಾರೆ. ೧೯೦೨ ನೇ ಇಸವಿಯಿಂದ ಗಣಿಗಳ ಕಂಪನಿಯವರ ವಿದ್ಯುಚ್ಛಕ್ತಿಗಾಗಿ ಮೈಸೂರು ಸರ್ಕಾರಕ್ಕೆ ೧,೩೦,೦೧,೩೩೦ ರೂಪಾಯಿ ಕೊಟ್ಟಿದ್ದಾರೆ. ಅದಲ್ಲದೆ ತಂಗಲದ ಕೆರೆಗಳ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಗಣಿಗಳ ಕಂಪನಿಯವರು ಮೈಸೂರು ಸರ್ಕಾರಕ್ಕೆ ಹತ್ತು ವರುಷದಿಂದ ಒಟ್ಟು ಎಷ್ಟು ಹಣ ಪಾವತಿ ಮಾಡಿದ್ದಾರೆಂದು ಲೆಕ್ಕಾಚಾರ ಮಾಡಿಲ್ಲ. ಇದೂ ಕೆಲವು ಲಕ್ಷ ರೂಪಾಯಿಗಳಾಗಿರಬೇಕೆಂದು ಹೇಳಬಹುದು. ಒಂದರೆ ಗಣಿಗಳ ಕಂಪನಿಯವರು ಪ್ರತಿ ವರುಷವೂ ಹತ್ತು ಲಕ್ಷ ಗ್ಯಾಲನ್ ನೀರನ್ನು ಉಪಯೋಗಿಸಿಕೊಳ್ಳುತ್ತಿರುವರು.

ವೈ. ಬಿ.

ಭರತಖಂಡದ ನೂತನ ರಾಜಧಾನಿ

ವಂಗವಿಭಾಗವನ್ನು ಮಾಡಿ ವಂಗೀಯರಲ್ಲಿ ಅಸಂತೃಪ್ತಿ ಬೀಜಾವಾಪವನ್ನು ಮಾಡಿ ಸೀಮೆಗೆ ತೆರಳಿದ ಲಾರ್ಡ್ ಕರ್ಜನರವರು ಈಗ ಪಾರ್ಲಿಮೆಂಟಿನ ಸಭ್ಯರಾಗಿ ವರಿಪಟ್ಟ ಈಚೆಗೆ ದೇಶದೊಳಗೆ ಶಾಂತಿಯನ್ನುಂಟುಮಾಡುವುದಕ್ಕಾಗಿ ಲಾರ್ಡ್ ಮಿಂಟೋರವರೂ, ಲಾರ್ಡ್ ಹಾರ್ಡಿಂಜ್‌ರವರೂ ಎಷ್ಟೋ ಶ್ರಮಪಟ್ಟು ಕೆಲ ನೂತನ ರಾಜಕೀಯ ಸುಧಾರಣೆಗಳನ್ನು ಕೊಡಿಮಾಡಿದ ಸಂಗತಿಯು ವಾಚಕರಿಗೆಲ್ಲಾ ವಿದಿತವಾಗಿಯೇ ಇದೆ. ಇನ್ನು ನೂತನ ಸುಧಾರಣೆಗಳೊಳಗೆ ಭರತಖಂಡದ ರಾಜಧಾನಿಯನ್ನು ಕಲ್ಕತ್ತೆಯಿಂದ ಡಿಲ್ಲಿಗೆ ಒಯ್ಯುವುದೂ ಒಂದು. ರಾಜ್ಯದ ಈ ವಿಧ ವ್ಯವಸ್ಥೆಯನ್ನು ಮಾಡಿದುದೂ ಅದರ ಜೊತೆಗೆ ತಾವು ಮಾಡಿದ್ದ ವಂಗವಿಭಾಗವನ್ನು ತಪ್ಪಿಸಿದುದು ಸಹ ಲಾರ್ಡ್ ಕರ್ಜನರವರ ಮನಸ್ಸಿಗೆ ಸರಿಬಿದ್ದಿಲ್ಲ. ವಿಷಯದಲ್ಲಿ ಅವರು ಹಲವುಬಾರಿ ಪಾರ್ಲಿಮೆಂಟಿನಲ್ಲಿ ಪ್ರಸ್ತಾಪವನ್ನೆತ್ತಿ ವಾದಾನುವಾದಗಳನ್ನು ನಡೆಯಿಸಿ, ಕಡೆಗೆ ಇದು ಚಕ್ರವರ್ತಿಯವರು ಸ್ವಂತ ಹೋಗಿ ನಡೆಸಿದ ಏರ್ಪಾಡಾದುದರಿಂದ ಅದರ ವಿಷಯದಲ್ಲಿ ಇನ್ನೂ ಹೆಚ್ಚಾಗಿ ಚರ್ಚೆಯನ್ನೂ ಮಾಡಲಾಗುವುದಿಲ್ಲವೆಂದು ಉತ್ತರವು ಬಂದ ಸಭೆಯಲ್ಲಿ ಹಿಂದೆ ತಿಳಿಯಿಸಲ್ಪಟ್ಟಿದ್ದರೂ ಲಾರ್ಡ್ ಕರ್ಜನವರು ಗಜಮತ್ತರಂತೆ ಇನ್ನೂ ತಮ್ಮ ಹಟವನ್ನು ಬಿಡದೆಯೇ ಇರುತ್ತಾರೆ. ಕಳೆದ ತಾ|| ೧೧ ನೇಯ ಪಾರ್ಲಿಮೆಂಟಿನಲ್ಲಿ ಇವರು ಪುನಃ ಇದೇ ವಿಷಯವನ್ನು

...ಸ್ಥಾಯೀಭಾರವನ್ನು ನಿವಾರಿಸುವಾಗ್ಗೆ, ಗೌರ್ನಮೆಂಟಿನವರು ಇದೆಲ್ಲಾ ಕಾರ್ಯಕ್ಕೂ ೩ ಕೋಟಿ ರೂಗಳು ವೆಚ್ಚವಾಗುವುದೆಂದು ನಿರೀಕ್ಷಿಸಿದ್ದಾರೆ. ಆದರೆ ಅದು ಹಾಗಲ್ಲ. ಇದುವರೆಗೆ ಆಗಿರುವ ವೆಚ್ಚವನ್ನೇ ನಾವು ಸ್ಥೂಲವಾಗಿ ಲೆಕ್ಕಹಾಕಿರುವುದರಲ್ಲಿ ೪ ಕೋಟಿ ೫೦ ಲಕ್ಷ ರೂಗಳಾಗಿರುತ್ತವೆ. ಅದುಕಾರಣ ಮುಂದೆ ಎಲ್ಲಾ ಕೆಲಸವೂ ಸಾಂಗವಾಗುವವರೆಗೆ ಅವರ ನಿರೀಕ್ಷಣೆಗಿಂತ ಎಷ್ಟೋ ಹೆಚ್ಚಿನ ಹಣವು ಹಿಡಿಯುತ್ತದೆ. ಭರತಖಂಡದಲ್ಲಿ ಲೋಹಮಾರ್ಗಾಭಿವೃದ್ಧಿ ವ್ಯಾಪಾರಾಭಿವೃದ್ಧಿಗೂ ಇತರ ಸಾರ್ವಜನಿಕಾಭಿವೃದ್ಧಿಗೂ ಎಷ್ಟೋ ಹಣವನ್ನು ವೆಚ್ಚಮಾಡಬೇಕಾದ ಆವಶ್ಯಕತೆಯುಳ್ಳ ಈ ಸಮಯದಲ್ಲಿ ಅನಾವಶ್ಯಕವಾದ ಈ ನೂತನ ರಾಜಧಾನಿ ಕಲ್ಪನೆಗೆಂದು ಹೀಗೆ ಕೋಟ್ಯಂತರ ರೂಗಳನ್ನು ವ್ಯಯಮಾಡುವುದು ಯೋಗ್ಯವೆ? ಈ ವರ್ಷ ಅಲ್ಲಿನ ಲೋಹಮಾರ್ಗಾಭಿವೃದ್ಧಿಗಾಗಿ ೬೬ ಲಕ್ಷ ಪೌಂಡುಗಳನ್ನು ಮಾತ್ರವೇ ವ್ಯಯಮಾಡಲು ನಿರ್ಧರಿಸುವುದು ಸರಿಯೆ? ಸರ್ಕಾರದವರು ಕಲ್ಪಿಸಿರುವ ವಿಚಾರವು ಉಚಿತವಾದುದಲ್ಲವೆಂದು ಭಾರತೀಯರೆಲ್ಲರೂ ತಿಳಿಯುವರೆಂಬ ವಿಷಯದಲ್ಲಿ ಸಂಶಯವಿಲ್ಲ. ದಿಲ್ಲಿಪಟ್ಟಣವು ರಾಜಧಾನಿಯಾಗುವುದಕ್ಕೆ ತಕ್ಕ ಪಟ್ಟಣವೇನೂ, ಅದು ಮೊದಲಿನ ರಾಜಧಾನಿಗಿಂತಲೂ ಹೆಚ್ಚು ಉಚಿತವಾಗಿ ನೂತನ ಸಾಮ್ರಾಜ್ಯಸ್ಥಿತಿಯಿಂದಲೂ ರಾಜ್ಯಪರಿಪಾಲನೆಮಾಡಲು ಅನುಕೂಲವಾದುದೆಂದೂ ನನಗೆ ಒಪ್ಪಿಸುವ ಪಕ್ಷದಲ್ಲಿ ಇದಕ್ಕಾಗಿ ಎಷ್ಟು ವೆಚ್ಚವಾದರೂ ನಾನು ಮಾತನಾಡುವುದಿಲ್ಲ. ಇದು ಕೇವಲ ತಿರ್ಪಾಗಿ ನಿರ್ಮಿಸುವ ರಾಜಧಾನಿಯಾಗಿರುವುದರಿಂದ ಇದು ಯಂತ್ರದ ಕೆಲ ದಿನ ಮಾತ್ರ ನಡೆಯಬಹುದು. ಅಷ್ಟೇ ಹೊರತು ಸಜೀವವಾಗಿ ಚಿರಕಾಲವಿರತಕ್ಕದಲ್ಲ. ಆದುದರಿಂದ ಇದಕ್ಕಾಗಿ ವೆಚ್ಚಮಾಡುವ ಹಣವು ಪ್ರಯೋಜನಕಾರಿಯಾದುದಲ್ಲ. ಕೆಲಕಾಲದೊಳಗೆ ಈ ಹೊಸ ನಿರ್ಮಾಣವೆಲ್ಲಾ ಧ್ವಂಸವಾಗದೆ ಹೋಗುವುದಿಲ್ಲ. ಆಗ ಸಂಗ್ರಹವಾಗಿ ಬಂದ ಪ್ರಜೆಗಳ ಹಣವನ್ನು ನಾವು ಹೀಗೆ ವ್ಯರ್ಥವಾಗಿ ವೆಚ್ಚಮಾಡಿದೆವಲ್ಲಾ ಎಂದು ನಾವೇ ಎಂದುಕೊಳ್ಳುವ ಸ್ಥಿತಿಯು ಬರುವುದು" ಎಂದು ಮೊದಲಾಗಿ ಉಪನ್ಯಾಸವಾಡಿ ತಮ್ಮ ಅಸಂತುಷ್ಟಿಯನ್ನು ತೋರಿದರು.

ಇದಕ್ಕೆ ಸ್ಟೇಟ್ ಸೆಕ್ರೆಟರಿಯವರು ಕೊಟ್ಟ ಉತ್ತರವು ಅವರ ಹಾರಾಟವನ್ನೆಲ್ಲಾ ಅಡಗಿಸಿತು. ಏನೆಂದರೆ—ರಾಜಧಾನಿಯನ್ನು ವ್ಯತ್ಯಾಸಗೊಳಿಸುವುದು ಉತ್ತಮವೆ? ಅಲ್ಲವೆ? ಎಂಬ ವಿಷಯವನ್ನು ಕುರಿತು ಮರಳಿ ಚರ್ಚಿಸಲು ನಾನು ಇಚ್ಛಿಸುವುದಿಲ್ಲ. ಬೇರೆ ಕೆಲ ಮಾರ್ಗಗಳಿಂದ ಆಗಿರುವ ವೆಚ್ಚವನ್ನೂ ರಾಜಧಾನಿಯ ವ್ಯತ್ಯಾಸದಿಂದಲೇ ಆದ ವೆಚ್ಚವೆಂದು ಇದಕ್ಕೆ ಸೇರಿಸಿ ಹೇಳುವುದು ಯುಕ್ತವಲ್ಲ. ರಾಜಧಾನಿಯು ಕಲ್ಕತ್ತಾವೇ ಆಗಿದ್ದರೂ ಆ ಕೆಲವೆಚ್ಚಗಳು ಸಂಭವಿಸುತ್ತಲೇ ಇದ್ದುವು. ನೂತನ ನಗರ ನಿರ್ಮಾಣಕ್ಕೆ ೩ ಕೋಟಿ ರೂ.ಗಳಾಗುವುವೆಂದು ಸರ್ಕಾರದವರು ನಿರೀಕ್ಷಿಸಿರುವರೆಂದು ಲಾರ್ಡ್ ಕರ್ಜನ್‌ರವರು ಹೇಳುತ್ತಾರೆ. ಆದರೆ ಅದಕ್ಕಾಗಿಯೇ ಇಷ್ಟು ಹಣವನ್ನು ವೆಚ್ಚಮಾಡಲು ಇಂಡಿಯಾ ಗೌರ್ನಮೆಂಟಿನವರು ಯಾವಾಗಲೂ ಲೆಕ್ಕ ಹಾಕಿರುವುದಿಲ್ಲ. ಅದಕ್ಕಾಗಿ ಪ್ರತಿ ವರ್ಷವೂ ಎಷ್ಟು ವೆಚ್ಚವಾಗುವುದೋ ಅದನ್ನು ಪ್ರಕಟಿಸುವುದೊಳ್ಳೆಯದು. ಅದನ್ನು ಸ್ಪಷ್ಟವಾಗಿ ವಿವರಿಸುವದಕ್ಕೆ ಎಷ್ಟು ಮಟ್ಟಿಗೆ ಅವಕಾಶವಾಗುವುದೋ ನಾನು ಆ ಗೌರ್ನಮೆಂಟಿನವರೊಡನೆ ಆಲೋಚಿಸುತ್ತೇನೆ. ವೈಸ್‌ರಾಯರವರು ಪ್ರತಿ ವರ್ಷವೂ ಇಷ್ಟು ದಿನ ಕಲ್ಕತ್ತಾದಲ್ಲಿ ಇದ್ದೇತೀರಬೇಕೆಂದು ನಿರ್ಬಂಧಪಡಿಸುವುದು ಕಷ್ಟವು. ಶೀತಕಾಲದೊಳಗೆ ಯಾವ ವೈಸ್‌ರಾಯಿಯೂ ಕಲ್ಕತ್ತಾಕ್ಕೆ ಹೋಗಿ ಕೆಲಕಾಲ ವಾಸಮಾಡುವರು. ವೈಸ್‌ರಾಯರು ದಿಲ್ಲಿಯಲ್ಲಿ ೫ ತಿಂಗಳು ಮಾತ್ರವೇ ಇರಬೇಕೆಂದು ಕರ್ಜನ್‌ರವರು ಹೇಳುತ್ತಾರೆ. ೧೦ ತಿಂಗಳಿರಬೇಕೆಂಬುದು ನನ್ನಭಿಪ್ರಾಯವು. ಈ ವಿಷಯವಾಗಿ ಭರತಖಂಡದಲ್ಲಿರುವ ಸರ್ಕಾರಿ ಉದ್ಯೋಗಸ್ಥರೇ ಆಗಲಿ ಪ್ರಜೆಗಳೇ ಆಗಲಿ ಯಾವ ಆಕ್ಷೇಪವನ್ನೂ ಮಾಡಿರುವುದಿಲ್ಲ. ಕಲ್ಕತ್ತಾವನ್ನು ಬಿಟ್ಟು ಹೊರಟುಹೋಗುವುದು ಎಂದರೆ—ಅಲ್ಲಿನ ಪ್ರಜೆಗಳ ಸಂಬಂಧವನ್ನೆಲ್ಲಾ ಕಳೆದುಕೊಂಡು ಹೋಗುವುದೇ ಎಂದು ಲಾರ್ಡ್ ಕರ್ಜನ್‌ರವರು ಹೇಳುತ್ತಾರೆ. ಈ ಮಾತಿನೊಳ್ ನೆ ವೈಸ್‌ರಾಯರು ವಿಶೇಷಭಾವಿಸುವರೆಂದು ನಾನು ನಂಬಿ ಈ [illegible]. ಕಲ್ಕತ್ತಾದ ಮೇಲೆ ನನಗೆ ತುಂಬಾ ಅಭಿಮಾನವೂ ಪಕ್ಷಪಾತವೂ ಇರುವುದು. ಆದರೆ ಪ್ರಜಾಭಿಪ್ರಾಯವೆಲ್ಲಾ ಕಲ್ಕತ್ತಾದಲ್ಲೇ ಇರುವುದೆಂದೂ, ಇದೇ ಶಾಶ್ವತವೂ ಕಲ್ಪಿತವಲ್ಲದ ಸ್ವಾತಂತ್ರ್ಯವೂ ಆದ ರಾಜಧಾನಿಯೆಂದು ಹೊರತು ಉಳಿದ ಯಾವ ಪಟ್ಟಣವೂ ಆಗತಕ್ಕದ್ದಲ್ಲವೆಂದೂ ಹೇಳುವರೆ ನಾನು ಅದನ್ನೊಪ್ಪಲಾರೆನು. ರಾಜಧಾನಿಯನ್ನು ದಿಲ್ಲಿಗೆ ವರ್ಗಾಯಿಸಿದುದರಿಂದ ಇದುವರೆಗೂ ಯಾವ ವಿಷಯದಲ್ಲೂ ತೊಂದರೆಯನ್ನುಂಟುಮಾಡತಕ್ಕ ವ್ಯವಹಾರವೇನೂ ನನಗೆ ಗೋಚರಿಸಿರುವುದಿಲ್ಲ. ಇಂಡಿಯಾ ಗೌರ್ನಮೆಂಟಿನವರು ಯಾವ ತೊಂದರೆಯನ್ನೂ ಹೊಂದದ ದೃಷ್ಟಿಯಿಂದ ಕೆಲಸವನ್ನು ಸಾಗಿಸಿಕೊಂಡೇ ಹೋಗುತ್ತಿದ್ದಾರೆ" ಎಂದು ಮೊದಲಾಗಿ ನುಡಿಯಲು, ಲಾರ್ಡ್ ಕರ್ಜನ್‌ರವರು ಆ ಪ್ರಶ್ನೆ ತೀರ್ಮಾನವನ್ನು ಹಿಂದಕ್ಕೆ ತೆಗೆದುಕೊಂಡುದಲ್ಲದೆ, "ನಾನು ಲಾರ್ಡ್ ಕ್ರೂಯರವರನ್ನು ಎಷ್ಟುಮಟ್ಟಿಗೆ ಒಡಂಬಡಿಸಬೇಕೆಂದು ಪ್ರಯತ್ನಿಸಿದೆನೋ ನನ್ನನ್ನು ಅವರು ಅಷ್ಟು ಒಡಂಬಡಿಸಿಬಿಟ್ಟರು" ಎಂದು ಹೇಳಿಬಿಟ್ಟರು.

ಸಿಂಹಳದ್ವೀಪದಲ್ಲಿ ಸ್ವದೇಶೀಯ ಕೋಲಾಹಲ

ಲಂಕಾದ್ವೀಪಕ್ಕೆ ಸಿಂಹಳವೆಂದೂ ಹೆಸರುಂಟು. ಇದು ಆಂಗ್ಲಜನರ ವಶವರ್ತಿಯಾದ ಬಳಿಕ ಅದರಲ್ಲಿನ ಜನರ ನಡೆನುಡಿಗಳೆಲ್ಲಾ ವಿಶೇಷವಾಗಿ ಪಾಶ್ಚಾತ್ಯರ ಅನುಸರಣೆಯಲ್ಲೇ ಬರುತ್ತಿದ್ದುವು. ಇತ್ತೀಚೆಗೆ ಭರತಖಂಡದಲ್ಲೂ ಪ್ರಪಂಚದ ಆ ಭಾಗಗಳಲ್ಲೂ ತಲೆಯೆತ್ತುತ್ತಿರುವ ಸ್ವಾಭಿಮಾನತೇಜಸ್ಸು ಲಂಕಾದ್ವೀಪದಲ್ಲೂ ಒಂದುತೆರದ ಪ್ರೇರಣೆಯನ್ನು ಮಾಡಿದಂತೆ ಕಾಣುತ್ತಿದೆ. ಆ ದ್ವೀಪದ ಯಾವುದೊಂದು ಪತ್ರಿಕೆಯಲ್ಲೂ ಸ್ವದೇಶೋದ್ಯಮದ ವಿಷಯಗಳೇ ತುಂಬಿರುತ್ತಿವೆ. ಕಳೆದ ತಿಂಗಳು ಅಲ್ಲಿನ ವಿಕ್ಟೋರಿಯಾ ಉಪವನದಲ್ಲಿ ಸಿಂಹಳೀಯರ ಒಂದು ಮಹಾಸಭೆ ಕೂಡಿದ್ದಿತು. ಜಾತಿಮತಭೇದಗಳ ತಾರತಮ್ಯವಿಲ್ಲದೆ ದೇಶೀಯರೆಲ್ಲಾ ಒಂದು ಜಾತಿಯವರಾಗಿರುವುದೆಂಬ ಭಾವದಿಂದ ೫೦ ಸಾವಿರ ಮಂದಿಗಳು ಒಂದೇ ಮನಸ್ಸಿನಿಂದ ಆ ಸಭೆಗೆ ಸೇರಿದ್ದರು. ಇದುವರೆಗಿದ್ದ ಪಾಶ್ಚಾತ್ಯ ಪದ್ಧತಿಯ "ಗುಡ್ ಮಾರ್ನಿಂಗ್" ಮೊದಲಾದ ವಂದನೋಕ್ತಿಗಳೂ ಅನ್ಯಭಾಷೆಗಳೂ ಸಹ ವಿಸರ್ಜಿಸಲ್ಪಟ್ಟು, ಪ್ರಾಚೀನಪದ್ಧತಿಯ ನಮಸ್ಕಾರಗಳೂ ಉಡಿಗೆತೊಡಿಗೆಗಳೂ ಸಭಿಕರಲ್ಲಿ ತೋರುತ್ತಿದ್ದುವು. ಆಹಾರ ಸ್ವೀಕಾರದಲ್ಲೂ ರೊಟ್ಟಿ, ಸೋಡಾ, ಲೆಮನೇಡ್ ಮೊದಲಾದುವುಗಳಲ್ಲ, ದಿಡ್ಡಪ್ಪು ಅನ್ನ ನೀರು ಮೊದಲಾದ ಪ್ರಾಕೃತಿಕ ಆಹಾರಗಳೇ ಸ್ವೀಕರಿಸಲ್ಪಟ್ಟುವು. ಸಭೆಯಲ್ಲಿ ಉಪಯೋಗಿಸಿದ ಭಾಷೆಯೆಲ್ಲಾ ಸಿಂಹಳೀಯ ಭಾಷೆಯೇ ಆಗಿದ್ದಿತು. ಇನ್ನು ಮುಂದೆ ತಾವೆಲ್ಲರೂ ಪ್ರಾಚ್ಯಾಚಾರಗಳನ್ನೇ ಅನುಸರಿಸಿ ನಡೆಯಬೇಕೆಂತಲೂ, ಅನ್ಯದೇಶೀಯ ಪದ್ಧತಿಗಳನ್ನವಲಂಬಿಸಕೂಡದೆಂತಲೂ, ಅನ್ಯರ ಪದ್ಧತಿಯನ್ನನುಸರಿಸುವುದರಿಂದ ಸಿಂಹಳೀಯ ಜಾತಿನಾಶನವೇ ಕಾಲಾನುಕಾಲದಲ್ಲಿ ಸಂಭವಿಸುವುದೆಂತಲೂ, ಸಿಂಹಳೀಯರ ಪ್ರಾಚ್ಯಚರಿತ್ರವು ಕೀರ್ತಿಕರವಾಗಿಯೂ ಅವರ ಪ್ರಾಚ್ಯಾಚಾರವು ಶ್ರೇಯಸ್ಕರವಾಗಿಯೂ ಇರುವುದೆಂತಲೂ, ಅವರ ದುಷ್ಪ್ರವರ್ತನಪರಿತ್ಯಾಗಶೀಲವೂ ನಿರ್ದಾಕ್ಷಿಣ್ಯವೃತ್ತಿಯೂ ಅಪೂರ್ವಗುಣಗಳಾಗಿರುವುವೆಂತಲೂ, ಅವನ್ನೆಲ್ಲಾ ಬಿಡದೆ ಮುಂದೆ ಕಾಪಾಡಿಕೊಂಡು ಬರಬೇಕೆಂತಲೂ ಭಾಷಣಗಳಾದುವಲ್ಲದೆ ಆ ಅರ್ಥಕ್ಕೆ ಸಭೆಯ ನಿರ್ಧಾರಗಳೂ ಆದುವು.

ಮದ್ರಾಸುಪಟ್ಟಣದ ದಾನಶಾಸನ

ಈಗ ಭರತಖಂಡದ ಪ್ರಸಿದ್ಧಪಟ್ಟಣಗಳಲ್ಲಿ ಒಂದಾಗಿರುವ ಮದ್ರಾಸು ನಗರವು ಈಗ್ಗೆ ೩೦೦ ವರ್ಷಗಳ ಕೆಳಗೆ ೫-೬ ಗುಡಿಸಲುಗಳ ಒಂದು ಬೆಸ್ತರ ಹಳ್ಳಿಯಾಗಿದ್ದಿತು. ಆ ವಿಜಯನಗರವು ಹಾಳಾಗಿ ಅಲ್ಲಿನ ಅರಸರ ಪರಂಪರೆಯ ಶ್ರೀರಂಗರಾಯನು ಚಂದ್ರಗಿರಿಯಲ್ಲಿ ಆಳುತ್ತಿದ್ದನು. ಈ ಮದ್ರಾಸುಪಟ್ಟಣದ ಭಾಗವು ಆತನಿಗೇ ಅಧೀನವಾಗಿತ್ತು. ಅದರ ನೆರೆಹೊರೆಯ ಭೂಮಿಯು ಪೂಂದಮಲ್ಲಿಯ ನಾಯಕನ ವಶದಲ್ಲಿದ್ದಿತು. ರಾಯನು ಈಗಿನ ಮದ್ರಾಸುಪಟ್ಟಣದ ಸ್ಥಳವನ್ನೂ ಆ ನಾಯಕನಿಗೇ ವಹಿಸಿ ಇದಕ್ಕೆ ತನ್ನ ಹೆಸರನ್ನು ಎಂದರೆ "ಶ್ರೀರಂಗರಾಯಪಟ್ಟಣ" ವೆಂದು ಹೆಸರಿಡಬೇಕೆಂದು ಹೇಳಿದ್ದನು. ಆದರೆ ನಾಯಕನು ಹಾಗೆ ಮಾಡದೆ ತನ್ನ ತಂದೆಯ ಹೆಸರನ್ನಿಟ್ಟು "ಚೆನ್ನಪಟ್ಟಣ" ವೆಂದು ಕರೆದನು. ಈಗಲೂ ಅದಕ್ಕೆ ಚೆನ್ನಪಟ್ಟಣವೆಂದು ರೂಢಿಯುಂಟು. ಇದರ ಮೇಲೆ ಶ್ರೀರಂಗರಾಯನು ಮುಳಿಸಿಕೊಂಡಿದ್ದು ಆಂಗ್ಲವರ್ತಕರಿಗೆ ಸಹಾಯಕನಾಗಿ ನಿಂತು ಅವರಿಗೆ ಪಟ್ಟಣದ ಭಾಗವನ್ನು ವಹಿಸಿಕೊಟ್ಟನು.

ಶ್ರೀರಂಗರಾಜನು ೧೬೪೫ ನೇ ಇಸವಿ ನವೆಂಬರ್ ತಾರೀ ೧೪ ರಲ್ಲಿ ಈ ವಿಷಯವಾಗಿ ಬರೆದುಕೊಟ್ಟ ದಾನಶಾಸನದ ಪ್ರತಿಯು ಮದ್ರಾಸಿನ [illegible] ಪ್ರಕಟವಾಗಿದೆ. ಅದರ ಅಭಿಪ್ರಾಯವನ್ನು ಈ ಕೆಳಗೆ ನಾವು ಪ್ರಸಿದ್ಧಿಸಿದ್ದೇವೆ.

"ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀರಂಗರಾಯರವರು ಇಂಗ್ಲೀಷ್ ಕಂಪನಿಯವರ ಮುಖ್ಯ ಸೇನಾಪತಿಯಾದ ಆಗಸ್ಟಸ್ [illegible] ರವರಾದ ನಿಮಗೆ ಬರೆದುಕೊಟ್ಟ ಕೌಲೇನೆಂದರೆ ನೀವು ಆದ ಮೊಗಮ್ಮನ್ನು ಬಿಟ್ಟು ನನ್ನ ಮನಸಿನ ಶ್ರೀರಂಗರಾಜಪಟ್ಟಣಕ್ಕೆ ಬಂದು ವ್ಯಾಪಾರವನ್ನು ವೃದ್ಧಿಗೊಳಿಸಿ, ಪಕ್ಕದಲ್ಲಿ ಬೇಕಾಗಿದ್ದ ಕೋಟೆಯನ್ನು ಬಿಡಿಸಿ [illegible] ಆದುದರಿಂದ ನನ್ನ ರಾಜ್ಯದಲ್ಲಿ ನಿಮಗೆ ಪ್ರೋತ್ಸಾಹವನ್ನು [illegible]

ಇವನ್ನೂ ವೃದ್ಧಿಪಡಿಸುವುದಕ್ಕೋಸ್ಕರ ನಿಮ್ಮ ಕಂಪನಿಗೆ ಸಂಬಂಧಪಟ್ಟ ಕ್ರಯವಿಕ್ರಯದ ವಸ್ತುಗಳ ಮೇಲಿನ ಸುಂಕಗಳನ್ನು ತೆಗೆದುಬಿಟ್ಟಿರುತ್ತೇನೆ. ನಮಗೆ ನೀವು ಸಲ್ಲಿಸಬೇಕಾದ ಪೋರ್ಟ್ ವೆಚ್ಚವನ್ನು ತುಂಬಿಕೊಳ್ಳುವುದಕ್ಕಾಗಿ ರೇವಿನಲ್ಲಿ ಬರುವ ಸುಂಕದಲ್ಲಿ ಸ್ವಲ್ಪ ಭಾಗವನ್ನೂ ಆ ಪಟ್ಟಣದ ಸುತ್ತಣ ಭೂಮಿಯ ಮೇಲಣ ಕಂದಾಯವನ್ನೂ ಬೆಸ್ತರ ಹಳ್ಳಿಯನ್ನೂ ನಿಮಗೆ ಕೊಟ್ಟಿರುತ್ತೇನೆ. ನಿಮ್ಮ ವ್ಯಾಪಾರವು ಬೇಗನೆ ಬೆಳೆಯುವುದಕ್ಕಾಗಿ ಪಟ್ಟಣದ ಪರಿಪಾಲನೆಯ ಭಾರವನ್ನು ನಿಮಗೇ ವಹಿಸಿಕೊಡುವವನಾಗಿದ್ದೇನೆ. ನಿಮ್ಮ ನೆರೆಹೊರೆಯಲ್ಲಿರುವ ಪೂಂದಮಲ್ಲಿಯ ನಾಯಕರು ನಿಮಗೆ ತೊಂದರೆಯನ್ನು ಮಾಡಿದರೆ ನಿಮಗೆ ಸಹಾಯಮಾಡುವುದಕ್ಕೆ ಸಿದ್ಧನಾಗಿದ್ದೇನೆ. ನೀವು ಈ ರೇವಿಯಿಂದ ಹೊರಕ್ಕೆ ಸಾಗಿಸಿಕೊಂಡು ಹೋಗುವ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕುವುದಿಲ್ಲ. ನಿಮ್ಮ ಕಂಪನಿಯ ಹಡಗುಗಳು ದೈವವಶಾತ್ ಗಾಳಿಯಿಂದ ಹೊಡೆದುಕೊಂಡು ಬಂದು ರೇವಿಗೆ ಸೇರಿದರೆ ಅವುಗಳಲ್ಲಿರುವ ವಸ್ತುಗಳನ್ನು ನೀವೇ ತೆಗೆದುಕೊಳ್ಳಬಹುದು. ಅಂಥ ಹಡಗುಗಳು ಇತರ ವರ್ತಕರದಾಗಿದ್ದರೆ ಅದರ ಕರ್ತರು ಬಂದು ಕೇಳಿದಾಗ ಅವುಗಳನ್ನು ಅವರಿಗೆ ಕೊಟ್ಟುಬಿಡಬೇಕು. ಹಾಗೆ ಅದರ ಕರ್ತರಾರೂ ಬರದಿದ್ದರೆ ಆ ಹಡಗುಗಳೂ ಅವುಗಳಲ್ಲಿನ ವಸ್ತುಗಳೂ ನಮಗೇ ಸೇರಬೇಕು. ಪಟ್ಟಣದ ಮೇಲುಸ್ತರಕ್ಷಣೆಯನ್ನು ನಮ್ಮ ವಶದಲ್ಲೇ ಇಟ್ಟುಕೊಳ್ಳುವೆವು. ಪೂಂದಮಲ್ಲಿ ನಾಯಕನಿಗೇ ಆಗಲಿ ಇನ್ನಾವ ನಾಯಕನಿಗೇ ಆಗಲಿ ಆ ಅಧಿಕಾರವನ್ನು ಕೊಡುವವರಲ್ಲ. ನಿಮ್ಮ ವಸ್ತುಗಳು ಪೂಂದಮಲ್ಲಿಯ ಪ್ರಾಂತದಲ್ಲಿ ಹಾದುಹೋದರೆ ಅದಕ್ಕೆ ಸ್ವಲ್ಪ ಸುಂಕವನ್ನು ಕೊಡಬೇಕು. ಈ ಕೌಲನ್ನು ನಂಬಿ ನೀವು ವ್ಯಾಪಾರವನ್ನು ಸಂತೋಷದಿಂದ ಮಾಡಿಕೊಂಡು ಹೋಗಬಹುದು. ನಿಮ್ಮ ಕಡೆಯ ಮನುಷ್ಯರಾರಾದರೂ ನಿಮಗೆ ತೊಂದರೆಕೊಟ್ಟರೆ ಅವರನ್ನು ದಂಡಿಸಿ ನಿಮಗೆ ಸಹಾಯಮಾಡಲು ನಾವು ಸಿದ್ಧರಾಗಿದ್ದೇವೆ. ನಮ್ಮ [illegible] ಈ ಕೌಲನಾಮೆ ಆ ಚಂದ್ರಾರ್ಕವಾಗಿ ನಿಲ್ಲಲಿ" ಎಂಬುದಾಗಿ.

ಈ ಕೌಲನ್ನು ದಾಮರ್ಲ್ಲ ವೆಂಕಟಪ್ಪನಾಯಕನು ಮೊದಲು ಬರೆದುಕೊಟ್ಟಿದ್ದನಂತೆ, ಅದನ್ನೇ ಶ್ರೀರಂಗರಾಯನು ಸ್ಥಿರಪಡಿಸಿದನು. ಹೀಗೆ ಸ್ಥಿರಪಡಿಸಿ ಕೊಟ್ಟುದಕ್ಕಾಗಿ ಇಂಗ್ಲೀಷರು ಆ ಶ್ರೀರಂಗರಾಯನಿಗೆ [illegible] ಗಜ ಉದ್ದದ [illegible] ಮಲ್‌ಬಟ್ಟೆಯನ್ನೂ ೧೬ ಗಜ ಉದ್ದದ ಮಲ್‌ಬಟ್ಟೆ ಮತ್ತೊಂದನ್ನೂ ಶ್ರೀಗಂಧದ ಚೆಕ್ಕೆಯನ್ನೂ ಎಳಲುಗಿಡಗಳನ್ನೂ ಒಂದು ಗುಲಾಬಿ ಅತ್ತರಿನ ಸೀಸೆಯನ್ನೂ ಕಾಣಿಕೆಯಾಗಿ ಕೊಟ್ಟರಂತೆ.

ತೆಂಗಿನ ವ್ಯವಸಾಯಾಭಿವೃದ್ಧಿ

ಈಗ ತೆಂಗಿಗೆ ಬಂದಿರುವ ಪ್ರಾಶಸ್ತ್ಯವು ಹಿಂದೆ ಯಾವಾಗಲೂ ಬಂದಿರಲಿಲ್ಲವೆಂದು ಹೇಳಬಹುದು. ಪ್ರಪಂಚದಲ್ಲಿ ಎಲ್ಲೆಲ್ಲಿ ಇದರ ಬೆಳೆಯನ್ನು ಮಾಡಬಹುದೋ ಅಲ್ಲೆಲ್ಲಾ ಇದನ್ನು ವೃದ್ಧಿಪಡಿಸಬೇಕೆಂಬ ಯೋಚನೆಯು ಸಾಹಸಿಗರಿಗೆ ಹುಟ್ಟಿದೆ. ಕೊಬ್ಬರಿಯಿಂದ ಅನೇಕ ಉಪಯುಕ್ತ ವಸ್ತುಗಳನ್ನು ನಿರ್ಮಿಸಬಹುದೆಂದೂ ಅದರ ನಾರು ಬಹುಪಯುಕ್ತವಾದುದೆಂದೂ ಮೊದಲಾಗಿ ಲಂಡನ್ ಪಟ್ಟಣದಲ್ಲಿ [illegible] ಎಂಬುವರು ಒಂದು ಉಪನ್ಯಾಸವನ್ನು ಮಾಡಿ [illegible] ದೇಶದಲ್ಲಿ ತೆಂಗಿನ ತೋಟವನ್ನು ಮಾಡುವುದಕ್ಕೆ ಅತ್ಯಂತ ಯುಕ್ತವಾದ ಭೂಮಿಯು ವಿಸ್ತಾರವಾಗಿರುವುದೆಂದು ಬೋಧಿಸಿದರು. ಮತ್ತು ೩ ಲಕ್ಷ ರೂಗಳ ಮೂಲಧನವನ್ನು ಹಾಕಿಕೊಂಡು ೫ ಸಾವಿರ ಎಕರೆ ಭೂಮಿಯಲ್ಲಿ ಶಾಸ್ತ್ರೀಯ ಪದ್ಧತಿಯ ಪ್ರಕಾರ ಇದರ ಬೆಳೆಯನ್ನು ಮಾಡಿದರೆ ಆರಂಭಿಸಿದ ೭ ವರ್ಷಗಳಲ್ಲಿ ಅದು ಫಲಕ್ಕೆ ಬಂದು, ವರ್ಷ ೧ಕ್ಕೆ ೧ ಲಕ್ಷದ ೯೦ ಸಾವಿರ ರೂಗಳ ಪ್ರಕಾರ ಉತ್ಪತ್ತಿಯನ್ನು ಕೊಡುವುದೆಂತಲೂ, ಕೆಲ ವರ್ಷಗಳಲ್ಲಿ ಅದು ವರ್ಷ ೧ಕ್ಕೆ ೬ ಲಕ್ಷ ರೂ.ವರೆಗೆ ಉತ್ಪತ್ತಿಯನ್ನು ಕೊಡಲು ಅರ್ಹವಾಗುವುದೆಂತಲೂ ಸ್ಪಷ್ಟವಾಗಿ ತೋರಿಸಿಕೊಟ್ಟರು. ಮತ್ತು ಕೊಬ್ಬರಿಯಿಂದ ಉತ್ತಮವಾದ ಬೆಣ್ಣೆಯನ್ನು ಕೆಡದಂತೆ ತೆಗೆಯಬಹುದೆಂತಲೂ, ಕೊಬ್ಬರಿಯೆಣ್ಣೆಯು ನಾನಾವಿಧದ ಕೆಲಸಗಳಿಗೆ ಉಪಯೋಗಿಸುವುದೆಂತಲೂ, ಇದರ ಬೆಣ್ಣೆಯು ಹಾಲಿನಿಂದ ತೆಗೆದ ಬೆಣ್ಣೆಗಿಂತ ರುಚಿ ಮೊದಲಾದ ಗುಣಗಳಲ್ಲಿ ಕಡಿಮೆಯಾಗದಿರುವುದು ಮಾತ್ರವೇ ಅಲ್ಲದೆ, ಹಾಲಿನ ಬೆಣ್ಣೆಗಿಂತಲೂ ಬೇಗನೆ ಸುಲಭವಾಗಿ ಜೀರ್ಣಿಸತಕ್ಕದ್ದಾಗಿರುವುದೆಂತಲೂ, ಮತ್ತು ಬೆಲೆಯಲ್ಲೂ ಕೂಡ ಅದಕ್ಕಿಂತಲೂ ಸುಲಭವಾಗುವುದೆಂತಲೂ, ಅದುಕಾರಣ ಇದು ವಿಶೇಷೋಪಯುಕ್ತವಾದ ಬೆಣ್ಣೆಯೆಂತಲೂ ದೃಷ್ಟಾಂತಪಡಿಸಿ ಹೇಳಿದರು. ಅವರ ಮೇಲೆ ಲಂಡನ್ ಪಟ್ಟಣದ [illegible] ಭರತಖಂಡದ ದಕ್ಷಿಣ ಭಾಗಗಳಲ್ಲೂ ಸಿಂಹಳದ್ವೀಪದಲ್ಲೂ ತೆಂಗಿನ ತೋಟಗಳನ್ನು ಏರ್ಪಡಿಸಲು ಪ್ರಯತ್ನಪಟ್ಟಿದ್ದಾರೆ. [illegible]

ಪ್ರಕಟ

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕಾರ್ಡ್ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತು ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಜಿಟಿಂಗ್ ಕಾರ್ಡು, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಸ್ವಲ್ಪಕಾಲದಲ್ಲೂ ನಾನಾ ವರ್ಣಗಳಲ್ಲಿ ಮಾಡಿ ಕೊಡಲ್ಪಡುವುದಲ್ಲದೆ ಎಲ್ಲ ವಿಧವಾದ ಬೈಂಡಿಂಗ್ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು ಕೆಂಪು, ಹಸರು ಮೊದಲಾದ ಬಣ್ಣದ ಶಾಯಿಯಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರುತ್ತೇವೆ. ಇಷ್ಟಪಟ್ಟವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಕಾರ್ಡ್ ಪ್ರೆಸ್, ಮೈಸೂರು.

ಮೈಸೂರ್ ಸ್ಟಾರ್

ಸನ್ ೧೯೧೪ ನೆಯ ಮೇ ತಾ॥ ೧೮ ನೆಯ ಸೋಮವಾರ

ಕಾಲಸ್ಥಿತಿ

ಮೈಸೂರು ಸಂಸ್ಥಾನದಲ್ಲಿ ಈ ಆನಂದಸಂವತ್ಸರಾರಂಭದಿಂದ ಇದುವರೆಗಿನ ಕಾಲಸ್ಥಿತಿಯು ಜನಗಳಿಗೆ ಹರ್ಷಕರವಾಗಿಲ್ಲ. ಕಳೆದ ವರ್ಷ ಹಿಂಗಾರಿನ ಮಳೆಗಳು ಆಗದೆ ಹೋದುದರಿಂದ ಬೆಳಸಿನಲ್ಲಿ ತುಂಬಾ ನಷ್ಟವಾಯಿತು. ಈ ವರ್ಷದ ಮುಂಗಾರು ಮಳೆಗಳಾದರೂ ಬೇಗನೆ ಸಂಭವಿಸುತ್ತಿದ್ದರೆ ಜನರಿಗೂ ದನಕರುಗಳಿಗೂ ನೀರಿಗೂ ಆಹಾರಕ್ಕೂ ಇರುವ ತೊಂದರೆಯು ಕಡಿಮೆಯಾಗುತ್ತಿದ್ದಿತು. ಹಾಗಿಲ್ಲದೆ ಹೋಗಿರುವುದರಿಂದ ಬೇಸಾಯಗಾರರ ಹಾಹಾಕಾರವು ಹೆಚ್ಚುತ್ತಲಿದೆ. ಮುಂಗಾರು ಬಿತ್ತನೆಯ ಕಾಲವು ಮುಗಿಯುತ್ತ ಬಂದಿತು. ಕೆಲವು ಗ್ರಾಮಗಳಲ್ಲಿ ನೀರಿಗಾಗಿ ಪಡುವ ತಾಪತ್ರಯವು ಕೇಳಿದವರಿಗೆಲ್ಲಾ ಸಂಕಟಕರವಾಗಿದೆ. ಸಂಸ್ಥಾನದಲ್ಲಿ ಬೆಂಗಳೂರು ಕೋಲಾರಗಳ ಹೊರತು ಉಳಿದ ಯಾವ ಡಿಸ್ಟ್ರಿಕ್ಟಿನಲ್ಲೂ ಜನವರಿಯಿಂದ ಇದುವರೆಗೆ ಬಿದ್ದಿರುವ ಮಳೆಯು ಸರಾಸರಿ ೧ ಅಂಗುಲದಷ್ಟು ಆಗಿರುವುದಿಲ್ಲ. ಮೊನ್ನೆಯ ವಾರದಲ್ಲಿ ಮಾತ್ರ ಮಲೆನಾಡಿನ ೨-೩ ತಾಲ್ಲೂಕುಗಳಲ್ಲಿ ೧-೨ ಅಂಗುಲದ ಮಳೆಗಳಾಗಿವೆ. ಬೆಂಗಳೂರು ಕೋಲಾರಗಳ ಹೊರತು ಉಳಿದ ಬಯಲು ಸೀಮೆಯಲ್ಲಿ ಬಹು ಭಾಗದ ಭೂಮಿಯು ಬಿತ್ತನೆಯನ್ನೇ ಕಾಣದು. ಈ ಕಾರಣದಿಂದ ಆಹಾರ್ಯ ವಸ್ತುಗಳ ಬೆಲೆಯು ಏರುತ್ತಲಿದೆ. ಈಗಿಗಿಂತಲೂ ಮುಂದಿನ ಕಾಲಸ್ಥಿತಿಯು ಎಷ್ಟು ಭಯಂಕರವಾಗುವುದೋ ಎಂದು ಪ್ರಜೆಗಳು ಯೋಚಿಸುತ್ತಿದ್ದಾರೆ.

ಆದರೆ ದೈವಾನುಗ್ರಹದಿಂದ ಇನ್ನು ಮುಂದಿನ ಕಾಲಸ್ಥಿತಿಯು ಅಷ್ಟು ಭಯಂಕರವಾಗಲಾರದೆಂದು ಹೇಳಲು ಅವಕಾಶವಿದೆ. ಏಕೆಂದರೆ ಈ ವಾರದಲ್ಲಿ ಬಂದಿರುವ ತಂತ್ರೀವಾರ್ತೆಗಳನ್ನು ನೋಡುವಲ್ಲಿ ಬರ್ಮಾ-ಬಂಗಾಳಗಳಲ್ಲೂ ಬಂಗಾಳಕೊಲ್ಲಿಯಲ್ಲೂ ಮದ್ರಾಸಿನ ಉತ್ತರಕ್ಕೂ ಮಳೆಗಳಾಗುತ್ತಿವೆ. ಕಳೆದ ೧ ವಾರದಲ್ಲಿ ಭರತಖಂಡದ ದಕ್ಷಿಣ ಭಾಗದಲ್ಲಿರುವ ಕೊಲಂಬೋವಿನಲ್ಲಿ ೧೦॥ ಅಂಗುಲ ಮಳೆಯಾಗಿದೆ. ಕೊಚ್ಚಿ ತಿರುವಾಂಕೂರುಗಳ ಕಡೆಯೂ ಹಾಗೆಯೇ ಮಳೆಯಾಗಿದೆ. ಕಲ್ಲಿಕೋಟೆ ಮಂಗಳೂರು ಕಡೆಯೂ ಮಳೆಯಾಗುತ್ತಿದೆ. ನೀಲಗಿರಿ ಕೊಡೆಕೆನಾಲಿನ ಕಡೆಯೂ ಬಲವಾದ ಮಳೆಯಾಗುತ್ತಿವೆ. ಶಾಲ್ಯ ತಿರುಚಿನಾಪಲ್ಲಿ ಮಧುರೆಗಳ ಕಡೆಯೂ ಕಳೆದವಾರ ಮಳೆಗಾರಂಭವಾಗಿದೆ. ಹೀಗೆ ನಮ್ಮ ದೇಶದ ಸುತ್ತಲೂ ಮಳೆಗಳಿಗೆ ಆರಂಭವಾಗಿರುವುದರಿಂದ ಈ ವಾರದೊಳಗಾಗಿ ನಮ್ಮಲ್ಲೂ ಮಳೆಗಾರಂಭವಾಗಬಹುದೆಂದು ಊಹಿಸಬಹುದಾಗಿದೆ. ನಿನ್ನೆ ಮೊನ್ನೆಯಿಂದ ಇತ್ತಲೂ ಕಾಣುತ್ತಿರುವ ಮೇಘಚಿಹ್ನೆ ಸುಮುಖವಾಗಿದೆ. ದೈವಾನುಗ್ರಹದಿಂದ ಬೇಗನೆ ಸಂಸ್ಥಾನದಲ್ಲಿ ಮಳೆಗಳು ಬಿದ್ದು ಪ್ರಜೆಗಳ ಒಳಹೊರಗಿನ ತಾಪಗಳು ಶಾಂತವಾಗುವ ಸ್ಥಿತಿಯುಂಟಾಗಲೆಂದು ಕೋರುತ್ತೇವೆ.

ಭಾರತೀಯ ನಾರೀಮಣಿಯರು

ಸಂಯುಕ್ತ ... ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರ್ ಪದವಿಯನ್ನು ಪಡೆಯಲು ಒಬ್ಬ ಹೆಂಗಸು ಪ್ರಯತ್ನಪಟ್ಟು ... ಹೀಗೆ ನಮ್ಮ ಭರತಖಂಡದ [redacted] ಗಸಭಿಕಳು ಆರಿಸಲ್ಪಟ್ಟದ್ದಕ್ಕೆ ಇದೇ ಮೊದಲೆಂದು ಹೇಳಬಹುದು. ಇದಕ್ಕೆ ಮೊದಲು ೧೯೧೧ ನೆಯ ವರ್ಷದಲ್ಲಿ ಅಲಹಾಬಾದಿನ ಮ್ಯುನ್ಸಿಪಾಲಿಟಿಗೆ ಸಭಿಕಳಾಗಿ ಸೇರಲು ಒಬ್ಬಾಕೆಯು ಪ್ರಯತ್ನಪಟ್ಟಿದ್ದು ತಿರಸ್ಕೃತಳಾಗಿದ್ದಳು. ಆದರೆ ಭಾರತೀಯಸ್ತ್ರೀಯರಾರೂ ಇಂಥ ಸಾಹಸದ ಕಾರ್ಯಕ್ಕೆ ಇದುವರೆಗೂ ಮುಂದೆ ಬಂದುದಿಲ್ಲ. ಬಂಗಾಳಾ ನಾರೀಮಣಿಯರು ಮೊದಲು ಇಂಥ ವಿಷಯದಲ್ಲಿ ಪ್ರಯತ್ನಶೀಲರಾಗಬಹುದು. ಆದರೆ ಕಲ್ಕತ್ತಾಪಟ್ಟಣದೊಳಗೆ ಮೊನ್ನೆ ತಾನೇ ಅಲ್ಲಿನ ಪೌರಕಾರ್ಯನಿರ್ವಾಹಕ ಸಭೆಯೊಳಗೆ ಒಂದು ವಿಷಯವು ಚರ್ಚೆಗೆ ಬಂದು ಪರಾಜಿತವಾಗಿ ಹೋದುದನ್ನು ನೋಡಿದರೆ ನಮ್ಮ ದೇಶದ ನಾರೀಮಣಿಗಳು ಇಂಥ ಕಾರ್ಯದಲ್ಲಿ ತೊಡಗುವ ಕಾಲವು ಇನ್ನೂ ಬಹುದೂರದಲ್ಲಿರುವುದೆಂದೋ ಅಥವಾ ಅಸಂಭವವೆಂದೋ ಹೇಳಬೇಕಾಗುತ್ತದೆ. ಆ ಸಂಗತಿಯೇನೆಂದರೆ-ಕಲ್ಕತ್ತಾಪಟ್ಟಣದ ಸಾರ್ವಜನಿಕೋದ್ಯಾನ ವನವನ್ನು ವಾರಕ್ಕೆ ಒಂದೆರಡು ದಿನಗಳ ಸಾಯಂಕಾಲದಲ್ಲೂ ಹೆಂಗಸರ ಉಪಯೋಗಕ್ಕಾಗಿಯೇ ಕಾದಿಡುವಂತೆ ಮಾಡಲ್ಪಡಬಹುದೆ? ಎಂಬ ವಿಷಯವು ಅಲ್ಲಿನ ಪೌರಕಾರ್ಯ ನಿರ್ವಾಹಕಸಭೆಯ ಚರ್ಚೆಗೆ ಬಂದಿತು. ಸಭಿಕರಲ್ಲಿ ಪೂರ್ವಾಚಾರಪರಾಯಣರು ನಮ್ಮ ಹೆಂಗಸರು ಇಂಥ ಬಹಿರಂಗ ಪ್ರದೇಶಗಳಿಗೆ ಬರುವುದು ಸಾಹಸಕಾರ್ಯವೆಂತಲೂ, ಅವರನ್ನು ಹಾಗೆ ಹೊರಕ್ಕೆ ಬರಗೊಟ್ಟರೆ ಇಂಗ್ಲಂಡಿನ ಸ್ತ್ರೀಯರು ಸ್ತ್ರೀಸ್ವಾತಂತ್ರ್ಯವಾದಿಗಳಾಗಿ ಮಾಡುತ್ತಿರುವಂತಹ ಅನರ್ಥವೇ ನಮಗೂ ಸಂಭವಿಸುವುದೆಂತಲೂ ಹೇಳಿ ನಿಷೇಧಿಸಿದರು. ಸಂಸ್ಕಾರಕ ಪಕ್ಷದ ಸಭಿಕರು ಸಹ ನಮ್ಮ ಹೆಂಗಸರಿಗೆ ಗೃಹಕೃತ್ಯಕ್ಕೇ ವೇಳೆಯು ಸಾಲದಿರುವಾಗ ಇಂಥ ಬಹಿರ್ವಿಹಾರಕ್ಕೆ ಅವಕಾಶವೆಲ್ಲಿರುವುದೆಂದು ಹೇಳಿ ಅನವಶ್ಯಕತೆಯನ್ನು ಸೂಚಿಸಿದಿದ್ದರು. ಅಂತೂ ಇಂತೂ ಸ್ತ್ರೀಯರಿಗೆ ಮನೆಯೇ ಸ್ವರ್ಗವಾಗಿರಬೇಕೆಂದು ಸ್ಥಿರಪಟ್ಟಿತು. ಬಂಗಾಳದಂತಹ ಮುಂದಡಿಯಿಟ್ಟ ದೇಶದ ನಾರೀಮಣಿಯರು ಇನ್ನೂ ಹೀಗಿರುವಾಗ ಹಿಂದುಳಿದ ದೇಶದ ವರಸಾಹಸವನ್ನೇನು ಹೇಳುವುದು? ಆದರೆ ಅತಿ ಸ್ವಾತಂತ್ರ್ಯವು ಸ್ತ್ರೀಯರಿಗೆ ಕೂಡದೆಂಬ ವಿಷಯವನ್ನು ದೀರ್ಘಾಲೋಚನೆಯುಳ್ಳವರೆಲ್ಲರೂ ಒಪ್ಪಬೇಕಾಗುವುದು

ಪಾರ್ಸಿಯವರ ಆರೋಗ್ಯ

ಭರತಖಂಡದ ಜನರಲ್ಲಿ ಪಾರ್ಸಿಯವರು ವ್ಯಾಪಾರದಲ್ಲೂ ನಾಗರಿಕತೆಯಲ್ಲಿಯೂ ಇತರ ರಾಜಕೀಯಾದಿವಿಷಯಗಳಲ್ಲೂ ವ್ಯಾಪಕತೆಯನ್ನು ಸಂಪಾದಿಸಿಕೊಂಡಿದ್ದಾರೆ. ಅವರಲ್ಲಿ ಸ್ತ್ರೀಪುರುಷರು ಸೌಂದರ್ಯಕ್ಕೂ ಹೆಸರಾದವರು. ಆದರೂ ಆ ಜನರ ಸಂತತಿಯಲ್ಲಿ ಬರಬರುತ್ತ ನಿಶ್ಶಕ್ತರೂ ರೋಗಿಗಳೂ ಹೆಚ್ಚುತ್ತಿರುವರು. ಮುಂದಾಲೋಚನೆಯುಳ್ಳ ಆ ಜನರು ಈ ಪ್ರಗತಿಯನ್ನು ನೋಡಿ ಬೆದರಿ, ಅದರ ಪರಿಹಾರೋಪಾಯವನ್ನು ಹುಡುಕಲು ಸಂಕಲ್ಪಿಸಿ ಈಗ ಪರಿಶೋಧನೆಗಾಗಿ ಒಂದು ಸಂಘವನ್ನೇರ್ಪಡಿಸಿದ್ದಾರೆ. ಅದರಲ್ಲಿ ೩೪ ಮಂದಿ ಪುರುಷವೈದ್ಯರೂ ೮ ಮಂದಿ ಸ್ತ್ರೀವೈದ್ಯೆಯರೂ ಇದ್ದಾರೆ. ಇವರು ಪಾರ್ಸಿ ಪಾಠಶಾಲೆಗಳಲ್ಲಿರುವ ಬಾಲಬಾಲಿಕೆಯರನ್ನೆಲ್ಲಾ ಪರೀಕ್ಷೆ ಮಾಡುತ್ತಿದ್ದಾರೆ. ಇದುವರೆಗೆ ೧೨೩೪ ಮಂದಿ ಬಾಲಬಾಲಿಕೆಯರನ್ನು ಪರೀಕ್ಷಿಸಿದುದರಲ್ಲಿ ೧೯೪ ಮಂದಿಗೆ ಮಲೇರಿಯಾಜ್ವರದಿಂದ ಗಡ್ಡೆ ಕಟ್ಟಿದೆಯೆಂದೂ, ೩೯೧ ಮಂದಿಗೆ ನೇತ್ರದೋಷವು ಸರಿಯಾಗಿಲ್ಲವೆಂದೂ ಗೊತ್ತಾಯಿತು. ಕೇವಲ ಕಿವಿ ಮೂಗು ಈ ಅವಯವಗಳಿಗೆ ಸಂಬಂಧಪಟ್ಟ ರೋಗಗಳುಳ್ಳವರು ೧೦೦ ಕ್ಕೆ ೫೦ ರಷ್ಟು ಇರುವರೆಂದು ಗೊತ್ತಾಯಿತು. ಹಲ್ಲಿನ ರೋಗವುಳ್ಳವರು ವಿಶೇಷವಾಗಿರುವರು. ಪಾರ್ಸಿ ಹುಡುಗರಿಗಾಗಿಯೇ ಉತ್ತಮವಾದ ಉಪವನಸ್ಥಲವನ್ನು ಅಂಧೇರಿಯಲ್ಲಿ ನಿರ್ಮಿಸಿದ್ದಾರೆ. ಶಾಲೆಗಳ ವಿಶ್ರಾಂತಿಯ ಕಾಲದಲ್ಲಿ ಇವರುಗಳು ಅಲ್ಲಿಗೆ ಹೋಗಿ ಸುಖವಾಗಿ ಕಾಲವನ್ನು ಕಳೆದು ಆರೋಗ್ಯವನ್ನು ಪಡೆದು ಬರುವಂತೆ ಏರ್ಪಡಿಸಿದ್ದಾರೆ. ಮುಂದೆ ಇನ್ನೂ ಇತರ ಆರೋಗ್ಯವೃದ್ಧ್ಯುಪಾಯಗಳನ್ನು ಸ್ಥಾಪಿಸುವುದರಲ್ಲಿದ್ದಾರೆ. ಕಾರ್ಯಪಟುಗಳ ಸ್ವಭಾವವು ಹೀಗಿರುವುದು.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಪೋಲೀಸಿನವರು ಬೀಡಿ ಸಿಗರೇಟನ್ನು ಸೇದುವ ಅಲ್ಪವಯಸ್ಸಿನ ಹುಡುಗರನ್ನೂ, ಅವರಿಗೆ ಆ ಪದಾರ್ಥಗಳನ್ನು ಮಾರುವ ಅಂಗಡಿಯವರನ್ನೂ ಹಿಡಿದು ದಂಡನೆಗೆ ಗುರಿಮಾಡುತ್ತಿರುವರು. ಈಗ ಅಂಥವರಲ್ಲಿ ೩-೪ ಜನರಿಗೆ ೪ ಅಣೆಯಂತೆ ಅಪರಾಧದಂಡನೆಯಾಗಿರುವುದು. ಇದು ಅತ್ಯವಶ್ಯಕವಾದ ವಿಚಾರವಾದುದರಿಂದ ಪೋಲೀಸರು ಹೆಚ್ಚು ಶ್ರದ್ಧೆಯನ್ನು ವಹಿಸಬೇಕಾಗಿ ಸೂಚಿಸುವೆವು.

ಕನ್ನಂಬಾಡಿಯ ಬಳ್ಳ [redacted] ಗೆಯುತ್ತಿರುವಾಗ ಕೆಲವು ಹಚ್ಚೆಯ ಕಲ್ಲುಗಳು ಭೂಗರ್ಭದಲ್ಲಿ ಕಂಡು ಬಂದವೆಂದು ಕೇಳುತ್ತೇವೆ

ಬೊಂಬಾಯಿ ಗೌರ್ನರವರಾದ ಲಾರ್ಡ್ ವೆಲ್ಲಿಂಗ್‌ಡನ್ನವರು ತಮ್ಮ ಪತ್ನಿಯ ಸಮೇತ ಜೂನ್ ತಾ॥ ೬ ರಲ್ಲಿ ಮಹಾಬಲೇಶ್ವರದಿಂದ ನೀಲಗಿರಿಗೆ ಹೋಗಿ ಅಲ್ಲಿರುವ ಮದ್ರಾಸು ಗೌರ್ನರಾದ ಲಾರ್ಡ್ ಪೆಂಟ್ಲಾಂಡ್‌ರವರ ಅತಿಥಿಗಳಾಗಿರುವರು. ಅಲ್ಲಿಗೆ ಹೋಗುವಾಗ್ಗೆ ಮದ್ರಾಸಿನಲ್ಲಿ ಒಂದುದಿನ ನಿಲ್ಲುವರು. ನೀಲಗಿರಿಯಿಂದ ಬೊಂಬಾಯಿಗೆ ಹಿಂದಿರುಗಿ ಹೋಗುವಾಗ್ಗೆ ನಮ್ಮ ಶ್ರೀಮನ್ಮಹಾರಾಜರ ಪ್ರಾರ್ಥನೆಯ ಪ್ರಕಾರ ರಾಜಧಾನಿಗೆ ಸಂದರ್ಶನವನ್ನಿತ್ತು ಇಲ್ಲಿನ ವರ್ಧಂತ್ಯುತ್ಸವಾದಿಗಳನ್ನು ಸಂದರ್ಶಿಸಿಕೊಂಡು ಬೆಂಗಳೂರಿಗೆ ಹೋಗಿ, ಅಲ್ಲಿ ರೆಸಿಡೆಂಟರ ಅತಿಥಿಗಳಾಗಿದ್ದು ಜೂನ್ ತಾ॥ ೧೮ ರಲ್ಲಿ ಪೂನಾಪಟ್ಟಣವನ್ನು ಸೇರುವರು

ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರಲ್ಲಿ ಬಹಳ ಹೊತ್ತು ಮಳೆಯಾಗಿ ವಾಯುಗುಣದಲ್ಲಿ ಉಷ್ಣಾಂಶವು ಅತಿಯಾಗಿ ತಂಪಾಗಿರುವುದು. ಹೆಚ್ಚು ಗಾಳಿ ಬೀಸುತ್ತಿದ್ದುದರಿಂದ ಅನೇಕ ಮರಗಳ ಕೊಂಬೆಗಳು ಮುರಿದುಹೋದುದಲ್ಲದೆ ಟೆಲಿಗ್ರಾಫಿನ ಮತ್ತು ವೈದ್ಯುತ್ ದೀಪದ ತಂತಿಗಳಿಗೆ ಅಪಾಯವಾಗಿ ಆ ರಾತ್ರಿ, ದೀಪದ ಬೆಳಕೇ ಇಲ್ಲದೆ ಕತ್ತಲೆಯಾಗಿದ್ದಿತು. ರಾಜಧಾನಿಯಲ್ಲೂ ಆ ರಾತ್ರಿ ದೀಪವು ಆರಿಹೋಗಿ ಹಾಗೇ ಆಯಿತಲ್ಲದೆ, ಗುಡುಗು ಸಿಡಿಲಿನ ಆರ್ಭಟವು ಹೆಚ್ಚಾಗಿದ್ದರೂ ೨ ಸೆಂಟು ಮಳೆ ಮಾತ್ರವಾಗಿ ಬಿಸಿಲಿನ ತಾಪವನ್ನು ಇನ್ನೂ ಹೆಚ್ಚು ಮಾಡಿತು. ನಿತ್ಯದಲ್ಲೂ ಮೋಡವು ಕಟ್ಟಿ ಆಶೆಯ ಮಾಡುತ್ತಿರುವುದು

ರಾಜಧಾನಿಯ ಶ್ರೀಮಂತ ನೀಲಗಿರಿ ಮಲ್ಲಣ್ಣನವರ ಪತ್ನಿಯವರು ಕೆಲ ವರ್ಷಗಳಿಂದ ಕ್ಷಯರೋಗ ಪೀಡಿತರಾಗಿದ್ದು ಎಷ್ಟು ಚಿಕಿತ್ಸೆಯನ್ನು ಮಾಡಿಸಿದಾಗ್ಯೂ ಗುಣವನ್ನು ಹೊಂದದೆ ಕಳೆದ ತಾ॥ ೧೦ ರಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತದೆ. ಈಕೆಗೀಗ ೩೮ ವರ್ಷ ವಯಸ್ಸಾಗಿದ್ದರಲ್ಲದೆ ವಿಶೇಷ ದಯಾಪರರಾಗಿಯೂ ಗುರುದೈವಭಕ್ತಿಯುತರಾಗಿಯೂ ದಾನಧರ್ಮಪರೋಪಕಾರನಿರತರಾಗಿಯೂ ಇದ್ದರು. ಮ॥ ಮಲ್ಲಣ್ಣನವರಿಗೆ ಈ ಮಧ್ಯವಯಸ್ಸಿನಲ್ಲಿ ಪತ್ನೀವಿಯೋಗವು ಪ್ರಾಪ್ತವಾದುದಕ್ಕಾಗಿ ನಾವು ಈ ಮೂಲಕ ನಮ್ಮ ಅನುತಾಪವನ್ನು ಪ್ರಕಟಿಸುತ್ತೇವಲ್ಲದೆ ಇವರಿಗೂ ಇವರ ಕುಟುಂಬದವರಿಗೂ ದುಃಖೋಪಶಮನವಾಗಲೆಂದು ಕೋರುತ್ತೇವೆ

ಬೆಂಗಳೂರಿನಲ್ಲಿ ಆರಣಿ ಜಹಗೀರ್ದಾರರ ಮೋಟಾರಿನಿಂದ ಒಬ್ಬ ಬಾಡಿಗೆಬಂಡಿಯ ಮನುಷ್ಯನು ಸತ್ತುಹೋದನಷ್ಟೆ. ಈ ವಿಷಯವನ್ನು ಜಹಗೀರ್ದಾರರು ಪೋಲೀಸಿಗೆ ತಿಳಿಸಲಿಲ್ಲ. ಈಗ ಪೋಲೀಸಿನವರು ಅವರಮೇಲೆ ಇ. ಪಿ. ಕೋಡು ೩೦೪ ಎ, ೧೭೬ ಸೆಕ್ಷನ್ನುಗಳ ಪ್ರಕಾರ ಅಭಿಯೋಗವನ್ನು ತಂದಿರುತ್ತಾರೆ. ಇದರ ವಿಚಾರಣೆಯು ಬೆಂಗಳೂರು ದಂಡಿನ ಜಿಲ್ಲಾ ಮೇಜಿಸ್ಟ್ರೇಟರಾದ ಮ॥ ಕ್ಯಾಸ್ರವರಲ್ಲಿ ನಡೆಯುತ್ತಿದೆ. ಬ್ಯಾರಿಸ್ಟರಾದ ಮೆಸರ್ಸ್ ಲೂವಿಸ್‌ರವರೂ ಲಾಗನ್ಸ್‌ರವರೂ ಅಡ್ವೋಕೇಟ್ ವರದರಾಮರಾವ್‌ರವರೂ ಅಪರಾಧಿಯ ಪಕ್ಷದಲ್ಲೂ, ಪೋಲೀಸ್ ಇನ್ಸ್‌ಪೆಕ್ಟರ್ ಗ್ರಿಫಿತ್‌ರವರು ಫಿರ್ಯಾದಿ ಪಕ್ಷದಲ್ಲೂ ಇದ್ದಾರೆ. ವಿಚಾರ ಮುಗಿದಿತು. ತೀರ್ಮಾನವು ಈ ದಿವಸ ಹೇಳಲ್ಪಡುವುದರಲ್ಲಿದೆ

ವಿದೇಶವೃತ್ತಾಂತಗಳು.

ಕ್ರಿಕೆಟ್ ಆಟದಲ್ಲಿ ಜಗತ್ಪ್ರಸಿದ್ಧನಾಗಿದ್ದ ರೆಜಿನಾಲ್ಡ್ ಫಾಸ್ಟರ್ ಎಂಬಾತನು ಮೃತನಾದನು

ನ್ಯೂ ಆರ್ಲಿಯನ್ಸ್ ಪಟ್ಟಣದೊಳಗಿನ ಸೆಂಟ್ ಲ್ಯೂಕ್ ದೇವಾಲಯದಲ್ಲಿ ಒಂದು ಆಶ್ಚರ್ಯ ವಿವಾಹವಾಯಿತು. ಇದರಲ್ಲಿ ವಿಲ್ಸನ್‌ವರ್ಟ್ ಎಂಬ ವರನ ವಯಸ್ಸು ೯೭. ಮಾರ್ಗರೆಟ್ ಬ್ರೌಟಿ ಎಂಬ ವಧುವಿನ ವಯಸ್ಸು ೧೦೭. ಇವರಿಬ್ಬರೂ [illegible]ಗೆ ಕೆಲಸದಲ್ಲಿದ್ದಾಗ ಪರಸ್ಪರ ಪ್ರೇಮಬದ್ಧರಾಗಿದ್ದರಂತೆ.

ಜಪಾನ್ ದೇಶದ ಪ್ರತಿ ಪಾಠಶಾಲೆಯಲ್ಲೂ ಆಸ್ಟ್ರೇಲಿಯಾ ಭೂಪಟವೊಂದನ್ನು ತಗಲಿಹಾಕಿ, ಉಪಾಧ್ಯಾಯರು ಅದನ್ನು ವಿದ್ಯಾರ್ಥಿಗಳಿಗೆ ತೋರಿಸಿ, ಬೇಗನೆ ಜಪಾನರ ಕೈವಶವಾಗುವುದರಲ್ಲಿರುವ ದೇಶವು ಇದೇ ಎಂದು ಹೇಳುತ್ತಿರುವರಂತೆ. ಈ ಸುದ್ದಿಯನ್ನು ಕೇಳಿ ಆಸ್ಟ್ರೇಲಿಯಾದವರು ಭಯಪಡುತ್ತಿರುವರಂತೆ.

ಫ್ರೆಂಚ್ ದೇಶದಲ್ಲಿ ಸಣ್ಣ ವಯಸ್ಸಿನ ಬಾಲಬಾಲಿಕೆಯರು ತಪ್ಪಿತವನ್ನು ಮಾಡಿದಾಗ ಅವರನ್ನು ವಿಚಾರಿಸುವುದಕ್ಕಾಗಿಯೇ ಬೇರೆ ಕೋರ್ಟನ್ನು ಮಾಡಿದ್ದಾರೆ. ಅದು ವಿಧಿಸುವ ಶಿಕ್ಷೆಯೂ ಆ ವಯಸ್ಸಿನವರಿಗೆ ತಕ್ಕಂತೆ, ಉತ್ತಮಮಾರ್ಗದಲ್ಲಿ ನಡೆಯಿಸುವುದಕ್ಕೆ ಸಜ್ಜನರ ವಶಕ್ಕೊಪ್ಪಿಸುವುದು, ಅಥವಾ ಪಾಠಶಾಲೆಗೆ ಸೇರಿಸುವುದು, ಇಲ್ಲವೆ ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿಸುವುದೇ ಆಗುತ್ತದೆ.

ಗತಿಸಿದ ಎಡ್ವರ್ಡ್ ಚಕ್ರವರ್ತಿಯವರ ಗೌರವಾರ್ಥವಾಗಿ ಲಂಡನ್ನಿನಲ್ಲಿರುವ ಆಂಗ್ಲ ವಸ್ತುಪ್ರದರ್ಶನಾಲಯದಲ್ಲಿ ೬೦ ಲಕ್ಷ ರೂಗಳನ್ನು ವೆಚ್ಚಮಾಡಿ ಒಂದು ಪ್ರದರ್ಶನಾಲಯವನ್ನು ನಿರ್ಮಿಸಿದ್ದರೆ ಜಾರ್ಜ್ ಸಾರ್ವಭೌಮರು ಪತ್ನೀಸಮೇತರಾಗಿ ಹೋಗಿ ಕಳೆದವಾರ ಅದರ ಪ್ರವೇಶ ಮಹೋತ್ಸವವನ್ನು ನೆರವೇರಿಸಿ, ಅದರ ನಿರ್ಮಾಣದ ವಿಷಯದಲ್ಲಿ ತಮಗುಂಟಾದ ವಿಶೇಷಾನಂದವನ್ನು ವ್ಯಕ್ತಪಡಿಸಿದರು

ಪತ್ರಿಕಾಸಂಪಾದಕ ಸಾರ್ವಭೌಮನೆಂದು ಖ್ಯಾತಿಗೊಂಡಿದ್ದು ಟಿಟಾನಿಕ್ ಹಡಗಿನಲ್ಲಿ ಮುಳುಗಿ ಹೋದ ವಿಲಿಯಂ ಸ್ಟೆಡ್‌ರವರ ಜ್ಞಾಪನಾರ್ಥವಾಗಿ ಅವರ ಊರ್ಧ್ವಾಂಗದ (ಬಸ್ಟ್) ಪ್ರತಿಮೆಯು ಹೇಗ್ ಪಟ್ಟಣದ ಶಾಂತಿಭವನಾದದಲ್ಲಿ ಕಳೆದ ಏಪ್ರಿಲ್ ತಾ॥ ೧೪ ರಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು ಅಮೇರಿಕೆಯ ಮಂತ್ರಿಯವರು, ಆಂಗ್ಲರ ವಿದೇಶಾಂಗ ಮಂತ್ರಿಯವರು ಮೊದಲಾದ ಅನೇಕ ಮಹನೀಯರು ಆ ಕಾಲಕ್ಕೆ ಬಂದಿದ್ದರು ಕೀರ್ತಿಶೇಷರಾದ ಸ್ಟೆಡ್‌ರವರ ಗುಣಕಥನವು ವಿಶೇಷವಾಗಿ ನಡೆಯಿತು

ಹಿಂದೆ ನಡೆದ ಬಾಲ್ಕನ್ ಯುದ್ಧದಲ್ಲಿ ಬಲ್ಗೇರಿಯವರವರೊಬ್ಬರಿಗೇ ಎಷ್ಟು ನಷ್ಟವಾಗಿರುವುದೆಂಬುದನ್ನು ಈ ಕೆಳಗಿನ ವಿವರಣದಿಂದ ತಿಳಿಯುವಲ್ಲಿ ಪ್ರಾಯಶಃ ಪ್ರಪಂಚದೊಳಗೆ ಯುದ್ಧಮಾಡುವವರ ಲಾಭವೆಲ್ಲಾ ಇದೇರೀತಿ ಯಾದುದೆಂದು ಹೇಳಬೇಕಾಗುತ್ತದೆ ಇವರಿಗೆ ಆ ಯುದ್ಧದಿಂದೆಲ್ಲಾ ಆದ ಧನವ್ಯಯ ೩೪ ಕೋಟಿ ರೂಗಳು ರೋಮೇನಿಯಾದವರಿಗೆ ಇವರು ಬಿಟ್ಟುಕೊಡಬೇಕಾದ ದೇಶವು ೯೧ ಕೋಟಿ ರೂ ಗಳ ಬೆಲೆಬಾಳುತ್ತದು ಇದಕ್ಕಿಂತಲೂ ಹೆಚ್ಚಿನ ನಷ್ಟವಾವುದೆಂದರೆ_ಒಳ್ಳೆ ಹುರಿಯದ ಗಂಡಾಳುಗಳು ೧೦೦ ಕ್ಕೆ ೩ ರಂತೆ ಯುದ್ಧದಲ್ಲಿ ಮಡಿದಿರುವುದು

ದೇಶೀಯ ಮಹಾಸಭಾ ಪ್ರತಿನಿಧಿಗಳಾಗಿ ಸೀಮೆಗೆ ಹೋಗಿರುವ ಮಹಾಶಯರಿಗೆ ಸ್ಟೇಟ್ ಸೆಕ್ರೆಟರಿಯವರು ಸಂದರ್ಶನವನ್ನಿತ್ತರು ಆಗ ಇಂಡಿಯಾ ಕೌನ್ಸಿಲಿನಲ್ಲಿ ಮಾಡಬೇಕಾದ ಸುಧಾರಣೆ ಮೊದಲಾದ ವಿಷಯಗಳನ್ನೆಲ್ಲಾ ಇವರು ನಿವೇದಿಸಿದರು ಕಳೆದ ತಾ॥ ೧೮ರ ಬೆಳಗ್ಗೆ ಸರ್ ವಿಲಿಯಂ ವೆಡರ್ಬರ್ನರವರು ಇವರಿಗೆಲ್ಲಾ ಒಂದು ಔತಣವನ್ನು ಮಾಡಿಸಿದರು ಅಲ್ಲಿ ಅನೇಕ ಮಂದಿ ಲಾರ್ಡುಗಳೂ ಇತರ ಅಭಿಮಾನಿಗಳೂ ದಯಮಾಡಿಸಿದ್ದರು ಇಂಡಿಯಾ ಕೌನ್ಸಿಲ್ ಸಂಸ್ಕರಣವನ್ನು ಕುರಿತ ಒಂದು ಬಿಲ್ಲನ್ನು ಬರುವ ತಾ॥ ೨೪ ರಲ್ಲಿ ಪಾರ್ಲಿಮೆಂಟಿನ ಮುಂದೆ ತರುತ್ತೇವೆಂದು ಸ್ಟೇಟ್ ಸೆಕ್ರೆಟರಿಯವರು ಲಾರ್ಡುಗಳ ಸಭೆಯಲ್ಲಿ ತಿಳಿಸಿರುತ್ತಾರೆ

ಭರತಖಂಡದ ವೃತ್ತಾಂತಗಳು

ಕಳೆದ ತಾ॥ ೪ ರಲ್ಲಿ ಲಾಹೋರುಪಟ್ಟಣದಲ್ಲಿ ಬೆಳಗಿನಜಾವಕ್ಕೆ ದೊಡ್ಡಮಳೆಯು ಆರಂಭವಾಗಿ ಹಗಲು ೪ ಗಂಟೆಯೊಳಗಾಗಿ ೩ ಅಂಗುಲ ಮಳೆಯಾಯಿತು

ಕಳ್ಳರನ್ನು ಹಿಡಿಯುವ ತಂತ್ರವನ್ನು ಕಲಿತುಕೊಂಡು ಬರುವುದಕ್ಕಾಗಿ ಬೊಂಬಾಯಿನ ಮತ್ತು ಕಲ್ಕತ್ತಾದ ಪೋಲೀಸಿನ ಇನ್ಸ್‌ಪೆಕ್ಟರೊಬ್ಬೊಬ್ಬರು ಇಂಗ್ಲೆಂಡಿಗೆ ಕಳುಹಿಸಲ್ಪಡುವುದರಲ್ಲಿದ್ದಾರೆ

ಹಿಂದೂ ವಿಶ್ವವಿದ್ಯಾಲಯಕ್ಕಾಗಿ ಕಳೆದ ಏಪ್ರಿಲ್ ತಿಂಗಳೊಂದರಲ್ಲೇ ೧,೪೯೯೩ರ ರೂಗಳು ಚಂದಾ ಕೂಡಿರುವುದು. ಅದರಲ್ಲಿ ಜೋಧಪುರದ ಸಂಸ್ಥಾನದವರು ಕೊಟ್ಟ ರೂಗಳೇ ೧ ಲಕ್ಷವಾಗಿರುವುದು

ಪ್ಲೇಗ್ ರೋಗದ ವ್ಯಾಪನೆಯಿಂದ ಹಂಪೆಯ ವಿರೂಪಾಕ್ಷ ರಥೋತ್ಸವವು ಕಳೆದ ೧೦ ವರ್ಷಗಳಿಂದಲೂ ನಡೆಯದೆ ನಿಂತುಹೋಗಿದ್ದಿತು ಈ ವರ್ಷ ಅದು ಜರುಗಿತು ಬಹುಶಃ ೬೦ ಸಾವಿರ ಜನರು ಯಾತ್ರೆಗೆ ಬಂದಿದ್ದರು

ಕಳೆದ ತಾ॥ ೧೦ ರಲ್ಲಿ ಕಲ್ಕತ್ತಾಕ್ಕೆ ಸೇರಿದ ಭವಾನೀಪುರದಲ್ಲಿ ೧೪ ವರ್ಷ ವಯಸ್ಸಿನ ದೇವಿ ಎಂಬ ಬ್ರಾಹ್ಮಣಬಾಲಿಕೆಯೊಬ್ಬಳು ತನ್ನ ಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯನ್ನಿಕ್ಕಿಕೊಂಡು ಸುಟ್ಟು ಭಸ್ಮವಾದಳು. ಇದಕ್ಕೂ ಲಗ್ನಸಂಬಂಧದ ಗೋಜಲೆಯೇ ಕಾರಣವಂತೆ.

ಸರ್ಪದಷ್ಟರಾದವರಿಗೆ ಪೊಟ್ಯಾಸಿಯಂ(?)ಯನ್ನು ಹಾಕುವುದರಿಂದ ಗುಣವಾಗುವುದೆಂದು ಪ್ರಕಟವಾಗಿದೆ. ಸೇಲಂ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರು ಸರ್ಪದಷ್ಟನಾದವನೊಬ್ಬನಿಗೆ ಇದೇ ಚಿಕಿತ್ಸೆಯನ್ನು ಮಾಡಲು ಒಂದು ಗಂಟೆ ಹೊತ್ತಿನೊಳಗಾಗಿ ಸ್ವಸ್ಥತೆಗೊಂಡನಂತೆ

ಅನಿಬೆಸಂಟಮ್ಮನವರು ಜಿಡ್ಡು ನಾರಣಯ್ಯರ್‌ರವರ ಮಕ್ಕಳ ಸಂಬಂಧದಲ್ಲಿ ಪ್ರಿವಿಕೌನ್ಸಿಲಿಗೆ ಅಪ್ಪೀಲ್ ಮಾಡಿಕೊಂಡಿದ್ದರಷ್ಟೆ ಅವರು ಹೈಕೋರ್ಟಿನ ತೀರ್ಪುಗಳು ಕ್ರಮವಾಗಿಲ್ಲವೆಂದು ಹೇಳಿ ಅನಿಬೆಸಂಟಮ್ಮನವರ ಪಕ್ಷದಲ್ಲಿ ತೀರ್ಮಾನವನ್ನು ಕೊಟ್ಟರೆಂದು ಪ್ರಕಟವಾಗಿದೆ

ಒಂದೇಸಮನೆ ೩ ರಾತ್ರೆ ನಿದ್ರೆಗೆಡುವುದರಿಂದ ಮನುಷ್ಯನ ಶರೀರಕ್ಕೆ ಉಂಟಾಗುವ ನಷ್ಟ [illegible] ಕಳಕೊಳ್ಳುವುದಕ್ಕೆ ಸಾಧಾರಣವಾಗಿ ೩ ವಾರ(?) ಬೇಕಂತೆ.

ಬೊಂಬಾಯಿಯಲ್ಲಿ ಒಬ್ಬ ಹಿಂದೂ ಹುಡುಗಿಯು ತನ್ನ ತಂದೆಗೋಸ್ಕರ ತಂದಿಟ್ಟಿದ್ದ ಕ್ವಿನೈನ್ ಮಾತ್ರೆಗಳನ್ನೆಲ್ಲಾ ತಾನು ತಿಂದುದಿದ್ದುದರಿಂದ ಅಸ್ವಸ್ಥಳಾಗಿ, ವೈದ್ಯಶಾಲೆಯಲ್ಲಿ ಚಿಕಿತ್ಸೆಮಾಡಿಸಿದರೂ ಗುಣವಾಗದೆ ಸತ್ತಳು ಅನ್ನವು ಕೂಡ ವಿಷವಾದರೆ ಪ್ರಾಣವನ್ನು ತೆಗೆಯುವಾಗ ಔಷಧದ ಮಾತನ್ನೇನು ಹೇಳುವುದು

ಕೊಲಂಬೊನಗರದಲ್ಲಿ ಬುದ್ಧನ ಜನ್ಮದಿನೋತ್ಸವಕ್ಕೆ ಸಂಬಂಧಿಸಿದ ಉತ್ಸವಗಳನ್ನು ನಡೆಯಿಸಲು ಹೋಗುತ್ತಿದ್ದ ಒಂದು ಜನರಗುಂಪು ತಂತಿಯನ್ನು ನೇತುಗಟ್ಟಿ ನಿರ್ಮಿಸಿದ್ದ ಒಂದು ಸೇತುವಿನಮೇಲೆ ಹೋಗುತ್ತಿದ್ದಾಗ ಅದು ಕಿತ್ತುಹೋಗಿ ಬಹುಶಃ ೧೦೦ ಜನರು ನದಿಯಲ್ಲಿ ಬಿದ್ದರು ೯ ಮಂದಿ ಸತ್ತರು, ೩೦ ಜನಕ್ಕೆ ಗಾಯಗಳಾದುವು ಉಳಿದವರಿಗೆ ಯಾವ ಹಾನಿಯೂ ಆಗಲಿಲ್ಲ

ಪೂನಾ ನಗರದ ಸುಬಾರಿವಾಲಾ ಎಂಬ ೧೯ ವರ್ಷ ವಯಸ್ಸಿನ ಪಾರ್ಸಿ ತರುಣನು ಕೊತ್ವಾಲ್‌ಯವರ ಮನೆಯ ೧೬ ವರ್ಷದ ಯುವತಿಯನ್ನು ವರಿಸಿ ಮದುವೆಯಾಗುವುದರಲ್ಲಿದ್ದನು ಆದರೆ ೪ ದಿನಗಳ ಕೆಳಗೆ ಆಕೆಗೆ ವಿಷಮಜ್ವರವು ಬಂದು ಮೃತಳಾಗಲು, ಯುವಕನು ಆಕೆಯ ವಿಯೋಗವನ್ನು ಸೈರಿಸದೆ ತುಪಾಕಿಯನ್ನು ಹೊಡೆದುಕೊಂಡು ಮೋಹದೇವತೆಗೆ ತನ್ನನ್ನೇ ಬಲಿಮಾಡಿದನು

ಪೌರೋಹಿತ್ಯ ವೃತ್ತಿಯನ್ನವಲಂಬಿಸುವವರೆಲ್ಲರೂ ಒಂದು ಪರೀಕ್ಷೆಯಲ್ಲುತ್ತೀರ್ಣರಾಗಬೇಕೆಂಬ ವಿಷಯಕ್ಕೆ ಬರೋಡಾ ಸಂಸ್ಥಾನದವರು ಒಂದು ವಿಧಿಯನ್ನೇರ್ಪಡಿಸಲು ನಿಯಮನಿರ್ಮಾಣಸಭೆಯ ಬಳಿಗೆ ತರಬೇಕೆಂದಿದ್ದರು ಬಹುಮಂದಿ ಇದರ ವಿಷಯದಲ್ಲಿ ಆಕ್ಷೇಪಿಸುತ್ತಿರುವುದರಿಂದ ಸಂಪೂರ್ಣವಾಗಿ ಆ ವಿಷಯದಲ್ಲಿ ಚರ್ಚೆ ನಡೆದು ಕೊನೆಮುಟ್ಟುವವರೆಗೆ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ

ಮೈಸೂರ ಸ್ವಾಮಿಯವರು ಉತ್ತರಾದಿಮಠದ ಸ್ವಾಮಿಗಳು ಸುದಿ[illegible]ಸಿಂದ ಮೊನ್ನೆ ಯ[illegible] ಕಾಂಚೀಪಟ್ಟಣಕ್ಕೆ ಹೋಗಿ ಅಲ್ಲಿ ತಮ್ಮ ಮಠದಲ್ಲಿ ನಾಲ್ಕುದಿನ ಇದ್ದರು ಆನೆಯಮೇಲೆ ಅಂಬಾರಿಯಮೇಲೆ ಕುಳಿತು ವರದರಾಜ ದೇವಾಲಯದ ಸುತ್ತಲೂ ಮೆರವಣಿಗೆ ಮಾಡಿಸಿಕೊಂಡು ಏಳುದೇವತಾಪೂಜೆಯನ್ನು ನಡೆಯಿಸಿದರು ಅಲ್ಲಿನ ವಿದ್ವತ್ಸಮೂಹಕ್ಕೆ ಉಚಿತವಾದ ಸಂಭಾವನೆಗಳನ್ನು ನಡೆಯಿಸಿದರು

ಒಬ್ಬ ಮಹಮ್ಮದೀಯ ಮುಲ್ಲಾನೂ ಅವನ ಕುಟುಂಬದವರೂ ಸಹ ಕ್ರೈಸ್ತ ಮತವನ್ನವಲಂಬಿಸಿದರು ಆ ಮುಲ್ಲಾನ ಮಗಳ ಗಂಡನು ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಿ ಅವಳಿಗೆ ಪುನಃ ಮಹಮ್ಮದೀಯ ಮತದೀಕ್ಷೆಯನ್ನು ಕೊಡಿಸಿದನು. ಆದರೆ ಮುಲ್ಲಾನು ತನ್ನ ಮಗಳಿಗೆ ತಾನೇ ಪೋಷಕನೆಂತಲೂ, ತಾವೆಲ್ಲಾ ಕ್ರೈಸ್ತಮತಕ್ಕೆ ಸೇರಿದ ಬಳಿಕ ಆಕೆಯ ವಿವಾಹ ಬಂಧವು ಮುಕ್ತವಾಗಿ ಹೋಯಿತೆಂತಲೂ ಹೇಳಿ ತನ್ನ ಅಳಿಯನ ಮೇಲೆ ಜಲ್ಲೂಪುರು(?) ಜಿಲ್ಲಾ ಜಡ್ಜಿಯವರಲ್ಲಿ ವ್ಯಾಜ್ಯವನ್ನು ಹೂಡಿದ್ದಾನೆ.

ಸಿನಿಮಾಟೋಗ್ರಾಫಿನ ಚಲಿಸುವ ಚಿತ್ರಗಳು ಪ್ರದರ್ಶಿಸಲ್ಪಡುತ್ತಿವೆಯಷ್ಟೆ ಇದರ ನಿರ್ಮಾಣದಿಂದ ಇಂಗ್ಲೆಂಡಿನಲ್ಲಿ ಬಹು ವ್ಯಾಪಾರವು ಸಾಗುತ್ತಿದೆ. ಆ ಚಿತ್ರಗಳನ್ನು ಉಷ್ಣದೇಶಗಳಲ್ಲಿ ನಿರ್ಮಿಸುವುದು ಅಸಾಧ್ಯವೆಂದೂ, ಅಲ್ಲಿನ ವಾಯುಗುಣಕ್ಕೆ ಅದು ಕೆಟ್ಟುಹೋಗಿ ರಾಸಾಯನಿಕ ಸಂಯೋಗವು ಕೆಡುವುದೆಂದೂ ಹೇಳಲ್ಪಡುತ್ತಿದ್ದಿತು ಈಗ ಅದರ ನಿವಾರಣೋಪಾಯವು ಕಂಡು ಹಿಡಿಯಲ್ಪಟ್ಟಿರುವುದರಿಂದ ಭರತಖಂಡದಲ್ಲೇ ಇದರ ನಿರ್ಮಾಣವು ಈಗ ನಡೆಯುವುದಕ್ಕೆ ಪ್ರಕ್ರಮವಾಗಿದೆ ಕಲ್ಕತ್ತಾ ಪ್ರಾಂತದ ಸುಭಗವಾದ ಸೃಷ್ಟಿವಿಶೇಷಗಳ ಚಿತ್ರವು ಆಗಲೇ ಎತ್ತಲ್ಪಟ್ಟಿದೆ

ತಿರುವಾಂಕೂರು ಸಂಸ್ಥಾನಕ್ಕೆ ಇದುವರೆಗೆ ಮಂತ್ರಿಯವರಾಗಿದ್ದ ಡಿಬಿ ರಾಜಗೋಪಾಲಾಚಾರ್ಯರು ಕೆಲಸವನ್ನು ಬಿಟ್ಟುದರಿಂದ ಆ ಸ್ಥಲಕ್ಕೆ ಅಲ್ಲಿನ ಚೀಫ್‌ಕೋರ್ಟ್ ಜಡ್ಜಿಯವರಾಗಿದ್ದ ಮಿ॥ ಎಂ ಕೃಷ್ಣನ್ ನಾಯರ್ ಬಿ ಎ ಬಿ ಎಲ್ ರವರು ಕಳೆದ ತಾ॥ ೧೧ ರಲ್ಲಿ ನಿಯುಕ್ತರಾದರು ಆ ಸಂಸ್ಥಾನಕ್ಕೆ ೩೭ ವರ್ಷಗಳ ಹಿಂದೆ ಮಾತ್ರ ನಾಯರ್ ಜಾತಿಯವರು ದಿವಾನಗಿರಿಗೆ ಬಂದಿದ್ದರು. ಹಾಗೆ ಬಂದವರಲ್ಲಿ ಇವರು ೨ ನೆಯವರು. ಇವರಿಗೆ ದಿವಾನಗಿರಿ ಯುಂಟಾದುದು ಆ ದೇಶೀಯರಿಗೆಲ್ಲಾ ಸಂತೋಷವನ್ನುಂಟುಮಾಡಿದೆ ಹಿಂದಿನ ದಿವಾನರು ೩ ವರ್ಷಕಾಲ ಅಧಿಕಾರಮಾಡಿ ಸಂಸ್ಥಾನವನ್ನು ಉತ್ತಮಸ್ಥಿತಿಗೆ ತಂದರು.

ಅಲ್ವಾರ್ ಮಹಾರಾಜರು ತಮ್ಮ ಕುಮಾರರಿಗೆ ವಿವಾಹವನ್ನು ಮಾಡಿದ ಶುಭಸಂದರ್ಭದಲ್ಲಿ ತಮ್ಮ ಪ್ರಜೆಗಳಿಗೆ ಯಾವುದಾದರೂ ಹಿತವನ್ನುಂಟುಮಾಡಬೇಕೆಂದು ಸಂಕಲ್ಪ

ಸೇಬು-ಕಿತ್ತಳೆ-ನಿಂಬೆ ಮೊದಲಾದ ರಸಪೂರಿತವಾದ ಹಣ್ಣುಗಳನ್ನು ತಿನ್ನುತ್ತಿದ್ದರೆ ಮನುಷ್ಯನ ನೀಳುವ ದೇಹಂಬಿ(?) ವಿಷವು ಹೋಗಿ [illegible] ವೆಂದು ಹೇಳುತ್ತಾರೆ

ದಿಂದ ತಮ್ಮಲ್ಲಿನ ಜಾಗೀರ್ದಾರರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ೪೦ ಸಾವಿರ ರೂಗಳ ಸಾಲವನ್ನು ಮನ್ನಿಸಿ ಬಿಟ್ಟುಬಿಟ್ಟರು ರೆವಿನ್ಯೂ ಮತ್ತು ಫಾರೆಸ್ಟ್ ಶಾಖೆಗಳಲ್ಲಿ ಪ್ರಜೆಗಳಿಂದ ಬರಬೇಕಾಗಿದ್ದ ೨ ಲಕ್ಷ ರೂಗಳನ್ನು ಮನ್ನಿಸಿಬಿಟ್ಟರು ಕ್ಷಾಮಕಾಲದಲ್ಲಿ ಕೃಷಿಕರ ದನಕರುಗಳಿಗೆ ಒದಗಿಸಿಕೊಟ್ಟ ಮೇವಿಗಾಗಿ ಅವರಿಂದ ಬರಬೇಕಾಗಿದ್ದ ೬೪ ಸಾವಿರ ರೂಗಳನ್ನು ಮನ್ನಿಸಿಬಿಟ್ಟರು ಕಾರಾಗೃಹದಿಂದ ೫೦ ಮಂದಿಗಳನ್ನು ಬಿಡಿಸಿಬಿಟ್ಟರು, ಬ್ರಹ್ಮಚಾರ್ಯಾಶ್ರಮವೊಂದನ್ನು ಸ್ಥಾಪಿಸುವುದಕ್ಕಾಗಿ ಹತ್ತು ಸಾವಿರ ರೂ.ಗಳನ್ನು ದಾನ ಮಾಡಿದರು

ದಕ್ಷಿಣಾಪ್ರಾಂತದಲ್ಲಿನ ಬೋರೀಜಾತಿಯ ಕಳ್ಳರ ವಿಷಯವು ಹಿಂದೆ ಪ್ರಸ್ತಾಪಿಸಲ್ಪಟ್ಟಿದ್ದಿತಷ್ಟೆ ಇವರ ವಿಚಾರಣೆಯು ಖಾಂಡಿಷ್ ಜಿಲ್ಲಾ ಜಡ್ಜರಲ್ಲಿ ಕಳೆದ ೧॥ ವರ್ಷದಿಂದಲೂ ನಡೆಯುತ್ತಿದ್ದು ಕಳೆದ ತಾ॥ ೯ ರಲ್ಲಿ ತೀರ್ಮಾನವು ಹೇಳಲ್ಪಟ್ಟಿತು ಅಪರಾಧಿಗಳಲ್ಲಿ ೩೪ ಜನಕ್ಕೆ ಮರಣಾಂತದ್ವೀಪಾಂತರವಾಸಶಿಕ್ಷೆಯೂ, ಮೂವರಿಗೆ ೧೦ ವರ್ಷ ನಾಲ್ವರಿಗೆ ೭ ವರ್ಷ ೧೪ ಮಂದಿಗೆ ೪ ವರ್ಷ ಇಬ್ಬರಿಗೆ ೨ ವರ್ಷ ಈ ಮೇರೆಗೆ ಕಠಿನಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿತು ಇವರೆಲ್ಲರೂ ಅಹಮ್ಮದ್‌ನಗರ ನಾಸಿಕ ಜಿಲ್ಲೆಗಳೊಳಗೆ ಬ್ರಾಹ್ಮಣಸಾಧುಗಳಂತೆ ವೇಷವನ್ನು ಹಾಕಿಕೊಂಡು ಕನ್ನ ಕಳುವು ಸುಲಿಗೆ ತಲೆಬಡಿಕತನ ಮೊದಲಾದ ತಪ್ಪುಗಳನ್ನು ನಡೆಯಿಸಿದ್ದವರು ವಿಚಾರಣಾಕಾಲದಲ್ಲಿ ಇವರ ಮೇಲೆ ೧೪೦ ಅಪರಾಧಗಳು ಹೊರಿಸಲ್ಪಟ್ಟಿದ್ದುವು

ಕೊಲೆ ಸುಲಿಗೆ ಮೊದಲಾದ [illegible] ಅಪರಾಧಮಾಡಿದವರು ಅಂಡಮಾನ್ ದ್ವೀಪಕ್ಕೆ ಕಳುಹಲ್ಪಡುವರಷ್ಟೆ ಇವರಿಗೆ ಅಲ್ಲಿ ವಸತಿ ಮೊದಲಾದುವುಗಳು [illegible] ಏರ್ಪಡಿಸಲ್ಪಟ್ಟಿವೆ ನಿಯತಕಾಲವನ್ನು ಕಳೆದ ಬಳಿಕ ಅಲ್ಲೇ ವ್ಯಾಪಾರ ದಾದರೂ ಸೇವಕವೃತ್ತಿಯಲ್ಲಿ ಅವರು ಇರಬಹುದಾದುದು ಈಗ ಮಾಡಿದ್ದಾರೆ ತಮ್ಮ [illegible] ಅವರು ಸ್ವದೇಶಕ್ಕೆ [illegible] ದವರಲ್ಲಿ ೫೩ ಮಂದಿ ಪುರುಷರೂ ೩ ಮಂದಿ ಸ್ತ್ರೀಯರೂ ಕಳೆದವಾರ ಕಲ್ಕತ್ತಾಕ್ಕೆ ಬಂದಿದ್ದರು ಇವರೊಳಗೆ ಬಹು ಜನರು ಧನಶೇಖರವನ್ನು ಮಾಡಿಕೊಂಡಿರುವರು. ಕೊಲೆಯನ್ನು ಮಾಡಿ ದ್ವೀಪಾಂತರವಾಸ ಶಿಕ್ಷೆಯನ್ನನುಭವಿಸಿ ಹಿಂತಿರುಗಿ ಬಂದ ಒಬ್ಬ ಮಹಮ್ಮದೀಯನು ಅಂಡಮಾನ್ ದ್ವೀಪದ ಕಮಿಷನರಲ್ಲಿ ಸೇವಕನಾಗಿದ್ದು ಬಂದಿರುವನು ಇವನ ಬಳಿಯಲ್ಲಿ ೧ ಸಾವಿರ ರೂಗಳಿದ್ದುವು

ನಮ್ಮದೇಶದ ಬೊಂಬಾಯಿಯಂತೆ ಕೂಪ ಸಿಲೋನ್‌ಗಳಾಗಿನ [illegible] ಇದ್ದಾರೆ ಅದರ ಪೂರ್ವಾರ್ಧದವರು ಅವರ ಜಾತಿಯವರು ತಮ್ಮ ದೇಶದ ವಿದ್ಯಾವಿಶೇಷಾದಿಗಳಿಗಾಗಿ ಚೆನ್ನಾಗಿ ಶ್ರಮಪಡುತ್ತಿದ್ದಾರೆ ಮದ್ರಾಸು ನಗರದಲ್ಲಿ ಈ ಜನರು ಒಂದು ಸಭೆಯನ್ನೇರ್ಪಡಿಸಿ, ಊರೂರಿಗೆ ಬೋಧಕರನ್ನು ಕಳುಹಿಸಿ ಸ್ವಜನರನ್ನು ಎಚ್ಚರಿಸುತ್ತಿದ್ದಾರೆ ವಿದ್ಯಾಪ್ರಸಾರಕ್ಕಾಗಿ ಹಣವನ್ನು ಕೂಡಿಸುತ್ತಿದ್ದಾರೆ “ವಿಶ್ವಕರ್ಮ” ಎಂಬ ಹೆಸರಿನ ಮಾಸಪತ್ರಿಕೆಯು ಮದರಾಸಿನಿಂದ ಅರವತ್ತು ಭಾಷೆಯಲ್ಲಿ ಪ್ರಕಟಿಸಲ್ಪಡುತ್ತಿದೆ ಸಿಕಂದರಾಬಾದಿನಲ್ಲಿ “ವಿಶ್ವಕರ್ಮಸಂಘವು” ಸ್ಥಾಪಿಸಲ್ಪಟ್ಟಿದೆ ತಮ್ಮ ಪೂರ್ವಗ್ರಂಥಗಳನ್ನು ಮುದ್ರಿಸುತ್ತಿದ್ದಾರೆ ತಿರುನೆಲ್ವೇಲಿಯಲ್ಲಿಯೂ ಒಂದುಸಂಘವು ಸ್ಥಾಪಿತವಾಗಿದೆ ಬೊಂಬಾಯಿಯಲ್ಲಿ “ವೈಶ್ವಕರ್ಮ” ಎಂಬ ಪತ್ರಿಕೆಯು ಪ್ರಕಟಿಸಲ್ಪಡುತ್ತಿದೆ ತಮ್ಮ ಜನರ ಶಿಲ್ಪವಿದ್ಯೆಯ ಪೂರ್ವದ ಪುನಃಸ್ಥಿತಿಗೆ ತರಲು ಪ್ರೋತ್ಸಾಹಿಸುವುದಕ್ಕಾಗಿ ಮಿಸ್ಟರ್ ಆನಂದಕುಮಾರ ಸ್ವಾಮಿಯೆಂಬುವರು ಲಂಡನ್ ಪಟ್ಟಣದಿಂದ “ವಿಶ್ವಕರ್ಮ” ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಪೂನಾಪಟ್ಟಣದಿಂದ “ವಿಶ್ವಬ್ರಹ್ಮವೃತ್ತಿ” ಎಂಬ ಪತ್ರಿಕೆಯು ಪ್ರಕಟವಾಗುತ್ತಿದೆ ಎ ನಿರಂಜನ ಸ್ವಾಮಿಯವರು “ಪ್ರಬೋಧಿನಿ” ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ

ಪತ್ರವ್ಯವಹಾರ

ಶ್ರೀ ಬಸವೇಶ್ವರ ಜಯಂತಿ,
ಶಿಕಾರಿಪುರ.

ಕ್ಷತ್ರಿಯನ್ನನುಸರಿಸಿ ಇದೇ ವೈಶಾಖ ಶು॥ ೩ ಮಂಗಳವಾರ [illegible] ಶ್ರೀ ಬಸವೇಶ್ವರ [illegible] ನಡೆದು ನಂತರ [illegible] [illegible] ಗಂಟೆಯ ತನಕ [illegible] ಹೋರಾಟ(?) [illegible] [illegible]

[illegible]

— [illegible]

ದಳವಾಯಿ ಕೋಡಿಹಳ್ಳಿ

ಇದೇ ವೈಶಾಖ ಶ॥ ೩ ಮಂಗಳವಾರ ದಿನದಲ್ಲಿ ತಾ॥ ಹಳಗೂರು ಹೋ॥ ದಳವಾಯಿಕೋಡಿಹಳ್ಳಿಯ ವ॥ ಬಾಲ ಗೊಂಡು ಚಿಕ್ಕ ಮಲ್ಲಣ್ಣನವರು ವೀರಶೈವ ಭಕ್ತಮಾಹೇಶ್ವರರುಗಳನ್ನು ಅಲಂಕೃತವಾದ ತಮ್ಮ ಮನೆಗೆ ಬರಮಾಡಿಕೊಂಡು ಭೋಜನ ದಕ್ಷಿಣ ತಾಂಬೂಲಗಳಿಂದೆಲ್ಲರನ್ನು ಉಪಚರಿಸಿ ಶರಣಲೀಲಾಮೃತ ಪುರಾಣಶ್ರವಣವನ್ನು ನಡೆಸಿ ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ಬಹು ಭಕ್ತಿಯಿಂದ ಕೊಂಡಾಡಿಸಿದರು ಈ ಉತ್ಸವಕ್ಕೆ ಜನಗಳು ಕೋಡಿಹಳ್ಳಿ, ಬಿದರಹಳ್ಳಿ, ಹುಲಗೂರು ಮೊದಲಾದ ಊರುಗಳಿಂದ ಬಂದಿದ್ದರು. ಭಕ್ತರ ಧ್ಯಾನಗಳು ದಯಪಾಲಿಸಿದ್ದರು ಮನುಷ್ಯನು ಸದಾಕಾಲದಲ್ಲಿಯೂ ಸತ್ಯವಾಗಿ ಆಚರಿಸಬೇಕೆಂಬುದನ್ನು ಕೋಡಿಹಾಳ ತಿರುಗಣನಾಥ ಕಥೆಯಿಂದ ಜನಗಳು ಮರೆದರು. ಶ್ರೀ ಬಸವನ ಗದ್ಯಾದಿಗಳು ಬಹು ಶ್ಲಾಘ್ಯವಾಗಿದ್ದವು. ಇದರ ಸ್ವತಃ ಇದರರ್ಥವನ್ನು ದಳವಾಯಿಕೋಡಿಹಳ್ಳಿ ರಾ॥ ರಾಜಶ್ರೀ ಚಿಕ್ಕ ಬಸಪ್ಪನವರು ಎಲ್ಲರಿಗೂ ತಿಳಿಯುವಂತೆ ಹೇಳಿದರು ತರುವಾಯ ಶ್ರೀಮದ್ವೀರಸ್ವಾಮಿಗಳು ಈ ಜಯಂತ್ಯುತ್ಸವವನ್ನು ಪ್ರತಿವರ್ಷದಲ್ಲಿಯೂ ನಡೆಸಬೇಕೆಂದೂ ನಮ್ಮ ಸಮಾಜಕ್ಕುಪಕಾರಕವಾಗಿರುವ ಸತ್ಯಾರ್ಥ ಪತ್ರಿಕೆಯ ಮರ್ಯಾದಾರ್ಥವಾಗಿ ಒಂದು ರೂಪಾಯಿ ಕಾಣಿಕೆಯನ್ನು ತೆಗೆಯಬೇಕೆಂದೂ ಅಪ್ಪಣೆಕೊಡಿಸಿದುದನ್ನು ಸಭಿಕರೆಲ್ಲರೂ ಅನುಮೋದಿಸಿದರು ಅನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಪ್ರತ್ಯಕ್ಷದರ್ಶಿ

ನೆಲಭಾವಿಯ ಅಪಾಯದ ಸಂಗತಿ

ಹಿ ಣಸೂರು ತಾ॥ ಹಳ್ಳಿಕೆರೆ-ಗ್ರಾಮಕ್ಕೆ ಸ್ವಲ್ಪ ದೂರದಲ್ಲಿ ಅಂದರೆ ಗ್ರಾಮದ ಪೂರ್ವ ಪಕ್ಕಕ್ಕೆ ಸುಮಾರು ೧ ೨ ಫರ್ಲಾಂಗ ದೂರದಲ್ಲಿ ಒಂದು ನೆಲಭಾವಿ ಪುರಾತನವಾಗಿರುತ್ತದೆ ಈ ಹಳ್ಳಿಕೆರೆ ಗ್ರಾಮದವರಿಗೆ ಈ ನೆಲಭಾವಿಯ ನೀರೇ ಹೊರತು ಬೇರೆ ನೀರು ದೊರೆಯುವಲ್ಲ ಹೀಗಿರುವಲ್ಲಿ ತಾ॥ ೪-೫-೧೮ ನೆ ಶುಕ್ರವಾರ ದಿವಸ ನೆಲಭಾವಿಯಲ್ಲಿ ನೀರುಸೇದುತ್ತಾ ಇದ್ದ ಗ್ರಾಮದ ದೊಡ್ಡ ಮನೆತನಸ್ಥರ ಹೆಂಗಸೊಬ್ಬಳು ಪುಣ್ಯವಶಾತ್ತಿಯಿಂದಲೋ ಕಾಲುಜಾರಿ ಭಾವಿಯೊಳಗೆ ಹೋಗುವಾಗ ಭಾವಿಯ ಅರ್ಧಭಾಗದಲ್ಲಿ ಒಂದು ಕಲ್ಲನ್ನು ಭದ್ರವಾಗಿ ಹಿಡಿದು ಕೂಗಿಕೊಂಡಳು ಸಮೀಪದ ನೆರೆಹೊರೆ ಹೊಲಗಳಲ್ಲಿ ಉಳುತ್ತಿದ್ದ ಜನಗಳು ಬರುವಷ್ಟರಲ್ಲಿ ಅಲ್ಲೇ ಪಂಚೆಗಳನ್ನು ಮಡಿಮಾಡುತ್ತಿದ್ದ ಒಬ್ಬ ದೊಡ್ಡಮನುಷ್ಯರು ತತ್‌ಕ್ಷಣವೇ ನೀರುಸೇದುವ ಹಗ್ಗವನ್ನು ಆ ಹೆಂಗಸಿನ ಕೈಗೆ ಕೊಟ್ಟು ತಮ್ಮ ಶಕ್ತಿಸಾಹಸಗಳನ್ನೆಲ್ಲಾ ಕರ್ಚುಮಾಡಿ ಆ ಹೆಂಗುಸನ್ನು ಮೇಲಕ್ಕೆ ತೆಗೆಯುತ್ತಿರುವಷ್ಟರಲ್ಲಿ ಜನಗಳು ಬಂದು ಮೇಲಕ್ಕೆ ತೆಗೆದರು ಜಗದ್ರಕ್ಷಕನ ಅನುಗ್ರಹದಿಂದ ಪ್ರಾಣಾಪಾಯವಾಗದೆ ಸ್ವಲ್ಪ ನೋವಾಗಿದೆ ಈ ಗ್ರಾಮದಲ್ಲಿ ರಾಟಿಭಾವಿ ಇಲ್ಲದಿರುವುದರಿಂದ ಇಂಥ ಅಪಾಯಕ್ಕೆ ಕಾರಣವಾಗಿದೆ ಈ ವಿಷಯವಾಗಿ ನಮ್ಮ ಮೈಸೂರು ಸರ್ಕಾರದವರನ್ನು ಬೇಡಿಕೊಳ್ಳುವುದೇನೆಂದರೆ-ಈ ಗ್ರಾಮದವರಿಗೆ ನೀರು ತರುವುದಕ್ಕೂ ದನಕರುಗಳ ನೀರಿಗೂ ಈ ನೆಲಭಾವಿ ವಿನಾ ಮತ್ತೆ ಬೇರೆಭಾವಿಯೇ ಆಗಲಿ ಕೊಳವೇ ಆಗಲಿ ಕೆರೆಗಳೇ ಆಗಲಿ ಇಲ್ಲ ಆದ್ದರಿಂದ ನಮ್ಮ ಸರ್ಕಾರದವರು ಪ್ರಜೆಗಳ ಮೇಲೆ ದಯವಿಟ್ಟು ತಮ್ಮ ಸ್ವಂತ ಖರ್ಚಿನಿಂದಲೆ ಈ ನೆಲಭಾವಿಗೆ ಗಾರೆಕಟ್ಟಿದ ರಾಟೆ ಇತ್ಯಾದಿಗಳನ್ನು ಹಾಕಿಸಿ ಸಮಯೋಚಿತವಾದ ಅಪಾಯಕ್ಕೆ ಗುರಿಯಾಗುವುದನ್ನು ತಪ್ಪಿಸಿ ಕಾಪಾಡಬೇಕೆಂದು ಈ ಮೂಲಕ ನಮ್ಮ ಸರ್ಕಾರದವರನ್ನು ಬಹುವಾಗಿ ಸರ್ವರೂ ಬೇಡಿಕೊಳ್ಳುತ್ತೇವೆ

[ಗ್ರಾಮಸ್ಥರಿಗೆಲ್ಲಾ ಬೇಕಾದ ಈ ಸಣ್ಣ ಕೆಲಸವನ್ನು ಮಾಡಿಕೊಳ್ಳಲು ಸರ್ಕಾರವನ್ನೇ ಕಾಯುವುದು ವ್ಯರ್ಥ. ಆಯಾ ಗ್ರಾಮದ ಜನರೇ ಸೇರಿ ಶ್ರಮದಾನವಾಗಿ ಮಾಡಿಕೊಳ್ಳುವಂತೆ ತಿಳಿದ ಜನರು ಪ್ರೇರಿಸಬೇಕು. ಪ ಪ್ರ

ಪುಂಗನೂರು.

ಬಸವ ಜಯಂತಿಯು ದಾವಣಗೆರೆ ವೀರಶೈವ ಹಿತೋದಯ ಸೇವಕ ಸಂಘದವರಿಂದಲೂ ಇನ್ನೂ ಇತರ ವೀರಶೈವರಿಂದಲೂ ಕಳೆದ ವರ್ಷ ಆಚರಿಸಲ್ಪಟ್ಟಿತಷ್ಟೆ ಅದೇ ಪದ್ಧತಿಯನ್ನೇ ಅನುಸರಿಸಿ ಶ್ರೀ ವ॥ ಶಂ॥ ರಾ॥ ರಾ॥ ರಂಗನಾಥನ್ ಗಾರು ಇವ್ವಡಿ ಸಾಂಬಸದಾಶಿವ ಚಿಕ್ಕರಾಯ ಬಹದೂರ್ ಪುಂಗನೂರ್ ಸಂಸ್ಥಾನ ಪುಂಗನೂರು ಇವರಿಂದಲೂ ಈ ವರ್ಷ ಆಚರಿಸಲ್ಪಟ್ಟಿತು. ಇದೇ ವೈಶಾಖ ಶು॥ ತದಿಗೆಯಲ್ಲಿ ಅರಮನೆಯೊಳಗಿರುವ ಚನ್ನಕೇಶವ ಬಸವೇಶ್ವರನಿಗೆ ಬೆಳಿಗ್ಗೆ ೫ ಗಂಟೆಯಲ್ಲಿ ಪ್ರಾರಂಭವಾದಿದ ರುದ್ರಾಭಿಷೇಕವು ಮುಗಿಯುವುದರೊಳಗಾಗಿ ಪ್ರಭುಗಳು ನಿತ್ಯಾನುಷ್ಠಾನಗಳನ್ನು ತೀರಿಸಿಕೊಂಡು ತಮ್ಮ ಚಿಕ್ಕತಂದೆಗಳಾದ ಮಹಮ್ಮದ್ ಕುಮಾರ ಚಿಕ್ಕರಾಯಲ್‌ರವರಿಂದಲೂ ತಮ್ಮ ಸಹೋದರರಿಂದಲೂ ಕೂಡಿ ಬಸವಾಲಯಕ್ಕೆ ದಯಮಾಡಿಸಿ ಬಸವೇಶ್ವರನಿಗೆ ಷಡಾರತಿಯೇ ಕಡೆಯಾಗಿ ಷೋಡ

ರಿಶೈವಾ ಸಹಂಗಸರಾರಾಧನೆಯಾದ

ಶೋಪಚಾರ ಪೂಜಾಂಗಣದಲ್ಲಿ ಕ್ರಿಯಾಮೂರ್ತಿಗಳಿಂದ ಸಿದ್ಧಪಡಿಸಲ್ಪಟ್ಟ ತೀರ್ಥಪ್ರಸಾದ ಸ್ವೀಕರಣಾನಂತರ ಆಹ್ವಾನಿಸಲ್ಪಟ್ಟ ಶ್ರೀ ಶಿ ಭಕ್ತಮಾಹೇಶ್ವರರಿಗೂ ವ್ಯಾಖ್ಯಾನ ಮಾಡಿದವರಿಗೂ ಗಂಧ ಪುಷ್ಪ ತಾಂಬೂಲಾದಿಗಳಿಂದಲೂ ತೃಪ್ತಿಪಡಿಸಿ ೧ ಶೃಂಗಾರದ ತೋಟದಲ್ಲಿ ಬಸವ ಜಯಂತಿಗೋಸ್ಕರ ಸಂಕಲ್ಪ ಪೂರ್ವಕವಾಗಿ ಕಟ್ಟಿಸಲ್ಪಟ್ಟಿರುವ ಮಂದಿರಕ್ಕೆ ಎಲ್ಲರ ಸಹಿತ ಹೋಗಿ "ಬಸವೇಶ್ವರ ಜನ್ಮದಿನೋತ್ಸವ ಮಂದಿರ" ವೆಂದು ನಾಮಕರಣವನ್ನು ಮಾಡಿ ಮೇಲು ಭಾಗದಲ್ಲಿಯೂ ಬಸವ ಪ್ರತಿಕೃತಿಯಾಗ ದೊಡ್ಡ ದೊಡ್ಡ ಅಕ್ಷರಗಳಿಂದ ತನ್ನಾಮವನ್ನು ಬರೆದು, ಒಳಕ್ಕೆ ಹೋಗಿ ಕುಳಿತುಕೊಂಡು ಬಸವಕಥಾಶ್ರವಣದಿಂದ ಮೂರು ಗಂಟೆಯವರೆಗೂ ಕಾಲಕ್ಷೇಪವಮಾಡಿ, ತರುವಾಯ ಬೇಸಗೆಯ ಕಾಲಕ್ಕೆ ತಕ್ಕ ಅಲ್ಪಾಹಾರಗಳಿಂದ ಸಮಸ್ತರೂ ಆನಂದಹೊಂದಿದವೇಳೆ ವೀರಶೈವೇತರರಿಗೂ ಸಹ ತದಾಹಾರ ಗಂಧ ಪುಷ್ಪ ತಾಂಬೂಲಗಳು ಸಂದಾಯಿಸಲ್ಪಟ್ಟವು ಬಳಿಕ ರಾಜರ ಸ್ವಂತ ಪೋಷಣೆಯಲ್ಲಿರುವ ಇಂಗ್ಲೀಷ್ ಮತ್ತು ಸಂಸ್ಕೃತ ಶಾಲಾ ವಿದ್ಯಾರ್ಥಿಗಳಾದ ವೀರಶೈವ ಬಾಲಕರಿಗೆ ವಸ್ತ್ರರೂಪವಾದ ಪಾರಿತೋಷಕಗಳು ಕೊಡಲ್ಪಟ್ಟನಂತರ ಸಭೆಯು ಮುಗಿಸಲ್ಪಟ್ಟಿತು ೬॥ ಗಂಟೆಯ ಮೇಲೆ ಅರಮನೆಯಲ್ಲಿಯೂ ಶೃಂಗಾರದ ತೋಟದಲ್ಲಿಯೂ ಅಲಂಕರಿಸಲ್ಪಟ್ಟ ವಿಚಿತ್ರ ದೀಪಗಳೂ ಪೆಟ್ರೋಲ್ ದೀಪಗಳೂ ನೋಡತಕ್ಕವರಿಗೆ ಬಹಳ ಆನಂದವನ್ನುಂಟುಮಾಡುತ್ತಿದ್ದವು ಮತ್ತು ಸಾಯಂಕಾಲ ಶಿವಪೂಜಾಕರ್ಮಾದಿಗಳನ್ನು ತೀರಿಸಿಕೊಂಡು ಭೋಜನಾನಂತರ ಒಂಬತ್ತು ಗಂಟೆಗೆ ಜಯಂತಿ ಮಂದಿರದಲ್ಲಿ ಸಮಸ್ತರೂ ಸೇರಿ ಪಿಟೀಲು ಮೊದಲಾದ ಸಂಗೀತ ಗಾನ ವಿನೋದದಿಂದ ಹನ್ನೆರಡು ಗಂಟೆಯವರೆಗೂ ಕಾಲಕ್ಷೇಪವಮಾಡಿ ತಂತಮ್ಮ ಸ್ಥಾನಗಳಿಗೆ ತೆರಳಿದರು

ಶ್ರೀ॥ ಶಿ॥ ಶಿರಾ

ಸರ್ವ ೯ನೆ ಇಸವಿ ಏಪ್ರಿಲ್ ತಾರೀಖು ೧೯ ರ ಸತ್ಯಾರ್ಥಪತ್ರಿಕೆಯಲ್ಲಿ ನಮೂದಿಸಿರುವ ಶ್ರೀಬಸವೇಶ್ವರಜಯಂತಿಯುತ್ಸವವನ್ನು ನಡೆಸುವದಕ್ಕಾಗಿ ಶಿರಾ ತಾ॥ ಮದಲೂರು ಗ್ರಾಮದ ಶ್ರೀಪಟ್ಟಾಧ್ಯಕ್ಷರುದ್ರದೇವರು ಶಿರಾ ಕಸಬಾ ಕೋಟೆಯಲ್ಲಿ ಭಕ್ತಮಾಹೇಶ್ವರರನ್ನು ವರ್ಷಾವಧಿಯ ಹಬ್ಬದ ದಿವಸ ಬರಮಾಡಿಕೊಂಡು ಪ್ರೋತ್ಸಾಹಗೊಳಿಸಿ ಪ್ರಸಿದ್ಧಪತ್ರಿಕೆಗಳನ್ನು ಅನೇಕರಿಗೆ ವಾಚನಮಾಡಿಸಿದರು ಅದರಂತೆ ತಾ॥ ೧೪-೫-೧೮ ನೆ ಆನಂದ ಸಂ॥ ವೈಶಾಖ ಶುದ್ಧ ೩ ಮಂಗಳವಾರ ಬೆಳಿಗ್ಗೆ ೯ ಘಂಟೆಗೆ ಸರ್ವರೂ ಸೇರಿ ಶ್ರೀಪಾಶ್ವೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಚಪ್ಪರವನ್ನು ಹಾಕಿ ತಳಿರುತೋರಣಗಳಿಂದಲಂಕರಿಸಿ ಮೇಲೆ ನಮೂದಿರುವ ವ॥ ರುದ್ರದೇವರು ಮೊನ್ನ ಅಪುರದಿಂದ ತರಿಸಿದ್ದ ಶ್ರೀಕಲ್ಯಾಣದ ಬಸವೇಶ್ವರಸ್ವಾಮಿ ಭಾವಚಿತ್ರವನ್ನು ಕೋಡಿಗಣೆ ಮೂರರಿಂದ ಸದ್ಭಕ್ತಿಪುರಸ್ಸರ ಮಂಗಳವಾದ್ಯಗಳಿಂದಲೂ ವೇದಘೋಷಗಳಿಂದಲೂ ಬಹಳ ವಿಜೃಂಭಣೆಯಿಂದ ಉತ್ಸವಪೂರ್ವಕವಾಗಿ ಶ್ರೀಪಾಶ್ವೇಶ್ವರ ದೇವಸ್ಥಾನಕ್ಕೆ ೧೦ ಘಂಟೆಗೆ ಬಿಜಯಂಗೈಸಿ ಪೂಜಾದಿಗಳನ್ನಾಚರಿಸಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು ಆ ರಾತ್ರಿಗೆ ಶ್ರೀಬಸವೇಶ್ವರ ಜನನದ ೭ ನೆ ರಾತ್ರಿ ಬ್ರಹ್ಮಾಂಡಸೃಷ್ಟಿಯು ೩-೪ ನೆ ರಾತ್ರಿ ನಾಗೇಂದ್ರೋಪಯಾನಚರಿತ್ರೆಯು ಪುರಾಣವು ನಡೆಸಲ್ಪಟ್ಟಿತು ಇನ್ನೆಯ ಕಡೆದಿನ ಸ್ಥಿರವಾರ ಪ್ರಾತಃಕಾಲ ೪ ಘಂಟೆ ಲಾಗಾಯ್ತು ೧೦ ಘಂಟೆ ವರೆಗೆ ಪಟ್ಟಾಭಿಷೇಕ ಸಹಸ್ರನಾಮ ಪೂಜಾವಿಧಾನಮಂಗಳವು ಪೂರೈಸಿ, ಸೇರಿದ್ದ ಭಕ್ತಮಾಹೇಶ್ವರರಿಗೆ ಭೋಜನೋಪಚಾರಗಳು ನಡೆಸಲ್ಪಟ್ಟು ತಾಂಬೂಲ ಉಪಚಾರಂಭವು ನಡೆಯುವ ಕಾಲದಲ್ಲಿ ದಿವಾನ್ ಕೋಟೆಯಲ್ಲಿರುವ ಗೋಲಿ ಕರಿಬಸಪ್ಪನವರು ಮೇಲೆ ನಮೂದಿರುವ ಪಟ್ಟಾಧ್ಯಕ್ಷರು ಈ ಕಾರ್ಯವನ್ನು ಬಹಳ ಶ್ರದ್ಧೆಯಿಂದ ನಡೆಸಿದ್ದಕ್ಕಾಗಿ ಈ ಸಭಾದಲ್ಲಿ ಒಂದು ಅಡ್ರೆಸ್ಸನ್ನು ಒಪ್ಪಿಸಿದರು ಪುನಃ ರಾತ್ರಿ ೯ ಘಂಟೆಗೆ ಸಮಸ್ತರೂ ಶ್ರೀಪಾಶ್ವೇಶ್ವರಸ್ವಾಮಿ ದೇವಸ್ಥಾನದಲ್ಲಿ ಸಭೆ ಸೇರಿ ಸ್ವಲ್ಪಹೊತ್ತು ಸಂಗೀತವನ್ನು ನಡೆಸಿ ಪಟ್ಟಾಧ್ಯಕ್ಷರು ರುದ್ರದೇವರು ವೀರಶೈವಮತೋತ್ಪತ್ತಿ ವಿಷಯವನ್ನು ಬೆಂಗಳೂರು ರಾ॥ ಓ॥ ಧ॥ ತೋಟದ ಪ್ಪನವರ ಸತ್ರದಲ್ಲಿ ಓದುತ್ತಿರುವ ಶಿರಾ॥ ಕೋ॥ ವ॥ ಚಿಕ್ಕ ರುದ್ರಯ್ಯನು ಸ್ತ್ರೀವಿದ್ಯೆಯ ವಿದ್ಯಾಪ್ರಯೋಜನವನ್ನು ಕುರಿತು ಉಪನ್ಯಾಸಗಳನ್ನು ಮಾಡಿದನಂತರ ಶ್ರೀಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯು ಮಾಡಲ್ಪಟ್ಟು ಕೂಡಿದ್ದ ಸಭಾಜನರಿಗೆ ಗಂಧಪುಷ್ಪಫಲಾಹಾರ ತಾಂಬೂಲ ವಿನಿಯೋಗದಿಂದ ಸ್ವಾಮಿಯ ಮಂಗಳವಾದ್ಯಗಳೊಡನೆ ಪೂರೈಸಲ್ಪಟ್ಟಿತು ಈ ಕಾರ್ಯವನ್ನು ಪ್ರತಿವರ್ಷವೂ ಇದೇರೀತಿ ನಡೆಯುವಂತೆ ಶ್ರೀಬಸವೇಶ್ವರನು ಸಮಸ್ತರಿಗೂ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂಬುದಾಗಿ ಕಂಠಶೋಷಣೆಗಳಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

೫೦೦ ರೂಪಾಯಿಗಳು ಬ— – – –

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬ

ಈ ಮುರಬ್ಬಾವು "ಪಂಜಾಬ್ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡಲ್ಪಡುವುದು

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡವರಿಗೆ ಹೃದಯಕೋಶವು ಬಲಹೀನವಾಗಿ ನಾನಾ ವ್ಯಾಧಿಗಳಿಂದ ಮರಣ ಪರಿಯಂತರವೂ ದುಃಖಪಡುವವರು ಈ "ಪಂಜಾಬ್ ಸಾಲಾಮಿಸ್ರೀಮುರಬ್ಬಾ" ವಿನ ಸೇವನೆಯಿಂದ— ಮೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಕೈ ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಎಣ್ಣೆಗಳಿಂದ ಮುಖ ಕಾಂತಿಹೀನವಾಗುತ್ತಿದ್ದರೂ, ಮೂತ್ರದಲ್ಲಿ ಉರಿಯು ತಿಳಿದರೂ ಮೂತ್ರದೊಡನೆ ವೀರ್ಯವು ಹೋಗುತ್ತಿದ್ದರೂ, ದಿನೇ ದಿನೇ ಶಕ್ತಿಯು ಕಡಿಮೆ ಬಂದು ಬಹಳ ನೋವು ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು ರಕ್ತವನ್ನು ಹೆಚ್ಚಿಸಿ ವೀರ್ಯವನ್ನು ವೃದ್ಧಿಪಡಿಸುವುದರಲ್ಲಿ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ವಿನ ಹೊರತು ಇದಕ್ಕೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲವು

ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ಚಿನ್ನ ಮತ್ತು ಬೆಳ್ಳಿಯ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು ಹೊಟ್ಟೆಯಲ್ಲಿರುವ ವ್ಯಾಧಿ ಗಡ್ಡೆಯನ್ನು ನಾಶಪಡಿಸುವುದು ಕ್ಷಯ ಮುಂತಾದ ರೋಗಗಳನ್ನು ನಿವಾರಣೆಪಡಿಸುವುದು

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಗಡ್ಡೆಯಾಗಿರುತ್ತದೆ, ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳಿಗಡ್ಡೆ, ಸಿಹಿಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೋ ಅಥವ ಬೇರೆ ತರಹದ್ದೋ ಎಂಬುವುದು ಚೆನ್ನಾಗಿ ತಿಳಿದು ಬರುತ್ತೆ ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು ೧॥ ತೋಲಾ ಮುರಬ್ಬಾ ವಿರುವ ಡಬ್ಬಾ ಒಂದಕ್ಕೆ ಬೆಲೆ ರೂ ೧ ೪ ೦, ಟಪಾಲ್ ಖರ್ಚು ನಾಲ್ಕು ಆಣೆ ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ

ಅತ್ಯುತ್ತಮವಾದ ವನೌಷಧಗಳು

೧ ಧಾತುಪುಷ್ಟಿಚೂರ್ಣ ಕ್ರಯ ೫ ಆಣೆ

೨ ರೋಮನಾಶಕ ಮತ್ತು ವೃಶ್ಚಿಕದಂಶ (ಚೇಳು) ಕಡಿತಕ್ಕೆ ಚೇಳಿನ ಜೊಡದಕ್ಕೂ ಮತ್ತು ಕೂದಲು ತೆಗೆಯುವುದಕ್ಕೂ ಬಹಳ ಒಳ್ಳೆಯದು ಕ್ರಯ ೨ ಆಣೆ

೩ ವಾತನಿವಾರಣ ತೈಲವು ಕ್ರಯ ೮ ಆಣೆ

೪ ಹೊಟ್ಟೆನೋವಿಗೆ ಔಷಧ ಕ್ರಯ ೨ ಆಣೆ ೩ ಪೈ

೫ ಕೆಮ್ಮಲು ರೋಗಕ್ಕೆ ಔಷಧ ೪ ಆಣೆ

೬ ಪ್ಲೇಗಿಗೆ ಔಷಧ ೪ ಆಣೆ

೭ ಆಶ್ಚರ್ಯಕರವಾದ ವೀರ್ಯಸ್ತಂಭನ ಗುಳಿಗೆ ೪ ಆಣೆ

೮ ತಲೆನೋವಿಗೆ ತೈಲವು ೨ ಆಣೆ ೩ ಪೈ

೯ ಪ್ರಮೇಹ ನಿವಾರಣ ಭಸ್ಮವು-೪ ಆಣೆ

೧೦ ಉಷ್ಣ ಕಾರಕಕ್ಕೆ ಮಾತ್ರೆಗಳು—ರೂ ೧

೧೧ ಮೂಲವ್ಯಾಧಿಗೆ ಔಷಧ—೪ ಆಣೆ

೧೨ ಕಣ್ಣಿಗೆ ಸುರ್ಮಾ—೪ ಆಣೆ,

೧೩ ದಂತಚೂರ್ಣವು—೧ ಆಣೆ ೩ ಪೈ

೧೪ ಕೂದಲು ಬೆಳೆಯುವ ಎಣ್ಣೆ (ಬಿಂದೋಲ ತೈಲ) ೪ ಆಣೆ

ವಿಳಾಸ — ಡಿ ದುನ್ನಾಲಾಲ್, ದಿಲ್ಲಿ ವೈದ್ಯ ೧೩, ಹಳೇ ಸಿದ್ಧಿಕಟ್ಟೆ, ಬೆಂಗ॥

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ
ದಾಮುಟ್ಟ್ ಲೇಹ್ಯ.

24

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ ಔಷಧಿ! (ಗುಣವಾಗದಿದ್ದರೆ ಹಣ ವಾಪಸ !!) ಔಷಧಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪ್ರದರವುಳ್ಳವರು, ತೃಷೆಯುಳ್ಳವರು, ದಮ್ಮುಳ್ಳವರು, ಕೆಮ್ಮುಳ್ಳವರು, ಕಫವುಂಟಾದವರು, ಮೂಲವ್ಯಾಧಿಯುಳ್ಳವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಕ್ಷಯರೋಗವುಳ್ಳವರು, ಉಷ್ಣವಾಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಕ್ತಿ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೩ ತೋಲೆಯಿಂದ ೪೦ ತೊಲೆಯವರೆಗೆ ಬೇಕಾಗುವುದು ಕ್ರಯವು ೬೦ ತೊಲೆಗೆ ರೂ ೩-೪-೦ ೪೦ ತೊಲೆಗೆ ... ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ —ವೈದ್ಯ, ಪಿ ಎಲ್ ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬಿಂವಾಡಿ, ಜಿಲ್ಲಾ ಉತ್ತರಕನ್ನಡ.

31

ದೊಡ್ಡ ಕಂಪೆನಿ ! ಸೋವಿ ಬೆಲೆಯ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನು, ವಿಶ್ವೇಶ್ವರನ ೧ ಪಟಗಳನ್ನು ಇನಾಮಾಗಿ ಕಳಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಅಗ್ಗವಾದ ಮಾಲುಗಳು.



ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ಇರುವ ಒಂದು ಮುಖದ ವರೆಗೆ ಸಣ್ಣದು ದೊಡ್ಡದು ಸಹ ಈ ಎರಡು ನಮೂನೆಯಲ್ಲಿ ದೊರೆಯುವುದು ಮತ್ತು ಇವುಗಳಲ್ಲದೆ ರೇಷ್ಮೆ ಮುಗಟ, ಕಾಶ್ಮೀರ ಶಾಲು, ರೇಷ್ಮೆ ಜರಿಸೀರೆ, ಜರಿಕಣ, ಪೇಟ, ಮೊಕಶಾಲು ರು ನಮೂನೆ ವಸ್ತ್ರ, ಜಗನ್ನಾಥ ಜಾಗಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರಿ ಥಾರ್ ಮೊದಲಾದ ಅಮೂಲ್ಯವಾದ ಸಾಮಾನುಗಳು ಎಲ್ಲರಿಗಿಂತಲೂ ಸುಲಭರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು.

ರುದ್ರಾಕ್ಷಿಗಳ ವಿವರ:—

೧ ಮುಖದ ರುದ್ರಾಕ್ಷಿ ಕಂಠಿ ಅಂದರೆ ವ ಸರ ೧ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ. ೪ ಮುಖದ ಕಂಠಿ ೧ಕ್ಕೆ ೪ ಆಣೆಯಿಂದ ೨೦ ರೂಪಾಯಿವರೆಗೆ ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ ವರೆಗೆ ೭ ಮುಖದ ಕಂಠಿ ೧ಕ್ಕೆ ೧೦ ರೂ ಯಿಂದ ೧೫೦ ರೂ ವರೆಗೆ ಇದರಂತೆ ೪, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ ಯಿಂದ ೩೦ ರೂ ವರೆಗೆ ಇವರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯು, ಉದ್ದಿನಕಾಳು ಪ್ರಮಾಣದ ಸರ ೧ಕ್ಕೆ ರೂ ೫ ರಿಂದ ರೂ ೩೦ ವರೆಗೆ ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೪-೦ ಆಗಾಯಿತು ರೂ. ೧೦ ವರೆಗೆ ಜಪಮಾಲೆ ನೆಲ್ಲಿಕಾಯಿಯಿಂದ ಅವರೇ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ ೭ ವರೆಗೆ ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಜೋಡು ೧ಕ್ಕೆ ರೂ ೫ ಆಗಾಯಿತು ರೂ ೫೦ ವರೆಗೆ ಇಟ್ಟಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,
18 ಬನಾರಸ್ ಸಿಟಿ

ದಿ ಜನರಲ್ ಏಜನ್ಸೀ, ಮೈಸೂರು.

ಕಾದಂಬರಿಗಳು — ಚಂಡಮಾರುತ ೦-೨ ೦, ಚರಿತಾವೃತ್ತ ೦ ೫ ೦, ರಾಜಕೀಯಪಲ್ಲವಿ ೦-೫-೦, ಪೀಟರ್ ಚರಿತ್ರ ೦ ೨-೦, ಪಯೋನಿಧಿ ೩-೦; ಉನ್ಮತ್ತೆ ೦-೨-೬, ಸೀತೆ ೦-೫ ೦, ಸಾಹಸಿಕೆ, ಕಲಾನಾಥ ೦ ೪-೦, ಮಹಾಲಕ್ಷ್ಮಿ ೧-೨-೦, ತಾರಾಸುಂದರಿ ೦-೪ ೦, ಪದ್ಮಿನಿ ೦-೨-೦, ಪ್ರಿಯಂವದಾ ೦-೪-೦, ಕೋಹಿನೂರು ೦ ೧೨-೦, ಆನಂದಮಠ ೧ ೦, ರೋಹಿಣಿ ೦ ೭ ೦, ಸೀತಾವನವಾಸ ೦-೧೨ ೦, ರಜನಿ ೦-೧-೦ 26

ವಿಸಿಟಿಂಗ ಕಾರ್ಡಿನ ಆಕಾರದ ... ಹರಿಸಿ ... ಮಾಡುವುದರಲ್ಲಿ ಪ್ರಖ್ಯಾತಿಹೊಂದಿರುವ

34 ಬಿ. ಪಿ. ಪಂಡಿತ

ಲೀಲಾಮೃತ

ವಿದ್ಯಾರ್ಥಿಗಳು, ಪ್ರಯಾಣಿಕರು, ಬೈಸಿಕಲ್ ಸವಾರಿ ಮಾಡುವವರು, ಉಪನ್ಯಾಸಕರೇ ಮೊದಲಾಗಿ ಸರ್ವರೂ ಅನೇಕ ಭವಾನಿ ಸುಂದರಿ ... ಈ ಮಾತ್ರೆಗಳ ಗುಣಾತಿಶಯಗಳನ್ನು ತಮ್ಮ ನಿತ್ಯದಲ್ಲಿ ಪ್ರಯೋಗಿಸುತ್ತಿದ್ದಾರೆ ಸಂಗೀತಗಾರರು ಇದರಿಂದ ತಮಗುಂಟಾಗಿರುವ ಪ್ರಯೋಜನವನ್ನು ವ್ಯಕ್ತಪಡಿಸಿದ್ದಾರೆ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟಿರುವ ಈ ಮಾತ್ರೆಗಳು ಸಮುದ್ರರೋಗ ಮಲಬಂಧ, ಹೊಟ್ಟೆನೋವು, ನಾನಾತರಹ ಕೆಮ್ಮು, ದಮ್ಮು, ಉಬ್ಬಸ, ಅಗ್ನಿಮಾಂದ್ಯ, ಅಕರೋಚಕ, ತಲೆನೋವು, ವಾಂತಿ, ವಾಕರಿಕೆ, ಪಿತ್ತಸಂಕಟ, ಜಲದೋಷಗಳನ್ನು ಖಾತರಿ ಗುಣಪಡಿಸಿ ರಕ್ತಶುದ್ಧಿಯನ್ನುಂಟುಮಾಡುತ್ತವೆ ೧೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಅನುಪಾನಪತ್ರಸಹಿತ ೦-೮-೦

ಶ್ರೀಕರ ಕಸ್ತೂರಿ ಮಾತ್ರೆ

ಈ ಮಾತ್ರೆಗಳನ್ನು ಒಂದೇ ಮೇಲೆ ಪರೀಕ್ಷಿಸಿದರೆ ಇವರ ಗುಣ ಮತ್ತೂ ಸುವಾಸನೆಗಳು ... ಅನುಭವವಾಗುವುವು ಮನೆಯಲ್ಲಿ ಸಣ್ಣಮಕ್ಕಳುಗಳನ್ನುಳ್ಳವರು, ಪ್ರಯಾಣಿಕರು ಮಲೆನಾಡು ವಾಸಸ್ಥರು ಮತ್ತೂ ನಾನಾಕರದೋಗಸ್ಥರು ಇಟ್ಟಿರುವವರಿಗೆ ಈ ಮಾತ್ರೆಗಳು ಅತ್ಯವಶ್ಯಕವಾದ ಶೀತವಾಯು, ವಿಷಮಜ್ವರಗಳು, ಸಂದುನೋವು, ಕೆಮ್ಮು, ಅಗ್ನಿಮಾಂದ್ಯ, ಅರೋಚಕ, ಹಲ್ಲುನೋವು, ಅಜೀರ್ಣಭೇದಿ, ಮಲಬಂಧ, ವೈಕಲ್ಯ ನೋವು ಮತ್ತೂ ಬಾಧಕಗಳನ್ನು ಅತಿಜಾಗ್ರತೆ ಗುಣಪಡಿಸುತ್ತವೆ ವಿವರವಾದ ಅನುಪಾನ ಪತ್ರಸಹಿತ ೫೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೦-೭-೦ ನಾಲ್ಕಾಣೆ ಮೇಲೆ ಬಾಳುವ ಇಡಿಯ ಸೀಸೆಗಳನ್ನು ಇಟ್ಟಿಗೆ ಹರಿಸಿದರೆ ಒಂದು ಇನಾಮು, ವಿ ಪಿ ಪ್ರತ್ಯೇಕ ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ— ಕೆ. ವಿ. ನಾರಾಯಣರಾವ್
ಮ್ಯಾನೇಜರ್,
ಸಂಚಾನ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೊ ೧ಕ್ಕೆ ಕ್ರಯ ೧೨ ಆಣೆ, ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅದ್ದ ಪಲ್ಲಕ್ಕಿ ಉತ್ಸವದ ಫೋಟೊ ೧ಕ್ಕೆ ಕ್ರಯ ೧ ರೂಪಾಯಿ ಸೊಲ್ಲಾಪುರದಲ್ಲಿ ವ್ಯಾಸಪೀಠದೊಳಗಿರುವಂತೆ ಆದ ಸಮಾರಂಭದ ಫೋಟೊ ೧ಕ್ಕೆ ಕ್ರಯ ೧ ರೂಪಾಯಿ

ಶ್ರೀಬಸವೇಶ್ವರ

ಇವರ ಮಾಟಾ ಫೋಟೋ (ರಾಜಮಾನ್ಯರ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ಸ್ಕೈಜು ಬಣ್ಣದ್ದು ೧॥ ರೂ ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

... ಸುದರ್ಶನ ಚಕ್ರಗಳವಾಗಿ ... ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ಕ್ಕೆ ಕ್ರಯ ಫುಲ್ಸ್ಕೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀ ಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ... ಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಿಗಳು ... ವರ್ಯರುಗಳೂ, ಬಳ್ಳಾರಿ ಸ್ವಾಮಿ ... ಫೋಟೊ ಸಿಗುತ್ತವೆ ಫುಲ್ಸ್ಕೈಜು ಕ್ರಯ ೧ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೪ ಆಣೆ

... ಗೆ ಹಚ್ಚುವ ... ಪ್ರಕಾರ ೨ ಫೋಟೊ ... ದೇವರದೂ ... ರೋಡ್ ... ದುರ್ಬೀನದ ಗ್ಲಾಸಿನ ...

ಪೂರ್ತಿ ವಿವರಣೆಗಾಗಿ ... ಟಿಕೀಟು ಕಳಿಸಿ ಕ್ಯಾಟಲಾಗು ... ತರಿಸಿಕೊಳ್ಳಿರಿ ನಮ್ಮ ವಿಳಾಸ ಗುರುಪಾದಪ್ಪ ಜೋಗಿನ್

11 ಆರ್ಟಿಸ್ಟ್ ಸೊಲ್ಲಾಪುರ

ಊದಿಬತ್ತಿಗಳು

ವಿಧವಿಧವಾದ ಊದಿಬತ್ತಿಗಳು ಸೇರು ೧ಕ್ಕೆ ೧-೨-೦ ... ಕಸ್ತೂರಿ ... ಬಾಲಗ್ರಹದ ... ದ ... ಈ ಬಾಲಗ್ರಹದವರು ಬೇಕೆಂದು ... ರು ತರಿಸಿಕೊಳ್ಳಬಹುದು

ಪಿ ಎಲ್ ಉಪಾಧ್ಯಾಯ,
... ಚನ್ನಪಟ್ಟಣ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣಕ್ಕಾಗಿ.

ನಮ್ಮ ಸ್ವಂತ ಮುದ್ರಾಕ್ಷರಶಾಲೆಯಲ್ಲಿ ಶಿವ, ಬಸವ, ಸಿದ್ಧೇಶ್ವರ, ಗಣಪತಿ ಮೊದಲಾದ ದೇವರು, ಗರುಡ, ನಂದಿ, ... ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅತ್ಯುತ್ತಮವಾದವುಗಳನ್ನು ಯೋಗಿಸಿ ಸ್ವಲ್ಪ ಕಾಲದಲ್ಲಿ ಅಚ್ಚುಕೊಡುವ ಭಾರ್ಜಿ ... ಅಚ್ಚುಮಾಡಿಕೊಡುತ್ತೇವೆ

ಚೆನ್ನದ ... ಅಕ್ಷರಗಳಿಂದ ಸ್ಪಷ್ಟವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ... ಲಗ್ನಪತ್ರಿಕೆಗಳನ್ನು ಮುದ್ರಿಸಲು ... ರೂ ಆಗುತ್ತದೆ ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅರ್ಧಕ್ಕಿಂತ ... ಕೊಡಬೇಕಾಗುವುದು ... ಪತ್ರಿಕೆಗಳನ್ನು ಅಚ್ಚು ಮಾಡಲು ... ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ... ಪ್ರತಿ ... ಕಳುಹಬೇಕು. ... ಕಾಗದದ ... ವಹಿಸಿಕೊಳ್ಳುವೆವು ... ಅಚ್ಚು ... ವಿಳಾಸವನ್ನು ...

ಸಾ[redacted]ಂಭವರಿಗೆ ವಿದಿತಪಡಿಸುವುದೇನೆಂದರೆ— ಕಳೆದವರ್ಷ ಸಿದ್ಧಾಣಿಯಲ್ಲಿ ಕೂಡಿದ್ದ ೩ ನೆಯ ಸೇರಿಯ ಮಹಾಸಭೆಯ ರಿಪೋರ್ಟು ಬುಕ್ಕುಗಳು ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವವು. ಈ ಸಾವಿರ ಪುಸ್ತಕಗಳು ಒಳ್ಳೆಯ ಅಕ್ಷರವುಳ್ಳವಾಗಿಯೂ, ಅಚ್ಚುಕಟ್ಟಾಗಿಯೂ ಬರೆಸಿದ್ದು, ಇದರಲ್ಲಿ ನಮ್ಮ ಸಮಾಜದ ಆಧಾರಸ್ತಂಭಗಳಂತಿರುವ ಸ್ವಾಮಿಗಳ ಮುಂತಾದವರ ಛಾಯಾಚಿತ್ರಗಳೂ ಪ್ರತ್ಯೇಕವಾಗಿ ಸೇರಿಸಲ್ಪಟ್ಟಿರುವವು. ಮೇಲಾಗಿ ಪ್ರತಿಗಳು ವಿಕ್ರಯಕ್ಕೆ ಒಂದೇ ನೂರು ಇರುವುದರಿಂದ ಹಿಂದಿನಿಂದ ಬೇಡುವವರಿಗೆ ಪ್ರತಿಗಳು ನಿಶ್ಚಯವಾಗಿ ಸಿಗಲಾರವು. ಕಾರಣ, ಇಷ್ಟಪಡುವವರು ಮುಂಚಿತವಾಗಿಯೇ ಸ್ಪಷ್ಟವಾದ ಪತ್ರಿಯಿಂದ ಆರ್ಡರು ಕಳುಹಿಸಬಹುದು

ಶಿವಮೂರ್ತಿಸ್ವಾಮಿ ಕಣಬರ್‌ಮಠ,
ಜೇರ್ಮನ್, ಸ್ವಾಗತಕಮಿಟಿ,
೩ ನೆಯ ಮಹಾಸಭೆ ಸಿದ್ಧಾಣಿ

...ಸುಗಂಧ ದ್ರವ್ಯಗಳು.

ನಮ್ಮಲ್ಲಿ ಬಹುಕಾಲದಿಂದಲೂ ಅತ್ಯುತ್ತಮವಾಗಿ ತಯಾರಾಗುತ್ತಿರುವ ಊದ ಬತ್ತಿಗಳು ಸೇರು ೧ಕ್ಕೆ ೪ ಆಣೆಯಿಂದ ೧೦ ರೂ ವರೆಗೂ ದೊರೆಯುವುವಲ್ಲದೆ, ನಾನಾತರದ ಗಂಧದಬಿಲ್ಲೆಗಳು, ಜವಾಜಿಗಂಧ ಅಥವಾ ಅರಗಜ, ಪುನಗು, ಜವಾಜಿ, ದಶಾಂಗ, ಧೂಪದಕಡ್ಡಿ ಮೊದಲಾದ ಸುಗಂಧದ್ರವ್ಯಗಳೂ, ಮಲ್ಲಿಗೆ-ಸಂಪಗೆ ರೋಜಾ ಮೊದಲಾದ ಅತ್ತರುಗಳೂ ಮತ್ತೂ ಭೃಂಗಾಮಲಕತೈಲ ಮೊದಲಾದವುಗಳೂ ಬಿಕರಿಗೆ ಸಿದ್ಧವಾಗಿರುವುವು. ಅಪೇಕ್ಷಕರು ಸ್ಥಳಕ್ಕೆ ಬರಲಾರದಿದ್ದರೆ ಆರ್ಡರನ್ನು ಕೊಡಬೇಕು. ಇನ್ನೂ ಹೆಚ್ಚು ವಿಷಯಗಳನ್ನು ತಿಳಿಯತಕ್ಕವರು ನಮ್ಮ ಕ್ಯಾಟಲಾಗನ್ನು ತರಿಸಿ ನೋಡಬಹುದು 36

ವಿಳಾಸ— ಎಸ್ ಕಳ್ಳಪ್ಪ, ಊದುಬತ್ತಿ ಷಾಪ್,
ದೊಡ್ಡಪೇಟೆ, ಬೆಂಗಳೂರು ಸಿಟಿ

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಿಸಿಪಲ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ ಮನೆಗಳನ್ನು ಕಿಸ್ತು ಮಾಡಿಕೊಳ್ಳತಕ್ಕ ಕಾನೂನೂ, ಆದರ ಜೊತೆಯಲ್ಲಿರತಕ್ಕ ನಾನಾವಿಧಗಳಾದ ದಸ್ತಾವೇಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ 1—8—0 ವಿ ಪಿ ಪೋಸ್ಟು 1—12—0

ಎಂ ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

---

24 ಸಚಿತ್ರ ಸುಕಸಪ್ತತಿ ಕಥೆಗಳು
ರೂ ೧—೮—೦ (೪೧೦ ಪುಟ) ಟಪಾಲು ಹಾಸಲು ೪ ಆಣೆ

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ
ರೂ ೧—೮—೦ (೪೨೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮೂರ್ಖತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕಾನುಭವವನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನು ಬಯಸಿದರೆ, ಉತ್ಸಾಹಶಕ್ತಿಯುಳ್ಳವರಾಗಬೇಕಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೩೪ ಕಥೆಗಳುಳ್ಳ ರಸಿಕರಿಗಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧—೪—೦ ಟಪಾಲ್ ಹಾಸಲು ೩ ಆಣೆ ಈಗಲೇ ಬರೆಯಿರಿ ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ

ವಿಳಾಸ— ಎಂ ಆರ್ ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಚಿತ್ರ ಬೃಹಸ್ಪತಿ ಕಥೆಗಳು

ಸುಕುಮಾರರುಗಳಿಗೂ ಬಾಲಿಕೆಯರಿಗೂ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರ ಪುರಾಣ ಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ಬುದ್ಧಿಚಾತುರ್ಯನಿವಾರಣೆ ಮುಂತಾದ್ದನ್ನೂ ತಿಳಿಸುವುದು (3) ಸ್ತ್ರೀಪತಿವ್ರತಾಧರ್ಮ, ವರ್ಣಾಶ್ರಮಧರ್ಮ, ಲೋಕಾಚಾರ ಮುಂತಾದವುಗಳನ್ನು ಬೋಧಿಸುವುದು (4) ನವರಸಾಲಂಕೃತವಾಗಿ ಕಥಾಗೂಢದಲ್ಲಿ ಚಿತ್ರ ಕಥಾ ಚಮತ್ಕಾರಯೋಜಿತವಾಗಿ ಸುಲಲಿತವಾದ ಶೈಲಿಯಿಂದ ಬರೆಯಲ್ಪಟ್ಟಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭ ಸೂಚಕ ಭಾವವನ್ನು ಚಿತ್ರಗಳನ್ನು ಇಟ್ಟಿರುವುದರಿಂದ ಓದುಗಾರರಿಗೂ ಮನೋರಂಜಿತವಾಗಿರುವುದು. ಹೀಗೆ ಸರ್ವರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ ೧ಕ್ಕೆ ೧—೮—೦ ಟಪ್ಪಾಲು ಹಾಸಲು ೪ ಆಣೆ

(೩೪ ಸಂಧಿಗಳು) ಸಟೀಕಾ ಜಾಪ್ಯಸ್ಯ ಪೈಮಿನೀಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ಕ್ಕೆ ರೂ. ೬—೦—೦, ಟಪಾಲು ಹಾಸಿಲು ೧೦ ಆಣೆ

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳುಹಿಸುವೆವು

41 ನಮ್ಮ ವಿಳಾಸ— ಎಂ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಗಂಧರಾಜದ ನಶ್ಯದಪುಡಿ.



ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಜಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸ) ಸಂಕಟ ಮುಂತಾದ ರೋಗಗಳೆಲ್ಲವೂ ಮತ್ತು ತಲೆ ನೋವು, ತಲೆಯಲ್ಲಿ ನೀರು ತುಂಬಿಕೊಳ್ಳುವುದು, ಈ ರೋಗಗಳು ... ಗುಣವಾಗುತ್ತದೆ ಕಣ್ಣುಗಳಿಗಾಗಲಿ ಪರಿ... ... ಬೇಕಿಲ್ಲ. ಹೀಗೆ ಈ ಪುಡಿಯನ್ನು ಸಾಧಾರಣ ಪುಡಿಯಂತೆ ಬಳಸಿದರೆ ಪಾಕವಾಗುತ್ತದೆ ೧ ಡಬ್ಬಿಯ ಬೆಲೆ ೪ ಆಣೆ ... ...

ಉತ್ತಮವಾದ ನಶ್ಯದಪುಡಿ

ಘಮ ಘಮಿಸುವ ವಾಸನೆಯಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೊಂದು ಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ಎಲ್ಲ ಬೆಲೆ ... ...

ಪ ಮೋಲ್ಸಾಸಿನೀ ಹೊಗೆಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬ್ರಾಂಕೈಟಿಸ್ ನಾರಿ ಅಜೀರ್ಣಕಗಳು ಹೋಗುವ ... ... ಸುವ ಒಳ್ಳೇ ಹೊಗೆಸೊಪ್ಪಿಗೆ ಬದಲಾಗಿ ಬಾಲ, ರುಚಿ, ವಾಸನೆ ... ದ ಮೆಗಿಯ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ ೧ ಡಬ್ಬಿಗೆ ೪ ಆಣೆ ... ಡಜನ್ ಡಬ್ಬಿಗೆ ೧ ... ... ಟಪಾಲ್ ಖರ್ಚು ಬೇರೆ

ಏಜಂಟ— ಕೆ ಮಲ್ಲಿಕಾರ್ಜುನಶೆಟ್ಟಿ,
ಗೋಪಶೆಟ್ಟಿಪುರ, ಹಾಸನ ಪೋಸ್ಟ್
13 ಕೊಳ್ಳೇಗಾಲ ತಾಲ್ಲೂಕು

ಆಯುರ್ವೇದೀಯ ರಸಶಾಲೆ. ಗೋರೋಚನಾದಿ ಗುಳಿಗೆಗಳು 2

ಗೋರೋಚನ, ಕಸ್ತೂರಿ ಮುತ್ತು— ಈ ಮುತ್ತುಗಳನ್ನು ಮಾಡಿದ ಭಸ್ಮ, ಚಿನ್ನದ ರೇಕು, ಪಚ್ಚಕರ್ಪೂರ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರಣದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೆನೋವು ಸಂದುಗಳ ನೋವು ಮೈ ಕೈಗಳ ಜೋಮು (ಬಾವು), ವೈಸೂಚಿಕೆ, ಶೀತವಾತರೋಗಗಳಬಾಧೆ, ಅಜೀರ್ಣ, ಅತಿಸಾರ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಯಕ್ತಿ, ಅರೋಚಿಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಒಂದೇ ದಿವಸದಲ್ಲಿ ಗುಣವಾಗುತ್ತದೆ. ಶೀತದೇಹದವರು ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ದೊಡ್ಡ ಸುವಾಸನೆಯಾಗಿರುತ್ತದೆ. ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಹಸಿವು ಕಾಣಿಸಿಕೊಳ್ಳುವಂತೆ ಮಾಡುತ್ತದೆ, ನೀರಾಗಿ ಶರೀರ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಕಾಲ, ಮಕ್ಕಳ ಎಳವು, ಜ್ವರ, ನ ಜ್ವ ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಸ್ಲೀಗನ ಸೂಚಿಗೆ ಗುರಿಯಾಗಲಾರರು. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೩ ಆಣೆ



ವೈಕ್ಯಾನಿವಾರಣ (ಕಾಲರಾ ವಿದಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ಪೈಕ್ಯಾನಿವಾರಣವು ಸಂಜೀವಿನಿಯಾಗಿದೆ. ಕೈ ಮಿಾರಿಹೋದ ರೋಗಿಗಳಿಗೂ, ಆಶ್ಚರ್ಯವಾಗುವಂತೆ ರೋಗವನ್ನು ಕೆಳಗಿಸುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿದರೆ, ಮೂತ್ರವು ಕಟ್ಟಿದ್ದರೆ ಈ ಔಷಧಿಯನ್ನು ಕೊಟ್ಟ ಕೂಡಲೇ ಶೀಘ್ರವಾಗಿ ಗುಣಕೊಡುತ್ತದೆ. ಸಮಯದಲ್ಲಿ ಮೇಲಾದರೆ ಹಿಂದೊಂದು ಬುದ್ಧಿಯು ನಿವಾರಣವಾಗುವುದು. ಮನೆಯಲ್ಲಿ ಸಹಾಯವು ನಿಮ್ಮ ಬಳಿಯಲ್ಲಿಟ್ಟರೆ ಬಲವನ್ನು ಬೇಗನೆ ಗುಣಪಡಿಸುವ ಬಿಡ್ಡಿ ... ...

ಅನೇಕ ಸಂದರ್ಭಗಳಿಗೆ ... ... ಒಂದು ಬುಡ್ಡಿಯ ಬೆಲೆ ೧—೦—೦
... ... ಬೇರೆ.

ವಿಳಾಸ— ಶ್ರೀ ಶಿವಶಂಕರ ಔಷಧಶಾಲಾ, ಮೈಸೂರು

೧೯೧೮ ನೆಯ ಇಸವಿ ಮೇ ತಾರೀಖು ೧೮ ರಿಂದ ೧೯೧೮ ನೆಯ ಮೇ ತಾರೀಖು ೨೪ ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೪೦ ನೆಯ ಆನಂದನಾಮ ಸಂ॥ ದ ವೈಶಾಖ ಬ॥ ನವಮಿಯಿಂ ವೈಶಾಖ ಬ॥ ಅಮಾವಾಸ್ಯೆವರೆಗಿನ ಪಂಚಾಂಗ

ತಾರೀ	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಶೇಷ
18	ಸೋ	ತ	15-11	ಶತ	24-35	5
19	ಮಂ	ದ	33-57	ಪೂಭಾ	29-45	6
20	ಬುಧ	ಏ	43-21	ಉಭಾ	35-45	7
21	ಗುರು	ದ್ವಾ	48-46	ರೇ	42-18	8
22	ಶುಕ್ರ	ತ್ರ	53-51	ಅಶ್ವಿ	48-59	9
23	ಶನಿ	ಚ	58-51	ಭ	55-18	10
24	ಭಾ	ಅ	60	ಕೃ	60	11

(1) ಸರ್ವತ್ರೈಕಾದಶಿ (2) ಪ್ರದೋಷ, (3) ಮಾಸ ಶಿವರಾತ್ರಿ. (4) ಸರ್ವತ್ರ ಅಮಾವಾಸ್ಯೆ.

ಬೆಂಗಳೂರು ... ವೈ ವಿದ್ಯಾಭಿಮಾನಿ ... ಪ್ರಕಟಿಸಲ್ಪಟ್ಟಿತು.

REGISTERED No. 121

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ } ೧—೦—೦

ಮೈಸೂರಪುರೀಶಾರಾ ಪರಮಧಿಗತರಾಜಮಂಡಲಹಿತ್ವಾ ಘನಪಥಕೃತಾವತಾರಾ ಪತ್ರಿಕ್ಯಾ ಪ್ರವೃತ್ತಪೋಷರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಳಿತಕಾದ್ಯ[illegible]
ಸೀಮಾತೀತಯಶಸ್ತ್ರಾಪಿವಿಷು[illegible]ವೃತ್ತಮಾಲಾಕುಲಂ । ಪ್ರೇಮಂಬಿತ್ತ್ಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

{ ಅಂಚೆವೆಚ್ಚ ಸೇರಿ ೧—೧೮—೦

(ಸಂಪುಟ [illegible]) ಮೈಸೂರ್ ಸ್ಟಾರ್ ಸನ್ ೧೯೧೮ ನೆಯ ಇಸವಿ ಮೇ ತಾರೀಖು ೨೭ ನೆಯ ಸೋಮವಾರ. (ಸಂಚಿಕೆ [illegible]

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರೆಲ್ಲರಿಗೂ ಅಚ್ಚ ಬೆಳ್ಳಿಯ ಸರಪಣಿ ಬಹುಮಾನ ಕೊಡಲಾಗುತ್ತೆ.

17 ಈ ಲಾಗಾಯತು ೨ ತಿಂಗಳುಮಾತ್ರ.

ಪದ್ಧತಿಯಮೇರೆ ಪೂರಪರ್ಸದ ಯುಗಾಧಿಹಬ್ಬದಲ್ಲಿ ಬಹುಮಾನಕೊಡುವುದಕ್ಕಾಗಿ 2000 ಅಚ್ಚಬೆಳ್ಳಿ ಗಾಗು ಕೊರಳ ಸರಪಣಿಗಳನ್ನ ಸೀಮೆ ಸೀಮೆಯಿಂದ ತರಿಸಿ[illegible]ದ್ದೇವೆ.

ಪ್ಯಾಸ್ಟಿನ್ಸೆಲ್ ಲೈವ್ ರೆಗ್ಯುಲೇಟರ್ ವಾಚ್ ೧ಕ್ಕೆ ಕ್ರಯ 3 8 0 ಪೋಸ್ಟೇಜು 0 1-0

ಈ ಲಾಗಾಯತು ೨ ತಿಂಗಳೊಳಗಾಗಿ ಮೈಲ್ಕಂಡ ಒಂದು ವಾಚು ತರಿಸತಕ್ಕವರಿಗೆ ಒಂದು ಅಚ್ಚಬೆಳ್ಳಿಯ ಕೊರಳ ಸರಪಣಿ ಬಹುಮಾನಕೊಡಲಾಗುತ್ತೆ

ಮುಗಿದನಂತರ ಸಿಕ್ಕದೇ ವ್ಯಸನಪಡುವುದಕ್ಕಿಂತಲೂ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳುವುದುತ್ತಮ

ತಪಗಾರಿ ಯೊಚತದಸ ! ಬಹಳ ಅತ್ಯುತ್ತಮ !! ಬೆಲೆ ಬಹಳ ಸಲೀಸು !!!

ಬಜಾರಿನಲ್ಲಿ ಸಿಕ್ಕುವ ಕಾಯಿಪುಡಿಯನ್ನು ಅಗ್ಗವಾಗಿ ಸಿಕ್ಕುತ್ತೆಂದು ಉಪಯೋಗಿಸಿ ನಿಮ್ಮ ಬರವಣಿಗೆಯನ್ನು ಕೆಡಿಸಿಕೊಳ್ಳಬೇಡಿರಿ. ಈ ಕೆಳಭಾಗದಲ್ಲಿ ಕಂಡ ನಮ್ಮ ಕಾಯಿಪುಡಿಯನ್ನು ಒಂದುಸಾರಿ ಪರೀಕ್ಷಿಸಿರಿ

"ನ್ಯಾಷನಲ್ ಬ್ಲ್ಯಾಕ್ ಇಂಕ್ ಪೌಡರ್" ೧ ಪೊಟ್ಟಣ ಪುಡಿಯಲ್ಲಿ ೨ ಪಿಂಟ್ ಅಂದರೆ ೬ ಔನ್ಸ್ ಅತ್ಯುತ್ತಮವಾದ ಬ್ಲ್ಯಾಕ್ ಇಂಕ್ ಶಾಯಿಯಾಗುತ್ತೆ ಪೊಟ್ಟಣ ೧ಕ್ಕೆ ಕ್ರಯ ೦ ೨ ೦ ಒಂದು ಡಜನ್ ಪೊಟ್ಟಣಗಳಿಗೆ ೧ ೪ ೦ ಪ್ಯಾಕಿಂಗ್ ಪೋಸ್ಟೇಜು ಮಾಫಿ. ಪರಸ್ಥಳಕ್ಕೆ ಒಂದು ಡಜನ್ ಪೊಟ್ಟಣಗಳಿಗಿಂತಲೂ ಕಡಮೆ ರವಾನಿಸಲಾಗುವುದಿಲ್ಲ

ಜೋಮಲೆ ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ ಕುಳಿತರೆ ಮುಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ. ಓದುತ್ತಿರುವಾಗ ಹೊಸ ಹೊಸ ಭಾವಗಳು ತಲೆದೋರಿ ವಿನೋದಕ್ಕುಂಟಾಗುವುದು.

ವಾಚಕರೆ ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರಾಣ ಬಂದು ಶವವೆದ್ದುದನ್ನು ನೋಡುತ್ತಲೇ ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ. ಕ್ರಯ ಪ್ರತಿ ೧ಕ್ಕೆ ೦-೩ ೦ ಪೋಸ್ಟೇಜು ಅಲಾಯಿದಾ

ವೇ॥ ತಿಪ್ಪಯ್ಯಶಾಸ್ತ್ರಿಗಳಿಂದ ವಿರಚಿತವಾದ ೪ ಹೊಸಪುಸ್ತಕಗಳು

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು

(೧) ಶತಕಪಂಚಕ— ಈ ಪುಸ್ತಕದಲ್ಲಿ ೫ ಶತಕಗಳಿವೆ. ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ನಿಷ್ಕಲಶತಕ, ಮಹಾಮಹೇಶ್ವರ ಶತಕ, ಸಂಗಮೇಶ್ವರ ಶತಕ, ೧ ೨ ೩ ನೇ ಶತಕಗಳು ವೀರಶೈವಪರಮರಹಸ್ಯ ಶಿವರಹಸ್ಯ ಮುಂತಾದುವುಗಳಿಂದಲೂ ೪-೫ ನೇ ಶತಕಗಳು ಪಾರಾಯಣಕ್ಕೆ ಯೋಗ್ಯವಾಗಿಯೂ ಇವೆ ಇಷ್ಟು ಸೌಕರ್ಯವುಳ್ಳ ಪುಸ್ತಕ ೧ಕ್ಕೆ ಕ್ರಯ ೦ ೬-೦.

(೨) ಮನೋವಿಜಯ— ಸರ್ವರಿಗೂ ಅತ್ಯವಶ್ಯಕವಾದ ಪುಸ್ತಕ ಕ್ರಯ ೦-೪-೦

(೩) ಬಸವೇಶ್ವರಸ್ತೋತ್ರ— ಕ್ರಯ ಪ್ರತಿ ೧ಕ್ಕೆ ೦-೩-೦

(೪) ಮುಕ್ತ್ಯಂಗನಕಂಠಮಾಲೆ— ಕ್ರಯ ಪ್ರತಿ ೧ಕ್ಕೆ ೦-೩-೦ ಪೋಸ್ಟೇಜು ಅಲಾಯಿದಾ.

ಈಗತಾನೇ ಸೀಮೆಯಿಂದ ಬಂದಿರತಕ್ಕ ಟೇಬಲ್ ಗಡಿಯಾರಗಳು.



ಸರ್ವರೂ ತರಿಸಿಕೊಳ್ಳಲು ಇದು ಒಳ್ಳೆ ಸಮಯ

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ಟೇಬಲ್ ಗಡಿಯಾರವು ಬಲವಾದ ಯಂತ್ರೋಪಕರಣಗಳಿಂದಲೂ ಒಳಭಾಗವು ಸಾಮಾನು ಕಾಣುವಂತೆ ೨ ಪಕ್ಕದಲ್ಲಿಯೂ ಕನ್ನಡಿಗಳನ್ನಿಟ್ಟು ಗಟ್ಟಿಯಾದ ನಿಕ್ಕಲ್ ಲೋಹದಿಂದ ಥಳಥಳಿಸುವಂತೆ ಖಚಿತವಾಗಿ ತಯಾರಾಗಿರುವುದಲ್ಲದೆ ಮೇಲ್ಭಾಗದಲ್ಲಿ ಹಿಡಿದೆತ್ತುವ ಹಿಡಿಯನ್ನು ಸಹ ಇಟ್ಟಿದೆ.

(೧) ಘಂಟೆ ಅರ್ಧಘಂಟೆ ಹೊಡೆಯುವದಕ್ಕೆ ಕ್ಲಾಕ್ ೧ಕ್ಕೆ ೪ ೪ ೦

(೨) ಘಂಟೆ ಅರ್ಧಘಂಟೆ ಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್ ೫ ೪ ೦

(೩) ಘಂಟೆ ಹೊಡೆಯುವುದಕ್ಕೆ ಪ್ರತಿಯಾಗಿ ಪ್ರತಿಸಾರಿಯೂ ವೈವಿಧ್ಯಮಧುರಗಾನವಾದ್ಯತಕ್ಕ ಕ್ಲಾಕ್ ೧ಕ್ಕೆ [illegible]

(೪) [illegible] ಘಂಟೆಗೆ ಸರಿಯಾಗಿ ಕೇಸರ್ ಚಂದವಾಗುವಂತೆ ವೈವಿಧ್ಯಮಧುರಗಾನವಾಗತಕ್ಕ ಕ್ಲಾಕ್ ೫ [illegible]

ಕಾಗದ ಬರೆಯುವಾಗ ಪೂರಾ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕಾಗಿ ಬೇಡಿಕೆ [illegible] ಇತರ ನೀತಿ[illegible]ಗಳಿಗೆ ನಾವು ಜವಾಬ್ದಾರರಲ್ಲವೆಂಬುದನ್ನು [illegible]

ಎಂ. ಎಸ್. ಸಿದ್ದಪ್ಪ ಅಂಡ್ [illegible] ರಾಜಮೊಹಲ್ಲಾ, ಮೈಸೂರು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಸಟೀಕ ಶತಕತ್ರಯ	೧-೦-೦
ಪರಮಾದಿಗಜಾಂಕುಶತಾರಾವಳಿ	[illegible]
ಶಿವಪೂಜಾ[illegible]	೪—೦
ಬಾದರಾಯಣ ಚರಿತ್ರೆ	[illegible]
ಸಟೀಕ ಲಿಂಗವ್ರತ	೦-೦
ಸಟೀಕ ವಿವಾಹವಿಧಿ	[illegible]—೦
ವಿವೇಕಚೂಡಾಮಣಿ (೨ನೆಯ ಭಾಗ)	೧ ೩ [illegible]
ವ್ರತಪಂಚಕ	[illegible] — ೦
ಬ್ರಹ್ಮವಿದ್ಯಾ (ಮುಕ್ತಿಮಾರ್ಗ)	[illegible] — ೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ

ಹೊಸ ಪುಸ್ತಕಗಳು.

136

ಬಸವರಾಜವಿಜಯಂ ಬೆಲೆ ೧ ೮ ೦ [illegible] ದ ಸಂಬಂಧವಾಗಿ ಬಸವಣ್ಣನವರ ಜನ್ಮಸ್ಥಳದಿಂದ ಹಿಡಿದು ಐಕ್ಯವಾದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

[illegible] ಸಿದ್ಧ[illegible] ಚೆನ್ನಬಸವೇಶ ಚರಿತ್ರೆ ಸಹಿತ ಪ್ರಭುದೇವರ [illegible] ಅನೇಕ ಶಿವಶರಣರ ಚರಿತ್ರೆಗಳು [illegible] ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಅತಿ ಸುಲಭವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೮ ಆಣೆ [illegible] ಗಳು [illegible] ಈ ಗ್ರಂಥದಲ್ಲಿ [illegible] ಶಿವಯೋಗಗಳು [illegible] ಪ್ರತಿಯೊಂದು [illegible] ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮನಾಥನ ಚರಿತ್ರೆಯನ್ನು ಅನೇಕ ಪುರಾಣ ಕಥೆಗಳನ್ನು ನಿರೂಪಿಸುವ ದೊಡ್ಡ ಗ್ರಂಥ

ವೀರಶೈವ ಧರ್ಮಶಿರೋಮಣಿ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು ಸವ್ಯಾಖ್ಯಾನ.

ಪಂಚಸ್ತೋತ್ರೀ— ಬೆಲೆ ೧ ರೂ ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ ೧ನೆ ಪ್ರಕರಣಕ್ಕೆ ೧ ೩-೦ ೨ನೆ ಪ್ರಕರಣಕ್ಕೆ ೧ ರೂ ೩ನೆ ಪ್ರಕರಣಕ್ಕೆ ೧-೩-೦

ಗೌರೀಶಪುರಾಣಂ ೧-[illegible], ಸಟೀಕ ತತ್ವಪ್ರಕಾಶಿಕೆ ೬ ಆಣೆ, ಸಟೀಕ ಶತಕತ್ರಯಕ್ಕೆ ೬ ಆಣೆ; ಜೇಮಿನಿ ಕಾಲೋತ್ತರ[illegible] (ಸಟೀಕ) ೬ ಆಣೆ ಸಟೀಕ ಶಿವಾನಂದ ೧೦ ಆಣೆ, [illegible] ೬ ಆಣೆ, [illegible] ೨ ಆಣೆ, ಸಂಸ್ಕೃತ[illegible] ಕೋಶ ೧ ಆಣೆ

[illegible]

ಶಿವಕ[illegible]

[illegible] ಮುದ್ರಣ ಕೆಲಸವನ್ನು ಬಹು [illegible]ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿ[illegible] ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದು[illegible]ಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತೂ ಕನ್ನಡದ [illegible]ಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಜಿಟಿಂಗ್ [illegible]ರ್ಡು, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದ[illegible]ಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ [illegible]ಉದವಾಗಿಯೂ ಸ್ವಲ್ಪಕಾಲದಲ್ಲೂ ನಾನಾ [illegible]ಣ್ಣಗಳಲ್ಲಿ ಮಾಡಿ ಕೊಡಲ್ಪಡುವುದಲ್ಲದೆ ಎಲ್ಲ ವಿಧ[illegible] ಬೈಂಡಿಂಗ ಕಾರ್ಯವೂ ಮಾಡಲ್ಪಡುವುದು. ಈಗ [illegible]ಮಾಸ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು [illegible] ಕೆಂಪು, ಹಸರು ಮೊದಲಾದ ಬಣ್ಣದಶಾಯಿ[illegible]ಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರು[illegible]ವೆ. ಇಷ್ಟ್ಯಪುಸ್ತವರು ನಮಗೆ ಬರೆದು ದೇಕಾ[illegible]ನಿಸುವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ
ಕಾರ್ಕ್ ಪ್ರೆಸ್, ಮೈಸೂರು.

ಮಾ|| ರಾ|| ಮೈಸೂರು ಸ್ಟಾರ್ ಎಡಿಟರ್ ರವರಿಗೆ

ಸ್ವಾಮಿ, ನಿನ್ನೆ ದಿವಸ [illegible] ನಮ್ಮ ಕೈತನು ತನ್ನ ದ[illegible]ರ್ಲಿಂದ [illegible] ತಂದ ಸವಾರಿಮಾಡುವ ಎತ್ತಿ[illegible] [illegible] ಅಮಲ್ದಾರರ ಆಸ್ಥ[illegible] [illegible] ಪ್ರೊಬೇಷನರರು ಬಲಾತ್ಕಾರದಿಂ[illegible] [illegible] ಅಕ್ರಮವಾಗಿ ರೇಸ್ವೈಕರಿಗೆ ಸಾಗಿಸಿ, ಸದರಿ ಎ[illegible] [illegible] ಬಹಳ ಬಂಜೀನವಾಗಿದ್ದದ್ದನ್ನು ಲಕ್ಷ್ಯವಿಡದೆ, [illegible] ಎಳೆಯಲಾರದಷ್ಟು ಭಾರವಾದ ಸಬ್ಬಿಣದ [illegible] [illegible]ಗಳನ್ನು ಗಾಡಿಯಲ್ಲಿ ತುಂಬಿಸಿ [illegible] ಹಾಳವಕ್ಕೆ [illegible] ಅಷ್ಟರಲ್ಲಿಯೇ ನಮಗೆ ಈ [illegible] [illegible] ತಿಳಿದು [illegible] ಬಳಿಗೆ ಹೋ[illegible] ವಿಜ್ಞಾಪಿಸಿಕೊಳ್ಳ[illegible] ಸದರಿ ಗಾಡಿಯನ್ನು ಕೊಡ್ಲಿ ಬಿಡಿ[illegible] ಅಮಲ್ದಾರರವರಿಗೆ [illegible] ನಮ್ಮ ಪತ[illegible] [illegible] ನಂತರ [illegible] ಅಮಲ್ದಾರರವರು ಕೊ[illegible] ಅದೇರೀತಿ [illegible] [illegible] ಒಂದು ಗಾಡಿಯನ್ನು ಬಿಡಿಸುವುದಕ್ಕೆ ೩-೪ ಗಂಟೆ [illegible] ಹಿಡಿಯಿತು

ಈ ರೀತಿಯಾಗಿ [illegible] ಅದೃಷ್ಟವಶಾತ್ [illegible] ಗಾಡಿಯು ಬಿಡಲ್ಪಟ್ಟಾಗ್ಯೂ, ಅದೇ ರೀತಿ [illegible] ಗಾಡಿಗಳ ಮಾಲೀಕರು ಸರ್ಕಾ[illegible] [illegible] ಇಗನ್ನು [illegible]ಬಾಧುತ್ತಿದಾರೆ. [illegible] ಅಂಥಾದ್ದರಲ್ಲಿಯೂ [illegible] [illegible]ವನ್ನು ಹೊಂದಿರುವ ಈ [illegible]ಕೆಗಳು ನಡೆಯುವುದನ್ನು [illegible]ಯವಾಗಿದೆ ಈ ವಿಷಯ [illegible] ಮತ್ತು [illegible] [illegible] ನಮ್ಮ ದಿವಾನ[illegible] [illegible] ನಮ್ಮ [illegible] ಚಿತ್ತಕ್ಕೆ ತಂದುಕೊಳ್ಳಂಗ[illegible] ಮುಂದೆ ಯಾವಾಗ್ಯೂ ಇಂಥಾ ಅಕೃತ್ಯಗಳು ಉಂಟಾಗದಂ[illegible] [illegible]ವಾದ ವಿಚಾರಣವನ್ನು ಮಾಡುವರೆಂದು ಆಶಿಸು[illegible] ಎಲ್ ರಾಮಚಂದ್ರರಾವ್ ಪ್ರೊಪ್ರೈಟರ್, ದಿ. [illegible] ಏಜನ್ಸಿ, ಮೈಸೂರು.

ಮನುಷ್ಯಗಳಿಲ್ಲದ [illegible]

[illegible] ದೇಶದ ಬರ್ರಿಂಗ್‌ಟನ್ ಎಂಬ ಸ್ಥಳದ [illegible] ಹ್ಯಾರಿಸನ್ (Mr. E Harrison. F L S) ರವರು ಮನುಷ್ಯಗಳಿಲ್ಲದ ಒಂದು ಜಾತಿಯ [illegible] ಗಿಡವನ್ನು ಕುರಿತು ಬರೆಯುವುದೇನೆಂದ[illegible] ಈ ಜಾತಿಯ [illegible] ಗಿಡಗಳ ಪ್ರಯೋಜನ[illegible] ಇನ್ನೂ ಜನಗಳ ತಿಳುವಳಿಕೆಗೆ ಬಂದಿರುವುದಿಲ್ಲ. ಉಷ್ಣ [illegible]ಶಗಳಲ್ಲಿ ಮತ್ತು ಸೈರುಗಳು [illegible] ಬಳಿಯುವ [illegible] ಪ್ರದೇಶಗಳಲ್ಲಿಯೂ ಇವು ದನಕರುಗಳ [illegible] [illegible] ಮನುಷ್ಯರ ಆಹಾರಕ್ಕೂ ಪದಾರ್ಥಗಳನ್ನು ಒದಗಿಸಿ[illegible]. ಮಳೆಯಿಲ್ಲದ ಕಾಲಗಳಲ್ಲೂ ಮತ್ತು ಬೇಸಿಗೆ[illegible] ಇತರ ಗಿಡಗಳೆಲ್ಲವೂ ಬತ್ತಿಹೋಗುತ್ತಿರುವಾಗ್ಯೂ ಈ [illegible]ಗಳ್ಯಾ ಗಿಡಗಳು ಬಹಳ ಸೊಂಪಾಗಿ ಬೆಳೆ[illegible] [illegible] ಈ ಗಿಡಗಳನ್ನು ಇತರ[illegible] ಪೈರುಗಳೂ ಬೆಳೆಯುತಿರುವ ಜಮೀನುಗಳಲ್ಲಿ ನೆಟ್ಟ[illegible] ಏವು ಬಹಳ [illegible] ಬೆಳೆದು ಬಂದುದರಿಂದ ನಂತರ ಎಕರೆಗೆ ಸುಮಾರು ೧೦೦ ಟನ್ [illegible] [illegible] [illegible]ವಾದ [illegible] ಸಿಕ್ಕುವುದು. ಇದ[illegible] [illegible], ಎಮ್ಮೆ, [illegible] ಎಲ್ಲವಕ್ಕೂ ತಿನ್ನಿಸ[illegible]ಬಹುದು ಇವುಗಳಲ್ಲಿ ಎಕರೆಗೆ ಸುಮಾರು ೪ ಟನ್ [illegible] [illegible]ವಾದ ಮತ್ತು ಪುಷ್ಟಿಕರವಾದ ಹಣ್ಣುಗಳು [illegible] ಇವುಗಳಲ್ಲಿ ಹೇರಳವಾಗಿ ಸಕ್ಕರೆಯೂ ಮತ್ತು [illegible] [illegible]ವಾದ ಇತರ ಆಹಾರ ಪದಾರ್ಥಗಳೂ ಇರ[illegible] ಮತ್ತು ಇವುಗಳಿಂದ ಉಪ್ಪಿನಕಾಯಿ [illegible] [illegible]ಗಳನ್ನು ಮಾಡಿ ಬಹಳ ಕಾಲವಿಟ್ಟಿರಬಹುದು [illegible] ಮಾದರಿ ಗಿಡದ ಹಣ್ಣು ಒಂದೊಂದು ಪ್ರಮಾಣ[illegible] [illegible] [illegible], ಹಣ್ಣುಗಳು ಒಂದು ನಿಂಗ[illegible] [illegible] ಗಾತ್ರ ಮೊದಲ್ಗೊಂಡು ಒಂದು ದೊಡ್ಡ ಮಧುರ [illegible] ಗಾತ್ರದವರಿವಿಗೂ ಇರುವುದು. ಅಚ್ಚ[illegible] ಕೆಂಪು, ಮಧ್ಯಸ್ಥವಾದ ಕೆಂಪು, [illegible], ಹಳದಿ ಮತ್ತು ಬಿಳುಪು ಬಣ್ಣದವುಗಳಾಗಿರುವುವು ಗಿಡವೊಂದಕ್ಕೆ [illegible] ಮೊದಲ್ಗೊಂಡು ೪ [illegible] ಹಣ್ಣು ಬಿಡುವುದು [illegible] ಬೇರೆ ಜಾತಿಯ [illegible]ಗಳ್ಯಾ ಗಿಡಗಳನ್ನು [illegible] ನೆಟ್ಟರೆ ವರುಷದ ಸದಾಕಾಲದಲ್ಲಿಯೂ [illegible] ಸಿಕ್ಕುವಂತೆ ಮಾಡಿಕೊಳ್ಳಬಹುದು ಈ ಗಿಡದ [illegible] ಕೆಲವು ದೇಶಗಳಲ್ಲಿ ತರಕಾರಿಯಾಗಿ ಉಪಯೋಗಿಸು[illegible]ವರು. ಪ್ರಜಾಸಂಖ್ಯೆಯು ಹೆಚ್ಚಾಗಿ ಕೆಲವರಿಗೆ [illegible] ತುಂಬಾ ಆಹಾರವು ಸಿಕ್ಕದೆ ಕಷ್ಟವಾಗಿರುವ ಇಂಡಿಯಾ ದೇಶದಲ್ಲಿ ಈ ಗಿಡವು ಬಹಳ ಪ್ರಯೋಜನಕಾರಿಯಾದ[illegible]ದು ಹೇಳಬಹುದು [illegible] ಇಂಡಿಯಾದೇಶೀಯರು [illegible] [illegible]ಯಕ್ಕೆ ಗಮನ ಕೊಡಬೇಕೆಂಬ ಉದ್ದೇಶದಿಂದ [illegible] ನಾವು ಈ ವಿಷಯವನ್ನು ಪ್ರಚಾರ [illegible] ಮತ್ತು ಇದುವರಿಗಿನ ಅನುಭವದಲ್ಲಿ ಈ ಜಾತಿಯ [illegible]ಗಳ್ಯಾ ಮಂತೆ ಮಳೆಯಿಲ್ಲದ [illegible] [illegible] ಮನುಷ್ಯರಿಗೆ ಆಹಾರ ಮತ್ತು ದನಕರುಗಳಿಗೆ [illegible] ಒದಗಿಸಿಕೊಡತಕ್ಕ ಗಿಡವು [illegible]ವರ್ಗದಲ್ಲಿ [illegible] ಇಲ್ಲವೆಂದು ತಿಳಿಯಬರುತ್ತದೆ [illegible] [illegible] ಈ ಜಾತಿಯ [illegible]ಗಳ್ಯಾ [illegible] [illegible]ವರು ಮದರಾಸಾಧಿಪತ್ಯದಲ್ಲಿ ಗುಂಟೂರು ಡಿ[illegible] ಎಂಬ ಸ್ಥಳದಲ್ಲಿ ಬಾಯ್ಸ್ ಇಂಡಸ್ಟ್ರಿಯಲ್ [illegible] ಛಾರ್ಜಿನಲ್ಲಿರುವ (Officer in charge of the Boys Industrial Home Bapatla, Guntur District, Madras Presidency) ರಿಗೆ ಬರೆದರೆ ಅವರು ಈ ಗಿಡದ ಎಲೆಗಳನ್ನು ಕಳುಹಿಸಿ ಕೊಡುವರು ಅವುಗಳನ್ನು ನೆಟ್ಟರೆ [illegible] ಗಿಡಗಳಾಗುವುವು ಸಾಲ್ವೇಷನ್ ಆರ್ಮಿ (Salvation Army) ಯವರು ಕಳೆದ [illegible] ವರುಷಗಳಿಂದೀಚೆಗೆ ಇಂಡಿಯಾದೇಶದಲ್ಲಿ ಇದರ [illegible] ವನಾಯವನ್ನು ಬಹಳ ಪ್ರೋತ್ಸಾಹಗೊಳಿಸುತ್ತಿರುವುದಾಗಿ ತಿಳಿಯಬರುತ್ತದೆ

ಪರಸ್ಪರ ಸಹಾಯ ಶ್ರೈವದ ಮನೆಗಳನ್ನು ಸ್ಥಾಪಿಸುವಿಕೆ

ಸಂಯುಕ್ತ ಸಂಸ್ಥಾನಗಳ (United Province) ಪರಸ್ಪರ ಸಹಾಯಸಂಘಗಳ ರಿಜಿಸ್ಟ್ರಾರಾದ [illegible] ಸಿ ಬಾನರ್ಜಿ ಐ. ಸಿ ಎಸ್ ಯವರು ಸಿಮ್ಲಾ ಸಮ್ಮೇಳನದಲ್ಲಿ ಓದಿದ ಉಪನ್ಯಾಸದ ಸಾರಾಂಶ

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಹಸ್ರ ವ್ಯಾಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ... ಮುನಸಿಫ್ ಕೋರ್ಟಿನ ಕಾನೂನೂ ಮತ್ತು ... ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ... ಹೊಂದಲ್ಲಿರತಕ್ಕ ಸಾಮಾನ್ಯದಗಳಾದ ದಸ್ತೈವಜು ... ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—...
ಎಂ. ಎಸ್. ಸಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಳಿ ಕಟ್ಟುವುದೂ, ಕೆಟ್ಟವಾಸನೆ ಬರುವುದು, ಶೀತ, ... ಉಸಿರುಕಟ್ಟಿಕೊಳ್ಳುವುದು (ಪೀನಸ) ... ಮತ್ತು ಬೆಳಗಿನ ವೇಳೆಗಳಲ್ಲಿ ... ತಲೆ ನೋಯುವುದು, ತಲೆಯಲ್ಲಿ ... ತಿಂಗಳು ... ಈ ... ತಪ್ಪದೆ ಗುಣವಾಗುತ್ತ ... ಗಳಿಗಾಗಲಿ ಮೊದಲಿಗಾಗಲಿ ... ಈ ಪುಡಿಯನ್ನು ... ಆಣೆ. ೧ ದರ್ಜಿ ಡಬ್ಬಿಗೆ ೧—೮—೦

ಉತ್ತಮವಾದ ನಸ್ಯದಪುಡಿ.

ಭಾರಿ ಸಹಜವಾದ ವಾಸನೆಗಳಿಂದ ಒಳ್ಳೇ ... ಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ... ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ... ತಿನ ನಿಜವು ತಿಳಿಯುತ್ತದೆ. ೫೪ ತೊಲೆ ತೂಕದ ... ೧೦ ಆಣೆ ೫ ಸೇರಿಗೆ ೬—೮—೦

ಮುಖಿರೋಲ್ಲಾಸಿನೀ ಹೊಗೇಸೊಪ್ಪು.

... ಪಾಕ ... ಹಲ್ಲುನೋವು, ಬಾಯಿ ... ದಾರಿಗೆ ... ಸುವ ಬದಲು ... ಸೊಪ್ಪಿನ ಬದಲಾಗಿ ... ನಾಗರೀಕರು ಮೆಚ್ಚುವ ಈ ಹೊಗೇಸೊಪ್ಪನ್ನು ... ೧ ಡಬ್ಬಿಗೆ ೪ ಆಣೆ. ಒಂದು ದರ್ಜಿ ಡಬ್ಬಿಗೆ ೧—೧೪—೦ ಟಪಾಲ್ ಖರ್ಚು ಬೇರೆ.

ವಿಳಾಸ— ಕೆ. ... ಶೆಟ್ಟಿ,
... ಹನುಮಂತ ... ಪೋಸ್ಟ್,
15 ಕೊಳ್ಳೇಗಾಲದ ತಾಲ್ಲೂಕು.

2(...) ಸಚಿತ್ರ ಶುಕಸಪ್ತತಿ ಕಥೆಗಳು — ರೂ. ೧—೪—೦ (೫೧೦ ಪುಟ) ಟಪಾಲು ಹಾಸಲು ೪ ಆಣೆ.
ಸಚಿತ್ರ ಭಟ್ಟಿವಿಕ್ರಮಾದಿತ್ಯರಾಜನ ಚರಿತ್ರೆ — ರೂ ೧—೪—೦. (೫೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ಹಾಗೆ ಮನುಷ್ಯರಿಗೆ ವಿಶೇಷ ಜ್ಞಾನವು ಬೇಕಾದರೆ, ವಾಕ್ಚಾತುರ್ಯ ಇದ್ದರೆ, ಲೋಕರೀತಿಯನ್ನು ತಿಳಿಯಬೇಕಾದರೆ, ನೀತಿಯು ಬೇಕಾದರೆ, ಧರ್ಮಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನು ಅಪೇಕ್ಷಿಸಿದರೆ, ಉತ್ಸಾಹಶಕ್ತಿ ಬಲ್ಲ... ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೫೪ ಕಥೆಗಳುಳ್ಳ ... ಪುಸ್ತಕವಾಗಿದೆ. ಬೆಲೆ ರೂ ೧—೮—೦ ಟಪಾಲ್ ಹಾಸಲು ೩ ಆಣೆ. ... ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಬೃಹಸ್ಪತಿ ಕಥೆಗಳು

ಶುಕಮಹರ್ಷಿಗಳು ಲೋಕದಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಧರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರ ಮಾಡಿ ಕನ್ನಡದಲ್ಲಿ ಬರೆಸಿದೆ. (1) ಗೃಹಸ್ಥಾಶ್ರಮದಲ್ಲಿ ಆವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ... ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವುದು. (2) ... ಧ್ಯಾನ, ಯೋಗ ಮುಂತಾದ ವೇದಾಂತರಹಸ್ಯಗಳನ್ನೂ, ... ತಿಳಿಸುವುದು. (3) ಸ್ತ್ರೀ ... ಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ ... ಬೋಧಿಸುವುದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಕೋಚಿತವಾಗಿ ಸುಲಭಶೈಲಿಯಿಂದ ಬರೆದಿರುವುದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವುದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಿಷ್ಠ ಚಿತ್ರಗಳನ್ನು ಇಟ್ಟಿರುವುದರಿಂದ ಓದುಬಾರದವರಿಗೂ ಮನೋರಂಜಿತವಾಗಿರುವುದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ... ವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ ೧ಕ್ಕೆ ೧—೪—೦; ಟಪಾಲು ಹಾಸಲು ೪ ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಇದರ ಕ್ರಯ ಪ್ರತಿ ೧ಕ್ಕೆ ರೂ. ೪—೦—೦; ಟಪಾಲು ಹಾಸಲು ೧೦ ಆಣೆ.

ಇವಲ್ಲದೆ ಇನ್ನೂ ಅನೇಕ ಕನ್ನಡಗ್ರಂಥಗಳು ದೊರೆಯುತ್ತವೆ ಪುಸ್ತಕಗಳ ಪಟ್ಟಿಗೆ ಬರೆದರೆ ಉಚಿತವಾಗಿ ಕಳಿಸಲಾಗುವುದು.

43 ನಮ್ಮ ವಿಳಾಸ— ಎ. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಶ್ರೀ ಕ್ಷಾರ ಪೇಂಕಟಾಚಲ ಪಂಡಿತರ ಪಿದ್ಯ ಪದಗಳು 4

ಲೋಕಾಮೃತ ಕಸ್ತೂರಿ ಮಾತ್ರೆ— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮುಖ್ಯದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೆಶೂಲೆ



ಸಂಧುಗಳ ನೋವು ವಾತ ಕಾಲು ಊದಿಕೆ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ... ಪಿತ್ತ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಬೊಟ್ಟು ... ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಬೇಗ ಜೀರ್ಣಗೊಳಿಸಿ, ಯಾವ ... ಬಾರಿಕೊಡದೆ, ನರಗಳ ಪಾಪಾ ಬಲಹೀನತೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲಿ, ಮಕ್ಕಳ ಎಳವು, ಜ್ವರ, ... ರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾದ ಮದ್ದು)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ... ಸಾರಿಯಿಂದು ತೋರಿದಾಗಲೂ, ಅಲ್ಪ ... ಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾಗಬಹುದು, ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮುಖ್ಯವಾದ ಸಹಾಯವ ... ಅಪೇಕ್ಷಿಸಿದ ಕಾಲದಲ್ಲಿ ಬೇಗನೆ ಗುಣಪಡಿಸುವ ಸಿದ್ಧೌಷಧವಾಗಿದೆ.

... ಉಪಯೋಗಿಸುವ ಕ್ರಮವು ಇರುವುದು. ಒಂದು ಬುಡ್ಡಿಯ ಬೆಲೆ ೧—...
ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಮನ ವೈದ್ಯಶಾಲಾ, ಮೈಸೂರು.

೧೯೧೧ ನೆಯ ಇಸವಿ ... ತಾ|| ೧ ರಿಂದ ೧೯೧೧ ... ವರೆಗೆ ... ಸಾಧಾರಣನಾಮ ಸಂ|| ದ ಜ್ಯೇಷ್ಠ ಶು|| ಅ... ಯಿಂದ ಜ್ಯೇಷ್ಠ ಶು|| ಚತುರ್ದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.
1	ಸೋ	ಅ	52-35	ಮಘಾ	7-13
2	ಮಂ	ನ	46-54	ಪುಬ್ಬಾ	4- 9
3	[1]ಬುಧ	ದ	41-13	ಹ	0-31
4	[2]ಗುರು	ಏ	34-45	ಚಿ	52-33
5	[3]ಶುಕ್ರ	ದ್ವಾ	28-31	ಸ್ವಾ	48-13
6	[4]ಶನಿ	ತ್ರ	22-30	ವಿಶಾ	44-19
7	[5]ಭಾ	ಚ	16-58	ಅನೂ	40-51

(1) ದಶಹರದಶಮಿ, ವರದರಾಜ ವಿಂಜಾಂತಿಗೆ, ಗವಿಪ್ಪನದಲ್ಲಿ ನೃಸಿಂಹಸ್ವಾಮಿ ರಥ. (2) ಸರ್ವತ್ರ ಏಕಾದಶಿ. (3) ದ್ವಾದಶಿ ತಿಥಿ, ಪ್ರದೋಷ. ... (4) ಕಾಂಚ್ಯಾಂ ಗರುಡೋತ್ಸವ, ಶ್ವಾರ್ ತಿರುನಕ್ಷತ್ರಂ. (5) ಪೂರ್ಣಿಮಾತಿಥಿ, ... ನೃಸಿಂಹಜಯಂತಿ, ವೃತ್ಯಯೋಗ.

ವೈದಿಕ ... ವೈ. ವಿರೂಪಾಕ್ಷಯ್ಯನವರಿಂದ ... ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

REGISTERED M NO. 124

. ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು .

ಮಹಿಸೆಸಿರಪುರ್ವಿಕಾರಾ ಜಿತಮಧಿಗತರಾಜ್ಯಮಂಡಲಹಿತ್ವ ಘನಪದಕೃತಪತಾರಃ ಪಕ್ಷಪಾತನಿವೃತ್ತ್ಯ ದೋಷಹರಾಜೇಯಾತ್ ।

ವಾರ್ಷಿಕ ಚಂದಾ } [illegible] । [illegible] { ಅಂಚೆವೆಚ್ಚ ಸೇರಿ

೧—೮—೦ } [illegible] । [illegible] { [illegible]

(ಸಂ.೩೩) ಮೈಸೂರ್ ಸ್ಟಾರ್ ನ ೧೯೦೬ ನೇಯ ಇಸವಿ ಜೂನ್ ತಾರೀಖು ೮ ನೇಯ ಸೋಮವಾರ. (ಸಂಚಿಕೆ ೨೩.

ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು
ಈಗತಾನೆ ಸೀಮೆಯಿಂದ ಬಂದಿರತಕ್ಕ ರಬ್ಬರ್ ಹೊಸ ಬೈಸ್ಕಲ್‌ಗಳು.



ಪ್ರತಿಯೊಂದು ಬೈಸ್ಕಲಿನ ಜೊತೆಯಲ್ಲಿಯೂ ಅತ್ಯವಶ್ಯಕವಾಗಿ ರಿಪೇರಿ ಮಾಡಿಕೊಳ್ಳಲು ಬೇಕಾದ ಆಯುಧಗಳೂ ಆಯುಧಗಳನ್ನಿಡತಕ್ಕ [illegible] ಚರ್ಮದ ಚೀಲ ೧. ಗಾಳಿ ತುಂಬುವ ಪಂಪ್ ೧. ಸಹ [illegible] ಬೆಲ್ ೧ ಇಷ್ಟು ಸಾಮಾನುಗಳನ್ನು ಮುಫತ್ತು ಕೊಡಲಾಗುತ್ತೆ.

ರಾಯಲ್ ಮೇಲ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, ರ್‍ಯಾಲ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ [illegible]
ಪ್ರಿಟಾನಿಕ್ ಬೈಸ್ಕಲ್—ಡೀಲೆಪ್ ಟೈರ್, [illegible] ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ [illegible]
ರಾಯಲ್ ಕಿಂಗ್ ಬೈಸ್ಕಲ್—ಕೇಂಬ್ರಿಡ್ಜ್ ಟೈರ್, [illegible] ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ [illegible]
ರಾಯಲ್ ಸ್ಟೇಟ್ ಬೈಸ್ಕಲ್— ಪಾಮರ್ ಟೈರ್, ಪಾಮರ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ [illegible]
ರಾಯಲ್ ಅರ್ಚರ್ ಬೈಸ್ಕಲ್—ಬ್ರಿಟಾನಿಯಾ ಟೈರ್ ಬ್ರಿಟಾನಿಯಾ ಟ್ಯೂಬ್ ಹಾಕಿದ್ದು [illegible]
ಬಿ ಎಸ್ ಎ ಫಿಟಿಂಗ್ ಬೈಸ್ಕಲ್, [illegible] ಟೈರ್, ಡಂಲಪ್ ಟ್ಯೂಬ್ ಹಾಕಿದ್ದು ಕ್ರಯ ೧ಕ್ಕೆ [illegible]
ಬೈಸ್ಕಲ್ ಬಿಡಿ ಸಾಮಾನುಗಳೂ ಸದಾ ನಮ್ಮಲ್ಲಿ ವಿಕರಿಗೆ ಸಿದ್ಧವಾಗಿವೆ ಬೈಸ್ಕಲ್ಲಿಗೆ ಆರ್ಡರ್ ಮಾಡತಕ್ಕವರು ೧೦ ರೂಪಾಯಿ ಅಡ್ವಾನ್ಸು ಕಳುಹಿಸಬೇಕು ಬಾಕಿ ಮೊಬಲಗ ರೈಲ್ವೆ [illegible] ವಿ ಪಿ ಮೂಲಕ ಕಳುಹಿಸಲಾಗುತ್ತೆ.

"ಜ್ವಾಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್) ಓದುವುದಕ್ಕೆ [illegible] ಗಿಸುವವರೆಗೂ ಮನಸ್ಸು ನಿಲ್ಲುವುದಿಲ್ಲ ಓದುತ್ತ ಓದುತ್ತ ಹೊಸಹೊಸ ಭಾವಗಳು [illegible] ಟಾಗುವುದು ಶಾಂತಕರಿ! ಗೋರಿಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವುದನ್ನು ನೋಡಿ [illegible] ಆಶ್ಚರ್ಯಸಮುದ್ರದಲ್ಲಿ ಮುಳುಗಿಹೋಗುವಿರಿ ಕ್ರಯ ಪ್ರತಿ ೧ಕ್ಕೆ ೦—೩—೦ ಪೋಸ್ಟೇಜು ೦—೧—೦

ಹೊಸ ಪುಸ್ತಕಗಳು.

ವೀರಶೈವರಿಗೂ ಇತರರಿಗೂ ಸಹ ಅತ್ಯವಶ್ಯಕಬೇಕಾದ್ದು

ಶಿವವಿಜಯ—ವೇದವೇದಾಂಗ ವೇದಾಂತ ಪುರಾಣ ಇತಿಹಾಸಾದಿಗಳಲ್ಲಿ ಬಹು ಪರಿಣತರಾಗಿಯೂ ಅನೇಕ ಮತ ಸಿದ್ಧಾಂತದಲ್ಲಿ ಕುಶಲರಾಗಿಯೂ ಇದ್ದ ಶ್ರೀ ಗುರುಸ್ವಾಮಿಗಳವರಿಂದ ವೀರಶೈವರಿಗೂ ಅದ್ವೈತ ಮತಸ್ಥರಿಗೂ ಬಹು ಪ್ರಯೋಜನವಾಗಿರುವಂತೆ ಮನೋಹರವಾಗಿ ರಚಿಸಲ್ಪಟ್ಟಿದೆ ಇದಕ್ಕೆ ಪರಮಪೂಜ್ಯರಿಂದ [illegible] ಸಿದ್ಧಲಿಂಗಸ್ವಾಮಿಗಳು ಸಮಸ್ತರಿಗೂ ಸುಲಭವಾಗಿ ತಿಳಿಯುವಂತೆ ತಾತ್ಪರ್ಯವನ್ನು ಸ್ಪಷ್ಟವಾಗಿ ಬರೆದಿದ್ದಾರೆ ಸರ್ವರೂ ಅತ್ಯವಶ್ಯಕ ಪಡೆಯಬೇಕಾದ್ದು ಇದರ ಕ್ರಯ ಪ್ರತಿ ೧ಕ್ಕೆ ೮ ೦ ವಿ ಪಿ ಮೂಲಕ ೧೧ ಆಣೆ

ಶತಪಂಚಕ—ಇದರಲ್ಲಿ ನಿರಂಜನಶತಕ, ಸಿದ್ಧಲಿಂಗೇಶ್ವರಶತಕ, ಸಿದ್ಧ[illegible]ಶತಕ, ಉಮಾಮಹೇಶ್ವರಶತಕ, ಸಂಗಮೇಶ್ವರ ಶತಕಗಳೆಂಬ ೫ ಶತಕಗಳಿವೆ ಈ ಐದು ಶತಕಗಳು ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ ಈ ಗ್ರಂಥವನ್ನು ಶ್ರೀ [illegible]ಆಚಾರ್ಯರು ಚೆನ್ನಾಗಿ ತಿಳಿಯುವಂತೆ ರಚಿಸಿರುವರು ಇದರ ಕ್ರಯ ಪ್ರತಿ ೧ಕ್ಕೆ ೦-೩-೦ ವಿ ಪಿ ಮೂಲಕ ೦-೮-೦

ಮುಕ್ತ್ಯಂಗನ ಕಂಠಮಾಲೆ ಮತ್ತು ಜ್ಯೋತಿರ್ಮಯಶಂಭವ ಎಂದೀ ಎರಡು ಗ್ರಂಥಗಳು ವೀರಶೈವ ಸಿದ್ಧಾಂತವನ್ನು ಸುಲಭವಾಗಿ ಅಬಾಲವೃದ್ಧರಿಗೂ ಬೋಧಿಸತಕ್ಕವುಗಳಾಗಿವೆ ಇವೆರಡೂ ಇರುವ ಪ್ರತಿ ೧ಕ್ಕೆ ೦ ೪ ೦ ವಿ. ಪಿ. ಮೂಲಕ ೦-೬-೦

ಶ್ರೀ ಬಸವೇಶ್ವರ ಸ್ತೋತ್ರಶತಕ-ಗುರುಬೋಧೆ, ಮನೋಬೋಧೆ, ಲಿಂಗತ್ರಿವಿಧಿ, ಶ್ರೀಬಸವೇಶ್ವರ ಸ್ತೋತ್ರ ಇವೀ ನಾಲ್ಕು ಒಂದೇ ಪುಸ್ತಕದಲ್ಲಿ ಮುದ್ರಿತವಾಗಿವೆ ಶಿವಪೂಜಾಕಾಲದಲ್ಲಿ ಪಾರಾಯಣಕ್ಕೆ ಯೋಗ್ಯವಾಗಿವೆ ಕ್ರಯ ಪ್ರತಿ ೧ಕ್ಕೆ ೦ ೩-೦ ವಿ ಪಿ ಮೂಲಕ ೦-೫-೦

ಮೇಲ್ಕಂಡ ನಾಲ್ಕು ಪುಸ್ತಕಗಳನ್ನು ಒಂದೇಸಾರಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚ ಸಹ ಸೇರಿ ೧-೧೦-೦

ರಬ್ಬರ್ ವಾಚ್‌ಗಳ ಕ್ರಯದ ಲಿಸ್ಟ್.

ರಾಸ್ಕೋಪ್ ಸಿಸ್ಟಂ ವಾಚ್ ೧ಕ್ಕೆ ೫-೮-೦ ಗೋಲ್ಡ್ ವಾಚ್ ೧ಕ್ಕೆ [illegible] ವಿ ಟೊ [illegible] ಚೆಕ್ ವೃಷ್‌ವಾಚ್ ೧ಕ್ಕೆ ೪-೪-೦, ಸ್ಪೆಷಲ್ ಸರ್ವಿಸ್ ಚೆಕ್ ಸ್ವಿಸ್ ವಾಚ್ ೧ಕ್ಕೆ [illegible], [illegible] ೧ಕ್ಕೆ [illegible]

ಟೈಂಪೀಸ್ ಅಲಾರಂ ಇರತಕ್ಕದ್ದು [illegible] ಟೈಂಪೀಸ್ [illegible] ಇರುವ [illegible] ಸಹ ಇದ್ದು ತಾರೀಖು ಕೂಡ ತೋರಿಸತಕ್ಕ ದೊಡ್ಡ ಟೈಂಪೀಸ್ ೧ಕ್ಕೆ [illegible], [illegible] ೧ಕ್ಕೆ ೩-೮-೦.

ಖಾಸ— ಎಂ. ಎಸ್. ಸಿದ್ದಪ್ಪ ಕೃಷ್ಣರಾಜಮೊಹಲ್ಲಾ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಸಟೀಕ ಶಿವಶತಕತ್ರಯ.	೧—೦—೦
ಪಂಡಿತಾರಾಧ್ಯ [illegible]	೦—೮—೦
ಶಿವಪೂಜಾವಿಧಿ	೦—[illegible]—೦
[illegible] ಚರಿತ್ರೆ	೦—[illegible]—೦
ಸಟೀಕ ಸಂಧ್ಯಾವ್ರತ	೦—೪—೦
ಸಟೀಕ ವಿವಾಹವಿಧಿ	೦—೩—೦
ವಿವೇಕಮಂಜರಿ [೧ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲ [illegible] ([illegible])	೦—೨—೦
ಗುರುಕಂಠೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

138.

ಬಸವರಾಜವಿಜಯ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಪದ್ಯಗಳನ್ನು ಗದ್ಯರೂಪದಿಂದ ಬಸವಪುರಾಣದ ಕಥೆಗಳೆಲ್ಲಾ ಕನ್ನಡದಲ್ಲಿ [illegible]

ಚೆನ್ನಬಸವೇಶವಿಜಯ— ಬೆಲೆ ೧-೮-೦ ದ್ವಿತೀಯ ಮುದ್ರಣ ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ ಶಿವನ ಪಂಚವಿಂಶತಿಲೀಲೆಗಳು ಅನೇಕ ಶಿವಶರಣರ ಚರಿತ್ರೆಗಳು ಷಟ್ಸ್ಥಲ [illegible] ಕಾಲಜ್ಞಾನ ಮೊದಲಾದ ವಿಷಯಗಳೆಲ್ಲಾ ಇದರಲ್ಲಿ [illegible] ರೂಪದಿಂದ ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ ರಾಜ ಶಿವಯೋಗಗಳು ಬಹು ಸುಲಭವಾಗಿ ಷಟ್ಸ್ಥಲಮಾರ್ಗದಲ್ಲಿ [illegible] ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ [illegible] ಸೋಮನಾಥನ ಚರಿತ್ರವನ್ನು, ಅನೇಕ ಪುರಾಣ [illegible] ದೊಡ್ಡಗ್ರಂಥ

ವೀರಶೈವ ಧರ್ಮಶಿರೋಮಣಿ — ಬೆಲೆ ೧ ೨ ೦ ವೀರಶೈವ [illegible] ಸವ್ಯಾಖ್ಯಾನ [illegible] ಬೆಲೆ ೧ ೮-೦ ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸ್ಥಾಪಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಪಂಚ ಆಚಾರ್ಯರ ಚರಿತ್ರೆ ಸಟೀಕ ೧ ನೆ ಪ್ರಕರಣಕ್ಕೆ ೦-೩ ೦ ೨ ನೆ ಪ್ರಕರಣಕ್ಕೆ ೧ ರೂ ೩ ನೆ ಪಂಚಪ್ರಕರಣ ೧-೩ ೧

ಸೌಂದರಪುರಾಣಂ— ೧-೩-೦, ಸಟೀಕ ತತ್ವಪ್ರಕಾಶಿಕಾ ೬ ಆಣೆ, ಸಟೀಕ ಶತಸೂತ್ರಗಳು ೬ ಆಣೆ ದೇವೀ [illegible] ಗಣ [illegible] ನಾಯಕರ ತೋದಕೆ [illegible] (ಸಟೀಕ) ೬ ಆಣೆ [illegible] ೧೦ ಆಣೆ, ಸುತ್ತಿ ಮುಕ್ತಾವಳಿ ೬ ಆಣೆ, [illegible] ೨ ಆಣೆ ಶಂಕರಲಿಂಗ ಕೆಂಪ ೧ ಆಣೆ

[illegible] ಗ್ರಂಥದ ಶಾಸ್ತ್ರ— [illegible] ವೀರಶೈವ ಗ್ರಂಥಗಳನ್ನು [illegible] ವರ್ಮ ಬಿಂದು ೨-೪-೦

ಸೈ. ೬

ಗುಪ್ತಾ. [illegible]

ಪ್ರಕಟಣೆ.

ರಾಜಧಾನಿಯಲ್ಲಿ ಮುದ್ರಣ ಕೆಲಸವನ್ನು ಬಹು ಅಂದವಾಗಿ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಕ್ರೌನ್ ಪ್ರೆಸ್ಸನ್ನು ನಾವು ಕ್ರಯಕ್ಕೆ ತೆಗೆದುಕೊಂಡಿರುವೆವು. ಇಲ್ಲಿ ಇಂಗ್ಲೀಷು ಮತ್ತು ಕನ್ನಡದ ಭಾಷೆಗಳಲ್ಲಿ ಮುದ್ದಾದ ಅಕ್ಷರಗಳಿಂದ ವಿಜಿಟಿಂಗ್ ಕಾರ್ಡ್, ಲಗ್ನಪತ್ರಿಕೆಗಳು ಪಂಚಾಂಗಗಳು ಮೊದಲಾಗಿ ಪುಸ್ತಕಗಳವರೆಗೆ ಎಲ್ಲಾ ಮುದ್ರಣಕಾರ್ಯವೂ ಬಹು ಅಂದವಾಗಿಯೂ ಕ್ಲುಪ್ತಕಾಲದಲ್ಲೂ ನಾನಾ ಬಣ್ಣಗಳಲ್ಲಿ ಮಾಡಿ ಕೊಡಲ್ಪಡುವುವಲ್ಲದೆ ಎಲ್ಲ ವಿಧವಾದ ಬೈಂಡಿಂಗ್ ಕಾರ್ಯವೂ ಮಾಡಲ್ಪಡುವುದು. ಈಗ ವಿವಾಹ ಲಗ್ನಕಾಲವಾದುದರಿಂದ ಲಗ್ನಪತ್ರಿಕೆಗಳನ್ನು ಕಪ್ಪು ಕೆಂಪು, ಹಸುರು ಮೊದಲಾದ ಬಣ್ಣದಲ್ಲಿಯೂ ಮತ್ತು ಗಿಲೀಟಿನಲ್ಲಿ ಕಾಲಕ್ಕೆ ಸರಿಯಾಗಿ ಮಾಡಿಕೊಡಲೇರ್ಪಡಿಸಿರುತ್ತೇವೆ. ಇಷ್ಟಪಟ್ಟವರು ನಮಗೆ ಬರೆದು ಬೇಕಾದ ವಿಷಯವನ್ನು ತಿಳಿಯಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ
ಕ್ರೌನ್ ಪ್ರೆಸ್, ಮೈಸೂರು.

ಯೋಗ್ಯ ಗೌರವವು.

ಏಪ್ರಿಲ್ ತಿಂಗಳಿನ ಪೂಣೆಯ «ಚಿತ್ರಮಯ ಜಗತ್» ಎಂಬ ಸುಪ್ರಸಿದ್ಧ ಮಾಸಿಕ ಪುಸ್ತಕದಲ್ಲಿ ಧಾರವಾಡದ ವಕೀಲ ಶ್ರೀಯುತ ರಾ. ಬಾ. ಗದಿಗಯ್ಯಾ ಹುಚ್ಚಯ್ಯಾ ಹೊನ್ನಾಪುರ ಮಠ (ಮಾಜಿ ಸೆಕ್ರೆಟರಿ, ಧಾರವಾಡ ಔದ್ಯೋಗಿಕ ಪ್ರದರ್ಶನ) ಇವರ ಭಾವಚಿತ್ರವು ಬಂದಿರುತ್ತಿದ್ದು ಇವರ ಸಂಕ್ಷಿಪ್ತ ಚರಿತ್ರವು ಕೆಳಗೆ ಬರೆದಂತೆ ಎರೆಯಲ್ಪಟ್ಟಿರುತ್ತದೆ —

« ಶ್ರೀಯುತ ಹೊನ್ನಾಪುರಮಠ ಇವರು ಧಾರವಾಡ ರಹಿವಾಸಿಗಳಿದ್ದು ... ಒಬ್ಬ ಪ್ರಮುಖ ವಕೀಲರಿರುತ್ತಾರೆ ಇವರು ಕಳೆದ ... ವರ್ಷಗಳಿಂದ ಮುನಸಿಪಾಲಿಟಿಯ ಮೆಂಬರರಾಗಿರುವರಲ್ಲದೆ ಕೆಲವು ವರ್ಷ ಮ್ಯಾನೇಜಿಂಗ್ ಕಮಿಟಿಯ ಮತ್ತು ಸ್ಕೂಲ್ ಬೋರ್ಡಿನ ಚೇರಮನ್ನರಾಗಿದ್ದರು. ಇವರು ಸ್ಕೂಲ್ ಬೋರ್ಡಿನ ಚೇರಮನ್ನರಿದ್ದಾಗ ಶಾಲೆಗಳಲ್ಲಿಯ ಹುಡುಗರ ಹುಡುಗಿಯರ ಶಿಕ್ಷಣದ ಕಡೆಗೆ ವಿಶೇಷ ಲಕ್ಷವನ್ನು ತೆಗೆದುಕೊಳ್ಳುತ್ತಿದ್ದರು ಇವರ ಕಾಲಕ್ಕೆ ಶಾಲೆಗಳ ಸಂಖ್ಯೆಯು ಬೆಳೆಯಿತು. ಮತ್ತು ಇವರು ಹೊಸ ಟ್ರೇಂಡ್ ಮಾಸ್ತರರನ್ನು ಮಾಸ್ತರಿಣಿಯರನ್ನು ತರಿಸಿ ವಿಶೇಷ ಸುಧಾರಣೆಯನ್ನು ಮಾಡಿದರು « ಲೋಯರ ಕಾಂಡಿಷನನ್ನು » ಮತ್ತು « ಮೆಡಲ್ ವರ್ನ್ಯಾಕ್ಯುಲರ » ಗಳು ಇವರ ಕಾಲಕ್ಕೆ ಮೊದಲಿಗೆ ಪ್ರಚಾರದಲ್ಲಿ ಬಂದವು.

« ಶ್ರೀರಾಮಮಾಹಸೋಪ್ಪಯ್ಯಗಳ ಚರಿತ್ರ, ನೀತಿಮಂಜರಿ, ಬಾಲಭಾರತ ಮೊದಲಾದ ಬಾಲಪುಸ್ತಕ ಪುಸ್ತಕಗಳನ್ನು ಇವರು ಕನ್ನಡ ಭಾಷೆಯಲ್ಲಿ ಬರೆದಿರುವರು. ಇವರು, ಕೆಲವು ವರುಷಗಳ ಹಿಂದೆ ಹೊರಡುತ್ತಿದ್ದ ವಾಗ್ಭೂಷಣ ಎಂಬ ಮಾಸಿಕಪುಸ್ತಕದ ಸಂಪಾದಕರಿದ್ದರು. ಇವರು ಕರ್ನಾಟಕದೊಳಗೆ ಚನ್ನಾಗಿ ನಡಿಸ ಲೇಖಕರಲ್ಲಿ ಒಬ್ಬರಾಗಿರುವರು « ಒಕ್ಕಲಿಗನು » ಎಂಬ ಮಾಸಿಕ ಪುಸ್ತಕದ ಸಂಪಾದಕರಲ್ಲಿ ಇವರೊಬ್ಬರು ಇರುತ್ತಾರೆ. ಹಾಗೂ ಹೊಸದಾಗಿ ಸ್ಥಾಪಿತವಾಗಿರುವ ಧಾರವಾಡ ಸ್ವಾನಿಟರಿ ಅಸೋಸಿಯೇಶನ್ ಸೆಂಟ್ರಲ್ ಕಮಿಟಿಯ ಮೆಂಬರರಾಗಿದ್ದು ಟ್ರಾನ್ಸಲೇಶನ್ ಕಮಿಟಿ (ಭಾಷಾಂತರ ಕಮಿಟಿ) ಯ ಮೆಂಬರರು ಸಹ ಇರುತ್ತಾರೆ ಇದೇ ಪ್ರಕಾರ ಕನ್ನಡ ಭಾಷೆಯ ಅಭಿವೃದ್ಧಿಗೋಸ್ಕರ ಬಹಳ ದಿವಸಗಳಿಂದ ಇರುತ್ತಿರುವ « ಕರ್ನಾಟಕ ವಿದ್ಯಾವರ್ಧಕ ಸಂಘ » ಎಂಬ ಜಾದೆಯಾತ್ರ ಸಂಸ್ಥೆಯ ಮೆಂಬರರಿರುವರು.

« ಇದಲ್ಲದೆ ಇವರು ಸರ್ದಾರ್ ಮೆಂಬರ ... ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ, ... ಲೋಕಲ್ ಫಂಡ್ ಕಮಿಟಿ, ... ಅಸೋಸಿಯೇಶನ್, ಎಂಬ ಸಂಸ್ಥೆಗಳ ಮೆಂಬರರಿರುವರು. ಇವರು ... ಉದಾರಮನಸ್ಸುಳ್ಳವರಿರುತ್ತಾರೆ. ... ಧರ್ಮಗಳ ಮತ್ತು ಜಾತಿಗಳ ಅಭಿಮಾನವನ್ನು ಸಮವಾಗಿ ಹಿಡಿಯುತ್ತಾರೆ. ಸಾರ್ವಜನಿಕ ಕೆಲಸಗಳಲ್ಲಿ ಸ್ವಾರ್ಥತ್ಯಾಗ ಮಾಡುವುದಕ್ಕೆ ಇವರು ಯಾವಾಗಲೂ ಸಿದ್ಧರಿರುವರು.

« ಇವರು ಧಾರವಾಡದಲ್ಲಿ ಈಗಾಗ ಆದ ಔದ್ಯೋಗಿಕ ಪ್ರದರ್ಶನದ ಜಾಯಿಂಟ್ ಸೆಕ್ರೆಟರಿ ಇದ್ದರು. ಪ್ರದರ್ಶನದ ಯಶಸ್ಸು ಇವರ ಮತ್ತು ಮಿ. ... ಅವರ ಶ್ರಮದಿಂದಲೇ ... ರಾ. ಬಾ. ... ಮಿ. ... ಕಾರ್ಯಾಲಯವು ... ಪ್ರದರ್ಶನದ ... ಆಗಿರುತ್ತದೆ.»

ನಾವು ಕರಣೀಕನಾಗಿ ಕಾಣಿಸಿದಂತೆ ಬಿ. ಬಿ. ರಾವರು ನಮ್ಮ ಮಿತ್ರರಿಗೆ ಯೋಗ್ಯಗೌರವ ಮಾಡಿದ್ದನ್ನು ನೋಡಿ ನಾವು ಬಹಳ ಸಂತೋಷಿಸುತ್ತೇವೆ.

ಸಂ. ಬಿ.

ಹೊಸತರದ ನೇಗಿಲುಗಳು ಮತ್ತು ಅವುಗಳ ಹೆಚ್ಚು ಅನುಕೂಲತೆಗಳು

ಈ ವಿಷಯದಲ್ಲಿ ಮೈಸೂರು ವ್ಯವಸಾಯ ಇಲಾಖೆಯವರು ಬರೆದಿರುವ ಲೇಖನದ ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ವಿವರಿಸಿರುತ್ತೆ.

ನಾಡು ನೇಗಲಿನ ಕೆಲಸದ ರೀತಿ — ಇದರಲ್ಲಿ ಮುಖ್ಯವಾಗಿ ಕೆಲಸಮಾಡುವ ಭಾಗವು ಒಂದು ಮರದ ಬಾಳು ಮತ್ತು ಅದಕ್ಕೆ ಜಂಟಿಸಿರುವ ಕಬ್ಬಿಣದ ಗುಳ ಇದರಿಂದ ಉಳುಮೆ ಮಾಡುವುದರಲ್ಲಿ ಮಧ್ಯೆ ದಿಂಡು ನಿಲ್ಲುತ್ತದೆ. ಕೂಲಿ ಆಳುಗಳನ್ನು ಇಟ್ಟು ಕೆಲಸಮಾಡಿಸಿದಾಗ ಹೀಗೆ ದಿಂಡು ನಿಲ್ಲುವುದು ಬಹಳ ಹೆಚ್ಚಾಗಿರುತ್ತೆ. ಸ್ವಂತ ಆರಂಭಮಾಡಿದಾಗಲೂ ಕೂಡ ಕೊಂಚ ಮಟ್ಟಿಗೆ ದಿಂಡು ನಿಲ್ಲದೆ ಇರುವದಿಲ್ಲ ಇದನ್ನು ಕರಗಿಸಬೇಕಾದರೆ ಭೂಮಿಯನ್ನು ಎರಡನೆಯ ಸಲ ಅಡ್ಡಡ್ಡವಾಗಿ ಉಳಬೇಕು. ಇದರಿಂದಲೂ ಕೂಡ ಭೂಮಿಯು ಸಂಪೂರ್ಣವಾಗಿ ಹಸನಾಗುವದಿಲ್ಲ. ಯಾಕೆಂದರೆ, ಚಿಕ್ಕಚಿಕ್ಕ ಚದರಗಳಾಗಿ ದಿಂಡುಗಳು ಮಧ್ಯೆಮಧ್ಯೆ ನಿಲ್ಲುತ್ತವೆ. ಆದ್ದರಿಂದ ಮೂಲೆಯಾಗಿಯೂ ಅಥವಾ ವಕ್ರವಾಗಿ ಗಸಾಗಿ ಮತ್ತೊಂದು ಸಲ ಉಳಬೇಕು. ಇಲ್ಲವಿದ್ದರೆ ಕುಂಟೆ ಹೊಡೆದು ದಿಂಡುಗಳನ್ನು ಕಮ್ಮಿಮಾಡಬೇಕು. ಹೀಗೆ ಮೂರು ನಾಲ್ಕು ಸಲ ಉಳುಮೆ ಮಾಡುವುದರಲ್ಲಿ ಭೂಮಿಯು ಕೂಡಿದಮಟ್ಟಿಗೆ ಹಸನಾಗಿರುತ್ತೆ. ಈ ರೀತಿ ಮಾಡಲು ಹೆಚ್ಚು ಕಾಲವು ಬೇಕಾಗಿರುವದರಿಂದ ರೈತರಿಗೆ ತನ್ನ ಜಮೀನುಗಳನ್ನೆಲ್ಲಾ ಹೀಗೆ ಹಸನು ಮಾಡುವದಕ್ಕಾಗುವದಿಲ್ಲ ಚನ್ನಾಗಿ ಉಳುಮೆ ಮಾಡುವುದಕ್ಕೆ ಸಾಧ್ಯವಾಗದೆ ಇರತಕ್ಕ ಜಮೀನುಗಳಿಗೆ ಕೂಡ ಬಿತ್ತನೆಕಾಲವು ಮೀರಿಹೋಗುತ್ತದೆಂಬ ಭಯದಿಂದ ಬಿತ್ತನೆ ಮಾಡಬೇಕಾಗುತ್ತೆ ಮತ್ತು ಉಳುಮೆ ಆಗದೆ ನಿಂತುಹೋದ ಭೂಮಿಗಳಿಗೆ ಹಿಂಗಾರು ಮಳೆಗಳಲ್ಲಿ ಮೇಲೆ ಮೇಲೆ ಉತ್ತು ಹುರಳಿಯನ್ನು ಚೆಲ್ಲುತ್ತಾರೆ.

ಹೀಗೆ ಹಸನಾಗದೆ ಇರುವ ಜಮೀನುಗಳಲ್ಲಿ ಫಸಲು ಉತ್ಪತ್ತಿಯು ಕಮ್ಮಿಯಾಗುವದು ಸ್ವಭಾವವಾಗಿರುತ್ತೆ. ಈ ಅನನುಕೂಲತೆಗಳನ್ನು ಸೀಮೆ ನೇಗಿಲುಗಳ ಉಪಯೋಗದಿಂದ ಕೂಡಿದಮಟ್ಟಿಗೆ ಹೋಗಲಾಡಿಸಬಹುದು ಈ ಹೊಸ ತರದ ನೇಗಿಲುಗಳನ್ನು ವ್ಯವಸಾಯದ ಇಲಾಖೆಯವರು ವಿಶೇಷವಾಗಿ ವಿಕ್ರಯಿಸುತ್ತಿರುವರು.

ಇದರಿಂದ ಉಂಟಾಗತಕ್ಕ ಹೆಚ್ಚು ಅನುಕೂಲತೆಗಳು — ಇದರಿಂದ ಉತ್ತ ಸಾಲುಗಳು ಸಮಕೋಣಾಕಾರವುಳ್ಳದ್ದಾಗಿ ರುವುದಲ್ಲದೆ ಸಡಲಿಸಲ್ಪಟ್ಟ ಮಣ್ಣು ಹಂಟೆಯು ತಿರುಗಿಸಲ್ಪಡುವುದು ಉತ್ತಾಕೊಂಡು ಹೋದಹಾಗೆಲ್ಲಾ ಮಣ್ಣು ಸಡಲಿಸಲ್ಪಟ್ಟ ಪಕ್ಕದ ಸಾಲಿನಲ್ಲಿ ಮೇಲಕ್ಕೆ ಮಗುಚಿ ಹಾಕಲ್ಪಡುತ್ತೆ ಆದ್ದರಿಂದ ಸಡಿಲೆಯಿಂದ ಆಗಿದ್ದಾಗ ಭೂಮಿಯು ಹಸನಾಗುತ್ತೆ ನಾಡು ನೇಗಿಲುಗಳಲ್ಲಿ ಇಷ್ಟು ಕೆಲಸ ನಡೆಸಬೇಕಾದರೆ ೩-೪ ಸಾರಿ ಉಳಬೇಕು ನಾಡು ನೇಗಿಲಿನಲ್ಲಿ ಉಳುವುದಕ್ಕೆ ಎಷ್ಟು ಕಾಲ ಹಿಡಿಯುತ್ತಿತ್ತೋ ಅದರಲ್ಲಿ ನಾಲ್ಕರಲ್ಲಿ ಒಂದು ಭಾಗದಲ್ಲಿ ಭೂಮಿಯೆಲ್ಲವನ್ನೂ ಉಳಬಹುದು ಹೀಗೆ ಭೂಮಿಯನ್ನು ಹಸನುಮಾಡಿ ಬೀಜವನ್ನು ಸಕಾಲದಲ್ಲಿ ಹಾಕಬಹುದು. ಇದೂ ಅಲ್ಲದೆ ನಾಡು ನೇಗಿಲಿನಿಂದ ಉಳುತ್ತಿದ್ದುದಕ್ಕೆ ಮೂರರಷ್ಟು ಭೂಮಿಯನ್ನು ಸುಲಭವಾಗಿ ಹಸನಾಗುವಹಾಗೆ ಮಾಡಬಹುದು. ಮತ್ತು ಭೂಮಿಯನ್ನು ಈ ನೇಗಲಿನಿಂದ ಆಳವಾಗಿ ಉಳಬಹುದು ಹೆಚ್ಚು ಆಳವಾಗಿ ಉತ್ತಹಾಗೆಲ್ಲಾ ಫಸಲು ಉತ್ಪತ್ತಿ ಹೆಚ್ಚುವದು ಸಾಧಾರಣವಾಗಿ ರೈತರು ತೋಟಗಳನ್ನು ಉಳುಮೆಮಾಡದೆ ಅಗತೆ ಮಾಡುತ್ತಾರೆ ಮಿಕ್ಕ ಭೂಮಿಗಳನ್ನು ಹೀಗೆ ಅಗತೆ ಮಾಡುವದು ಒಳ್ಳೆಯದು ಆದರೆ ಇದು ಸಾಧ್ಯವಲ್ಲ. ಆದ್ದರಿಂದ ಕೂಡಿದಮಟ್ಟಿಗೆ ಆಳವಾಗಿ ಉಳುಮೆಮಾಡುವುದು ಒಳ್ಳೆಯದು. ಇದು ಸೀಮೆ ನೇಗಿಲಿನ ಉಪಯೋಗದಿಂದ ಸುಲಭವಾಗಿ ಆಗುತ್ತೆ.

ಆಳವಾಗಿ ಉಳುವುದರಿಂದ ಭೂಮಿಯು ಮಳೆಯ ನೀರನ್ನು ಹೆಚ್ಚಾಗಿ ಹೀರುವುದು. ಹೀಗೆ ಹೀರಿ ಕೂಡಿಟ್ಟ ನೀರು ಹಿಂದೆ ಒಂದೆರಡು ಮಳೆಗಳು ಬಾರದಿದ್ದರೂ ಪೈರಿಗೆ ಒದಗಿ ಬಹಳ ಉಪಯೋಗವಾಗುತ್ತೆ ... ಕ್ರಮದಲ್ಲಿ ಕಳೆದ ವರುಷ ... ಮಾಡಿದ್ದರಲ್ಲಿ ನಾಡು ನೇಗಿಲಿನಿಂದ ಉಳುಮೆಮಾಡಿ ಬಿತ್ತನೆ ಹಾಕಿದ್ದ ಸುತ್ತಮುತ್ತ ಪ್ರದೇಶಗಳಲ್ಲಿನ ಪೈರು ಒಣಗಿದರೂ, ಈ ಕ್ಷೇತ್ರದ ಪೈರುಗಳು ಮಾತ್ರ ಒಣಗದೆ ಇದ್ದವು

ಸೀಮೆ ನೇಗಿಲು ಉತ್ತ ಮಣ್ಣನ್ನು ಚನ್ನಾಗಿ ಮಗುಚಿ ಹಾಕುವುದು ಇದು ನಾಡು ನೇಗಿಲಿನಿಂದ ಆಗುವದಿಲ್ಲ. ಆದ್ದರಿಂದ ಹೀಗೆ ಉಳಬಹುದ ಭೂಮಿಯಲ್ಲಿರುವ ಕಳೆಗಳ ಬೇರುಗಳು ... ಬಿಸಿಲಿಗೆ ಒಳಗೆ ಆಗಿ

ರುವ ಹುಳ ಹೊಟ್ಟೆ ಮುಂತಾದವುಗಳು ಹೊರಕ್ಕೆ ಬಂದು ಪಕ್ಷಿಗಳಿಂದ ನಾಶಹೊಂದುವವು ಮಣ್ಣೆಲ್ಲಾ ಬಿಸಿಲು ಗಾಳಿಯಿಂದ ಹಸನು ಮಾಡಲ್ಪಡುವದು.

ಮೇಲೆ ಕಂಡ ಕಾರಣಗಳಿಗೆ ಸೀಮೆ ನೇಗಲಿನಿಂದ ಉಳುಮೆ ಮಾಡುವದು ಲಾಭಕರ. ಆದುದರಿಂದ ಈ ಹೊಸ ತರದ ನೇಗಿಲುಗಳನ್ನು ಪ್ರಚುರಪಡಿಸತಕ್ಕದ್ದು ಅವಶ್ಯಕವಾಗಿದೆ.

ಕೆಲವು ಸೀಮೆಯ ನೇಗಿಲುಗಳು ನಮ್ಮ ಎತ್ತುಗಳಿಗೆ ಬಹಳ ಭಾರವೆಂದು ಹೇಳುವರು ಹೀಗಿರುವದು ಸೀಮೆಯ ನೇಗಿಲುಗಳಲ್ಲಿ ಮಾತ್ರವೇ ಅಲ್ಲ ನಾಡು ನೇಗಿಲುಗಳಲ್ಲಿಯೂ ಉಂಟು. ಬತ್ತವನ್ನು ಬೆಳೆಯತಕ್ಕ ಜಮೀನುಗಳನ್ನು ಚಿಕ್ಕ ಚಿಕ್ಕ ಹಗುರವಾದ ನೇಗಿಲುಗಳಿಂದ ಉಳುಮೆ ಮಾಡುತ್ತಾರೆ. ಕಪ್ಪು ಜಮೀನುಗಳನ್ನು ಸ್ವಲ್ಪ ಭಾರದ ನೇಗಿಲುಗಳಿಂದಲೂ ಎರೆ ಜಮೀನುಗಳನ್ನು ಇನ್ನೂ ಹೆಚ್ಚು ಭಾರದ ನೇಗಿಲುಗಳಿಂದಲೂ ಉಳುಮೆಮಾಡುತ್ತಾರೆ ಮತ್ತು ಗರಿಕೆಗಳನ್ನು ಹೋಗಲಾಡಿಸುವುದಕ್ಕೆ ಎರೆ ಜಮೀನುಗಳಲ್ಲಿ ೮-೩ ಜೊತೆ ಎತ್ತುಗಳನ್ನು ಕಟ್ಟಿ ಕೆಲಸಮಾಡುವ ಭಾರಿ ನೇಗಿಲುಗಳೂ ಇವೆ ಹೀಗೆಯೇ ಸೀಮೆ ನೇಗಿಲುಗಳಲ್ಲಿಯೂ ಅನೇಕ ತರಹೆಗಳುಂಟು, ಯಾವ ಕೆಲಸಕ್ಕೆ ನಿಮಗೆ ಬೇಕಾಗಿರುತ್ತೋ ಆ ಕೆಲಸಕ್ಕೆ ಸರಿಯಾಗಿ ನೇಗಿಲುಗಳು ಇವೆ ಬತ್ತದ ಭೂಮಿಗಳಿಗೆ ಹಗುರವಾದ ನೇಗಿಲುಗಳು ಸಾಕು ಕಪ್ಪು ಭೂಮಿಗಳಿಗೆ ಕೊಂಚ ಭಾರವಾದ ನೇಗಿಲುಗಳು ಅವಶ್ಯಕ. ಇದಕ್ಕೆ ಕೋಲಾರದ ಮಿಸ್ಟನ್ ನೇಗಿಲುಗಳು ಸರಿಹೋಗುವವು. ಇವುಗಳನ್ನು ರೈತರು ವಿಶೇಷವಾಗಿ ಅಪೇಕ್ಷಿಸುತ್ತಾರೆ. ಎರೆ ಜಮೀನುಗಳ ಉಳತಕ್ಕ ಭಾರಿ ನೇಗಿಲುಗಳೂ ಸಹ ವ್ಯವಸಾಯದ ಇಲಾಖೆಯವರಲ್ಲಿ ಸಿಕ್ಕುತ್ತವೆ

ಸೀಮೆ ನೇಗಲಿನಲ್ಲಿ ಸವೆಯಬಹುದಾದ ಭಾಗಗಳು ಚನ್ನಾಗಿ ಹದಮಾಡಿದ ಉಕ್ಕಿನಿಂದ ಮಾಡಿಸಲ್ಪಟ್ಟಿವೆ. ... ದಿಂದ ಇವುಗಳು ಬಹಳ ದಿವಸಗಳು ಬಾಳಿಕೆ ಬರುವುದು ಉಳುಮೆ ಮಾಡುವಾಗ ಮಣ್ಣು ನೇಗಲಿಗೆ ಹತ್ತಿಕೊಳ್ಳದೆ ಚನ್ನಾಗಿ ಮಗುಚಿ ಹಾಕಲ್ಪಡುತ್ತದೆ. ಈ ನೇಗಲಿನಿಂದ ಸಾಧಾರಣವಾಗಿ ೮ ಅಂಗುಲ ಆಳ ಉಳಬಹುದು. ಕೆಲವೇಳೆ ೫ ಅಂಗುಲವೂ ಉಳಬಹುದು ಆದ್ದರಿಂದ ಉಳುಮೆ ಮಾಡಿದ ಸಾಲುಗಳು ೫ ರಿಂದ ೭ ಅಂಗುಲಗಳಷ್ಟು ಅಗಲವಾಗಿರುವವು

ಇದೂ ಅಲ್ಲದೆ ಈ ನೇಗಿಲುಗಳ ರಚನೆಯು ಸುಲಭವಾಗಿಯೇ ಇದೆ ಇವರ ಭಾಗ ಮರದಿಂದ ಮಾಡಿರುವದರಿಂದ ಅಕಸ್ಮಾತ್ತಾಗಿ ಮುರಿದರೂ ಹಳ್ಳಿಯ ಬಡಗಿಯು ಸುಲಭವಾಗಿ ರಿಪೇರಿಮಾಡಲು ಸಾಧ್ಯ ... ಉಪಯೋಗದಿಂದ ಸವೆದು ಹೋಗುವವುಗಳನ್ನು ಆಗಾಗ್ಗೆ ಬದಲಾಯಿಸಬೇಕು ನೇಗಿಲನ್ನು ಕೊಂಡುಕೊಳ್ಳುವವರೆಲ್ಲರೂ ಒಂದೆರಡು ಗುಳಗಳನ್ನು ಹೆಚ್ಚಾಗಿ ಕೊಂಡುಕೊಳ್ಳುವದು ಒಳ್ಳೆಯದು ಈ ಗುಳಗಳನ್ನು ನೇಗಲಿಗೆ ಹಾಕುವದು ಸುಲಭ ಸವೆದುಹೋದ ಗುಳವನ್ನು ನೇಗಲಿಗೆ ತೊಡಿಸಿರುವ ತಿರುಪು ಸಡಲಿಸಿ ತೆಗೆದು ಹೊಸಗುಳವನ್ನು ಸುಲಭವಾಗಿ ಹಾಕಬಹುದು.

ರೀಪೆಗೆ ಗುಳಗಳ ಮೊನೆಯನ್ನು ಮಾತ್ರ ಬೇರೆ ತೆಗೆದು ಹಾಕುವ ಹಾಗೆ ಮಾಡಿರುತ್ತಾರೆ ಒಂದು ಮೊನೆಯು ಸವೆದುಹೋದರೆ ಬೇರೊಂದುಮೊನೆಯನ್ನು ಸುಲಭವಾಗಿ ಹಾಕಬಹುದು ಈ ಮೊನೆಗಳಿಗೆ ಒಂದೊಂದಕ್ಕೆ ಸುಮಾರು ೩ ಆಣೆಗಳಾಗುವವು.

ನೇಗಿಲೆಲ್ಲವೂ ಸೇರಿ ಒಬ್ಬ ರೈತನು ಹೆಗಲಿನಮೇಲೆ ಹೊತ್ತುಕೊಂಡು ಹೋಗುವಷ್ಟು ಹಗುರವಾಗಿ ಇರುವದು. ನಾಡು ನೇಗಲಿಗೆ ಇರುವಂತೆ ಇದಕ್ಕೆ ಒಂದೇ ಹಿಡಿಯಲ್ಲ ಎರಡು ಹಿಡಿಗಳು ಇರುತ್ತೆ ಇದರಲ್ಲಿ ಕೆಲಸಮಾಡುವುದರಲ್ಲಿ ಆಯಾಸಕರವೆಂದು ಹೇಳುತ್ತಾರೆ ಉಳುಮೆ ಮಾಡುವವರಲ್ಲಿ ಕೆಳಗೆ ಹೇಳುವ ಸಂಗತಿಗಳು ಉಪಯೋಗವಾಗುತ್ತವೆ.

« ಉಳಬೇಕಾದ ಜಮೀನೆಲ್ಲಾ ಎಷ್ಟೆಷ್ಟು ಅಗಲವಾದರೆ ಅನುಕೂಲವೋ ಆ ರೀತಿ ವಿಂಗಡಿಸಿಕೊಂಡರೆ ಉಳುಮೆ ಕೆಲಸವನ್ನು ಎರಡು ವಿಧವಾಗಿ ಮಾಡಬಹುದು ನೇಗಿಲನ್ನು ಬಲಸುತ್ತಾಗಲಿ ಎಡಸುತ್ತಾಗಲಿ ತಿರುಗಿಸಿಕೊಂಡು ಅನುಕೂಲವಿದ್ದಂತೆ ಜಮೀನನ್ನು ಎರಡು ವಿಧವಾಗಿ ಉಳಬಹುದು. ತುಂಡಿನ ಮಧ್ಯದಲ್ಲಿ ಒಂದು ಸಾಲನ್ನು ಸೀಳಲು ಹೊಡೆದುಕೊಂಡು ಎತ್ತುಗಳನ್ನು ಯಾವಾಗಲೂ ಬಲಕ್ಕೇ ತಿರುಗಿಸುತ್ತಾ ಮೊದಲನೇ ಸಾಲನ್ನು ಸುತ್ತಿಕೊಂಡು ಉಳುತ್ತಾ ಹೋಗುವದೊಂದು ವಿಧ. ತುಂಡನ್ನೆಲ್ಲಾ ಈ ರೀತಿಯಾಗಿ ಉತ್ತನಂತರ ತುಂಡಿನ ಮಧ್ಯದಲ್ಲಿ ಒಂದು ದಿಬ್ಬವೂ ಆಚೀಚೆ ತಿರುಗಳಲ್ಲಿ ಸಾಲುತೆಗೆದ ಹಳ್ಳಗಳೂ ಇರುವವು. ಎತ್ತುಗಳನ್ನು ಎಡಸುತ್ತು ತಿರುಗಿಸಿಕೊಂಡು ಉಳಬೇಕಾದರೆ ತುಂಡಿನ ಮಧ್ಯದಲ್ಲಿ ಮೊದಲನೇ ಸಾಲು ಹೊಡೆ ... ೨ನೆ ಒಂದು ಕೊನೆಯಲ್ಲಿ ಉಳ್ಳ ... ಭನ್ನು ಹೊಡೆದು ಎತ್ತು ...

...ಎಡಕ್ಕೆ ತಿರುಗಿಸಿಕೊಂಡು ಇನ್ನೊಂದು ಕೊನೆಯವರೆಗೆ ಬಂದು ಆ ಕೊನೆಯಲ್ಲಿ ಒಂದು ಸಾಲನ್ನು ಹೊಡೆದು ...ಗ ಮೊದಲು ಹೊಡೆದ ಸಾಲಿನ ಪಕ್ಕಕ್ಕೆ ಬಂದು ಇನ್ನೊಂದು ಸಾಲನ್ನು ಹೊಡೆಯಬೇಕು. ಹೀಗೆಯೇ ಸಾಲಿ... ರಕ್ಕದಲ್ಲಿ ಸಾಲನ್ನು ಹೊಡೆಯುತ್ತಾ ಹೋದರೆ ತಾಟಿನ ಮಧ್ಯಕ್ಕೆ ಸರಿಯಾಗಿ ಕೊನೆಯ ಸಾಲು ಬರುವುದು.

ಈ ರೀತಿಯಾಗಿ ನೇಗಿಲನ್ನು ಎಡಕ್ಕೆ ತಿರುಗಿಸಿಕೊಂಡು ...ಕ್ಕೆಯನ್ನು ಹೊಡೆದಾಗ ತಾಟಿನ ಮಧ್ಯದಲ್ಲಿ ಬಂದುಸಾ... ಕೊನೆಗಳಲ್ಲಿ ಎರಡು ದಿಬ್ಬಗಳೂ ಬಾಣಾವುವು. ನೇಗಿಲಿನಿಂದಾಗುವ ಸಾಲಿನ ಹಳ್ಳಗಳನ್ನೂ ದಿಬ್ಬಗಳನ್ನೂ ಜಮೀನಿನಲ್ಲಿ ಬಾಯಂ ಆಗ ನಿಲ್ಲದಿರಬೇಕಾದ ಜಮೀನನ್ನು ಒಂದು ವರುಷ ಬಲಗೈಬಾರಿಯಾಗಿ ಉಳಬೇಕು. ಎರಡನೇ ವರುಷ ಎಡಗೈಬಾರಿಯಾಗಿ ಉಳಬೇಕು" ಕೆ. ಗ.

ಭಯಂಕರವಾದ ಹಡಗಿನ ಸುಳಿಗೆ.

(೨೨೦ ಮಂದಿಗಳ ನಾಶ.)

ಕಳೆದ ಏಪ್ರಿಲ್ ತಾ|| ೨೭ ರಲ್ಲಿ ಚೀನಾದೇಶದವರ ಒಂದು ಹಡಗಿನಲ್ಲಿ ನಡೆದ ಸುಳಿಗೆಗಳ್ಳರ ಅಪಾಂತರವು ಅಭೂತಪೂರ್ವವೆಂದು ತಿಳಿಯಲ್ಪಟ್ಟಿದೆ. ಹಾಂಗ್ ಕಾಂಗಿನ ಉತ್ತರದಲ್ಲಿ ತ್ಯೆಯಾನ್ ಎಂಬ ಹಡಗು ಪದ್ಧತಿಯಂತೆ ಸಾಮಾನುಗಳನ್ನೂ ೩೩೨ ಮಂದಿ ಪ್ರಯಾಣಿಕರನ್ನೂ ಏರಿಸಿಕೊಂಡು ಹೋಗುತ್ತಿದ್ದಿತು. ಅದರಲ್ಲಿ ಆ ಹಡಗಿನ ಕಂಪೆನಿಯ ... ಯಜಮಾನನೂ ಮುಖ್ಯರಾದ ಇಂಜನಿಯರುಗಳೂ ಕೂಡ ಇದ್ದರು. ಅದು ಸಾಯಂಕಾಲ ರಾತ್ರಿ ೭ ಗಂಟೆಗೆ ಹೊರಟಿತು. ರಾತ್ರಿ ೧೧ ಗಂಟೆಯು ಹೊಡೆದ ಕೂಡಲೇ ಒಳಗಿದ್ದ ಪ್ರಯಾಣಿಕರ ಮಧ್ಯದಿಂದ ಕೆಲವರು ಎದ್ದರು. ಅವರೆಲ್ಲಾ ಆಯುಧಪಾಣಿಗಳಾಗಿದ್ದರು. ಅವರನ್ನು ಕಂಡಕೂಡಲೆ ಪ್ರಯಾಣಿಕರು ಸಂಖ್ಯೆಯಲ್ಲಿ ಹೆಚ್ಚಾಗಿದ್ದರೂ ನಿರಾಯುಧರಾಗಿದ್ದುದರಿಂದ ಕಳ್ಳರಿಗೆ ಹೆದರಿ ಬಸವಳಿದುಹೋದರು. ಅಷ್ಟರಲ್ಲಿ ಹಡಗನ್ನು ನಡೆಯಿಸುವವರಿಗೆ ತಮ್ಮ ಬಳಿಯಲ್ಲೇ ಕಳ್ಳರು ಬಂದಿರುವರೆಂಬ ಸಂಶಯವುಂಟಾಯಿತು. ಆಗ ಹಡಗನ್ನು ನಡೆಯಿಸುತ್ತಿದ್ದವನು ಕೈಗೆ ಒಂದು ತುಪಾಕಿಯನ್ನು ತೆಗೆದುಕೊಂಡು ಹಡಗಿನ ಮೇಲ್ಭಾಗಕ್ಕೆ ಬಂದುನಿಂತನು. ಅಷ್ಟರಲ್ಲಿ ಕಳ್ಳರಲ್ಲೊಬ್ಬನು ಮೇಲಕ್ಕೆ ಹತ್ತಿಬರುತ್ತಿದ್ದನು. ಅವನ ಮೇಲೆ ಹಡಗಿನವನು ತುಪಾಕಿಯನ್ನು ಹಾರಿಸಲು ಅವನ ಹೊಟ್ಟೆಗೆ ಗುಂಡು ನುಗ್ಗಿ ಅವನು ಅಲ್ಲೇ ಸತ್ತುಬಿದ್ದನು. ಅಷ್ಟರಲ್ಲಿ ಇಬ್ಬರು ಯುರೋಪ್ಯರೂ ಇಬ್ಬರು ಪೋರ್ಚುಗಲ್ ಸ್ಟುವರ್ಡರೂ ಸಹ ಹಡಗನ್ನು ನಡೆಯಿಸುವವನ ಸಹಾಯಕ್ಕೆ ಹೋದರು. ಕಳ್ಳರು ಗುಂಪುಕೂಡಿ ಅವರಮೇಲೆ ಬಿದ್ದರು. ಎರಡು ಪಕ್ಷದವರಿಗೂ ಸ್ವಲ್ಪಹೊತ್ತು ದೊಡ್ಡ ಕಾಳಗವಾಯಿತು. ಕಳ್ಳರು ಪರಾಜಿತರಾದರು. ಹಡಗು ಕಳ್ಳರ ವಶವಾಗಲವಕಾಶವಿಲ್ಲದೆಹೋಯಿತು. ಅಷ್ಟರಲ್ಲಿ ಒಬ್ಬ ಕಳ್ಳನು ಹೇಗೋ ನುಸುಳಿಕೊಂಡು ಮೇಲಕ್ಕೆ ಹತ್ತಿ ಅಲ್ಲಿದ್ದ ಚೀಫ್ ಇಂಜನಿಯರ ಕತ್ತನ್ನು ಹಿಸುಕುತ್ತಿರಲು, ಕ್ಯಾಪ್ಟನ್ನು ತುಪಾಕಿಯಿಂದ ಆ ಕಳ್ಳನನ್ನು ಹೊಡೆದು ಸಾಯಿಸಿದನು. ಉಳಿದ ಕಳ್ಳರು ಮೇಲಕ್ಕೇರುವ ವಿಷಯದಲ್ಲಿ ನಿರಾಶೆಗೊಂಡು ಹಡಗಿನ ಕೆಳಅಂತಸ್ತಿಗೆ ನುಗ್ಗಿ ನಡೆಯುವ ಯಂತ್ರಗಳನ್ನು ಸ್ವಾಧೀನಪಡಿಸಿಕೊಂಡರು. ದೀಪದ ತಂತಿಗಳನ್ನು ಕಿತ್ತು ಹಡಗನ್ನೆಲ್ಲಾ ಕತ್ತಲೆಗವಿಸಿದರು. ಹಡಗನ್ನು ನಿಲ್ಲಿಸಿಬಿಟ್ಟರು. ಇದರಿಂದ ಹಡಗನ್ನು ನಡೆಯಿಸುವ ಜನರು ಬೆದರಿ ನಿಶ್ಚೇಷ್ಟಿತರಾದರು. ಏತತ್ತು, ಹಡಗು ಕಳ್ಳರ ವಶವಾಯಿತೆಂದೂ ಒಳಗಿನ ಸಾಮಾನನ್ನೆಲ್ಲಾ ಅವರು ದೋಚಿಕೊಂಡು ದೋಣಿಗಳಮೇಲೆ ಸಾಗಿಸಿಕೊಂಡು ಹೋಗಬಹುದೆಂದೂ ಯೋಚಿಸಿದರು. ಆದರಿಂದ ಮುಂದಿನ ಯೋಚನೆಯಲ್ಲಿ ತೊಡಗಿ ಯಾನಪಾತ್ರದವರೂ ಸಹಾಯಕ್ಕೆ ಬರಬೇಕೆಂಬ ಆಸೆಯಿಂದ ಆಪತ್ಕಾಲದಲ್ಲಿ ಅಂತರಿಕ್ಷಕ್ಕೆ ಹಾರಿಸುವ ಮದ್ದುಗಳನ್ನು ಹಾರಿಸಿದರು. ಇದನ್ನು ಕಳ್ಳರು ಕಂಡು ರೇಗಿ, ತಮ್ಮ ನಾಶವನ್ನೂ ಕೂಡ ಲಕ್ಷಿಸದೆ ಹಡಗನ್ನೇ ಹಾಳ್ಮಾಡುವುದಕ್ಕೆ ಸಿದ್ಧರಾದರು. ಒಳಗೆ ತುಂಬಿದ್ದ ಸಾಮಾನುಗಳಲ್ಲಿದ್ದ ಸೀಮೆಯೆಣ್ಣೆಯ ಡಬ್ಬಗಳನ್ನೊಡೆದು ಉಳಿದ ಸಾಮಾನುಗಳಮೇಲೆಲ್ಲಾ ಎಣ್ಣೆಯನ್ನು ಸುರಿದು ಹಡಗಿನ ಮುಂಗಡೆಯೂ ಹಿಂಗಡೆಯೂ ಬೆಂಕಿಯನ್ನು ಹೊತ್ತಿಸಿದರು. ಕೂಡಲೇ ಬೆಂಕಿಯ ಜ್ವಾಲೆಯು ಎಲ್ಲಕಡೆಗೂ ಪ್ರಸರಿಸಿ ಹಡಗಿನಲ್ಲಿದ್ದವರೆಲ್ಲರೂ ಅಗ್ನಿಗಾಹುತಿಯಾಗುವ ಹೊತ್ತು ಬಂದಿತು. ಆಪತ್ಕಾಲದಲ್ಲಿ ಉಪಯೋಗಕ್ಕಾಗಿ ಹಡಗಿನಲ್ಲಿ ಇಟ್ಟಿರುವ ಸಣ್ಣ ದೋಣಿಗಳು ಕೂಡ ಸುಟ್ಟುಹೋದುವು. ಅನೇಕಮಂದಿ ಪ್ರಯಾಣಿಕರೂ ಹಡಗಿನ ಉದ್ಯೋಗಿಗಳೂ ಕೂಡ ಬೆಂಕಿಯ ಉರಿಯನ್ನು ತಾಳಲಾರದೆ ನೀರಿಗೆ ಧುಮುಕಿ ಒದ್ದಾಡುತ್ತಿದ್ದರು. ಕೆಲವರು ಹಡಗಿನ ಪಕ್ಕದ ತಗಡುಗಳನ್ನು ಹಿಡಿದುಕೊಂಡು ನೇತಾಡುತ್ತಿದ್ದರು. ಎಷ್ಟೋ ಜನರಿಗೆ ಸ್ವಲ್ಪಹೊತ್ತಿನೊಳಗಾಗಿ ಸಮಾಧಿಯೇ ಆಗಿಹೋಯಿತು ...ಡುಗಳ ಹೊತ್ತಿನಲ್ಲಿ ಆ ಮಾರ...

...ದಲ್ಲಿ ಹೋಗುತ್ತಿದ್ದ ಷಾನ್ಲಿ ಎಂಬ ಹಡಗಿನವರಿಗೆ ತ್ಯೆಯಾನ್ ಹಡಗಿನಿಂದ ಆಕಾಶದಲ್ಲಿ ಹಾರುತ್ತಿದ್ದ ಮದ್ದುಗಳೂ ತುಪಾಕಿಯ ಶಬ್ದವೂ ಗೋಚರಿಸಲು, ಅವರೂ ತಮ್ಮ ಹಡಗನ್ನು ತ್ಯೆಯಾನು ನಿಂತಿದ್ದ ಬಳಿಗೆ ನಡೆಯಿಸಿಕೊಂಡು ಬಂದರು. ತಮ್ಮ ಬಳಿಯಲ್ಲಿದ್ದ ಸಣ್ಣ ದೋಣಿಗಳನ್ನು ತ್ಯೆಯಾನಿನ ಬಳಿಗೆ ಸಾಗಿಸಿ ಕುಶಲರಾಗಿಯೂ ನೀರಿನಲ್ಲಿ ತೇಲುತ್ತಲೂ ಇದ್ದ ಜನರನ್ನು ರಕ್ಷಿಸುವುದರಲ್ಲಿ ಬೆಳಗಿನವರೆಗೂ ತತ್ಪರರಾಗಿದ್ದರು. ಇನ್ನೂ ಮೂರು ಹಡಗಿನವರು ಹಾಗೆಯೇ ಬಂದು ದೋಣಿಗಳ ಸಹಾಯವನ್ನು ಮಾಡಿದರು. ಆಗ ತ್ಯೆಯಾನಿನಲ್ಲಿ ಅಗ್ನಿಜ್ವಾಲೆಯಿಂದ ಜನರು ಪಡುತ್ತಿದ್ದ ಸಂಕಟಗಳನ್ನೂ ನಾಲ್ಕುದಿಕ್ಕಿನಲ್ಲೂ ಪ್ರತಿಧ್ವನಿ ಕೊಡುವಂತೆ ಮಾಡುತ್ತಿದ್ದ ರೋದನಧ್ವನಿಯನ್ನೂ ನೋಡಿ ಕೇಳಿದವರು ಅಂಥ ಭಯಂಕರವಾದ ದೃಶ್ಯವನ್ನು ತಾವು ಎಂದಿಗೂ ಮರೆಯುವ ಹಾಗಿಲ್ಲವೆಂದು ಹೇಳುತ್ತಿರುವರು. ಇನ್ನು ಹಡಗು ಉಳಿಯುವ ಹಾಗಿಲ್ಲವೆಂದು ತೋರುವ ಕೊನೆಯ ಕ್ಷಣದವರೆಗೂ ಹಡಗಿನ ಕ್ಯಾಪ್ಟನನ್ನೂ ಚೀಫ್ ಇಂಜನಿಯರನೂ ಅಲ್ಲೇ ಇದ್ದು ಕಡೆಗೆ ನೀರಿಗೆ ದುಮುಕಿ ಈಜಿಕೊಂಡು ದೋಣಿಯನ್ನು ಸೇರಿದರು. ಆದರೆ ಹಡಗಿನ ಮುಖ್ಯೋದ್ಯೋಗಿಯು ಮಾತ್ರ ಏನಾದನೋ ತಿಳಿಯಲಿಲ್ಲ. [illegible]ಗಿದ್ದ ೧೬೦ ಮಂದಿಗಳನ್ನು ಷಾನ್ಲಿ ಹಡಗು ಮಂಗಳವಾರ ಬೆಳಗ್ಗೆ ಹಾಂಕಾಂಗಿಗೆ ತಂದಿತು. ಹೋನಾಂಗ್ ಎಂಬ ಹಡಗು ೮೦ ಮಂದಿಯನ್ನು ರಕ್ಷಿಸಿ ತಂದಿತು. ಇಂತೂ ೨೨೦ ಮಂದಿಗಳು ಕಾಣದಾದರೆಂದು ಸಿದ್ಧವಾಯಿತು. ಉಳಿದು ಬಂದವರಲ್ಲಿ ಕೆಲ ಕಳ್ಳರೂ ಇರುವರೆಂಬ ಸಂಶಯವಿದೆ. ತ್ಯೆಯಾನಿಗೆ ಕಳೆದವರ್ಷ ಇದೇ ಕಾಲದಲ್ಲಿ ಅದೇ ಸ್ಥಳದಲ್ಲಿ ಕಳ್ಳರು ಬಿದ್ದಿದ್ದರಂತೆ. ಆದರೆ ಅನರ್ಥವೇನೂ ಆಗಲಿಲ್ಲ. ಒಂದು ತಿಂಗಳ ಕೆಳಗೆ ಇದೇ ಸ್ಥಳದಲ್ಲಿ ಸಮುದ್ರದ ಕಳ್ಳರು ಮತ್ತೊಂದು ಹಡಗನ್ನು ತಡೆದು ನಿಲ್ಲಿಸಿದ್ದರಂತೆ. ಈ ತ್ಯೆಯಾನ್ ಎಂಬ ಹಡಗು ೬೩೭ ಟನ್ನುಗಳ ಭಾರವನ್ನು ಹೊರಬಲ್ಲುದಾಗಿದ್ದಿತು. ಇದು ... ನಾವಿಕಾಸಂಘದವರದು, ಇದರಮೇಲೆ ಆಂಗ್ಲರ ಧ್ವಜವಿದ್ದಿತು.

ಮತ್ತೊಂದು ಹಡಗಿನ ಮಹಾವಿಪತ್ತು.

(೧೮೭ ಮಂದಿಗಳ ನಾಶ)

[illegible] ಅಮೇರಿಕಾಕ್ಕೆ ಹೋಗುತ್ತಿದ್ದ ಟಿಟಾನಿಕ್ ಎಂಬ ಹಡಗು ಮುಳುಗಿಹೋದಂದಿನಿಂದೀಚೆಗೆ ಅದಕ್ಕೆ ಎರಡನೆಯ ತರದ ಮಹಾವಿಪತ್ತೊಂದು ಅಮೇರಿಕಾ ಖಂಡದ ಪೆಸಿಫಿಕ್ ಮಹಾಸಾಗರದಲ್ಲಿ ಕಳೆದಿಂಗಳ ಕೊನೆಯೊಳಗೆ ಸಂಭವಿಸಿ, ಅದರಿಂದ ೧೮೭ ಜನಗಳು ಮೃತರಾದರೆಂಬ ಭಯಂಕರವಾದ ಸುದ್ದಿಯು ಬಂದಿರುತ್ತದೆ. ಅದರ ವಿವರವೇನೆಂದರೆ—ಕೆನಡಾ ಪ್ರಾಂತ್ಯದಲ್ಲಿರುವ ಪೆಸಿಫಿಕ್ ನಾವಿಕಾಸಂಘದವರಿಗೆ ಸೇರಿದ "ಎಂಪ್ರೆಸ್ ಆಫ್ ಐರ್ಲೆಂಡ್" ಎಂಬ ಹಡಗು ಬಹುಮಂದಿ ... ಪ್ರಯಾಣಿಕರನ್ನು ತುಂಬಿಕೊಂಡು ಕಳೆದ ತಿಂಗಳು ತಾ|| ೨೭ ರಲ್ಲಿ ಲಿವರ್ಪೂಲಿಗೆ ಪ್ರಯಾಣಮಾಡಿತು. ತಾ|| ೨೯ ರಲ್ಲಿ ಕ್ವಿಬೆಕ್ ಪಟ್ಟಣದಿಂದ ಬಂದ ತಂತಿಯಿಲ್ಲದ ಆಕಾಶವಾರ್ತೆಯಲ್ಲಿ "ಎಂಪ್ರೆಸ್ ಆಫ್ ಐರ್ಲೆಂಡ್" ಎಂಬ ಹಡಗು ಮಂಜಿನಿಂದ ಗುದ್ದಿಗೆ ಡಿಕ್ಕಿಬಡಿದು ಮುಳುಗಿಹೋಯಿತೆಂದು ತಿಳಿಸಲ್ಪಟ್ಟಿತು. ಫಾದರ್ ಪಾಯಿಂಟ್‌ನಿಂದ ಬಂದ ಆಕಾಶವಾರ್ತೆಯಿಂದ ಈ ಹಡಗು ಮತ್ತೊಂದು ಹಡಗಿನ ಬಡಿತದಿಂದ ಮುಳುಗಿಹೋಯಿತೆಂದು ಗೊತ್ತಾಯಿತು. ಆಮೇಲೆ ಬಂದ ತಂತಿವಾರ್ತೆಗಳಿಂದಲೂ ಆಕಾಶವಾರ್ತೆಗಳಿಂದಲೂ ಸಹ ಗೊತ್ತಾಗುವುದೇನೆಂದರೆ—ಐರ್ಲೆಂಡ್ ಹಡಗು ... ವಾರ್ತೆಯನ್ನು ಕೇಳುತ್ತಲೇ ...ದ್ದ ಥಟ್ಟನೆ ನಿಲ್ಲಿಸಿಬಿಟ್ಟಿತು. ಕಾರಣವೇನೆಂದರೆ—ಸ್ಟೋರ್ಸ್ಟಾಡ್ ಎಂಬ ಹಡಗು ... ಟನ್ನುಗಳ ಭಾರವನ್ನು ಹೊರುವ ಬಲವುಳ್ಳುದಾಗಿ ಕಲ್ಲಿದ್ದಲನ್ನು ತುಂಬಿಕೊಂಡು ಹೋಗುತ್ತಿದ್ದಿತು. ಇದು ಮುಂದಾಗುತ್ತಿದ್ದಾಗ ಐರ್ಲೆಂಡ್ ಎಂಬ ಹಡಗಿಗೆ ಬಡಿಯಲಾಗಿ ಅದಕ್ಕೆ ಬಿರುಕುಬಿದ್ದು ನೀರು ತುಂಬಿ ಯಂತ್ರಗಳು ಕೆಟ್ಟು ಹಡಗು ಸ್ವಲ್ಪಕಾಲದೊಳಗೆ ಮುಳುಗಿಹೋಯಿತು. ಆಕಾಶವಾರ್ತೆಗಳು ತಮಗೆ ಸೇರಿದ ಕೂಡಲೇ ಸರ್ಕಾರದ ಹಡಗುಗಳೆರಡು ಸಹಾಯಕ್ಕೆ ಹೋದುವು. ಅಷ್ಟರಲ್ಲಿ ಹಡಗು ಮುಳುಗಿಹೋಗಿದ್ದಿತು. ೩೬೯ ಮಂದಿಗಳನ್ನು ಮಾತ್ರ ಬದುಕಿಸಲು ಸಾಧ್ಯವಾಯಿತು. ಆಗ ಮಂಜುಗವಿದ ಕಾಳರಾತ್ರಿಯಾಗಿದ್ದುದರಿಂದ ಸಮುದ್ರದಲ್ಲಿ ಏನೊಂದೂ ಕಾಣುತ್ತಿರಲಿಲ್ಲ. ನೀರಿನ ಮೇಲೆ ತೇಲಾಡುತ್ತಿದ್ದವರನ್ನು ಮಾತ್ರ ಈ ಎರಡು ಹಡಗುಗಳು ರಕ್ಷಿಸಿದುವು. ಹೀಗೆ ರಕ್ಷಿಸಲ್ಪಟ್ಟವರಲ್ಲಿ ಹಡಗಿನ ಉದ್ಯೋಗಿಗಳೇ ವಿಶೇಷವಾಗಿರುವರು. ಪ್ರಯಾಣಿಕರೆಲ್ಲಾ ೩ ನೇ ಅಂತಸ್ತಿನೊಳಗೆ ಕುಳಿತಿದ್ದು ನಿದ್ರಿಸುತ್ತಿದ್ದುದರಿಂದಲೂ ವಿಪತ್ತು ಆಕಸ್ಮಿಕವಾಗಿ ಸಂಭವಿಸಿದುದರಿಂದಲೂ ರಕ್ಷಣೆಯ ದೋಣಿಗಳನ್ನು ಬಿಡಲವಕಾಶವಿಲ್ಲದೆ ... ಬದುಕಿಕೊಳ್ಳಲು ಅವಕಾಶ ... ...ಗಳೊಳಗಾಗಿ ಹಡಗು ಮು...

...ವಾಗಿ ಮುಳುಗಿಹೋಯಿತು. ಬಡಿತದಿಂದ ಹೊರಗಿನ ಹೊದಿಕೆಯ ತಗಡಿನಲ್ಲಿ ತೂತಾಗಲು ನೀರು ರಭಸದಿಂದ ಒಳಕ್ಕೆ ನುಗ್ಗಿತು, ಎಂಜಿನ್ನು ಭಯಂಕರವಾದ ಶಬ್ದದಿಂದ ಒಡೆದು ಹಾರಿತು. ಆಗ ಕೆಲ ಜನರು ಹೆದರಿ ನೀರಿಗೆ ಧುಮುಕಿದರು. ಈ ಹಡಗಿನಲ್ಲಿ ಬೆಳ್ಳಿಯ ೫೦ ಲಕ್ಷ ರೂಪಾಯಿಗಳಿದ್ದಿತು. ಮೃತರಾದವರಲ್ಲಿ ೧೮೦ ಮಂದಿಗಳು ಮುಕ್ತಿಸೈನ್ಯಕ್ಕೆ ಸೇರಿದ ಜನರಾಗಿದ್ದು, ಅವರು ಲಂಡನ್ ಪಟ್ಟಣದಲ್ಲಿ ನಡೆಯುವ ಒಂದಾನೊಂದು ಸಭೆಗೆ ಹೋಗುತ್ತಿದ್ದರು. ಕ್ಷೇಮವಾಗಿ ಬಂದಿರುವವರಲ್ಲಿ ೮೭ ಮಂದಿ ೧ನೇ ತರಗತಿಯ ಪ್ರಯಾಣಿಕರಾಗಿಯೂ, ೫೧ ಮಂದಿ ೨ನೇ ತರಗತಿಯ ಪ್ರಯಾಣಿಕರಾಗಿಯೂ, ೧೧೧ ಮಂದಿ ಹಡಗನ್ನು ನಡೆಸುವ ಜನರಾಗಿಯೂ, ೨೫೯ ಮಂದಿ ಕೆಲಸಿಗಳಾಗಿಯೂ ಇದ್ದರು. ಮುಳುಗಿಹೋದ ಹಡಗಿನಲ್ಲಿ ಒಳಗಿದ್ದ ಪ್ರಯಾಣಿಕರೆಲ್ಲರನ್ನೂ ಆಪತ್ಕಾಲದಲ್ಲಿ ರಕ್ಷಿಸಲು ಸಾಕಾಗುವಷ್ಟು ದೋಣಿಗಳು ಇದ್ದಿದ್ದುವು. ಮತ್ತೂ ಅದರ ಸಂರಕ್ಷಿತತೆಗೆ ತಕ್ಕ ಉಪಕರಣಗಳೆಲ್ಲವೂ ಸಜ್ಜಾಗಿದ್ದುವು. ಅದರೊಳಗೂ ಟೈಟಾನಿಕ್ಕು ಮುಳುಗಿದ ಬಳಿಕ ಹಡಗುಗಳ ಸುರಕ್ಷಣೆಗೆ ವಿಶೇಷವಾದ ಸಾಧನಗಳು ಕಲ್ಪಿಸಲ್ಪಟ್ಟಿದ್ದುವು. ಇಷ್ಟೆಲ್ಲಾ ಇದ್ದರೂ ಅನಿರ್ವಚನೀಯವಾದ ವಿಪತ್ತು ಕ್ಷಣಮಾತ್ರದಲ್ಲಿ ಈ ದೊಡ್ಡ ಹಡಗಿಗೆ ಸಂಭವಿಸಿ ಭಯಂಕರವಾದ ವಿಶೇಷ ಪ್ರಾಣನಾಶವಾಗಿರುವುದು ದೈವಿಕವಿಲಾಸವಲ್ಲವೆ?

ಈ ಮಹಾ ವಿಪತ್ತಿನ ಸುದ್ದಿಯು ಪ್ರಪಂಚದ ಎಲ್ಲಭಾಗಕ್ಕೂ ಹರಡಿಕೊಂಡು ದುಃಖವನ್ನುಂಟುಮಾಡಿರುವುದು. ಸಕಲ ದೇಶಾಧಿಪತಿಗಳೂ ತಮ್ಮ ಅನುತಾಪವನ್ನು ತಿಳಿಯಪಡಿಸಿರುವರು. ನಮ್ಮ ಚಕ್ರವರ್ತಿಯವರು ಸಹ ಆ ಹಡಗಿನ ಯಜಮಾನರಾದ ನಾವಿಕಾಸಂಘದವರಿಗೆ ತಮ್ಮ ಸಹಾನುಭೂತಿಯನ್ನು ತಂತಿಯ ದ್ವಾರಾ ತಿಳಿಸಿರುವರು. ಈ ಹಡಗಿನಲ್ಲಿ ಮುಳುಗಿಹೋದ ಜನರ ಕುಟುಂಬದವರಿಗೆ ಸಹಾಯಮಾಡುವುದಕ್ಕಾಗಿ ಲಂಡನ್ ಪಟ್ಟಣದಲ್ಲಿ ಲಾರ್ಡ್ ಮೇಯರ್‌ರವರು ಒಂದು ಸಹಾಯನಿಧಿಯನ್ನು ಏರ್ಪಡಿಸಿರುವರು. ಇದಕ್ಕೆ ನಮ್ಮ ಚಕ್ರವರ್ತಿಯವರು ೧೦೦ ಪೌನುಗಳನ್ನೂ, ಚಕ್ರವರ್ತಿನಿಯವರು ೫೦ ಪೌನುಗಳನ್ನೂ ಸಹಾಯಮಾಡಿರುವರು. ಹೀಗೆಯೇ ಅನೇಕ ಧರ್ಮಾತ್ಮರು ಸಹಾಯಮಾಡುತ್ತಿರುವರು. ಈ ಹಡಗು ಮುಳುಗಿಹೋದುದರ ಕಾರಣವನ್ನು ವಿಚಾರಮಾಡುವುದಕ್ಕಾಗಿ ಕೆನಡಾದೇಶದ ಪಾರ್ಲಿಮೆಂಟಿನವರು ಒಂದು ಸಭೆಯನ್ನು ಏರ್ಪಡಿಸಿದ್ದಾರೆ. ಇದರಲ್ಲಿ ಕೆನಡಾ ದೇಶದ ನ್ಯಾಯಾಧಿಪತಿಗಳು ಇಬ್ಬರು, ಆಂಗ್ಲ ಪ್ರಭುತ್ವದ ಪಕ್ಷದವರೊಬ್ಬರು ಸಭಿಕರಾಗಿದ್ದಾರೆ.

ಮುಳುಗಿಹೋದ ಹಡಗಿನ ಕ್ಯಾಪ್ಟನ್ನರಾದ ಕೆಂಡಾಲ್‌ರವರು ನೀರಿನಲ್ಲಿ ಬಿದ್ದು ಮಂಜಿನ ... ಸ್ಥಿತಿಯಲ್ಲಿ ದೋಣಿಗೆ ಸೆಳೆದುಹಾಕಲ್ಪಟ್ಟು ಬದುಕಿ, ಈಗ ವಿಚಾರಕಸಂಘದ ಮುಂದೆ ತಮ್ಮ ವಾಙ್ಮೂಲವನ್ನು ಕೊಟ್ಟಿರುವುದರಲ್ಲಿ ಹೀಗೆ ಹೇಳುತ್ತಾರೆ:—ಸ್ಟೋರ್ಸ್ಟಾಡ್ ಹಡಗು ೭ ಮೈಲಿ ದೂರದಲ್ಲೇ ಕಂಡಿತು. ಆಗ ನಾನು ನನ್ನ ಹಡಗಿನ ರೀತಿಯನ್ನು ಬದಲಿಸಿದೆನು. ಆ ಹಡಗು ನಮ್ಮ ಹಡಗನ್ನು ಹಿಂದೆ ಮುಂದಕ್ಕೆ ಹೋಗಬೇಕೆಂಬ ಉದ್ದೇಶದಿಂದ ವೇಗನೆ ಹೋಗುತ್ತ ನಮ್ಮ ಹಡಗಿಗೆ ಬಡಿಯಿತು. ಅದು ಕೇವಲ ಸಮೀಪಕ್ಕೆ ಬರುತ್ತಿರಲು ನಾನು ಮೆಗಾಫೋನ್ ಎಂಬ ಯಂತ್ರದ ಮೂಲಕ ಅದನ್ನು ಹಿಂದಕ್ಕೆ ಸಾಗಿಹೋಗುವಂತೆ ... ಕೂಗಿದೆನು. ಆದರೆ ಅದು ಹಾಗೆ ಮಾಡಲಿಲ್ಲ. ನನ್ನ ಹಡಗನ್ನು ... ಆದರೆ ಇಂದಿನವರೆಗೆ ಕೆಲಸವಾಗಲಿಲ್ಲ. ಸ್ಟೋರ್ಸ್ಟಾಡ್ ಹಡಗು ಮುಗ್ಗುಲಿಗೆ ಬಂದು ನನ್ನ ಹಡಗಿಗೆ ಬಡಿದ ೭ ನಿಮಿಷಗಳೊಳಗಾಗಿ ನಮ್ಮ ಹಡಗು ... ಮುಳುಗಲಾರಂಭಿಸಿತು. ಹೀಗೆ ನೀರು ತುಂಬುತ್ತಿದ್ದ ... ಕಂಡು ರಕ್ಷಣೆಯ ದೋಣಿಗಳನ್ನು ... ಅಪ್ಪಣೆಮಾಡಿದೆನು. ಹಡಗು ನೀರಿನಲ್ಲಿ ಮುಳುಗಿಹೋಗುತ್ತಿರುವಾಗ ನಾನು ಸಮುದ್ರಕ್ಕೆ ಹಾರಿಬಿಟ್ಟೆನು. ಒಂದು ಮರದ ಹಲಗೆಯನ್ನು ಹಿಡಿದುಕೊಂಡೆನು. ದೋಣಿಯಲ್ಲಿದ್ದವರು—ಅದೋ ಕ್ಯಾಪ್ಟನ್, ಅವನನ್ನು ರಕ್ಷಿಸಿರಿ ಎಂದು ಕೂಗಿಕೊಂಡರು. ಆ ದೋಣಿಯಲ್ಲಿ ೩೦ ಮಂದಿ ತುಂಬಿದ್ದರು. ನೀರಿನಲ್ಲಿ ೫೦ ಮಂದಿಯು ತೇಲಾಡುತ್ತಿದ್ದರು. ೧೦ ಮಂದಿಗಳು ತಮ್ಮ ... ಹಗ್ಗವನ್ನು ಹಿಡಿದುಕೊಂಡು ... ತೇಲಾಡುತ್ತಿದ್ದರು. ಇವರೆಲ್ಲರನ್ನೂ ಸ್ಟೋರ್ಸ್ಟಾಡ್ ಹಡಗು ತನ್ನಲ್ಲಿಗೆ ಹತ್ತಿಸಿಕೊಂಡಿತು. ಒಬ್ಬ ... ಹಡಗಿನ ... ಒದಗಿಸಿದರು" ಎಂಬುದಾಗಿ.

ಸ್ಟೋರ್ಸ್ಟಾಡ್ ಹಡಗಿನ ಕ್ಯಾಪ್ಟನ್ ... ಆ ... ಇದ್ದ ... ಸಂಬಂಧ ... ಆದ ...

ದೋಣಿಯನ್ನು ನಾವು ದೂರದಲ್ಲೇ ಕಂಡೆವು, ನಮ್ಮ ಹಡಗು ಹೋಗುವುದಕ್ಕೆ ದಾರಿಯಿದ್ದಿತು. ಆ ಹಡಗು ನೇರ ದಾರಿಯಲ್ಲಿ ಹೋಗುತ್ತಿರುವಾಗ ದೊಡ್ಡ ಮಂಜು ಆವರಿಸಿ ಅದಕ್ಕೆ ದಾರಿಯನ್ನು ಕಾಣದಂತೆ ಮಾಡಿತು. ಇಲ್ಲದಿದ್ದರೆ ಅದು ಸುರಕ್ಷಿತವಾಗಿ ಹೋಗುತ್ತಿದ್ದಿತು. ಅಷ್ಟರಲ್ಲಿ ನಮಗೆ ಸಂಜ್ಞೆಯನ್ನು ಮಾಡಲು, ನಮ್ಮ ಹಡಗು ನಿಲ್ಲಿಸಲ್ಪಟ್ಟಿತು. ಅಷ್ಟರಲ್ಲಿ ಆ ಹಡಗು ಸಮೀಪಕ್ಕೆ ಬಂದಿತು. ಆಗ ನಮ್ಮ ಹಡಗು ಅದಕ್ಕೆ ಬಡಿದುಕೊಂಡು ಮುಂದಕ್ಕೆ ಹೋಯಿತು ಎಂದು ಹೇಳಿರುತ್ತಾರೆ.

ಹಡಗಿನಲ್ಲಿ ಮುಳುಗಿಹೋದವರ ಶವಗಳನ್ನು ಆಂಗ್ಲ ಸರ್ಕಾರದವರು ಹುಡುಕಿಸಿ ತೆಗೆಯಿಸುವುದಕ್ಕಾಗಿ ಒಂದು ಯುದ್ಧದ ಹಡಗನ್ನು ಕಳುಹಿಸಿರುತ್ತಾರೆ. ಕೆಲವು ಶವಗಳು ಸಿಕ್ಕಿ ಗುರ್ತು ಹಿಡಿಯಲ್ಪಟ್ಟಿವೆ.

ಸ್ಟಾರ್ಟ್‌ಫರ್ಡ್ ಹಡಗಿನ ಕ್ಯಾಪ್ಟನ್ ಅಂಡರ್‌ಸನ್‌ರವರಿಗೆ ಕೆನೆಡಿಯನ್ ನೌಕಾಸಂಘದವರು ತಮಗೆ ೩ ಲಕ್ಷ ಡಾಲರ್‌ಗಳ ನಷ್ಟವನ್ನು ಕೊಡಬೇಕೆಂದು ನೋಟೀಸನ್ನು ಕೊಟ್ಟಿದ್ದಾರೆ. ಇವರು ಪ್ರತಿಯಾಗಿ ೫೦ ಸಾವಿರ ಡಾಲರ್‌ಗಳ ನಷ್ಟಕ್ಕೆ ನೋಟೀಸನ್ನು ಅವರಿಗೆ ಕೊಟ್ಟಿದ್ದಾರೆ.

ಮೈಸೂರ್ ಸ್ಟಾರ್

ರ್ ೧೯೨೯ನೇ ಜುಲೈ ತಾ॥ ೮ನೇ ಸೋಮವಾರ.

ಮೈಸೂರು ಸಂಪದಭ್ಯುದಯ ಸಮಾಜವು

ಎರಡು ಉತ್ಸವಮಾತ್ರದಲ್ಲಿ ಪರ್ಯವಸಾನಗೊಳ್ಳುತ್ತಿದ್ದ ವರ್ಧಂತಿಯ ಮಹೋತ್ಸವದ ಸಮಯವನ್ನು ದೇಶಹಿತಕಾರ್ಯ ಸಾಧನಾಲೋಚನೆಯಿಂದಲೂ ಸಾರ್ಥಕಗೊಳಿಸಬೇಕೆಂಬುದು ನಮ್ಮ ಶ್ರೀಮನ್ಮಹಾರಾಜರವರು ಕಳೆದ ೮ ವರ್ಷಗಳಲ್ಲಿ ಈ ಸಮಾಜವನ್ನು ಸ್ಥಾಪಿಸಿದರು. ಆದರೆ ಈ ಸಮಾಜದವರು ಇದುವರೆಗಿನ ತಮ್ಮ ಪರಿಶೋಧನ ಕಾರ್ಯಗಳಿಗಾಗಿಯೇ ಲಕ್ಷಾಂತರ ರೂಗಳ ವ್ಯಯವನ್ನು ಮಾಡುತ್ತಾ ಬಂದು ಕಾರ್ಯವಾಹುದನ್ನು ಕಣ್ಣಿಗೆ ಕಾಣುವಂತೆ ವಿಕಟಿಸಲಿಲ್ಲವೆಂಬ ಕಾರಣದಿಂದ ಕೆಲರು ಇದು ಬರಿಯ ಆಡಂಬರದಲ್ಲೇ ಪರ್ಯವಸನ್ನವಾಗಿ ಹೋಗುವುದೋ ಏನೋ ಎಂದು ಚಿಂತಿಸುತ್ತಿರುವರು. ಆದರೆ ಅಂತಹ ಚಿಂತೆಗೆ ಕಾರಣವಿರುವುದಿಲ್ಲ. ಏಕೆಂದರೆ ಸಾವಧಾನದಿಂದ ವಿಚಾರಪೂರ್ವಕವಾಗಿ ನೆರವೇರುವ ಕಾರ್ಯವೇ ಶಾಶ್ವತವಾದ ಫಲವನ್ನು ಕೊಡುವ ಸಾಧನವಾಗಿ ಪರಿಣಮಿಸತಕ್ಕದಾಗಿದೆ. ಅನನುಭವದಲ್ಲಿರುವ ನಾನಾ ವಿಷಯವನ್ನು ಪರಿಶೋಧಿಸಿ, ದೇಶಕ್ಕೆ ಲಾಭಕರವಾದ ಉದ್ಯೋಗಗಳಾವುವು? ನಿಷ್ಫಲವಾದ ಉದ್ಯೋಗಗಳಾವುವು? ಎಂಬುದನ್ನು ಸಿದ್ಧಾಂತಪಡಿಸಿಕೊಳ್ಳದೆ ಸರ್ಕಾರದವರೇ ಆಗಲಿ ಪ್ರಜೆಗಳೇ ಆಗಲಿ ಹಣವನ್ನು ಅವುಗಳಿಗೆ ವ್ಯಯಮಾಡುವುದು ವಿಹಿತವಾಗುವುದಿಲ್ಲ. ಉದಾಹರಣ, ದೇಶದ ಆರ್ಥಿಕವೃದ್ಧಿಯ ವಿಷಯದಲ್ಲಿ ಪ್ರಯತ್ನಶೀಲರಾದ ನಮ್ಮ ಸರ್ಕಾರದವರು ಇಷ್ಟು ದೀರ್ಘಕಾಲ ಪರ್ಯಾಲೋಚಿಸಬೇಕಾದುದು ಅವರ ಮೇಲೆ ಹೊತ್ತಿರುವ ಉತ್ತರವಾದಿತ್ವಕ್ಕೆ ತಕ್ಕುದಾಗಿರುತ್ತದೆಂದು ಹೇಳಬಹುದು.

ಗೊತ್ತಾಗಿದ್ದ ಮೇರೆ ಈ ಸಮಾಜದ ೧೪ನೆಯ ಅಧಿವೇಶನವು ಕಳೆದ ತಾ॥ ೪ರ ಮಧ್ಯಾಹ್ನ ೧೧ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ರಂಗಸ್ಥಳದಲ್ಲಿ ಸಂಸ್ಥಾನದ ದಿವಾನರವರ ಅಧ್ಯಕ್ಷತೆಯಲ್ಲಿ ನೆರೆದಿದ್ದಿತು. ಮೊದಲನೆಯದಿನ ಶ್ರೀಯುವರಾಜರು ಸಭೆಗೆ ದಯಮಾಡಿಸಿದ್ದುದು ದೇಶದ ಅಭ್ಯುದಯ ಸಾಧಕ ಕಾರ್ಯಗಳಲ್ಲಿ ಅವರಿಗೆ ಎಷ್ಟು ಮಟ್ಟಿಗೆ ಅಭಿಮಾನವಿರುವುದೆಂಬುದನ್ನು ವ್ಯಕ್ತಪಡಿಸಿದುದಲ್ಲದೆ ಈ ಸಮಾಜದ ಕಾರ್ಯಕಾರಿಗಳಿಗೆ ವಿಶೇಷ ಪ್ರೋತ್ಸಾಹಕಾರಿಯಾಗಿದ್ದಿತು. ಅಧ್ಯಕ್ಷರು ಮಾಡಿದ ಉಪಕ್ರಮಣ ಭಾಷಣವು ಕಳೆದ ೮ ವರ್ಷಗಳಿಂದಲೂ ಈ ಸಮಾಜದವರ ಪ್ರಯತ್ನದಿಂದ ಎಷ್ಟು ಮಟ್ಟಿನ ಕೆಲಸಗಳು ಕಾರ್ಯರೂಪಕ್ಕೆ ಬರುತ್ತಿರುವವೆಯೆಂಬುದನ್ನು ಚೆನ್ನಾಗಿ ವ್ಯಕ್ತಪಡಿಸಲು ಸಾಧಕವಾಗಿದ್ದಿತು. ಅದರಲ್ಲಿ ವರ್ಣಿತವಾಗಿದ್ದ ಮುಖ್ಯಭಾಗಗಳಾವುವೆಂದರೆ:— ಈ ಸಭಾಸದರ ಸಂಖ್ಯೆಯು ೩೦ರಿಂದ ೬೦ಕ್ಕೆ ಹೆಚ್ಚಿಸಲ್ಪಟ್ಟಿದೆ. ಶ್ರೀಮನ್ಮಹಾರಾಜರವರು ತಮ್ಮ ಸ್ವಭಾವವಾದ ಔದಾರ್ಯದಿಂದಲೂ ಪ್ರಜೆಗಳಲ್ಲಿರುವ ನಂಬಿಕೆಯಿಂದಲೂ ಅಗಾಧವಾಗಿ ಜನರನ್ನು ಸಭಾಸದರನ್ನಾಗಿರಿಸುವ ಹಕ್ಕನ್ನು ತಮ್ಮ ಪ್ರಜೆಗಳಿಗೆ ದಯಪಾಲಿಸಿರುವುದರ ಮೇರೆ ೮ ಡಿಸ್ಟ್ರಿಕ್ಟುಗಳಿಂದ ೯ ಜನರೂ, ಪ್ರತಿನಿಧಿಸಭೆಯಿಂದ ೪ ಜನರೂ ಇದಕ್ಕೆ ಮೆಂಬರುಗಳಾಗಿ ಆರಿಸಲ್ಪಟ್ಟಿರುವರು. ಈ ಸಮಾಜದ ಕಾರ್ಯವು ಎಷ್ಟು ಗಮನಕ್ಕೆ ಬರಬೇಕಾದುದೆಂಬುದು ಬಹಳ ವರದಿಯಿಂದ ಸ್ಪಷ್ಟಗೊತ್ತಾಗುವುದು. ವಿದ್ಯಾಶಾಖೆಯಲ್ಲಿ ಸಾರ್ವಜನಿಕ ಸಾಹಿತ್ಯ ಕೈಗಾರಿಕೆಯ ವಿದ್ಯೆಯ ಕಡೆಗೆ ಗಮನವನ್ನು

ಸಾಕಷ್ಟು ಕೊಡುತ್ತಿರುವುದರಿಂದ ಸ್ತ್ರೀ ವಿದ್ಯಾಭಿವೃದ್ಧಿಗೂ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಪುಸ್ತಕ ಭಾಂಡಾಗಾರಗಳನ್ನು ಸ್ಥಾಪಿಸಬೇಕೆಂದು ಎಲ್ಲವೂ ನಡೆಯುತ್ತಿರುವುದು. ಈ ಸೀಮೆಯಲ್ಲಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸಲು ಬ್ರಿಟಿಷ್ ಸ್ಕಾಲರ್‌ಗಳನ್ನೂ ಮತ್ತೂ ಇತರ ಕಡೆಯ ಸಣ್ಣ ಯೂನಿವರ್ಸಿಟಿಗಳ ಕಾರ್ಯಕ್ರಮವು ವಿಸ್ತಾರವಾಗುವುದಕ್ಕೆ ನಡೆಯುತ್ತಿರುವುದೆಂಬ ಸಂಗತಿಯನ್ನು ವಿಚಾರಿಸುತ್ತಿದ್ದೇವೆ. ವಿದ್ಯಾಭಿವೃದ್ಧಿ ಕಾರ್ಯವು ಬಹಳ ಮುಖ್ಯವೆಂದು ಸರ್ಕಾರಕ್ಕೆ ತೋರುವುದರಿಂದ ತತ್ಸಂಬಂಧವಾದ ವಿಷಯಗಳಿಗೆ ವಿಶೇಷ ಗಮನವು ಕೊಡಲ್ಪಡುವುದು. ವ್ಯವಸಾಯ ಶಾಖೆಯಲ್ಲಿ ಕರ್ಷಕ ಜನರಿಗುಪಯುಕ್ತವಾಗುವಂತೆ ದೊಡ್ಡ ಪರಿಶೋಧನಕ್ಷೇತ್ರಗಳನ್ನು ನಿರ್ಮಿಸುವುದು, ಕೆರೆಗಳ ಮತ್ತು ಕಬ್ಬಿನ ವ್ಯವಸಾಯದ ಅಭಿವೃದ್ಧಿ ಮಾಡುವುದು, ರೈತರ ಸ್ಥಿತಿಗತಿಯನ್ನು ವಿಚಾರಿಸುವುದು-ಇವುಗಳಿಗೆ ವಿಶೇಷ ಗಮನವು ಕೊಡಲ್ಪಟ್ಟಿದೆ. ಹೈನದ ಮನೆ (ಡೈರಿ)ಗಳೇರ್ಪಡಿಸಿ ಹಾಲನ್ನು ಕೊಡಲು ವಿಧಿಗಳೇರ್ಪಡಿಸಲ್ಪಟ್ಟಿವೆ. ರೇಷ್ಮೆಯ ವ್ಯವಸಾಯಾಭಿವೃದ್ಧಿಗಾಗಿ ಒಂದು ಕ್ಷೇತ್ರವು ಏರ್ಪಡಿಸಲ್ಪಟ್ಟು ಇಬ್ಬರು ನಿಪುಣರು ನೇಮಿಸಲ್ಪಟ್ಟಿರುವರು. ರೇಷ್ಮೆ ಬೆಳೆಯ ಅಭಿವೃದ್ಧಿಗಾಗಿ ಒಂದು ಸಂಘವೇರ್ಪಡಿಸಲ್ಪಟ್ಟಿದೆ. ರೈತರು ರೇಷ್ಮೆಹುಳುವನ್ನು ಸಾಕಿ ದಾರವನ್ನು ತೆಗೆಯುವ ಕ್ರಮವನ್ನು ಬೋಧಿಸುವ ಆಲೋಚನೆಯು ನಡೆಯುತ್ತಿದೆ. ಕೈಗಾರಿಕೆಯ ಮತ್ತೂ ವ್ಯಾಪಾರದ ಶಾಖೆಗಳಲ್ಲಿ ಇಂದಿನ ತನಕ ೧೧ ಯಂತ್ರಗಳೂ, ೫ ೩ ಮರಕೊಯ್ಯುವ ಮತ್ತು ಇತರ ಮಿಲ್ಲುಗಳೂ ಸ್ಥಾಪಿತವಾಗಿವೆ. ಯಂತ್ರಗಳ ಉಪಯೋಗವನ್ನು ಜನಗಳು ವಿಶೇಷವಾಗಿ ಹೊಂದುವಂತೆ ತರಬೇತಿಶಾಲೆಯನ್ನು ಕೊಡಲೇರ್ಪಡಿಸಿದೆ. ಬೆಂಗಳೂರ ಸರ್ಕಾರಿ ಯೂನಿಯನ್ ಯ ಕಾರ್ಖಾನೆಯಲ್ಲೂ ಹೊರಗಡೆಯ ವ್ಯಾಪಾರದ ವಿಭಾಗವು ಹೇಳಿಕೊಡಲ್ಪಡುತ್ತಿರುವುದು. ಈಗ ಸ್ಥಾಪಿತವಾಗಿರುವ ಕಬ್ಬಿಣ ಕಾಲಸನ್ನ ತೆಗೆಯುವ ೨ ಯಂತ್ರಗಳಲ್ಲಿ ಕೆಲಸವು ಸಮರ್ಪಕವಾಗಿ ನಡೆಯುತ್ತಿದೆ. ಮಂಡೆಲ್ಲೆಯನ್ನು ತೆಗೆಯುವ ಯಂತ್ರದ ಸ್ಥಾಪನೆಗಾಗಿ ಯೋಚನೆಯು ನಡೆಯುತ್ತಿದೆ. ಮತ್ತು ಕ್ರೋಮ್ ಲೆದರ್ ಫ್ಯಾಕ್ಟರಿ ಪ್ರಸ್ತಾಪದನ್ನು ಸ್ಥಾಪಿಸಲು ಅಪ್ಪಣೆಯಾಗಿದೆ. ಗಂಧ, ಬೀಸುದಕಡ್ಡಿ, ಕಾಗದ ಮೊದಲಾದವುಗಳ ಕಾರ್ಖಾನೆಯನ್ನು ಸ್ಥಾಪಿಸುವುದರ ಲಾಭಾಲಾಭಗಳನ್ನು ತಿಳಿಯಲು ಅನುಭವಸ್ಥರು ನಿಯಮಿಸಲ್ಪಟ್ಟಿರುವರು. ಈ ಸಂಪದಭ್ಯುದಯ ಸಮಾಜದವರ ಸಹಾಯದಿಂದ ಈಗ್ಗೆ ೮ ತಿಂಗಳ ಕೆಳಗೆ ಏರ್ಪಟ್ಟಿರುವ ಮೈಸೂರ ಬ್ಯಾಂಕು ೩೩ ಲಕ್ಷ ರೂ ವರೆಗೂ ಲೇವಾದೇವಿಯನ್ನು ನಡೆಸುತ್ತಿರುವುದು. ಕಮಿಟಿಯವರಿಂದ ಹೊಸದಾಗೇರ್ಪಟ್ಟಿರುವ ಸ್ಟ್ಯಾಂಡಿಂಗ್ ಕಮಿಟಿಗಳಲ್ಲದೆ ೨ ಸೆಂಟ್ರಲ್ ಕಮಿಟಿಗಳೂ ೮ ಡಿಸ್ಟ್ರಿಕ್ಟ್ ಕಮಿಟಿಗಳೂ ಮತ್ತು ೬೯ ತಾಲ್ಲೂಕ್ ಕಮಿಟಿಗಳೂ ಏರ್ಪಟ್ಟಿರುತ್ತವೆ ಎಂದು ಮೊದಲಾಗಿ ಅಪ್ಪಣೆಕೊಡಿಸಿದರು. ಅನಂತರ ಆ ಆ ಶಾಖೆಗಳ ವರದಿಗಳು ಸೆಕ್ರೆಟರಿಗಳಿಂದ ಓದಲ್ಪಟ್ಟು ಮೊದಲನೆ ದಿವಸದ ಕಾರ್ಯಗಳು ಮುಗಿದುವು. ಈ ಸಭಾಕಾರ್ಯವು ನಾಳೆಯವರಿಗೂ ನಡೆವುದಾಗಿದೆ.

ವಂಗಕನ್ಯಾಹತ್ಯೆಗಳು.

ಬಂಗಾಳಾ ಪತ್ರಿಕೆಗಳಲ್ಲಿ ಪ್ರತಿವಾರವೂ ಒಂದೆರಡಾದರೂ ಯುವತಿಯರ ಆತ್ಮಹತ್ಯೆಯ ಸುದ್ದಿಗಳು ಬರುತ್ತಲೇ ಇವೆ. ಸ್ನೇಹಲತೆಯು ವರಶುಲ್ಕದ ಹಾವಳಿಯನ್ನು ತಡೆಯಲಾರದೆ ಮಾಡಿಕೊಂಡ ಆತ್ಮಹತ್ಯೆಯು ಭರತಖಂಡದಲ್ಲೆಲ್ಲಾ ಹೊಗಳಲ್ಪಡುವುದಕ್ಕೆ ಪಕ್ರಮವಾಗಲು ದೇಶಕ್ಕೆ ಧೂಪವನ್ನು ಹಾಕಿದಂತೆ ತಲೆತಿರುಗಿದ ನವಯುವತಿಯರಿಗೆ ಇದೊಂದು ಹುಡುಗಾಟಿಕೆಯಾಗಿ ಪರಿಣಮಿಸಿರುವುದು ಅತ್ಯಂತ ಶೋಚನೀಯವಾಗಿದೆ. ಸ್ತ್ರೀಯರಲ್ಲಿ ಸ್ವಭಾವತಃ ಕಂಪನಚಿತ್ತ ಚಾಂಚಲ್ಯವುಳ್ಳವರು. ಅವರು ಪ್ರಾಣಹತ್ಯೆಗೆ ಸ್ವಲ್ಪವೂ ಹಿಂದುಮುಂದೆ ನೋಡತಕ್ಕವರಲ್ಲ. ಅಂಥವರಿಗೆ ಆತ್ಮಹತ್ಯೆಯು ಪುರಸ್ಕಾರದ ಸಂಧಿಯು ದೊರಕಿದರೆ ಕೇಳುವುದೇನು? ಆಗಿನ ಕನ್ಯಾಹತ್ಯೆಗಳೆಲ್ಲಾ ವಿಶೇಷವಾಗಿ ಬಂಗಾಳದಲ್ಲೇ ನಡೆಯುತ್ತಿವೆ. ವರಶುಲ್ಕದ ಹಾವಳಿಯನ್ನು ನಿಲ್ಲಿಸುವ ಉಪಾಯದಲ್ಲಿ ಕನ್ಯಾಹತ್ಯೆಯ ಪರಂಪರೆಯನ್ನು ಈ ಸಮುದಾಯದಲ್ಲಿ ವಂಗೀಯರು ತಂದುಕೊಂಡಿರುವುದು ದೇಶದ ಭಯದಿಂದ ಓಡಿಹೋಗಿ ಹಾವಿನ ಹುತ್ತವನ್ನು ಸೇರಿದಂತಾಗಿದೆ. ಕಳೆದ ತಾ॥ ೩೧ರಲ್ಲಿ ಕಲ್ಕತ್ತಾದ ಬಾರಿಷ್ಟಾ ಲೇನಿನಲ್ಲಿ ೧೩ ವರ್ಷ ವಯಸ್ಸಿನ ಒಬ್ಬ ಹಿಂದೂಬಾಲಿಕೆಯು ತನ್ನಿಂದ ಕೋರಲ್ಪಟ್ಟ ವರನು ಕೇಳುವಷ್ಟು ಶುಲ್ಕವನ್ನು ತನ್ನ ತಂದೆಯು ಕೊಡಲು ಅಸಮರ್ಥನಾದ ಕಾರಣದಿಂದ ಸೀಮೆಎಣ್ಣೆ ಸೀರೆಗೆ ಸೀಮೆಎಣ್ಣೆಯನ್ನು ಸುರಿದು ಬೆಂಕಿಯನ್ನು ಹೊತ್ತಿಸಿಕೊಂಡು ಸತ್ತಳು. ವಿಷ್ಣುಚರಣ ರಾಯರೆಂಬ ವೈದ್ಯನ ಮಗಳಾದ ೧೫ ವರ್ಷ ವಯಸ್ಸಿನ ಪ್ರೇಮಪ್ರಭಾ ಎಂಬ ಕುಮಾರಿಗೆ ಒಬ್ಬ ವರನು ದೊರಕಿದ್ದ, ಯಾವ ಕಾರಣದಿಂದಲೋ ಆ ಸಂಬಂಧವಾಗದೆ ತಪ್ಪಿಹೋಗಿ, ಹೋಯಿತು ಬೇರೊಬ್ಬ ಜನ ... ಗಿ ಬಂದದ್ದರಿಂದಲೂ, ಈ ೨ನೆಯ ವರನು ವಿದ್ಯಾವಂತನೂ ಆಗಲಿ ಧನವಂತನೂ ಆಗದೆ ಇದ್ದುದರಿಂದಲೂ, ಕನ್ಯೆಯು ಮನಸ್ಸಿಗೆ ಅವನ ಸಂಬಂಧವು ರುಚಿಕರವಾಗದೆ ಹೋಗಿ, ತನ್ನ ಜೀವದಲ್ಲಿ ಜುಗುಪ್ಸೆಗೊಂಡು ಸೀಮೆಎಣ್ಣೆಯನ್ನು ಬಟ್ಟೆಗೆ ಸುರಿದುಕೊಂಡು ಬೆಂಕಿಹೊತ್ತಿಸಿಕೊಂಡಳು. ಬೆಂಕಿಯು ಹೊಗೆಯನ್ನು ಕಂಡು ನೆರೆಹೊರೆಯವರು ಕೂಗಿಕೊಂಡು ಓಡಿಬಂದು ಮನೆಯವರೆಲ್ಲಾ ಆಕೆಯ ನೆತ್ತಿಯಮೇಲೆ ನೀರನ್ನು ಸುರಿದು ಬೆಂಕಿಯನ್ನಾರಿಸಿದರು. ಆದರೆ ಗಾಯ ಪಟ್ಟಿಯನ್ನು ಮಾಡಲಿಲ್ಲ. ಸುತ್ತಿಕೊಂಡು ಬೆಂಕಿಹೊತ್ತಿಸಿಕೊಂಡು ಬಿದ್ದಿದ್ದ ಆಕೆಯು ಸತ್ತೇಹೋದಳು. ಮತ್ತೂ ಕಲ್ಕತ್ತಾದಲ್ಲಿ ಕಳೆದ ತಾ॥ ೫ರಲ್ಲಿ ಬಸಂತದಾಸಿಯೆಂಬ ೧೪ ವರ್ಷದ ಯುವತಿಯು ತನ್ನ ಉಡುಪಿನ ಮೇಲೆ ಸೀಮೆಎಣ್ಣೆಯನ್ನು ಸುರಿದುಕೊಂಡು ಬೆಂಕಿಯನ್ನು ಹೊತ್ತಿಸಿ ಸುಟ್ಟುಕೊಂಡು ಸತ್ತಳು. ಈಕೆಗೆ ೧ ವರ್ಷದ ಕೆಳಗೆ ವಿವಾಹವಾಗಿದ್ದಿತು. ಗೃಹಛಿದ್ರದಿಂದ ಬೇಹದ್ದಾರಿಯಲ್ಲಿ ಜುಗುಪ್ಸೆಗೊಂಡು ಹೀಗೆ ಆತ್ಮಹತ್ಯೆಯನ್ನು ಮಾಡಿಕೊಂಡಳು. ಈಕೆಯ ದೇಹವು ದಹಿಸುತ್ತಿರುವಾಗ ಮನೆಯವರು ಕಂಡು, ಓಡಿಬಂದು ಬೆಂಕಿಯನ್ನಾರಿಸಿ, ವೈದ್ಯವಿದ್ಯಾಲಯದ ಚಿಕಿತ್ಸಾಶಾಲೆಗೆ ಸಾಗಿಸಿ ಚಿಕಿತ್ಸೆಮಾಡಿಸಿದರು. ಆದರೂ ಒಡನೆ ಸತ್ತಳು. ಹೀಗೆ ಸದ್ಯಃ ನಡೆಯುತ್ತಿರುವ ಕನ್ಯಾಹತ್ಯೆಯನ್ನು ತಡೆಯುವುದಕ್ಕೆ ವಂಗದೇಶೀಯರು ಮೊದಲು ತಕ್ಕ ಉಪಾಯವನ್ನು ಯೋಚಿಸಬೇಕಾಗಿ ಬಂದಿರುತ್ತದೆ.

ಸ್ವಾತಂತ್ರ್ಯವಾದಿನಿಯರ ಹಾವಳಿ

ಪಾರ್ಲಿಮೆಂಟಿಗೆ ಸಭಿಕರನ್ನಾರಿಸುವ ಅಧಿಕಾರವನ್ನು ತಮಗೂ ಕೊಡಬೇಕೆಂದು ಹೋರಾಡುವ ಸ್ತ್ರೀಯರ ಉಪಟಳವು ಸೀಮೆಯಲ್ಲಿ ವಾಚಾಮಗೋಚರವಾಗಿದೆ. ಅವರು ವಿಧೇಯತೆಯಿಂದ ತಮ್ಮ ಇಷ್ಟಾರ್ಥಪ್ರಾಪ್ತಿಯನ್ನು ಹೊಂದಲಾರದೆ ಈಗ ದುರಾಪತ್ತಿಗೆ ನಡುಕಟ್ಟಿದ್ದಾರೆ. ಪ್ರದರ್ಶನಾಲಯಗಳೊಳಗೆ ಅಲಂಕಾರಪ್ರಾಯವಾಗಿದ್ದ ಚಿತ್ರಪಟಗಳನ್ನೂ ವಿಗ್ರಹಗಳನ್ನೂ ನಾಶಮಾಡಿರುತ್ತಾರೆ. ಇವರು ಕೆಲವನ್ನು ನಾಶಮಾಡುವರೆಂದು ಕಂಡುಬಂದಾಗ ಕಾವಲುಗಾರರಿಂದ ತಡೆಯಲ್ಪಟ್ಟಿದ್ದಾರೆ. ಪ್ರದರ್ಶನಾಲಯಗಳಿಗೆ ಇನ್ನು ಮುಂದೆ ಸ್ತ್ರೀಯರನ್ನು ನಿರಾತಂಕವಾಗಿ ಬಿಡಕೂಡದೆಂದು ಸರ್ಕಾರದವರಿಂದ ಆಜ್ಞೆ ಮಾಡಲ್ಪಟ್ಟಿದೆ. ಪ್ರಮಾಣಪತ್ರಿಕೆಯನ್ನು ತರುವವರನ್ನು ಮಾತ್ರ ಪ್ರವೇಶಗೊಳಿಸುತ್ತಾರೆ. ಹಾವಳಿಮಾಡಿದ ಹೆಂಗಸರನ್ನು ಪೋಲೀಸರು ಹಿಡಿದು ದಂಡಾಧಿಕಾರಿಯ ಎದುರಿಗೆ ವಿಚಾರಣೆಗೊಳಪಡಿಸಿದಾಗ ಕೆಲರು ನ್ಯಾಯಾಧಿಪತಿಯ ಮುಖದ ಮೇಲೆ ಮಣ್ಣನ್ನೆರಚುವುದನ್ನೂ ಹಿಟ್ಟಿನ ಚೀಲವನ್ನೂ ಎಸೆದರು. ಅವರು ಕೋರ್ಟು ಕೆಲಸವನ್ನೇ ನಿಲ್ಲಿಸಬೇಕಾಯಿತು. ೩೩ ಮಂದಿ ಹೆಂಗಸರಿಗೆ ೧ ೨ ತಿಂಗಳ ಕಾರಾಗೃಹವಾಸ ಶಿಕ್ಷೆಯಾಯಿತು. ಮೆಡಿನಾ ಎಂಬ ಹೆಂಗಸೊಬ್ಬಳನ್ನು ಪೋಲೀಸರು ಹಿಡಿಯಲು ಹೋದಾಗ ಬಹಳ ಗದ್ದಲವಾಯಿತು. ಸಣ್ಣ ತೋಟಾಗಳನ್ನು ಅಧಿಕಾರಿಗಳ ಮೇಲೆ ಬಿಸುಡುವರು. ಒಂದು ನಾಟಕವನ್ನು ನೋಡುವುದಕ್ಕಾಗಿ ಚಕ್ರವರ್ತಿಯವರು ಪತ್ನೀಸಮೇತರಾಗಿ ಹೋಗಿರುವಾಗ ಅಲ್ಲಿ ಕೆಲ ಸ್ತ್ರೀಯರು ವಿಜ್ಞಾಪನ ರೂಪವಾದ ಉಪನ್ಯಾಸವೊಂದನ್ನು ಉಚ್ಚಸ್ವರದಿಂದ ಮಾಡುವುದಕ್ಕುಪಕ್ರಮಿಸಿದರು. ಆದರೆ ಪೋಲೀಸರು ನೂಕಿ ಅದನ್ನು ನಿಲ್ಲಿಸಿದರು. ಕೆಲಸ್ತ್ರೀಯರು ಸಿಡಿಮದ್ದುಗಳನ್ನು ದೇವಾಲಯಗಳಿಗೂ ಅಧಿಕಾರಿಗಳ ಮನೆಗೂ ಉಪಯೋಗಿಸುತ್ತಿದ್ದಾರೆ. ಹೀಗೆ ಪ್ರತಿದಿನವೂ ವಿಧವಿಧವಾಗಿ ಅವರ ಹಾವಳಿಯು ಹೆಚ್ಚುತ್ತಿದೆ. ಥೇಮ್ಸ್ ನದಿಯ ಮೇಲಿರುವ ವಾರ್‌ಗ್ರೇವ್ ನಲ್ಲಿನ ಒಂದಾನೊಂದು ದೇವಾಲಯವನ್ನು ನಿನ್ನೆ ತಾನೇ ಸುಟ್ಟುಬಿಟ್ಟರು. ಒಬ್ಬ ಗಾಢಾಗ್ರಹಾಧಿಕಾರಿಯನ್ನು ಚಾಟಿಯಿಂದ ಹೊಡೆದರು. ಮನೆಮನೆಯ ಕಿಟಕಿಯ ಗಾಜಿನ ಕದಗಳನ್ನೆಲ್ಲಾ ಸುತ್ತಿಗೆಯಿಂದ ಹೊಡೆದು ಪುಡಿಮಾಡುತ್ತಿರುವರು. ಈ ಹೆಂಗಸರಲ್ಲಿ ಅಗ್ರೇಸರಳಾಗಿರುವ ಪ್ಯಾಂಕ್‌ಹರ್ಸ್ಟ್ ಎಂಬಾಕೆಯು ಚಾಟಿಗೆ ತೆಗೆದುಕೊಂಡು ವಾಸವಾಗಿರುವ ಮನೆಯ ಮೇಲೆ ... ನಿಂತರ ಬಕಿಂಗ್‌ಹ್ಯಾಂ ಎಂಬ ಅರಮನೆಯು ಚೆನ್ನಾಗಿ ಕಾಣುವುದು. ಈಕೆಯಿಂದ ಏನು ಅನಾಹುತವಾಗುವುದೋ ಎಂದು ಪೋಲೀಸರು ಹಗಲೂ ರಾತ್ರಿ ಕಾಯುತ್ತಿರುವರು. ಚಕ್ರವರ್ತಿಯವರ ಕುಮಾರರಲ್ಲೊಬ್ಬರಾದ ಹೆನ್ರಿಯೆಂಬ ಬಾಲಕನು ಈಟನ್ನಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವನು. ಈತನಿಗೆ ಏನೋ ಹಾನಿಯನ್ನುಂಟುಮಾಡಲು ಸ್ತ್ರೀಸ್ವಾತಂತ್ರ್ಯವಾದಿನಿಯರು ಆಲೋಚಿಸುತ್ತಿರುವರೆಂದು ಕಂಡುಬಂದುದರಿಂದ ಆತನ ರಕ್ಷಣಾರ್ಥವಾಗಿ ಗೂಢಚಾರರನ್ನು ಕಳುಹಿಸಿರುವರಂತೆ. ಮುಂದೆ ಈ ಹೆಂಗಸರ ಹಾವಳಿ [illegible] ವಕ್ಕೆ ಬರುವಂತೆ ಕಾಣುತ್ತಿದೆ.

ಕಾಲವರ್ಷ

ಈ ವಿಷಯವಾಗಿ ಕಳೆದ ವಾರದಲ್ಲಿ ಭರತಖಂಡದ ವಾತಾವರಣ ಶಾಸ್ತ್ರಜ್ಞರು ಸಿದ್ಧಮಾಡಿರುವ ಪ್ರಕಟಿಸಿರುವ ವರದಿಯು ಸ್ವಲ್ಪ ಆಶಾಜನಕವಾಗಿದೆ. ಕಳೆದೆರಡು ವಾರಗಳಲ್ಲಿ ಮಲೆನಾಡಿನಲ್ಲಿ ಮಳೆಯಾಗದೆ ಕೆಲಕಡೆ ೧೦೦ ಡಿಗ್ರಿಯವರೆಗೂ ಬಿಸಿಲಿನ ಝಳ ಹೆಚ್ಚಿಕೊಂಡು ಕಾಲಸ್ಥಿತಿಯು ಬಹು ಭೀಕರವಾಗಿ ಸಂತಾಪವನ್ನು ಹುಟ್ಟಿಸಿತ್ತು. ಕಳೆದ ತಾ॥ ೨-೩ ರಲ್ಲಿನ ವರದಿಗಳನ್ನು ನೋಡುವಲ್ಲಿ ಮಲಬಾರುತೀರದಲ್ಲಿ ಮಳೆ ಬರುವುದಕ್ಕೆ ಮುಂದೆ ಉಂಟಾಗತಕ್ಕ ಚಿಹ್ನೆಗಳು ಈಗ ಕಂಡುಬರುತ್ತಿವೆಯೆಂದೂ, ದೇಶದ ನಾನಾಭಾಗಗಳಲ್ಲಿ ಮಳೆಯು ಆಗುತ್ತಿರುವುದೆಂದೂ, ಭರತಖಂಡದ ಉತ್ತರಭಾಗದಲ್ಲಿರುವ ಬೆಟ್ಟಗಳ ಮೇಲಿನ ವಾಯುಮಂಡಲದಲ್ಲಿ ಮಳೆಗೆ ದಾರಿಯನ್ನು ಮಾಡುವ ಸಂಕ್ಷೋಭವುಂಟಾಗುತ್ತಿದೆಯೆಂದೂ ಅದರಿಂದ ಶೀಘ್ರದಲ್ಲಿ ಬರ್ಮಾದಲ್ಲೂ ಒರಿಸ್ಸಾ ಬೀರಾರು ನಾಗಪುರ ಕಡೆ ಮಧ್ಯಪ್ರಾಂತ ಹೈದರಾಬಾದು ಬೊಂಬಾಯಿ ಮಲಬಾರು ಮದ್ರಾಸಿನ ಉತ್ತರದಿಕ್ಕು ಆಗ್ನೇಯದಿಕ್ಕುಗಳಲ್ಲೂ ದಕ್ಷಿಣದಲ್ಲೂ ಮಳೆಯು ಹೆಚ್ಚಾಗುತ್ತಲೂ ಇರುವುದೆಂದು ಗೊತ್ತಾಗಿರುವುದು. ಬಂಗಾಳದ ದಕ್ಷಿಣಭಾಗದಲ್ಲಿ ವಿಶೇಷವಾದ ಮಳೆಯಾಗುವ ಚಿಹ್ನೆಗಳಿರುವುದು. ಕಳೆದ ತಾರೀಖಿನಲ್ಲಿ ಬೊಂಬಾಯಿಯಲ್ಲಿ ದೊಡ್ಡ ಮಳೆಯು ವರ್ಷಾರಂಭದ ಸೂಚನೆಯಾಗಿದ್ದಿತು. ಈಗ ವಾಯುಮಂಡಲದಲ್ಲಿ ಸ್ವಲ್ಪವು ಹೆಚ್ಚುತ್ತಿದೆ. ಈ ಕಾರಣಗಳಿಂದಲೇ ನಮ್ಮಲ್ಲೂ ಕಳೆದ ೨-೩ ದಿನಗಳಿಂದ ಮೋಡವು ಕವಿದು ತುಂತುರುಮಳೆಯಾಗುವುದಕ್ಕಾರಂಭವಾಗಿದೆ. ಆದರೆ ದೊಡ್ಡ ಮಳೆಗಳು ಆಗಿಲ್ಲ. ಕೆರೆಕಟ್ಟೆಗಳಿಗೂ ಬೇಸಾಯಕ್ಕೂ ತಕ್ಕಷ್ಟು ನೀರಾಗುವ ಮಳೆಗಳು ೨-೩ ವಾರಗಳಲ್ಲಿ ಸರ್ವತ್ರ ಆಗಬೇಕಾಗಿದೆ. ಹಾಗೆ ಆದಪಕ್ಷದಲ್ಲಿ ಈ ವರ್ಷದ ಕಾಲಸ್ಥಿತಿಯಲ್ಲಿ ತೋರುತ್ತಿರುವ ಕ್ಷಾಮಸೂಚನೆಯು ಅಡಗುವುವೆಂಬಿಲ್ಲ.

ಒಳದೇಶದ ವೃತ್ತಾಂತವು.

ಕಳೆದ ಶುಕ್ರವಾರ ರಾಜಧಾನಿಯಲ್ಲಿ ೮೦ ಸೆಂಟು ಮಳೆಯಾಗಿ ಉಷ್ಣವು ಸ್ವಲ್ಪ ಕಡಿಮೆಯಾಗಿ ಜನಗಳಲ್ಲಿ ಕೊಂಚ ತನಿವುಂಟಾಗಿದೆ.

ತಿಪ್ಟೂರಿನಲ್ಲಿ ಕೆಂಪಮ್ಮನ ದೇವಸ್ಥಾನಕ್ಕೆ ಬೆಸ್ತರವನು ಧರ್ಮಾಧಿಕಾರಿಯಾಗಿರುವನು. ಆದರೆ ದೇವರಿಗೆ ಪೂಜಾನೈವೇದ್ಯ ಅವನ ಕೈಯಿಂದ ನಿವೇದನೆಮಾಡುವುದರಿಂದ ಬ್ರಾಹ್ಮಣ ಅಥವಾ ಲಿಂಗಾಯತರಿಂದ ಮೊದಲಿನಂತೆ ನಡೆಯುವುದಂತೆ.

ದಿವಾನರು ಪದ್ಧತಿಯ ಪ್ರಕಾರ ವರ್ಧಂತಿಯ ಮಹೋತ್ಸವಕ್ಕೆ ಬಂದಿರುವ ಸರ್ಕಾರಿಯ ದೊಡ್ಡಧಿಕಾರಿಗಳಿಗೂ ಸಂಪದಭ್ಯುದಯಸಮಾಜದ ಮೆಂಬರುಗಳು ಮೊದಲಾದ ಅತಿಥಿಗಳಿಗೂ ನಿನ್ನೆಯರಾತ್ರಿ ದಿವ್ಯವಾದ ಔತಣವನ್ನು ಮಾಡಿಸಿದರು.

ಡಾಕ್ಟರ್ ಇ. ಎಸ್. ಕೃಷ್ಣಸ್ವಾಮಯ್ಯಂಗಾರ್‌ರವರು ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಯ ಇನ್‌ಛಾರ್ಜ್ ಮೆಡಿಕಲ್ ಆಫೀಸರ್ ಉದ್ಯೋಗವನ್ನು ತಾ॥ ೨೬ ನೆ ಕಳೆದ ಗುರುವಾರ ವಹಿಸಿಕೊಂಡುದರಿಂದ ವಾಸುದೇವಯ್ಯನವರು ರೆಸಿಡೆಂಟ್ ಮೆಡಿಕಲಾಫೀಸರ್ ಸ್ಥಾನಕ್ಕೆ ಹಿಂದಿರುಗಬೇಕಾಗಿಬಂದಿತು.

ಹೆಗ್ಗಡದೇವನಕೋಟೆಯಲ್ಲಿ ಒಂದು ದೊಡ್ಡ ಆಂಜನೇಯ ವಿಗ್ರಹವಿರುವುದು. ಇದರ ಮುಖವು ಎಡದ ಕಡೆಗೆ ತಿರುಗಿರುವುದಲ್ಲದೆ ಅದರ ಎಡದ ತೊಡೆಯಿಂದ ಕೆಂಪಗಿರುವ ನೀರು ಕೊಂಚವಾಗಿ ಸ್ರವಿಸುತ್ತಿರುವುದರಿಂದ ಅಲ್ಲಿಟ್ಟಿದ್ದ ಬಟ್ಟೆಯು ಕೊಂಚ ದಿವಸದಲ್ಲಿ ಕೆಂಪಗಾಗಿರುವುದಾಗಿಯೂ ವದಂತಿಯು ಹುಟ್ಟಿದೆ.

ಚಿಕ್ಕಬಳ್ಳಾಪುರದ ಸಮೀಪದ ಗುಡ್ಡದ ಮೇಲಿರುವ ಬೆಂಡಿಗನಹಳ್ಳಿಯಲ್ಲಿರುವ ಬಸವೇಶ್ವರನ ವಿಗ್ರಹವನ್ನು ಕುರಿತು ಹಳ್ಳಿಯ ಜನರು ಹಬ್ಬಿಸಿರುವ ದೊಡ್ಡ ದನಗಳು ತಮ್ಮ ಮನೆಗೆ ಹಿಂದಿರುಗಿ ಬಂದಲ್ಲಿ ಮೊಸರಿನಿಂದ ಅಭಿಷೇಕವನ್ನು ಮಾಡಿಸುತ್ತೇವೆಂದು ಹರಕೆಯನ್ನು ಮಾಡಿಕೊಂಡರೆ ಹೋಗಿದ್ದ ದನಗಳು ಮನೆಗೆ ಬರುತ್ತವೆಂಬ ಪ್ರತೀತಿ ಆ ಪ್ರಾಂತ್ಯ ಎಲ್ಲಕಡೆಯೂ ಹರಡಿದೆ.

ಶ್ರೀಮನ್ಮಹಾರಾಜರವರಿಗೆ ಕಳೆದ ತಾ॥ ೮ ರಲ್ಲಿ ೨೦ ನೆಯ ವರ್ಷವು ತುಂಬಿದುದರಿಂದ ಆ ದಿನದ ಪ್ರಾತಃಕಾಲ ಅರಮನೆಯಲ್ಲಿ ಸನ್ನಿವೇಶ ನಡೆದು ಅಭ್ಯಂಗನ ಸ್ನಾನವಾದ ಮೇಲೆ ೩೧ ಗುಂಡುಗಳು ಹಾರಿಸಲ್ಪಟ್ಟವು. ೯-೩೦ ಗಂಟೆಯ ಸಮಯದಲ್ಲಿ ಶ್ರೀಮನ್ಮಹಾರಾಜರವರು ಸರ್ವಾಲಂಕಾರಭೂಷಿತರಾಗಿ ತಮ್ಮಂತೆಯೇ ಅಲಂಕೃತರಾದ ಶ್ರೀಕಂಠದತ್ತರಾಜರೊಡನೆ ಅಂಬಾವಿಲಾಸಕ್ಕೆ ಚಿತ್ತೈಸಿ ಶ್ರೀಪರಮೇಶ್ವರರ ಪಾದಪೂಜೆಯನ್ನು ಮಾಡಿ ಕಾಣಿಕೆಯ ನ್ನೊಪ್ಪಿಸಿ ದರ್ಬಾರು ನಡೆಸಿ ... ದರು. ಶ್ರೀಯವರ ... ಸಾಧನರು ಆಳಿದುಂಡಿ ...

ರಂಗಗಳು ಕೌನ್ಸಿಲರುಗಳು ಅಧಿಕಾರಿಗಳು ಮೊದಲಾದ ಸಮಸ್ತ ಸಭಾಸದರ ನಜರ್‌ಮುಟ್ಟಿಸಿದ ಮೇಲೆ ಪೈಶಿಕ ಲೇಖಕರು ... ಪುರಾಣವಾದವು ನಡೆದು ಸಭಿಕರಿಗೆ ಪಾನಸುಪಾರಿ ಕಾಣಿಕೆಗಳ ವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಮಧ್ಯಾಹ್ನ ೪ ಗಂಟೆಗೆ ಶ್ರೀಮನ್ಮಹಾರಾಜರವರು ದಿವ್ಯವಸ್ತ್ರಾಭರಣ ಭೂಷಿತರಾಗಿ ದಿವ್ಯಾಶ್ವಗಳ ಮೇಲೆ ಕುಳಿತು ಸಮಸ್ತ ವಿರುದಾವಳಿಗಳಿಂದಲೂ ಸೇನೆಯಿಂದಲೂ ಕೂಡಿ ಅರಮನೆಯಿಂದ ದೊಡ್ಡಪೇಟೆಯ ಮಾರ್ಗ ಮೊರದು ಬಾಡಿಗಾರ್ಡ್ ಲಾಯದಬಳಿ ತಿರುಗಿಕೊಂಡು ದೊಡ್ಡಬಂಗಲೆಯನ್ನು ಸೇರಿ ಅಲ್ಲಿಯ ಬಯಲಿನಲ್ಲಿ ಸೈನಿಕರ ವಿನ್ಯಾಸವನ್ನು ಪರಾಮರ್ಶಿಸಿ, ಕೊಂಚ ವಿಶ್ರಮಿಸಿಕೊಂಡು ರಾತ್ರಿ ೮॥ ಗಂಟೆಯಲ್ಲಿ ಯಥಾರೀತಿಯಾಗಿ ಉತ್ಸವದಿಂದ ಹಿಂದಿರುಗಿ ಅರಮನೆಯನ್ನು ತಲುಪುವ ಹೊತ್ತಿಗೆ ೯ ಗಂಟೆಯು ಮೀರಿದ್ದಿತು. ಬರಸ್ಸಾ ದಿನದ ಪ್ರೇಕ್ಷಕರಾಗಿ ಬಂದಿದ್ದ ಜನರು ಬಹಳ ಸ್ವಲ್ಪವಾಗಿದ್ದರು. ಶುಕ್ರವಾರ ಮತ್ತೂ ಶನಿವಾರಗಳಲ್ಲಿ ಅಂಬಾವಿಲಾಸದಲ್ಲಿ ದರ್ಬಾರು ನಡೆದು ಸಭಿಕರ ನಜರ್‌ಮುಟ್ಟಿಯಾಯಿತು. ಬೆಂಗಳೂರು ಇಂಪೀರಿಯಲ್ ಟ್ಯಾಂಸರ್ ಮತ್ತು ರಾಜಧಾನಿಯ ಸಿಲೇದಾರ್‌ಕವಾಯಿತಿಗಳು ವಿನೋದಕ್ಕಾಗಿ ನಡೆಸಿದವು. ಈ ವರ್ಧಂತಿ ಉತ್ಸವವು ಉತ್ತರದಲ್ಲೂ ಸುಸ್ವರದ ಮಾತ್ರ ನಡೆದು ಬರುತ್ತಿದ್ದರು.

ಭರತಖಂಡದ ವೃತ್ತಾಂತಗಳು.

ಬರೋಡಾ ಸಂಸ್ಥಾನದಲ್ಲಿ ಕಳೆದ ೧೯೦೩-೦೪ ನೆಯ ವರ್ಷದ ಉತ್ಪತ್ತಿಯು ೨ ಕೋಟಿ ೫೦ ಲಕ್ಷವಾಗಿರುತ್ತದೆ.

ಭಾರತ ಸ್ತ್ರೀಯರ ಆರೋಗ್ಯ ರಕ್ಷಣೆ, ಜ್ಞಾನಾಭಿವೃದ್ಧಿ ಸ್ತ್ರೀಯರ ತಲೆಯ ಕೂದಲಿಗಾಗಿ ... ಅತ್ಯಲ್ಪವಾಗಿರುವುದರಿಂದ ಪ್ರತಿ ವರ್ಷದಲ್ಲೂ ... ಇಂಗ್ಲೆಂಡು ಮೊದಲಾದ ರಾಜ್ಯಗಳಿಗೆ ರವಾನೆಮಾಡುತ್ತಿರುವುದು.

ಕಲ್ಕತ್ತೆಗೆ ಸೇರಿದ ಹೌರಾದಲ್ಲಿರುವ ಒಬ್ಬ ... ಬೆಲೆಬಾಳುವ ... ಪದಾರ್ಥಗಳನ್ನು ಮಾರುತ್ತಿರುವನೆಂದು ... ಸಮಾಚಾರ ... ಗಂಗಾನದಿಯ ... ಮತ್ತು ... ಅವರ ಸಂಬಂಧದಲ್ಲಿ ೧೦ ಮಂದಿಗಳನ್ನು ಪೋಲೀಸರು ಹಿಡಿದರು.

ಮಿರ್ಜಾಪುರದಲ್ಲಿ ... ಗಂಗಾನದಿಯಲ್ಲಿ ... ಗಂಗೆಗೆ ಅರ್ಪಿಸಿದನೆಂದು ... ತನ್ನ ... ಗಂಗಾತೀರಕ್ಕೆ ಬಂದು ... ಗಂಗೆಗೆ ... ಗಂಡುಮಗುವನ್ನೇ ... ಗಂಗೆಗೆ ಅರ್ಪಿತವಾಯಿತೇ ಫಲವಾಯಿತು.

ದಿಲ್ಲಿಯ ಮಹಾಮಹೋಪಾಧ್ಯಾಯ ಪಂಡಿತ ... ದಿಲ್ಲಿಪಟ್ಟಣದ ಸಮೀಪದಲ್ಲಿ ... ಮೇಲೆ ಖುರಾರಿ ಎಂಬ ಗ್ರಾಮದ ದಕ್ಷಿಣಕ್ಕಿರುವ ಒಂದು ಗುಡ್ಡದ ಮೇಲೆ ಒಂದು ಹಜ್ಜೆಯ ಗುರುತಿರುವುದನ್ನು ಕಂಡುಹಿಡಿದರು. ಇದು ೩೨ ಅಂಗುಲ ಉದ್ದವೂ ೧೦ ಅಂಗುಲ ಅಗಲವೂ ಇರುವುದಲ್ಲದೆ ಈಗ್ಗೆ ೨೦೦೦ ವರ್ಷಗಳ ಹಿಂದಿನದಾಗಿರುವುದೆಂದೂ ... ಗಳನ್ನು ... ರೆಂದೂ ಹೇಳುವರು.

ಸರ್ಕಾರದಿಂದ ... ವಿಷಯವಾಗಿ ... ಉತ್ತಮವಾದ ವಿಷಯವೆಂಬುದನ್ನು ... ಬೊಂಬಾಯಿಪಟ್ಟಣದಲ್ಲಿ ವೈದ್ಯ ... ಆರೋಗ್ಯವಾಗಿರುವ ... ಪ್ರಯೋಗಿಸುವರು. ... ತೆಗೆದು ... ಇದರಿಂದ ಉತ್ತಮವಾದ ಫಲಿತಾಂಶ ... ಬೊಂಬಾಯಿಯಲ್ಲಿ ... ಪ್ರಯೋಗವನ್ನು ... (ಎಂದರೆ ... ಅವನ ದೇಹದ ...) ... ಸಮಯ ... ಮಾಡಿದರು ...

... ಅವರಿಗೆ ... ಅವನಿಗೆ ... ಅವರ ...

ಶೋಲಿಕೆಂತ ರೀತಿಯಲ್ಲಿ ಸಿದ್ಧವಾಗಿದ್ದ ... ಇದೇ ಈ ವಿಷಯದಲ್ಲಿ ಎಲ್ಲಕಡೆಗೂ ... ವ್ಯಾಪಿಸಿರುವುದೆಂದು ಕಾಣುತ್ತದೆ. ಅಮೇರಿಕಾ ಜರ್ಮನಿ ಮೊದಲಾದ ದೇಶಗಳಿಗೂ ... ಈ ವಿಷಯವನ್ನು ಕಳುಹಿಸುತ್ತಿದ್ದಾರೆ. ... ಎಂಬುದು ಸುಳ್ಳು.

ವಿದೇಶವೃತ್ತಾಂತಗಳು.

ದಕ್ಷಿಣಆಫ್ರಿಕದಲ್ಲಿ ಭರತಖಂಡಕ್ಕೆ ಸೇರಿದವರಾಗಿರುವ ಶ್ರೀಯುತ ಗಾಂಧಿಯವರನ್ನು ಈ ವರ್ಷ ದೇಶೀಯ ಮಹಾಸಭೆಗೆ ಅಧ್ಯಕ್ಷರನ್ನಾಗಿ ಆರಿಸಬೇಕೆಂದು ಸೂಚಿಸಲ್ಪಟ್ಟಿದೆ.

... ಕ್ವೀನ್ ಆಫ್ ಇಂಗ್ಲೆಂಡು ... ಹೋಗುತ್ತಾ ಬದುಕಿ ... ಒಬ್ಬ ಸ್ತ್ರೀಯು ... ಸಮುದ್ರತೀರದಲ್ಲಿ ... ತಿರುಗುತ್ತಿದ್ದಾಳೆ.

ಪ್ಯಾರಿಸ್‌ಪಟ್ಟಣದಲ್ಲಿನ ಮುತ್ತಿನ ವ್ಯಾಪಾರಿಗಳಲ್ಲಿ ಕೆಲರು ... ಒಬ್ಬ ದೊಡ್ಡ ವ್ಯಾಪಾರಿಯು ಕಳೆದ ತಾ॥ ... ಇದರಿಂದ ಆ ವ್ಯಾಪಾರಿಗಳಿಗೆ ... ನಷ್ಟವುಂಟಾಗಿದೆ.

ದಕ್ಷಿಣಆಫ್ರಿಕದ ... ಸಂಕಲ್ಪಗಳನ್ನು ... ದಕ್ಷಿಣ ತೀರದ ... ಎಂದು ಸುದ್ದಿಬಂದಿದೆ.

... ಮಾಡಿ ... ಆದರೆ ... ತಮ್ಮ ... ಸಮುದ್ರತೀರಕ್ಕೆ ಓಡಿಹೋದರು.

ಚೀನಾದೇಶದಲ್ಲಿ ... ಒಂದು ... ಸ್ವೀಕರಿಸುವರು ... ಬಹುಜನರು ... ಉದ್ಯೋಗಗಳಲ್ಲಿ ... ಮಂತ್ರಿಗಳಾಗಿದ್ದವರು ... ದೇಶದ ...

ತಂದೆಗಳು ತಾವು ... ತಮ್ಮ ಮಕ್ಕಳನ್ನು ... ಮಾಡಬೇಕೆಂದು ಅಪೇಕ್ಷಿಸುತ್ತಾರೆ. ... ಒಬ್ಬ ... ಕೆಲಸವನ್ನು ... ತಪ್ಪಿಸಬೇಕೆಂದು ... ಅದನ್ನು ಒಂದೇ ... ತಂದೆಯ ... ಮಗನು ... ಒಪ್ಪಿಕೊಂಡು ... ಆತನ ... ಆದರೆ ... ಮಧ್ಯಾಹ್ನ ... ಕಂಡ ಮಗನ ... ಬಿಡಿಸಿ, ಅವರ ತಂದೆಯ ಸ್ಥಾನಕ್ಕೇ ಬಂದರು.

ನೋಟೀಸು

... ಬೆಂಗಳೂರು ... ನೋಟೀಸು ... ಸ್ಥಳ ... ಇದ್ದ ... ಕಾರ್ಯ ...

ಪತ್ರಸ್ವೀಕಾರ

ಮೈಸೂರ ವೇ|| ಪಂಡಿತ ತ್ರ[illegible] ಶಾಸ್ತ್ರಿಗಳಿಂದ [illegible] ಜೀರ್ಣೋದ್ಧಾರದ ಬಗ್ಗೆ ಬರೆದಿರುವ [illegible] ಮಹೋತ್ಸವದ ಕಾಲದಲ್ಲಿ [illegible] ಸ್ವರ್ಗಾರ್ಥವಾಗಿ ಅಗ್ರಹಾರ [illegible] ನಮ್ಮಲ್ಲಿಗೆ ಕಳುಹಿಸಿಕೊಟ್ಟ [illegible] ಕೃತಜ್ಞತೆಯಿಂದ ಸ್ವೀಕರಿಸಿರುವೆವು [illegible]

ಕಳೆದ ವರ್ಷ ತಾ|| [illegible] ನೆಯ ಜ್ಯೂನ್ ಪತ್ರದ [illegible] ಪುಟದಲ್ಲಿ ಪ್ರಕಟವಾಗಿರುವ ನೋಟೀಸಿನ [illegible] ನೆಯ ಪಂಕ್ತಿಯ [illegible] ಎಂಬುವದಕ್ಕೆ ಬದಲು ಬಂಕಪ್ಪ [illegible] ನೆಯ ಪಂಕ್ತಿಯಲ್ಲಿ ಚನ್ನಬಸವ ಎಂಬುವದಕ್ಕೆ ಬದಲು [illegible] ಎಂತಲೂ, [illegible] ನೆಯ ಪಂಕ್ತಿಯಲ್ಲಿ [illegible] ಬದಲು [illegible] ಎಂತಲೂ ಓದಿಕೊಳ್ಳತಕ್ಕದ್ದು. ಪ.ಸ್ರ

ಹುಣಸೂರು ತಾಲೂಕು ಪ್ರಾಂತ್ಯ [illegible] ಇಷ್ಟರವರೆಗೆ ಈ ಹಿಂದೆ [illegible] ಅನುಭವಿಸಲಿಲ್ಲವೆಂದು ಹಿರಿಯರು ಹೇಳುತ್ತಾರೆ [illegible] ಬೆಳಗಿನಜಾವ [illegible] ಕಾಲವೇ [illegible] ವಿಶೇಷವಾಗಿ [illegible] ಬರುವಂತೆ [illegible] ಬಹಳ ಕಠಿಣವಾಗಿದೆ. ಜನಗಳಂತು [illegible] ಬಾಲರು ಮುದುಕರು [illegible] ರೋಗಗಳಿಂದ [illegible] ಬೆಳೆಗಳು [illegible] ಭೂಮಿ [illegible] ಅಸಾಧ್ಯವಾಗಿದೆ.

ಸ್ಥಳೀಕ

ಸುಧಾರಿಸಿದ ವಿವಾಹವು

ಚಿತ್ರದುರ್ಗದ ಸಾಹುಕಾರ್ ವೆ|| ಕಾಡಪ್ಪನವರು ಈ [illegible] ತಮ್ಮ ಕಿರಿಯ [illegible] ರುದ್ರಪ್ಪನವರಿಗೆ ಕಾವೇರಿ [illegible] ಬಿ. ಎ., ಬಿ. ಎಲ್., [illegible] ತಮ್ಮ ಮೊಮ್ಮಗಳು ಚನ್ನಬಸಮ್ಮ [illegible] ಸಾಹುಕಾರ್ ವೆ|| ಸಂಗಪ್ಪನವರಿಗೂ [illegible] ಕನ್ಯಾದಾನಮಾಡಿ ಈ ಮಹೋತ್ಸವಕ್ಕೆ [illegible] ಬಂದಿದ್ದ [illegible] ಸಂದರ್ಭಗಳನ್ನು [illegible] ಇತರರಿಗೆ [illegible] ಇಂತಹ ಶುಭಕಾಲಗಳಲ್ಲಿ ವೀರಶೈವಧರ್ಮಾಭಿಮಾನಿಗಳು [illegible] ಪ್ಲೀಡರ್ ವೆ|| ಸಿದ್ದನಂಜಪ್ಪನವರು [illegible] ವೆ|| ಕಾಡಪ್ಪನವರು [illegible] ಅಡ್ವೋಕೇಟ್ ಜಾ| [illegible] ವೆ|| ಸಂಗಪ್ಪನವರು [illegible] ಧರ್ಮಾರ್ಥವಾಗಿ ಕೊಟ್ಟರು [illegible] ಭಕ್ತಮಹೋತ್ಸವರಿಗೆ [illegible] ಕೊಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ಹಾಸ್ಟೆಲ್ ಶೋಧ ಕ್ರಮ

ಬೆಂಗಳೂರು ಶ್ರೀಶಂಕರದೇವರಮಠದ ಶ್ರೀ|| ಗಳವರು ಹಾಸ್ಟೆಲ್ [illegible] ವನ್ನು ಬೆಂಗಳೂರಿನಲ್ಲಿ [illegible] ಬೆಂಗಳೂರಿನಲ್ಲಿರುವ [illegible] ಅವರ [illegible] ಇತರ [illegible] ಅಲ್ಲದೆ ಭಕ್ತರ [illegible] ಅವರ ಆಹಾರಾದಿಗಳನ್ನು [illegible] ಉದ್ದೇಶ ವಾಗಿದೆ. [illegible] ಬೆಂಗಳೂರಿನ [illegible] ಈ ವಿಧವಾದ [illegible] ಅನೇಕ ಗುರುಗಳನ್ನು [illegible] ಅನಾಥಾಲಯಗಳು ಬಹುಮಟ್ಟಿಗೆ [illegible] ಶ್ರೀಗಳವರು ತಮ್ಮ ಮಠದ [illegible] ಕಟ್ಟಡವನ್ನು [illegible] ಶ್ರೀ ಚಿಕ್ಕಣ್ಣನವರು [illegible]

ಬಸವಯುಗದ [illegible] ಗಳ ಹತ್ತಿರ [illegible] ಸಂಗ್ರಹ [illegible] ವ್ಯಾಧಿ ಇರುವ [illegible] ಆವರೆಗೂ [illegible] ಇದು ಬಹಳ ಅವಶ್ಯವಾಗಿದೆ

ಹುಕ್ಕೇರಿ

ಶ್ರೀಚಿತ್ರಪ್ಪ ಮಹಾಸಭೆ

[illegible] ಮಹಾಸಭೆಯ ಬಗ್ಗೆ ತಮ್ಮ ಪತ್ರಿಕೆಯ [illegible] ಜ್ಯೂನ್ ಪತ್ರದಲ್ಲಿ [illegible] ಎಂಬುವರು ಮಹಾಸಭೆಯ ಕಾರ್ಯದರ್ಶಿಗಳು, ಮತ್ತು [illegible] ಸ್ಥಳದಲ್ಲಿ ಆಗಬೇಕೆಂದು ಸೂಚನೆ ಮಾಡಿದ್ದಾರೆ. ಆದರೆ [illegible] ಬಳ್ಳಾರಿ, ಮೈಸೂರು ಪ್ರಾಂತ್ಯಗಳು, [illegible] ಬಾಗಲಕೋಟೆ, ಬೆಳಗಾಂವ ಮತ್ತು [illegible] ಕೊಲ್ಹಾಪುರ ಮತ್ತು ವಿಜಾಪುರ, [illegible] ಊರುಗಳಲ್ಲಿ ಆಗಿರುತ್ತವೆ ಆದ್ದರಿಂದ ಈಗಿನ ಪ್ರಾಂತಗಳಲ್ಲಿ ಶಿಕ್ಷಣದ [illegible] ತಿಳಿದು ಅಲ್ಲಿ [illegible] ಗಳೂ, [illegible] ಗಳೂ, [illegible] ಸ್ಥಾಪಿಸಿರುತ್ತವೆ. ಪರಂತು ಮೊಗಲಾಯಿ ಪ್ರಾಂತದಲ್ಲಿ ಇರುವ ನಮ್ಮ ವೀರಶೈವ ಬಾಂಧವರು ಮಾತ್ರ ಇನ್ನೂ ಅಜ್ಞಾನದಲ್ಲಿ ಮುಳುಗಿದ್ದಾರೆ. ಮೊಗಲಾಯಿ ಪ್ರಾಂತದ ಪೈಕಿ ಹೈದರಾಬಾದು ಅಥವಾ ಕಲಬುರ್ಗಿಯಲ್ಲಿ ಮಹಾಸಭೆಯು ನೆರವೇರಿದರೆ ಬಹಳ ಉತ್ತಮ. ಆಗುವದು [illegible] ಮಹಾಸಭೆಯನ್ನು [illegible] ರಾವಸಾಹೇಬ ಸಿಂತ್ರಿಕುರ್ಕಿ [illegible] ತಮ್ಮ [illegible] ನೆರವೇರಿಸಿದರೋ ಅದೇ ಪ್ರಕಾರ ಮೊಗಲಾಯಿ ಪ್ರಾಂತಕ್ಕೆ ಪ್ರಸಿದ್ಧರಾಗಿರುವ [illegible] ರುದ್ರಪ್ಪ ಅಣ್ಣಾಸಾಹೇಬ [illegible] ಸೋಲಾಪುರ ಮಹಾಸಭೆಯಲ್ಲಿ ಮುಂದಿನ ಸಾರಿ ಮಹಾಸಭೆಯು ಹೈದರಾಬಾದಿನಲ್ಲಿ ಮಾಡುವದಕ್ಕೆ ವಿನಂತಿಮಾಡಿದ್ದರು. ಹೀಗಿದ್ದ ಮೇಲೆ ಇವರು [illegible] ಬಿರುದಾವಾದಿ ಸಾವಿರಾರು ವೀರಶೈವರ ಮತ್ತು ವೀರಶೈವೇತರರ ಧರ್ಮಾಲಯವನ್ನು ಮಾಡಿಕೊಟ್ಟು ಬಹು ಕೀರ್ತಿ [illegible] ಆದ್ದರಿಂದ ಇನ್ನಾದರೂ ಸ್ಟ್ಯಾಂಡಿಂಗ ಕಮಿಟಿಯು [illegible] ಕೇಳಿದರೆ ಶ್ರೀಮಂತ [illegible] ಇವರು ಮಹಾಸಭೆಯ ಪವಿತ್ರ ಕೆಲಸವನ್ನು ಮಾಡುವದಕ್ಕೆ ಸಿದ್ಧರಿರುವರು. ಆದರೆ ಸ್ಟ್ಯಾಂಡಿಂಗ ಕಮಿಟಿಯವರು ಈ ಬಗೆಗೆ ವಿಚಾರಮಾಡಬೇಕೆಂದು ನನ್ನ ವಿನಂತಿ

ಶಿವಶಂಕರಪ್ಪ ಜೀರಗೆ, ಸೋಲಾಪುರ

ವೀರಶೈವ ಕನ್ಯೆಯು ಬೇಕು

ಶೀಲವಂತ, ದೀಕ್ಷಾವಂತ, ಅಥವಾ ಪಂಚಮಶಾಲೆ [illegible] ಸ್ವರೂಪ, ಕುಲೀನ, ಸುಶೀಲ, [illegible] ವರ್ಷದ ವೀರಶೈವ ಕನ್ಯೆ ಬೇಕು. ಶಿಕ್ಷಣವಾಗಿ ಇದ್ದರೆ ಬಹಳ ಉತ್ತಮ (ವರದಕ್ಷಿಣೆ ಕೊಡುವುದಿಲ್ಲ) ಕನ್ಯೆಯ ಫೋಟೋ ಕಳಿಸಬೇಕು.

ವರನು ಶೀಲವಂತ ಶಾಖೆಯ [illegible] ಇದ್ದು [illegible] ಇದ್ದಾರೆ ಮತ್ತು [illegible] ಉತ್ಪನ್ನ [illegible] ಸಾವಿರ ಇರುತ್ತದೆ. [illegible]

ಅಯ್ಯಪ್ಪ ಶೀಲವಂತ [illegible] ಸೋಲಾಪುರ

ಜಾಹೀರ—ವಿನಂತಿ

ನಮ್ಮ ಜಿಲ್ಲೆಯಲ್ಲಿಯೂ ಇನ್ನು ಇತರ ಪ್ರಾಂತಗಳಲ್ಲಿಯೂ ಸ್ತ್ರೀಯರು [illegible] ಹತ್ತು ಗಳನ್ನು [illegible] ದನಗಳಿಗೆ [illegible] ಅದರಿಂದ ಆಗಿ ಎಷ್ಟು ತಕ್ಕ [illegible] ಚಿಕಿತ್ಸೆ [illegible] ರೋಗ [illegible] ಆಶ್ಚರ್ಯವೆಂದು [illegible]

ನಾವು [illegible] ತೇದಿ ಜ್ಯೇಷ್ಠ [illegible] ಸೋಮವಾರ ಹಗಲು [illegible] ಗಂಟೆಯಿಂದ ನಮ್ಮ ಎತ್ತನ್ನು [illegible] ನೋಡಬೇಕೆನ್ನುವವರು ಬರುವ [illegible] ಮಿತ್ರಭಾವದಿಂದ [illegible] ತಮ್ಮ

[illegible] ಬಳ್ಳಾರಿ ಜಿಲ್ಲೆ [illegible] ಶಿವರಪ್ಪ

ಬಂಧುಸ್ತೋದಯ.

(ಇಂಗ್ಲೀಷು ಕನ್ನಡ ಸಾಪ್ತಾಹಿಕ ವರ್ತಮಾನಪತ್ರ)

ಇದು [illegible] ತಿಂಗಳಿಂದ ಪ್ರತಿ ಸೋಮವಾರ ಪ್ರಸಿದ್ಧವಾಗುವದು. ಇದರಲ್ಲಿ [illegible] ವಿಷಯಗಳು [illegible] ಸ್ಥಾನಿಕ ಮತ್ತು ವಿವಿಧ ವರ್ತಮಾನಗಳು ಬರುವವು. ಇದರ ವಾರ್ಷಿಕ ಚಂದಾ [illegible] ರೂಪಾಯಿ [illegible] ಇದರ [illegible] ಸುಪ್ರಸಿದ್ಧ [illegible] ಸಂಗಡ [illegible] ನಮ್ಮ [illegible] ಬಂಧುಸ್ತೋದಯ

ಉಪಯುಕ್ತಿಗಳು

7

ವಿದ್ಯಾರ್ಥಿಗಳಿಗೆ ಉಪಯುಕ್ತಿಗಳು [illegible] ಕಸ್ತೂರಿ ಬಿಲ್ಲೆ [illegible] ಸುಗಂಧ [illegible] ಪ್ರಶಂಸಾಪತ್ರ [illegible] ಬಾಲಗ್ರಹದೂರ [illegible] ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ ಎಲ್ ಉಪಾಧ್ಯಾಯ,
ಸುಗಂಧಶಾರಿ, ಮೈಸೂರು

ಮನೆಯಲ್ಲಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ನೀರು ಕೊರೆಯುವ ಸ್ಥಳಗಳಲ್ಲಿಯೂ ಆರೋಗ್ಯವನ್ನು

3 ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀ ಕಸ್ತೂರಿ ಮಾತ್ರೆ

[illegible] ದೇಶದ ಕಸ್ತೂರಿ—ಅನೇಕ ಪುಟಗಳಿಂದ [illegible] ತಯಾರಿಸಿದ [illegible] ಈ ಕಸ್ತೂರಿಮಾತ್ರೆಗಳು [illegible] ತಾಂಬೂಲವನ್ನು [illegible] ಆರೋಗ್ಯವನ್ನು [illegible]

[illegible] ಆಯುರ್ವೇದ [illegible] ಛಳಿ ಜ್ವರ— [illegible] ಕೆಮ್ಮು— [illegible] ಬಾಲರೋಗಗಳು [illegible] ಈ ಮಾತ್ರೆಗಳನ್ನು ಪರೀಕ್ಷಿಸಿದ [illegible] ವಿ. ಪಿ. ಖರ್ಚು ಪ್ರತ್ಯೇಕ.

ಆಯುರ್ವೇದ — [illegible]

[illegible]

ಲಗ್ನಪತ್ರಿಕೆಗಳ ಮುದ್ರಣಕ್ರಮ.

[illegible] ಗಿರಿಜಾಕಲ್ಯಾಣ, [illegible] ಲಗ್ನಪತ್ರಿಕೆಗಳನ್ನು [illegible] ಅಕ್ಷರಗಳಿಂದ [illegible] ಲಗ್ನಪತ್ರಿಕೆಗಳ [illegible] ಬೇಕಾದರೆ [illegible] ಪತ್ರಿಕೆಗಳನ್ನು [illegible] ಮುದ್ರಿಸಿ ಕಳುಹಿಸುವುದಲ್ಲದೆ, [illegible] ಮೊದಲಾದ [illegible] ಬೇಕಾದರೆ [illegible]

ಮ್ಯಾನೇಜರ್

ಫಕ್ತ ವನಸ್ಪತಿಯಿಂದಲೇ ತಯಾರಿಸಿದ

ದಾತುಪೌಷ್ಟಿಕ ಲೇಹವು.

27

ರಕ್ತಶುದ್ಧಿ ಮತ್ತು ರಕ್ತವೃದ್ಧಿಯು ಮೇಲೆ ಅತಿಉತ್ತಮವು. ಬೇಶ! (ಗುಣವಾಗದಿದ್ದರೆ ಹಣ ವಾಪಸ !!) ಬೇಶ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ಎಳತರೋಗವುಳ್ಳವರು, ರಕ್ತಪಿತ್ತೋತ್ಪಾದನರು, ತೃಷೆಯುಳ್ಳವರು, ದಮ್ಮುಳ್ಳವರು, ಕೆಮ್ಮುವವರ ಕಫವು ಉಂಟಾದವರು, ಮೂಲವ್ಯಾಧಿಯುಳ್ಳವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ದಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತ ಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರಕ್ತಪುಷ್ಟಿಗೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೩೦ ದಿವಸದಿಂದ ೪೦ ದಿವಸದವರೆಗೆ ಬೇಕಾಗುವಷ್ಟು ಶೀಷೆ [illegible] ರೂ ೨-೮-೦, ೮೦ ತೊಲೆಗೆ [illegible] ಡಾಕಿನ ಖರ್ಚು [illegible] ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಬಿ ಎಲ್ ಜೋಶಿ ಮತ್ತು ಕಂಪೆನಿ,

ಪೋಸ್ಟ್ [illegible]

37

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಂ., ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಂಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎಸ್. ಮತ್ತು ಕಂಪೆನಿ,
ಬನಾರಿಸ್ ಸಿಟಿ. (ಕಾಶೀ)

ಅಗ್ಗವಾದ ಮಾಲುಗಳು.



S.N.RUDRAKSHA & CO.
BENARES CITY.

ನಮ್ಮಲ್ಲಿ ಉತ್ತಮವಾದ ನೇಪಾಳ ರುದ್ರಾಕ್ಷಿ ಉತ್ತಮವಾಗಿಯೂ ಗಟ್ಟಿಯಾಗಿಯೂ ೪ ಮುಖದಿಂದ ೧೪ ಮುಖದವರೆಗೆ ಸಣ್ಣದು ದೊಡ್ಡದು ಸಹ ಈ ಎಲ್ಲವು ನಮೂನೆಯಲ್ಲಿ ದೊರೆಯುವುದು. ಮತ್ತು ಇವುಗಳಲ್ಲದೆ ರೇಷ್ಮೆ ಮುಂಗಟ, ಕಾಶ್ಮೀರ ಶಾಲು, ರೇಷ್ಮೆ ಜರೀ ಸೀರೆ, ಜರಿಕಣ, ಪೇಟ, ಜೋಳಿಗಾಲ್ಸರು ನಮೂನೆ ವಸ್ತ್ರ ಜಗನ್ನಾಥ ಜಾಗಟೆ, ನೇಪಾಳ ಕಸ್ತೂರಿ, ಉತ್ತಮವಾದ ಜರ್ಡಿ ಛಾದರ್ ಮೊದಲಾದ ಅಮೂಲ್ಯವಾದ ಸಾಮಾನು ಎಲ್ಲವರಿಗಿಂತಲೂ ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಇಚ್ಛಿಸಿದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುವುದು.

ರುದ್ರಾಕ್ಷಿಗ

೪ ಮುಖದ ರುದ್ರಾಕ್ಷಿ ಕ [illegible] ಗಳು

ದ ಎಲ ೧ಕ್ಕೆ ೧೨ ಆಣೆಯಿಂದ ೩೦ ರೂಪಾಯಿವರೆಗೆ ೫ ಮುಖದ ಕಂಠಿ ೧ಕ್ಕೆ ೮ ಆಣೆಯಿಂದ ೨೦ ರೂಪಾಯಿವರೆಗೆ ೬ ಮುಖದ ಕಂಠಿ ೧ಕ್ಕೆ ೧೨ ಯಿಂದ ೧೦೦ ರೂ. ವರೆಗೆ. ೭ ಮುಖದ ಕಂಠಿ ೧ಕ್ಕೆ ೧೦ ರೂ. ಯಿಂದ ೧೫೦ ರೂ. ವರೆಗೆ. ಇದರಂತೆ ೮, ೯, ೧೦, ೧೧, ೧೨, ೧೩, ೧೪, ಈ ಮುಖಗಳ ಮಣಿ ೧ಕ್ಕೆ ೫ ರೂ. ಯಿಂದ ೩೦ ರೂ ವರೆಗೆ. ಇದರಲ್ಲಿಯೇ ಕಂಠಿ ಬೇಕಾದರೆ ಸಹ ದೊರೆಯುವುದು. ಸಣ್ಣ ರುದ್ರಾಕ್ಷಿ ಸರ ಅಂದರೆ ೧೦೮ ಮಣಿಯಿರುವ ತೊಗರಿಯು, ಉದ್ದಿನಕಾಳಿನ ಪ್ರಮಾಣದ ಸರ ೧ಕ್ಕೆ ರೂ. ೫ ರಿಂದ ರೂ ೨೦ ವರೆಗೆ. ಕಡಲೆ ಕಾಳು ಪ್ರಮಾಣದ ೧೦೮ ಮಣಿಯಿರುವ ಸರ ೧ಕ್ಕೆ ರೂ ೨-೮-೦ ಆರಂಭವಾಗಿ ರೂ. ೧೦ ವರೆಗೆ. ಜಪಮಾಲೆ ನೆಲ್ಲಿಕಾಯಿಯಿಂದ ಅವರೆ ಬೀಜದ ಪ್ರಮಾಣದ ೧೦೮ ಇರುವ ಸರ ೧ಕ್ಕೆ ೧೨ ಆಣೆಯಿಂದ ರೂ ೧೦ ವರೆಗೆ. ಸಾಧಾರಣ ತರ ೬ ಆಣೆಯಿಂದ ರೂ. ೩ ವರೆಗೆ. ಗೌರೀಶಂಕರ ರುದ್ರಾಕ್ಷಿ— ಈ ರುದ್ರಾಕ್ಷಿಯು ರುದ್ರಾಕ್ಷಿಗಳಲ್ಲೆಲ್ಲಾ ಶ್ರೇಷ್ಠವೆಂದು ಹೇಳುವರು. ರುದ್ರಾಕ್ಷಿ ಮಣಿ ೧ಕ್ಕೆ ರೂ ೫ ಆರಂಭವಾಗಿ ರೂ. ೫೦ ವರೆಗೆ. ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ವಿಳಾಸ— ಎಸ್. ನೇಪಾಳ ರುದ್ರಾಕ್ಷಿ ಅಂಡ್ ಕಂಪೆನಿ,

21 ಬನಾರಸ್ ಸಿಟಿ

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು — [illegible] ೦-೨-೦; ಚರಿತಾಮೃತಂ ೧-೫-೦, [illegible] ೧-೫-೦, ಹೀಬರಿಸಬರಿತೆ ೦-೨-೦, [illegible] ೨-೦; ಉನ್ಮತ್ತೆ ೦-೨-೬; ಸೀತೆ ೦-೫-೦; [illegible] ೦-೮-೦; ಮಹಾಲಕ್ಷ್ಮಿ [illegible]; [illegible]; ಪದ್ಮಿನಿ ೦-೨-೦; ಸತ್ಯಸಂಜೀವಿನಿ [illegible] ೦-೧೨-೦; ಆನಂದಮಠ [illegible]; ರಾಘವೇಂದ್ರ ೦-೩-೦; ಸೀತಾಪರಿಣಯ ೦-೧೨-೦; [illegible] ೦-೨-೦. 39

ಶ್ರೀಜಗದ್ಗುರು

ಚಿತ್ರದುರ್ಗದ ಮಠಾಧ್ಯಕ್ಷರುಗಳ ಅತ್ಯಂತ ಸುಂದರವಾಗಿ ಚಿತ್ರಿಸಿದ ಒಳ್ಳೆ ಹೊಳೆಯುವ ಫೋಟೋ ೧ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಪಲ್ಲಕ್ಕಿ ಉತ್ಸವದ ಫೋಟೋ ೧ಕ್ಕೆ ಕ್ರಯ ೧ ರೂ [illegible] ಕೊಲ್ಲಾಪುರದಲ್ಲಿ [illegible] ಸಮಾರಂಭದ ಫೋಟೋ ೧ಕ್ಕೆ ಕ್ರಯ ೧ ರೂಪಾಯಿ

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಜಾಸ್ಥಾನಿಕರ ಚಿತ್ರರೀತಿ, ಕಲ್ಪಿತವಲ್ಲ) ಕ್ರಯ [illegible] ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಧರನಾಗಿ ತನ್ನ ನೇತ್ರವನ್ನು [illegible] ಶ್ರೀ ಶಿವನ ಪೂಜಿಸುತ್ತಿರುವ ಫೋಟೋ ಕ್ರಯ ೧ಕ್ಕೆ ೧ ರೂಪಾಯಿ. ಶ್ರೀ ನಾರಸಿಂಹರ ವಧೆಯನ್ನು ಮಾಡಿರುವ ಶ್ರೀ ನರಸಿಂಹಾವತಾರದ ಫೋಟೋ ೧ಕ್ಕೆ ಕ್ರಯ ಫುಲ್ಸ್ಕ್ಯಾಪು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಯುದ್ಧ ! ಯುದ್ಧ !! ಯುದ್ಧ !!! ಎಂಬ ಮಾತು ಪ್ರಪಂಚದಮೇಲೆಲ್ಲಾ ಒಂದೇಸಮನಾಗಿ ಎಲ್ಲರ ಬಾಯಲ್ಲೂ ಕುಂಬಿದೆ. ನಮ್ಮ ಪರಿಪಾಲಕರಾದ ಆಂಗ್ಲಸಾರ್ವಭೌಮರವರು ಈಗಿನ ಯುದ್ಧದಲ್ಲಿ ಭಾಗಿಗಳಾಗುವುದರಿಂದ ನಮಗೂ ಈ ಯುದ್ಧದ ಸಂಬಂಧವು ಇದ್ದವಾಗಿದೆಯೋ ಅಗಿದೆ. ಆಂಗ್ಲಪ್ರಭುಗಳ ವಿಜಯವೇ ನಮ್ಮ ಸುಖಶಾಂತಿಗಳಿಗೆ ಸಾಧಕವಾದುದು. ಆದಕಾರಣ, ಈ ಯುದ್ಧದ ಕಷ್ಟಸುಖಗಳೆಲ್ಲಾ ಭಾರತೀಯರಿಗೂ ಒಂದು ವಿಧವಾಗಿ ಪೊತ್ತಿಗುತ್ತವೆಯೆಂದು ಹೇಳಬಹುದು. ಈ ಕಾರಣದಿಂದಲೇ ನಮ್ಮ ದೇಶದಲ್ಲಿರುವ ಸಕಲ ಸಾಮಂತರಾಜರುಗಳೂ, ಪ್ರಜಾಪ್ರಮುಖರೂ ತಮ್ಮ ಸರ್ವಸ್ವದಿಂದಲೂ ಆಂಗ್ಲಸಾಮ್ರಾಜ್ಯಕ್ಕೆ ಸಹಾಯವಾಡಲು ಸಿದ್ಧರಾಗಿರುವೆವೆಂದು ಶ್ರುತಪಡಿಸಿಕೊಂಡಿದ್ದಾರೆ. ಸಮಯಬಿದ್ದರೆ ಹಾಗೆ ಮಾಡಲು ಸಿದ್ಧರಾಗಿಯೂ ಇದ್ದಾರೆ. ಈ ದೇಶದಲ್ಲಿ ಸಾಮಂತರಾಜರುಗಳಿಂದ ದೊರೆಯುವ ಸೈನ್ಯ ಮೊದಲಾದುವುಗಳನ್ನು ಯುದ್ಧಾಂಗಣಕ್ಕೆ ಕಳುಹಿಸಿಕೊಡುವ ಅವಶ್ಯಕತೆ ಏಳದೆ ಹೋಗಬಹುದು. ಅಂಥ ಸಮಯದಲ್ಲಿ ಯುದ್ಧದಲ್ಲಿ ಹತರಾದವರ ಸಂಬಂಧಿಗಳಿಗೆ ಸಹಾಯಮಾಡುವುದೇ ಮೊದಲಾದ ಕೆಲಸಗಳಿಗಾಗಿ ಬೇಕಾದ ಹಣವನ್ನು ಕಳುಹಿಸುವುದು ಅವಶ್ಯಕವಾಗಿರುವುದರಿಂದ ನಮ್ಮ ಪ್ರಿಯತಮರಾದ ವೈಸ್‌ರಾಯರು ಒಂದು ನಿಧಿಯನ್ನು ಕೂಡಿಸಲು ನಿರ್ಧರಿಸಿದ್ದಾರೆ. ಅದಕ್ಕೆ ಸಂಬಂಧಪಟ್ಟ ಅವರ ವಿಜ್ಞಾಪನಪತ್ರಿಕೆಯನ್ನು ಈ ಪತ್ರದ ಬೇರೊಂದು ಕಡೆಯಲ್ಲಿ ಮುದ್ರಿಸಿದ್ದೇವೆ. ಈ ನಿಧಿಕೋಶದ ಕಾರ್ಯದಲ್ಲಿ ವೈಸ್‌ರಾಯರೇ ಅಧ್ಯಕ್ಷರಾಗಿಯೂ ನಮ್ಮ ಶ್ರೀಮನ್ಮಹಾರಾಜರವರೇ ಮೊದಲಾದ ಅನೇಕ ಪ್ರಭುಗಳು ಸಭಿಕರಾಗಿಯೂ ಮಾಡಲ್ಪಟ್ಟಿದ್ದಾರೆ. ಸಮುಚಿತವಾದ ಈ ಪ್ರಯತ್ನದಿಂದ ಲಕ್ಷಾಂತರ ರೂ. ಗಳು ಸ್ವಲ್ಪ ಕಾಲದೊಳಗಾಗಿ ಕೂಡಿಸಲ್ಪಡುವುದರಲ್ಲಿ ಆಶ್ಚರ್ಯವಿಲ್ಲ. ಭಾರತೀಯರ [illegible] ಗಳ ರಾಜಭಕ್ತಿಯು ಏರಿಪಟ್ಟಿರುವಂತೆ [illegible] ಆಂಗ್ಲ

ಪ್ರಜೆಗಳಿಗೂ ಗೊತ್ತಾಗಿ, ಎಂದಿಗೂ ಮರೆಯದಂತೆ ಅವರ ಸ್ಮರಣೆಯಲ್ಲಿ ನೆಲಸುವುದಕ್ಕೆ ಈಗಿನ ಸಮಯವು ದೈವಾಯತ್ತವಾದಂತೆ ಕಾಣಿಸುತ್ತದೆ. ಇದನ್ನು ಸಫಲಗೊಳಿಸುವಂತೆ ಭಾರತೀಯರೆಲ್ಲರೂ ನಡೆಯಲು ಒಮ್ಮನಸ್ಸಿನಲ್ಲಿರುವುದು ಅತ್ಯಂತ ಸಂತೋಷಪ್ರದವಾಗಿದೆ.

ಕಲ್ಕತ್ತಾ ಮೊದಲಾದ ಕೆಲವು ಪಟ್ಟಣಗಳಲ್ಲಿರುವ ಬ್ಯಾರಿಸ್ಟರುಗಳೂ, ವಕೀಲರುಗಳೂ ಸ್ವತಃ ಯುದ್ಧಕ್ಕೆ ಹೊರಡಲು ಸಿದ್ಧರಾಗಿ ತಮ್ಮ ಅಭಿಪ್ರಾಯವನ್ನು ಗವರ್ನಮೆಂಟಿಗೆ ಶ್ರುತಪಡಿಸಿದ್ದಾರೆ. ಈ ವಿಷಯದಲ್ಲಿ ಇವರು ತೋರಿಸಿರುವ ಸಾಹಸಾತ್ಮಾಗಪೂರ್ವಕವಾದ ರಾಜಭಕ್ತಿಯು ಅಭಿನಂದನೀಯವಾಗಿದೆ. ಆದರೆ ಆರ್ಮಿಯೂ ಬುದ್ಧಿಕ್ಲೇಶದಲ್ಲಿ ತೊಡಗಿ, ನಿರ್ವೀರ್ಯರಾಗಿರುವ ವಕೀಲರ ಮಂಡಲಿಯು ಮಹೋನ್ನತ್ತರಾದ ಶತ್ರುಸೈನಿಕರ ಮುಂದೆ ಏನನ್ನು ತಾನೇ ಮಾಡಬಲ್ಲರು ? ಇದು ಪುಸ್ತಕಗಳ ಮುಂದಿನ ಯುಗ್ಮವ ? ನ್ಯಾಯಾಧೀಶರ ಮುಂದಣ ವಾಗ್ವಾದವೇ ? ಇವರ ಲೇಖನಿಗಳು ಅಗ್ನಿಯಸ್ತ್ರಗಳೇ ? ಇವರ ಪುಸ್ತಕೋಪಕರಣಗಳು ವಜ್ರಕವಚಗಳೇ ? ಎಂದಿಗೂ ಅಲ್ಲ. ಆ ಕಾರಣ, ಇವರು ದೇಶಾಭಿಮಾನವನ್ನು ತೋರಿಸ ಹೋಗುವ ಕಾದ ಆ ಪ್ರತ್ಯಕ್ಷ ಯುದ್ಧದ ಸಾಹಸವನ್ನು ಮಾಡಹೊರಡುವುದಕ್ಕಿಂತಲೂ ಕುಳಿತಲ್ಲಿಯೇ ತಮ್ಮ ಆ ಅಭಿಮಾನವನ್ನೂ ರಾಜಭಕ್ತಿಯನ್ನೂ ಸಂಪಾದಿತ ದ್ರವ್ಯವನ್ನು ಕೊಡುವ ವೈಸ್‌ರಾಯರು ಕಲ್ಪಿಸುವ ನಿಧಿಗೆ ಒದಗಿಸಿಕೊಡಲು ಭರತಖಂಡದ ಎಲ್ಲ ವಕೀಲರಿಗೂ ನೀಳಗಂತಿಯನ್ನು ಪಾಠಿಸಿಕೊಡುವುದೇ ಸಮುಚಿತವಾಗಿರುವುದೆಂದು ಶ್ರುತಪಡಿಸುತ್ತೇವೆ.

ಭರತಖಂಡವನ್ನೆಲ್ಲಾ ಈ ಸಮಯದಲ್ಲಿ ತಮ್ಮ ಪ್ರಭುಗಳ ಶ್ರೇಯಸ್ಸನ್ನು ಕೋರಿ, ನಾನಾ ಧದ ಸ್ವಾರ್ಥತ್ಯಾಗ ನ್ನು ಮಾಡಲು ಸಿದ್ಧರಾಗಿರುವಾಗ, ನಮ್ಮ ದೇಶದ ಅನೇಕ ವರ್ತಕರು ಸ್ವದೇಶಸ್ವಜನಾಭಿಮಾನವಿಲ್ಲದೆ ಸ್ವಾರ್ಥಪರರಂತೆ ಪ್ರವರ್ತಿಸಿ, ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿ, ಮಧ್ಯಮತರಗತಿಯ ಮತ್ತು ಕನಿಷ್ಠವರ್ಗದ ಜನರಿಗೆ ಬಹಳ ತೊಂದರೆಯನ್ನು ಮಾಡಿರುವ ವಿಷಯವು ಶೋಚನೀಯವಾಗಿರುತ್ತದೆ. ಸ್ವದೇಶದ ಸಾಮಗ್ರಿಗಳಿಗೆ ಈ ಯುದ್ಧದ ಸಂಬಂಧವನ್ನು ಬೆಲೆಯನ್ನು ಹೆಚ್ಚಿಸಲು ಕಾರಣವೇ ಇರುವುದಿಲ್ಲ. ವಿದೇಶ ಸ್ವಾಗತ ಎರುವುದಕ್ಕೆ ಕಟ್ಟೋರ್ಪಾಡನ್ನು ಸಾರ್ವಭೌಮ ಸರ್ಕಾರದವರು ಮಾಡಿಯೂ ಮಾಡುತ್ತಲೂ ಇದ್ದಾರೆ. ಒಂದು ವೇಳೆ ಈಗಿನ ಯುದ್ಧವು ೬-೮ ತಿಂಗಳೊಳಗೆ ಮುಗಿಯದ ವಿಷಯವಾಗಿಬಿಟ್ಟರೆ ಪರದೇಶವಸ್ತುಗಳಿಗೆ ಅಭಾವವು ಒದಗಿದರೂ ಅವುಗಳ ಕೊರತೆಯು ನೂರು ಸಂಭವಿಸಲಾರದು. ಭರತಖಂಡದಲ್ಲೂ ಇಂಗ್ಲೆಂಡಿನಲ್ಲೂ ನಾಣ್ಯಗಳಿಗೆ ಕೊರತೆಯೇನೂ ಇಲ್ಲವೆಂದು ಸರ್ಕಾರದವರು ಪ್ರಸಿದ್ಧಪಡಿಸಿದ್ದಾರೆ. ಸರ್ಕಾರದಲ್ಲಿ ನವರನ್ನುಗಳ ಮತ್ತೂ ನೋಟುಗಳ ಬೆಲೆಯಲ್ಲಿ ಯಾವ ಹೆಚ್ಚು ಕಡಿಮೆಯೂ ಇಲ್ಲ. ಹೀಗಿದ್ದರೂ ಮಧ್ಯದ ವರ್ತಕರು ಜನರಿಗೆ "ಗಾಬರಿ" ಹುಟ್ಟಿಸಿ, ಪದಾರ್ಥಗಳ ಬೆಲೆಯನ್ನು ಏರಿಸಿ, ನೋಟುಗಳ ಬೆಲೆಯನ್ನು ಕ್ಷೀಣಗೊಳಿಸಿ ವಂಚನೆಮಾಡುತ್ತಿರುವುದು ಅನ್ಯಾಯವಾಗಿದೆ. ಬೊಂಬಾಯಿ ಬಂಗಾಳಾ ಮೊದಲಾದ ಕಡೆಗಳಲ್ಲಿ ಸ್ಥಳಾಧಿಕಾರಿಗಳು ಇಂಥ ವರ್ತಕರ ಮೇಲೆ ಕಠಿಣ ಕ್ರಮವನ್ನು ಅನ್ಯಾಯವನ್ನು ಸಂಪೂರ್ಣವಾಗಿ ಮಾಡಿಸಿ ನಿಲ್ಲಿಸಿಬಿಟ್ಟಿದ್ದಾರೆ. ಅಲ್ಲಲ್ಲಿ ಪದಾರ್ಥಗಳ ಬೆಲೆಯು ಬೇಗ ಕಡಿಮೆಯಾಗುತ್ತಲೂ ಇದೆಯೆಂದು ತಂತಿ ವರ್ತಮಾನಗಳು ಸಾರುತ್ತಿವೆ. ಇಂಥ ಏರ್ಪಾಟನ್ನು ಎಲ್ಲ ಸರ್ಕಾರದಧಿಕಾರಿಗಳೂ ಮಾಡುವುದವಶ್ಯಕವಾಗಿದೆ. ಸರ್ಕಾರದಿಂದ ಹೇಳಿಸಿಕೊಂಡು ಬಲಾತ್ಕಾರದಿಂದ ವರ್ತಕರು ತಮ್ಮ ಅನ್ಯಾಯವನ್ನು ಬಿಡಿ ಕೊಳ್ಳುವುದಕ್ಕಿಂತಲೂ ತಮ್ಮ ಸಹೋದರ ಪ್ರಜೆಗಳ ಹಿತಚಿಂತನೆಯ ಕಡೆಗೆ ಗಮನವಿತ್ತು ತಾವೇ ನಡೆಸಿಕೊಂಡರೆ ಸ್ವಜನಪ್ರೀತಿಯೂ ಉಳಿವುದು. ದೇವರೂ ಮೆಚ್ಚುವನು.

ಈಗಿನ ಯುದ್ಧಕ್ಕೂ ಪೂರ್ವಕಾಲದ ಯುದ್ಧಕ್ಕೂ ಸಂಬಂಧವೇ ಇಲ್ಲ. ಆಗ ಯುದ್ಧ ಸಂಭವಿಸಿತೆಂದರೆ ಊರುಕೇರಿಯ ಜನರೆಲ್ಲಾ ಗಂಟು ಮೂಟೆ ಕಟ್ಟಿ, ಕಾಡಿನ ಪಾಲಾಗಬೇಕಾಗುತ್ತಿದ್ದಿತು. ಶತ್ರುಗಳು ನುಗ್ಗಿದ ಊರುಗಳೆಲ್ಲಾ ಸ್ಮಶಾನವಾಗುತ್ತಿದ್ದಿತು. ದೇಶವೆಲ್ಲಾ ಹಾಳಾಗುತ್ತಿದ್ದಿತು. ಈಗಿನ ಸ್ಥಿತಿಯು ಹಾಗಿಲ್ಲ. ಯುದ್ಧವು ಧರ್ಮಯುದ್ಧವಲ್ಲದಿದ್ದರೂ, ವೈರಿಗಳು ಶಸ್ತ್ರಧರರಲ್ಲದವರೂ ಪ್ರಜೆಗಳಿಗೆ ಹಿಂಸೆಯನ್ನು ಕೊಡುವುದು ಅನ್ಯಾಯವೆಂದು ತಿಳಿಯಲ್ಪಟ್ಟಿದೆ. ಆದುಕಾರಣ ಯುದ್ಧಾಭಿನೋವೇದೇವತೆಯು ಸಮೀಪದಂತೆ ಜನಗಳಿಗೆಲ್ಲಾ ಪ್ಲೇಗಿನ ರೋಗವು ಮೊದಲಾದ ದೇವತೆಗಳಿಗೆ ಬೇಕಾಗುವುದು ತಪ್ಪಿಸಲು ಹೋರಾಡುವಾಗ ಸಂಕಟವೂ ಸಂಭವಿಸುವುದು ವಿರಳ. ನಮ್ಮ ಭರತಖಂಡದಲ್ಲಿ ಪ್ರತ್ಯಕ್ಷ ಯುದ್ಧವು ಇಲ್ಲದಿರುವುದರಿಂದ ಅದರ ಕಾವಳಿಯೂ ಪ್ರತ್ಯಕ್ಷವಾಗಿ ನಮಗೆ ತಟ್ಟುವ ಸಂಭವವಿಲ್ಲ. ಆದುಕಾರಣ, ಎಲ್ಲ ವ್ಯವಹಾರಗಳನ್ನೂ ಭಾರತೀಯರು ಶಾಂತಿಯಿಂದ ನಡೆಯಿಸಿಕೊಂಡು ಹೋಗುವಲ್ಲಿ ಅಭ್ಯಂತರವೇನೂ ಇಲ್ಲ.

ಈ ಯುದ್ಧದ ಪರ್ಯವಸಾನವೇನೆಂಬುದನ್ನು ಈಗಲೇ ಊಹಿಸಿ ಹೇಳುವುದು ಅಸಾಧ್ಯ. ಜಯಾಪಜಯಗಳು ದೈವಾಯತ್ತವಾಗಿದ್ದರೂ, ಉಭಯಪಕ್ಷಗಳ ಸೇನಾಬಲ, ದ್ರವ್ಯಬಲ, ಸಾಧನಸಾಮಗ್ರಿಯಬಲ, ಸೇನಾನಾಯಕರ ಯುಕ್ತಿಸಾಹಸಬಲ ಮೊದಲಾದುವುಗಳನ್ನು ಕೂಡ [illegible] ಸ್ವಲ್ಪಮಟ್ಟಿಗೆ ಊಹಿಸಿಕೊಂಡಿರುವ [illegible] ಹಿಡಿದು ಜರ್ಮನಿ [illegible] ಅಭಿಪ್ರಾಯವೇ, ನಮ್ಮ [illegible] ಕಟುಹೊಂಗು

ವುದು ಖಂಡಿತವೆಂದು ಹೇಳಬೇಕಾಗುತ್ತದೆ. ಈ ಪಕ್ಷದಲ್ಲಿ ಇಂಗ್ಲೆಂಡು-ಫ್ರಾನ್ಸು-ರಷ್ಯಾ-ಜಪಾನ್-ಎಂಬ ದೊಡ್ಡ ರಾಷ್ಟ್ರಗಳು ನಾಲ್ಕು, ಬೆಲ್ಜಿಯಂ-ಸರ್ವಿಯಾ-ಮಾಂಟಿನೀಗ್ರೋ ಎಂಬ ಸಣ್ಣ ರಾಷ್ಟ್ರಗಳೂ ಸೇರಿರುತ್ತವೆ. ಇದಿರುಪಕ್ಷದಲ್ಲಿ ಜರ್ಮನಿ-ಆಸ್ಟ್ರಿಯಾ-ಎಂಬ ಎರಡು ದೊಡ್ಡ ರಾಷ್ಟ್ರಗಳು ಮಾತ್ರ ಇರುತ್ತವೆ. ಅಲ್ಲದೆ, ನ್ಯಾಯಧರ್ಮಗಳ ಬಲವೂ ನಮ್ಮ ಪಕ್ಷಕ್ಕೇ ಇದೆ. ಜರ್ಮನಿಯವರು ಉದ್ಧತತನದಿಂದಲೂ ಪರೋತ್ಕರ್ಷಾಸಹಿಷ್ಣುತೆಯಿಂದಲೂ ಕಾಲುಕೆರೆದು ಜಗಳವನ್ನು ತೆಗೆದು ಪ್ರಪಂಚದ ಮೇಲೆ ಮಹದನರ್ಥಕ್ಕೆ ಕಾರಣಭೂತರಾಗಿರುವುದರಿಂದ, ಅನ್ಯಾಯ-ಅಧರ್ಮಗಳು ಅವರನ್ನು ಆಶ್ರಯಮಾಡಿಕೊಂಡಿವೆ. ಯುದ್ಧಾರಂಭವಾದಂದಿನಿಂದ ಇದುವರೆಗೆ ಬಂದಿರುವ ಸುದ್ದಿಗಳಲ್ಲಿ ಜರ್ಮನಿ-ಆಸ್ಟ್ರಿಯಾದವರಿಗೆ ಪರಾಜಯಗಳೂ, ಇದಿರುಪಕ್ಷದವರಿಗೆ ಜಯಗಳೂ ಆಗುತ್ತಿವೆಯೆಂದು ಗೊತ್ತಾಗಿರುವುದರಿಂದ ಜಯಲಕ್ಷ್ಮಿಯು ಬಲವು ಹೆಚ್ಚುಕಡೆಗೆ ಇರುವುದೆಂಬುದು ತಿಳಿಯುತ್ತದೆ.

ಇದುವರೆಗೆ ಆದ ಯುದ್ಧಗಳಲ್ಲಿ ಸಣ್ಣವುಗಳೇ ಹೆಚ್ಚು. ೧-೨ ಕಡೆ ಮಾತ್ರ ೩೦ ಸಹಸ್ರದವರೆಗೆ ಸೇನೆಯು ಸೇರಿ ಕದನವಾಗಿದೆ. ಈಗ ಉಪಕ್ರಮವಾಗಿರುವ ಯುದ್ಧಗಳು ಮಹಾಸಂಗ್ರಾಮಗಳಾಗಿರುತ್ತವೆ. ಈಗಿನ ಮಹಾಭೂಯುದ್ಧದ ಸ್ಥಲವು ಜರ್ಮನಿ-ಫ್ರಾನ್ಸುಗಳ ಎಲ್ಲೆಯಲ್ಲಿರುತ್ತದೆ. ಇಂಗ್ಲೆಂಡು-ಫ್ರಾನ್ಸುಗಳ ಸೇನೆಯು ಆ ಯುದ್ಧಾಂಗಣಕ್ಕೆ ಬಂದು, ಸೇರುವುದಕ್ಕೆ ಇಷ್ಟುಕಾಲ ಹಿಡಿಯಿತು. ಇಷ್ಟರೊಳಗಾಗಿ ಜರ್ಮನಿಯವರು ಲುಕ್ಸೆಂಬರ್ಗ್-ಬೆಲ್ಜಿಯಮ್ಮುಗಳ ಮೇಲೆ ಹಾದು ಫ್ರಾನ್ಸಿಗೆ ನುಗ್ಗಿ ಪ್ಯಾರಿಸ್ ಪಟ್ಟಣಕ್ಕೆ ಮುತ್ತಿಗೆಹಾಕಬೇಕೆಂದು ಉದ್ದೇಶಮಾಡಿಕೊಂಡಿದ್ದಿತು. ಅದಕ್ಕಾಗಿ ೧೨ ಲಕ್ಷ ಸೇನೆಯನ್ನು ಆ ಕಡೆಗೆ ನುಗಿಸಬೇಕೆಂದು ಯೋಚಿಸಿದ್ದಿತು. ಆದರೆ ಬೆಲ್ಜಿಯಮ್ಮಿನವರು ತಮ್ಮ ದೇಶದ ಎಲ್ಲೆಯಲ್ಲೇ ಜರ್ಮನಿಗೆ ಪ್ರತಿಭಟಿಸಿ, ಅವರ ಉದ್ದೇಶವನ್ನು ನೆರವೇರಗೊಡಿಸದೆ ಹೋದುದು ಜರ್ಮನಿಗೆ ತನ್ನ ಬೆರಳನ್ನು ತಾನೇ ಕಚ್ಚಿಕೊಳ್ಳುವಂತೆ ಮಾಡಿತು. ಈಗಲಾದರೂ ಫ್ರಾನ್ಸು-ಇಂಗ್ಲೆಂಡು ಸೇನೆಗಳು ಒದಗಿಬಿಟ್ಟುವು. ಇನ್ನು ಜರ್ಮನಿಯವರ ಕಷ್ಟವು ಬಹಳ ಹೆಚ್ಚಾಗುವಂತಾಯಿತು. ಅವರು ಪಶ್ಚಿಮದಲ್ಲಿ ಬೆಲ್ಜಿಯಂ-ಫ್ರಾನ್ಸು-ಇಂಗ್ಲೆಂಡುಗಳವರೊಡನೆಯೂ, ಪೂರ್ವದಲ್ಲಿ ರಷ್ಯನರೊಡನೆಯೂ ಏಕಕಾಲದಲ್ಲಿ ಯುದ್ಧಮಾಡಬೇಕಾಗಿದೆ. ಇದುವರೆಗೆ ಕಳೆದ ೩೦ ವರ್ಷಗಳಿಂದಲೂ ಜರ್ಮನಿಯವರು ಸೇನಾಬಲ-ವ್ಯಾಪಾರಬಲ-ಕೈಗಾರಿಕೆಯಬಲ-ಮೊದಲಾದುವುಗಳಲ್ಲಿ ಬಹಳ ಉನ್ನತಿಯನ್ನು ಹೊಂದಿರುವರೆಂದು ಭಾವಿಸಲ್ಪಟ್ಟಿದ್ದರು. ಅವರ ಭೂಸೇನೆಯು ಪ್ರಪಂಚದಲ್ಲಿ ಅದ್ವಿತೀಯವೆಂದು ಹೇಳಲ್ಪಡುತ್ತಿದ್ದಿತು. ಅವರ ಆಕಾಶವಿಮಾನಗಳು ಎಲ್ಲರಿಗಿಂತಲೂ ಮಿಗಿಲಾದುವೆಂಬ ಪ್ರತೀತಿಯಿದ್ದಿತು. ಆದರೆ ಭೂಯುದ್ಧ-ಆಕಾಶಯುದ್ಧದಲ್ಲಿ ಜರ್ಮನಿಯವರು ಇದುವರೆಗೂ ತಮ್ಮ ಆ ಹೆಸರುವಾಸಿಯನ್ನು ಉಳಿಯಿಸಿಕೊಂಡಂತೆ ಕಾಣಲಿಲ್ಲ. ಅನೇಕಕಡೆಗಳಲ್ಲೂ ಹಲವುಕಡೆ ಪರಾಜಯವೇ ಸಂಭವಿಸಿದೆ. ಇನ್ನು ಜಲಯುದ್ಧದ ಫಲವು ಹೇಗೋ ನೋಡಬೇಕು. ಇದುವರೆಗೂ ಅದು ಕ್ರಮವಾಗಿ ನಡೆದ ಸುದ್ದಿಯು ಬಂದಿಲ್ಲ. ಜರ್ಮನಿಯವರಿಗೆ ಜಲಯುದ್ಧವೆಂಬುದು ಅತ್ಯಂತ ನೂತನವು. ಇಂಗ್ಲೆಂಡಿಗಾದರೋ ಕಳೆದ ೫೦೦ ವರ್ಷಗಳಿಂದ ಅತಿಶಯವಾದ ಪ್ರಾವೀಣ್ಯವು ದೊರಕೊಂಡಿದೆ. ಅದರಲ್ಲಿ ಇಂಗ್ಲೆಂಡಿಗೆ ಸರಿಹೋಗುವವರು ಯಾರೂ ಇಲ್ಲ. ಮಿಗಿಲಾದುದೆಂದು ಹೇಳುತ್ತಿದ್ದ ಜರ್ಮನಿಯವರ ಭೂವ್ಯಾಕಾಶ ಯುದ್ಧಕೌಶಲ್ಯವೇ ಸೋಲಿಗೆ ಮುಗ್ಗಾಗುತ್ತಿರುವಾಗ ಹೊಸದಾಗಿ ಕಲಿತಿರುವ ಜಲಯುದ್ಧದ ಫಲವನ್ನು ಹೇಳುವುದೇನಿದೆ? ಅಂತೂ ೧-೨ ವಾರಗಳೊಳಗೆ ಅದರ ಪರಿಣಾಮವೂ ಗೊತ್ತಾದೀತು.

ಒಂದು ಶತಮಾನದಿಂದ ಹಿಂದೆ ಇಂಗ್ಲೆಂಡು-ಫ್ರಾನ್ಸುಗಳು ಕಡುಶತ್ರುಗಳಾಗಿದ್ದುವು. ಕ್ರಮೇಣ ಅದು ತಗ್ಗುತ್ತ ಬಂದು, ೭ನೆಯ ಎಡ್ವರ್ಡ್ ಚಕ್ರವರ್ತಿಗಳ ಕಾಲದಲ್ಲಿ ಆ ಎರಡು ದೇಶದಲ್ಲಿ ಮೈತ್ರಿಯು ಹೆಪ್ಪುಗಟ್ಟಿತು. ಈಗಿನ ಜಾರ್ಜ್ ಸಾರ್ವಭೌಮರ ಕಾಲದಲ್ಲಂತೂ ಅದು ಮತ್ತಷ್ಟು ಗಟ್ಟಿಯಾಯಿತು. ಜಾರ್ಜ್ ಸಾರ್ವಭೌಮರು ಪ್ರತ್ಯಕ್ಷವಾಗಿ ಫ್ರಾನ್ಸಿಗೆ ಮೊನ್ನೆ ತಾನೇ ಹೋಗಿದ್ದರು. ಅಲ್ಲಿನ ಪ್ರಜೆಗಳು ಆಗ ಅಮಿತಾನಂದವನ್ನೂ ಮೈತ್ರಿಯನ್ನೂ ವ್ಯಕ್ತಪಡಿಸಿದರು. ಆದರೆ ಇಷ್ಟುಬೇಗನೆ ಫ್ರಾನ್ಸಿನವರಿಗೆ ಇಂಗ್ಲೆಂಡು ತನ್ನ ಸ್ನೇಹಸಹಾನುಭೂತಿಗಳನ್ನು ಕಾರ್ಯರೂಪವಾಗಿ ತೋರಿಸಬೇಕಾಗಿ ಬರುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಈಗಿನ ಯುದ್ಧದಲ್ಲಿ ಇಂಗ್ಲೆಂಡಿನವರು ಅಂಗವಾಗಿ ಸೇರುವುದಕ್ಕೆ ಫ್ರಾನ್ಸಿನವರಲ್ಲಿರುವ ಸ್ನೇಹವೂ ಬೆಲ್ಜಿಯಮ್ಮಿನವರ ವಿಷಯದಲ್ಲಿ ಪ್ರಕಟಿಸಿದ್ದ [illegible] ವಾಗ್ದಾನವೂ ಕಾರಣವಾಗಿದ್ದುವು. ಇದರಿಂದ ಇಂಗ್ಲೆಂಡು ಫ್ರಾನ್ಸಿಗೆ ತನ್ನ ಸೈನ್ಯವನ್ನು ಸಹಾಯಕ್ಕಾಗಿ ಕಳುಹಿಸಿತು. ಆ ಸೇನೆಯ ಅಧಿಪತಿಯ ವಿಷಯದಲ್ಲಿ ಫ್ರೆಂಚರು [illegible] ಮರ್ಯಾದೆಯನ್ನೂ ಪ್ರೀತಿಯನ್ನೂ [illegible] ತಮ್ಮ ಕೃತಜ್ಞತೆಯನ್ನೂ ವ್ಯಕ್ತಪಡಿಸಿತು. ಈಗ ಇಂಗ್ಲೆಂಡಿನವರು ಮಾಡಿದ ಸಹಾಯದಿಂದ ಫ್ರಾನ್ಸಿಗೆ ಮಾತ್ರ [illegible] ಲೋಕಕ್ಕೇ ಉಪಕಾರವಾಗುತ್ತದೆಂದು [illegible]. ಇಂಗ್ಲೆಂಡು ಈಗ ಕೈಹಾಕದಿದ್ದರೆ ಯುದ್ಧದ [illegible] ಬಹು ಭೀಕರವಾಗಿ [illegible] ಹೋಗುತ್ತಿತ್ತು.

ಕೇಳಿದರಾ [illegible] [illegible] ತಮ್ಮ ಎಲ್ಲೆಯ
ಮುಂದೆಮುಂದೆ ಸಾಗು
[illegible]

ಕಲ ಪಟ್ಟಣಗಳನ್ನು ವಶಪಡಿಸಿಕೊಂಡರೆಂದೂ, ಫ್ರಾನ್ಸಿನವರ ಆಕಾಶವಿಮಾನವು ಜರ್ಮನಿಯ ಆಕಾಶವಿಮಾನಗಳ ಕಾರ್ಖಾನೆಗೆ ಸಿಡಿಮದ್ದನ್ನು ಹಾಕಿ ಹಾಳುಮಾಡಿ ಶತ್ರುಗಳ ಗುಂಡಿನೇಟಿಗೆ ಸಿಕ್ಕದೆ ತಪ್ಪಿಸಿಕೊಂಡು ಹೋಯಿತೆಂದೂ, ರಷ್ಯನ್ ಸೇನೆಯೂ, ಫ್ರಾನ್ಸು ಬೆಲ್ಜಿಯಮ್ಮುಗಳ ಸೇನೆಯೂ ಸ್ವಿಟ್ಸರ್ಲೆಂಡಿನಿಂದ ಹಿಡಿದು ಬೆಲ್ಫೋರ್ಟಿನವರೆಗೆ ಎಂದರೆ ಫ್ರಾನ್ಸು ಬೆಲ್ಜಿಯಂ ಜರ್ಮನಿಗಳ ಎಲ್ಲೆಗಳೊಳಗೆ ಉತ್ತರದಿಂದ ದಕ್ಷಿಣವಾಗಿ ೩೫೦ ಮೈಲಿಗಳ ದೂರ ವ್ಯಾಪಿಸಿಕೊಂಡು ನಿಂತಿವೆಯೆಂದೂ, ಅದಕ್ಕೆ ಇದಿರಾಗಿ ಶತ್ರುಸೈನ್ಯವೂ ಅಣಿಯಾಗುತ್ತಿದೆಯೆಂದೂ ಗೊತ್ತಾಗಿದೆ. ರಷ್ಯನರು ಸೇನಾಸನ್ನಾಹವನ್ನು ಮಾಡಿಕೊಂಡು ಜರ್ಮನಿಯ ಈಶಾನ್ಯಭಾಗದಿಂದ ಆ ದೇಶಕ್ಕೆ ನುಗ್ಗಿಬರುತ್ತಿದ್ದಾರೆಂದೂ ತಿಳಿಯಬಂದಿದೆ. ಈ ವಾರದಲ್ಲಿ ಮಹಾಸಂಗ್ರಾಮವಾರ್ತೆಗಳು ಬರುವವೆಂದು ನಿರೀಕ್ಷಣೆಯಿದೆ.

ಮಳೆ ಹೊಳೆಗಳಿಂದಾಗಿರುವ ವಿಪರೀತನಷ್ಟ

ನಮ್ಮ ದೇಶದಲ್ಲಿ ಈ ಸಲ ಮಳೆ ಕಡಿಮೆಯಾಗಿದ್ದರೂ ನಮ್ಮ ದೇಶದಸುತ್ತಲೂ ಕಳೆದೆರಡು ವಾರಗಳಲ್ಲಿ ವಿಶೇಷವಾದ ಮಳೆಯಾಗಿದೆ. ಈ ಹೆಚ್ಚು ಮಳೆಯಿಂದ ಬೊಂಬಾಯಿ ಅಧಿಪತ್ಯದ ಬೆಳಗಾಂ-ಧಾರವಾಡ ಬಿಜಾಪುರ ಜಿಲ್ಲೆಗಳಲ್ಲೂ ಮದ್ರಾಸು ಅಧಿಪತ್ಯದ ಉತ್ತರದ ಜಿಲ್ಲೆಗಳಲ್ಲೂ ವಿಪರೀತ ನಷ್ಟಗಳುಂಟಾಗಿರುವುವೆಂಬ ಹೃದಯವಿದ್ರಾವಕವಾದ ಸುದ್ದಿಗಳು ವರ್ತಮಾನಪತ್ರಿಕೆಗಳಲ್ಲಿ ಅನಂತವಾಗಿ ಮುದ್ರಿತವಾಗಿವೆ. ಧಾರವಾಡದಲ್ಲಿ ವರ್ಷಕ್ಕೆ ಸರಾಸರಿ ೩೦ ಅಂಗುಲ ಮಳೆಯಾಗುತ್ತಿರುವಲ್ಲಿ ಈ ವರ್ಷ ೧-೧½ ತಿಂಗಳ ಕಾಲದೊಳಗೇ ಅಷ್ಟು ಅಂಗುಲದ ಮಳೆಯಾಗಿಹೋಗಿರುವುದು. ೩ ದಿನಗಳಲ್ಲಿ ಬಿದ್ದ ಅಖಂಡವೃಷ್ಟಿಯು ೭ ಅಂಗುಲ ಪ್ರಮಾಣವಾಗಿದ್ದಿತು. ಇದರಿಂದ ಊರಿನಲ್ಲಿ ಮುಕ್ಕಾಲುಪಾಲು ಮನೆಗಳು ಮುರಿದು-ಬಿದ್ದು-ಸೋರಿ ಊರು ಹಾಳುಬಿದ್ದಂತಾಯಿತು. ಸುತ್ತುಮುತ್ತಿನ ಕೆರೆ ಕಟ್ಟೆಗಳು ಒಡೆದು ಕೋಡಿಬಿದ್ದು ಹತ್ತಿರದ [illegible] ಇಲ್ಲವಾಯಿತು. ವ್ಯವಸಾಯಕ್ಕೆ ನೀರು ಮಿತಿಮೀರಿ ಪೈರು ಕೊಚ್ಚಿ ಹಾಳಾಗುವಂತಾಯಿತು. ಆ ಜಿಲ್ಲೆಯ ಮಲಪ್ರಭಾ ವರದಾ ಮೊದಲಾದ ನದಿಗಳೂ-ಚಿಕ್ಕಪುಟ್ಟ ಹಳ್ಳಗಳೂ ಕೂಡ ದಡಮೀರಿ ಹರಿದು ಕೆಲವು ಹಳ್ಳಿಗಳಲ್ಲಿ ನೀರು ನುಗ್ಗಿ ವಿಶೇಷಾನರ್ಥವನ್ನು ಮಾಡಿದೆ.

ಮಲಪ್ರಭಾನದಿಯ ದಡದಲ್ಲಿರುವ ಸಂಗೊಳ್ಳಿ ಊರೊಳಗೆ ಮಧ್ಯರಾತ್ರಿಯಲ್ಲಿ ನೀರು ನುಗ್ಗಿ, ಊರಿನ ೬೦೦-೭೦೦ ಮನೆಗಳೊಳಗೆ ೧೫-೨೦ ಮನೆಗಳ ಹೊರತು ಉಳಿದುವೆಲ್ಲಾ ಜಲಸಮಾಧಿಗೊಂಡುವು. ಊರಿನಲ್ಲಿ ಹೆಪ್ಪುಗಟ್ಟುವಷ್ಟು ನೀರು ಹರಿದಿತು. [illegible] ಕಾಳು ಕಡ್ಡಿ ಮೊದಲಾದ ಪದಾರ್ಥಗಳೆಲ್ಲಾ ಕೊಚ್ಚಿಹೋಗಿ ಜನರು ನಿರ್ಗತಿಕರಾದರು. ಇದರಂತೆ ೭-೮ ಹಳ್ಳಿಗಳು ಹಾಳಾಗಿರುವುವು. ಅತ್ತ ಬಿಜಾಪುರದ ಜಿಲ್ಲೆಯಲ್ಲಿ ಶಿವಯೋಗಮಂದಿರವು ಇದೇ ಮಲಪ್ರಭೆಯ ತೀರದಲ್ಲಿರುವುದರಿಂದ ಅಲ್ಲೂ ಪ್ರವಾಹವು ನುಗ್ಗಿ, ಆಶ್ರಮದಲ್ಲಿ ವಿಶೇಷಾನರ್ಥವನ್ನು ಮಾಡಿರುವುದೆಂದು ಕೇಳುತ್ತೇವೆ. ನಿಜಸ್ಥಿತಿಯ ವಿಷಯವಾಗಿ ಅಲ್ಲಿನ ಪತ್ರವ್ಯವಹಾರವು ಬಂದಮೇಲೆ ತಿಳಿಯಬಯಸುವವರಾಗಿದ್ದೇವೆ.

ಕೃಷ್ಣಾನದಿಯ ಮಹಾಪ್ರವಾಹದಿಂದ ಈ ನದಿಯ ಕರೆಯಲ್ಲಿರುವ ಅನರ್ಥವು ಅಭೂತಪೂರ್ವವಾಗಿದೆ. ಇದರಲ್ಲಿ ೬ ಅಡಿ ಎತ್ತರ ಬಂದ ಮಹಾಪ್ರವಾಹವು [illegible] ಮೈಲಿಗಳಷ್ಟು ವಿಸ್ತರಿಸಿಕೊಂಡು ಊರು ಕೇರಿ ಕಾಡುಗಳನ್ನೆಲ್ಲಾ ಸಮುದ್ರದಂತೆ ನೀರು ತುಂಬಿಕೊಂಡು, [illegible] ಒಡೆದು ಕೆಳಗಣ ಕೆರೆಗಳು [illegible], ಕೃಷ್ಣಾ, ಗುಂಟೂರು ಜಿಲ್ಲೆಗಳೊಳಗೆ ಮಾಡಿರುವ ಅನರ್ಥವು ಬಹಳ ಭೀಕರವಾಗಿರುವುದು. ಆ ಜಿಲ್ಲೆಗಳ ೩೦ ತಾಲೂಕುಗಳ ಬಡರೈತರು ಮನೆ ಮಠ ದನಕರು ದವಸ ಮೊದಲಾದುವುಗಳನ್ನೆಲ್ಲಾ ಕಳೆದುಕೊಂಡು ಇನ್ನು ೧ ಶತಮಾನದವರೆಗೂ ಚೇತರಿಸಿಕೊಳ್ಳಲಾರದ ಸ್ಥಿತಿಗೆ ಬಂದಿರುತ್ತಾರೆ. ಆ ವಿಪನ್ನರ ತಾತ್ಕಾಲಿಕ ಸಹಾಯಾರ್ಥವಾಗಿ ಪ್ರಜೆಗಳೂ ಸರ್ಕಾರದವರೂ ಸಹಾಯವನ್ನು ಕೊಡುತ್ತಿರುವರು.

ಕುರುವಿಜಯ.

ನಾಲಿಗೆಯೊಂದೋ? ಎರಡೋ?

ಕುರುವಿಜಯದ ಆಗಸ್ಟ್ ತಾ|| ೧೫ ರ ಸಂಚಿಕೆಯಲ್ಲಿ «ಅಧಿಕಾರಿ» ಎಂಬ ಹೆಸರಿನ ದೂರಿನ ಪತ್ರಕ್ಕೆ ಮಾಡಿದ ಪ್ರಶ್ನೆಗೆ ಈ ಪತ್ರಿಕಾಕರ್ತರು «ಕುರುವಿಜಯ» ಎಂಬ ಹೆಸರಿಗೆ «ಈ ಪತ್ರವನ್ನು ಓದುವ ಮಹಾಶಯರೆಲ್ಲರಿಗೂ ವಿಜಯವನ್ನು ಉಂಟುಮಾಡು, ಎಂದು ಭಗವಂತನನ್ನು [illegible] ನಮ್ಮ ಪತ್ರಿಕೆಯ ಹೆಸರಿನ ವ್ಯಾಖ್ಯಾನವು» ಎಂದು [illegible] ಮೈಸೂರ [illegible] ಅರ್ಥವೇನೆಂದು [illegible] ಅವರಿಗೆ [illegible] ಉತ್ತರಗಳನ್ನು ಒದಗಿಸಿದರು.

ಹೆಸರು
ಮತ್ತಷ್ಟು
[illegible]

ಒಂದು ಮಾಡುವ [illegible]
[illegible]
[illegible]

ದರ ಎಡಿಟರೇ ಅರ್ಥವನ್ನು ಹೇಳಿದ್ದರು. ಈಗ ಮತ್ತೊಂದು ಬೇರೆ ಅರ್ಥವನ್ನು ಹೇಳಿ, ಅದರ ಕೆಳಗೂ «ಎಡಿ» ಎಂದು ತಮ್ಮ ಹಸ್ತಾಕ್ಷರವನ್ನು ಹಾಕಿದ್ದಾರೆ. ಇದರಿಂದ ಒಂದು ಹೆಸರಿಗೆ ಅರ್ಥವನ್ನು ಎರಡು ತೆರನಾಗಿ ಹೇಳಿದುದು ಒಂದೇ ನಾಲಿಗೆಯೋ? ಅಥವಾ ಎರಡು ನಾಲಿಗೆಗಳೋ? ಇಲ್ಲವೆ ಆ ಅರ್ಥವನ್ನು ಹೇಳಿದ ಎಡಿಟರೇ ಬೇರೆ, ಈ ಅರ್ಥವನ್ನು ಹೇಳಿದ ಎಡಿಟರೇ ಬೇರೆ ಎಂದು ಭಾವಿಸಬೇಕೋ ತಿಳಿಯಲಿಲ್ಲ. ಹೋಗಲಿ. ಈಗ ಹೇಳುತ್ತಿರುವ ಅರ್ಥವಾದರೂ ಏನು? ವಿಜಯವನ್ನುಂಟುಮಾಡು ಎಂಬ ಅರ್ಥವು ಕೂಡ ಆ ಹೆಸರಿನಿಂದ ಆಗುವುದಿಲ್ಲ. ಹಾಗೆ ಅರ್ಥವಾಗಬೇಕಾದರೆ «ಕುರುವಿಜಯಂ» ಎಂದಿರಬೇಕಾಗಿದ್ದಿತು. ಕುರುವಿಜಯ ಎಂಬಕಡೆ ವಿಜಯ ಶಬ್ದೋತ್ತರದಲ್ಲಿ ದ್ವಿತೀಯಾಪ್ರತ್ಯಯವೇ ಇಲ್ಲದಿರುವುದರಿಂದ, ಇದು ಬಟ್ಲರ್ ಇಂಗ್ಲೀಷಿನಂತಾಯಿತು. ಆದುಕಾರಣ ಈ ಅರ್ಥವು ಹೊಂದುವುದಿಲ್ಲ. ಪತ್ರಿಕೆಯ ಎಡಿಟರೇ ಹೀಗೆ ಅರ್ಥವನ್ನು ಒಂದಲ್ಲದೆ ಮತ್ತೊಂದು ತೆರನಾಗಿ ಹೇಳುವುದಕ್ಕೆ ತಡಕಾಡುತ್ತಿರುವುದನ್ನು ನೋಡಿದರೆ, «[illegible]» ಎಂಬ ಕವಿತ್ವಕ್ಕೆ ಅರ್ಥವನ್ನು ಹಲವು ವಿದ್ಯಾರ್ಥಿಗಳು ತಡಕಾಡಿದುದು ಪುನಃಪುನಃ ಸ್ಮರಣೆಗೆ ಬರುತ್ತಿದೆ. ಇನ್ನಾವ ಬಗೆಯ ಅರ್ಥವನ್ನು ಹೇಳಲು ಇನ್ನೆಷ್ಟು ನಾಲಿಗೆಗಳು ಮುಂದೆ ಬರುವುವೋ ನೋಡಬೇಕು."

ಈ ಮಧ್ಯೆ ಮೈಸೂರಿನ ವಿದ್ಯಾವಂತರೊಬ್ಬರು «ಕುರುವಿಜಯ ಎಂಬ ಕುರುಬರ ಪತ್ರಿಕೆ» ಎಂದು ಹೆಸರಿಡಲು ಪ್ರಯತ್ನವಾಗಿದೆಯೆಂದು ಇದರ ವಿಷಯವಾಗಿ ಸುದ್ದಿಯಿದ್ದಿತು. ಅದು ಸುಳ್ಳೆಂದು ಈಗಿನ ವಿದ್ಯಮಾನದಿಂದ ತಿಳಿಯಬೇಕಾಗಿದೆ.

ಈ ಪತ್ರಿಕೆಯ ಉದಯವೂ, ಏಳಿಗೆಯೂ ನಮಗೆ ಸಂತೋಷಕರವೇ. ಆದರೆ ಉದ್ದೇಶಕ್ಕೆ ತಕ್ಕ ಸಾರ್ಥಕವಾದ ಹೆಸರಿಲ್ಲವಲ್ಲಾ! ಎಂಬುದೊಂದೇ ಅದರ ವಿಷಯದಲ್ಲಿ ನಮ್ಮ ಚಿಂತೆ. ನಿಷ್ಫಲವಾದ ವ್ಯಾಖ್ಯಾನಗಳನ್ನು ಬೆಳೆಯಿಸುವುದಕ್ಕಿಂತಲೂ ತಕ್ಕ ತಿದ್ದುಪಾಟನ್ನು ಹೆಸರಿನಲ್ಲಿ ಮಾಡಿಕೊಂಡರೆ ಮೇಲು.

ಒಳದೇಶದ ವೃತ್ತಾಂತಗಳು.

ಕೌನ್ಸಿಲರುಗಳೂ, ಚೀಫ್ ಇಂಜನಿಯರೂ ಸೋಮವಾರದ ದಿವಸ ರಾಜಧಾನಿಗೆ ದಯಮಾಡಿಸಿದರು.

—o—

ಪರಸ್ಪರ ಸಹಾಯಸಂಘದ ೪ ನೆಯ ಅಧಿವೇಶನವು ಬರುವ ಸೆಪ್ಟಂಬರ್ ತಾ|| ೨೨ ರಲ್ಲಿ ರಾಜಧಾನಿಯಲ್ಲಿ ನಡೆಯುವುದು.

—o—

ಚೀಫ್ ಕೋರ್ಟಿನ ಎಕ್ಸ್ಟ್ರಾ ರಿಜಿಸ್ಟ್ರಾರರಾದ ಮ|| ಟಿ. ವೆಂಕೋಬರಾಯರು ಆಕ್ಟಿಂಗ್ ರಿಜಿಸ್ಟ್ರಾರರಾಗಿ ನಿಯಮಿಸಲ್ಪಟ್ಟಿರುವರು.

—o—

ಮೈಸೂರ ಸೀಮೆಯ ಲಾಯರುಗಳೆಲ್ಲರೂ ತಮಗೆ ಕಕ್ಷಿಗಾರರಿಂದ ಫೀಯಾಗಿ ಬರುವ ಹಣದ ಲೆಕ್ಕವನ್ನು ಕೊಡಬೇಕೆಂದು ಚೀಫ್ ಕೋರ್ಟಿನವರಪ್ಪಣೆಯಾಗಿದೆ.

—o—

ಮೈಸೂರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ರಾ|| ಬ. ಕೃಷ್ಣರಾಯರವರ ಮೇಲೆ ತರಲ್ಪಟ್ಟಿದ್ದ ಕ್ರಿಮಿನಲ್ ವಿವಾದದಲ್ಲಿ ದಾಕ್ತರವರು ನಿರ್ದೋಷಿಗಳಾಗಿ ಬಿಡಲ್ಪಟ್ಟರು.

—o—

ರಾಜಧಾನಿಯಲ್ಲಿ ಮೈಸೂರ್ ಬ್ಯಾಂಕಿನ ಶಾಖೆಯನ್ನು [illegible] ಮ|| ಸಿ. ವೆಂಕಟಾಚಾರ್ಯರೆಂಬುವರೊಪ್ಪಿಕೊಂಡು, ಕಳೆದ ತಾ|| ೧೮ ರ ಮಧ್ಯಾಹ್ನ ರಾಮವಿಲಾಸ ಅಗ್ರಹಾರದಲ್ಲಿರುವ ಚಿ. ಶ್ರೀನಿವಾಸಯ್ಯಂಗಾರರವರ ಮನೆಯಲ್ಲಿ ಸ್ಥಾಪಿಸಿದರು. ಇದರ ಆರಂಭೋತ್ಸವವು ಡಿ|| ಕಮಿಷನರ್ ಮ|| ಸುಬ್ರಹ್ಮಣ್ಯಯ್ಯರವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಅಗ್ರಹಾರದ ವರ್ತಕರೂ, ಇತರ ದೊಡ್ಡಮನುಷ್ಯರೂ ದಯಮಾಡಿದ್ದರು. ನೋಟುಗಳನ್ನು ಮುದ್ರಿಸಿ [illegible] ರಾಜಧಾನಿಯಿಂದ ಹೊರಗೆ ಇಲ್ಲಿಯ ವರ್ತಕರ ಲೇವಾದೇವಿಗೆ ಬಹಳ ತೊಂದರೆಯಾಗಿದ್ದಿತು. ಮ|| ಸಿ. ವೆಂಕಟಾಚಾರ್ಯರು ಮೈಸೂರ ಬ್ಯಾಂಕಿನ ಶಾಖೆಯನ್ನು ಸ್ಥಾಪಿಸಿದುದರಿಂದ ಎಲ್ಲರಿಗೂ ಬಹಳ ಸಂತೋಷವಾಗಿರುವುದು. ಅವರ ಪ್ರಯತ್ನವು ಸಫಲವಾಗಲೆಂದು ಕೋರುತ್ತೇವೆ.

«ಗ್ರಾಮನೈರ್ಮಲ್ಯಸಂಬಂಧ» ಸರ್ಕಾರಿ ಅಧಿಕಾರಿಗಳ ಪ್ರಯತ್ನ.

ದಾವಣಗೆರೆ ತಾಲ್ಲೂಕು [illegible] ೧೮-೧೯ ರ [illegible] ಅ|| ಕೆ|| ಎಂ. ಪಿ. [illegible] ಅಯ್ಯಂಗಾರ್ಯರು, [illegible] ಅಧಿಕಾರಿಗಳು [illegible] ರಾವ್ ಸಾಹೇಬ್ [illegible] ಪ್ರಸಂಗ [illegible]

«[illegible]
[illegible]
[illegible]»

[illegible]

ಚಿತ್ರದುರ್ಗದ ... ವಿಶ್ವಾಂ ಇಲಾಖಾ ... ನಾಯಕನ ... ಸಂಸ್ಕೃತ ಶಾಲೆ

[illegible]

...ತ್ತವೆಂದು ಸಿದ್ಧಾಂತದವರಿಗೆ ... ವಿನಾ ... ಸ್ವತಂತ್ರ ... ಎಂಬ ... ಸಂಬಂಧವಿಲ್ಲ ... ಅಧಿಕಾರವಿಲ್ಲವೆಂದೇ ... ಧರ್ಮ ಜಾಗೃತಿ ... ಸನ್ಯಾಸ ಆಶ್ರಮಗ ... ಸ್ವತಂತ್ರವಾದ ಕಾರಣವ ... ಅವನು ... ತಿಳಿದು ... ಅವರ ಧರ್ಮದವರಂತೆ ನಟಿಸಿ ಅನೇಕ ... ಅವರಿಗೆ ... ಸಾತ್ವಿಕ ... ಅನೇಕ ಜನರು ಮತಾಂತರವಾಗಲಿಕ್ಕೆ ಇವರ ಅನುಭವ ... ಈಗ ಸ್ಥಿತಿ ಬಂದಿದೆ ... ಪೂರ್ವದಲ್ಲಿ ಬ ... ಮತವನ್ನು ಉದ್ಧರಿಸುವ ಕಾಲದಲ್ಲಿ ... ದಕ್ಕೆ ಬರುತ್ತಿದ್ದರೇ ಹೇಗೆ? ದರ ಒಬ್ಬ ಮತಸುಧಾರಕನು ದೀನರಾಗಿ ಬಂದವರನ್ನು ಪುನೀತರನ್ನಾಗಿ ಮಾಡುವುದು ಕರ್ತವ್ಯಕರ್ಮವಾಗಿದೆ. ಇದು ಹುಲ್ಲಿಕವೆಂದು ತಿಳಿಯಬೇಡಿರಿ. ಇಂತಹ ದೊಡ್ಡ ಕಾರ್ಯ ಮತ್ತೊಂದಿಲ್ಲ. ... ಅದನ್ನು ಹಿಂದಕ್ಕೆ ಒತ್ತಿ ... ಸುಧಾರಣೆ ... ಸುಧಾರಣೆಯೆಂದು ... ಆರ್ಯತನವನ್ನು ಸ್ವೀಕರಿಸುವ ... ಇರುತ್ತದೆ ಎಂಬುದನ್ನು ... ಪ್ರೀತಿಯಿಲ್ಲದ ... ಎಂದಿಗೂ ಸ್ವೀಕರಿಸಲಾರದು. ... ನಿಮ್ಮ ಕೆಲಸ ... ಅವರಿಗೆ ಅಧಿಕಾರವಿದೆ, ಇವರಿಗೆ ಇಲ್ಲ. ಎನ್ನುವ ಮಾತು ... ನಾವು ಸರ್ವರೂ ಒಂದೇ ... ಸರ್ವ ... ಆತ್ಮಜ್ಞಾನಿಗಳೂ ... ಸಿದ್ಧಿಸಿ ...

ಸದ್ಧರ್ಮ ... ನಿವಭಿಗಾನಿ, ಮೈಸೂರು.

ಈಗ ಹೊರಟ ಆಚ್ಚಾದ ಪುಸ್ತಕವು.
(ರೇವಣಸಿದ್ಧೇಶ್ವರಪುರಾಣಂ.)

ವೀರಶೈವ ಮತವನ್ನು ... ಶ್ರೀ ರೇಣುಕಾಚಾರ್ಯರ ಚರಿತ್ರೆಯ ... ಈ ಗ್ರಂಥವು ... ಕವಿಯಿಂದ ... ಕವಿತೆಯು ... ಸಂಧಿಗಳುಳ್ಳ ಈ ಗ್ರಂಥದ ... ಬೆಲೆ ... ಬೇಕಾದವರು ...

ಸುಶ್ಲೋಕ ... ನೂತನ ಗ್ರಂಥ.

ಶ್ರೀ ರೇಣುಕಾಚಾರ್ಯರು ... [illegible]

... ವಿ. ಪಿ. ... ಎಸ್. ಆರ್. ... ಗ್ರಂಥಪ್ರಕಾಶಕರು ... ಮೈಸೂರು.

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

38

ರಕ್ತಶುದ್ಧಿ ಮತ್ತು ರಕ್ತವೃದ್ಧಿಗೆ ನೇರ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ವಾಪಸ !!) ನೋಡಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತರೋಗವಾದವರು, ... ಉಬ್ಬಸದವರು, ... ಸ್ವಪ್ನಸ್ಖಲನ, ... ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ... ಶರೀರಕ್ಕೆ ನಿರೋಗತ್ವವೂ, ಕಾಂತಿಯೂ ... ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ... ೪೦ ತೋಲೆಗೆ ರೂ. ೩-೮-೦. ೮೦ ತೋಲೆಗೆ ... ರೂಪಾಯಿ ... ಅನುಪಾನ ಪತ್ರಿಕೆ ... ಸಂಗಡ ಕಳಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ, ... ಜಿಲ್ಲಾ ಉತ್ತರ ಕನ್ನಡ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ... ಫೋಟೋ ... ರೂಪಾಯಿ ... ಯುಕ್ತ ... ರೂಪಾಯಿ.

ಶ್ರೀಬಸವೇಶ್ವರ

... ಫೋಟೋ (ರಾಜಾ ರವಿವರ್ಮನ ಚಿತ್ರದಂತೆ, ...) ... ರೂ. ... ಆಣೆ ...

ಶ್ರೀ ... ಸುಂದರವಾಗಿ ... ಫೋಟೋ ... ರೂಪಾಯಿ ... ಆಣೆ

ಶ್ರೀ ಜಗದ್ಗುರು ... ಗದಗ, ಶ್ರೀ ಜಗದ್ಗುರು ... ಮತ್ತು ... ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ ... ಫೋಟೋ ... ರೂಪಾಯಿ ... ಆಣೆ

[illegible]

ಬ್ರ॥ ಶ್ರೀ॥ ಬಿ. ಪಿ. ಸುಬ್ರಹ್ಮಣ್ಯಶರ್ಮ ವಿರಚಿತವಾದ ಸುದರ್ಶನ ಸಹಕಾರಿಣಿಯೆಂಬ ಕನ್ನಡ ಟೀಕಾತಾತ್ಪರ್ಯ ಗಣಿತೋದಾಹರಣೆಗಳಿಂದೊಡಗೂಡಿದ

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರವು.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಭವಿಷ್ಯತ್ಫಲವನ್ನು ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕೈಗೂಡುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮೊದಲಾದ ಟೀಕೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ « ಸುಧಾರಸಧಾರಾ » ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತಾವುದೂ ಸಾಧನವಾಗಲಾರದು. ೧೩೮ ಪುಟ ಭಾಗಗಳ ಪುಸ್ತಕ ಬೈಂಡಿಂಗ್. ಈ ಗ್ರಂಥರತ್ನವು ಅಬಾಲವೃದ್ಧರಾದಿಯಾಗಿ ಎಲ್ಲರಿಗೂ ತಿಳಿಯುವಂತೆ ಇರುವುದರಿಂದ ಇತರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ ವಿಷಯಸಂಗ್ರಹ ಹೇಗೆಂದರೆ:— ೧ ನೇ ಪ್ರಕರಣಗಳಲ್ಲಿ ರಾಶಿ, ಗ್ರಹ, ಸ್ವಭಾವ, ಜ್ಯೋತಿಶಾಸ್ತ್ರದ ವಿಭಾಗಗಳು ೩, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣ ಯೋಗಗಳು ೫, ಜನನಕಾಲಲಕ್ಷಣ ಮತ್ತು ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಶಿಗಳ ಫಲ ಮತ್ತು ಕೇರಳೀಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಾನುಗುಣ ಫಲ ೨೧, ಆಶ್ರಯಾದಿ ಯೋಗಫಲಗಳು ೨೨, ಕ್ಷೇತ್ರಫಲಗಳು ೨೩, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೪, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೫, ಸ್ತ್ರೀಜಾತಕ ಅದರ ಫಲಗಳು ೨೬, ಮರಣಕಾರಣ ಅದರ ಫಲಗಳು ೨೭, ನಷ್ಟಜಾತಕ ಬರೆಯುವ ರೀತಿ ೨೮, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯಕವಿಷಯ ೨೯, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ.—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಯರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪಾಮರರಿಗೂ, ಸ್ತ್ರೀಯರಿಗೂ ಸುಲಭವಾಗಿ ತಿಳಿಯುವಂತೆ ದೊಡ್ಡ ಅಕ್ಷರದಲ್ಲಿ ಪ್ರಿಂಟ್ ಮಾಡಿಸಿದೆ. ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪ ರೂ. ವಿ. ಪಿ. ಛಾರ್ಜು ೦-೬-೦ ಆಣೆ ನಂತರ ೫ ರೂ. ಜಿಂಗತೆ, ಆರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರ ಪುಸ್ತಕಗಳು

ಟೀಕಾಸ್ಯಮುನಿರ್ಣಯ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ಪುಟ [illegible] ರೂ. ಕನ್ನಡದ್ವಾದಶಸ್ಕಂದ ಭಾಗವತ ೩-೦-೦ ರೂ. ಶುಕಸಪ್ತತಿ [illegible] ಕಥೆ ಕನ್ನಡ ಪ್ರತಿ [illegible] ಜನ ಪ್ರತಿಕೆಗಳ ಕಥೆ ೦-೪-೦. ಸಟೀಕ ಭೋಜರಾಜಚರಿತೆ, ೦-೪-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲುಗು ಗ್ರಂಥಗಳು ದೊರೆಯುತ್ತೆ.

ಟಿ. ಹರ್ಷ ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬಹುಮಾನ ! ಶ್ರೀ ಬಹುಮಾನ !!

ಅತ್ಯುತ್ಕೃಷ್ಟವಾದ ಬಹುಮಾನ

ಈ ಸಾವಿರ ರೂಪಾಯಿಗಳು ಕೊಡಲ್ಪಡುವವು

ಧಿಕ್ಕೃತ ಬಳ್ಳಾರಿ ಸುಪ್ರಸಿದ್ಧ ಔಷಧ

ಸರ್ವಜನಮನೋಲ್ಲಾಸಿನಿ ಅಂಡ್ ಕೋ, ಇವರ

(* ನಾರಸಿಂಹಚೂರ್ಣವು *)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವುದು ವಿಷಾದಕರವಾಗಿರುವುದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಬಂಡಾರದಿಂದ ಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮಂದಾಗ್ನಿ, ಅತೀಸಾರ, ಮೇಹರೋಗಗಳು, ಪಾಂಡುರೋಗ, ಮೂಲವ್ಯಾಧಿ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರ, ಮೂತ್ರಕೃಚ್ಛ್ರ, ಗೃಧ್ರಸೀವಾತವು, ಕಾಮಾಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ವಿಷಮ ಗೆಯಾದ ಕಾಸಗಳು, ಎಂಭತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಬಿಡಿಬಿಡದ ದಿನಗಳು ನಾಶವಾಗುವಂತೆ ನಾಶವಾಗುತ್ತವೆ. ಇದರ ಸೇವನೆಯಿಂದ ಚನ್ನದಂತಹ ಕಾಂತಿಯು, ಸಿಂಹದಂತೆ ಪರಾಕ್ರಮವು, ಕುದುರೆಯಂತಹ ವೇಗವು, ಹದ್ದಿನಂತೆ ದೃಷ್ಟಿಯು ದೀರ್ಘದೃಷ್ಟಿಯು ಅಶ್ವವೇಗ ನೂರುವರುಷ ಆಯುಷ್ಯವು ದೊರೆಯುವುದು. ವೀರ್ಯವೃದ್ಧಿಯುಂಟಾಗಿ ಸ್ತ್ರೀಯರಿಗೆ ಪಡೆದಂತಹ ಸಂತತಿಯು ಉಂಟಾಗಿ ಪ್ರಬಲವಾಗುವದು. ಇವರಲ್ಲಿ ಯಾವ ವಿಧವಾದ ಪಥ್ಯಗಳಾಗಲಿ ಉಪವಾಸವಾಗಲಿ ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದ ಶಾಸ್ತ್ರ ಪದ್ಧತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಋಷಿಕೇಶಗಳನ್ನು ಕೊಟ್ಟಿರುವರು. ಬಳ್ಳಾರಿಯಲ್ಲಿ ಸುಪ್ರಸಿದ್ಧ ವೈದ್ಯರಿಂದ ಖ್ಯಾತಿಗೊಂಡ ವೈದ್ಯ ಕರಿಪೀರಪ್ಪನವರ ಪುತ್ರರಾದ ಸೇಟ್ ಈಶ್ವರ ಸಿ. ವಿ. ಸಿದ್ದಪ್ಪನವರಿಂದ ತಯಾರಿಸಲ್ಪಟ್ಟಿರುವದು.

೧೪ ದಿನ ಉಪಯೋಗಕ್ಕೆ ಬರುವ ಡಬ್ಬಿ ೧ಕ್ಕೆ ಬೆಲೆ ರೂ ೧-೦-೦

—(ಬಹುಮಾನಗಳನ್ನು ಕಳುಹಿಸುವ ವಿಧಾನ)—

೧ ನಂಬರ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೫೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೫೦೦೦ ರೂ. ೪ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦ ರೂ. ೫ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦ ರೂ.

[illegible] ನಂಬರಿನ ಡಬ್ಬಿಯನ್ನು ತರಿಸಿದ ಮೊದಲು [illegible] ಡಬ್ಬಿ ತರಿಸುವವರಿಗೂ ೨ ನೇ ಬಹುಮಾನ ಒಂದು ಬಗ್ಗೆ ಡಬ್ಬಿಗಳು ಜರ್ಮನ್‌ ಸಿಲ್ವರಿನ ಈ ಲಕ್ಕವನ್ನು ಅಲ್ಲದೆ ಸಂಖ್ಯೆ ಬಹುಮಾನ ವಿಧಾನಗಳನ್ನು ಹಾಕುತ್ತೇವೆ. ಒಂದುವೇಳೆ ದರಕಾಲಾನಂತರ ಒಳ್ಳೆ ಕರಿಯಾಗಿ ಸಿಂದು ಉಳ್ಳವರು ಗಳು, ಬೆಳ್ಳಿಗಳನ್ನೂ ಮತ್ತು ಪಾಯಿಸುವುದನ್ನು ಹಚ್ಚೆ ಸಹಿ ಎಷ್ಟು ಡಬ್ಬಿಗಳು ೩ ಕಾಗದಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಬಹುಮಾನವನ್ನು ಕೊಡುವುದು. ಹಿಂದಿತ್ತೀತ್ತಲಿ ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ಔಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಕೆಲವು ದಿನಗಳ ವರೆಗೆ ಅಪೇಕ್ಷಿಸಿ ದಾಗ ಇವರ ವಿಷಯದಲ್ಲಿ ತಿಳಿದುಕೊಳ್ಳಬೇಕು ಸಹಕರಿಸುವಿರಿ. ಬಹುಮಾನದ ಹಣವನ್ನು ಬಿಟ್ಟು ಎಲ್ಲರನ್ನು ಸಂತೋಷಪಡಿಸುವುದು ಒಂದೇ ಸಮವಾಗಿ ಹಂಚಲ್ಪಡುವುದು. ಇದು ಬೇಹಿಸುವುದಿಲ್ಲ, ಲಾಟರಿಯಲ್ಲ, ಯಾರ ವಿರೋಧವಾದ ಸೂಚನೆಯು ಇಲ್ಲ. ನಿಶ್ಚಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಪೇಕ್ಷಿತರಾದವರು ಮಾತ್ರೆಗಳ ನಿಜ ಕೆಲಸವಾಗಿದೆ. ನೀಲಕ ಪರೀಕ್ಷಿಸಿ ಸುಖವನ್ನು ಪರೀಕ್ಷಿಸಿ ಅಪೇಕ್ಷಿಸಿರುವ ಈ ಶೀಘ್ರ ನಮ್ಮ ಆಫೀಸಿನಿಗೆ ಬರೆದು ತರಿಸಿಕೊಳ್ಳಿರಿ.

ಇದರ ಬಗ್ಗೆ ಜಾಹಿರಾತು ಪತ್ರಿಕೆಯನ್ನು ಓದಿನೋಡುವುದಕ್ಕೆ [illegible]

[illegible] ಈ ಪತ್ತೆಗೆ ಬರೆಯಿರಿ:

ಸರ್ವಜನಮನೋಲ್ಲಾಸಿನಿ ಅಂಡ್ ಕೋ, ಬಳ್ಳಾರಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮನೆಯಲ್ಲಿಯೂ ನೂರು ಕಾಯಿಲೆ ರೋಗಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ— ಅನೇಕ ಪುರಾತನ ಗ್ರಂಥಗಳಿಂದ ಆರಿಸಿದ ಲೋಹ ಭಸ್ಮ—ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕಸ್ತೂರಿಮಾತ್ರೆಗಳು ರೋಗವನ್ನು ಸೆಳೆಯುವ ಶಕ್ತಿಯುಳ್ಳ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ ವಿಷಜ್ವರ—ಮಲೇರಿಯಾಜ್ವರ—ನಿಮ್ಯೋನಿಯಾಜ್ವರ—ಮಲೇರಿಯಾಜ್ವರ— ತಲೆನೋವು ಪಿತ್ಥ ನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣ ಭೇದಿ—ಮಕ್ಕಳಿಗೆ ಸಂಭವಿಸುವ ಬರುವ ಹಕ್ಕೆಗಳ ಕೆಳತ ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣವಿಸುತ್ತವೆ. ಓದುವವರು ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ಉಪಯೋಗಿಸುವರೆಂದು ನಾವು ದೃಢವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇವಕ್ಕೆ ಒಂದು ಬಹುಮಾನ. ವಿ. ಪಿ. ಛಾರ್ಜು ಪ್ರತ್ಯೇಕ.

ಅಪೋದಿನಿ:— ಅನೋಘವಾದ ಸುವಾಸನೆಯುಂಡ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಾಗುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ವಾಸನಾಭರಿತ ಕೆಮ್ಮು, ದಮ್ಮು, ಉಬ್ಬಸ, ವಾಂತಿ, ಬಾಯಿಗೆ ರುಚಿ ಇಲ್ಲದ ಅಸ್ವಸ್ಥತೆಯನ್ನು ಪಿತ್ತ ಸಂಕಟ, ಅಜೀರ್ಣ ಕೆಮ್ಮು ತಗ್ಗುವ ಗುಣಪಡಿಸಿ ಶರೀರಕ್ಕೆ ತುಷ್ಟಿಯನ್ನು

ಮುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಅನುಭವಿಸ್ಥರಿಂದಲೂ ಹೊಗಳಲ್ಪಡುತ್ತಿರುವುದು. ೫೦ ಮಾತ್ರೆ ೪ ಆಣೆ ಇವಕ್ಕೆ ಒಂದು ಬಹುಮಾನ ವಿ. ಪಿ. ಛಾರ್ಜು ಪ್ರತ್ಯೇಕ.

ನಿಜಕರ್ತ ವಿ. ವಿ. ಪಂಡಿತ್,
ರಸಾಯನವೈದ್ಯಶಾಲಾ, ನಂಜನಗೂಡು.
ನೆ ರೋಡ್ ೬೦

ಮೈಸೂರು ಕಂಪೆನಿ ! ಕೇಳಿ ಬಾರಿ ಬಹುಮಾನಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಜನಾನಾಬ್ ಕೋಟ್ಸ್, ಜರಿಸೀರೆ, ಕೊಪ್ಪ ಪೀಟಾ, ಚಾಕ್ಲಿಕಾ ಶಾಲು, ದುಪ್ಪಟ, ಮುಗಟ ಬಗೆಬಗೆಯಾದ ಬಟ್ಟೆಗಳು, ಊಟಕ್ಕೆ ಮುಂತಾದ ಅಮೋಘವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವರಿಗೆ ೧೧ ಪುಟಗಳುಳ್ಳ ೧ ಕ್ಯಾಟಲಾಗ ವನ್ನು ವಿತರಿಸುತ್ತೇವೆ. ಇದಲ್ಲದೆ ಬಹುಮಾನವೂ ಕಳಿಸುವೆವು.

ವಿಳಾಸ: ಕೆ. ಮೇಡು, ಅಂಡ್ ಕೋ, [illegible] ಟಿ (ಶಾಪ್)

...ಜನರಲ್ ... ಮೈಸೂರು. [illegible]

... [illegible] ... ಮೈಸೂರು. 30 | 18

38 ಸಚಿತ್ರ ... ಕಥೆಗಳು ... ಸಚಿತ್ರ ... ಚರಿತ್ರೆ

ಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ... ನಿಮ್ಮ ... ಲೋಕರೀತಿಯ ... ತಿಳಿಯಬೇಕೆಂದಿದ್ದರೆ, ... ಧರ್ಮ ಸತ್ಯಗಳ ಸ್ಥಿತಿಯನ್ನು ... ಈ ವಿದ್ಯಾಮಂಜರಿಕಥೆಗಳನ್ನು ... ಪುಟಗಳಿಂದ ... ಪುಸ್ತಕವಾಗಿದೆ. ಬೆಲೆ ರೂ ೧-೮-೦ ಅಂಚೆ ಸಾಗಲು ೩ ಆಣೆ. ... ಬೇಕಾದರೆ ಬರೆಯಿರಿ. ... ಅನೇಕ ಪುಸ್ತಕಗಳು ದೊರೆಯುತ್ತವೆ.

ಪ್ರಕಾಶಕ— ಎಂ. ಆರ್. ... ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಾಲಾಮಿಸ್ರಿಯು ಪಂಜಾಬ್ ದೇಶದಲ್ಲಿ ಪೌಂಡು ೧ಕ್ಕೆ ೧-೧೦-೦ ಇತ್ತು, ಈಗ ಪೌಂಡು ೧ಕ್ಕೆ ೩-೮-೦ ಆಗಿದೆ. ಅದ್ದರಿಂದ ಇದರ ಕ್ರಯ ... ರೂಪಾಯಿ ಮಾಡಿರುತ್ತೆ. 5

ಲೋಕಪ್ರಸಿದ್ಧವಾದ ಕಾಲಾಮಿಸ್ರಿ ಮುರಬ್ಬಾ.

ಈ "ಪಂಜಾಬ್ ಕಾಲಾಮಿಸ್ರಿ ಮುರಬ್ಬಾ" ಎಂಬ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನದೋಷಗಳಾದರೂ, ... ಮೂತ್ರದಲ್ಲಿ ... ವೀರ್ಯವು ಹೋಗುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕಡಿಮೆಯಾಗಿದ್ದರೂ, ದೂರ ... ಬರುತ್ತಾ ... ನೋವು ಇವುಗಳೆಲ್ಲವೂ ಪಂಜಾಬ್ ಕಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿ ... ಮೆದುಳಿಗೆ ಬಲವನ್ನುಂಟುಮಾಡುವುದು ... ತಲೆ ನೋವುಗಳನ್ನು ... ಧಾತುವನ್ನು ... ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಕಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಬಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಕಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ

೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ... ನಮ್ಮಿಂದ ... ಒಕ್ಕೆ ರೂ. ೫-೦-೦. ಡಬ್ಬಲ್ ... ಇರುತ್ತೆ.

... ಮನಸ್ಸಲಾಲ್, ೨ ... ಸೇಠ್ ... ಬೆಂಗಳೂರು ಸಿಟಿ

ನಮ್ಮ ಏಜಂಟರು—ಡಿ. ... ಅಂಡ್ ಕೋ., ಬಳೇಪೇಟೆ, ಬೆಂಗಳೂರು ಸಿಟಿ.

... [illegible] ... 16

... ಈ ... ಗಳನ್ನು ... ಉತ್ತಮವಾಂಗ ... ಬೆಲೆಯುಳ್ಳ ಪದಾರ್ಥಗಳಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆನೋವು ... ಕಾಲು ... (ಭಾರ), ... ಅಜೀರ್ಣ, ... ಕೆಮ್ಮು, ನೆಗಡಿ, ನಿಶ್ಶಕ್ತಿ, ... ಇನ್ನೂ ಅನೇಕ ರೋಗಗಳಿಗೆ ... ಗುಣಪಡಿಸುತ್ತದೆ. ... ಉಪಯೋಗಿಸುತ್ತಿದ್ದರೆ ... ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ... ರಕ್ತದಲ್ಲಿಯ ದೋಷವನ್ನು ... ವೃದ್ಧಿ ಪಡಿಸುತ್ತದೆ ... ಮಕ್ಕಳ ... ಜ್ವರ, ... ಗುಣಪಡಿಸುತ್ತದೆ ... ಮಾತ್ರೆಗಳುಳ್ಳ ... ೮ ಆಣೆ; ... ೩ ಆಣೆ.

... (ಭಾರತ ...)

... [illegible] ...

... ಮೈಸೂರು

ನ್ಯಾಯದರ್ಪಣ.

ಇದರಲ್ಲಿ ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕಾದ ... ಕ್ಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ ಇಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ... ಮುನಸಿಫ್ ಕೋರ್ಟಿನ ಕಾನೂನೂ ಮತ್ತು ... ಮೊಕದ್ದಮೆಗಳನ್ನು ... ಮಾಡಿಕೊಳ್ಳತಕ್ಕ ಕಾನೂನೂ, ... ನಾನಾವಿಧಗಳಾದ ದಸ್ತಾವೇಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ.

ಬೆಲೆ ರೂ. 1—8—0. ವಿ. ಪಿ. ಮೂಲ್ಯ 1—12—0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ... ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.



ಈ ಪುಡಿಯನ್ನು ... ದರಿಂದ ಮೂಗಿನಲ್ಲಿ ... ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ... ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ... ಗಳಿಗಾಗಲಿ ಮುದುಕರಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ, ೧ ಡಜನ್ ಡಬ್ಬಿಗೆ ೨-೦-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತದೆ. ಮೂಗಿನಲ್ಲಿ ಹುಳಿವಾಸನೆ ... ದುರ್ಗಂಧ ... ನಿಲ್ಲ. ಒಂದೇ ಒಂದು ಸಲ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ಎಂಟು ತೊಲೆ ತೂಕದ ಸೇರಿಗೆ ... ಆಣೆ ...

ಮುಖರೋಗನಿವಾರಿಣೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-... ಅಂಚೆಖರ್ಚು ಬೇರೆ.

ವಿಳಾಸ ... ಶೆಟ್ಟಿ,

... ಪೋಸ್ಟ್,

ಕೊಳ್ಳೇಗಾಲದ ತಾಲ್ಲೂಕು.

27

... ಮಾಡಿರುವ ... ವಾಚಕರಿಗೆ ... ಪಂಚಾಂಗ.

ತಾರೀ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	
23	1 ಭಾನು	ಬಿದಿ	20-47	ಪುಬ್ಬಾ	4-47	8
24	2 ಸೋಮ	ತದಿ	15-25	ಹುತ್ತ	1-36	9
25	3 ಮಂಗ	ಚೌತಿ	9-38	ಚಿತ್ತ	58-48	10
26	4 ಬುಧ	ಪಂ	8-[illegible]0	ಸ್ವಾತಿ	53-50	11
27	5 ಗುರು	ಷಷ್ಠಿ	51-[illegible]5	ವಿಶಾಖ	45-19	12
28	6 ಶುಕ್ರ	ಅಷ್ಟ	45-34	ಅನೂ	41-29	13
29	7 ಶನಿ	ನವ	40-23	ಜ್ಯೇಷ್ಠ	38-16	14

(1) ... (2) ... (3) ... (4) ... (5) ... (6) ... (7) ... [illegible]

... ಪ್ರಕಟಿಸಲ್ಪಟ್ಟಿತು

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧—೦—೦

ದಿವಿಹಿಕೊರವುರೀತಾರಾ ಪರಮಧಿಗತರಾಜಮಂಡಲಹಿತ್ರೈ ಘನಪಥಕೃತಾ... [illegible]
ಶ್ರೀಮತ್ಕೃಷ್ಣನೃಪಾಲನಮ್ರಮಕುಟಾಲೋಲಂಸುಧೀಪುಂಗವ | [illegible]
ಸಿಮಾತೀತ ಗುಣಕಿಪ್ರತಾವವಿಪುಲಂ ಸದ್ವೃತ್ತಮಾಲಾಕುಲಂ | [illegible]

ಸಂಪುಟ(೧೩) ಮೈಸೂರ್ ಸ್ಟಾರ್ ಸಕ ೧೯೦೭ ನೇಯ ಇಸವಿ ಸೆಪ್ಟಂಬರ್ ತಾರೀಖು ೭ ನೇಯ ಭಾನುವಾರ. ಸಂಚಿಕೆ ೩೬

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಸುಂದರವಾದ ಹೊಸನಮೂನೆ ದೊಡ್ಡ ಘಡಿಯಾರಗಳು.

31

ಪ್ರಖ್ಯಾತಿಹೊಂದಿದ ಅಮೇರಿಕಾದೇಶದ ಆ [illegible] ಕಂಪೆನಿಯವರಿಂದ ತಯಾರಿಸಲ್ಪಟ್ಟ ಖಾತ್ರಿಯಾದ ಮತ್ತು ಬಹಳದಿವಸ ಬಾಳಿಕೆಬರತಕ್ಕ [illegible]



ಈಪಕ್ಕದ ಚಿತ್ರದಲ್ಲಿ ಕಾಣಿಸಿರುವ ಗೋಡೆಗೆ ತಗುಲಿಸ [illegible] ಘಂಟೆ, ಅರ್ಧ ಘಂಟೆ ಹೊಡೆಯುವ ಘಡಿಯಾರ [illegible] ಈ ಘಡಿಯಾರಗಳು [illegible] ಗದಲ್ಲಿ ಕಕಾಸಿನ ಕೆತ್ತನೆ [illegible] ನೋಡುವುದಕ್ಕೆ ಅಂದವಾಗಿಯೂ ಬಹಳ ದಿವಸ ಬಾಳಿಕೆ ಬರತಕ್ಕವುಗಳಾಗಿವೆ. ಈ ಘಡಿಯಾರಕ್ಕೆ ಆರ್ಡರ್ ಮಾಡ ತಕ್ಕವರು [illegible] ಕಳಿಸಬೇಕು. ಬಾಕೀ ಮೊಬಲಗ್ಗೆ ವಿ. ಪಿ. [illegible] ರೈಲ್ವೆ ಛಾರ್ಜು ಅಲಾಯಿದಾ.

ಸಿಕ್ಕಿದ ಹಾರ್ಮೋನಿಯಂಗಳನ್ನು ಕ್ರಯಕ್ಕೆ ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥಮಾಡಿಕೊಳ್ಳುವಿರಿ.

ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ "ಮೋಹನ್ ಫ್ಲೂಟ್" (M. Mohen flute) ಮತ್ತು "ಮೋಸ್ಲಂ ಫ್ಲೂಟ್" (Moslem flute) ಹಾರ್ಮೋನಿಯಂಗಳನ್ನು ನಮ್ಮಿಂದ ತರಿಸಿಕೊಂಡು ಪರೀಕ್ಷಿಸಿ [illegible] ಕಡಿಮೆ ಬಾಳಿಕೆಬರುವಂತೆ [illegible] ಪ್ರಖ್ಯಾತ [illegible] ತಯಾರಿಸಲ್ಪಟ್ಟಿವೆ. ಒಂದು ಸಾರಿ ನಮ್ಮಿಂದ ತರಿಸಿ [illegible] ಚಾಲ್ತಿಕೆ ಸಹ ತಮಗೇ ವ್ಯಕ್ತವಾಗುತ್ತೆ.



ನಂ ೧ ಒಂದು ಸೆಟ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ [illegible] ರೂ.

ನಂ ೭ ಒಂದು ಸೆಟ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ [illegible] ರೂ.

ನಂ ೩ [illegible] (M. Mohen flute) ೧ ಕ್ಕೆ [illegible] ರೂ.

ನಂ ೪ ಡಬ್ಬಲ್‌ರೀಡ್ಸ್ ಉಳ್ಳದ್ದು (Moslem flute) ಹಾರ್ಮೋನಿಯಂ ೧ ಕ್ಕೆ [illegible] ರೂ.

ನಂ ೫ ಡಬ್ಬಲ್‌ರೀಡ್ಸ್ ಉಳ್ಳದ್ದು (M. Mohen flute) ಹಾರ್ಮೋನಿಯಂ ೧ ಕ್ಕೆ [illegible]

ಈ ಹಾರ್ಮೋನಿಯಂಗಳ ಪೈಕಿ ಯಾವುದಕ್ಕೆ ಆರ್ಡರ್ ಕೊಟ್ಟರೂ [illegible] ವ್ವ ಕಳಿಸಬೇಕು. ಬಾಕಿಮೊಬಲಗ್ಗೆ ರೈಲ್ವೆ ಛಾರ್ಜಿಯನ್ನು ವಿ. ಪಿ. [illegible]

ನೆಪ್ಚೂನ್‌ಫೌಂಟೈನ್ ಪೆನ್‌ಗಳು. NEPTUNE FOUNTAIN PENS.

ಈ ಫೌಂಟೈನ್ ಪೆನ್‌ಗಳು ಅವರ [illegible] ನರಾಪಾಗದವರಿಗೆ ಬಾಳಿಕೆ ಬರತಕ್ಕವುಗಳಾಗಿವೆ

ನಂ ೨೦೦ ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ೧ ಕ್ಕೆ [illegible]

ನಂ [illegible] ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಉತ್ತಮವಾದದ್ದು ೧ ಕ್ಕೆ [illegible]

ನಂ ೨೧೦. ೧೪ ಕ್ಯಾರೆಟ್ ಚಿನ್ನದ ನಿಬ್ಬುಳ್ಳದ್ದು ಅತ್ಯುತ್ತಮವಾದದ್ದು ೧ ಕ್ಕೆ [illegible]

ಮೇಲ್ಕಂಡ ಯಾವನಮೂನೆ ಫೌಂಟೈನ್ ಪೆನ್‌ಗಳನ್ನು ತರಿಸಿಕೊಂಡರೂ ಅದರ ಜೊತೆಯಲ್ಲಿ [illegible] ತಕ್ಕ ಕ್ಲಿಪ್ ೧ [illegible] ಬುನವಿಲ್ [illegible] ಸಹ ಕೊಡಲ್ಪಡುತ್ತೆ.



ರಮಿಂಗ್ಟನ್ ವಾಚ್ ಸರಪಣಿಗಳು.

ಈ ಪಕ್ಕದ ಚಿತ್ರದಲ್ಲಿ ಕಾಣಿಸಿರುವ ನಮೂನೆ [illegible] ಸರಪಣಿ [illegible] ೧ ಕ್ಕೆ [illegible] ಮೇಲ್ಕಂಡ ರಮಿಂಗ್ಟನ್ನಿನಲ್ಲಿ ನಿಕ್ಕಲ್‌ಬೆಳ್ಳಿ ಸರಪಣಿ ೧ ಕ್ಕೆ [illegible]

[illegible] ಬೆಳ್ಳಿ ಸರಪಣಿ [illegible] ತಯಾರಿಸಿದ್ದು ೧ ಕ್ಕೆ [illegible]

೧೪ ಕ್ಯಾರೆಟ್ಟು ಚಿನ್ನದ ಸರಪಣಿ ೧ ಕ್ಕೆ [illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಕ್ಷತಕತ್ರಯ	[illegible]
ಪರವಾದಿಗಜಾಂಕುಶ [illegible]	[illegible]
ಶಿವಧರ್ಮಪದ್ಧತಿ	[illegible]
ಚಾರುಶೀಲೆಚರಿತ್ರೆ	[illegible]
ಸಟೀಕ ಪಂಚೀಕೃತ	[illegible]
ಸಟೀಕ ವಿವಾಹಪದ್ಧತಿ	[illegible]
ವಿವೇಕಚಿಂತಾಮಣಿ [illegible]	[illegible]
ವೃಷಪಂಚಕ	[illegible]
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	[illegible]
ಗುರುಶಂಕರಶೀಲವರ್ಣನ [illegible]	[illegible]

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

150

ಬಸವರಾಜವಿಜಯಂ. ಬೆಲೆ ೪—೦, [illegible] ದ ಸುಲಭವಾಗಿ [illegible] ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ — ಬೆಲೆ ೧—೮—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ [illegible] ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇ ಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಶರಣಸಂಗ [illegible] ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ [illegible] ವಾಗಿ [illegible] ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ — ಬೆಲೆ ೧೪ ಆಣೆ [illegible] ಗಳಿಂದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ [illegible] ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ- ಶಿವಯೋಗಗಳು [illegible] ಪ್ರತಿಯೊಂದು ಶ್ಲೋಕಕ್ಕೂ [illegible] ಟೀಕೆಯೂ ವಿಶೇಷಾರ್ಥ [illegible] ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣ — ಬೆಲೆ [illegible] ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರೆಯನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ — ಬೆಲೆ [illegible] ವೀರಶೈವಮತಧರ್ಮವನ್ನು ನಿರೂಪಿಸುವುದು. [illegible]

ಪಂಚಾಕ್ಷರೀ — ಬೆಲೆ ೧ ರೂ. [illegible] ವೇದಾಗಮಪುರಾಣಾದಿ ಪ್ರಮಾಣ [illegible] ಗ್ರಂಥ.

ಸಂಗನಬಸವೇಂದ್ರಚರಿತ್ರೆ — ವೀರಶೈವಮತ [illegible] ಚರಿತ್ರೆ, ಸಟೀಕ ೧ನೇ ಪುಸ್ತಕ [illegible] ೧ ರೂ. ೩ನೇ [illegible]

[illegible] ಸಟೀಕ [illegible] ೬ ಆಣೆ; ಸಟೀಕ [illegible] ೩ ಆಣೆ; [illegible] ೧೦ ಆಣೆ; [illegible] ೭ ಆಣೆ; [illegible] ೧ ಆಣೆ.

ವೀರಶೈವ ಗ್ರಂಥ [illegible] ಗ್ರಂಥಗಳನ್ನು [illegible]

ವಿಳಾಸ— ಎಂ. ಎಸ್. [illegible] ಕೃಷ್ಣರಾಜಮೊ[illegible]

ಪ್ರಕಟನೆ.

ಪ್ರಿಂಟಿಂಗಾಫೀಸಿನವರು ಅಗತ್ಯವಾಗಿ ಮನಿಸತಕ್ಕದು.

ನಮ್ಮಲ್ಲಿ ಈ ಸ್ಟಾರ್ ಪತ್ರಿಕೆಯು ೧, ೨, ೩, ೪, ೫ ಮತ್ತು ೮ನೇ ಪುಟಗಳಲ್ಲುಪಯೋಗಿಸಲ್ಪಟ್ಟಿರುವ ಸ್ಮಾಲ್ ಪೈಕ ಅಥವಾ ೧೧ ಪಾಯಿಂಟ್ ಅಕ್ಷರಗಳ ಮತ್ತು ಈ ಪ್ರಕಟನೆಗುಪಯೋಗಿಸಲ್ಪಟ್ಟಿರುವ ಬೂರ್ಜೈನ್ ಮಿನಿಯನ್ ಅಥವಾ ೧೭ ಪಾಯಿಂಟ್ ಅಕ್ಷರಗಳ ಮ್ಯಾಟ್ರಿಕ್ಸ್‌ಗಳೂ, ಅವುಗಳ ಮೋಲ್ಡುಗಳೂ ಇವನ್ನು ಎರಕವರೆಯುವ ಯಂತ್ರವೂ ಅದಕ್ಕೆ ಸಂಬಂಧಪಟ್ಟ ಲೈನ್ ಗೇಜ್ ಪೇಪರ್ ಗೇಜ್ ಹೈಟ್ ಗೇಜ್ ಪ್ರೆಸ್ಸಿಂಗ್ ಮೈನ್ ಗೇಜ್ ಮುಂತಾದ ಸಾಮಾಗ್ರಿಗಳೂ ಸೂಪರ್ ರಾಯಲ್ ಸೈಜನ್ನು ಪ್ರಿಂಟ್ ಮಾಡುವ ಸಿಲಿಂಡರ್ ಮಿಷನ್ನು ಸಹ ಮಾರಾಟಕ್ಕೆ ಸಿದ್ಧವಾಗಿವೆ. ಈ ಮಿಷನ್ನಿನಲ್ಲೇ ಈ ಸ್ಟಾರ್ ಪತ್ರಿಕೆಯು ಪ್ರಿಂಟುಮಾಡಲ್ಪಡುತ್ತಿರುವುದು. ಎರಕವರೆಯುವ ಮಿಷನ್ನು ಬಹಳ ಸ್ವಲ್ಪ ಕೆಲಸವನ್ನು ಮಾತ್ರ ಮಾಡಿ ಹೊಸದಾಗಿಯೇ ಯಿರುವುದು. ಇಷ್ಟವುಳ್ಳವರು ಇವುಗಳ ಬೆಲೆ ಮೊದಲಾದವನ್ನು ನಮಗೆ ಬರೆದು ತಿಳಿದುಕೊಳ್ಳಬಹುದಲ್ಲದೆ ಪ್ರತ್ಯಕ್ಷದಲ್ಲಿ ಬಂದು ನೋಡಬಹುದು.

ವೈ. ವಿರೂಪಾಕ್ಷಯ್ಯ,
ಪ್ರೊಪ್ರೈಟರ್
ಸ್ಟಾರ್ ಪ್ರೆಸ್, ಮೈಸೂರು.

ವಿದ್ಯಾರ್ಥಿಗಳ ತಾಯಿ ತಂದೆಗಳು ನವೀನ ಪಾಠಕ್ರಮಗಳನ್ನು ಪರಾಮರ್ಶಿಸಲು ಏರ್ಪಡಿಸಿದ್ದ ಒಂದು ಸಂತೋಷ ಕೂಟವು.

ದೊಡ್ಡಬಳ್ಳಾಪುರದ ಪಟ್ಟಣದ ಪ್ರಜಾಸಂಖ್ಯೆಯು ೭-೮ ಸಾವಿರ ಮಾತ್ರವೇ ಆಗಿದ್ದರೂ ಇಲ್ಲಿಯ ಸ್ಕೂಲುಗಳಲ್ಲೆಲ್ಲಾ ಸೇರಿ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ವಿದ್ಯೆಯನ್ನು ಕಲಿಯುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಸಂಗತಿಯೇ ಆಗಿರುತ್ತದೆ. ಈ ಅಂಶವನ್ನು ಪುರಸ್ಕರಿಸಿಯೇ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿಯೂ ಜಾರಿಗೆ ತರತಕ್ಕದ್ದೆಂದು ಸರ್ಕಾರದವರು ಅಪ್ಪಣೆ ದಯಪಾಲಿಸಿರುವುದು. ಈ ರೀತಿ ಇಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ವಿಶೇಷ ಪ್ರಾಚುರ್ಯದಲ್ಲಿರುವುದನ್ನು ಕಂಡು ಸುತ್ತುಮುತ್ತಣ ಗ್ರಾಮಾಂತರದವರಿಗೂ ಸಹ ಇಲ್ಲಿಯ ಸ್ಕೂಲುಗಳಲ್ಲಿ ನಡೆಯುತ್ತಿರುವ ನವೀನ ಪಾಠಕ್ರಮಗಳನ್ನು ಪರಾಮರ್ಶಿಸುವುದರ ಮೂಲಕ ತಮ್ಮ ತಮ್ಮ ಗ್ರಾಮಗಳಲ್ಲಿ ವಿದ್ಯೆಯನ್ನು ಹೆಚ್ಚು ಹೆಚ್ಚಾಗಿ ಹರಡುತ್ತಾ ಬರುವ ವಿಷಯದಲ್ಲಿ ಪ್ರಯತ್ನ ಪಡಲಾಗಲು ಪ್ರೋತ್ಸಾಹವುಂಟಾಗಲೆಂಬ ಮುಖ್ಯೋದ್ದೇಶದೊಡನೆ ಇಲ್ಲಿ ಕಳೆದ ಬುಧವಾರ ಒಂದು ವಿದ್ಯಾಭ್ಯಾಸದ ಪ್ರದರ್ಶನವು ನಡೆಸಲ್ಪಟ್ಟಿತು. ಇದನ್ನು ತೃಪ್ತಿಕರವಾಗಿಯೂ, ಸಾಂಗವಾಗಿಯೂ ನೆರವೇರಿಸುವವಿಚಾರದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಿಂದ ಪ್ರೇರಿತರಾಗಿ ಈ ಪ್ರಾಂತ್ಯದ ಉಪಾಧ್ಯಾಯರುಗಳೆಲ್ಲಾ ಆದರ್ಶಪ್ರಾಯರಾಗಿಯೂ, ವಿಶೇಷ ಉತ್ಸಾಹದಾಯಕರಾಗಿಯೂ ಇರುವ ಇಲ್ಲಿಯ ಎ. ವಿ. ಸ್ಕೂಲ್ ಹೆಡ್‌ಮಾಸ್ಟರ್ ಡಿ. ಕೆಂಗಾಡಿಯಪ್ಪನವರು ಮುಂದಾಳುಗಳಾಗಿದ್ದರು. ಇದೇ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರುಗಳೂ, ಇತರ ಎಲ್ಲ ಸ್ಕೂಲಿನ ಮಾಸ್ಟರುಗಳೂ ಇವರ ಸಹಾಯಕರಾಗಿದ್ದುದಲ್ಲದೆ, ಈ ಊರಿನ ಅಮಲ್ದಾರರು, ಮುನ್ಸೀಫರು ಮೊದಲಾದ ಸ್ಥಳೀಯಾಧಿಕಾರಿಗಳೂ, ಅಡ್ವೊಕೇಟರು, ಮ್ಯುನಿಸಿಪಲ್ ಕೌನ್ಸಿಲರು ಮುಂತಾದ ಪ್ರಮುಖರೂ ಸೇರಿ ಒಂದು ಕಮಿಟಿಯನ್ನೇರ್ಪಡಿಸಿಕೊಂಡಿದ್ದುದರಿಂದ ಸಕಲ ಕಾರ್ಯಗಳೂ ಬಹಳ ವಿಚಾರಣೆಯಿಂದ ನಡೆಯಲು ಅನುಕೂಲವಾಯಿತು.

ಇಲ್ಲಿನ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಏರ್ಪಡಿಸಿದ್ದ ವಿದ್ಯಾಭ್ಯಾಸ ಪ್ರದರ್ಶನದಲ್ಲಿ ಈ ಊರಿನ ಎಲ್ಲ ಸ್ಕೂಲುಗಳ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಚಿತ್ರದ ಕೆಲಸ, ಬರವಣಿಗೆ, ಚಿತ್ರದ ಕೆಲಸ, ಮಣ್ಣಿನ ಕೆಲಸ, ಬತ್ತದ ಹೊಗೆ, ನೆಯಿಗೆ ಮುಂತಾದ ಕೈಗಾರಿಕೆಯ ಕೆಲಸ ಮುಂತಾದವುಗಳು ಮಾತ್ರವೇ ಅಲ್ಲದೆ ಬೇರೆ ಸ್ಕೂಲುಗಳ ಕೆಲಸಗಳೂ ಪ್ರದರ್ಶಿಸಲ್ಪಟ್ಟಿದ್ದುವು. ಬೆಂಗಳೂರು ಬಾಯ್ಸ್ ಸ್ಕೌಟ್ ಸಂಘ ಎಂಬ ದೇಶ ಸೇವಾ ಸಂಘದ ಮ್ಯಾನೇಜರ್ ಮಿ॥ ಹನುಮಂತರಾಯರವರ ಸಹಾಯದಿಂದ ಸ್ಕೌಟ್ ಸಮಾಚಾರಗಳೂ, ಸೋ[illegible]

ಮಿ॥ ಎಸ್. ವಿ. ಕೃಷ್ಣರವರು ತಮ್ಮ ಸ್ಕೂಲಿನಲ್ಲಿ ನಡೆಯುವ ನೇಯ್ಗೆ ಮತ್ತು ಹೊಲಿಗೆಯ ಮಾದರಿಗಳನ್ನೂ, ಮೈಸೂರು ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಾಲರಾದ ಮಿ॥ ಡಿ. ವೆಂಕಟರಾಮಯ್ಯನವರೂ, ಅದೇ ಕಾಲೇಜಿನ ಕಿಂಡರ್‌ಗಾರ್ಟನ್ ಸೆಕ್ಷನ್ ಸೂಪರಿಂಟೆಂಡೆಂಟ್ ಮಿ॥ ಎಂ. ವೆಂಕಟಸುಬ್ಬಯ್ಯನವರೂ ತಮ್ಮ ವಿದ್ಯಾರ್ಥಿಗಳು ಮಾಡಿದ್ದ ಕಿಂಡರ್‌ಗಾರ್ಟನ್ ಮುಂತಾದುವುಗಳ ಸಂಬಂಧಪಟ್ಟ ಸಾಮಗ್ರಿಗಳನ್ನು ಪ್ರದರ್ಶಿಸಿದ್ದರು. ಅಲ್ಲದೆ ಬೆಂಗಳೂರು ಲೈಬ್ರರಿಯಲ್ಲಿ ಸೈನ್ಸ್ ಎಂಬ ಶಾಸ್ತ್ರಬೋಧಕರಾದ ಮಿ॥ ಅನಂತಪದ್ಮನಾಭನವರೂ, ಮಿ॥ ನಾರಾಯಣಮೂರ್ತಿಯವರೂ ತಮ್ಮ ಸ್ಕೂಲಿನ ಕೆಲವು ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ಶಾಸ್ತ್ರಪಾಠಗಳಲ್ಲಿ ಕೆಲವು ಮುಖ್ಯಾಂಶಗಳನ್ನು ನಿದರ್ಶನ ಪೂರ್ವಕವಾಗಿ ಬೋಧಿಸುತ್ತಿದ್ದುದು ಅನೇಕರಿಗೆ ಕೌತುಕವನ್ನು ಹುಟ್ಟಿಸುವಂತಾಗಿತ್ತು. ಇಷ್ಟೇ ಅಲ್ಲದೆ ಸ್ಲಾಯ್ಡ್ ಸೂಪರ್‌ವೈಸರ್ ಮಿ॥ ಡಿ. ಅವನಾರಣಪ್ಪನವರಿಂದ ಸ್ಲಾಯ್ಡ್ ವಿದ್ಯೆಗೆ ಸಂಬಂಧಪಟ್ಟ ಸಾಮಗ್ರಿಗಳೂ, ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರ ಆಫೀಸಿನಿಂದ ವಿಲಾಯಿತಿಯ ಸ್ಕೂಲುಗಳಿಗೆ ಸಂಬಂಧಪಟ್ಟ ವಿದ್ಯಾಭ್ಯಾಸದ ಸಾಮಗ್ರಿಗಳೂ ಬಂದಿದ್ದವು. ಮತ್ತು ಇದೇ ತಾ॥ಗೆ ಸೇರಿದ ಗ್ರಾಮಾಂತರದ ಸ್ಕೂಲುಗಳವರೂ, ಬೆಂಗಳೂರು ಚಾಮರಾಜಪೇಟೆ ಗರ್ಲ್ಸ್ ಸ್ಕೂಲು, ಮಾಡೆಲ್ ಇನ್‌ಫೆಂಟ್ ಸ್ಕೂಲು, ಯಲಹಂಕ, ದೇವನಹಳ್ಳಿ, ಗುಡಿಬಂಡೆ, ಗೌರಿಬಿದನೂರು, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ರಾಬರ್ಟ್‌ಸನ್‌ಪೇಟೆ, ಬೌರಿಂಗ್‌ಪೇಟೆ, ಮಾಲೂರು, ಚನ್ನಪಟ್ಟಣ, ಆನೇಕಲ್ಲು, ನೆಲಮಂಗಲ, ಸಾದೇನಹಳ್ಳಿ, ಹಿಂದೂಪುರದ ತಾಲ್ಲೂಕ್ ಬೋರ್ಡಿನ ಸ್ಕೂಲು ಮುಂತಾದ ಸ್ಕೂಲುಗಳವರೂ ಸಾಮಗ್ರಿಗಳನ್ನು ಪ್ರದರ್ಶಿಸಿದ್ದರು. ಮಿ॥ ಬಿ. ಎಲ್. ಲಕ್ಷ್ಮಣರಾಯರೆಂಬುವರು ಎಲೆಕ್ಟ್ರಿಕ್ ಲೈಟ್, ಎಲೆಕ್ಟ್ರಿಕ್ ಬೆಲ್ ಮುಂತಾದ ವಿದ್ಯುಚ್ಛಕ್ತಿಯ ಸಾಮಗ್ರಿಗಳನ್ನು ಎಲ್ಲರಿಗೂ ಪ್ರದರ್ಶಿಸಿ ವಿವರಿಸುತ್ತಿದ್ದರು. ಇವುಗಳೆಲ್ಲವೂ ವಿದ್ಯಾವರ್ಧಕಗಳಾಗಿಯೂ ಹಸ್ತಕೌಶಲ್ಯಪ್ರದರ್ಶಕಗಳಾಗಿಯೂ ಇದ್ದುವಲ್ಲದೆ ಪೂರ್ವಕಾಲದ ಹಳೆಯ ತರದ ವಿದ್ಯಾಭ್ಯಾಸಕ್ಕೂ ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನು ಪ್ರದರ್ಶಿಸಲು ಸಾಧಕಗಳಾಗಿದ್ದುವು.

ಪ್ರಾತಃಕಾಲ ೯ ಘಂಟೆಯ ಟ್ರೈನಿನಲ್ಲಿ ಬೆಂಗಳೂರಿನಿಂದ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ರಾವ್ ಬಹದ್ದೂರ್ ಮಿ॥ ಎಂ. ಶಾಮರಾಯರವರೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮಿ॥ ಸಿ. ಕೃಷ್ಣರಾಯರವರೂ, ಸರ್ಕಲ್ ಇನ್ಸ್‌ಪೆಕ್ಟರ್ ಮಿ॥ ಬಿ. ದಾಸಪ್ಪನವರೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ॥ ಟಿ. ವಿ. ಕೃಷ್ಣರಾಯರವರೂ, ಆನರರಿ ಬೆಂಚ್ ಮೇಜಿಸ್ಟ್ರೇಟ್ ಮಿ॥ ಡಿ. ಆದೆಪ್ಪನವರೂ ದಯಮಾಡಿಸಿದ್ದರು. ಅವರುಗಳನ್ನು ಊರಿನ ಪ್ರಮುಖರೆಲ್ಲರೂ ಸೇರಿ ಉಚಿತಮರ್ಯಾದೆಯೊಡನೆ ಇದಿರುಗೊಂಡನಂತರ, ಎ. ವಿ. ಸ್ಕೂಲಿನ ಇದಿರಿನಲ್ಲಿ ಅಲಂಕರಿಸಿದ್ದ ಚಪ್ಪರದ ಬಳಿ ಗರ್ಲ್ಸ್ ಸ್ಕೂಲಿನ ವಿದ್ಯಾರ್ಥಿನಿಯರೂ, ಎ. ವಿ. ಸ್ಕೂಲ್ ಹಿಂದೂಸ್ಥಾನಿ ಸ್ಕೂಲುಗಳ ವಿದ್ಯಾರ್ಥಿಗಳೂ ಸಹ ಸೇರಿ ಸ್ವಾಗತಪೂರ್ವಕವಾಗಿ ಎದುರುಗೊಂಡರು. ಅವರುಗಳೂ ಅದುವರೆಗೆ ಅಲ್ಲಿ ವಿಶೇಷವಾಗಿ ನೆರೆದಿದ್ದ ಊರಿನ ಪ್ರಮುಖರೂ ಸ್ಕೂಲಿನೊಳಗೆ ಏರ್ಪಡಿಸಲ್ಪಟ್ಟಿದ್ದ ಪ್ರದರ್ಶನವನ್ನು ಆಮೂಲಾಗ್ರವಾಗಿ ಪರಾಮರ್ಶಿಸಿದನಂತರ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಮಾಡಿ ತೋರಿಸಿದ ಅಭಿನಯಗೀತ, ಕಿಂಡರ್ ಗಾರ್ಟನ್ ಆಟ, ಡ್ರಿಲ್, ಡಂಬ್ ಬೆಲ್ಸ್ ಸಾಧನೆ, ಗಣಿತ, ವ್ಯಾಕರಣ ಮುಂತಾದ ಪಾಠಗಳ ಬೋಧನಾಕ್ರಮ ಇವುಗಳನ್ನೆಲ್ಲಾ ಪರಾಮರ್ಶಿಸಿ ಭೋಜನಕ್ಕೆ ತೆರಳಿದರು.

ಮಧ್ಯಾಹ್ನ ೧ ಘಂಟೆಯ ಟ್ರೈನಿನಲ್ಲಿ ಬೆಂಗಳೂರಿನಿಂದ ಮುಖಾರಾವಕ್ಷೀಯವರುಗಳಾದ ಸೆಂಟ್ರಲ್ ಹೆಡ್‌ಮಾಸ್ಟರು, ವಿ. ಸುಬ್ರಹ್ಮಣ್ಯಯ್ಯರವರೂ, ಅಡ್ವೋಕೇಟ್ ಡಿ. ವೆಂಕಟರಾಮಯ್ಯನವರೂ, ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್ ಬಿ. ಕೆ. ಗರುಡಾಚಾರ್ಯರವರೂ, ಸೆಂಟ್ರಲ್ ಕೋಆಪರೇಟಿವ್ ಸೆಕ್ರೆಟರಿ ಕೆ. ಎಚ್. ಕೃಷ್ಣಯ್ಯಂಗಾರರವರೂ, ರಾಮಚಂದ್ರರಾವ್ ಸಿಂಧ್ಯರವರೂ, ದಿವಾನ್ ಸಾಹೇಬರವರ ಕ್ಲಾರ್ಕ್ ಟಿ. ಸಿ. ಸುಬ್ಬರಾಮಯ್ಯನವರೂ, ದೇವನಹಳ್ಳಿಯಿಂದ ಪೋಲೀಸರವಲ್ಲಿ ಡೆಪ್ಯುಟಿ ಕಮೀಷನರ್ ಮಿ॥ ಮಾದಪ್ಪನವರೂ ದಯಮಾಡಿಸಿದರು.

ಸಾಯಂಕಾಲ ೪ ಘಂಟೆಯವರೆಗೂ ಈ ಊರಿನವರೂ ಪರಸ್ಥಳದವರೂ, ಹಳ್ಳಿಗಳ ಪ್ರಮುಖರೂ ಸರ್ವರೂ ಪ್ರದರ್ಶನವನ್ನು ನೋಡಿ ಆನಂದಿಸಿದರು. ಅನಂತರ ಸ್ಕೂಲು ಬಳಿ [illegible] ಹಾಕಿದ್ದ ಚಪ್ಪರದಲ್ಲಿ ಸಭೆ ನೆರೆದಿತ್ತು. [illegible] ಅಧ್ಯಕ್ಷ [illegible] ಶಾಮರಾಯರವರು ಆಗಮಿಸಿ[illegible] ಸಭೆ [illegible] ಪ್ರಾರಂಭವಾಯಿತು [illegible]

ದೆನವು. ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಕೋಲು ಪ್ರಶ್ನೆ, ಸಂಭಾಷಣೆ, ಸಂಗೀತ, ನಾಟಕಾಭಿನಯ ಮುಂತಾದುವುಗಳೆಲ್ಲವೂ ಆನಂದದಾಯಕಗಳಾಗಿದ್ದುವು. ಮುಖ್ಯವಾಗಿ ಪಂಡಿತಮಹಾಶಯರುಗಳು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಸಭಾಧ್ಯಕ್ಷರವರ ಪರವಾಗಿ ರಚಿಸಿ ಓದಿ ಹೇಳಿದ ಕವನಗಳು ಶ್ಲಾಘನೀಯಗಳಾಗಿದ್ದುವು. ಇವೆಲ್ಲವೂ ಮುಗಿದನಂತರ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮಿ॥ ಸಿ. ಕೃಷ್ಣರಾಯರವರು ವಿದ್ಯಾವಿಚಾರದಲ್ಲಿ ಸ್ವಾರಸ್ಯಕರವಾದ ಒಂದು ಉಪನ್ಯಾಸವನ್ನು ಅಪ್ಪಣೆಮಾಡಿಸಿದರು. ಇದರಲ್ಲಿ ಅವರು ಪೂರ್ವಕಾಲದ ವಿದ್ಯಾಭ್ಯಾಸಕ್ಕೂ ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಇರತಕ್ಕ ತಾರತಮ್ಯಗಳನ್ನು ವಿವರಿಸಿದುದಲ್ಲದೆ ನಾಗರಿಕತೆಯು ಉನ್ನತಸ್ಥಿತಿಯಲ್ಲಿರುವ ದೇಶಗಳೊಡನೆ ಹೋಲಿಸಿ ನೋಡುವುದರಿಂದ ನಮ್ಮ ದೇಶದಲ್ಲಿ ವಿದ್ಯಾಭ್ಯಾಸವು ವಿಶೇಷ ಹಿಂದುಳಿದಿದೆ ಎಂಬುದು ವಿಶದವಾಗುವುದೆಂತಲೂ, ಸಮಸ್ತರೂ ವಿದ್ಯಾರ್ಜನೆಗಾಗಿ ತಕ್ಕ ಪ್ರಯತ್ನಗಳನ್ನು ಮಾಡುತ್ತಾ ಬಂದಲ್ಲದೆ ಈ ದೇಶವು ಅಭಿವೃದ್ಧಿಗೆ ಬರುವುದು ಸಾಧ್ಯವಾಗಲಾರದೆಂತಲೂ ವಿಶದವಾಗಿ ಉಪನ್ಯಾಸಮಾಡಿದರು. ಮಿ॥ ಅಡ್ವೋಕೇಟ್ ವೆಂಕಟರಾಮಯ್ಯನವರು ಸಹ ಮಿ॥ ಕೃಷ್ಣರಾಯರ ಉಪನ್ಯಾಸವನ್ನೇ ಅನುಸರಿಸಿ ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ ರಾವ್ ಬಹದ್ದೂರ್ ಮಿ॥ ಎಂ. ಶಾಮರಾಯರವರು ಪ್ರದರ್ಶನ ಮುಂತಾದುವುಗಳನ್ನೆಲ್ಲ ತೃಪ್ತಿಕರವಾಗಿ ಏರ್ಪಡಿಸಿದುದಕ್ಕಾಗಿ ಹೆಡ್‌ಮಾಸ್ಟರ್ ಮಿ॥ ಡಿ. ಕೆಂಗಾಡಿಯಪ್ಪನವರನ್ನೂ, ಕಮಿಟಿಮೆಂಬರುಗಳನ್ನೂ ಶ್ಲಾಘಿಸಿ, ಸರ್ಕಾರದವರು ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಈ ಊರಿನಲ್ಲಿ ಜಾರಿಗೆ ತರಬಹುದೆಂದು ಅಪ್ಪಣೆ ಮಾಡಿದರೂ, ಅದರ ನಿಯಮಗಳನ್ನು ಇಲ್ಲಿ ಜಾರಿಗೆ ತರಬೇಕಾದ ಪ್ರಮೇಯವೇ ಬಾರದಂತೆ ಸರ್ವರೂ ತಮ್ಮ ಮಕ್ಕಳನ್ನು ತಾವಾಗಿಯೇ ವಿದ್ಯಾವಂತರನ್ನಾಗಿ ಮಾಡಿ ವಿದ್ಯೆಯ ಫಲಗಳನ್ನು ಪಡೆಯಬೇಕಾಗಿರುವುದೆಂತಲೂ, ಸರ್ಕಾರದವರು ಈಗಾಗಲೇ ಬಾಲವಿದ್ಯಾಭ್ಯಾಸಕ್ಕಾಗಿ ೩॥ ಲಕ್ಷ ರೂಪಾಯಿ ಮಂಜೂರು ಮಾಡಿರುವರೆಂತಲೂ, ಇನ್ನೂ ಹೆಚ್ಚಾಗಿ ಬೇಕಾದರೂ ಮಂಜೂರುಮಾಡಲು ಸಿದ್ಧರಾಗಿರುವರೆಂತಲೂ, ಈಗಿನ ಕಾಲದ ವಿದ್ಯಾಭ್ಯಾಸವು ಬಳಕೆಗೆ ಉಪಯೋಗವಾದಿಯಲ್ಲಿ ಕಲಿಸಲ್ಪಡುವುದೆಂತಲೂ ಸರ್ವಜನ ಹೃದಯಂಗಮವಾದ ಭಾಷಣವನ್ನು ಮಾಡಿದರು. ಅನಂತರ ಅಡ್ವೋಕೇಟ್ ವಿ. ಬಿ. ಗೋಪಾಲಸ್ವಾಮಿ ಅಯ್ಯಂಗಾರ್ಯರೂ, ಮ್ಯುನಿಸಿಪಲ್ ಕೌನ್ಸಿಲರ್ ಮಿ॥ ಆಲಂಪಲ್ಲಿ ವೆಂಕಟನಾರಾಯಣಯ್ಯನವರೂ ಊರಿನ ಜನರ ಪರವಾಗಿ ಸಭಾಧ್ಯಕ್ಷರವರಿಗೆ ವಂದನೆಗಳನ್ನು ಸಮರ್ಪಿಸಿದರು. ಗಂಧಪುಷ್ಪಗಳ ವಿನಿಯೋಗಾನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ, ಮಂಗಳ ಮುಂತಾದುವುಗಳು ನಡೆದು ಸಭೆಯು ವಿಸರ್ಜನವಾಯಿತು. ಬೆಂಗಳೂರಿಂದ ದಯಮಾಡಿಸಿದ್ದವರೆಲ್ಲರೂ ರಾತ್ರಿಯ ರೈಲಿನಲ್ಲಿ ಹಿಂದಿರುಗಿದರು.

[illegible] ಈ ಊರಿನವರೂ, ಸುತ್ತ ಮುತ್ತಣ [illegible] ಇವನ್ನು ಪ್ರತಿದಿನವೂ ನೋಡುವಂತೆ [illegible] ಇರುವರು. ಇದರಿಂದ ಇಲ್ಲಿ ಎಲ್ಲರಿಗೂ ವಿದ್ಯೆಯ ವಿಚಾರದಲ್ಲಿ ವಿಶೇಷವಾದ ಆಸಕ್ತಿಯು ಹುಟ್ಟುವಂತಾಗಿರುತ್ತದೆ.

ಯುದ್ಧವಾರ್ತೆ.

ಯುದ್ಧವು ಪ್ರಬಲಿಸುತ್ತಾ ಬರುವುದರಿಂದ ಅದರ ಸಂಬಂಧವಾದ ವಾರ್ತೆಗಳೂ ಏರ್ಪಡುತ್ತಿವೆ. ಈಗಿನ ಯುದ್ಧ ಒಂದೊಂದು ಭಾಗದಲ್ಲಿ ನಡೆಯದೆ ಹಲವು ಕಡೆಗಳಲ್ಲಿ ಭೂಲೋಕಾಗಳಲ್ಲಿ ನಡೆಯುತ್ತಿರುವುದರಿಂದ ವಿಪುಲವಾಗಿರುವ ಆ ಯುದ್ಧದ ಸಂಬಂಧದ ವಾರ್ತೆಗಳನ್ನೆಲ್ಲಾ ವಾರಪತ್ರಿಯಲ್ಲಿ ಸಾಂಗವಾಗಿ ಬರೆಯುವುದು ಅಸಾಧ್ಯವಾದುದರಿಂದ ಕಳೆದೆರಡು ವಾರಗಳಲ್ಲಿ ನಡೆದಿರುವ ಸಂಗ್ರಾಮವಾರ್ತೆಗಳ ಮುಖ್ಯಮುಖ್ಯವಾದುವುಗಳನ್ನು ಶೋಧಿಸಿ ಬರೆದಿರುತ್ತೇವೆ.

ಆಗಸ್ಟ್ ತಾ॥ ೨೨.

ಬೆಲ್ಜಿಯಮ್ಮಿನ ರಾಜಧಾನಿಯಾದ ಬ್ರುಸಲ್ಸ್ ಪಟ್ಟಣವನ್ನು ಜರ್ಮನಿಯವರು ಹಿಡಿದುಕೊಂಡರು. ಆದರೆ ಹೀಗೆ ಹಿಡಿದುಕೊಂಡುದರಲ್ಲಿ ಜರ್ಮನಿಯವರ ಶೌರ್ಯಪ್ರತಾಪಗಳೇನೂ ಕಾರಣವಲ್ಲ; ಬೆಲ್ಜಿಯಮ್ಮಿನ ಪ್ರಭುತ್ವದವರು ಸುರಕ್ಷಿತವಲ್ಲದ ಆ ಪಟ್ಟಣವನ್ನು ತಾವಾಗಿ ತ್ಯಜಿಸಿ, ಅದಕ್ಕೆ ಪಶ್ಚಿಮದಲ್ಲಿರುವ ಆಂಟ್‌ವರ್ಪ್ ಎಂಬ ಸುರಕ್ಷಿತವಾದ ಪಟ್ಟಣಕ್ಕೆ ಹೋಗಿ ನೆಲಸಿ, ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಬ್ರುಸೆಲ್ಸನ್ನು ಜರ್ಮನಿಯವರು ಹಿಡಿದುಕೊಂಡಾಗ [illegible] ಇರಲಿಲ್ಲ. ಪೋಲೀಸಿನವರುಗಳೂ [illegible] ಯಾವ್ವನವರಿಂದಲೇ ಮಾಡಲ್ಪ [illegible]

ನಾಶಿಸಿದುದು ಒಂದು ಸಿಕ್ಕೀಮಸಾಂದ ನವ ಕೋಟಿಯಾಯುರದಸ್ಯವೆಂದು ಎಟಕ್ಷಣರಿಂದ ಭಾವಿಸಲ್ಪಟ್ಟಿದೆ. ಅದುಕಾರಣ ಇದರಲ್ಲಿ ಬೆಲ್ಜಿಯಮ್ಮಿನವರ ಕಲ್ಪನೆ ಸ್ವಲ್ಪವೂ ಇಲ್ಲ. ಅತ್ತ ನಮ್ಯೂದವರು ಜರ್ಮನಿಯವರ ಕೈಗೆ ಸಿಗ್ಗ ೩ ದಿವಸಗಳವರೆಗೆ ಫಾರೆಂಟಿ ಫೀಲ್ಡ್ ಎಂಬ ಸಿಬ್ಬಂದಿಯನ್ನು ಹಿಡಿದುಕೊಂಡರು.

ತಾ॥ ೨೩

ಮಹಾನದೀ ಪ್ರವಾಹದಂತೆ ನುಗ್ಗಿಬರುತ್ತಿರುವ ಜರ್ಮನ್ ಸೇನೆಯು ಬ್ರುಸೆಲ್ಸ್ ಪಟ್ಟಣವನ್ನು ಹಿಡಿದುಕೊಂಡ ಬಳಿಕ ಅಲ್ಲಿಂದ ಹೊರಟು ಬ್ರುಸೆಲ್ಸಿಗೆ ೩೦ ಮೈಲಿ ದೂರದಲ್ಲಿರುವ ಅಲೋಸ್ಟ್ ಟೆರ್ಮಾಂಡ್ ಎಂಬ ಇನ್ನೆರಡು ಪಟ್ಟಣಗಳನ್ನೂ (ಇವೂ ಬೆಲ್ಜಿಯಮ್ಮಿನವು) ಹಿಡಿದುಕೊಂಡರು. ಮತ್ತೂ ಉತ್ತರಸಮುದ್ರತೀರದಲ್ಲಿರುವ ಓಸ್ಟೆಂಡ್ ಎಂಬ ಮುಖ್ಯಪಟ್ಟಣವನ್ನೂ ಘೆಂಟ್ ಎಂಬ ಪಟ್ಟಣವನ್ನೂ ಸಹ ಹಿಡಿದುಕೊಂಡರು. ಜರ್ಮನಿಯವರು ತಾವು ಆಕ್ರಮಿಸಿಕೊಂಡ ಬ್ರುಸೆಲ್ಸ್ ಪಟ್ಟಣದಲ್ಲೂ, ಲೀಜ್ ಪಟ್ಟಣದಲ್ಲೂ ದಂಡತೆರಿಗೆಯನ್ನು ವಸೂಲುಮಾಡುತ್ತಿರುವರು. ತಮ್ಮ ಯುದ್ಧದ ವೆಚ್ಚಕ್ಕಾಗಿ ಬ್ರುಸೆಲ್ಸ್ ಪಟ್ಟಣದವರು ೧೦೦ ಲಕ್ಷ ರೂಗಳನ್ನು, ಲೀಜ್ ಪಟ್ಟಣದವರು ೩೦ ಲಕ್ಷ ರೂಗಳನ್ನೂ ಕೊಡಬೇಕೆಂದು ನಿರ್ಬಂಧಿಸಿ, ಬಲಾತ್ಕಾರದಿಂದ ಸುಲಿದುಕೊಂಡರು. ಜರ್ಮನ್ ಸೇನಾ ಶಿಬಿರದ ಮೇಲೆ ಒಬ್ಬ ಫ್ರೆಂಚ್ ವೈಮಾನಿಕನು ರಾತ್ರಿ ಹೊತ್ತು ಸಿಡಿಮದ್ದುಗಳನ್ನಿಟ್ಟನು. ಅಷ್ಟರಲ್ಲಿ ಸೈನಿಕರಲ್ಲಿ ಗದ್ದಲವೆದ್ದಿತು. ಇವರಲ್ಲಿದ್ದ ದೀಪಗಳನ್ನೆಲ್ಲಾ ಆರಿಸಿಬಿಟ್ಟರು (ಇದರಿಂದ ವೈಮಾನಿಕರಿಗೆ ಶಿಬಿರದ ಗುರ್ತು ಹತ್ತಬಾರದೆಂಬುದೇ ಅವರ ಉದ್ದೇಶ) ಬಳಿಕ ಜರ್ಮನಿಯವರು ಆಕಾಶವಿಮಾನ ಫಿರಂಗಿಗಳನ್ನು ಹಾರಿಸಿದರು. ವೈಮಾನಿಕರು ತಪ್ಪಿಸಿಕೊಂಡು ಹೋದರು. ಇದುವರೆಗೆ ನಡೆದಿರುವ ಆಕಾಶವಿಮಾನಗಳ ಸಾಹಸಗಳು ಅಷ್ಟೇನೂ ಫಲಪ್ರದವಾದಂತೆ ಕಾಣಲಿಲ್ಲ. ಇವುಗಳು ಉದಯಿಸಿದಾಗ ಇವುಗಳ ಲಾಭವು ಯುದ್ಧಸಮಯದಲ್ಲಿ ಎಷ್ಟುಮಟ್ಟಿಗೆ ಆಗುವುದೆಂದು ಭೀತಿಪ್ರದವಾಗಿ ಹೇಳಲ್ಪಡುತ್ತಿದ್ದಿತೋ ಅಷ್ಟೊಂದು ಈಗಿನ ವಿದ್ಯಮಾನದಿಂದ ಉತ್ಪ್ರೇಕ್ಷೆಯೆಂದು ಭಾವಿಸುವಂತಾಗಿದೆ. ನೀರ ಹೊರತು ವಿಮಾನಗಳಿಂದ ಅಧೂತಪೂರ್ವವಾದ ಅನರ್ಥಗಳೇನೂ ಸಂಭವಿಸಿರುವಂತೆ ಗೊತ್ತಾಗುವುದಿಲ್ಲ.

ಪೂರ್ವದೇಶದಲ್ಲೂ ಯುದ್ಧ

ಇದುವರೆಗೆ ಬೆಲ್ಜಿಯಮ್ ದೇಶದಲ್ಲೇ ಯುದ್ಧಭೇರಿಯು ವ್ಯಾಪಿಸುತ್ತಿದ್ದಿತು. ಆಗಸ್ಟ್ ತಾ॥ ೨೦ ರಲ್ಲಿ ಪೂರ್ವದೇಶದ ಕೊರಿಯಾ ಸಮೀಪವಾದ ಜಪಾನ್ ದೇಶವು ಕೂಡ ಜರ್ಮನಿಯ ಮೇಲೆ ಯುದ್ಧವನ್ನು ಸಾರಿ ರಣಭೇರಿಯನ್ನು ಹೊಡೆದಿತು. ಪೂರ್ವಸಮುದ್ರದಲ್ಲಿ ಶಾಂತಿರಕ್ಷಣೆಗಾಗಿ ಇಂಗ್ಲಾಂಡಿಗೂ ಜಪಾನಿಗೂ ಸಂಧಿಯು ನಡೆದಿರುವುದು. ಈಗ ಜರ್ಮನಿಯವರು ಪೂರ್ವಸಮುದ್ರದಲ್ಲಿ ತಮಗೆ ಸೇರಿರುವ ಕಿಯಾಚೋ ಬಳಿಯಲ್ಲಿ ಯುದ್ಧಸನ್ನಾಹವನ್ನು ಮಾಡುತ್ತಿರುವರೆಂದು ಗೊತ್ತಾದುದರಿಂದ, ಇದನ್ನು ನಿಲ್ಲಿಸಬೇಕೆಂದೂ, ಇದು ಶಾಂತಿಗೆ ಭಂಗಕಾರಿಯೆಂದೂ, ನಿಮ್ಮ ಯುದ್ಧ ಹಡಗುಗಳು ಪೂರ್ವಸಮುದ್ರದಲ್ಲಿ ನಮ್ಮ ಮಿತ್ರರ ವ್ಯಾಪಾರಕ್ಕೆ ಧಾಂಗುಡಿಸುತ್ತಿರುವುದರಿಂದ [illegible] ಜಪಾನಿನವರು ಜರ್ಮನಿಗೆ ಅಂತ್ಯಸಂದೇಶವನ್ನು ಕಳುಹಿಸಿದರು. ಅದಕ್ಕೆ ಜರ್ಮನಿಯಿಂದ ಉತ್ತರವು ಬರಲಿಲ್ಲ. ಆ ಕಾರಣ, ಅವರು ಜರ್ಮನಿಯ ಮೇಲೆ ಯುದ್ಧಮಾಡುವುದನ್ನು ಪ್ರಕಟಿಸಿದರು.

ಬೆಲ್ಜಿಯಮ್ಮಿನವರು ಸಣ್ಣ ದೇಶದವರಾದರೂ ಅವರು ಜರ್ಮನಿಯಂಥ ಮಹಾದೇಶದ ಅಗಣಿತವಾದ ಸೇನೆಗೆ ಪ್ರತಿಭಟಿಸಿ ನಿಂದು ಲೋಕಾಶ್ಚರ್ಯಕರವಾದ ಶೌರ್ಯಧೈರ್ಯಗಳನ್ನು ತೋರಿಸಿ ಜಯಗಳಿಸಿರುವುದರಿಂದ, ಇಂಗ್ಲೆಂಡ್, ಫ್ರಾನ್ಸು, ರಷ್ಯಾದೇಶಗಳು ಸೇನೆಯನ್ನು ಅಣಿಮಾಡಿಕೊಳ್ಳುವುದಕ್ಕೆ ಅವಕಾಶವಾದುದಲ್ಲದೆ ಜರ್ಮನಿಯವರ ಅಕೋತ್ತರದ ಸಂಕಲ್ಪವೆಲ್ಲಾ ವಿಫಲವಾಗಿ ಹೋಗುವಂತಾಯಿತು. ಮತ್ತೂ ಈ ಯುದ್ಧದಿಂದ ಬೆಲ್ಜಿಯಮ್ಮಿಗೆ ಬಹಳ ನಷ್ಟವು ಸಂಭವಿಸಿತು. ಇದನ್ನೆಲ್ಲಾ ಫ್ರಾನ್ಸು ಪರಿಭಾವಿಸಿ, "ನೀವು ಪಡುತ್ತಿರುವ ಕಷ್ಟಗಳು ನಮಗೆ ತುಂಬಾ ವಿಷಾದವನ್ನುಂಟುಮಾಡಿದೆ. ಫ್ರಾನ್ಸಿಗೂ ಬೆಲ್ಜಿಯಮ್ಮಿಗೂ ಅವಿಭಾಜ್ಯವಾದ ರಕ್ತಸಂಬಂಧವಿದೆ. ಬೆಲ್ಜಿಯಂ ದೇಶದಲ್ಲಿ ಜರ್ಮನಿಯ ಒಂದು ತಲೆಯಾದರೂ ಇಲ್ಲದಿರುವಂತೆ ಹೊಡೆದೋಡಿಸಿ, ಬೆಲ್ಜಿಯಮ್ಮನ್ನು ಶತ್ರುಗಳ ಬಾಧೆಯಿಂದ ತಪ್ಪಿಸಲು ಫ್ರಾನ್ಸಿನವರು ಶಪಥಮಾಡಿಕೊಂಡಿದ್ದಾರೆ" ಎಂದು ಫ್ರಾನ್ಸಿನ ಪ್ರೆಸಿಡೆಂಟರು ಬೆಲ್ಜಿಯಮ್ಮಿನವರಿಗೆ ತಿಳಿಯಿಸಿ ಅಭಿನಂದನೆ ಮಾಡಿದರು. ಮತ್ತೂ ಯುದ್ಧದ ವೆಚ್ಚಕ್ಕಾಗಿ ೧೫ ಕೋಟಿ ರೂ.ಗಳನ್ನು ಸಾಲಕೊಟ್ಟರು.

ಜರ್ಮನಿಯವರು ಲೀಜ್ ಪಟ್ಟಣಕ್ಕೆ ದಕ್ಷಿಣದಲ್ಲಿರುವ ನಾಮೂರ್ ಕೋಟೆಯ ಮೇಲೆ ಫಿರಂಗಿಗಳನ್ನು ಹಾ-

ನ್ನು ದಾಟಿ ಬೆಲ್ಜಿಯಮ್ಮನ್ನು [illegible]
*ಕೋಟೆಯೂ ನಾಮೂರ್ ಕೋ [illegible]

ಗು ಜರ್ಮನಿಯವರಿಗೆ ನುಗ್ಗಿ ಗಂಬಿನೆನ್ ಜಿಲ್ಲೆಯ ಮೇಲೆ ಬಿದ್ದು ಜರ್ಮನಿಯ ೧೮ ನೆ ಪಟಾಲಮ್ಮನ್ನೋಡಿಸಿ ಸೋಲಿಸಿಬಿಟ್ಟರು. ರಷ್ಯಾದ ಅಶ್ವಸೇನೆಯು ಜರ್ಮನಿಯ ೬ ಫಿರಂಗಿಗಳನ್ನು ಹಿಡಿದುಕೊಂಡಿತು. ಮತ್ತೂ ರಷ್ಯಾ ಸೇನೆಯು ತಾ॥ ೨೦ ರಲ್ಲಿ ಟ್ರುಬಿಟ್ಸ್ ನದಿಯನ್ನು ದಾಟಿ ಆಸ್ಟ್ರಿಯಾಕ್ಕೆ ನುಗ್ಗಿತು. ರಷ್ಯಾ ವೈಮಾನಿಕರು ಜರ್ಮನ್ ರಾಜ್ಯಕ್ಕೆ ಸೇರಿದ ಪೂರ್ವಪ್ರಷ್ಯದಲ್ಲಿರುವ ಸೇನಾಶಿಬಿರದ ಮೇಲೆ ಸಿಡಿಮದ್ದನ್ನು ಹಾಕಿದರು. ಮತ್ತೂ ರಷ್ಯಾ ಸೇನೆಯು ಜರ್ಮನಿ ದೇಶದ ಗಂಬಿನನ್ ಪಟ್ಟಣದ ಬಳಿಯಲ್ಲಿ ಘೋರಯುದ್ಧವನ್ನು ಮಾಡಿ ಜರ್ಮನಿಯವರ ಕೆಲ ಫಿರಂಗಿಗಳನ್ನೂ ಬಹುಜನ ಜರ್ಮನ್ ಸೈನಿಕರನ್ನೂ ಹಿಡಿದುಕೊಂಡಿತು. ಮತ್ತೂ ಆಸ್ಟ್ರಿಯಾ ದೇಶದ ಗಲಿಸಿಯಾ ಜಿಲ್ಲೆಯಲ್ಲಿ ನುಗ್ಗಿ ಕ್ರಾನ್ಸಿ ಎಂಬಲ್ಲಿ ಆಸ್ಟ್ರಿಯಾದವರ ಮೇಲೆ ಕಾದಾಡಿ ಜಯಶೀಲರಾದರು. ಇಲ್ಲಿ ನಡೆದ ಕಾಳಗದಲ್ಲಿ ಶತ್ರುಪಕ್ಷಕ್ಕೆ ಬಹಳ ನಷ್ಟವಾಯಿತು. ೬ ಮಂದಿ ಸೇನಾಧಿಕಾರಿಗಳೂ ೧೫೦೦ ಮಂದಿ ಸೈನಿಕರೂ ರಷ್ಯನ್ನರಿಗೆ ಸೆರೆ ಸಿಕ್ಕಿದರು. ಮತ್ತೊಂದುಕಡೆ ಸರ್ವಿಯಾದವರೂ ಆಸ್ಟ್ರಿಯಾಕ್ಕೆ ನುಗ್ಗಿ ಲಾಂಗ್‌ಸ್ಟ್ರ ಹತ್ತಿರ ೪ ದಿನಗಳವರೆಗೆ ಆಸ್ಟ್ರಿಯಾದವರ ಮೇಲೆ ಭಯಂಕರವಾಗಿ ಕಾದು ಸಂಪೂರ್ಣವಾಗಿ ಜಯಶೀಲರಾದರು. ಮತ್ತೂ ಡ್ರೀನಾನದಿಯನ್ನು ದಾಟಿ ಆಸ್ಟ್ರಿಯಾದ ಸೇನೆಯನ್ನೆಲ್ಲಾ ಹಿಮ್ಮೆಟ್ಟಿಸಿದರು. ಆಗ ಉಭಯಪಕ್ಷದಲ್ಲೂ ಬಹಳ ಜನ ಸತ್ತರು. ಸರ್ವಿಯಾದವರು ೫೦೦೦ ಮಂದಿ ಆಸ್ಟ್ರಿಯಾದವರನ್ನು ಸೆರೆಹಿಡಿದರು.

ಜರ್ಮನಿಯವರ ಆಕಾಶವಿಮಾನಗಳು ಬೆಲ್ಜಿಯಂ ನದಿಯ ತೀರದಲ್ಲಿ ಮೇಲಕ್ಕೆ ಹಾರಿ ಶತ್ರುಗಳ ಸೇನೆಯ ಚಲನವಲನವನ್ನು ನೋಡುತ್ತಿದ್ದುವು. ಈ ವಿಮಾನದ ನೆರಳಿನ ಗುರ್ತನ್ನು ಕಂಡು ಶತ್ರುಗಳು ಮೇಲಕ್ಕೆ ಫಿರಂಗಿಗುಂಡುಗಳನ್ನು ಹಾರಿಸಿದರು. ರಷ್ಯನ್ನರ ವಿಮಾನಗಳು ಪೂರ್ವದೇಶದಲ್ಲಿರುವ ಜರ್ಮನಿಯ ಸೇನೆಗಳ ಗುಡಾರದ ಮೇಲೆ ಸಿಡಿಮದ್ದುಗಳನ್ನು ಹಾರಿಸಿದುವು. ಆದರೆ ಈ ವಿಮಾನಗಳ ಸಾಹಸದಿಂದಾದ ನಷ್ಟವು ಹೇಳಿಕೊಳ್ಳುವಷ್ಟು ಅದ್ಭುತವಾಗಿಲ್ಲ.

ತಾ॥ ೨೬.

ಜರ್ಮನಿಯವರು ಉತ್ತರಸಮುದ್ರದೊಳಗೆ ಮುಚ್ಚಿಟ್ಟಾಗಿ ಸಿಡಿಮದ್ದುಗಳನ್ನು ಇಟ್ಟಿರುವರು. ಇದರಿಂದ ಯುದ್ಧದ ಹಡಗುಗಳಿಗೇ ಅಲ್ಲದೆ ತಟಸ್ಥವಾಗಿರುವ ದೇಶಗಳ ವ್ಯಾಪಾರದ ಹಡಗುಗಳ ಸಂಚಾರಕ್ಕೂ ಕೂಡ ವಿಘ್ನವಾಗಿ ಅವರ ನಷ್ಟಕ್ಕೆಲ್ಲಾ ಜರ್ಮನಿಯು ಗುರಿಯಾಗಬೇಕಾಗಿದೆ.

ಜರ್ಮನಿಯವರು ಬ್ರುಸೆಲ್ಸನ್ನು ಆಕ್ರಮಿಸಿದಾಗ ಅವರ ಕಡೆಯ ೮೦ ಸಾವಿರ ಸೇನೆಯು ಮುಂದೆ ವಾದ್ಯಗಳನ್ನು ಭೋರ್ಗರೆಯಿಸುತ್ತ ಮಹಾವೇಗದಿಂದ ನುಗ್ಗಿತು. ಅಶ್ವಸೇನೆಯೂ, ಕಾಲ್ಬಲವೂ, ತುಪಾಕಿಗಳನ್ನು ಹಿಡಿದು ಕುಳಿತಿದ್ದ ಸೈನಿಕರಿಂದ ತುಂಬಿದ ನೂರು ಮೋಟಾರು ಬಂಡಿಗಳೂ ಸೈನಿಕರನ್ನು ತುಂಬಿಕೊಂಡಿರುವ ಹೊಗೆಬಂಡಿಗಳೂ ಮುಂದುವರಿದು ಈ ಸೇನೆಯು ಅಲ್ಲಿದ್ದ ಮೋಟಾರ ಮೊದಲಾದ ವಗಳನ್ನು ಒಡೆದು ಅಲ್ಲಿಂದ [illegible] ನಗರಗಳಿಗೆ [illegible] ಫ್ರಾನ್ಸಿಗೆ ನುಗ್ಗಬೇಕೆಂದು ಅವರ ಉದ್ದೇಶ.

ನಾಮೂರಿನವರ ಇದನ್ನೆಲ್ಲಾ [illegible] ತವನ್ನು ಜರ್ಮನಿಯವರಿಂದ ರಕ್ಷಿಸಿಕೊಂಡರಷ್ಟೇ [illegible] ಅದನ್ನು ಜರ್ಮನಿಯವರು ಹಿಡಿದುಕೊಳ್ಳಬೇಕೆಂದು ಫ್ರಾನ್ಸಿನವರ ಮೇಲೆ ಯುದ್ಧವನ್ನು ಹೂಡಿದರು. ಮೊದಲು [illegible] ಸೇನೆಯ ಮೇಲೆ ಜರ್ಮನಿಯ [illegible] ಫ್ರೆಂಚರಿಗಿಂತ ಜರ್ಮನ್ ಸೇನೆಯೇ ಹೆಚ್ಚಾಗಿದ್ದಿತು. ಅಲ್ಲಿ ೩ ದಿನಗಳವರೆಗೆ ಅವಿಚ್ಛಿನ್ನವಾಗಿ ಎರಡು ಪಕ್ಷದವರೂ ಘೋರ ಯುದ್ಧವನ್ನು ಮಾಡಿದರು. ಎಡಭಾಗದ ಫ್ರೆಂಚ್ ಸೈನ್ಯವು [illegible] ದೇಶಕ್ಕೆ ತೆರಳಿತು. ಬಲಭಾಗದ ಸೈನ್ಯವು ಬಲವಾದ [illegible] ವನ್ನು ಹಿಡಿದುನಿಂತಿತು. ಮುಲ್‌ಹೌಸನ್ [illegible] ವರೆಗೂ ನಡೆದ ಯುದ್ಧದಲ್ಲಿ ಫ್ರೆಂಚರು ಜರ್ಮನರನ್ನು ಸೋಲಿಸಿ, ಅದನ್ನು ಸ್ವಾಧೀನಪಡಿಸಿಕೊಂಡರು. ಆಗ ಜರ್ಮನಿಯ ೨೪ ಫಿರಂಗಿಗಳೂ, ೧೦೦೦ ಮಂದಿ [illegible] ಫ್ರೆಂಚರಿಗೆ ಸಿಕ್ಕಿದರು. ಆಗ ಭಯಂಕರವಾಗಿ ಕದನ ನಡೆದಿದ್ದ ಯುದ್ಧದಲ್ಲಿ ಜರ್ಮನರು ಬಹಳ ಸೋತರು, [illegible] ದಿಂದೋಡಿದರು. ಫ್ರೆಂಚರಿಗೆ [illegible] ಜಯವುಂಟಾದಂತಾಯಿತು.

ಬೆಲ್ಜಿಯಮ್ಮಿಗೆ ಸೇರಿದ [illegible] ಜಿಲ್ಲೆಯ [illegible] ಜರ್ಮನಿಯವರಿಗೂ [illegible] ಯುದ್ಧ [illegible]

ಫ್ರೆಂಚರ ನೌಕಾಸೇನೆಯು [illegible] ದೇಶದವರೆ [illegible] ದನೆ ಕೂಡಿ ಆಸ್ಟ್ರಿಯಾ ರಾಜ್ಯಕ್ಕೆ [illegible]

[illegible] ವನ್ನು ಮುತ್ತಿ [illegible]
ಯಾದವರು ಆಸ್ಟ್ರಿಯಾದ [illegible]
ರಮಾಡಿಕೊಳ್ಳಾಗಿ [illegible]
[illegible]

ಬರುತ್ತಿರುವುದು. ಮತ್ತೂ ಆಸ್ಟ್ರಿಯಾದಲ್ಲಿ ಪೋಲೆಂಡ್ ಮಾರ್ಗದಲ್ಲಿ ನುಗ್ಗಿಹೋಗುತ್ತಿದೆ. ರಷ್ಯಾ ಸೇನೆಯು ಜರ್ಮನಿಗೆ ಸೇರಿದ ಗುಂಬಿನ್ನೆನ್ ಎಂಬ ಸ್ಥಳವನ್ನು ಪಡೆದ ಬಳಿಕ ಇನ್ಸ್‌ಟರ್‌ಬರ್ಗ್-ಗೋಲ್ಡಾಪು ಎಂಬ ಪಟ್ಟಣವನ್ನು ಆಕ್ರಮಿಸಿಕೊಂಡಿತು. ಅನೇಕ ಫಿರಂಗಿಗಳೂ ಸೈನಿಕರೂ ರಷ್ಯನ್ನರಿಗೆ ಸಿಕ್ಕಿದ್ದರು. ಇದರಿಂದ ಪೂರ್ವಪ್ರಷ್ಯಾದಲ್ಲಿನ ಕೆಲವು ಪ್ರದೇಶಗಳೆಲ್ಲಾ ರಷ್ಯನ್ನರಿಗೆ ವಶವಾಯಿತು. ಜರ್ಮನಿಯು ಪಶ್ಚಿಮದ ಕಡೆಗೆ ವಿಶೇಷ ಸೈನ್ಯವನ್ನು ಕಳುಹಿಸಿರುವುದರಿಂದ ಪೂರ್ವದಿಕ್ಕಿನಿಂದ ಸುಲಭವಾಗಿ ಜರ್ಮನಿಗೆ ನುಗ್ಗುತ್ತಿರುವ ರಷ್ಯನ್ನರ ಸೈನ್ಯವನ್ನು ಇದಿರಿಸಲು ಅಸಮರ್ಥವಾಗಿದೆ. ಆದುಕಾರಣವೇ ರಷ್ಯನ್ನರು ಅಪ್ರತಿಹತರಾಗಿ ಜರ್ಮನಿಯ ಪೂರ್ವಭಾಗಗಳನ್ನು ಆಕ್ರಮಿಸುತ್ತಲಿದ್ದಾರೆ. ಜಲಯುದ್ಧದಲ್ಲಿ ಫ್ರೆಂಚರ ೧ ಯುದ್ಧದ ಹಡಗು ಆಸ್ಟ್ರಿಯಾದ ಯುದ್ಧದ ಹಡಗೊಂದನ್ನು ಮುಳುಗಿಸಿಬಿಟ್ಟಿತು. ಜರ್ಮನಿಯ ನೌಕಾಸೇನೆಯವರು ೩೦೦೦ ಟನ್ನುಗಳ ತೂಕದ ಇಂಗ್ಲೀಷರ ಹರ್ಮಿಸ್ ಎಂಬ ಹಡಗನ್ನೂ, ವಿಂಚೆಸ್ಟರ್ ಪಟ್ಟಣವೆಂಬ ಹಡಗನ್ನೂ ಮುಳುಗಿಸಿಬಿಟ್ಟಿತು. ಫ್ರೆಂಚರ ನೌಕಾಸೇನೆಯು ಆಸ್ಟ್ರಿಯಾದ ಯುದ್ಧದ ಹಡಗಿನಮೇಲೆ ಹಠಾತ್ತಾಗಿ ಬಿದ್ದಿತು. ಫ್ರೆಂಚರ ಗುಂಡು ಶತ್ರುಗಳ ಹಡಗಿಗೆ ಬಿದ್ದುದರಿಂದ ಅದು ಮುಳುಗಿಹೋಯಿತು. ಇಟಲಿಯವರು ನೌಕಾಸೇನೆಯನ್ನು ಅಣಿಮಾಡುತ್ತಿದ್ದಾರೆ. ಅಡ್ರಿಯಾಟಿಕ್ ಸಮುದ್ರದಲ್ಲಿ ಇಂಗ್ಲೆಂಡು ಫ್ರಾನ್ಸು ದೇಶಗಳ ಯುದ್ಧದ ಹಡಗುಗಳು ಬರುವುದಕ್ಕೆ ಇಟಲಿಯವರು ಅವಕಾಶವನ್ನು ಕೊಟ್ಟರೆಂಬ ಕಾರಣದಿಂದ ಇಟಲಿಯನ್ನು ಆಸ್ಟ್ರಿಯಾಕ್ಕೆ ದ್ವೇಷವು ಅತಿಮಿಗಿಲಾಗಿ ಉಂಟಾಗಿದೆ. ಸ್ವಲ್ಪದಿನಗಳೊಳಗೆ ಇಟಲಿಯು ಇಂಗ್ಲೆಂಡಿನ ಪಕ್ಷಕ್ಕೆ ಸೇರಿ ಯುದ್ಧಮಾಡುವುದೆಂಬ ಸಂದೇಹವುಂಟಾಗಿದೆ. ಉತ್ತರಸಮುದ್ರದಲ್ಲಿ ಜರ್ಮನಿಯವರು ಇಟ್ಟಿದ್ದ ಸಿಡಿಮದ್ದಿಗೆ ಎರಡು ಡೆನ್ಮಾರ್ಕಿನ ಮತ್ತು ನಾರ್ವೆಯ ವ್ಯಾಪಾರದ ಹಡಗುಗಳೆರಡು ಮುಳುಗಿಹೋದುವು. ಆಸ್ಟ್ರಿಯಾದವರು ತಮ್ಮ ದೇಶದಲ್ಲಿ ಆಯುಧವನ್ನು ಹಿಡಿಯಬಲ್ಲ ದೇಶವಾಸಿಗಳಾದವರು ಮೊದಲುಗೊಂಡು ಎಲ್ಲರೂ ಸೇರಿ ಹೋರಾಡಬೇಕೆಂದು ಪ್ರಕಟಿಸಿ ಹೊಸ ಸೇನೆಯನ್ನು ಕೂಡಿಸುತ್ತಿದ್ದಾರೆ.

ತಾ॥ ೨೭

ಇಂಗ್ಲೆಂಡಿನ ಸಾಮ್ರಾಜ್ಯವಾದ ಕಾನಡಾದಿಂದ ಇಂಗ್ಲೀಷರ ಸಹಾಯಾರ್ಥವಾಗಿ ೧ ಲಕ್ಷ ಸೇನೆಯನ್ನು ಕಳುಹಿಸಲು ವಾಗ್ದಾನವಾಗಿದೆ. ಮತ್ತೂ ೩೦ ಕೋಟಿ ರೂಗಳನ್ನು ಯುದ್ಧದ ವೆಚ್ಚಕ್ಕೆ ಸಾಲವಾಗಿ ಕೊಡಲು ಸಿದ್ಧನಾಗುತ್ತಿದೆ. ೮೦ ಲಕ್ಷ ಪೌಂಡ್ ಹಣವನ್ನು ಕಳುಹಿಸಲು ವಾಗ್ದಾನವಾಗಿದೆ. ಬೆಲ್ಜಿಯಮ್ಮಿನಲ್ಲಿ ತಾ॥ ೨೧ ರಿಂದ ಜರ್ಮನಿಯವರ ಮೇಲೆ ಫ್ರಾನ್ಸು-ಇಂಗ್ಲೆಂಡು-ಬೆಲ್ಜಿಯಂ ಈ ದೇಶತ್ರಯದವರು ಹಲವುಕಡೆ ತುಮುಲಯುದ್ಧವನ್ನು ನಡೆಯಿಸಲಾರಂಭವಾಯಿತು. ನಾಮೂರ್ ನಾಮೂರ್ ಪಟ್ಟಣಗಳ ಮಧ್ಯದಲ್ಲಿ ಫ್ರೆಂಚರೂ ಬೆಲ್ಜಿಯಮ್ಮಿನವರೂ ಒಂದು ಪಕ್ಷದಲ್ಲೂ, ಜರ್ಮನರು ಒಂದು ಪಕ್ಷದಲ್ಲೂ ಸೇರಿ ಘೋರ ಯುದ್ಧವನ್ನಾರಂಭಿಸಿದರು. ಅಲ್ಲೊಂದುಕಡೆಯಲ್ಲೇ ಜರ್ಮನರ ೬ ಲಕ್ಷ [illegible] ಗಳಿದ್ದುವು. ಇದರಿಂದ ಉಭಯಪಕ್ಷದಲ್ಲೂ ಅಪಾರ ಸೇನೆ ಬಿದ್ದಿತು. ಅಲ್ಲಿನ ಪಟ್ಟಣದ ವಿನಾಶವನ್ನು ಯಾರೂ [illegible] ಎಲ್ಲಾ ಆತುರದಿಂದ ಕೇಳುತ್ತಿರುವುದು. ಅಲ್ಲಿನ ಯುದ್ಧವು ಕೆಲ ದಿವಸಗಳವರೆಗೆ ನಡೆಯುವುದೆಂದು ಯುದ್ಧಕಲಾಪ್ರವೀಣರು ಹೇಳುತ್ತಿರುವರು. ಪೂರ್ವದಿಂದ ಪಶ್ಚಿಮಕ್ಕೆ ಫ್ರಾನ್ಸಿನೊಳಗೆ ಜರ್ಮನರು ಮುಂದುವರಿದ ಕಡೆಯಲ್ಲೆಲ್ಲಾ ನುಗ್ಗುತ್ತಿದ್ದಾರೆ. ನಾಮೂರು ಕೋಟೆಯಿಂದ ಹಿಡಿದು ದಕ್ಷಿಣದಲ್ಲಿರುವ ಸಿವೆಟ್ ಪಟ್ಟಣದವರೆಗೂ ಇಂಗ್ಲೆಂಡು ಫ್ರಾನ್ಸು ಬೆಲ್ಜಿಯಂ ಸೇನೆಗಳು ತ್ರಿಕೋಣಾಕಾರವಾಗಿ ವ್ಯೂಹರಚನೆಯನ್ನು ಮಾಡಿಕೊಂಡು ಎತ್ತಣಿಂದ ಶತ್ರುಗಳು ಬಂದರೂ ಇವರ ನಡುವೆ ಸಿಕ್ಕಿಸಿಕೊಂಡು ಧ್ವಂಸಮಾಡಬೇಕೆಂದು ಅಣಿಯಾಗಿದ್ದುವು. ಬೆಲ್ಜಿಯಮ್ಮಿನ ದಕ್ಷಿಣಭಾಗದ ಮಾನ್ಸ್ ಚಾರ್ಲೆರಾಯ್ ನಾಮೂರು. ಈ ಪ್ರಾಂತದಲ್ಲೂ ಜರ್ಮನರ ೩೦ ಸಾವಿರ ಸೇನೆಯು ೫ ಲಕ್ಷದವರೆಗೆ ಯುದ್ಧಕ್ಕೆ ನಿಂತಿರುವುದೆಂದು ಊಹಿಸಲ್ಪಟ್ಟಿದ್ದಿತು. ಇದನ್ನು ಇದಿರಿಸುವುದಕ್ಕೆ ಅದರ ದಕ್ಷಿಣದಲ್ಲಿ ಫ್ರಾನ್ಸಿನ ಸೈನ್ಯವು ನಾಮೂರಿನಿಂದ ಹಿಡಿದು ಸಿವೆಟಿನವರೆಗೆ ವ್ಯಾಪಿಸಿಕೊಂಡಿದ್ದಿತು. ಉತ್ತರದಲ್ಲಿ ನಾಮೂರಿನ ಕೋಟೆಯ ಮುಂದಿನ ಕೆಲವು ಭಾಗವನ್ನು ಜರ್ಮನಿಯವರು ತಾ॥ ೨೨ ರಲ್ಲಿ ಹಿಡಿದುಕೊಂಡರು. [illegible]

[illegible]

ಸೈನಿಕರನ್ನು ಸೆರೆಯಾಗಿ ಹಿಡಿದಿರುವರು. ಈ ತಿಂಗಳ ೬ನೇ ತೈಗ್ರಿಸ್ ನದಿಯ ತೀರದಲ್ಲಿರುವ ಆ ಪಟ್ಟಣವನ್ನು ಸುಗ್ಗುವದೆಂದರೆ ಕಷ್ಟಸಾಧ್ಯವೆಂದು ನುಗ್ಗುವಂತಿದ್ದಿತು. ಆದರೆ ಬೆಲ್ಜಿಯಮ್ಮಿನವರು ಶತ್ರುಗಳಿಗೆ ಮಾರ್ಗವಿಲ್ಲದ ಹಾಗೆ ನೀರನ್ನು ನುಗ್ಗಿಸುವದಕ್ಕಾಗಿ ಕಾಲುವೆಗಳ ಸುರಂಗಗಳನ್ನಿಟ್ಟಿದ್ದಾರೆ. ಜರ್ಮನಿಯವರು ಆ ಪಟ್ಟಣದ ದಾರಿಗೆ ಹೋಗದೆ ಅತ್ತ್ಯಲೇ ಹೋಗುತ್ತಿದ್ದಾರೆ. ಜರ್ಮನಿ ದೇಶದ ಸ್ಟ್ರಾಸ್‌ಬರ್ಗಿನಿಂದ ಫ್ರಾನ್ಸ್ ದೇಶದೊಳಕ್ಕೆ ನುಗ್ಗುತ್ತಿದ್ದ ಜರ್ಮನಿಯ ಜೆಪ್ಲಿನ್ ವಿಮಾನದ ಮೇಲೆ ಬೋಕ್ ವಿಲ್ಲಿಯ ಹತ್ತಿರ ಫ್ರೆಂಚರು ಫಿರಂಗಿಯನ್ನು ಹಾರಿಸಿ ಸುಟ್ಟು ಕೆಡಹಿಬಿಟ್ಟರು.

ರಷ್ಯಾದವರು ಜರ್ಮನಿಯ ಜೋಹಾನ್ಸ್‌ಬರ್ಗ್ ಆಡಿ ಲ್ಯುಗ್‌ನ-ವಿಲ್ಡೆನ್‌ಬರ್ಗ್-ಸೋಲ್ಡಾವ್-ಈ ಪಟ್ಟಣಗಳನ್ನು ಹಿಡಿದುಕೊಂಡರು. ಸ್ಟ್ರೆಸ್ಸಾವ್ ಎಂಬ ಪಟ್ಟಣವನ್ನು ಜರ್ಮನಿಯವರೇ ಸುಟ್ಟು ಹಾಳ್ಮಾಡಿ ಓಡಿಹೋದರು.

ರಷ್ಯಾದವರು ಲಿಕ್ ಪಟ್ಟಣಕ್ಕೆ ಪಶ್ಚಿಮದಲ್ಲಿ ೧೦ ಮೈಲಿ ದೂರದಲ್ಲಿರುವ ಆರಿಸ್ ನಗರವನ್ನು ಹಿಡಿದುಕೊಂಡರು. ಸರ್ವಿಯಾದವರು ಲಾಕ್ನಾ-ಲೆಸ್ನಿಟ್ಜಾ- ಸಾಬಾಟ್ ಎಂಬ ಪಟ್ಟಣಗಳ ಪ್ರಾಂತದ ಭೂಮಿಗಳನ್ನೆಲ್ಲಾ ಹಿಡಿದುಕೊಂಡು ಅಲ್ಲಿನ ಶತ್ರು ಜನರನ್ನೆಲ್ಲಾ ಹೊರಕ್ಕೆ ಓಡಿಸಿಬಿಟ್ಟರು ಮತ್ತೂ ಸರ್ವಿಯಾದ ಅಶ್ವಸೈನಿಕರು ಆಸ್ಟ್ರಿಯದ ಪಟಾಲಮ್ಮೊಂದನ್ನು ಓಡಿಸಿ ೪ ಯಂತ್ರದ ಫಿರಂಗಿಗಳನ್ನೂ ೧೦ ಸಾಮಾನ್ಯ ಫಿರಂಗಿಗಳನ್ನೂ ಶತ್ರುಗಳಿಂದ ಕಿತ್ತುಕೊಂಡರು. ಲೆಂಬರ್ಗ್ ಬಳಿಯಲ್ಲಿ ಆದ ಯುದ್ಧದಲ್ಲಿ ಸರ್ವಿಯನ್ನರು ಶತ್ರುಗಳ ಪಕ್ಷದ ೪|| ಸಾವಿರ ಸೈನಿಕರನ್ನೂ ೩೧ ಫಿರಂಗಿಗಳನ್ನೂ ಯಂತ್ರದ ಫಿರಂಗಿಗಳನ್ನೂ ಇನ್ನೂ ಅನೇಕ ಮದ್ದು ಗುಂಡು ಬಂಡಿ ಬಂದೂಕು ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು.

ತಾ|| ೩೦

ಫ್ರಾನ್ಸ್-ಇಂಗ್ಲಾಂಡ್-ಬೆಲ್ಜಿಯಂ ಸೇನೆಗಳು ಫ್ರಾನ್ಸ್ ದೇಶದ ಬಡಗಲು ಎಲ್ಲೆಯಲ್ಲಿ ಸರಿಹೊಕ್ಕು ತಮ್ಮ ದೇಶಕ್ಕೆ ಸಹಾಯಕ್ಕಾಗಿ ನಿಂತರು. ನಿರೀಕ್ಷಣೆ ಮಾಡುತ್ತಿದ್ದ ಮಹಾ ಯುದ್ಧಕ್ಕೆ ತಾ|| ೨೩ ರಲ್ಲಿ ಆರಂಭವಾಯಿತು. ಜರ್ಮನರು ಸಂದು ಸಿಕ್ಕಿದಲ್ಲೆಲ್ಲಾ ನುಗ್ಗುವದಕ್ಕೆ ಯತ್ನಿಸಿದರು. ಚಾರ್ಲರಾಯಿ ಹತ್ತಿರ ಮಹಾ ಸಂಗ್ರಾಮಕ್ಕೆ ಮೊದಲಾಯಿತು. ಫ್ರಾನ್ಸ್ ಎನ ತಿಂಗಳ ಸೇನೆಯು ಜರ್ಮನಿಯ ಅಶ್ವಸೇನೆಯನ್ನು ಪ್ರತಿಭಟಿಸಿತು. ಸಮ ಜೋಡಿಯಾಗಿ ಎರಡುಕಡೆಯವರೂ ಹೋರಾಡಿದರು. ಯುದ್ಧವನ್ನು ನಡೆಸಿದರು. ಆಂಗ್ಲ ಸೇನೆಯು ಅತಿ ಮುಖ್ಯವಾದ ಕಾರ್ಯದಲ್ಲಿ ತೊಡಗಿ ಶತ್ರುಗಳ ಮೇಲೆ ಬಲವಾಗಿ ಹೋರಾಡಿತು. ಜರ್ಮನಿಯವರು ಆಂಡರ್‌ಲೂಸ್ ಜ್ಯಾಮೆಟ್ ಎಂಬ ಪಟ್ಟಣಗಳನ್ನು ಹಿಡಿದುಕೊಳ್ಳಲು ಯತ್ನಿಸಿದರು. ಆದರೆ ಇದಿರು ಪಕ್ಷದವರು ಹೊಡೆದೋಡಿಸಿಬಿಟ್ಟರು. ನಾಮುರ್ ಎಂಬ ಪಟ್ಟಣವನ್ನು ಜರ್ಮನಿಯವರು ಮುತ್ತಿದರು. ಸಂಬರ್ ಹೊಳೆಯ ದಡದಲ್ಲಿ ಭಯಂಕರವಾದ ಫಿರಂಗಿಗಳ ಯುದ್ಧವು ನಡೆದಿತು. ಭಾನುವಾರ ದವರೆಗೂ ಜರ್ಮನಿಯವರು ಎತ್ತ ತಿರುಗಿದರೂ ಅಲ್ಲಿ ಇದಿರು ಪಕ್ಷದವರು ಪ್ರತಿಭಟಿಸಿ ಹಿಂದಕ್ಕಟ್ಟುತ್ತಲೇ ಇದ್ದರು. ಸಂಬರ್ ನದಿ ತೀರದಲ್ಲಿ ಭಯಂಕರವಾದ ಕಾಳಗವಾದಮೇಲೆ ಇಂಗ್ಲೀಷ್ ಫ್ರೆಂಚ್ ಸೇನೆಗಳನ್ನು ಹಿಂದಕ್ಕೆ ತಿರುಗುವಂತೆ ಅವರುಗಳ ನಾಯಕರು ಆಜ್ಞಾಪಿಸಿದರು. ಆ ಮಹಾಯುದ್ಧದಲ್ಲಿ ಆಂಗ್ಲರ ಪಡೆಯಲ್ಲಿ ೨೦೦೦ ಜನ ಪಡೆಗೆ ಬಿದ್ದರು. ಆ ಸಮಯ [illegible] ಜರ್ಮನ್ ಸೇನೆಯ ಬಲ [illegible] ಸಂಪೂರ್ಣಿಸಿತು. ಫ್ರಾನ್ಸ್ ದೇಶದ ನಾಶಕ್ಕಾಗಿ ಮೇಲೆ ಸಾಲ್ವೆಯ ಜನರು [illegible] ಸೈನ್ಯವು ಕೂಡ ಆವರನ್ನು ಬಿಡದೆ ಸ್ತಂಭನವಾಯಿತು. ಬೆಲ್ಜಿಯಂ ಸೇನೆಯು ಸಾಹಸದಿಂದ ಜರ್ಮನಿಯವರ ಮೇಲೆ ಒದ್ದು ಜೀವರ ೩ ಪಟಾಲಮ್ಮುಗಳನ್ನು ಆಂಟ್ವರ್ಪ್‌ನಿಂದ ಹಿಮ್ಮೆಟ್ಟಿಸಿ ಅವರ ಕಡೆಗೆ ೧೦ ಮೈಲಿಗಳ ವರೆಗೆ ಅಟ್ಟಿಕೊಂಡು ಹೋದರು. ಜರ್ಮನಿಯವರು ಬೆಲ್ಜಿಯಮ್ಮಿನ ಪ್ರಧಾನವಾದ ಆಂಟ್ವರ್ಪ್ ಮೇಲೆ ವಿಮಾನದಿಂದ ಬಾಂಬುಗಳನ್ನು ಹಾಕಿದರು. ಒಂದು ಕಿರಮನೆಯ ಹತ್ತಿರ ಬಿದ್ದು ೧-೩ ಮನೆಗಳು ಬಿದ್ದುಹೋದವು. ಬೆಲ್ಜಿಯಂ ಸೈನಿಕರು ವಿಮಾನದ ಮೇಲೆ ಗುಂಡುಗಳನ್ನು ಹಾರಿಸಿ ಅದನ್ನು ಕೆಡಹಿದರು. ಆದರಲ್ಲಿದ್ದ ಶತ್ರುಗಳನ್ನು ಹಿಡಿದರು. ಆ ಊರಿನಲ್ಲಿ ೧೦ ಕೋಟೆಗಳು [illegible] ಶತ್ರುಗಳೊಳಕ್ಕೆ ಸೇರಲಾರದೆ [illegible] ಆ ಹಿಂದುಸ್ಥಾನದ ಸೈನ್ಯವು ಬಂದು ಸೇರಿಕೊಳ್ಳುವುದು [illegible] ಒಂದು ಮೇಲೆ ಜರ್ಮನರು ಶತ್ರುಗಳಿಗೆ ಪ್ರಬಲವಾಗಿ [illegible] ಜರ್ಮನಿಯವರು [illegible] ಶತ್ರುಗಳಿಗೆ ಬಹಳ ಹಾನಿ [illegible] ಅವರ ಕೆಲವು ಸೈನ್ಯವು ಹಿಂದಕ್ಕೆ ಹೋಗಿ [illegible] ಅವರುಗಳ ಕಾಳಿಗದಲ್ಲಿ ಸೇನಾನಾಯಕರು [illegible] ಆಂಗ್ಲರ ಸೈನ್ಯವು [illegible] ನುಗ್ಗುತ್ತಿರುವದು ವಿರುದ್ಧವಾಗಿದೆ.

ದೊಡ್ಡದೊಡ್ಡ ಕೈಗಾರಿಕೆಗಳ ವಿಚಾರದಲ್ಲಿ ನಾವಿನ್ನೂ ಪ್ರಾರಂಭದ ಸ್ಥಿತಿಯಲ್ಲಿಯೇ ಇದ್ದೇವೆ. ಸರ್ಕಾರದವರೂ ಪ್ರಜೆಗಳೂ ಸಹ ಇವುಗಳು ಸ್ಥಾಪನೆಯಾಗುವುದನ್ನೇ ಕುತೂಹಲದಿಂದ ಕಾದಿರುವರು. ಮೂಲಧನಕ್ಕ ಸಾಧನಕಾರ್ಯಗಳೆಲ್ಲಾ ಅವಾಯಗಳಲ್ಲೇ ಇರುವುವೆಂಬುದು ಸಿಮ್ಮೆಲ್ಲರಿಗೂ ತಿಳಿದೇ ಇರುವುದು. ಮಹನೀಯರೇ, ಎತ್ತಲ್ಲದ ವಿವಾದಾಸ್ಪದ ಸಂಘಗಳನ್ನು ಏರ್ಪಡಿಸಿಕೊಳ್ಳುವಾಗ್ಯೆ ಪ್ರಾರಂಭದಲ್ಲಿ ಎಷ್ಟು ಅಪಾಯಗಳಿಗೆ ನೀವುಗಳು ಎದುರಾಗಬೇಕಾಗುತ್ತೆಂಬುದನ್ನು ನೀವು ಯೋಚಿಸಿ.

ಎಲ್ಲೆಲ್ಲಿ ಯಾವಯಾವ ಬಗೆಯ ಮುಖ್ಯ ಯಾವ ಯಾವ ಸ್ಥಿತಿಯ ಕೈಗಾರಿಕೆಗಳು ಸಾಧ್ಯವೋ ಅವುಗಳನ್ನೆಲ್ಲಾ ಇಲ್ಲಿಯೇ ಆರಂಭಿಸಬೇಕೆಂಬುದು ನಮ್ಮ ಅಭಿಪ್ರಾಯವು. ಆದರೆ ನಮ್ಮಲ್ಲಿರುವುದನ್ನೇ ನಾವು ವೃದ್ಧಿಗೊಳಿಸುವುದರಲ್ಲಿ ಅನ್ವಯತಾವಲಂಬಿಸಿಯು ಆ ವಿಷಯದ ಮಾರ್ಗದರ್ಶನದಲ್ಲಿ ಪ್ರಥಮತಃ ಎಷ್ಟು ಕುತೂಹಲವುಳ್ಳವೆಂದು ಲೋಕಾನುಭವ ಇರುವವರೂ ಅವರ ಉತ್ಸಾಹದೊಡನೆ ನೀವು ಪ್ರವರ್ತಿಸಿ ಸಹಾಯಮಾಡುವುದು ನಾವು ಕೂಡ ನೋಡಬೇಕು. ವಿದ್ಯಾವಂತರಾದ ಪ್ರತಿಯೊಬ್ಬರೂ [illegible] ಗದಿಂದ ಜನಸಾಮಾನ್ಯರ ಪ್ರಶ್ನೆಗಳಿಗೆ ಸಮರ್ಪಕರಾಗಿದರೋ, ಅಂಥಾ ಸಂಘಗಳ ಉಪಯೋಗ ನಗರಗಳಲ್ಲಿ ಪ್ರತ್ಯಕ್ಷವಾಗುವುವು. ನೀವು ಉತ್ತೇಜನವನ್ನು ಕೊಡಬಹುದು. ಹಿಂದೆ ಬಹುಕಾಲದಿಂದ ನಡೆಯುತ್ತಿದ್ದ ಪರಸ್ಪರ ಸಹಾಯ ಮತ್ತು ಸಾಮೂಹಿಕ ಪಾಲಿಕೆಯ ಸಮ್ಮಿಲನವು ಈಗ ದುರ್ಬಲವಾಗಿರುವುದು. ಎಂಬುದನ್ನು ಮರೆಯದೆ ನೀವು ಕೈಗಾರಿಕೆಯ ಕೆಲಸಗಳನ್ನು ಸುಸಂಘಟಿಸಿ ಸರಿಯಾದ ಮಾರ್ಗಕ್ಕೆ ತರಬಹುದು. ನಮ್ಮ ದೇಶದಲ್ಲಿ ಕೈಗಾರಿಕೆ ಸ್ಥಿತಿಯನ್ನು ಸರಿಯಾಗಿ ಅವಲೋಕಿಸಿ ಯಾವುದು ಯಾವುದೋ ಎನ್ನುವುದನ್ನು ತಿಳಿದು, ಅದಕ್ಕೆ ತಕ್ಕ ಉಪಾಯಗಳ ಪ್ರಯತ್ನಿಸಬೇಕು. ಆಗಲೇ ಪಟ್ಟಣಗಳಿಗೆ ಬಲ ಬಂದು ಅಭಿವೃದ್ಧಿಗೆ ಯಾವ ಮಾರ್ಗವೆಂಬುದನ್ನು ಅವರಲ್ಲೇ ಯೋಚಿಸಿ ತಿಳಿಸಿದರೆ ಅವರು ಅದನ್ನು ಆಧ್ಯಾವರಣ ಮಾಡಬಹುದು. ಪರಸ್ಪರ ಸಹಾಯದ ಆಧಾರವೂ ಇದಕ್ಕೆ ಬೇಕು. ಅಂಥಾ ಲಾಭದಾಯಕವಾದ ವ್ಯವಸಾಯ ಮತ್ತು ಕೈಗಾರಿಕೆ ಸಂಬಂಧ ಗಳೊಡನೆ ಹೆಚ್ಚು ಹೆಚ್ಚು ಸಂಬಂಧಿಸಿರುತ್ತದೆಯೆಂದು ಬಹಳ ತೃಪ್ತಿಕರವಾಗಿರುವುದು. ಯಾವ ಇಲಾಖೆಯ ಬಗೆಗಳು ಈ ವಿಷಯ ಪ್ರತ್ಯೇಕವಾಗಿದ್ದರೆ ಹೆಚ್ಚು ಕೆಲಸಕ್ಕೆ ಸಹಾಯಕವಾಗುವುದು.

ನೇಗಿಯು ಹಿಂದಿನ ಕಾಲದಿಂದ ನಮ್ಮಲ್ಲಿರುವ ವೃತ್ತಿಯ ದೃಷ್ಟಿಯಿಂದ, ಉತ್ತಮವಾದ ಕೈಗಾರಿಕೆ ಸಾಗರಗಳನ್ನು ವೃದ್ಧಿ ಮಾಡಲು ಸಂಘಗಳನ್ನು ಏರ್ಪಡಿಸುವುದಕ್ಕೆ ಹೀಗೆ ರಾಗಬಹುದು. ಈ ಉದ್ದೇಶದಿಂದ ನಮ್ಮ ದೇಶದಲ್ಲಿ [illegible] ವಾಗಿರುವ ಸ್ಥಾಪಿತವಾಗಿರುವ ಸಂಘಗಳ [illegible] ಗಳ ರಿಪೋರ್ಟು, [illegible] ಪ್ರೋತ್ಸಾಹವಾಗುತ್ತದೆ. ಈ ಪ್ರವರ್ತನೆಯಲ್ಲಿ ಮುಖ್ಯವಾಗಿ ಹೊಸ್ತಿ [illegible] ಹೆಚ್ಚು ವುದರಲ್ಲಿಯೂ, ಕೆಲಸವನ್ನು ಹರಡಿಸುವುದರಿಂದ [illegible]

ಯೋಗನ ಸ್ಥಿತಿಯು	[illegible]
ವಿಚಿತ್ರವಾಗಿಯು ಪ್ರ	[illegible]
ಹೀಗೆಯು ಪರಸ್ಪ	[illegible]
ವೃದು. ಆದರೂ ತ	[illegible]

ಸ್ವೋತ್ಕರ್ಷವಾದ ಮುಖ್ಯತತ್ವಗಳು [illegible] ಸಾಮಾನ್ಯವಾಗಿ ಇಂಥ ಸಂಘಗಳ ಒಳಗೆ ಪ್ರಕಟವಾಗಿರುತ್ತವೆ.

ನೇಗಿಯವನ [illegible] ಎಷ್ಟು ಹೊರಟಿದ್ದರೂ, ಹಾದಿಗಳನ್ನು ಮಾಡುವ ಮಾದಿಗನ ಸ್ಥಿತಿಯೂ ಕೂಡಾ ಅಷ್ಟೇ ಶೋಚನೀಯವಾಗಿರುವುದು. ಆದರಿಂದ ದಿನೇದಿನೇ ಕ್ಷೀಣವಾಗುತ್ತಿರುವ ಗಿರಾಕಿಗಳಿಗೆ ಒದಗಿಸುವುದಕ್ಕೋಸ್ಕರ ಅತಿ ಒಳ್ಳೆ ಅನುಭವ ಕಲಿಸುವಂಥಾ ಸಂಘಗಳು ಜನರ ಪ್ರಯೋಜನಕ್ಕಾಗಿ ಸ್ಥಾಪಿತವಾಗಬೇಕು. ಯಾರು ಮುಖ್ಯ ಸಾಹಸದಿಂದ ಕೆಲವು ಸಮಯಗಳಲ್ಲಿ ತಾವು ಮಾಡಿದ ಸರಕನ್ನೇ ಹೊರಗೆ ಬಿಡಬೇಕಾಗಿ ಬರುತ್ತದೆಯೋ, ಅಂಥಾ ಜೋಡಿಯ ಪ್ರಯೋಜನಕ್ಕೂ ಅವರ ಅನುಕೂಲವಾಗುವ ಪರಸ್ಪರಸಹಾಯ ಸಂಘಗಳ ಹಿತಕರವಾದ ವ್ಯಾಪಾರಗಳಿಗಾದ ಜನಸಮುದಾಯದ [illegible] ಬಗೆಗೆ ಉಂಟಾಗಿರುವ [illegible] ವನ್ನು ಕುರಿತು ಶ್ರೀಮಂತಿಯಾಸಕ್ತಾರರವರು ಈಗ ಪ್ರಸಿದ್ಧವಾಗಿರುವ ತಮ್ಮ [illegible] ವಿಶದವಾಗಿ ಪ್ರಸ್ತಾಪಿಸಿರುವರು. ಅದರ ಇತರ ಪ್ರದೇಶಗಳಲ್ಲಿ ಆತನ ದೃಷ್ಟಾಂತಗಳಾಗಿ ತೋರಿಬರುವ ಅತ್ಯಭಿಗ್ರಹ [illegible] ಮತ್ತು [illegible] ಇವುಗಳು ಸಂಪೂರ್ಣವಾಗಿ ಹೊಂದುವದಕ್ಕೆ ಬಹಳ ತಾನು [illegible] ನಿರೀಕ್ಷಿಸಬೇಕಾಗಿರುವುವು.

ಪದಾರ್ಥಗಳನ್ನು ಉತ್ಪತ್ತಿಮಾಡುವುದಕ್ಕೆ ಸೇರತಕ್ಕದ್ದು ಆದದ್ದರಿಂದ ಸ್ವಲ್ಪಸ್ವಲ್ಪ ಪದಾರ್ಥಗಳ ಉತ್ಪತ್ತಿಗಾಗಿ ಬಿಟ್ಟು ಕಾಲವು ಬಂದಿದೆ. ಇಂಥ ಸ್ವತಂತ್ರ ಪ್ರಯೋಜನಕಾರಿಯಾಗಿರುವುದರಿಂದ, ಇಂದವುಗಳಲ್ಲಿಯೂ ನಾವು ನಮ್ಮ ಕೆಲಸವನ್ನು ಪ್ರಾರಂಭಿಸಬೇಕು. ಯಾವ ಪದಾರ್ಥಗಳಿಗೆ ಹೆಚ್ಚು ಪರಾಕ್ರಮವಿರುವುದೋ ಅಂಥಾವುಗಳನ್ನು ನಾವು ಹೆಚ್ಚಾಗಿ ತಯಾರು ಮಾಡದೇ ಇರುವುದರಿಂದ, ಹಾಗೆಯೇ ಕೂಡುವಂಥಾವುಗಳನ್ನು ಉಪಯೋಗಿಸುವುದರಿಂದ ಪದಾರ್ಥಗಳನ್ನು ಹೆಚ್ಚಾಗಿ ತಯಾರಿಸಬಹುದು. [illegible] ವಿಷಯದಲ್ಲಿ ಕೈಯುಕಸುಬುಗಳು ಕೈಗಾರಿಕೆ [illegible] ವಿಲಕ್ಷಣವಾಗಿರುವುದು. ಇವನ್ನು ಉತ್ಪತ್ತಿಯು [illegible] ಸಮರ್ಥವು ಪ್ರಾರಂಭದಲ್ಲಿ ಆಡಳಿತದ ಜನರ ಅಭಿಪ್ರಾಯ. ಆದರೆ ಕಾರ್ಯಸಿದ್ಧಿಯಾಗಿ ಕೆಲಸಗಾರರನ್ನು ಕಾರ್ಯಾಗಾರಗಳಿಗೆ ಬರಿಸಿದ ಅವರನ್ನು ಸ್ವಂತ ಬುದ್ಧಿಯಿಂದ ನಮ್ಮ ಉದ್ದೇಶವು ನೆರವೇರಲಾರದು.

ಕ್ಷಾಮದ ಸಂಘಗಳು.

ಕ್ಷಾಮದ ಪರಸ್ಪರಸಹಾಯಸಂಘಗಳು ನಮ್ಮ ದೇಶದಲ್ಲಿ ಒಂದು ವಿಶೇಷ ಸಂಗತಿಯಾಗಿರುವುದು. ಆದರೆ ಇದಕ್ಕೂ ಬಡವರಿಗೆ ಮನೆಗಳನ್ನು ಕಟ್ಟಬೇಕೆಂಬ ದೊಡ್ಡ ವಿಷಯಕ್ಕೂ ಬಹಳ ಸಂಬಂಧವಿರುವುದರಿಂದ ಇದನ್ನು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸಬೇಕಾದುದು ಅವಶ್ಯಕವು. ಇದು ಮನೆಕಟ್ಟಿಸುವವರಿಗೆ ಒಂದು ಸಾಲ ಒದಗಿಸಿಕೊಡಲು ಬಹುದಾದರವುದಕ್ಕಾಗಿ ಎಷ್ಟು ಸಂಘಮಾತ್ರ ಎನ್ನುವುದಾದರೆ, ಲೇವಾದೇವಿಯ ಎಂತಹ ವ್ಯಕ್ತಿಯ ಬಳಿ ಮುಂದೆ ಹೋದಂತಾಗುವುದಿಲ್ಲ. ಆದರೆ ಅವುಗಳು ಅಂಕಿತದಿಂದ ಸೂಚಿತವಾಗುವ ಮನೆಗೆ, ಮನೆಕಟ್ಟುವ ಕೆಲಸಗಾರರಿಗೂ ಒಂದು ಸಂಘ ಅಥವಾ ಸಂಘಸಮುದಾಯವನ್ನು ಮಾಡಿಕೊಂಡು ತಮ್ಮ ವಾಸಕ್ಕಾಗಿ ಬಹಳ ಜನಸಾಂದ್ರತೆಯುಳ್ಳ ಪ್ರದೇಶಗಳಲ್ಲಿ ಆರೋಗ್ಯ ಸೂತ್ರಾನುಸಾರವಾಗಿ ಅನೇಕ ಮನೆಗಳನ್ನು ಬಾಡಿಗೆಗಾಗಿ ಕಟ್ಟಿಕೊಂಡಿರುವರೆಂದು ಅರ್ಥವಾಗುವುದಾದರೆ ಇದು ಸ್ವೋತ್ಕರ್ಷವೇ ಸರಿ. ಅಂತು ಬಾಡಿಗೆಗಳ ಭಯವಿಲ್ಲದೆ ಜನರು ವಾಸಮಾಡಲು ಯೋಗ್ಯವಾದ ಮನೆಗಳ, ಮುಂದೆ ಅನೇಕವಾಗಿ ವೃದ್ಧಿಯಾಗುವವೆಂಬುದಕ್ಕೆ ಇದು ಬೀಜಸೂಚನೆಯೇ ಹೌದು. ಆದುದರಿಂದ ಇದಕ್ಕೆ ನಾವು ಎಷ್ಟು ಗಮನಕೊಡತಕ್ಕದ್ದು. ಇದರ ಅರ್ಥವೇನೆಂದರೆ ಉತ್ಪನ್ನಮಾಡಿದವರೇ ಅಂದರೆ ಮನೆಯನ್ನು ಕಟ್ಟಿದವರೇ ಆ ಪ್ರಾಂತ್ಯದಲ್ಲಿ ವಾಡಿಕೆಯಾಗಿರುವ ಬಾಡಿಗೆ ಕೊಟ್ಟು ಕೊಂಡು ಅಲ್ಲಿ ವಾಸಮಾಡುತ್ತಿರುವವರಾಗಿ ಸಂಘಕ್ಕೆ ಬರುವ ಒಟ್ಟು ಲಾಭವು ಬಿಸಿ [illegible] ಮಾನೆ ಸಂಭವಿಸದಲ್ಲಿ, ಆ ಮನೆಯನ್ನು ಅನುಭವಿಸುವವನಾದ ಕಲಗೆ ವಾಪಸು ಮಾಡುವುದು. ಈ ಮಾರ್ಗವು ಪ್ರವರ್ತಿಸದೆ ದೊಡ್ಡ ದೊಡ್ಡ ಮ್ಯುನಿಸಿಪಾಲಿಟಿಗಳಲ್ಲಿ ಮನೆ ಕಟ್ಟುವ ಉದ್ಯೋಗದಿಂದ ಕೆಲಸದಿಂದ ಜೀವನ ಮಾಡುವವನಿಗೆ ಸುಲಭ ಒಟ್ಟಿನಿಂದ ಬಂಡವಾಳ ಒದಗಿಸಿಕೊಂಡು [illegible] ಇದರಲ್ಲಿ ಇಂಥಾ ಪದ್ಧತಿಯನ್ನು ಎಷ್ಟುಬೇಗ ನಿಲ್ಲಿಸಿದರೋ ಅಷ್ಟು [illegible] ಪರಸ್ಪರಸಹಾಯವು ಮುಖ್ಯವಾಗಿಯೂ [illegible] ಇದು ಪರಸ್ಪರ ವಿರುದ್ಧವಾದದ್ದೆ. ಮನೆಕಟ್ಟುವ ಸಂಘದಲ್ಲಿ ಅವುಗಳ ಮನೆಗಳಿಗೆ ಲಾಭ ಪ್ರಾಪ್ತಿಯಾಗುವ ಆದರೆ [illegible] ಅವರ ಹಣ [illegible] ತಕ್ಕಂತೆ ಕಾಲವನ್ನು ಕೊಡಬಹುದು ಸಂಭವಿಸುವುದು.

ಕ್ಷಾಮದ [illegible] ಸಂಘಗಳ ಆಡಳಿತವನ್ನು ನಡೆಸಲು [illegible] ಲಾಭ [illegible] ಆನೆ ಅಂದಕ್ಕದಿಂದ ಎಂಬಾಡಳಿತಕ್ಕೆ [illegible] ಹೀಗೆ ನಡೆಸುವ ಜನಗಳನ್ನು ಹೊಂದುವರು [illegible] ತಾವೇ ಮನೆಕಟ್ಟಿ ಅವುಗಳನ್ನು ಹೊಂದು [illegible] ಕೊಂಡು ಹೋಗುವುದರಿಂದ [illegible]

[illegible]

ಹೊಣಸೂರು ತಾ॥ ಹಳ್ಳಿಗೆರೆ. — ಈ ಊರಿನ್ಲಿ ಲೋಕ ರಕ್ಷಕನ ಅನುಗ್ರಹದಿಂದ ಕೊಂಚ ಮಳೆಯಾಗಿ ದೊಡ್ಡ ಕೆರೆ ತಕ್ಕನಷ್ಟಿಗೆ ಬೆಳೆ ಅನುಕೂಲವಾಯಿತು ಎರಡು ಮಳೆ ಹಿಂದಾದದ್ದಕ್ಕೆ ಜನರು ಚಿಂತೆಪಡುತ್ತಾರೆ ಕೆರೆ ಕಟ್ಟೆಗೆ ನೀರು ಬಂದಿಲ್ಲ. ಈ ಊರಲ್ಲಿರುವ ನೆಲದಾರಿಯಲ್ಲಿ ಸುಮಾರು ನೀರಿಲ್ಲದೆ ದನಕರುಗಳಿಗೂ, ಜನಗಳಿಗೂ ಬಹು ಕಷ್ಟವಾಗಿದೆ ಧಾರಣವಾಸಿಗಳು ಇಳಿದಿಲ್ಲ ಅಕ್ಕಿ ರೂ ಗೆ ೫॥ ಸೇರು ರಾಗಿ ರೂ ಗೆ ೧೦॥ ಸೇರು ಕೊಡುತ್ತಾರೆ. ನಮ್ಮ ಸರ್ಕಾರದವರು ಏರ್ಪಡಿಸಿರುವ ಕೆಲಸಗಳು ಬಹಳಷ್ಟುಗಳು ಇದ್ದರೂ ಈ ಹಳ್ಳಿಗಳಲ್ಲಿ ಜಾರಿಗೆ ಬಂದಿಲ್ಲ ಮನೆಮನೆಗಳಲ್ಲಿ ಅನೇಕಜನ ಜೆಂಗಸರು ಕೆಮ್ಮು ನೀರು ಅಷ್ಟೇ ರು ಇಷ್ಟಗಳನ್ನು ಇಟ್ಟುಕೊಂಡು ಬಿಳಿಯ ಜನಗಳಿಗೆ ಮೋಸಪಡಿಸುತ್ತಾರಲ್ಲದೆ ಈ ಪ್ರಾಂತ್ಯ ಕೆಟ್ಟರ ಅಪಾಂತರ ಎಲ್ಲರಿಗೂ ಭೀತಿಯನ್ನುಂಟುಮಾಡುತ್ತವೆ ಅಸ್ಸೆ ಸ್ವಲ್ಪ ದಿವಸದಲ್ಲಿ ಈ ಗ್ರಾಮದ ಒಬ್ಬ ಬಡಕ್ರೈತನ ಮನೆಯಲ್ಲಿ ಯಾರೋ ದುಡಿತದ್ದರು ೫೫ ರೂಪಾಯಿಗಳನ್ನು ಕಳುವಾದವರು ಅದು ಪತ್ತೆಯಿಲ್ಲ. ರಾತ್ರಿ ಕಾಲದಲ್ಲಿ ಮನೆಗಳ ಮೇಲೆ ಕಲ್ಲುಗಳು ಬೀಳ್ವಲ್ಲದಷ್ಟು ಸುರಿಯುತ್ತಿವೆ. ಈ ಗ್ರಾಮಕ್ಕೆ ಹೊರಗಡೆಯಿಂದ ಅನೇಕ ಜನ ಮೋಸಗಾರರು ವೇಷಧಾರಿಗಳಾಗಿ ನಾವು ತಿರುಕರು ನಾವು ಪರದೇಶಿಗಳು ಎಂದು ಇಂಥ ಸಣ್ಣ ಸಣ್ಣ ಗ್ರಾಮಾಂತರಗಳಿಗೆ ತಂಡತಂಡವಾಗಿ ಬರುತ್ತಾ ಹೋಗುತ್ತಾ ಇದ್ದಾರೆ ಎಲ್ಲಿದ್ದರೂ ಈ ಗ್ರಾಮದಲ್ಲಿರುವ ಪ್ರೋ॥ ಪಟೇಲರೇ ಆಗಲಿ ಗ್ರಾಮದ ತೋಟಿಯೇ ಆಗಲಿ ಹೊರಗಡೆಯಿಂದ ಬರತಕ್ಕ ಪರದೇಸಿಗರ ಕ್ಷೇಮವನ್ನೇ ವಿಚಾರಿಸುತ್ತಿಲ್ಲ ರಾತ್ರಿ ಕಾವಲಂತು ಮೊದಲೇ ಸಿಂಡುಹೋಗಿದೆ ಹೊಲಗಳಲ್ಲಿ ರಾತ್ರಿ ಕಾವಲಿದ್ದ ರಾಗಿ ತೆನೆಗಳನ್ನೇ ಅಪಹರಿಸಿಕೊಂಡು ಹೋಗುತ್ತಾರೆ ಈ ವಿಚಾರದಲ್ಲಿ ನಮ್ಮ ತಾ॥ ಅಧಿಕಾರಿಗಳು ಸರಿಪಡಿಸುತ್ತಾರೆಂದು ನಂಬಿದ್ದೇನೆ. ಈ ಗ್ರಾಮಕ್ಕೆ ಸುಮಾರು ೧ ಮೈಲಿ ದೂರದಲ್ಲಿರುವ ಹೊಸಹಳ್ಳಿ ಗ್ರಾಮಕ್ಕೆ ಮಹಾರೋಗ ಎಂಬ ರೋಗವು ವ್ಯಾಪಿಸಿ ಸುಮಾರು ೧ ತಿಂಗಳಿಂದಾಗ್ಗೂ ರೋಗ ಬಿಡುಗಡೆ ಇಲ್ಲದೆ ಸುಮಾರು ೧೦-೧೨ ಬಾಲಕರು ಮರಣ ಹೊಂದಿರುತ್ತಾರೆ ಈ ಪ್ರಾಂತ್ಯ ದೇಶಾಪಂಡಿತರು ಬಂದು ನೋಡಿಸಿ ಹುಡುಗರಿಗೆ ಸಿಡುಬನ್ನು ಹಾಕಿದ್ದರೆ ಇಷ್ಟು ನಷ್ಟಕ್ಕೆ ಗುರಿಯಾಗುತ್ತಿರಲಿಲ್ಲವೆಂದು ಹೇಳಬೇಕಾಗಿದೆ. ನಮ್ಮನ್ನಾಳುವ ಮಹಾರಾಜ ಸರ್ಕಾರದವರು ತಮ್ಮ ತರ್ಫ ಒಂದು ಭಾವಿಯನ್ನು ತೆಗೆಸಿ ಹಳ್ಳಿಕೆರೆ ಗ್ರಾಮದವರು ಕುಡಿಯುವ ನೀರಿಗಾಗಿ ತೊಂದರೆಪಡುತ್ತಿರುವವರನ್ನು ತಪ್ಪಿಸಿ ಮಹದುಪಕಾರವನ್ನು ಮಾಡಬೇಕೆಂದು ಸರ್ಕಾರದ ಬೇಡಿಕೊಳ್ಳುತ್ತೇವೆ ಸ್ಥಳಿಕ.

ಧಾರವಾಡಜಿಲ್ಲಾ ತಾ॥ ಹೀರೇಕೆರೂರಲ್ಲಿ ಜರಗಿದ

ಶ್ರೀಮದ್ವೀರಶೈವ ಸಭೆಯು.

ಪೇಟೆಯ ಹೊರಭಾಗದಲ್ಲಿ ಬಹುನೂತನವಾಗಿ ಕಟ್ಟಲ್ಪಟ್ಟ ಶ್ರೀಮದ್ವೀರಶೈವವೈಶ್ಯಕಪಾಠಶಾಲೆಯ. ದ ಆಶ್ರಮವಾದ ಶ್ರೀ ವೃಷಭೇಶ್ವರದೇವಾಲಯದಲ್ಲಿ ಇದೇ ಕ್ರಾರ್ತಿಕ ೬॥ ರಲ್ಲಿ ಗುರುವಾರದಲ್ಲಾಯಿತು. ಬಾದ್ರಪದ ಶುದ್ಧ ೧೪ ರಲ್ಲಿ ಶ್ರೀ ವೃಷಭಲಿಂಗಲೀಲೆಯೆಂಬ ಪುರಾಣವು ಬೆಕ್ಕಳ್ಳಿ ಯ ಶ್ರೀ ನಿರಂಜನ ಪ್ರಾಣ್ಯಾಧಿಪಾದರ ಮುಂದೆ ಜನಗಳಿಂದ ಸ್ಥಿತಪ ಬ॥ ೧ ರಿಂದ ಶ ರ ವರೆಗೆ ಶ್ರೀಗುರುವಿನ ಪ್ರಾಣ ದಿನಿಯೋಗವೂ ಶ್ರೀರುದ್ರಾಭಿಷೇಕವೂ ವೇದೋಕ್ತಪ್ರಕಾರ ಹೀರೇಮಠದ ಶ್ರೀ ಸೀಗಭದ್ರಶಾಸ್ತ್ರಿಗಳವರಿಂದ ನಡೆಯುವಂತಾಗಿ ನೆರವೇರಿಸಲ್ಪಟ್ಟಿತು. ಬ॥ ೫ ರ ಪ್ರಾತಃಕಾಲದಿಂದ ಶ್ರೀಗುರುಗಳ ಶಾಂಭವಿ ಪ್ರತಿಷ್ಠೆಯಾದುದಕ್ಕೆ ಈ ದಿವಸ ಗಣಾರಾಧನೆಯು ನೆರವೇರಿಸಲ್ಪಟ್ಟಿತು. ಬ॥ ೬ ದಿವಸ ಪೇಟೆಯಲ್ಲಿ ನಮ್ಮ ಚಿಕ್ಕ ನಂದಿಹಾರ ಸ್ವಾಮಿಗಳವರನ್ನು ಪಲ್ಲಕ್ಕಿಯಲ್ಲಿ ಮಹೋತ್ಸವದೊಡನೆ ವೀಣೆ ವಾದ್ಯ ಕಹಳೆ ಪ್ರೇಕ್ಷಕರಿಂದ ಬಿ ರಾಜಮಾರ್ಗವಾದ ಬೀದಿಗಳಲ್ಲಿ ಹೆಚ್ಚು ವಿಜೃಂಭಣೆಯಿಂದ ಉತ್ಸವವು ನೆರವೇರಿಸಲ್ಪಟ್ಟಿತ್ತು. ಸರ್ವರಿಗೂ ಅನ್ನ ಸಂತರ್ಪಣೆಯು ಚನ್ನಾಗಿ ನಡೆಯಿತು. ಮಧ್ಯಾಹ್ನದ ೪ ಘಂಟೆಯಲ್ಲಿ ಸಭೆಯೂ ಮಹಾಸ್ವಾಮಿಗಳವರ ಅಧ್ಯಕ್ಷತೆಯಿಂದ ಕೂಡಿಸಲ್ಪಟ್ಟಿತು. ಈ ಸಭೆಗೆ ರಾಣೇಬೆನ್ನೂರು ಮಹಾಲಿಂಗಪುರದ ಸಿದ್ದೇಶ್ವರಲಿಂಗ ಹಿರೇಮಠದ ಶ್ರೀ ರುದ್ರಶಾಸ್ತ್ರಿಗಳೂ ಇ ಪ್ಪತ್ತಿ ಹಿರೇಮಠದ ಶ್ರೀ ಶ್ರೀ ಸಿದ್ಧಾಂತಿ ಓಂಕಾರಶಾಸ್ತ್ರಿಗಳೂ ವಿದ್ವಾಂಸರೂ ಶ್ರೀಮಂತರೂ ವರ್ತಕರೂ ಇನ್ನೂ ಮುಂತಾದವರೂ ಆಗಮಿಸಿದ್ದರು. ಮಹಾಪ್ರಾಜ್ಞರಾದ್ದರಿಂದ ಅಜ್ಞಾನುಸಾರವಾಗಿ ಹಬ್ಬಿನಾರ ಹಿರೇಮಠದ ಸಿದ್ದೇಶ್ವರ ಓಂಕಾರಶಾಸ್ತ್ರಿಗಳು ಆಚಾರ, ಪಠೇಶಪುರದ ಶ್ರೀ ರುದ್ರಸ್ವಶಾಸ್ತ್ರಿಗಳು ಗುರುಲಿಂಗಜಂಗಮ ಈ ವಿಷಯಗಳನ್ನು ಕುರಿತುಪನ್ಯಾಸಮಾಡಿ ಕೋಡ್ದಿದ್ದ ಬಳಿಕ ಮಂಗಳದಿಂ ಸಾರ ಹಿರೇಮಠದ ಶ್ರೀ ವೀರಭ

ನವರು ಭಕ್ತಿ ಮತ್ತು ಯುವರಲ್ಲೂ ವೈದಿಕರಾಠಶಾಲಾ ವಿದ್ಯಾರ್ಥಿಯಾದ ಗ ಪ್ರಾ ಗುರು ವಿದ್ಯಾವಿಷಯದಲ್ಲೂ ಮ॥ ಗುರುಶಾ ತಮ್ಮ ಹಳಕಟ್ಟಿ ರ ಘಾರಣೆವಿಷಯದಲ್ಲೂ ಮ॥ ಚನ್ನ ವೀರಗಧ್ಯಾ ನೇಮತಿ ಭಕ್ತಿ ವಿಷಯದಲ್ಲೂ ವ ೬ ಹಳ್ಳಿ ವೀರಭದ್ರಪ್ಪನವರು ಕರ್ತವ್ಯನ ವಿಷಯದಲ್ಲೂ, ವೀರಭದ್ರಪ್ಪ ಜೋಳದ ಪುರುಷಾರ್ಥ ಪ್ರತಿ ನಾಲ್ಕನೆಯ ದಾಡ ಯೋಗಿ ಷಡಿವಿಷಯದಲ್ಲೂ ಚನ್ನಬಸಪ್ಪ ಆಗೇರ ಗುರುಪೀ ಅಧಿಕವೆಂಬ ವಿಷಯದಲ್ಲೂ ಉಪನ್ಯಾಸಗಳನ್ನು ಜರಗಿಸಿದ ನಂತರ ಚಿಕ್ಕ ನಂದಿಹಾರ ಶ್ರೀ॥ ಗಳವರು ವೀರಶೈವ ಸಪ್ರೇಕ್ಷೆ ತ್ತ ಪದ ವಿಷಯವನ್ನು ಸರ್ವರ ಮನಸ್ಸಿನಲ್ಲಿ ಬಿಂಬಿಸುವಂತೆ ಸರಸವಾಗಿ ಭಾಷಣವನ್ನು ನಡೆಯಿಸಿದ ತರುವಾಯ ಕಾರ್ಯಗಳನ್ನು ಮಂಗಲ ಪುಷ್ಪಾಂಜಲಿ ಜಯಘೋಷ ಗೊಡನೆ ಪೂರೈಸಿದರು ಓರ್ವ ದರ್ಮಾಭಿಮಾನಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಭೆಗೆ ತಾ॥ ೨೬-೫-೧೯೧೮ ರಿಂದ ತಾ॥ ೧೦-೬-೧೯೧೮ ರವರೆಗೆ ಜಮಾಬಂದ ಮೊಬಲಗಿನ ತಪ್ಸೀಲ್

---

೧ ಮ॥ ರಾ॥ ಗಳಾದ ಅಣಜಿ ಶ್ಯಾನುಭೋಗ ಎ ಜಿ ಸಿದ್ದಲಿಂಗಪ್ಪನವರ ಮೂಲಕ ಅಣಜಿ ಗ್ರಾಮದ ನಾಗದನ ಟ್ಟಿ ಚನ್ನಪ್ಪನವ ರ ಇವರ ಪುತ್ರಿಯ ವಿವಾಹಕಾಲದಲ್ಲಿ ತೆಗೆದಬಾಬ್ತು ಜಮಾ ೧-೧-೦ ತುಮಕೂರು ತಾ॥ ಶ್ಯಾನುಭೋಗರಾದ ಕೆ ಎಸ್ ವೀರಭದ್ರಪ್ಪನವರ ಮೂಲಕ ಇವರ ಲಗ್ನದಲ್ಲಿ ಇವರ ದ ೨ ರೂ ವಧುವಿನ ಕಡೆ ಗುಬ್ಬಿ ಸೂ॥ ವೀರಭದ್ರಪ್ಪನವರಿಂದ ೧ ರೂ ಒಟ್ಟು ೩-೦-೦ ೩ ನೇಮನಹಳ್ಳಿ ತಾ॥ ಹುಣಸಮಾರ್ನಹಳ್ಳಿ ಮಜರೆ ಏಜಂಟ್ ಗುರುವಿನ ಐಬೆಯವರ ಮೂಲಕ ದೊಡ್ಡಬಳ್ಳಾಪುರದಲ್ಲಿ ಸಾಹುಕಾರ್ ರ ಸಾಲೆ ರುದ್ರಪ್ಪನವರ ಗಾರೆಯಲ್ಲಿ ನಡೆದ ಲಗ್ನಗಳಲ್ಲಿ ತೆಗೆದುದು ಜಮಾ ೫-೦-೦, ೪ ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಸಿರಸ್ತೇದಾರ್ ಮ॥ ವಿ ಮಲ್ಲಿಕಾರ್ಜುನಯ್ಯನವರಿಂದ ಇವರು ಮ ಗಳ ಸಭಾ ಕಾಲದಲ್ಲಿ ವಾಗ್ದಾನ ಮಾಡಿದ್ದ ಮೊಬಲಗಿನಪ್ಪೆಕಿಗಾಗಿ ಬಂದದ್ದು ಜಮಾ ೧೦-೦-೦ ೫. ಮೈಸೂರು ಸ್ಟ್ಯಾರ್‌ಆಫೀಸ್ ಮ ಊಕ ಶಿಕಾರಿಪುರದ ತಾ॥ ಹಿತ್ತಲಗ್ರಾಮದ ಮಾಡ್ರವಳ್ಳಿ ಪಟೇಲ್ ಹುಂಡಿ ಪುಟ್ಟಮಲ್ಲಪ್ಪನವರ ಮಕ್ಕಳು ಮಲ್ಲಪ್ಪ ಸಂಗಪ್ಪ ಇವರ ವಿವಾಹ ಕಾಲದಲ್ಲಿ ತೆಗೆದ ಬಾಬ್ತು ೨ ರೂ, ಸೊರಬ ತಾ॥ ತುಡನೀರು ಗ್ರಾಮದಲ್ಲಿ ಸೊರಬದ ಮಠಾಧಿಪತಿಗಳ ಬಸವಯ್ಯನವರ ಜ್ಯೇಷ್ಠ ಪುತ್ರ, ಮುರುಘಯ್ಯನಿಗೆ ತುಡನೀರು ಶಿವರುದ್ರಪ್ಪಯ್ಯನವರ ಪುತ್ರಿ ಮುರುಘಮ್ಮನನ್ನು ಕೊಟ್ಟು ನಡೆಸಿದ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆಸಿ ಶಿವಮೊಗ್ಗ ತಾ॥ ಟೆಕಪ್ಪ ೧ ಇ ಸ್ಕೂಲ್‌ಮಾಸ್ಟರ್ ಎಸ್. ವೃಷಭಪ್ಪನವರ ಸಕೆ ಕೊಟ್ಟಿದ್ದ ಬಾಬ್ತು ೩ ರೂ, ತರೀಕೆರೆ ಯಲ್ಲಿರುವ ತಿಪ್ಪಾಪುರ ವಿ. ಚಂದ್ರಪ್ಪನವರ ಮಕ್ಕಳ ಲಗ್ನದಲ್ಲಿ ತೆಗೆದ ಬಾಬ್ತು ೫ ರೂ, ಜುಮ್ಲಾ ೧೦ ರೂ ಗೆ ಮಣಿಆರ್ಡರ್ ಕಮಿಷನ್ ಕಳೆದು ಬಂದದ್ದು ೯-೧೪-೦ ೬ ಮೈಸೂರು ಸ್ಟ್ಯಾರ್ ಆಫೀಸ್ ಮೂಲಕ ಬಗಳೂರು ತಾ॥ ಹಿರೇಕೆರೆ ಗ್ರಾಮದ ಗೌಡರು ಭೋಗಪ್ಪನವರ ಮಕ್ಕಳ ಲಗ್ನದಲ್ಲಿ ದಿಕಟೆಯದು ಕಪ್ಪರು ಕಲಿವೀರಪ್ಪನವರ ಸಹ ಬಂದಿದ್ದ ೩ ರೂ ಗೆ ಮಣಿಆರ್ಡರ್ ಕಮಿಷನ್ ಕಳೆದು ಬಂದದ್ದು ೨-೧೫-೦, ೭ ಹೆಗ್ಗಡದೇವನಕೋಟೆ ತಾ॥ ಹದಿನಾರು ಎ ವಿ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರು ಕೆ ಸುಬ್ಬಣ್ಣನವರ ಮೂಲಕ ಸರಗೂರು ಭೋಗವಲ್ಲಿಯ್ಯನವರ ವಿವಾಹಕಾಲದಲ್ಲಿ ತೆಗೆದ ಬಾಬ್ತು ೨ ರೂ., ಸರಗೂರು ಚಿಕ್ಕವೀರಪ್ಪನವರ ಮಗನ ಲಗ್ನದಲ್ಲಿ ತೆಗೆದ ಬಾಬ್ತು ೧ ರೂ, ಜುಮ್ಲಾ ೩-೦-೦, ೮. ಗುಬ್ಬಿ ಕೆಪ್ಪರು ಕರ್ನಾಟಕ ಡೈರ್ಟ್ ದು ಬುಡ್ಡಿ ಇವರ ಮೂಲಕ ಗುಬ್ಬಿ ಶಿವರುದ್ರಪ್ಪನವರ ಮಗನ ಲಗ್ನದಲ್ಲಿ ತೆಗೆದ ಬಾಬ್ತು ೫ ರೂ, ಗುಬ್ಬಿ ಜೀವಿ ಬಸಪ್ಪನವರ ಮಗನ ಲಗ್ನದಲ್ಲಿ ತೆಗೆದ ಬಾಬ್ತು ೩ ರೂ. ಜುಮ್ಲಾ ಜಮಾ ೮-೦-೦ ೯ ಬೆಂಗಳೂರು ಅರಳೇಪೇಟೆ ದೇಶಿಕಶೆಟ್ಟರು ಬಸವಲಿಂಗಪ್ಪನವರ ಮಕ್ಕಳು ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ ಮುಪ್ಪನವರ ಪುತ್ರಿ ಮುಗ್ಗಂಗಮ್ಮನವರ ಲಗ್ನದಲ್ಲಿ ವಧುವಿನ ಕಡೆಯಿಂದ ಬಂದದ್ದು ೧-೦-೦, ೧೦, ಬೆಂಗಳೂರು ಕಂಟೋನ್ಮೆಂಟ್ ಬಜಾರ ಶ್ರೀ ಶಿವಬಸವಸ್ವಾಮಿಗಳ ಮೂಲಕ ಚಿಕ್ಕಪೇಟೆ ಚಿಕ್ಕ ಬಸಪ್ಪನವರಿಂದ ಇವರ ತಮ್ಮನವರಿಗೆ ಕೆಬ್ಬನಪ್ಪನವರ ಲಗ್ನದಲ್ಲಿ ತೆಗೆದ ಬಾಬ್ತು ಜಮಾ ೫-೦-೦, ೧೧ ಚಿತ್ರದುರ್ಗ ಡಿಸ್ಟ್ರಿಕ್ಟ್ ಸಿ ಸಿದ್ದನಂಜಪ್ಪನವರ ಮೂಲಕ ಕ್ಯಾದಿಗೆರೆ ಮುರಿಗಪ್ಪನವರ ಪುತ್ರಿ ಪುಟ್ಟಮ್ಮ ಹೆಚ್ಚು ಜಿ ಕಿಕಂಟಿ ಗೌಡರ ಗುರುಲಿಂಗಪ್ಪ [illegible] ಗಪ್ಪ ಇವರ ಲಗ್ನದಲ್ಲಿ, ತೆಗೆದ ಬಾಬ್ತು ರೂ. ೧-೩-

೧ ಮ॥ ರಾ॥ ಗಳಾದ ದಾವಣಗೆರೆ ಹಿರೇಮಠದ ರುದ್ರಶಾಸ್ತ್ರಿಗಳ ಮೂಲಕ ಹರಿಹರ ತಾ॥ ಮುದಹದಡಿ ಹಂಜಗಿ ಮಠದ ಮಹದೇವಪ್ಪನವರ ಮಗಳ ಲಗ್ನದಲ್ಲಿ ತೆಗೆದ ಬಾಬ್ತು ೫ ರೂ., ಮುದಹದಡಿ ಹಂಜಗಿ ಮಠದ ಗುರುಸಿದ್ಧಪ್ಪಯ್ಯನವರಿಂದ ೨ ರೂ., ದಾವಣಗೆರೆ ತಾ॥ ಜೆಬ್ಬಾಳು ಮಠದ ಮುರಿಗಪ್ಪಯ್ಯನವರಿಂದ ೪ ರೂ, ಜುಮ್ಲಾ ೧೧ ರೂ ೦ ಮಂಜರಾಬಾದು ತಾ॥ ಬೆಳಗೋಡು ಹೋಬಳಿ ಬಾಳ್ಳು ದ್ಯಾಮೇಗೌಡರ ಮಕ್ಕಳು ಗುರುವೇಗೌಡರು ಕೆ. ಮಲ್ಲೇಗೌಡರು ಇವರಿಂದ ಬಾಳ್ಳು ಗುರುವೇಗೌಡರ ೩ ನೇ ಲಗ್ನದಲ್ಲಿ ತೆಗೆದ ಬಾಬ್ತು ೩-೦-೦, ೩ ಮಂಜರಾಬಾದು ತಾ॥ ಬೆಳಗೋಡು ಹೋಬಳಿ ಬಾಳ್ಳು ಮಠದ ಬಸವಯ್ಯನವರ ಲಗ್ನದಲ್ಲಿ ತೆಗೆದ ಬಾಬ್ತು ೩-೦-೦ ೪ ಮಂಜರಾಬಾದು ತಾ॥ ಬೆಳಗೋಡು ಹೋಬಳಿ ಬಾಳ್ಳು ಕೆಡನರವಳ್ಳಿ ಪಟೇಲ್ ಸಿದ್ದೇಗೌಡರ ಮೂಲಕ ಬೇಲೂರು ತಾ॥ ಕಡದರವಳ್ಳಿ ಪಟೇಲ್ ಸಿದ್ದೇಗೌಡರ ಪುತ್ರ ಲಗ್ನದಲ್ಲಿ ತೆಗೆದ ಬಾಬ್ತು ೨-೦-೦, ೫ ಬೆಳಗೋಡು ಪೋಸ್ಟ್ ಕೆಸಗೋಡು ಸಂತೇಗೌಡು ಬಾಳ್ಳು ಮಲ್ಲೇಗೌಡರು ಇವರ ಮೂಲಕ ಬೇಲೂರು ತಾ॥ ಕೆಸಗೋಡು ಸಂತೇಗೌಡರ ಪುತ್ರಿ ಲಗ್ನದಲ್ಲಿ ತೆಗೆದ ಬಾಬ್ತು ೨-೦-೦, ೬ ಬೆಳಗೋಡು ಪೋಸ್ಟ್ ಹಬ್ಬನಗಡ ಮಲ್ಲೇಗೌಡರು ಬಾಳ್ಳು ಮಲ್ಲೇಗೌಡರು ಇವರ ಮೂಲಕ ಮಂಜರಾಬಾದ್ ತಾ॥ ಮಲ್ಲೇನಹಳ್ಳಿ ಗ್ರಾಮದ ಕಾಫಿಪ್ಲಾಂಟರ್ ಹಿರೇಗೌಡರ ಮಗಳು ಮಲ್ಲಮ್ಮನ ಮಗ ಮಲ್ಲೇಗೌಡರ ಲಗ್ನದಲ್ಲಿ ತೆಗೆದ ಬಾಬ್ತು ೩-೦-೦, ೭ ಬೆಳಗೋಡು ಪೋಸ್ಟ್ ಬಾಳ್ಳು ಮಲ್ಲೇಗೌಡರು ಬೆಳವ ಚನ್ನಬಸವೇಗೌಡರು ಇವರ ಮೂಲಕ ಬೆಳವ ಚನ್ನಬಸವೇಗೌಡರ ಮಗ ಲಗ್ನದಲ್ಲಿ ತೆಗೆದ ಬಾಬ್ತು ೨-೦-೦ ೮. ಬೆಂಗಳೂರು ಅರಳೇಪೇಟೆ ದೇಶಿಕ ಬಸವಲಿಂಗಶೆಟ್ಟರ ಮೂಲಕ ಬೆಂಗಳೂರು ಕಂಟೋನ್ಮೆಂಟ್ ಗಂಡಿಗೆಅಂಗಡಿ ವಿಷಕಂಠಪ್ಪನವರ ಮನೆ ಲಗ್ನದಲ್ಲಿ ತೆಗೆದ ಬಾಬ್ತು ೧ ೦ ೦ ೯. ತುಮಕೂರು ಮಂಡಿ ಟಿ ಸಿ. ರೇವಣ್ಣನವರ ಮೂಲಕ ಗುಬ್ಬಿಗಟ್ಟಿ ಬಾಳಪ್ಪನವರ ಮಗನ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆದ ಬಾಬ್ತು ೨ ರೂ, ತೊಕದ ವೀರಪ್ಪನವರ ಮಗಳ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆದ ಬಾಬ್ತು ೨-೦-೦, ಜುಮ್ಲಾ ರೂ ೪-೦-೦ (ಇದರ ಜೊತೆಯಲ್ಲಿ ಕೈವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ಅಗ್ರತಾಂಬೂಲಕ್ಕೆಂದು ತೆಗೆದು ಕಳುಹಿಸಿದ್ದ ೪ ಆಣೆಯನ್ನು ಸ್ಟ್ಯಾರ್‌ಆಫೀಸಿಗೆ ಕಳುಹಿಸಿರುತ್ತೆ) ೧೦ ತುಮಕೂರು ಮಂಡಿ ಸಿ. ಟಿ. ರೇವಣ್ಣನವರ ಮೂಲಕ ತುಮಕೂರಲ್ಲಿ ನಡೆದ ಕ್ಲೋಸ್‌ಪೇಟೆ ಸಿದ್ದಲಿಂಗಪ್ಪನವರ ಲಗ್ನದಲ್ಲಿ ತೆಗೆದ ಬಾಬ್ತು ೨-೦-೦ ೧೧ ಕೃಷ್ಣರಾಜಪೇಟೆ ತಾ॥ ಬೂಕನಕೆರೆ ಮಠದ ಚನ್ನಪ್ಪಶಾಸ್ತ್ರಿಗಳ ಮೂಲಕ ಕೃಷ್ಣರಾಜಪೇಟೆ ಕಸಬಾ ಶೆಟ್ಟಿ ನಜಂಡಶೆಟ್ಟರ ಮಗ ಸಿದ್ದಲಿಂಗಯ್ಯನವರ ವಿವಾಹ ಕಾಲದಲ್ಲಿ ತೆಗೆದ ಬಾಬ್ತು ೧-೦-೦, ೧೨. ಕೊಳ್ಳೇಗಾಲದ ಸಾಹುಕಾರ್ ಜಿ. ಪಿ. ಮಲ್ಲಪ್ಪನವರಿಂದ ಇವರ ತಮ್ಮ ಷಣ್ಮುಖಯ್ಯನವರ ಲಗ್ನದಲ್ಲಿ ತೆಗೆದ ಬಾಬ್ತು ೪-೦-೦, ೧೩ ಮೈಸೂರ ಸ್ಟ್ಯಾರ್‌ಆಫೀಸ್ ಮೂಲಕ ಜಗಳೂರು ತಾ॥ ಬಿಳಚೋಡು ಪ್ಪರು ಕಲವೀರಪ್ಪನವರಿಂದ ಜಗಳೂರು ತಾ॥ ಮುದ್ದೇರು ಕ್ಕಿ ಹೊರಾಪುರದ ಸಿದ್ಧಲಿಂಗಪ್ಪನವರ ಮಕ್ಕಳು ಮಹದೇವಪ್ಪನವರಿಗೆ ಕೊಂಗುಂಡಿ ಮುದ್ದಾಪುರದ ಬಸಪ್ಪನವರ ಮಗಳನ್ನು ಕೊಟ್ಟು ನಡೆಸಿದ ವಿವಾಹದಲ್ಲಿ ತೆಗೆದ ಬಾಬ್ತು ೩-೧೫-೦, ೧೪ ಮೈಸೂರುಸ್ಟ್ಯಾರ್ ಆಫೀಸ್ ಮೂಲಕ ಶಿಕಾರಿಪುರ ತಾ॥ ಗ್ರಾಮದ ವ. ಆರಾಧ್ಯ ಮಠದ ನಾಗಲಿಂಗಯ್ಯನವರಿಂದ ಗ್ರಾಮದ ಹಿರೇಮಠದ ತೋಟಪ್ಪಯ್ಯನವರ ಪುತ್ರ ಸಂಗಪ್ಪಯ್ಯನವರಿಗೆ ಗ್ರಾಮದ ಮಗಳಗೇರಿಮಠದ ವೀರಭದ್ರಯ್ಯನವರ ಪುತ್ರಿ ಗಂಗಮ್ಮನನ್ನು ಕೊಟ್ಟು ನಡೆಸಿದ ವಿವಾಹದಲ್ಲಿ ತೆಗೆದ ಬಾಬ್ತು ೩-೧೫-೦

೧ ಮ॥ ರಾ॥ ಗಳಾದ ಬೆಂಗಳೂರು ಗಂಡಿಗೆ ಅಂಗಡಿ ಸಾಹುಕಾರು ಗಂಗಾಧರಪ್ಪನವರು ತಮ್ಮ ವಿಲ್‌ಪತ್ರದಲ್ಲಿ ರೂಪಾಯಿಯನ್ನು ಫಂಡುಸಭೆಗೆ ಕೊಡುವಂತೆಯೂ ಅ ಬಡ್ಡಿಯಾದಾಕಡೆಯಿಂದ ಬರುವುದರಲ್ಲಿ ಪಟ್ಟು ವಿದ್ಯಾರ್ಥಿಗೆ ಅ ಯಿಸರಿಸಮೇಲೆ ವಿದ್ಯಾರ್ಥಿವೇತನ ಕೊಡುವಂತೆಯೂ ಬ ಪ್ರಕಾರ ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನ ಕ ಜಮಾ ಬಂದದ್ದು ೫೦-೦-೦, ೨ ತುಮಕೂರುದೇಶಿಕಶೆಟ್ಟರ ಶೆಟ್ಟರ ಅಡವಿ ರುದ್ರಯ್ಯನವರಿಂದ ಜಮಾಬಂದದ್ದು ೧-೦-೦ ೩. ಚಿಕ್ಕಮಗಳೂರು ತಾ॥ ಬೊಣಸಿನ ಮಲ್ಲೇದೇವರ ಶ್ರೀ ಕಲ್ಲಿನಾಥಸ್ವಾಮಿಗಳಿಂದ ಮೇ. ಜೆ. ಶಾಂತವೀರ ಪಿ ಎ ಮಠದ ಮೂಲಕ ಜಮಾ ಬಂದದ್ದು ೬-೦-೦ ೪ ಮೈಸೂರು ದೊಡ್ಡಪೇಟೆ ಸಕ್ಕರೆ ಹುಚ್ಚವೀರಪ್ಪನವರಿಂದ ಅವರ ಮಗನ ಮತ್ತು ಇವರ ಸೋದರಳಿಯನ ವಿವಾಹದಲ್ಲಿ ತೆಗೆದ ಬಾಬ್ತು ಮೈಸೂರ್ ಸ್ಟ್ಯಾರ್‌ಆಫೀಸ್ ಗೆ ಬಂದದ್ದು ೨-೦-೦.

ಕೆ. ರುದ್ರಾರಾಧ್ಯ, ಅಸಿಸ್ಟೆಂಟ್

ಸೋ॥ ವೀರಶೈವ ವಿದ್ಯಾಭಿವೃ

ರೇವಣಸಿದ್ಧೇಶ್ವರಪುರಾಣಂ.

ವೇದಾಗಮಾದಿಸಿದ್ಧವಾದ ವೀರಶೈವ ಮತವನ್ನು ಭೂತಲದಲ್ಲಿ ಪ್ರತಿಷ್ಠಾಪಿಸಿದ ಶ್ರೀ ರೇಣುಕಾಚಾರ್ಯರ ಚರಿತ್ರರೂಪವಾದ ಈ ಗ್ರಂಥವು ದೊಮ್ಮರಸಕವಿಯಿಂದ ಷಟ್ಪದೀಕಾವ್ಯವಾಗಿ ರಚಿಸಲ್ಪಟ್ಟಿರುವುದು. ಶ್ರೀರೇಣುಕಾಚಾರ್ಯರು ಭೂತಲದಲ್ಲಿ ನಟಿಯಿಸಿದ ಮಹತ್ಕಾರ್ಯಗಳು ಇದರಲ್ಲಿ ನಿರೂಪಿತವಾಗಿವೆ. ಕವಿತೆಯು ಹೃದಯಂಗಮವಾಗಿದೆ. ಪ್ರತಿಯೊಂದು ಪಾದಕ್ಕೂ ಒಂದೊಂದು ಪಙ್ಕ್ತಿಯಾಗಿ ಬಿಡಿಬಿಡಿಸಿ ಉತ್ತಮವಾದ ಗ್ಲೇಸ್ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಶುದ್ಧವಾಗಿ ಮುದ್ರಿತವಾಗಿದೆ. ೧೩ ಸಂಧಿಗಳುಳ್ಳ ಈ ಗ್ರಂಥದ ಬೆಲೆ ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧ ಆಣೆಗಳು.

ಷಟ್‌ಸ್ಥಲಸಿದ್ಧಾಂತಶಿಖಾಮಣಿ.

ಇದು ಶ್ರೀರೇಣುಕಾಚಾರ್ಯರು ಅಗಸ್ತ್ಯರಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತಶಾಸ್ತ್ರವು. ಪ್ರತಿಯೊಬ್ಬ ವೀರಶೈವನೂ ಮುಕ್ತನಾಗುವವರೆಗೆ ಜನ್ಮಾದಿಯಿಂದ ಕಡೆಯವರೆಗೆ ಆಚರಿಸಬೇಕಾದ ಧರ್ಮಕರ್ಮಗಳು ಇದರಲ್ಲಿ ನಿರೂಪಿತವಾಗಿವೆ. ಮೂಲಗ್ರಂಥಕ್ಕೆ ವೇದಾಗಮ ಪುರಾಣಾದಿವಚನಗಳ ಆಧಾರದಿಂದ ಕೂಡಿದ ಕನ್ನಡ ಟಿಪ್ಪಣವು ವಿಸ್ತಾರವಾಗಿ ಬರೆಯಲ್ಪಟ್ಟು ಉತ್ತಮವಾದ ಕಾಗದದಲ್ಲಿ ಅಚ್ಚುಮಾಡಿಸಲ್ಪಟ್ಟಿದೆ. ಸರ್ವರಿಗೂ ಸಂಗ್ರಾಹ್ಯವಾದ ಈ ಪುಸ್ತಕವು ೭೦೦ ಪುಟಗಳುಳ್ಳ ದೊಡ್ಡ ಗ್ರಂಥವಾಗಿದ್ದರೂ, ಸ್ವಮತಸ್ಥರ ಹಿತಾರ್ಥವಾಗಿ ಬೆಲೆಯು ಕಡಿಮೆಯಾಗಿಡಲ್ಪಟ್ಟಿದೆ. ವಿ. ಪಿ. ಮೂಲಕ ಅಂಚೆಯ ವೆಚ್ಚವೂ ಸೇರಿ ೧-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,

9 ಗ್ರಂಥಪ್ರಸಾರಕಮಂಡಲಿ, ಮೈಸೂರು.

(ಹೊಸಪುಸ್ತಕ ೧೩೦೪ ಪುಟಗಳು) ಶ್ರೀ (ಹೊಸಪುಸ್ತಕ ೧೩೦೪ ಪುಟಗಳು)

ಬ್ರಶ್ರೀ ವಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ

ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿದ 5

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೇ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಶುಭಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಠಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ “ ಸುಧಾರಸಧಾರಾ ” ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರ ...ಇಲ್ಲದೆ ಮತ್ಯಾವುದೂ ಸಮರ್ಥವಾಗಿಲ್ಲವು. ೧೩೦೪ ಪುಟ ೩ ಭಾಗಗಳ ಪುಸ್ತಕ ಒಂದೇ ಬೈಂಡ್ ಈ ಗ್ರಂಥರತ್ನವು ಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡೆ ಇರುವ ೨೮ ಪ್ರಕರಣಗಳಲ್ಲಿನ ವಿಷಯಸಂಗ್ರಹ ವೆಂತೆಂದರೆ:—೧ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜ್ಯೋತಿಶ್ಶಾಸ್ತ್ರದ ಹೋರಾಭಾಗಗಳು ೨, ಸಜೀವ ನಿರ್ಜೀವವಸ್ತುಗಳ ಉತ್ಪತ್ತಿ ೩, ಗರ್ಭಧಾರಣ ಯೋಗಗಳು ೪, ಜನನಕಾಲಲಕ್ಷಣ ಮತ್ತು ಫಲ ೫, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೬, ಆಯುರ್ದಾಯವಿಚಾರ ೭, ದಶಾಭುಕ್ತಿನಿರ್ಣಯ ೮, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಶಿಗಳ ಫಲ ಮತ್ತು ಕೇಂದ್ರಯೋಗ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರೆಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕವನ್ನು ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಯರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ. ಈ ತಿಂಗಳು ಅಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೬-೦-೦ ರೂ. ವಿ. ಪಿ. ಛಾರ್ಜ್ ೦-೬-೦ ಆಣೆ ನಂತರ ೭-೦-೦ ರೂ. ಜಾಗ್ರತೆ, ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

—:o:—

ಟೀಕಾಸ್ಮೃತಿ ೯೩೦ ಪುಟ ೬-೦-೦ ರೂ. ಸಟೀಕಪರಿಕರಪಾಷ್ಯತಾರ ೩೩೦ ಪುಟ ೧-೫-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೮ ಜನ ಭಕ್ತರ ಕಥೆ ೦-೮-೦. ಸಟೀಕನೋಬಲರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲುಗು ಗ್ರಂಥಗಳು ದೊರೆಯುತ್ತೆ.

ಟಿ. ನಾಗ. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಭಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

42

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ವಾಪಸ!!) ನೋಡಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತರೋಗವಾದವರು, ತೃಷೆಯುಳ್ಳವರು, ಬಹುಮೂತ್ರವವರು, ಕೆಮ್ಮುಳ್ಳವರ ಕಫ, ... ಮೂಲವ್ಯಾಧಿಯವರು, ವಾಂತಿಯಾಗುವವರು, ದೇಹಸಂಬಂಧದ ರೋಗವಿದ್ದವರು, ಧಾತುರೋಗವುಳ್ಳವರು, ಉಷ್ಣರೋಗವುಳ್ಳವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನದೋಷ, ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬೊಕ್ಕೆಗಳು, ಹುಣ್ಣುಗಳು, ... ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದ ಅತಿಶ್ರೇಯಸ್ಕರಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆವರೆಗೆ ಬೇಕಾಗುವುದು. ... ೧-೦-೦ ರೂ. ... ತೊಲೆಗೆ ರೂಪಾಯಿ ... ಅಂಚೆ ಖರ್ಚು ಬೇರೆ ಅನುಭವದ ಪತ್ರಿಕೆ ಔಷಧ ಸಂಗಡ ರವಾನಿಸುತ್ತೇವೆ.

ವಿಳಾಸ:—ಮೆಸ್ಸರ್ಸ್ ಜಿ. ಎಲ್. ಜೋಶಿ ಮತ್ತು ಕಂಪೆನಿ, ... ಬನವಾಸಿ, ಜಿಲ್ಲಾ ಉತ್ತರಕನ್ನಡ.

೧೯೧೧ನೇ ಇಸವಿಯ ಇಸ್ತಿಹಾರುವ ಪಾಕೆಟ್ ಡೈರಿಗಳು ಮಾರಾಟಕ್ಕೆ ಸಿದ್ಧವಾಗಿವೆ.



ನಂ. ೧ ಸಾಧಾರಣ ಡೈರಿಗೆ ೦-೬-೦

ನಂ. ೨ ... ಡೈರಿಗೆ ೦-೮-೦

ನಂ. ೩ ... ಡೈರಿಗೆ ...

ನಂ. ೪ ... ಡೈರಿಗೆ ...

... [illegible]

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ನೂರು ರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು

51 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀ ಕರಕ ಕಸ್ತೂರಿ ಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ ವಿಷಜ್ವರ—ನೂರರಜ್ವರ—ನಾಲ್ಕುಜ್ವರ— ಮಲೇರಿಯಾಜ್ವರ— ತಲೆನೋವು— ವೈಕ್ಲೈನೋವು ಮತ್ತು ಬಾಲ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮೂಲವ್ಯಾಧಿ—ಅಜೀರ್ಣ—ಬೇಧಿ—ಮುಂತಾದ ಸಕಲ ವ್ಯಾಧಿಗಳಿಗೂ ... ರೋಗಗಳೂ ... ಮೊದಲಾದವುಗಳನ್ನು ನಿವಾರಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂಬ ನಾವು ಸ್ಪಷ್ಟವಾಗಿ ಹೇಳುತ್ತೇವೆ. ೫೦ ಮಾತ್ರೆ ೧ ಡಬ್ಬಿ, ವಿವರಕ್ಕೆ ಒಂದು ಆಣೆ ... ವಿ. ಪಿ. ಛಾರ್ಜ್ ಪ್ರತ್ಯೇಕ.

ಕನ್ನಡ ... ಪ್ರಿಸ್ಕ್ರಿಪ್ಷನ್ ... [illegible]

ಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೧ ಆಣೆ, ವಿವರಕ್ಕೆ ಒಂದು ಆಣೆ. ವಿ.ಪಿ. ಛಾರ್ಜ್ ಪ್ರತ್ಯೇಕ.

ವಿಳಾಸ:— ಬಿ. ವಿ. ಪಂಡಿತ್,

ಸದ್ವೈದ್ಯಶಾಲಾ, ನಂಜನಗೂಡು,

ಮೈಸೂರ್ ಡಿ॥

52

KASHI VISHWESHWAR

ದೊಡ್ಡ ಕಂಪೆನಿ! ಹೊಗಳಾದ ಪದಕಗಳು!!

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ ... ಕಣ, ಪೇಟಾ, ಶಾಲು, ... ಮುಂತಾದ ... ಅನೇಕ ವಿಧವಾದ ... ಗಳನ್ನು ... ೧೦೦ ಪುಟಗಳುಳ್ಳ ... ಕ್ಯಾಟಲಾಗನ್ನು ... ಉಚಿತ ...

ವಿಳಾಸ ... ಕಾಶಿ ...

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು — ಚಂಡಮಾರುತ [illegible] ಪ್ರತಿಜ್ಞಾ ಪೂರ್ಣ [illegible], ರಾಜಶೇಖರ ವಿಲಾಸ [illegible], ಕೌರಿ [illegible] ವಿಯೋಗ [illegible] ಲಕ್ಷ್ಮಿ [illegible] ಸೀತೆ [illegible], ಸಾಹಸಿ [illegible], ಕೆಲಾ [illegible] ಸುಕನ್ಯಾ ಲಕ್ಷ್ಮಿ [illegible], ತಾರಾಶಶಾಂಕ [illegible] ಪದ್ಮಿನಿ [illegible], ಸತ್ಯಸಂಜೀವಿನಿ [illegible] ಕೋಟೆ [illegible], ಅವ ದವರ [illegible], ರಂಭಾರಾಣಿ [illegible], ಸೀ [illegible] [illegible], ರಜನಿ [illegible] 3

ಉಪಾಧ್ಯಾಯರುಗಳು

ವಿಷಯಗಳಾದ ಉಪಾಧ್ಯಾಯರುಗಳು [illegible] ಬೇಕು [illegible] ಸುಗಂಧ [illegible] [illegible] ಅರ್ಜಿ [illegible] ಸ್ಕೂಲ್ [illegible] ತರಿಸಿಕೊಳ್ಳಬಹುದು. ಟಿ ಎಲ್ ಉಪಾಧ್ಯಾಯರು,
ಸುಗಂಧಶಾಲೆ,
22 ಮೈಸೂರು.

ನ್ಯಾಯದರ್ಪಣ.

ಇದರಲ್ಲಿ ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಇಂದಿಗೂ [illegible] ಸಮಸ್ತ ವ್ಯವಹಾರಗಳಿಗೂ [illegible] ಬಂದಿರುವ ಗ್ರಾಮ [illegible] ಕಾನೂನು [illegible] ಮನೆಗಳನ್ನು [illegible] ಕಾನೂನೂ, ಅದರ [illegible] ನಾನಾವಿಧಗಳಾದ ದಸ್ತಾವೇಜು [illegible] ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟು ಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ 1-8-0 ವಿ ಪಿ ಮೂಲ್ಯ 1-12-0
ಎಂ. ಎಸ್. ನಂಜಪ್ಪನವರು,
[illegible], ಮೈಸೂರು

42 ಸಚಿತ್ರ ರೋಹಿಣಿ [illegible] ಕಥೆಗಳು ಸಚಿತ್ರ [illegible] ವಿಕ್ರಮಾದಿತ್ಯ [illegible] ಕಥೆಗಳು
ರೂ ೧-೪-೦ (೨೫೦ ಪುಟ) [illegible] ರೂ ೧-೪-೦ (೨೩೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

[illegible] ಮಹಾಶಯರುಗಳೇ! ವಾಚನಾಸಕ್ತಿಯು ಬೇಕಾದರೆ, [illegible] ಇದ್ದರೆ, [illegible] ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ [illegible] ಕೋರಿದರೆ, ಜಾಣತನವನ್ನು [illegible] ಸಿದರೆ, ಉತ್ಸಾಹಶಕ್ತಿಯಿಲ್ಲದಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿ. [illegible] ಪುಟಗಳಿಂದ ಕೂಡಿದ ಈ ಕಥೆಗಳೆಲ್ಲ [illegible] ಪುಸ್ತಕವಾಗಿದೆ. ಬೆಲೆ ರೂ [illegible] ಅಂಚೆ ಕೂಲಿ [illegible] ಆಣೆ
ಈಗಲೇ [illegible] ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗ್ ಬೇಕಾದರೆ [illegible]
ವಿಳಾಸ — ಎಂ ಆರ್ [illegible] ಶೆಟ್ಟಿ, ಬುಕ್ ಡಿಪೋ, [illegible] ಬೆಂಗಳೂರು ಸಿಟಿ

[illegible] ದೇಶದಲ್ಲಿ ಪೌಂಡು [illegible] ಇತ್ತು ಈಗ ಪೌಂಡು [illegible] ಆಗಿದೆ ಆದ್ದರಿಂದ ಇದರ ಕ್ರಯ [illegible] ಮಾಡಿರುತ್ತೆ 9

ಲೋಕಪ್ರಸಿದ್ಧವಾದ ಸಾಲಾಮಿಸ್ರಿ, ಪಂಜಾಬ

ಈ “ಪಂಜಾಬ್ ಸಾಲಾಮಿಸ್ರಿ [illegible]” [illegible] ನೀರು ಸಂತೆ ಇದ್ದರೂ, ಸ್ವಪ್ನ [illegible], ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, [illegible] ಸೊಂಟದಲ್ಲಿ ನೋವಿದ್ದರೂ, [illegible] ಇಲ್ಲದಿದ್ದರೂ, [illegible] ರಕ್ತ [illegible] ದರಿಂದ [illegible] ಸಾಲಾಮಿಸ್ರಿ [illegible] ಸ್ಥಿತಿಗೆ ತರುವುದು, [illegible] ಬಲವನ್ನು [illegible] ಗಳನ್ನು [illegible] ಗಳಾಡಿಸುವುದು, ವಾತರೋಗವನ್ನು [illegible] ವು ಇರಲಾರದು. ಈ ಪಂಜಾಬ್ ಸಾಲಾಮಿಸ್ರಿ [illegible] ಬೆಂಗಳೂರಿನ [illegible] ಮಾತ್ರವೇ ಸಮಾರಂಭವಾಗಲಾರದು.

ಈ ಮುಖ್ಯವಾದ ಪಂಜಾಬ್ ಸಾಲಾಮಿಸ್ರಿ [illegible]
೫೦೦ ರೂ ಬಹುಮಾನವಾಗಿ ಕೊಡಲ್ಪಡುವುದು.

[illegible] ಪರೀಕ್ಷಿಸಿ [illegible] ಬಹುಮಾನವನ್ನು [illegible] ವಿ.ಪಿ [illegible]
[illegible] ಬೆಂಗಳೂರು ಸಿಟಿ
[illegible] ಬೆಂಗಳೂರು ಸಿಟಿ

ಮಾಲ್ಯದ [illegible] 2

[illegible] ಕಸ್ತೂರಿ [illegible] ಸಸ್ಯ [illegible] ನೆಗಡಿ, [illegible] ಕೆಮ್ಮು, [illegible] ರಕ್ತದ [illegible] [illegible] ಚಿಕ್ಕ [illegible]

ಕ್ಷಯಾಪಸ್ಮಾರ [illegible]

[illegible]
[illegible]
[illegible]

ಗಂಧರಾಜು ನಸ್ಯದಪುಡಿ.



ಈ ಪುಡಿಯನ್ನು ಹಾಕಿಕೊಳ್ಳುವ ದರಿಂದ ಮೂಗಿನಲ್ಲಿ ಬೆಳೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸ) [illegible] ಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಭಾರವಾಗಿರುವುದು, ಈ ಯಾವುದಾ [illegible] ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಇಂದು [illegible] ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು [illegible] [illegible] ಡಬ್ಬಿಯ ಬೆಲೆ [illegible] ಆಣೆ [illegible] ಡಬ್ಬಿಗೆ [illegible]

ಉತ್ತಮವಾದ ನಶ್ಯದಪುಡಿ

[illegible] ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನ [illegible] ವಾಸನೆ ಬರುವ ನಶ್ಯವು [illegible] ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ [illegible] ನಿಜವು ತಿಳಿಯುತ್ತದೆ. [illegible] ತೊಲೆ ತೂಕದ ಸೇರಿ [illegible] ಆಣೆ ೩ ಸೇರಿಗೆ [illegible]

ಪುಕೆಳಲ್ಲಾ ಸೀ ಹೊಗೆಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಅರೋಚಕಗಳು ಹೋಗುವವು. [illegible] ಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ಧೂಳಿ, ವಾಸನೆಗಳಿಂದ ನೊರೆಯುವ ಈ ಹೊಗೆಸೊಪ್ಪನ್ನು [illegible] ಯೋಗಿಸಿರಿ. [illegible] ಡಬ್ಬಿಗೆ [illegible] ಆಣೆ. ಒಂದು ದರ್ಜ ಡಬ್ಬಿ [illegible] [illegible] ಪೋಸ್ಟೇಜ್ ಬೇರೆ
ವಿಳಾಸ — ಶ್ರೀ ಮಲ್ಲಿಕಾರ್ಜುನಶೆಟ್ಟಿ,
ಗೋವರ್ಧನ [illegible], [illegible]
31 [illegible]

[illegible] ನೆಯ ಶನಿವಾರದಿಂದ [illegible] ವರೆಗೆ [illegible] ಅಕ್ಟೋಬರ್ [illegible] ವರೆಗೆ ನಡೆಯುವ [illegible] ಅನಂದನಾಮ ಸಂ॥ದ ಅಶ್ವಯುಜ [illegible] ಅಶ್ವಯುಜ [illegible] ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
27	ಭಾನು	[illegible]	5-14	[illegible]	51-12
28	ಸೋಮ	ನವ	4-40	[illegible]	52-17
29	ಮಂಗ	ದಶ	2-29	[illegible]	52-38
30	ಬುಧ	[illegible]	1	ಧನಿಷ್ಠ	53-32
1	ಗುರು	ದ್ವಾ	1-9	ಶತಭಿಷ	56-39
2	ಶುಕ್ರ	ತ್ರ	2-27	[illegible]	60-
3	ಶನಿ	ಚತು	1-28	[illegible]	0-59

(1) [illegible] (2) [illegible] (3) [illegible] (4) [illegible] (5) [illegible]

[illegible]

REGISTERED, No. M. 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧—೦—೦ | ಬಿಡಿ ಪ್ರತಿ [illegible]

ಸಂಪುಟ ೩೩) ಮೈಸೂರ್ ಸ್ಟಾರ್ [illegible] ಅಕ್ಟೋಬರ್ [illegible] ತಾರೀಖು [illegible] ಭಾನುವಾರ (ಸಂಚಿಕೆ [illegible]

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸದ ಮುಖ್ಯಭಾಗಗಳು.

ಮಹಾಶಯರೇ,

ಶ್ರೀಮನ್ಮಹಾರಾಜ ರಾಜಶ್ರೀ ಸಾಹೇಬ್ ಬಹಾದುರವರ ಆಜ್ಞಾನುಸಾರವಾಗಿ ದಸರಾ ಪ್ರಜಾಪ್ರತಿನಿಧಿಗಳ [illegible] ಸಭೆಗೆ ತಮ್ಮಗಳನ್ನು ಆದರಪೂರ್ವಕವಾಗಿ ಬರಮಾಡಿಕೊಂಡು, ಕಳೆದ ಸರ್ಕಾರೀ ವರ್ಷದಲ್ಲಿ ನಡೆದ ಸಂಸ್ಥಾನದ ಆಡಳಿತಗಳ ವಿಷಯವನ್ನೂ, ಶ್ರೀಮನ್ಮಹಾರಾಜರವರ ಪ್ರಜೆಗಳ ಅಭಿವೃದ್ಧಿಗಾಗಿ ಈಗ ಕೈಗೊಂಡಿರುವ ಮತ್ತು ಮುಂದೆ ಕೈಗೊಳ್ಳಬೇಕೆಂದಿರುವ ವಿಚಾರಗಳನ್ನೂ ತಮ್ಮಗಳಿಗೆ ತಿಳಿಯಪಡಿಸುವುದಕ್ಕಾಗಿ ನಾನು ಉದ್ಯುಕ್ತನಾಗಿದ್ದೇನೆ.

ಯುದ್ಧ.

ಪ್ರಸ್ತುತದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಇತರ ಭಾವನೆಗಳನ್ನು ಮರೆಯಿಸಿ [illegible] ಯುರೋಪಿನ ಖಂಡವನ್ನು ಆದ್ಯಂತವಾಗಿ [illegible] ಮಾಡುತ್ತಿರುವ ಪ್ರಬಲಯುದ್ಧವಾಗಿದೆ. [illegible] ಸಾಧನಗಳು ಹೆಚ್ಚಿರುವುದರಿಂದ, ಈ ಯುದ್ಧದ [illegible] ಪ್ರಪಂಚದ ನಾನಾ ಭಾಗಗಳಲ್ಲಿ [illegible] ಅನುಭವಕ್ಕೂ ಬಂದಿರುತ್ತವೆ. ಬ್ರಿಟಿಷ್ ಚಕ್ರಾಧಿಪತ್ಯದ ಒಂದು ಭಾಗವಾಗಿರುವುದರಿಂದ ಇಂಡಿಯಾ ದೇಶವು ಯುದ್ಧದಲ್ಲಿ ವಿಶೇಷ ಸಂಬಂಧವನ್ನು ಹೊಂದಿರುತ್ತದೆ. [illegible]

[illegible]

ಇದರಿಂದ ರಾಗಿ ಬೆಳೆಯು [illegible] ಕಡಿಮೆಯಾಗಿ, ಮುಂದಿನ ಬೆಳೆಯು [illegible] ಬೆಳೆಯೂ [illegible] ಪ್ರಾಂತ್ಯದಲ್ಲಿ [illegible] ವಿಶೇಷವಾಗಿ [illegible] ಮೈಸೂರು ಡಿಸ್ಟ್ರಿಕ್ಟಿನ [illegible] ತೃಪ್ತಿಕರವಾಗಿರಲಿಲ್ಲ. [illegible] ಇಲ್ಲವೇ ಕಂಗೆಟ್ಟವು.

ಈ ವರ್ಷದಲ್ಲಿಯೂ [illegible] ಸರಿಯಾಗಿ ಉಪಕ್ರಮಿಸಲಿಲ್ಲ. [illegible] ವಿಶೇಷವಾಗಿಯೂ [illegible] ಬೀಳಲೂ ಇಲ್ಲ. [illegible] ತಿಂಗಳಲ್ಲಿ 3.50 ಇಂಚು ಮಳೆಯೂ [illegible] 1.31 ಇಂಚು, 10.38 ಇಂಚು ಮಳೆ ಬೀಳಬೇಕಾಗಿತ್ತು. [illegible] ತಿಂಗಳುಗಳಲ್ಲಿ ಕ್ರಮವಾಗಿ [illegible], 3.61 ಇಂಚು ಮಳೆಯಾಗಬೇಕಾಗಿರುವಲ್ಲಿ, 0.72 ಇಂಚು, 2.58 ಇಂಚು, ಈ ಮೇರೆಗೆ ಆಯಿತು. [illegible] ಅನುಕೂಲವಾಗಿ ಮಳೆಯಾದುದರಿಂದ, [illegible] ಉತ್ತಮವಾಯಿತು. [illegible] ಅನೇಕ ಪ್ರದೇಶಗಳಲ್ಲಿ [illegible] ಮುಂದೆ [illegible] ನೋಡಿಕೊಂಡು [illegible]

ಧಾರಣೆಗಳು.

ಜಾಗ್ರತೆಯಾಗಿ [illegible] ಉಂಟಾಗುತ್ತಿರುವುದರಿಂದಲೂ, ದೇಶಾಂತರಗಳ [illegible] ಏರುತ್ತಿರುವುದರಿಂದಲೂ, [illegible] ಧಾರಣೆಗಳು ಏರುತ್ತಲಿವೆ. [illegible]

[illegible]

[illegible] ಚುನಾವಣೆಗಳು.

ಶ್ರೀಮನ್ಮಹಾರಾಜರವರು [illegible] ಮಾಡಿದ್ದು [illegible] ನ್ಯಾಯವಿಧಾಯಕಸಭೆಯ ಸಂಬಂಧವಾದ ಚುನಾವಣೆಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿರುತ್ತದೆ. ಈ ಸಭೆಯಿಂದ ಚುನಾಯಿಸಲ್ಪಟ್ಟ ನಾಲ್ಕು ಜನ ಮೆಂಬರುಗಳನ್ನೂ, ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟ ನಾಲ್ಕು ಜನ ಮೆಂಬರುಗಳನ್ನೂ ಸೇರಿಸಿಕೊಳ್ಳತಕ್ಕ ವಿಷಯವನ್ನೂ, ಸರ್ಕಾರೀ ಆಡಳಿತಗಳನ್ನು ಕುರಿತು ಸಮಜಾಯಿಷಿ [illegible] ಪ್ರಶ್ನೆ ಕೇಳುವ [illegible], ಬಜೆಟ್ಟನ್ನು [illegible] ಸದರಿ [illegible]

ಈ ರೀತಿ ವಿಸ್ತರಿಸಲ್ಪಟ್ಟ ಸಭೆಯು ಕಳೆದ ವರ್ಷದಲ್ಲಿ ಮೊದಲು ಸೇರಿತು, ಮತ್ತು ಈ ಸಂಸ್ಥಾನದ ಬಜೆಟ್ಟನ್ನು [illegible] ಜೂನ್ ಮಾಹೆಯಲ್ಲಿ ಸದರಿ ಸಭೆಯು ಮುಂದೆ [illegible] ತರಲಾಯಿತು. ಜೂನ್ [illegible] ನಡೆಯಿತು. ಅದರಲ್ಲಿ [illegible] ಸರ್ಕಾರೀ [illegible] ಮೆಂಬರುಗಳೆಲ್ಲರೂ ಭಾಗವಹಿಸಿದರು.

[illegible] ಶ್ರೀಮನ್ಮಹಾರಾಜರು [illegible] ಪದವಿಗೆ ಬಂದದ್ದು.

ಶ್ರೀಮನ್ಮಹಾರಾಜರವರನ್ನು [illegible] ಮೆಂಬರನ್ನಾಗಿ [illegible], [illegible] ಮೆಂಬರುಗಳ ಸಂಖ್ಯೆ [illegible] ಶ್ರೀಮನ್ಮಹಾರಾಜರವರು [illegible]

[illegible]

ಸರ ಸ್ಥಿತಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.1 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯು ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯು ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾಖೆಯ ಆನರ್ಸ್ ಕೋರ್ಸನ್ನು ಪ್ರಾರಂಭಿಸುವದು ಸಾವಕಾಶವಾಗಬೇಕಾಯಿತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ, ಹಿಸ್ಟರಿ ಮತ್ತು ಎಕನಾಮಿಕ್ಸ್ ಭಾಗಗಳಲ್ಲಿ ಒಂದು ಆನರ್ಸ್ ಕೋರ್ಸನ್ನೂ ಏರ್ಪಡಿಸಲಾಯಿತು. ಈ ಕೋರ್ಸುಗಳನ್ನು ಏರ್ಪಡಿಸಿದ್ದರಿಂದ ಬೇಕಾದ ಸಲಕರಣೆಗಳಿಗಾಗಿಯೂ ಹೆಚ್ಚು ಶಿಬ್ಬಂದಿಗಾಗಿಯೂ ಸ್ವಲ್ಪ ಖರ್ಚನ್ನು ಮಾಡುವುದು ಅವಶ್ಯವಾಯಿತು.

ಪ್ರಾಥಮಿಕವಿದ್ಯಾಭ್ಯಾಸದ ವಿಷಯದಲ್ಲಿಯೂ ಇತರ ಅಭಿವೃದ್ಧಿಕಾರ್ಯಗಳು ಜರುಗಿಸಲ್ಪಟ್ಟವು. ಅವರೆ ಈ ಇಲಾಖೆಯು ಯಾವಷ್ಟಕ್ಕೆಯನ್ನೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಲಾಯಿತು. ಗ್ರಾಮಪಾಠಶಾಲೆಗಳನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕವಾಗಿ ಒಂದು ಲಕ್ಷ ರೂಪಾಯಿ ಗ್ರಾಂಟನ್ನೂ, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸತಕ್ಕದ್ದಕ್ಕೆ ಅರ್ಧ ಲಕ್ಷ ರೂಪಾಯಿ ಗ್ರಾಂಟನ್ನೂ ಕೊಡಲಾಯಿತು. ಗ್ರಾಂಟ್ ಇನ್ ಏಯ್ಡ್ ನಿಬಂಧನೆಗಳ ಮೇರೆ 1,000 ಸ್ಕೂಲುಗಳನ್ನು ಏರ್ಪಡಿಸಲು ಮಂಜೂರ್ ಮಾಡಲಾಯಿತು. ಯಾವ ಉಪಾಧ್ಯಾಯನಿಗೇ ಆಗಲಿ ಮಾಹೆಯಾನ 10 ರೂಪಾಯಿಗೆ ಕಮ್ಮಿ ಇಲ್ಲದಷ್ಟು ಸಂಬಳ ದೊರೆಯುವಂತೆ ಮಾಡಲು, ಸರ್ಕಾರದಿಂದ ಕೊಡುವ ಗ್ರಾಂಟಿನ ಜೊತೆಗೆ ಗ್ರಾಮಸ್ಥರು ದ್ರವ್ಯರೂಪವಾಗಿಯಾಗಲೀ ಧಾನ್ಯರೂಪವಾಗಿಯಾಗಲೀ ಸಹಾಯ ಮಾಡಬೇಕಾದದ್ದೇ ಇದರ ಮೂಲತತ್ವವು.

ನಿರ್ಬಂಧ ವಿದ್ಯಾಭ್ಯಾಸದ ಒಂದು ಏರ್ಪಾಟನ್ನು ಮಂಜೂರ್ಮಾಡಿರುವದಲ್ಲದೆ, ಇದನ್ನು ಏದ ಪಲ್ಲಿ ಉಪಾಯಿಸಲ್ಪಟ್ಟಿರುವ 16 ಮುಖ್ಯ ಸ್ಥಳಗಳಲ್ಲಿ ಅಜಮಾಯಿಷಿ ಮಾಡಲಾಗುವುದು. ಇದಕ್ಕಾಗಿ ನಿಯಮಗಳನ್ನು ತಯಾರ್ಮಾಡಿ, ಹಣವನ್ನು ಒದಗಿಸಿ ಇದೆ. ಮತ್ತು ಮೊದಲು ಮಾಡಬೇಕಾದ ಸಂಭಾಷಣೆಗಳೆಲ್ಲಾ ಮುಗಿದಿರುತ್ತವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸಾಮಾನ್ಯ ವಿದ್ಯಾಭ್ಯಾಸವನ್ನೂ ಹೆಚ್ಚಿಸಿದ್ದರಿಂದ, ಸಂಸ್ಥಾನದಲ್ಲಿ ಇದುವರೆಗೆ ದೊರೆಯುತ್ತಿದ್ದುದಕ್ಕಿಂತಲೂ ಹೆಚ್ಚಿನ ತರದ ಹೆಚ್ಚು ಜನ ಉಪಾಧ್ಯಾಯರನ್ನೂ, ಇನ್ನೂ ಉತ್ತಮವಾದ ಶಿಕ್ಷಣಕ್ರಮವನ್ನೂ ಒದಗಿಸತಕ್ಕದ್ದು ಆವಶ್ಯಕವಾಗಿರುತ್ತದೆ. ಇದನ್ನು ಒದಗಿಸಬೇಕೆಂಬ ಉದ್ದೇಶದಿಂದ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದಕ್ಕೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಒಂದು ಏರ್ಪಾಡು ಅಂಗೀಕೃತವಾಗಿದೆ. ಆ ಏರ್ಪಾಡಿನ ಸಾರಾಂಶವೇನೆಂದರೆ—ಗ್ರಾಜುಯೇಟುಗಳಾದ ಉಪಾಧ್ಯಾಯರುಗಾಗಿ ಒಂದು ಟ್ರೇನಿಂಗ್ ತರಗತಿಯನ್ನಿಟ್ಟು ಮೈಸೂರು ನಾರ್ಮಲ್ ಸ್ಕೂಲನ್ನು ಒಂದು ಟ್ರೇನಿಂಗ್ ಕಾಲೇಜನ್ನಾಗಿ ಮಾಡುವದು; ಶಿವಮೊಗ್ಗೆಯಲ್ಲಿಯೂ, ಕೋಲಾರದಲ್ಲಿಯೂ ಇರುವ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದು, ಮತ್ತು ಶೀಘ್ರದಲ್ಲಿಯೇ ತುಮಕೂರಿನಲ್ಲಿ ಒಂದು ಟ್ರೇನಿಂಗ್ ಸ್ಕೂಲನ್ನು ಇಡುವುದು. ಈಗ ಸಾಲಿಯಾನ 254 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುತ್ತಿರುವುದಕ್ಕೆ ಬದಲಾಗಿ, ಮುಂದೆ 440 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದೇ ಈ ಬದಲಾವಣೆಗಳ ಫಲಿತಾಂಶವಾಗುವುದು.

ಹಿಂದಿನ ವರ್ಷದ ಉಪನ್ಯಾಸದಲ್ಲಿ ನಿರೂಪಿಸಿರುವಂತೆ ಶಿಲ್ಪ ವಾಣಿಜ್ಯ ವಿದ್ಯಾಭಿವೃದ್ಧಿಗೆ ಬೇಕಾದ ಅನೇಕ ಏರ್ಪಾಡುಗಳನ್ನು ಜಾರಿಗೆ ತರಲಾಯಿತು. ಬೆಂಗಳೂರಲ್ಲಿ ಒಂದು ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲನ್ನೂ ಒಂದು ಕಮರ್ಷಿಯಲ್ ಸ್ಕೂಲನ್ನೂ ಸ್ಥಾಪಿಸಲಾಯಿತು. ಮೈಸೂರಲ್ಲಿ ಮೊದಲಿದ್ದ ಎರಡು ಶಿಲ್ಪಶಾಲೆಗಳನ್ನು ಸೇರಿಸಿ ಹೊಸದಾಗಿ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟನ್ನು ಏರ್ಪಡಿಸಲಾಯಿತು. ಪ್ರಸ್ತುತ ಸಂವತ್ಸರದಲ್ಲಿ ಮೇಲ್ಕಂಡ ವಿದ್ಯಾಲಯಗಳೆಲ್ಲಾ ಅತ್ಯುತ್ತಮವಾದ ಉದ್ಯೋಗವನ್ನು ಒದಗಿಸುತ್ತವೆ ಎಂದು ತಿಳಿಯಬರುತ್ತದೆ. ಕೈಗಾರಿಕೆ ಕಸಬನ್ನು ಕಲಿಸುವ ಉಪಾಧ್ಯಾಯರುಗಳನ್ನೂ, ರೈಲ್ವೆ ಗೌರ್ಮೆಂಟ್ ವರ್ಕ್ ಇನ್ಸ್ಪೆಕ್ಟರುಗಳನ್ನೂ ಎಂಜಿನ್ ಡ್ರೈವರುಗಳನ್ನೂ ಮತ್ತು ಟೆಲಿಗ್ರಾಫಿಕ್ ಸಿಗ್ನಲರುಗಳನ್ನೂ ತಯಾರ್ಮಾಡತಕ್ಕ ಬಗ್ಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲಿನಲ್ಲಿ ಹೊಸ ತರಗತಿಗಳನ್ನು ಇಡಲು ಏರ್ಪಾಡು ಮಾಡಲಾಗಿದೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಅಚ್ಚುಮಾಡಿ ತಯಾರ್ ಹೊಂದುವವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫ್ಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾ... ...ಮಾಗುತ್ತದೆ. ಕಳೆದ ವರ್ಷದಲ್ಲಿ ಇದ... ...ಸಂಖ್ಯೆಯು 560

ಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವು ಹೆಚ್ಚುವದೇಕೆಂಬ ಉದ್ದೇಶದಿಂದ ಪುನಃ ಪರಿಷ್ಕರಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ಯಂಪ್ರೆಸ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ ಚಾಮರಾಜಪೇಟೆ ಗರ್ಲ್ಸ್ ಸ್ಕೂಲಿನಲ್ಲಿಯೂ ಇಂಗ್ಲೀಷ್ ಲೋವರ ಸೆಕೆಂಡರಿ ಕ್ಲಾಸುಗಳನ್ನು ಇಡಲಾಗುವುದು. ಬೆಂಗಳೂರು ಮಲ್ಲೇಶ್ವರದ ಗರ್ಲ್ಸ್ ಸ್ಕೂಲಿನಲ್ಲಿಯೂ, ಕೋಲಾರ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ, ಹಾಸನ ಇವುಗಳಲ್ಲಿನ ಗರ್ಲ್ಸ್ ಸ್ಕೂಲುಗಳಲ್ಲಿಯೂ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲಾಗುವುದು. ಈ ಹೊಸ ಬದಲಾವಣೆಗಳಿಂದ ಬಾಲೆಗೆ ಸಂಬಂಧಪಟ್ಟ ಎಲ್ಲಾ ಹೊಂದಿಗೆ ಕೈಗಾರಿಕೆಗೂ ಗೃಹಕೃತ್ಯಕ್ಕೂ ಸಂಬಂಧಪಟ್ಟ ವಿಷಯಗಳಿಗೂ ಅವಕಾಶವುಂಟಾಗುವುದು. ಒಂದು ಮಾಸ... ಗರ್ಲ್ಸ್ ಸ್ಕೂಲುಗಳಿಗೆ ಒಬ್ಬರು ಇನ್ಸ್ಪೆಕ್ಟ್ರೆಸ್ಸನ್ನು ಹಂಗಾಮಿಯಾಗಿ ನೇಮಿಸಿದೆ.

ಹಿಂದಿನ ಸಂವತ್ಸರದ ಮುಖ್ಯ ಇತರ ಏರ್ಪಾಡುಗಳಲ್ಲಿ ಈ ಕೆಳಗೆ ಕಂಡ ಸಂಗತಿಗಳನ್ನು ಉದಹರಿಸಬಹುದಾಗಿದೆ — ವರ್ನಾಕ್ಯುಲರ್ ವಿದ್ಯಾಭ್ಯಾಸದ ಸೀನಿಯರ್ ಭಾಷೆಗೆ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲರವರನ್ನು ನಿಯಮಿಸಿದ್ದು, ತಹಸೀಲುಗಳ ಮತ್ತು ಹೈಸ್ಕೂಲ್ ಆಂಗ್ಲೋವರ್ನಾಕ್ಯುಲರ್ ಸ್ಕೂಲುಗಳ ಹೆಡ್ಮಾಸ್ಟರ ಮತ್ತು ಇತರ ಉಪಾಧ್ಯಾಯರ ಸಂಬಳದ ದರ್ಜೆಯನ್ನು ಪುನರ್ವಿಮರ್ಶೆ ಮಾಡಿದ್ದು, ಪ್ರತಿ ದರ್ಜೆಯಲ್ಲಿಯೂ ಎಷ್ಟು ಜನಗಳಿರಬೇಕೆಂಬುದನ್ನು ಕ್ಲುಪ್ತಪಡಿಸುವುದು, ಒಂದು ದರ್ಜೆಯು ಮತ್ತೊಂದು ದರ್ಜೆಗೆ ಸೇರಿಕೊಳ್ಳದಂತೆ ಮಾಡುವುದು, ಯೋಗ್ಯತೆಯ ಆಧಾರದ ಮೇಲೆಯೇ ಬಡ್ತಿ ಕೊಡುವುದು... ...ಯನ್ನು ಏರ್ಪಡಿಸುವುದು, ಹಾಗೆಯೇ ಉಪಾಧ್ಯಾಯರುಗಳೂ, ಪರೀಕ್ಷೆ ಕೆಲಸವನ್ನು ನೋಡುವ ಇನ್ಸ್ಪೆಕ್ಟರುಗಳೂ ಒಬ್ಬರ ಕೆಲಸವನ್ನು ಮತ್ತೊಬ್ಬರು ಕ್ರಮವಾಗಿ ವಹಿಸುವದಕ್ಕೆ ಅವಕಾಶಕೊಡುವುದು, ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಉಪಾಧ್ಯಾಯರುಗಳ ಸಂಬಳವು ಅಪೇಕ್ಷಣೀಯವಾಗಿ ಇರುವಂತೆ ಮಾಡುವುದು, ಸರ್ಕಾರಿ ಸಹಾಯವನ್ನು ಪಡೆಯುವ ಸ್ಕೂಲುಗಳ ಉಪಾಧ್ಯಾಯರಿಗೆ ಸಂಸ್ಥಾನದ ಪ್ರಾವಿಡೆಂಟ್ ಫಂಡ್ ಕ್ರಮದಿಂದ (ಇನ್ಷ್ಯೂರೆನ್ಸ್) ಉಂಟಾಗುವ ಪ್ರಯೋಜನವನ್ನು ಪಡೆಯಲು ಕೆಲವು ಷರತ್ತುಗಳ ಮೇಲೆ ಅವಕಾಶಕೊಡಲಾಗಿದೆ.

ಕಳೆದ ದಸರಾ ಮಹೋತ್ಸವ ಕಾಲದಲ್ಲಿ ಮೈಸೂರಲ್ಲಿ ವಿದ್ಯಾಭ್ಯಾಸ ಪ್ರದರ್ಶನವನ್ನು ನಡೆಯಿಸಲಾಯಿತು. ಆ ಪ್ರದರ್ಶನಕ್ಕೆ ಅನೇಕ ಜನಗಳು ಬಂದಿದ್ದರು. ಡಿಸೆಂಬರ್ ಮಾಹೆಯ ಆಖೈರಿನಲ್ಲಿ ಅಂತಹ ಮತ್ತೊಂದು ಪ್ರದರ್ಶನವನ್ನು ಬೆಂಗಳೂರು ಹೈಸ್ಕೂಲಿನಲ್ಲಿ ಜರುಗಿಸಲಾಯಿತು. ಅದೂ ಜನಗಳ ಪ್ರಶಂಸೆಗೆ ಪಾತ್ರವಾಯಿತು.

ವ್ಯವಸಾಯದ ಇಲಾಖೆ

ಈ ಸಂಸ್ಥಾನದ ಮುಖ್ಯ ಕಸಬಾದ ವ್ಯವಸಾಯವನ್ನು ಉತ್ತಮಸ್ಥಿತಿಗೆ ತರುವ ವಿಷಯದಲ್ಲಿ ವ್ಯವಸಾಯದ ಇಲಾಖೆಯವರು ಸಾರ್ಥಕವಾದ ಕೆಲಸವನ್ನು ಮಾಡಬೇಕಾದರೆ, ಆ ಇಲಾಖೆಗೆ ಹೆಚ್ಚು ಶಿಬ್ಬಂದಿಯನ್ನು ಕೊಡುವ ಆವಶ್ಯಕತೆಯು ಕೆಲವು ಕಾಲದಿಂದ ಕಂಡುಬಂದಿತ್ತು. ಈ ಉದ್ದೇಶದಿಂದಲೇ ಈ ವರ್ಷದಲ್ಲಿ ಈ ಇಲಾಖೆಯನ್ನು ವಿಸ್ತರಿಸಲಾಗಿದೆ. ಇದರ ಫಲಿತಾಂಶವು ಗೋಚರಕ್ಕೆ ಬರುತ್ತಿದೆ. ಈ ಹೊಸ ಏರ್ಪಾಡುಗಳನ್ನು ಪ್ರಸಕ್ತವರ್ಷ ಮುಗಿಯುವುದಕ್ಕೆ ಹಿಂದೆ ನಾಲ್ಕಾರು ತಿಂಗಳಲ್ಲಿಯೇ ಜಾರಿಗೆ ತರಲು ಅವಕಾಶವಾಯಿತು. ಆದರೂ ಅಷ್ಟು ಸ್ವಲ್ಪ ಕಾಲದೊಳಗೆ ವಿಶೇಷ ಹೊಸಕೆಲಸಗಳನ್ನು ಎಂದರೆ ಮುಖ್ಯವಾಗಿ ನಿದರ್ಶನಪೂರ್ವಕವಾಗಿ ತೋರಿಸುವ ವ್ಯವಸಾಯದ ಕೆಲಸಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಯಿತು. ಯತ್ನ ಎಲ್ಲಿಯವರೆಗೂ ಇದ್ದುದರಿಂದ ಈ ನಿದರ್ಶನದ ಕೆಲಸಗಳನ್ನು ಇದುವರೆಗೆ ಕೆಲವು ಸ್ಥಳಗಳಲ್ಲಿ ಮಾತ್ರ ನಡಿಸುತ್ತಿತ್ತು. ಆ ಕೆಲಸವನ್ನು ಈಗ ಈ ಸಂಸ್ಥಾನದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಡೆಸುತ್ತಿದೆ.

ಹೋದವರ್ಷದ ಉಪನ್ಯಾಸದಲ್ಲಿ ವ್ಯವಸಾಯ ವಿಷಯಕವಾದ ಕೆಲಸಗಳನ್ನು ಕಾರ್ಯತಃ ನಡೆಯಿಸುವುದಕ್ಕಾಗಿ ತಿಳುವಳಿಕೆಯನ್ನು ಕೊಡುವುದಕ್ಕೆ ಬೆಂಗಳೂರಲ್ಲಿ ಒಂದು ವ್ಯವಸಾಯದ ಸ್ಕೂಲನ್ನು ಸ್ಥಾಪಿಸಲಾಗಿದೆ ಎಂಬುದಾಗಿ ತಿಳಿಸಿರುತ್ತದೆ. ಈ ಸ್ಕೂಲು ಪ್ರಾರಂಭವಾಗಿ ಒಂದು ವರ್ಷವಾಗಿದೆ. ಅದರಲ್ಲಿ 15 ಮಂದಿ ಹೊಸ ವಿದ್ಯಾರ್ಥಿಗಳೂ ಮತ್ತು 14 ಮಂದಿ ಎರಡನೆಯ ವರ್ಷದ ವ್ಯಾಸಂಗವನ್ನು ಮಾಡುತ್ತಿರುವ ಇದಾರೆ. ವ್ಯವಸಾಯ ಶಾಖೆಯ ಕೆಲಸಗಳ ಮತ್ತೂ ಜಮೀನು ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಹಿಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇ... ...ದಲ್ಲಿ ಇದೇ ರೀತಿಯಲ್ಲಿ ವಿಸ್ತರಿ... ...ವಾಗಿ ನಡೆಸಬೇಕೆಂಬ ಉ...

ಕೈಗಾರಿಕೆ ಮತ್ತು ವ್ಯಾಪಾರ ಇಲಾಖೆ

ಕೈಗಾರಿಕೆಯ ಕೆಲಸಗಳಿಗೆ ... ಕೊಡುವುದನ್ನು ಕ್ರಮವಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ವಿಕ್ರಯ ಮಾಡುವುದಕ್ಕೂ ಅವಕಾಶ ಕೊಟ್ಟಿರುತ್ತವೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾಲಾಖೈರಿಗೆ, 1,14,000 ರೂ ಖರ್ಚಿನಲ್ಲಿ 26 ಯಂತ್ರಗಳ ಸ್ಥಾಪನೆಯು ಮುಗಿದಿತ್ತು; ಇನ್ನೂ 13 ಯಂತ್ರಗಳ ಸ್ಥಾಪನೆಯು ನಡೆಯಬೇಕಾಗಿತ್ತು.

ಬಸವಪಟ್ಟಣದಲ್ಲಿಯೂ, ಸಂಸಾಪುರದಲ್ಲಿಯೂ ಸ್ಥಾಪಿಸಿದ ಸೀಮೆ... ಯಂತ್ರಗಳು ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ, ಶೀಘ್ರದಲ್ಲಿಯೇ ತುಂಗಭದ್ರಾ ತೀರದಲ್ಲಿಯೂ ಅದರ ಎಡ ದೊಡ್ಡ ಕಾಲುವೆಗಳ ತೀರದಲ್ಲಿಯೂ ನೀರಾವರಿಗಾಗಿ ಅನೇಕ ಸಂಪಿಗ ಯಂತ್ರಗಳನ್ನು ಸ್ಥಾಪಿಸುವ ನಿರೀಕ್ಷಣೆ ಇದೆ.

ಮೈಸೂರಲ್ಲಿ ಸಕ್ಕರೆ ತಯಾರು, ಎಣ್ಣೆ ಯಂತ್ರಗಳ ಮತ್ತು ಸೀರೆ ವ ಗ್ಯಾಸ್ ಯಂತ್ರಸಾಮಗ್ರಿಗಳ ಉಪಯೋಗ, ರೇಷ್ಮೆ ಸೆಣಬಿನ ವ್ಯವಸಾಯ, ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವನ್ನು ಆಯಾ ಇಲಾಖೆಯವರು ಮಾಡಿ ಆ ಮೂಲಕ ತಿಳಿಯಬಂದ ಸಂಗತಿಗಳನ್ನು ಹೋದವರ್ಷ ಅನೇಕ ಲೇಖನಗಳ ಮೂಲಕ ಪ್ರಚಾರ ಮಾಡಿದರು. ರೈಲ್ವೆ ಮೂಲಕ ನಡೆಯುವ ವ್ಯಾಪಾರದ ಲೆಕ್ಕಪಕ್ಕಗಳು ಇದುವರೆಗೆ ಬಂದಿರುವವುಗಳು ಕೇವಲ ತೃಪ್ತಿಕರವಾಗಿಲ್ಲದಿರುವುದರಿಂದ, ರೈಲ್ವೆ ಮೂಲಕ ಈ ದೇಶದಿಂದ ಹೊರಕ್ಕೂ ಹೊರಗಣಿಂದ ಇಲ್ಲಿಗೂ ಸಾಗುವ ವಸ್ತುಗಳ ರೆಕಾರ್ಡುಗಳನ್ನು ತಪ್ಪಿಲ್ಲದಾಗಿ ಮೂರು ತಿಂಗಳಿಗೊಂದುಸಾರಿ ಕಳುಹಿಸಿಕೊಡಬೇಕೆಂದು, ಮದ್ರಾಸು ದಕ್ಷಿಣ ಮಹಾರಾಷ್ಟ್ರ ಕಂಪೆನಿಯವರೊಡನೆ ಏರ್ಪಾಡು ಮಾಡಿ ಇದೆ.

ಪರಸ್ಪರ ಸಹಾಯಕ ಸಂಘಗಳು

ಪ್ರಸಕ್ತವರ್ಷದಲ್ಲಿ ಪರಸ್ಪರ ಸಹಾಯಕ ಸಂಘಗಳು ವಿಶೇಷ ಅಭಿವೃದ್ಧಿಗೆ ಬಂದಿತು. ಈ ಏರ್ಪಾಡು ಇದುವರೆಗೆ ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಅಭಿವೃದ್ಧಿಗೆ ಬಾರದೆ ಇದ್ದು, ಈಗ ಅಲ್ಲಿಗೂ ವ್ಯಾಪಿಸುತ್ತಿರುವದು ತೃಪ್ತಿಕರವಾಗಿದೆ.

ಕ್ರೆಡಿಟ್ ಸೊಸೈಟಿಗಳು ಎಂದರೆ ಸಾಲ ಕೊಡುವ ಸಂಘಗಳು ಎಂದಿನಂತೆ ಜನರಿಗೆ ಬೇಕಾಗಿಯೂ ಉಪಯೋಗಕರವಾಗಿಯೂ ಇರುವಲ್ಲಿ, ಇತರ ವಿಧಗಳಾದ ಪರಸ್ಪರ ಸಹಾಯಕ ಸಂಘಗಳೂ ಕ್ರಮೇಣ ಬಳಕೆಗೆ ಬರುತ್ತಿವೆ; ಎಂದರೆ ಪರಸ್ಪರ ಸಹಾಯಕ ನಿಯಮಗಳ ಮೇಲೆ ಜಮೀನಿಗೆ ನೀರು ಸರಬರಾಯಿ ಮಾಡುವ ಕೆಲಸವನ್ನೂ, ಕಚ್ಚಾಪದಾರ್ಥಗಳನ್ನು ಕೊಂಡುಕೊಳ್ಳುವ ಕೆಲಸವನ್ನೂ ಮತ್ತು ಸರಕನ್ನು ವಿಕ್ರಯ ಮಾಡುವ ಕೆಲಸವನ್ನೂ ನಡಿಸುವುದಕ್ಕೆ ಈಗ ಬೇರೆ ಬೇರೆ ಸಂಘಗಳು ಹುಟ್ಟಿವೆ.

ಈ ವರ್ಷದಲ್ಲಿ ಸಂಘಗಳ ಸಂಖ್ಯೆಯು 414 ರಿಂದ 531 ಕ್ಕೂ, ಮೆಂಬರುಗಳ ಸಂಖ್ಯೆ 31,534 ರಿಂದ 40,179 ಕ್ಕೂ, ವ್ಯವಹಾರ ನಡೆಸುವದಕ್ಕೆ ವಿನಿಯೋಗವಾದ ಮೂಲಧನವು 12,30,448 ರೂಪಾಯಿಂದ 21,17,110 ರೂಪಾಯಿಗೂ, ಒಟ್ಟು ಲೇವಾದೇವಿಗಳು 39,52,081 ರೂಪಾಯಿಂದ 46,28,621 ರೂಪಾಯಿಗೂ, ಲಾಭವು 13,895 ರೂಪಾಯಿಂದ 2,30,224 ರೂಪಾಯಿಗೂ, ರಿಜರ್ವ್ ಫಂಡು 30,000 ರೂಪಾಯಿಂದ 66,249 ರೂಪಾಯಿಗೂ ಹೆಚ್ಚಿರುತ್ತವೆ. ಬೆಂಗಳೂರಿನ ಸೆಂಟ್ರಲ್ ಬ್ಯಾಂಕು ಉತ್ತಮ ಸ್ಥಿತಿಯಲ್ಲಿದ್ದುಕೊಂಡು, 87 ಸಂಘಗಳಿಗೆ 2,65,000 ರೂಪಾಯಿ ಸಾಲ ಕೊಟ್ಟಿರುತ್ತದೆ. ಗ್ರಾಮಾಂತರಗಳಲ್ಲಿರುವ ಸಂಘಗಳಿಗೆ ಬೇಕಾದ ಮೂಲಧನಕ್ಕೆ ಇದೇ ಮುಖ್ಯ ಆಧಾರವಾಗಿದ್ದುಕೊಂಡಿದೆ. ಮುಖರ ಯೂನಿಯನುಗಳು ಸುಮಾರು 45,000 ರೂಪಾಯಿ ವರೆಗೆ ಹಣವನ್ನು ಒದಗಿಸಿದೆ. ಅವುಗಳಲ್ಲಿ ಒಂದು ಅದಕ್ಕೆ ಸೇರಿದ ಶಾಖಾ ಸಂಘಗಳಿಗೆ 20,000 ರೂಪಾಯಿ ವರೆಗೆ ಹಣವನ್ನು ಒದಗಿಸಿಕೊಡಬೇಕೆಂದು ಪರ್ಯಾಲೋಚಿಸುತ್ತಿದೆ. ಬೇಕಾದ ಮೂಲಧನವನ್ನು ಆಯಾ ಸ್ಥಳದಲ್ಲಿಯೇ ಬಗಲಿ ಮೇಲೆ ಬೇಕಾದ ಸಂಘಗಳಿಂದಲೇ ಒದಗಿದುದರಿಂದ, ಸರ್ಕಾರದವರೂ ಸ್ವತಂತ್ರವಾಗಿ ದ್ರವ್ಯ ಸಹಾಯ ಮಾಡಬೇಕೆಂದು ಇಷ್ಟು ವರ್ಷ ಕೊಟ್ಟ ದ್ರವ್ಯದಿಂದ ಯಾವ ಗ್ರಾಂಟುಗಳನ್ನು ಕೊಡುವ ಅವಶ್ಯಕತೆಯು ಇಲ್ಲವಾಯಿತು.

ಸಂಘದ ವ್ಯವಸ್ಥೆಯ ನವನೆಯ ಮೂರನೆಯ ವರ್ಷದ ಸಾಂಸ್ಥಾನಿಕ ಸಭೆಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ರಾಜಧಾನಿಯಲ್ಲಿ ನೆರೆಯಿತು. ಈ ಸಭೆಯ ಆರಂಭೋತ್ಸವವನ್ನು ಶ್ರೀಮದ್ಯುವರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹದೂರ್ ರಾಜಸಭಾಭೂಷಣ ಮಿ. ಕೆ. ಪಿ. ಪುಟ್ಟಣ್ಣಶೆಟ್ಟರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣ ಸಭೆಗಳು, ಉಪಯೋಗವಿಷಯದಲ್ಲಿ ಪಕ್ಷಪಾತಗಳಾದ ಕಾರ್ಯಕಲಾಪಗಳ ಬಹು ಕಡೆ ಸ್ಥಳಗಳಲ್ಲಿ ನಡೆಯಿತು. ಇವುಗಳ ಸ... ...ಗಿ ಕೆಲಸವನ್ನು ಮಾಡುವುದಕ್ಕೆ ಬ... ...ದ ಜನರಿಗೆ ಪಟ್ಟ ಪ್ರಯತ್ನ ... ...ವಾಗಿರುತ್ತದೆ.

ಮೈಸೂರ್ ಸ್ಟಾರ್

ಸ್ವಾಗಣಗಳ ನೆಯ ಅಕ್ಟೋಬರ್ ತಾ|| ೩ನೆಯ ಭಾನುವಾರ.

ಪ್ರಜಾಪ್ರತಿನಿಧಿ ಸಭೆ

ಕಳೆದ ತಿಂಗಳು ತಾ|| ೩೦ ನೆಯ ಬುಧವಾರ ಮಧ್ಯಾಹ್ನ ಮೈಸೂರಿನ ೩೧ ನೆಯ ವರ್ಷದ ಪ್ರಜಾಪ್ರತಿನಿಧಿ ಸಭೆಯು ದಿವಾನರ ಅಧ್ಯಕ್ಷತೆಯಿಂದ ರಾಜಧಾನಿಯಲ್ಲಿ ಪದ್ಧತಿಯಂತೆ ನೆರವೇರಿತು. ಬ್ರಿಟಿಷ್ ರೆಸಿಡೆಂಟ್ ದಂಪತಿಗಳೂ ಸಂಸ್ಥಾನದ ಮುಖ್ಯಾಧಿಕಾರಿಗಳೂ ಪ್ರಜಾಪ್ರತಿನಿಧಿಗಳೂ, (ಗ್ಯಾಲರಿ ಮುಂದೆ) ಪುರಜನರೂ ಈ ಸಭೆಯನ್ನಲಂಕರಿಸಿದ್ದರು. ಪದ್ಧತಿಯಂತೆ ದಿವಾನರ ಭಾಷಣವು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಆಯಿತು. ವಿಸ್ತೃತವೂ ಉಪಯುಕ್ತವೂ ಆಗಿದ್ದ ಅವರ ಭಾಷಣವು ೩ ವಿಭಾಗಗಳಾಗಿ ಮಾಡಲ್ಪಟ್ಟಿದ್ದಿತು. ಅದರಲ್ಲಿ ಪ್ರಧಾನಭಾಗದ ಮುಖ್ಯಾಂಶಗಳನ್ನು ಆರಿಸಿ ಈ ಸಂಚಿಕೆಯಲ್ಲಿ ಮುದ್ರಿಸಿರುತ್ತೇವೆ. ದಿವಾನರ ಭಾಷಣವಾದನಂತರ ಚಿನ್ನದ ಗಣಿಯವರು, ಕಾಫಿ ತೋಟಗಾರರು ಮೊದಲಾದವರಿಂದ ೭ ವಿಜ್ಞಾಪನಾಪತ್ರಗಳು ಓದಿ ಒಪ್ಪಿಸಲ್ಪಟ್ಟುವು. ಅವೆಲ್ಲಕ್ಕೂ ಸಮಯೋಚಿತವಾದುತ್ತರವು ದಿವಾನರಿಂದ ಕೊಡಲ್ಪಟ್ಟಿತು. ಬಳಿಕ ಬ್ರಿಟಿಷ್ ರೆಸಿಡೆಂಟರು ಮೊದಲಾದ ಯೂರೋಪ್ಯಾಧಿಕಾರಿಗಳಿಗೆ ಹಾರಗುಚ್ಛಾದಿಗಳು ಅರ್ಪಿಸಲ್ಪಟ್ಟುವು. ಮರುದಿನದಿಂದ ಪ್ರತಿನಿಧಿಸಭೆಯಲ್ಲಿ ಚರ್ಚೆಗಳು ನಡೆಯುತ್ತಿವೆ.

ಮೈಸೂರಿನ ವಸ್ತುಪ್ರದರ್ಶನವು.

ಸಾಂವತ್ಸರಿಕವಾಗಿ ಏರ್ಪಟ್ಟು ನಡೆಯುತ್ತಿರುವ ಈ ಪ್ರದರ್ಶನಗಳು ಇದುವರೆಗೆ ೭ ಆಗಿ, ಈ ಸಲದ ಪ್ರದರ್ಶನವು ೮ ನೆಯದಾಗಿರುವುದು. ಇದರ ಆರಂಭಮಹೋತ್ಸವವನ್ನು ಕಳೆದ ತಿಂಗಳು ತಾ|| ೨೮ ರಲ್ಲಿ ನಮ್ಮ ಶ್ರೀಮದ್ಯುವರಾಜರವರು ನಡೆಯಿಸಿದರು. ಆಗ ಅವರು—“ಈ ಪ್ರದರ್ಶನವನ್ನು ಉಪಕ್ರಮಿಸುವುದಕ್ಕೆ ನನಗೆ ಸಂತೋಷವಾಗುತ್ತದೆ. ಅದರಲ್ಲೂ ಈ ವರ್ಷದ ಪ್ರದರ್ಶನದಲ್ಲಿ ಹಲವು ಹೊಸ ಏರ್ಪಾಟುಗಳು ನಡೆದಿರುವುದರಿಂದ ಇದರ ಆರಂಭೋತ್ಸವವು ನನ್ನ ಸಂತೋಷವನ್ನು ಮತ್ತಷ್ಟು ಹೆಚ್ಚಿಸಿದುತ್ತದೆ. ಈ ಪ್ರದರ್ಶನದ ಮೇಲ್ವಿಚಾರಣೆಯು ಸಂಪದಭ್ಯುದಯ ಸಮಾಜದ ಕೈಗಾರಿಕೆ ವ್ಯಾಪಾರಗಳ ಶಾಖೆಗೆ ವರ್ಗಾಯಿಸಲ್ಪಟ್ಟಿರುವುದರಿಂದ ಅನೇಕ ವಿಧದಲ್ಲಿ ಇದರ ಕಾರ್ಯಗಳು ಸಮಾಧಾನಕರ ಸ್ಥಿತಿಗೆ ಬಂದುವೆಂದು ತಿಳಿದಿರುವೆನು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳನ್ನೂ, ವ್ಯವಸಾಯವನ್ನೂ ವಿದ್ಯೆಯನ್ನೂ ಅಭಿವೃದ್ಧಿಗೊಳಿಸುವುದಕ್ಕಾಗಿ ಏರ್ಪಟ್ಟಿರುವ ಶಾಖೆಗಳು ಕೂಡ ಆಯಾ ಶಾಖೆಗಳಿಗೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶನಶಾಲೆಗೆ ಕಳುಹಿಸಿ ಒಂದು ವರ್ಷಕ್ಕಿಂತ ಮತ್ತೊಂದು ವರ್ಷದಲ್ಲಿ ಆಯಾ ಶಾಖೆಯಲ್ಲಿ ಎಷ್ಟು ಅಭಿವೃದ್ಧಿಯುಂಟಾಗಿರುವುದೋ ಅದನ್ನು ತಿಳಿದುಕೊಳ್ಳುವಂತೆ ಮಾಡುವುದು ಒಳ್ಳೆಯದು. ಇಷ್ಟೇ ಅಲ್ಲ, ಈ ಶಾಖೆಗಳವರು ತಮ್ಮಲ್ಲಿನ ವಸ್ತುಗಳನ್ನು ಕೈಕಸಬಿಗೂ ಕೈಗಾರಿಕೆಯಿಂದ ಜೀವಿಸುವವರಿಗೂ, ದೇಶದಲ್ಲಿರುವ ವಿದ್ಯಾವಂತರಾದ ಯುವಕರಿಗೂ ತೋರಿಸಿ, ಪ್ರದರ್ಶನಾಲಯದಲ್ಲಿ ತಾವು ನೋಡಿದಂಥ ವಸ್ತುಗಳನ್ನು ತಾವೂ ಹುಟ್ಟಿಸಬೇಕೆಂಬ ಅಭಿಲಾಷೆಯು ಅವರುಗಳಿಗೂ ಹುಟ್ಟುವಂತೆ ಬೋಧಿಸಬೇಕು. ಭರತಖಂಡದ ಹಲವು ಭಾಗಗಳಿಂದಲೂ ಕೈಗಾರಿಕೆಯ ಉತ್ಕೃಷ್ಟವಾದ ಪದಾರ್ಥಗಳು ಈ ವಸ್ತುಪ್ರದರ್ಶನಾಗಾರಕ್ಕೆ ಬಂದಿರುವುವು. ಅಂಥ ಹೊರಗಿನ ದೇಶದಿಂದ ಇಲ್ಲಿಗೆ ಬಂದಿರುವ ವಿಶೇಷತರದ ವಸ್ತುಗಳನ್ನು ನಮ್ಮ ದೇಶದ ಕೈಗಾರಿಕೆಯವರಿಗೂ ತೋರಿಸಿ ಅಂಥ ವಸ್ತುಗಳನ್ನೇ ಇಲ್ಲಿಯೂ ಮಾಡಲು ಸಮರ್ಥರಾಗುವಂತೆ ಪ್ರೋತ್ಸಾಹಿಸಲು ಈ ಪ್ರದರ್ಶನದ ಕಾರ್ಯಕಾರಿ ಸಂಘದವರು ಏರ್ಪಡಿಸಿರುತ್ತಾರೆ. ಭರತಖಂಡದ ಇತರ ಪ್ರದೇಶಗಳಿಂದ ಕಳುಹಿಸಿ ಪ್ರದರ್ಶನಕ್ಕಿಟ್ಟಿರುವ ಬೆಳ್ಳಿಯ ಪದಾರ್ಥಗಳು ಬಹಳ ಉತ್ಕೃಷ್ಟವಾಗಿವೆ. ಅವುಗಳನ್ನು ನೋಡಿ ನಮ್ಮ ದೇಶದ ಚಿನ್ನಬೆಳ್ಳಿಯ ಕೆಲಸಗಾರರು ಅಂಥ ಉತ್ಕೃಷ್ಟವಾದ ಪದಾರ್ಥಗಳನ್ನೇ ಇಲ್ಲಿಯೂ ತಯಾರಿಸಲು ತಪ್ಪದೆ ಪ್ರಯತ್ನಮಾಡುವರು.” ಎಂದು ಭಾಷಣಮಾಡಿ, ಅಧಿಕಾರಿಗಳ ಮೊದಲಾದವರೊಡನೆ ಒಳಕ್ಕೆ ಪ್ರವೇಶಿಸಿ ಎಲ್ಲ ವಸ್ತುಗಳನ್ನೂ ಜಾಗರೂಕತೆಯಿಂದ ಅವಲೋಕಿಸಿ ಪುಷ್ಪಹಾರಾದಿಗಳನ್ನು ಸ್ವೀಕರಿಸಿ ಸಂತೋಷದಿಂದ ತೆರಳಿದರು.

ಈ ಸಲದ ಪ್ರದರ್ಶನಾಲಯದಲ್ಲಿ ಬಹುತರಕ್ಕೆ ಕೈಗಾರಿಕೆ ವ್ಯಾ[illegible] ಇಡಲ್ಪಟ್ಟಿರುವುದಕ್ಕೆ [illegible] ಭಾವನೆ ಮಾಡಿದೆವು. ಯಂತ್ರ [illegible] ಪ್ರದರ್ಶನ ಪ್ರಶಸ್ತವಾಗಿದೆ. [illegible] ಪ್ರದರ್ಶನ [illegible]

[illegible] ಭಾರತೀಯ [illegible]

[illegible]

ಕಟ್ಟುವುದಕ್ಕೂ, ಎಂಜಿನುಗಳನ್ನು ಮಾಡುವುದಕ್ಕೂ, ಒಂದೊಂದುಗಳನ್ನು ಮಾಡುವುದಕ್ಕೂ, ಕಾಗದವನ್ನು ಮಾಡುವುದಕ್ಕೂ, ಬೇಸಾಯದ ಮುಟ್ಟುಗಳಿಗೆ ಎತ್ತಿನ ಬದಲು ಕುದುರೆಗಳು ಉಪಯುಕ್ತವಾಗುತ್ತವೆ ಎಂಬುದನ್ನು ಕುದುರೆಗಳ ಸಮೇತ ತೋರಿಸಿ ಇಟ್ಟಿರುವರು. ಆಹಾರಪದಾರ್ಥಗಳಲ್ಲಿ ಕೆಲವನ್ನು ಮಾದರಿಯಾಗಿ ಇಟ್ಟಿರುವುದು ಬಹು ಬಹು ಉಪಯುಕ್ತವಾಗಿದೆ. ಇದರಂತೆಯೇ ಬರಗಾಲದಲ್ಲಿ ಆಹಾರಾರ್ಥವಾಗಿ ಉಪಯುಕ್ತವಾಗುವ ಕಾಡುಗೆಡ್ಡೆ ಗೆಣಸುಗಳೂ ಹಣ್ಣುಹಂಪಲುಗಳೂ, ವಿವಿಧವಾದ ನಾರುಗಳೂ, ಮೂಲಿಕೆ ಮೊದಲಾದವುಗಳೂ ಇಡಲ್ಪಟ್ಟಿವೆ. ಮದ್ರಾಸಿನ ೩ ೮೦ ಅಂತಃಸ್ಸಾರದಿಂದ ಮತ್ತೂ ಬೆಂಗಳೂರು ಬಾಟ್‌ಕ್ [illegible]ನಿಂದ ಕಳುಹಿಸಲ್ಪಟ್ಟಿರುವ ಬೆಳ್ಳಿಯ ಕೈಗಾರಿಕೆಯ ಸಾಮಾನುಗಳು ಪ್ರೇಕ್ಷಣೀಯವಾದ ಕೈಗಾರಿಕೆಯ ಮಾದರಿಗಳಾಗಿರುತ್ತವೆ. ಜಪಾನ್ ದೇಶದ ದಂತಪಿಧದ ಕೈಗಾರಿಕೆಯ ಸಾಮಾನುಗಳೂ ಬಂದಿವೆ. [illegible] ವಸ್ತುಪ್ರದರ್ಶನ ಭಾಗದಲ್ಲಿಟ್ಟಿರುವ ಸಾಮಗ್ರಿಗಳು ಈಗಿನಕಾಲದ ಶಾಸ್ತ್ರೀಯ [illegible] ಹುಟ್ಟಿಸ ತರಕಾರಿ ಪದ್ಧತಿ [illegible] ಉಂಟುಮಾಡಲು ಸಾಧಕವಾಗಿದೆ. [illegible] ಪ್ರತ್ಯೇಕವಾಗಿ ವಿಂಗಡಿಸಲ್ಪಟ್ಟಿರುವ ಯಾಂತ್ರಿಕ ಶಿಲ್ಪಶಿಕ್ಷಣದ [illegible] ಮತ್ತು ಮರದ ಕೆಲಸಗಳ [illegible] ಇದುವರೆಗೆ ಪಡೆದುಕೊಂಡಿರ [illegible] ಸಾಮಾನುಗಳೂ [illegible] ವಾಹನಗಳೂ ದೀಪಗಳ ಬೆಳಕಿನ ಪ್ರಯೋಗಗಳೂ [illegible] ಕಸಬುಗಾರರನ್ನು ಪ್ರೋತ್ಸಾಹಿಸಿ ಆಯಾಭಾಗದಲ್ಲಿ [illegible] ವನ್ನು ಹುಟ್ಟಿಸಲು ಸಾಧಕವಾಗಿವೆ. [illegible] ಕಳೆದ ತಿಂಗಳು ತಾ|| ೩೧ [illegible] ನೋಡಿ ಸಂತೋಷಪಟ್ಟಿದ್ದಾರೆ. ಇದೇ ತಾ|| ೯ ರ ವರೆಗೆ ಪ್ರದರ್ಶನಾಲಯದ [illegible] ಬಂಬಾಯಿ [illegible] ನಡೆಸುವ ಏರ್ಪಾಡಿದೆ.

ಎಮ್ಡನ್

ಅರಬ್ಬೀ ಸಮುದ್ರಕ್ಕೆ ಬಂದಿತು.

ಕಳೆದ ಮೂರು ವಾರಗಳಿಂದ ಭರತಖಂಡದ ಪೂರ್ವದಿಕ್ಕಿನ ಸಮುದ್ರದಲ್ಲಿ ಹಾವಳಿಯನ್ನು ಮಾಡಿ, ಇಂಡಿಯಾ-ಬ್ರಹ್ಮ-ಕೊಲಂಬೋ ಪ್ರಾಂತದ ವ್ಯಾಪಾರಕ್ಕೆ ಅಪಾಯವನ್ನೂ ಭಯವನ್ನೂ ಉಂಟುಮಾಡಿದ ಎಮ್ಡನ್ ಹಡಗು ಈಗ ಪಶ್ಚಿಮಕ್ಕೂ ಬಂದು ಲಕ್ಷದ್ವೀಪಗಳ ಹತ್ತಿರ ಕಳೆದ ತಿಂಗಳು ತಾ|| ೧೬-೧೭ ರಲ್ಲಿ ಇಂಗ್ಲೀಷರ ೪ ಹಡಗುಗಳನ್ನು ಮುಳುಗಿಸಿತೆಂಬ ವಾರ್ತೆಯು ಬಂದಿರುವುದು. ಮುಳುಗಿಸಲ್ಪಟ್ಟ ಹಡಗುಗಳಲ್ಲಿ ಟಿಮುರಿಕ್ ಎಂಬುದು ೩೩೧೪ ಟನ್ನುಗಳ- ರಿಬೇರಿಯಾ ಎಂಬುದು ೩೯೫೦ ಟನ್ನುಗಳ-ಕಿಂಗ್‌ಲಡ್ ಎಂಬುದು ೩೬೫೦ ಟನ್ನುಗಳ- ಫಾಯಿಲ್ ಎಂಬುದು ೪೧೪೭ ಟನ್ನುಗಳ ಭಾರವನ್ನು ಹೊರತಕ್ಕವಾಗಿದ್ದುವು. ಈ ಹಡಗುಗಳನ್ನು ಎಮ್ಡನ್ ಹಡಗು ನಿಲ್ಲಿಸಿ, ಅವುಗಳಲ್ಲಿದ್ದ ಜನರನ್ನೆಲ್ಲಾ ಗ್ರೈಫೆವೇಲ್ ಎಂಬ ಹಡಗಿಗೆ ಹತ್ತಿಸಿ ಅದನ್ನು ಕೊಲಂಬೋವಿಗೆ ಕಳುಹಿಸಿಬಿಟ್ಟಿತು. ಆ ಹಡಗುಗಳಿಗೂ ಗುಂಡು ಹೊಡೆದು ಮುಳುಗಿಸಿಬಿಟ್ಟಿತು. ಮಿನಿಕಾಯ್ ದ್ವೀಪದಿಂದ ಕೊಲಂಬೋಗೆ ಇಂಗ್ಲೀಷ್ ನೌಕಾಧಿಕಾರಿಗಳ ಅಪ್ಪಣೆಯ ಮೇರೆ ಕಲ್ಲಿದ್ದಲನ್ನು ತುಂಬಿಕೊಂಡು ಬರುತ್ತಿದ್ದ ಒಂದು ಹಡಗನ್ನೂ ಎಮ್ಡನ್ ಹಡಗು ತಡೆದು ನಿಲ್ಲಿಸಿ, ಅದರಲ್ಲಿದ್ದ ಕೆಪ್ಟನ್ ಮೈಲರು, ಚೀಫ್ ಆಫೀಸರು, ಚೀಫ್ ಇಂಜಿನಿಯರು ಆದಿಯಾದವರನ್ನು, ಬಟ್ಲರು-ಇವರುಗಳನ್ನು ಮುಂದಿನ [illegible] ನ್ನಾಗಿ ಹಿಡಿದುಕೊಂಡು, ಉಳಿದ ಜನರುಗಳನ್ನು ಗ್ರೈಫೆವೇಲ್ ಹತ್ತಿಸಿಬಿಟ್ಟು, ಆ ಕಲ್ಲಿದ್ದಲು ಹಡಗನ್ನು ತಾನು ಸ್ವಾಧೀನಪಡಿಸಿಕೊಂಡಿತು. ಜನರಿದ್ದ ಗ್ರೈಫೆವೇಲ್ ಎಂಬ ಹಡಗು ಕೊಲಂಬೋವಿಗೆ ಬಂದು ಸೇರಿತು.

ಈಗ ಸರ್ಕಾರದವರು ಈ ಪಶ್ಚಿಮ ದಿಕ್ಕಿನಲ್ಲಿ ಸೌರಾಷ್ಟ್ರಯಾನ ಮಾಡುವುದು ನಿರುಪದ್ರವವಲ್ಲವೆಂದು ಪ್ರಕಟಿಸಿದ್ದಾರೆ. ಅವರೇ ಬಂಗಾಳಕೊಲ್ಲಿ ಮೊದಲಾದ ಪೂರ್ವಭಾಗದ ಸಮುದ್ರಮಾರ್ಗವು ನಿರುಪದ್ರವವಾಗಿದೆಯೆಂದು ತಿಳಿಯಿಸಿದ್ದಾರೆ. ಕೊಲಂಬೋವಿನಿಂದ ಪಶ್ಚಿಮಭಾಗದ ಹಡಗಿನ ವ್ಯಾಪಾರವು ಈಗ ನಿಂತುಹೋಗಿದೆ. ಜರ್ಮನಿಯ ಈ ಒಂದು ಸಣ್ಣ ಹಡಗಿನ ಹಾವಳಿಯು ಭರತಖಂಡದಲ್ಲಿ ಇಷ್ಟು ಆಶ್ಚರ್ಯಕರವಾದ ಪರಿಣಾಮವನ್ನು ಮಾಡುತ್ತಿದ್ದರೂ ಅದು ಇನ್ನೂ ಸ್ವಾಧೀನವಾಗದಿರುವುದು ಪರಮಾಶ್ಚರ್ಯವಾಗಿದೆ.

ಕೊಲಂಬೋವಿನಿಂದ ಇಂಗ್ಲೀಷರ ಮತ್ತೂ ಜಪಾನರ ಯುದ್ಧದ ಹಡಗುಗಳು ಇದನ್ನು ಅಟ್ಟಿಕೊಂಡು ಹೋಗುತ್ತಿರುವುವೆಂದು ಮದ್ರಾಸಿನ ಗೌರ್ನರು ಹಿಂದೊಮ್ಮೆ ಮದ್ರಾಸ್ ಪಟ್ಟಣದಲ್ಲಿ ಸಿಕ್ಕಿಬಿದ್ದಿರುವ ಪ್ರಜೆಗಳನ್ನು ಸಮಾಧಾನಪಡಿಸುವುದಕ್ಕಾಗಿ ತಿಳಿಸಿದ್ದರು. ಅದರೂ ಇನ್ನೂ ಅವುಗಳ ಪ್ರಯತ್ನ ಸಫಲವಾದಂತೆ ತೋರುವುದಿಲ್ಲ.

ಈ ಎಮ್ಡನ್ ಹಡಗಿನಲ್ಲಿ ಅಧಿಕಾರಿವರ್ಗದವರೂ ಅಲ್ಲಿರುವ ಕೆಲಸಗಾರರೂ ಸುಸ್ವಭಾವಿಗಳು. ಈ ಎಮ್ಡನ್ ಹಡಗಿನವರು ತಮ್ಮ ವಶಕ್ಕೆ ಸಿಕ್ಕಿದವರನ್ನು ಮೃದುವಾಗಿ ನಡೆಯಿಸುವರು, ಪ್ರಜೆಗಳಿಗೆ ತೊಂದರೆ [illegible]

[illegible]

[illegible]

ತೋರಿಸುತ್ತ, ತಾನು ತನ್ನ ಶತ್ರುಗಳ ಕಣ್ಣಿಗೆ ಇಂಗನ್ನು ಮಣ್ಣು ಎರಚುತ್ತಲೇ ಬಿಡದೆ ಮುಳುಗಿಸಿಬಿಟ್ಟಿತು ಎಂದು ಇಂಗ್ಲೀಷ್ ಹಡಗಿನಲ್ಲಿದ್ದ ಕೆಪ್ಟನ್ ಇಕ್ಸ್ಟಕ್ಟರ್ ರವರು ಎಮ್ಡನ್ನಿನ ಅಧಿಕಾರಿಯನ್ನು ಕುರಿತು- ನಿಮ್ಮನ್ನು ಹಿಡಿದುಕೊಳ್ಳುವುದಕ್ಕೆ ಇಂಗ್ಲೀಷರ ಹಡಗು ಬಂದರೆ ನೀವೇನು ಮಾಡುವಿರಿ? ಎಂದು ಪ್ರಶ್ನೆಮಾಡಲು, “ನಾವು ಇತರರಂತೆ ಹಡಗನ್ನು ಓಡಿಸಿಕೊಂಡು ಹೋಗುವೆವು; ನಮ್ಮ ಹಡಗು ಯುದ್ಧವನ್ನು ಮಾಡುವುದಕ್ಕಾಗಿ ಕಟ್ಟಲ್ಪಟ್ಟುದಲ್ಲ.” ಎಂದು ಉತ್ತರವನ್ನು ಕೊಟ್ಟರಂತೆ. “ಮತ್ತೂ ಒಂದುವೇಳೆ ನಾವು ಹಿಡಿಯಲ್ಪಡುವುದಾದರೆ ಇಂಗ್ಲೀಷರ ಕೈಗೆ ಸಿಕ್ಕಬೀಳುವೆವು” ಎಂದೂ ಹೇಳಿರುವರು. ಆದುಕಾರಣ, ಈ ಹಡಗಿನ ಯೋಗ್ಯತೆಯು ವೇಗವಾಗಿ ಪಲಾಯನಗೊಳ್ಳುವುದರಲ್ಲಿ ಮಾತ್ರವಿದೆಯೇ ಹೊರತು ನಿಂತು ಯುದ್ಧಮಾಡುವ ಕಲಿತನದಲ್ಲಿಲ್ಲವೆಂಬುದು ಸಿದ್ಧವಾಗಿರುತ್ತದೆ. ಆದರೂ ಇದನ್ನು ನಿರ್ನಾಮಮಾಡಿದಹೊರತು ಭರತಖಂಡದ ವ್ಯಾಪಾರಸ್ಥ ಪ್ರಜೆಗಳ ಮನಸ್ಸಿಗೂ ನೆಮ್ಮದಿಯುಂಟಾಗುವುದಿಲ್ಲ.

ನೈಜಾಂರವರ ಔದಾರ್ಯ

ಹೈದರಾಬಾದಿನ ನೈಜಾಂರವರು ೨ ಪಟಾಲಮ್ಮುಗಳನ್ನು ಕಳುಹಿಸಿದ್ದಾರೆ. ಇವೆರಡು ಪಟಾಲಮ್ಮುಗಳೂ ಪ್ರಕೃತದ ಯುದ್ಧದಲ್ಲಿ ಇಂಗ್ಲೀಷರಿಗೆ ಸಹಾಯಕ್ಕಾಗಿ ಯುದ್ಧರಂಗಕ್ಕೆ ಕಳುಹಿಸಲ್ಪಟ್ಟಿವೆ. ಇದಕ್ಕೆ ಆಗುವ ವೆಚ್ಚದ ಸಲುವಾಗಿ ೬೦ ಲಕ್ಷ ರೂಗಳನ್ನು ನೈಜಾಂರವರು ಕೊಟ್ಟಿರುತ್ತಾರೆ. ಈ ಹಣವನ್ನು ಮೇಲ್ಕಂಡ ಪಟಾಲಮ್ಮುಗಳಿಗೆ ತಗಲುವ ವೆಚ್ಚಕ್ಕಾಗಿ ಉಪಯೋಗಿಸಿ, ಉಳಿದರೆ ಇತರವಿಧದ ವೆಚ್ಚಗಳಿಗೂ ಉಪಯೋಗಿಸಿಕೊಳ್ಳಬಹುದಾಗಿಯೆಂದು ವೈಸರಾಯರಿಗೆ ತಿಳಿಯಪಡಿಸಿಕೊಂಡಿದ್ದಾರೆ. ಭರತಖಂಡದ ಪ್ರಭುಗಳಲ್ಲೆಲ್ಲಾ ಮೊಟ್ಟಮೊದಲು ಅರ್ಧಕೋಟಿ ರೂಗಳನ್ನು ಸಾಮ್ರಾಜ್ಯದ ಸಹಾಯಕ್ಕೆ ಈ ಸಂಬಂಧವಾಗಿ ಅರ್ಪಿಸಿ ಖ್ಯಾತರಾದವರು ನಮ್ಮ ಶ್ರೀಮನ್ಮಹಾರಾಜರು. ಈಗ ನೈಜಾಂರವರು ಅದನ್ನೂ ಮೀರಿಸಿದ ಔದಾರ್ಯವನ್ನು ತೋರಿಸಿರುವರು. ಅಸಾಮಾನ್ಯವಾದ ಈ ಔದಾರ್ಯಗಳು ಭರತಖಂಡದ ಘನತೆಗೆ ಭೂಷಣಪ್ರಾಯವಾಗಿರುತ್ತವೆ.

ಯುದ್ಧವಾರ್ತೆ.

ಹಸಿ ಸುರಂಗ.

ಫ್ರಾನ್ಸ್ ದೇಶದ ಉತ್ತರ ಈಶಾನ್ಯಭಾಗದಲ್ಲಿ ಮಿತ್ರಸೈನ್ಯವೂ ಶತ್ರುಸೈನ್ಯವೂ ಸ್ಥಾನಬಲವನ್ನು ಮಾಡಿಕೊಂಡು ಒಬ್ಬರಿಗೊಬ್ಬರು ಜಗ್ಗದೆ ಆಗಿಂದಾಗ್ಗೆ ಕಾದಾಡುತ್ತ ಬಂದಿದ್ದಾರೆ. ಹಲವು ಬಾರಿ ಜರ್ಮನರು ರೋಷಾವೇಶದಿಂದ ಹಗಲುರಾತ್ರಿಯೆನ್ನದೆ ಫ್ರಾನ್ಸ್ ಇಂಗ್ಲೆಂಡ್ ಸೈನ್ಯಗಳ ಮೇಲೆ ಬಿದ್ದು, ಫಿರಂಗಿಗಳಿಂದ ಹೊಡೆದು, ಸನೀನುಗಳಿಂದ ತಿವಿದು, ಇದಿರುಪಕ್ಷದ ಸೇನಾವ್ಯೂಹವನ್ನು ಭೇದಿಸಿ ಅಥವಾ ಹಿಂದಕ್ಕೆ ದೂಡಿ ಮುಂದಕ್ಕೆ ನುಗ್ಗಬೇಕೆಂದು ಪ್ರಯತ್ನಿಸಿರುವರು. ಆದರೆ ಫಲವಾಗಲಿಲ್ಲ. ಒಮ್ಮೆ ನಮ್ಮವರನ್ನೇ ಕೆಲಕಡೆ ನಮ್ಮವರು ಹಿಮ್ಮೆಟ್ಟಿಸಿದ್ದಾರೆ. ಹೊಡೆದಷ್ಟು ಕೌಟಿಲ್ಯೋಪಾಯಗಳು ಜರ್ಮನರಲ್ಲಿ ಕಾಣಿಸಿಬರುವುದೂ ನಮ್ಮ ಪಕ್ಷಕ್ಕೆ ಹೆಚ್ಚು ಹೆಚ್ಚಿನ ನೂತನ ಸೈನ್ಯಗಳು ಬಂದು ಸೇರುತ್ತಿರುವುದೂ ಈ ರೀತಿಯಾದ ಮುಗ್ಗಟ್ಟಿಗೆ ಕಾರಣವಾಗಿದೆ. ಜರ್ಮನರಿಗೂ ಕೆಲವು ಹೊಸ ಸೈನ್ಯಗಳು ಬೆಲ್ಜಿಯಂ ಪ್ರಾಂತದಿಂದ ಬಂದು ಒದಗಿರುತ್ತವೆ. ಮೊದಲನೆಯ ಬಹಳ ಬೆಟ್ಟದ ಪ್ರದೇಶಗಳಲ್ಲಿ ಮಿತ್ರಸೈನ್ಯದವರು ಸ್ಥಾನಬಲವನ್ನು ಮಾಡಿಕೊಂಡಿದ್ದಾರೆ. ಆ ಸ್ಥಳದಲ್ಲಿ ಅನೇಕ ಯುದ್ಧಗಳಾಗಿ ಇರ್ವರಿಗೂ ಜಯಾಪಜಯಗಳು ಸಾಮಾನ್ಯವಾಗಿವೆ. ಶತ್ರುಗಳು ಹಲವಾವೃತ್ತಿ ನದಿಯನ್ನು ದಾಟಿಬಂದರು. ಆದರೂ ನಮ್ಮವರು ಬಲವಾಗಿ ಅವರನ್ನು ಹಿಂದಕ್ಕೆ ದೂಡಿಬಿಟ್ಟರು. ಫ್ರಾನ್ಸಿನ ಅಧ್ಯಕ್ಷರಾದ ಪಾಯಿಂಕೇರ್‌ರವರ ಸ್ವಂತಗ್ರಾಮವಾದ ಸಾಂಪಿಸಿ ಎಂಬೂರಿನ ಮೇಲೆ ಫಿರಂಗಿಗುಂಡುಗಳನ್ನು ಜರ್ಮನರು ಹಾರಿಸಿದರು. ಮತ್ತು ಆ ಗ್ರಾಮದಲ್ಲಿದ್ದ ಪಾಯಿಂಕೇರ್ ಕುಟುಂಬದವರ ಆಸ್ತಿಗಳನ್ನು ಸಹ ದೋಚಿಕೊಂಡರು.

ಜರ್ಮನರು ಬ್ರಸೆಲ್ಸನ್ನು ಬಲಪಡಿಸಿಕೊಳ್ಳುತ್ತಲಿರುವರು. ಬೆಲ್ಜಿಯಂನ ಪಶ್ಚಿಮದ ನ್ಯೂಪೋರ್ಟಿನ ಮೇಲೆ ೧೦-೧೨ ಸಲ ಫಿರಂಗಿ ಗುಂಡುಗಳನ್ನು ಜರ್ಮನರು ಹೊಡೆದರು. ಇದಕ್ಕೆ ಬೆಲ್ಜಿಯಮ್ಮಿನವರು ಪ್ರತಿಯಾಗಿ ನೌಕೆಯಿಂದ ಗುಂಡುಗಳನ್ನು ಹೊಡೆದು ಶತ್ರುಗಳನ್ನೋಡಿಸಿದರು. ಮತ್ತೂ ಅವರು ಹಿಡಿದುಕೊಂಡಿದ್ದ ಸ್ಥಳವನ್ನೆಲ್ಲಾ ಬೆಲ್ಜಿಯಮ್ಮಿನವರು ಮರಳಿ ಹಿಡಿದುಕೊಂಡರು. ಬೆಲ್ಜಿಯನ್ನರು ಹಿಂದೆ ಸಮುದ್ರದ ನೀರನ್ನು ತಮ್ಮ ಮೇಲೆ ತಿರುಗಿಸಿದ ಹಗೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಜರ್ಮನರು ಆ ಪಟ್ಟಣದ ಮೇಲೆ ಬಹುದೂರದಿಂದ ಫಿರಂಗಿ ಗುಂಡುಗಳನ್ನು ಹಾರಿಸಿ ಕೆಲವು ಮನೆಗಳನ್ನು ಹಾಳುಮಾಡಿದರು. ಪ್ರಜೆಗಳಲ್ಲಿ ೧೦ ಮಂದಿ ಸತ್ತರು. ಮಾಸ್ಟ್ರಿಕ್ಟ್ ನದ [illegible] ತಿಳಿದುಬಂದಿದೆ. ಅಂಟ್ವರ್ಪಿನಲ್ಲಿದ್ದ ಬೆಲ್ಜಿಯಂ ಸೈನಿಕರು ಹಾಲೆಂಡಿಗೆ ಬಂದು ಜರ್ಮನರ ಮೇಲೆ ಬಿದ್ದು [illegible] “ಎಲ್ಲ ಜರ್ಮನರೂ ಅಂಟ್ವರ್ಪ್ ಎಂಬ ಪಟ್ಟಣವನ್ನು” [illegible]

[illegible] ಜರ್ಮನರು [illegible]

[illegible]

[illegible]

ಷ್ಟು ಸೇರದಿದ್ದರೆ ಪಟ್ಟಣವನ್ನೆಲ್ಲಾ ಧ್ವಂಸಮಾಡುವೆವೆಂದು ಬೆದರಿಸುತ್ತಿದ್ದಾರೆ. ಸೋನ್-ಓಯಿಸೆ ನದಿಗಳ ಉತ್ತರಭಾಗದಲ್ಲಿಯೂ, ಯುಸೇಗೆ ಉತ್ತರಭಾಗದಲ್ಲೂ, ಆರ್ಗೋನ್-ಮ್ಯೂಸ್ ನದಿಗಳ ಮಧ್ಯಭಾಗದಲ್ಲೂ, ವೇವರ್-ಲೋರೈನ್-ವಾಸ್ಗಸ್ ಪ್ರಾಂತದಲ್ಲೂ ಯುದ್ಧಗಳು ಉಭಯಪಕ್ಷಕ್ಕೂ ನಡೆಯುತ್ತಲೇ ಇವೆ. ಆ ಕಡೆ ನಮ್ಮ ಪಕ್ಷದವರಿಗೆ ಆದ ಜಯವೇ ಹೆಚ್ಚಾಗಿದೆ. ನಾರೆನ್ನಿನ್-ರೈಬೆಕೋರ್ಟು-ರೋಯಿ-ಎಂಬವುಗಳು ಮಿತ್ರಸೈನ್ಯದವರ ಅಧೀನದಲ್ಲೂ, ಲಸ್ಸೀನಿ-ಛಾಬ್ಲೆನ್-ಎಂಬವುಗಳು ಶತ್ರುಗಳಧೀನದಲ್ಲೂ ಇವೆ.

ಪೂರ್ವರಂಗ.

ಆಗ್ನೇಯ ದಿಕ್ಕಿನಲ್ಲಿರುವ ರಷ್ಯನ್ ಸೈನ್ಯಗಳು ಆಸ್ಟ್ರಿಯಾ ದೇಶದ ಎಲ್ಲೆ ಕಟ್ಟಿನಲ್ಲಿರುವ ಬೆಸ್ಕಿ-ಮೌಂಟನ್ ಪಟ್ಟಣಗಳನ್ನೂ ಮಾರಡಿ ಮುನ್ರೋ ಜಿಲ್ಲೆಯೊಳಗಿನ ಇನ್ನು ಕೆಲವು ಪ್ರದೇಶಗಳನ್ನೂ ಆಕ್ರಮಿಸಿಕೊಂಡರು. ಆ ಸ್ಥಳದಲ್ಲಿ ಆಸ್ಟ್ರಿಯಾದ ಅನೇಕ ಆಯುಧಾದಿ ಸಾಮಗ್ರಿಗಳನ್ನೂ ಹಿಡಿದುಕೊಂಡರು. ಆಸ್ಟ್ರಿಯಾದಲ್ಲಿ ರಷ್ಯನರು ಮುಂದುಮುಂದಕ್ಕೆ ಸಾಗಿ ಹೋಗುತ್ತಲೇ ಇದ್ದಾರೆ. ಗಲಿಷಿಯಾದಲ್ಲಿ ಆಸ್ಟ್ರಿಯಾದವರ ತಡೆಯೇ ಇಲ್ಲವಾಗಿದೆ. ಅವರು ಪಶ್ಚಿಮದಿಕ್ಕಿಗೆ ಓಡಿಹೋಗುತ್ತಿದ್ದಾರೆ. ಇದರಿಂದ ರಷ್ಯನರು ಸುಲಭವಾಗಿ ನುಗ್ಗುತ್ತ ದಾರಿಯಲ್ಲಿ ಸಿಕ್ಕಿದ ೨-೩ ಕೋಟೆಗಳನ್ನು ಆಕ್ರಮಿಸಿಕೊಂಡರು. ರಷ್ಯನರು ಆಸ್ಟ್ರಿಯಾಕ್ಕೆ ಸೇರಿದ ಜೆರೋಸ್ಲಾವ್ ನಗರವನ್ನು ಹಿಡಿದುಕೊಳ್ಳುವಾಗ ೮ ದಿನಗಳ ವರೆಗೆ ಭೀಕರ ಯುದ್ಧವಾಯಿತು. ಆಸ್ಟ್ರಿಯಾದವರು ಬೆಟ್ಟಗಳ ಮೇಲೆ ಸುತ್ತಲೂ ನಿಂತು ಫಿರಂಗಿ ಗುಂಡುಗಳನ್ನು ಅವಿಚ್ಛಿನ್ನವಾಗಿ ಹೊಡೆಯುತ್ತಿದ್ದರು. ಆದರೂ ರಷ್ಯನರು ಹಿಮ್ಮೆಟ್ಟದೆ ಬೆಟ್ಟಗಳ ಮೇಲೆ ಏರುತ್ತ ಪ್ರತಿಯಾಗಿ ಗುಂಡುಗಳನ್ನು ಹೊಡೆಯುತ್ತ, ಸಂಗಿನುಗಳಿಂದ ತಿವಿಯುತ್ತ ಶತ್ರುಗಳನ್ನು ನಿರ್ಮೂಲವಮಾಡಿದರು. ಅವರ ಹೆಣಗಳು ರಾಶಿರಾಶಿಯಾಗಿ ಬಿದ್ದುವು. ಪೆಟ್ಟುತಿಂದ ಸೈನಿಕರು ೩-೪ ದಿನಗಳ ವರೆಗೆ ಬಿದ್ದರೂ ಉಪಚರಿಸುವವರಿಲ್ಲವಾಗಿದ್ದರು. ಬಂದಿಗಳಾಗಿ ಸಿಕ್ಕಿದವರು ತಮಗೆ ೩-೪ ದಿನಗಳಿಂದ ಆಹಾರವೇ ಇಲ್ಲವೆಂದು ಹೇಳಿಕೊಳ್ಳುತ್ತಿದ್ದರು. ಈಚೆಗೆ ರಷ್ಯನರು ಗೆಲಿಷಿಯಾದ ಇನ್ನು ೩ ಕೋಟೆಗಳನ್ನೂ ಹಿಡಿದುಕೊಂಡರು.

ಇನ್ನು ಮುಂದೆ ಪಶ್ಚಿಮರಂಗಕ್ಕಿಂತ ಪೂರ್ವರಂಗದ ಯುದ್ಧಗಳು ಪ್ರಬಲಿಸುವಂತೆ ಕಾಣುತ್ತಿದೆ. ಪಶ್ಚಿಮದಲ್ಲಿದ್ದ ಜರ್ಮನ್ ಚಕ್ರವರ್ತಿಯವರು ತಾವೇ ಸೈನ್ಯಸಮೇತ ಪೂರ್ವಭಾಗದಲ್ಲಿರುವ ರಷ್ಯಾಸೇನೆಯ ಮೇಲೆ ಸಾಗಿಹೋಗಿರುವರೆಂದು ಮೊನ್ನೆಯ ತಂತೀವಾರ್ತೆಗಳಿಂದ ಗೊತ್ತಾಗುತ್ತದೆ. ಈಗ ಪಶ್ಚಿಮದಲ್ಲಿ ಜರ್ಮನರ ೧೪ ಪಟಾಲಮ್ಮುಗಳಿರುತ್ತ, ಪೂರ್ವಕ್ಕೆ ೨೨ ಪಟಾಲಮ್ಮುಗಳು ಹೋಗಿವೆ. ಇದರಿಂದ ಜರ್ಮನರಿಗೆ ಪಶ್ಚಿಮದಲ್ಲಿ ನಿರಾಶೆಯೂ, ಪೂರ್ವದಲ್ಲಿ ತಮ್ಮ ಮೇಲೆ ಏರಿಬರುತ್ತಿರುವ ರಷ್ಯನರನ್ನು ತಡೆಯಬೇಕೆಂಬ ಆವಶ್ಯಕತೆಯೂ ಹುಟ್ಟಿರುವುದೆಂದು ಕಾಣುತ್ತದೆ. ಹೀಗೆ ಹೋದ ಜರ್ಮನ್ ಸೇನೆಯು ಒಂದು ಕಡೆಯಲ್ಲಿ ರಷ್ಯನರನ್ನು ತಡೆಗಟ್ಟುತ್ತ ಮತ್ತೊಂದು ಕಡೆ ರಷ್ಯಾ ದೇಶದೊಳಕ್ಕೆ ೧೮ ಮೈಲಿಗಳ ದೂರ ನುಗ್ಗಿಹೋಗಿರುವುದು. ಅಲ್ಲಿ ರಷ್ಯನರಿಗೂ ಜರ್ಮನರಿಗೂ ಸಾಷಾಟ್ಕಿನ್ ಎಂಬುವ ಕಡೆ ಯುದ್ಧವಾಯಿತು. ಈ ಪಟ್ಟಣವು ನೀಮನ್ ನದಿಯ ಎಡಭಾಗದಲ್ಲಿದೆ. ಮತ್ತೊಂದು ಕಡೆಯಲ್ಲಿ ಜರ್ಮನರು ವಾರ್ಸಾದಿಂದ ಪೆಟ್ರೋಗ್ರಾಡ್ ಎಂಬ ರಷ್ಯಾ ರಾಜಧಾನಿಗೆ ಹೋಗಿ ಸೇರುವ ರೈಲುಮಾರ್ಗಕ್ಕೆ ೧೮ ಮೈಲಿಗಳಷ್ಟು ದೂರದಲ್ಲಿ ಹೋಗಿ ಸೇರಿದ್ದಾರೆ. ಆದರೆ ಅಲ್ಲಿ ಜರ್ಮನಿಯವರಿಗೆ ಅಡ್ಡಲಾಗಿ ರಷ್ಯನ್ ಸೈನಿಕರ ಸಾಲುಗಳೂ ನೀಮನ್ ನದಿಯೂ ಅವರನ್ನು ಮುಂದಕ್ಕೆ ಸಾಗಗೊಡಿಸದೆ ಇವೆ. ಅಸ್ಟೋವಿಟ್ಸ-ಪ್ರಸ್ನಿಸ್-ನ್ಯೂ ಎಂಬಲ್ಲಿ ಜರ್ಮನರಿಗೂ ರಷ್ಯನರಿಗೂ ಕದನಕಾಳಗವಾಯಿತು. ನೀಮನ್ ನದಿಯನ್ನು ದಾಟಬೇಕೆಂದು ಜರ್ಮನರು ಪ್ರಯತ್ನಮಾಡಿದರು. ರಷ್ಯನರು ಹಾಯಗೊಡಿಸಲಿಲ್ಲ. ರಷ್ಯನರು ಬಹಳವಾಗಿ ಕಾದಾಡಿ ಆಗಸ್ಟಾವಾ ಕಾಡುಗಳ ಉತ್ತರಭಾಗವನ್ನು ಜರ್ಮನರಿಂದ ಕಸುಕೊಂಡರು. (ಇದು ರಷ್ಯನರದು, ಜರ್ಮನರು ವಶಪಡಿಸಿಕೊಂಡಿದ್ದರು.) ಜೆಮಿನಿಷಾ ಬಳಿಯಲ್ಲಿ ನಡೆದ ಯುದ್ಧದಲ್ಲಿ ಜರ್ಮನರ ಹಲವು ಫಿರಂಗಿಗಳನ್ನೂ ಹಿರುಬಿನ ಸೈನಿಕರನ್ನೂ ರಷ್ಯನರು ಹಿಡಿದುಕೊಂಡರು.

ಮತ್ತೂ ರಷ್ಯನರು ಇತ್ತ ಆಸ್ಟ್ರಿಯಾದಲ್ಲಿ ಕಾರ್ಪೇಥಿಯನ್ ಪರ್ವತದ ಕಣಿವೆಗಳಿಂದ ಹಾದು ಮುಂದೆ ಅಲ್ಲಿನ ಶತ್ರುಗಳನ್ನು ಸೋಲಿಸಿ ಹಂಗೇರಿಯಾ ರಾಜಧಾನಿಯಾದ ಬುಡಾಪೆಸ್ಟಿಗೆ ಸಾಗಿಹೋಗುತ್ತಿದ್ದಾರೆ.

ಆಡ್ರಿಯಾಟಿಕ್ ಸಮುದ್ರಕ್ಕೆ ತಾಕಿರುವ ಆಸ್ಟ್ರಿಯಾದ ಕೆಟಾರೋ ಎಂಬ ತೀರಪಟ್ಟಣಕ್ಕೆ ಇಂಗ್ಲಿಷ್ ಫ್ರೆಂಚರ ಯುದ್ಧದ ನಾವೆಗಳು ಇನ್ನೂ ಫಿರಂಗಿಗಳನ್ನು ಹಾರಿಸುತ್ತಲೇ ಇವೆ.

ಸರ್ವಿಯಾ ಮಾಂಟಿನಿಗ್ರೋ.

ಸರ್ವಿಯಾ ಮಾಂಟಿನಿಗ್ರೋ ಸೈನ್ಯಗಳು ಸರಾಜೇವೋ ಪಟ್ಟಣದ ಬಳಿಯಲ್ಲಿ ಕಾದಾಡುತ್ತಿವೆ. ಹಂಗೇರಿಯಾ ಸೈನ್ಯಗಳು ನಾವು ವಿಧಿಯಿಲ್ಲದೆ ಯುದ್ಧಮಾಡುತ್ತಿರುವೆವೆಂದು ಹಾಯಿಬಿಟ್ಟು ಹೇಳುತ್ತಲಿವೆ. ಈಗ ಸರ್ವಿಯಾದ ಸೈನ್ಯಗಳು ಹಿಂದೆಗೆಯುತ್ತಲಿವೆ. ಇವುಗಳ ಹಿಂದುಗಡೆ ವಿಷಗ್ರಾಡ್ ಪಟ್ಟಣವಿಯನ್ನು ದಾಟಿದೆ. ಮತ್ತೊಂದು ಸೈನ್ಯವು ಸ್ವಲ್ಪ ದೂರದಲ್ಲಿ ಅದೇ ನದಿಯ ... ... ದ ವಾಯವ್ಯ ... ... ಗದಲ್ಲಿ ಸೇರಿದೆ. ಅಲ್ಲಿ ಆಸ್ಟ್ರಿಯಾ

ಸರ್ವಿಯಾದವರು ಆಸ್ಟ್ರಿಯಾದವರ ಮೇಲೆ ಕಠಿನವಾಗಿ ಕಾದಾಡಿ ಸೆಮ್ಲಿನ್ ಪಟ್ಟಣವನ್ನು ಮರಳಿ ವಶಪಡಿಸಿಕೊಂಡರು.

ಜಲಯುದ್ಧ.

ಉತ್ತರಸಮುದ್ರದಲ್ಲಿದ್ದ ಇಂಗ್ಲೆಂಡಿನ ಯುದ್ಧದ ಹಡಗುಗಳ ಕಂಡವರ ಮೇಲೆ ಜರ್ಮನರ ಯುದ್ಧದ ಹಡಗುಗಳು ಬಿದ್ದು ೫ ಹಡಗುಗಳನ್ನು ನಾಶಪಡಿಸಿರುವುವು. ತಾ|| ೨೧ನೇ ಬೆಳಗಿನಜಾವದಲ್ಲಿ ಅಬೂಕರ್ ಎಂಬ ಹಡಗು ಜರ್ಮನರ ಟಾರ್ಪೆಡೋವಿನ ಏಟಿನಿಂದ ಮುಳುಗಿಹೋಗುತ್ತಿರುವಲ್ಲಿ ಅದರಲ್ಲಿದ್ದ ಜನರನ್ನು ಇಳಿಸಿಕೊಂಡು ರಕ್ಷಿಸುವುದಕ್ಕೆ ಹೋದ ಹೋಗ್ ಎಂಬ ಹಡಗು ಸಹ ಜರ್ಮನರ ಟಾರ್ಪೆಡೋವಿನ ಏಟಿನಿಂದ ಮುಳುಗಿತು. ಅಷ್ಟರಲ್ಲಿ ಕ್ರೆಸ್ಸಿ ಎಂಬ ಮತ್ತೊಂದು ಹಡಗು ೩೦೦ ಗಜಗಳ ದೂರದಲ್ಲಿದ್ದ ಶತ್ರುಗಳ ಹಡಗಿನ ಮೇಲೆ ಸಾಗಿಹೋಗುತ್ತ ಫಿರಂಗಿ ಗುಂಡುಗಳನ್ನು ಹೊಡೆಯಲುಪಕ್ರಮಿಸಿತು. ಆದರೂ ಜರ್ಮನರ ಟಾರ್ಪೆಡೋವು ಬಡಿದು ನಾಶಪಡಿಸಿತು. ಈ ಹಡಗುಗಳಲ್ಲಿದ್ದವರಲ್ಲಿ ೬೦ ಮಂದಿ ಸೈನ್ಯಾಧಿಕಾರಿಗಳೂ, ೧೪೦೦ ಮಂದಿ ಸೋಲ್ಜರುಗಳೂ, ನತ್ತರು. ೭೭೯ ಮಂದಿಗಳನ್ನು ಹಡಗುಗಳು ಸಾಗಿಸಿಕೊಂಡುವು.

